# ಶಿವತತ್ತ್ವರತ್ನಾಕರದಲ್ಲಿನ ನಾಟ್ಯಶಾಸ್ತ್ರೀಯ ಅಂಶಗಳ ವಿಶ್ಲೇಷಣಾತ್ಮಕ ಅಧ್ಯಯನ

(ಪಿಹೆಚ್.ಡಿ. ಪದವಿಯ ಆಂಶಿಕ ಅವಶ್ಯಕತೆಗಾಗಿ ಕುವೆಂಪು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ)


**ಸಂಶೋಧಕರು**

ಪ್ರತಿಮಾ ಕೆ.ಎನ್.

(Reg.No- 317/17.01.2017)

**ಮಾರ್ಗದರ್ಶಕರು**

ಡಾ. ಎಂ.ಎ.ಶ್ರುತಿಕೀರ್ತಿ

ಅಧ್ಯಕ್ಷರು,
ಸ್ನಾತಕೋತ್ತರ ಸಂಸ್ಕೃತ ಅಧ್ಯಯನ ಮತ್ತು ಸಂಶೋಧನಾ ವಿಭಾಗ,
ಕುವೆಂಪು ವಿಶ್ವವಿದ್ಯಾನಿಲಯ



**ಸ್ನಾತಕೋತ್ತರ ಸಂಸ್ಕೃತ ಅಧ್ಯಯನ ಮತ್ತು ಸಂಶೋಧನಾ ವಿಭಾಗ**
**ಕುವೆಂಪು ವಿಶ್ವವಿದ್ಯಾನಿಲಯ**
**ಸಹ್ಯಾದ್ರಿ ಕಾಲೇಜು ಆವರಣ, ಶಿವಮೊಗ್ಗ –577203**

**2023**

# ಶಿವತತ್ತ್ವರತ್ನಾಕರದಲ್ಲಿನ ನಾಟ್ಯಶಾಸ್ತ್ರೀಯ ಅಂಶಗಳ ವಿಶ್ಲೇಷಣಾತ್ಮಕ ಅಧ್ಯಯನ

(ಪಿಹೆಚ್.ಡಿ. ಪದವಿಯ ಆಂಶಿಕ ಅವಶ್ಯಕತೆಗಾಗಿ ಕುವೆಂಪು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ)


**ಸಂಶೋಧಕರು**

**ಪ್ರತಿಮಾ ಕೆ.ಎನ್.**

(Reg.No- 317/17.01.2017)

**ಮಾರ್ಗದರ್ಶಕರು**

**ಡಾ. ಎಂ.ಎ.ಶ್ರುತಿಕೀರ್ತಿ**

ಅಧ್ಯಕ್ಷರು,
ಸ್ನಾತಕೋತ್ತರ ಸಂಸ್ಕೃತ ಅಧ್ಯಯನ ಮತ್ತು ಸಂಶೋಧನಾ ವಿಭಾಗ,
ಕುವೆಂಪು ವಿಶ್ವವಿದ್ಯಾನಿಲಯ



**ಸ್ನಾತಕೋತ್ತರ ಸಂಸ್ಕೃತ ಅಧ್ಯಯನ ಮತ್ತು ಸಂಶೋಧನಾ ವಿಭಾಗ**
**ಕುವೆಂಪು ವಿಶ್ವವಿದ್ಯಾನಿಲಯ**
**ಸಹ್ಯಾದ್ರಿ ಕಾಲೇಜು ಆವರಣ, ಶಿವಮೊಗ್ಗ –577203**

**2023**

# ಅಭ್ಯರ್ಥಿಯ ಪ್ರಮಾಣಪತ್ರ

**ಡಾ.ಎಂ.ಎ.ಶ್ರುತಿಕೀರ್ತಿ, ಅಧ್ಯಕ್ಷರು, ಸ್ನಾತಕೋತ್ತರ ಸಂಸ್ಕೃತ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕುವೆಂಪು ವಿಶ್ವವಿದ್ಯಾಲಯ** ಇವರ ಮಾರ್ಗದರ್ಶನದಲ್ಲಿ **"ಶಿವತತ್ತ್ವರತ್ನಾಕರದಲ್ಲಿನ ನಾಟ್ಯಶಾಸ್ತ್ರೀಯ ಅಂಶಗಳ ವಿಶ್ಲೇಷಣಾತ್ಮಕ ಅಧ್ಯಯನ"** ಎಂಬ ಪಿಹೆಚ್.ಡಿ., ಮಹಾಪ್ರಬಂಧವನ್ನು ಸ್ನಾತಕೋತ್ತರ ಸಂಸ್ಕೃತ ಅಧ್ಯಯನ ಮತ್ತು ಸಂಶೋಧನ ವಿಭಾಗ, ಕುವೆಂಪು ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿದ್ದೇನೆ. ಈ ಮಹಾಪ್ರಬಂಧದಲ್ಲಿರುವ ಯಾವುದೇ ಭಾಗದ ವಿಷಯವನ್ನು ಇತರ ಯಾವುದೇ ವಿಶ್ವವಿದ್ಯಾಲಯದ ಪದವಿ, ಡಿಪ್ಲೊಮೋ ಅಥವಾ ಇನ್ನಿತರೆ ತತ್ಸಮಾನ ಪದವಿಗಾಗಿ ಬಳಸಿಕೊಂಡಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿ: 16.01.2023

ಸ್ಥಳ: ಶಿವಮೊಗ್ಗ

Prathima K N.

(ಪ್ರತಿಮಾ ಕೆ.ಎನ್.)

**ಡಾ.ಎಂ.ಎ.ಶ್ರುತಿಕೀರ್ತಿ,**
**ಅಧ್ಯಕ್ಷರು ಮತ್ತು ಮಾರ್ಗದರ್ಶಕರು,**
**ಸ್ನಾತಕೋತ್ತರ ಸಂಸ್ಕೃತ ಅಧ್ಯಯನ ಮತ್ತು ಸಂಶೋಧನ ವಿಭಾಗ,**
**ಕುವೆಂಪು ವಿಶ್ವವಿದ್ಯಾಲಯ**

## ಮಾರ್ಗದರ್ಶಕರ ದೃಢೀಕರಣಪತ್ರ

**ಶ್ರೀಮತಿ ಪ್ರತಿಮಾ ಕೆ.ಎನ್.** ಇವರು ನನ್ನ ಮಾರ್ಗದರ್ಶನದಲ್ಲಿ ಸಂಶೋಧನ ಅಧ್ಯಯನ ನಡೆಸಿ, **"ಶಿವತತ್ತ್ವರತ್ನಾಕರದಲ್ಲಿನ ನಾಟ್ಯಶಾಸ್ತ್ರೀಯ ಅಂಶಗಳ ವಿಶ್ಲೇಷಣಾತ್ಮಕ ಅಧ್ಯಯನ"** ಎಂಬ ಮಹಾಪ್ರಬಂಧವನ್ನು ಸಿದ್ಧಪಡಿಸಿ, ಕುವೆಂಪು ವಿಶ್ವವಿದ್ಯಾಲಯದ ಪಿಹೆಚ್.ಡಿ. ಪದವಿಗಾಗಿ ಸ್ನಾತಕೋತ್ತರ ಸಂಸ್ಕೃತ ಅಧ್ಯಯನ ಮತ್ತು ಸಂಶೋಧನ ವಿಭಾಗ, ಕುವೆಂಪು ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿದ್ದಾರೆ. ಈ ಮಹಾಪ್ರಬಂಧವು ಸಂಶೋಧಕರ ಸ್ವಂತ ಸಂಶೋಧನೆಯ ಮೂಲಕ ರೂಪುಗೊಂಡಿದೆ. ಈ ಮಹಾಪ್ರಬಂಧವನ್ನು ಭಾಗಶಃ ಆಗಲೀ ಪೂರ್ಣಪ್ರಮಾಣದಲ್ಲಾಗಲೀ ಬೇರಾವುದೇ ಪದವಿ/ ಡಿಪ್ಲೊಮಾ ಅಥವಾ ಇನ್ನಿತರೆ ತತ್ಸಮಾನ ಪದವಿಗಾಗಿ ಈ ಹಿಂದೆ ಸಲ್ಲಿಸಿಲ್ಲವೆಂದು ದೃಢೀಕರಿಸಲಾಗಿದೆ.

**ದಿನಾಂಕ:** 16 01. 2023
**ಸ್ಥಳ : ಶಿವಮೊಗ್ಗ**

Shruthi Kirthi M.A.
**(ಡಾ.ಎಂ.ಎ.ಶ್ರುತಿಕೀರ್ತಿ)**

# ಕೃತಜ್ಞತೆಗಳು

"ಶಿವತತ್ತ್ವರತ್ನಾಕರದಲ್ಲಿನ ನಾಟ್ಯಶಾಸ್ತ್ರೀಯ ಅಂಶಗಳ ವಿಶ್ಲೇಷಣಾತ್ಮಕ ಅಧ್ಯಯನ" ಎಂಬ ಶೀರ್ಷಿಕೆಯಡಿ ಕೈಗೊಂಡ ನನ್ನ ಸಂಶೋಧನ ಅಧ್ಯಯನಕ್ಕೆ ಸೂಕ್ತ ಮಾರ್ಗದರ್ಶನ ನೀಡಿ, ತಪ್ಪು–ಒಪ್ಪುಗಳನ್ನು ತಿದ್ದಿ–ತೀಡಿ, ಈ ಅಧ್ಯಯನವು ಸೂಕ್ತ ರೀತಿಯಲ್ಲಿ ಪೂರ್ಣತೆಯನ್ನು ಕಂಡು, ಮಹಾಪ್ರಬಂಧದ ರೂಪದಲ್ಲಿ ಮೂಡಿಬರಲು ಮುಖ್ಯ ಕಾರಣೀಕರ್ತರಾದ, ಕುವೆಂಪು ವಿಶ್ವವಿದ್ಯಾಲಯದ, ಸ್ನಾತಕೋತ್ತರ ಸಂಸ್ಕೃತ ಅಧ್ಯಯನ ಮತ್ತು ಸಂಶೋಧನ ವಿಭಾಗದ ಅಧ್ಯಕ್ಷರೂ ಹಾಗೂ ನನ್ನ ಈ **ಅಧ್ಯಯನದ ಮಾರ್ಗದರ್ಶಕರಾದ ಡಾ.ಎಂ.ಎ.ಶ್ರುತಿಕೀರ್ತಿ** ಇವರಿಗೆ ಹೃತ್ಪೂರ್ವಕವಾದ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಈ ಅಧ್ಯಯನದ ಆರಂಭಿಕ ಹಂತದಲ್ಲಿ ಮಾರ್ಗದರ್ಶಕರಾಗಿದ್ದು, ಅಮೂಲ್ಯ ಸಲಹೆಗಳನ್ನು ನೀಡಿದಂತಹ ಕೆಳದಿ ಪುರಾತತ್ತ್ವ ಸಂಶೋಧನ ಕೇಂದ್ರದ ಅಸಿಸ್ಟೆಂಟ್ ಕ್ಯುರೇಟರ್ (ನಿವೃತ್ತ) ಆದಂತಹ ಡಾ.ಜಿ.ವಿ. ಕಲ್ಲಾಪುರ ಇವರಿಗೆ ಅನನ್ಯ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ನನಗೆ ಅಧ್ಯಯನ ಮಾಡಲು ಮನೋಸ್ಥೈರ್ಯವನ್ನು ತುಂಬಿ, ಅಧ್ಯಯನಕ್ಕೆ ಅಗತ್ಯವಾದ ಗ್ರಂಥಗಳನ್ನು ತಮ್ಮ ಗ್ರಂಥಾಲಯದಿಂದ ಒದಗಿಸಿಕೊಟ್ಟು, ಆವಶ್ಯಕ ಮಾಹಿತಿಯನ್ನು ನೀಡಿ ಪ್ರೋತ್ಸಾಹಿಸಿದ ವೀರಾಪುರ ಹಿರೇಮಠದ ಪರಮ ಪೂಜ್ಯರಾದ ಡಾ.ಮರುಳಸಿದ್ಧಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳಿಗೆ ಭಕ್ತಿಪೂರ್ವಕ ಅಭಿವಂದನೆಗಳನ್ನು ಅರ್ಪಿಸುತ್ತೇನೆ.

ಶ್ರೀಚನ್ನಮಲ್ಲಿಕಾರ್ಜುನ ಸ್ವಾಮಿ ವಿದ್ಯಾವರ್ಧಕ ಸಂಘ, ಹೊನ್ನಾಳಿಯ ಪಾಠಶಾಲೆಯಲ್ಲಿ ಸಂಸ್ಕೃತ ಶಿಕ್ಷಕಿಯಾಗಿ ಸೇವೆಸಲ್ಲಿಸುವ ಅವಕಾಶ ನೀಡಿ, ನನ್ನ ಪಿಹೆಚ್.ಡಿ. ಉನ್ನತಾಧ್ಯಯನಕ್ಕೆ ಅನುವುಮಾಡಿಕೊಟ್ಟು ಆಶೀರ್ವದಿಸಿದಂತಹ ಈ ವಿದ್ಯಾಸಂಸ್ಥೆಯ ಗೌರವಾನ್ವಿತ ಅಧ್ಯಕ್ಷರಾದ ಪರಮ ಪೂಜ್ಯ ಶ್ರೀ ಷ.ಬ್ರ.ಡಾ.ಒಡೆಯರ್ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿಗಳಿಗೂ ಕೂಡ ನನ್ನ ಕೃತಜ್ಞತಾ ಪೂರ್ವಕ ನಮನಗಳನ್ನು ಅರ್ಪಿಸುತ್ತೇನೆ.

ಅಧ್ಯಯನಕ್ಕೆ ಪೂರಕವಾದ ಸಕಾಲಿಕ ಸಲಹೆ–ಸೂಚನೆಗಳನ್ನು ನೀಡಿದ ಡಾ.ಕಾಶೀನಾಥಶಾಸ್ತ್ರಿ ಹೆಚ್.ವಿ. ಮುಖ್ಯಸ್ಥರು, ಸಂಸ್ಕೃತ ವಿಭಾಗ, ಶ್ರೀವೆಂಕಟರಮಣಸ್ವಾಮಿ ಕಾಲೇಜು, ಬಂಟ್ವಾಳ ಇವರಿಗೂ ಮನಃಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಹಾಗೂ ನನ್ನ ನಾಟ್ಯಗುರುಗಳಾದ ವಿದ್ವಾನ್.ಎಸ್.ಕೇಶವಕುಮಾರ್ ಪಿಳ್ಳೈ ಇವರಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತಾ, ನನ್ನ ಎಲ್ಲಾ ಕಾರ್ಯದಲ್ಲಿ ಯಶಸ್ಸು ಸಿಗಲೆಂದು ಹಾರೈಸಿದ ಮಾತಾ-ಪಿತೃಗಳಿಗೂ ಹಾಗೂ ಗುರುಹಿರಿಯರಿಗೂ ಹಣೆಮಣಿಯುತ್ತೇನೆ.

ಈ ಅಧ್ಯಯನವು ಯಶಸ್ವಿಯಾಗಲು ಪ್ರೀತಿಯಿಂದ ಸಹಕರಿಸಿ, ಕಾರ್ಯದ ಪ್ರಗತಿಯ ಕುರಿತು ಆಗಾಗ್ಗೆ ವಿಚಾರಿಸುತ್ತಾ ಪ್ರೋತ್ಸಾಹ ನೀಡುತ್ತಿದ್ದ ನನ್ನ ಪತಿ ನಿಜಗುಣಶಿವಯೋಗಿ ಹೆಚ್.ಎಸ್. ಇವರಿಗೂ ಆಭಾರಿಯಾಗಿದ್ದೇನೆ. ಈ ಮಹಾಪ್ರಬಂಧದ ಡಿ.ಟಿ.ಪಿ ಕಾರ್ಯದಲ್ಲಿ ಸಹಕರಿಸುತ್ತಿದ್ದ ಪುತ್ರಿ ಚಿ.ಗಾಯತ್ರಿ ಹೆಚ್.ಎನ್. ಇವರಿಗೂ ಹಾಗೂ ಕಾಲಕಾಲಕ್ಕೆ ಸಹಕಾರವನ್ನು ನೀಡುತ್ತಿದ್ದ ನನ್ನ ವಿದ್ಯಾರ್ಥಿ ಬಳಗಕ್ಕೂ ಕೂಡ ಕೃತಜ್ಞತೆಗಳು ಸಲ್ಲುತ್ತವೆ. ಯಾವುದೇ ಕಾರ್ಯವು ಯಶಸ್ವಿಯಾಗಲು ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಹಲವರ ಸಹಕಾರವಿದ್ದೇ ಇರುತ್ತದೆ. ಅವರೆಲ್ಲರನ್ನೂ ಈ ಸಂದರ್ಭದಲ್ಲಿ ಮನಸಾ ಸ್ಮರಿಸುತ್ತಾ ಅವರಿಗೂ ಕೂಡ ನನ್ನ ಕೃತಜ್ಞತೆಗಳನ್ನು ಸಮರ್ಪಿಸುತ್ತಿದ್ದೇನೆ.

**ಪ್ರತಿಮಾ ಕೆ.ಎನ್.**

Ouriginal
by Turnitin

## Document Information

| | |
|---|---|
| Analyzed document | KU-TH-SAC-SAN-PRATHIMA-KN-22.pdf (D155986168) |
| Submitted | 1/16/2023 7:18:00 AM |
| Submitted by | Walmiki R H |
| Submitter email | walmiki_rh@rediffmail.com |
| Similarity | 0% |
| Analysis address | walmiki_rh.kuvempu@analysis.urkund.com |

## Sources included in the report

| | | |
|---|---|---|
| SA | **Course - IV Karnataka Samskruthika Charitre.pdf**<br>Document Course - IV Karnataka Samskruthika Charitre.pdf (D139536565) | 4 |
| SA | **G. PREMA.pdf**<br>Document G. PREMA.pdf (D125955731) | 2 |

## Entire Document

1 ಅಧ್ಯಾಯ–1 ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ ಮತ್ತು ಪ್ರಯೋಜನ ಪೀಠಿಕೆ : ಪ್ರಾಚೀನ ಭಾರತವು ಅನೇಕ ರಾಜರ ಆಳ್ವಿಕೆಗೆ ಒಳಪಟ್ಟಿದೆ. ಈ ರಾಜರಲ್ಲಿ ಹಲವರು ತಮ್ಮ ಆಡಳಿತಾವಧಿಯಲ್ಲಿ ಅಪರೂಪದ ಕಲೆ, ಸಾಹಿತ್ಯ,

ಸಂಸ್ಕೃತಿಗೆ ತಮ್ಮದೇ ಆದ ಕೊಡುಗೆಗಳನ್ನು ನೀಡಿ ಕಲೆ– ಸಾಹಿತ್ಯವನ್ನು ಶ್ರೀಮಂತಗೊಳಿಸುವಲ್ಲಿ ನಿರ್ಣಾಯಕ
ಪಾತ್ರ ವಹಿಸಿದ್ದಾರೆ. ಇಂತಹ ರಾಜಮನೆತನಗಳಲ್ಲಿ ಕರ್ನಾಟಕದ ಮಲೆನಾಡು ಪ್ರದೇಶವನ್ನು ಹಲವು ದಶಕಗಳ ಕಾಲ ಆಳಿದ ಕೆಳದಿ ರಾಜಮನೆತನವೂ ಒಂದಾಗಿದೆ. ಇವರ ಹಲವು ಯೋಜನೆಗಳು ಇಂದಿಗೂ ಮಾದರಿಯಾಗಿದೆ. ಇವರು ಜಾರಿಗೆ ತಂದಂತಹ ಕಂದಾಯ ಪದ್ಧತಿಯು ಮಾದರಿಯಾದುದು ಎಂದು ವಿದ್ವಾಂಸರು ಬಣ್ಣಿಸಿದ್ದಾರೆ. ಕ್ರಿ.ಶ.1499ರಿಂದ 1763ರವರೆಗೆ ಸುಮಾರು ಇಪ್ಪತ್ತು ಜನ ನಾಯಕರು ಕೆಳದಿಯನ್ನಾಳಿರುವವರು. ಅವರೆಲ್ಲ ಒಂದಿಲ್ಲೊಂದು ರೀತಿಯಲ್ಲಿ ಕಲಾವಿದರನ್ನು, ಸಾಹಿತಿಗಳನ್ನು , ವಿದ್ವಾಂಸರನ್ನು ಪೋಷಿಸಿ ಅವರಿಂದ ಅನೇಕ ಕೃತಿಗಳ ರಚನೆಗೆ ಕಾರಣರಾಗಿದ್ದಾರೆ. ಅವರಲ್ಲಿ ಮುಖ್ಯವಾಗಿ ಏಳು ಜನ ಅರಸರು ಅನೇಕ ವಿದ್ವಾಂಸರಿಗೆ, ಆಶ್ರಯ ನೀಡಿ ಅವರಿಂದ ಅನೇಕ

ಸಂಸ್ಕೃತ ಹಾಗೂ ಕನ್ನಡ ಕೃತಿಗಳ ರಚನೆಯಾಗಲು ಕಾರಣರಾಗಿದ್ದಾರೆ. ಭಾರತದ ಚರಿತ್ರೆಯಲ್ಲಿ ಕೆಳದಿ ರಾಜಮನೆತನವು ಬಹುಮುಖ್ಯ ಸ್ಥಾನಗಳಿಸಿದೆ. ಶಿಸ್ತುಗಾರ ಶಿವಪ್ಪನಾಯಕ ವೀರಮಹಿಳೆ ಚೆನ್ನಮ್ಮಾಜಿ ಮೊದಲಾದವರ ಹೆಸರುಗಳು ಭಾರತೀಯ ಇತಿಹಾಸದಲ್ಲಿ ಸೇರ್ಪಡೆಯಾಗಿವೆ. ಈ ಕಾಲದಲ್ಲಿ ಸಂಸ್ಕೃತ ಸಾಹಿತ್ಯಗಳು ರಚನೆಗೊಂಡವು. "ಶಿವತ್ತ್ವರತ್ನಾಕರ"ವೆಂಬ ವಿಶ್ವಕೋಶವು ಬಸಪ್ಪನಾಯಕನಿಂದ ಈ ಕಾಲದಲ್ಲಿಯೇ

ಸೃಷ್ಟಿಯಾಯಿತು. ಕೆಳದಿ ಮನೆತನದವರಿಗೆ ಕವಲೇದುರ್ಗ ಮಠದ ಗುರುಗಳ ಆಶೀರ್ವಾದವೇ ಇತಿಹಾಸವನ್ನು
ಸೃಷ್ಟಿಸಲು ಅನುವಾಯಿತು ಎನ್ನಲಾಗಿದೆ. ಪ್ರಾಚೀನಭಾರತದ ಪರಂಪರೆಯಲ್ಲಿ ಶಾಸ್ತ್ರೀಯ ಅಧ್ಯಯನಗಳು
ಬಹಳ ನಡೆದಿವೆ. ನಮ್ಮ ಜೀವನಪದ್ಧತಿಯಲ್ಲಿ ಆಯುರ್ವೇದ, ಗೋವೈದ್ಯ, ಬಾಲವೈದ್ಯ, ಸೂಪಶಾಸ್ತ್ರ, ವಾಸ್ತುಶಾಸ್ತ್ರ, ಮಳೆಶಾಸ್ತ್ರ, ಕರ್ಮಶಾಸ್ತ್ರ ಧರ್ಮಶಾಸ್ತ್ರ ಹೀಗೆ ಹಲವಾರು, ಜ್ಞಾನಗಳು ವಿರಾಜಿಸುತ್ತಿದ್ದವು. ಇವುಗಳಲ್ಲಿ ಯಾವುದೊಂದನ್ನು ಬಿಟ್ಟರೂ ಇನ್ನೊಂದಕ್ಕೆ ಕೊರತೆ ಕಾಣುತ್ತಿತ್ತು. ಒಂದು ಜ್ಞಾನತಂತು, ಇನ್ನೊಂದು ಜ್ಞಾನತಂತುವಿನ ಜೊತೆ ಸದಾ ಅವಿನಾಭಾವ ಸಂಬಂಧವನ್ನು ಇಟ್ಟುಕೊಂಡಿರುತ್ತಿತ್ತು. ಹಾಗಾಗಿ ಒಂದು ಶಾಸ್ತ್ರಜ್ಞಾನದ

ಪರಿಣತರೂ ಬಹುಶಾಸ್ತ್ರಪರಿಣತರೂ

LIBRARIAN
KUVEMPU UNIVERSITY
Jnana Sahyadri
Shankaraghatta-577 451
16/1/23

# ಪರಿವಿಡಿ


| ಕ್ರ.ಸಂ | ವಿಷಯಾನುಕ್ರಮಣಿಕೆ | ಪು.ಸಂ |
|---|---|---|
| **1** | ಅಧ್ಯಾಯ 1 ಪೀಠಿಕೆ, ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ | **1** |
| **2** | ಅಧ್ಯಾಯ 2 ಕವಿ ಮತ್ತು ಕೃತಿ ಪರಿಚಯ | **12** |
| **3** | ಅಧ್ಯಾಯ 3 ನಾಟ್ಯಶಾಸ್ತ್ರದ ಗರಿಮೆ, ಉಗಮ, ಪರಿಚಯ, ಬೆಳವಣಿಗೆ | **54** |
| **4** | ಅಧ್ಯಾಯ 4 ಶಿವತತ್ತ್ವರತ್ನಾಕರದಲ್ಲಿನ ನಾಟ್ಯಶಾಸ್ತ್ರೀಯ ಅಂಶಗಳು & ವಿಶ್ಲೇಷಣೆ | **150** |
| **5** | ಅಧ್ಯಾಯ 5 ನಾಟ್ಯಶಾಸ್ತ್ರದ ಇತರ ಕೃತಿಗಳು ಹಾಗೂ ಅವುಗಳ ಮಹತ್ವ | **220** |
| **6** | ಉಪಸಂಹಾರ | **236** |
| **7** | ಅನುಬಂಧ | **243–245** |
| **8** | ಪರಾಮರ್ಶನ ಗ್ರಂಥಗಳು | **246–247** |

# ಅಧ್ಯಾಯ–1

## ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ ಮತ್ತು ಪ್ರಯೋಜನ

**ಪೀಠಿಕೆ :**

ಪ್ರಾಚೀನ ಭಾರತವು ಅನೇಕ ರಾಜರ ಆಳ್ವಿಕೆಗೆ ಒಳಪಟ್ಟಿದೆ. ಈ ರಾಜರಲ್ಲಿ ಹಲವರು ತಮ್ಮ ಆಡಳಿತಾವಧಿಯಲ್ಲಿ ಅಪರೂಪದ ಕಲೆ, ಸಾಹಿತ್ಯ, ಸಂಸ್ಕೃತಿಗೆ ತಮ್ಮದೇ ಆದ ಕೊಡುಗೆಗಳನ್ನು ನೀಡಿ ಕಲೆ–ಸಾಹಿತ್ಯವನ್ನು ಶ್ರೀಮಂತಗೊಳಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸಿದ್ದಾರೆ. ಇಂತಹ ರಾಜಮನೆತನಗಳಲ್ಲಿ ಕರ್ನಾಟಕದ ಮಲೆನಾಡು ಪ್ರದೇಶವನ್ನು ಹಲವು ದಶಕಗಳ ಕಾಲ ಆಳಿದ ಕೆಳದಿ ರಾಜಮನೆತನವೂ ಒಂದಾಗಿದೆ. ಇವರ ಹಲವು ಯೋಜನೆಗಳು ಇಂದಿಗೂ ಮಾದರಿಯಾಗಿದೆ. ಇವರು ಜಾರಿಗೆ ತಂದಂತಹ ಕಂದಾಯ ಪದ್ಧತಿಯು ಮಾದರಿಯಾದುದು ಎಂದು ವಿದ್ವಾಂಸರು ಬಣ್ಣಿಸಿದ್ದಾರೆ. ಕ್ರಿ.ಶ.1499ರಿಂದ 1763ರವರೆಗೆ ಸುಮಾರು ಇಪ್ಪತ್ತು ಜನ ನಾಯಕರು ಕೆಳದಿಯನ್ನಾಳಿರುವವರು. ಅವರೆಲ್ಲ ಒಂದಿಲ್ಲೊಂದು ರೀತಿಯಲ್ಲಿ ಕಲಾವಿದರನ್ನು, ಸಾಹಿತಿಗಳನ್ನು , ವಿದ್ವಾಂಸರನ್ನು ಪೋಷಿಸಿ ಅವರಿಂದ ಅನೇಕ ಕೃತಿಗಳ ರಚನೆಗೆ ಕಾರಣರಾಗಿದ್ದಾರೆ. ಅವರಲ್ಲಿ ಮುಖ್ಯವಾಗಿ ಏಳು ಜನ ಅರಸರು ಅನೇಕ ವಿದ್ವಾಂಸರಿಗೆ, ಆಶ್ರಯ ನೀಡಿ ಅವರಿಂದ ಅನೇಕ ಸಂಸ್ಕೃತ ಹಾಗೂ ಕನ್ನಡ ಕೃತಿಗಳ ರಚನೆಯಾಗಲು ಕಾರಣರಾಗಿದ್ದಾರೆ.

ಭಾರತದ ಚರಿತ್ರೆಯಲ್ಲಿ ಕೆಳದಿ ರಾಜಮನೆತನವು ಬಹುಮುಖ್ಯ ಸ್ಥಾನಗಳಿಸಿದೆ. ಶಿಸ್ತುಗಾರ ಶಿವಪ್ಪನಾಯಕ ವೀರಮಹಿಳೆ ಚೆನ್ನಮ್ಮಾಜಿ ಮೊದಲಾದವರ ಹೆಸರುಗಳು ಭಾರತೀಯ ಇತಿಹಾಸದಲ್ಲಿ ಸೇರ್ಪಡೆಯಾಗಿವೆ. ಈ ಕಾಲದಲ್ಲಿ ಸಂಸ್ಕೃತ ಸಾಹಿತ್ಯಗಳು ರಚನೆಗೊಂಡವು. "ಶಿವತತ್ತ್ವರತ್ನಾಕರ"ವೆಂಬ ವಿಶ್ವಕೋಶವು ಬಸಪ್ಪನಾಯಕನಿಂದ ಈ ಕಾಲದಲ್ಲಿಯೇ ಸೃಷ್ಟಿಯಾಯಿತು. ಕೆಳದಿ ಮನೆತನದವರಿಗೆ ಕವಲೇದುರ್ಗ ಮಠದ ಗುರುಗಳ ಆಶೀರ್ವಾದವೇ ಇತಿಹಾಸವನ್ನು ಸೃಷ್ಟಿಸಲು ಅನುವಾಯಿತು ಎನ್ನಲಾಗಿದೆ.

ಪ್ರಾಚೀನಭಾರತದ ಪರಂಪರೆಯಲ್ಲಿ ಶಾಸ್ತ್ರೀಯ ಅಧ್ಯಯನಗಳು ಬಹಳ ನಡೆದಿವೆ. ನಮ್ಮ ಜೀವನಪದ್ಧತಿಯಲ್ಲಿ ಆಯುರ್ವೇದ, ಗೋವೈದ್ಯ, ಬಾಲವೈದ್ಯ, ಸೂಪಶಾಸ್ತ್ರ, ವಾಸ್ತುಶಾಸ್ತ್ರ, ಮಳೆಶಾಸ್ತ್ರ, ಕರ್ಮಶಾಸ್ತ್ರ ಧರ್ಮಶಾಸ್ತ್ರ ಹೀಗೆ ಹಲವಾರು, ಜ್ಞಾನಗಳು ವಿರಾಜಿಸುತ್ತಿದ್ದವು. ಇವುಗಳಲ್ಲಿ ಯಾವುದೊಂದನ್ನು ಬಿಟ್ಟರೂ ಇನ್ನೊಂದಕ್ಕೆ ಕೊರತೆ ಕಾಣುತ್ತಿತ್ತು. ಒಂದು ಜ್ಞಾನತಂತು, ಇನ್ನೊಂದು ಜ್ಞಾನತಂತುವಿನ ಜೊತೆ ಸದಾ ಅವಿನಾಭಾವ ಸಂಬಂಧವನ್ನು ಇಟ್ಟುಕೊಂಡಿರುತ್ತಿತ್ತು. ಹಾಗಾಗಿ ಒಂದು ಶಾಸ್ತ್ರಜ್ಞಾನದ ಪರಿಣತರೂ ಬಹುಶಾಸ್ತ್ರಪರಿಣತರೂ

ಜೊತೆಜೊತೆಗೆ ಇರುತ್ತಿದ್ದರು. ಈ ಬಹುಶಾಸ್ತ್ರ ಎಂಬುದು ಲೌಕಿಕಕ್ಕೆ ಬೇಕಾದ ವಸ್ತುಜ್ಞಾನ. ಅದುವೇ ವಿಶ್ವಕೋಶ ಎನ್ನಬಹುದು.

ಹಿಂದೊಂದು ಕಾಲದಲ್ಲಿ ವಿಶ್ವಕೋಶವೆಂದರೆ ಭಾರತೀಯರಿಗಿಂತ ಪಾಶ್ಚಾತ್ಯರ ಹೆಸರು ಕೇಳಿಬರುತ್ತಿತ್ತು. ಅವರ ಎನ್‌ಸೈಕ್ಲೋಪೀಡಿಯಾಗಳೇ ಶ್ರೇಷ್ಠ ಎಂಬ ಭಾವನೆ ಇತ್ತು. ಆದರೆ ನಮ್ಮ ಚಾಲುಕ್ಯ ಅರಸನಾದ ಚಾವುಂಡರಾಯನು "ಲೋಕೋಪಕಾರ"ವನ್ನು ಕ್ರಿ.ಶ.1025ರಲ್ಲಿ ಕನ್ನಡ ಭಾಷೆಯಲ್ಲಿ ರಚಿಸಿ ಭಾರತೀಯರು ಹೆಮ್ಮೆಪಡುವ ರೀತಿ ಮಾಡಿದನು[1]. ನಂತರದಲ್ಲಿ ಸಂಸ್ಕೃತದಲ್ಲಿ ಹೊರಹೊಮ್ಮಿದ ಕೃತಿರತ್ನವೇ ಕೆಳದಿಯ ಬಸವರಾಜ ಭೂಪಾಲನ "ಶಿವತತ್ತ್ವರತ್ನಾಕರ". ಇದು ಈತನ ಕಾಲದವರೆಗೆ ರಚಿತವಾದ ಸಂಸ್ಕೃತ ಸಾಹಿತ್ಯದ ಬೃಹತ್ ಗ್ರಂಥವಾಗಿದೆ. ಹದಿಮೂರು ಸಾವಿರ ಶ್ಲೋಕಗಳಿಂದ ಕೂಡಿದ ಜ್ಞಾನದ ಆಗರ. ಇದು ಹದಿನಾರನೇ ಶತಮಾನದ ಜೀವನ ಶೈಲಿ, ರಾಜಕೀಯ ನಿಲುವು, ಆರ್ಥಿಕ ವ್ಯವಹಾರಗಳನ್ನು ತೆರೆದಿಟ್ಟಿದೆಯೆನ್ನಬಹುದು.

ವಿಶ್ವಕೋಶಗಳು ಹಲವು ಪರಿಪೂರ್ಣ ಜ್ಞಾನಶಾಖೆಗಳನ್ನು ಒಳಗೊಂಡ ರಚನೆಗಳೇ ಆಗಿವೆ. ಮಾನಸೋಲ್ಲಾಸ, ಶಿವತತ್ತ್ವರತ್ನಾಕರಾದಿಯಾಗಿ ಅನೇಕ ಮಹಾಕೃತಿಗಳಿವೆ. ಅವುಗಳಲ್ಲಿ ವಿಷ್ಣುಧರ್ಮೋತ್ತರ ಪುರಾಣ, ಬೃಹತ್‌ಸಂಹಿತೆ, ಅರ್ಥಶಾಸ್ತ್ರ, ಶಿವತತ್ತ್ವನಿಧಿ ಹೀಗೆ ಅನೇಕ ಕೃತಿನೆಲೆಗಳು ಮುಂದಿನ ಕೋಶಗಳ ಜ್ಞಾನಪೂರಣಕ್ಕೆ ಅನೇಕ ರೀತಿಯಲ್ಲಿ ನೆರವಾಗಿವೆ. ಏಕವಿಷಯಕೋಶಗಳು ಹಲವು ವಿಷಯಕೋಶಗಳಾಗಿವೆ. ಹಲವು ವಿಷಯಕೋಶಗಳು ಸಮಸ್ತವಸ್ತುವಿಷಯಕೋಶಗಳಾಗಿ ಬೆಳೆದ ಸಂಗತಿಯನ್ನು ಚಾರಿತ್ರಿಕವಾಗಿ ಗುರುತಿಸಲು ಸಾಧ್ಯವಿದೆ. ಈ ಹಿನ್ನೆಲೆಯು ಸಮಸ್ತ ವಸ್ತುವಿಷಯಕೋಶದ ಒಟ್ಟು ಆಕೃತಿಯನ್ನು ಅದರ ಅಂತರ್ವಿಸ್ತಾರವನ್ನು ತಿಳಿಯಲು ಅನುಕೂಲವಾಗುತ್ತದೆ. ಈ ರೀತಿಯ ವಿಶ್ವಕೋಶಗಳನ್ನು ಅಧ್ಯಯನ ಮಾಡಿದರೆ ಸಮಗ್ರವಸ್ತು ವಿಷಯಕೋಶದ ಸಮಸ್ತಕೃತಿಯನ್ನು ತಿಳಿದಂತೆ ಆಗುತ್ತದೆ. ತನ್ಮೂಲಕ ನಮ್ಮ ಭಾರತೀಯ ಸಾಹಿತ್ಯ ಪ್ರಕಾರಗಳನ್ನು ಅರಿತಂತಾಗುತ್ತದೆ.

ಶಿವತತ್ತ್ವರತ್ನಾಕರದಲ್ಲಿ ಪ್ರಾಚೀನ ಭಾರತೀಯ ಸಂಸ್ಕೃತಿಯನ್ನು, ಕರ್ನಾಟಕ ಸಂಸ್ಕೃತಿಯನ್ನು ತಿಳಿಯಲು ಹಲವು ಹಾದಿಗಳಿವೆ. ಆ ನಿಟ್ಟಿನಲ್ಲಿ ನಮಗೆ ಲಭ್ಯವಿರುವ ಆಕರಗಳಲ್ಲಿ ಸಂಸ್ಕೃತಕೋಶಗಳನ್ನು ಬಳಸಬಹುದು. ಬಹಳ ವಿರಳವಾಗಿರುವ ಸಂದರ್ಭದಲ್ಲಿ

[1] ಸಂಸ್ಕೃತ ನಾಟಕ – ಎ.ಆರ್. ಕೃಷ್ಣಶಾಸ್ತ್ರಿ– ಹೇಮಂತ ಸಾಹಿತ್ಯ, ಬೆಂಗಳೂರು–10.

ಕನ್ನಡನಾಡಿನಲ್ಲಿ ಎರಡು ಸಂಸ್ಕೃತವಿಶ್ವಕೋಶಗಳು ಹುಟ್ಟಿವೆ. ಒಂದು ಚಾಲುಕ್ಯಸೋಮೇಶ್ವರನ ಮಾನಸೋಲ್ಲಾಸ ಮತ್ತೊಂದು ಕೆಳದಿ ಬಸವರಾಜ ಭೂಪಾಲನ ಶಿವತತ್ತ್ವರತ್ನಾಕರ. ಶಿವತತ್ತ್ವರತ್ನಾಕರವನ್ನು ಇನ್ನೊಂದು ಪರಿಭಾಷೆಯ ಮೂಲಕ ಹೇಳುವುದಾದರೆ ಬಹುವಿಷಯವಸ್ತುಕೋಶ ಎಂದು ಕರೆಯಬಹುದು. ಶಿವತತ್ತ್ವರತ್ನಾಕರವು ಮಾನಸೋಲ್ಲಾಸದಿಂದ ಪ್ರೇರಿತಗ್ರಂಥವಾದರೂ ಇದು ಆಕಾರ, ಬರೆದಿರುವ ರೀತಿ, ವಿಷಯಗಳ ಜೋಡಣೆ ಇತ್ಯಾದಿಗಳಲ್ಲಿ ಮಾನಸೋಲ್ಲಾಸಕ್ಕಿಂತ ವಿಭಿನ್ನ ಶೈಲಿಯಲ್ಲಿ ಹೊರಹೊಮ್ಮಿದೆ.

ಭಾರತೀಯ ಸಂಸ್ಕೃತಿಯ ಆಚೆ–ಈಚೆಗಳನ್ನು ಆಳ–ಅಗಲಗಳನ್ನು ತಿಳಿಯಲು ಶಿವತತ್ತ್ವರತ್ನಾಕರದ ಒಳಹೋಗಲೇ ಬೇಕು ಆಗ ಅಲ್ಲಿರುವ ಅಮೂಲ್ಯರತ್ನಗಳ ಅನರ್ಘ್ಯಗುಣಗಳನ್ನು ಅರಿತುಕೊಳ್ಳಬಹುದು. ಪ್ರಸ್ತುತ ಗ್ರಂಥವಾದ ಶಿವತತ್ತ್ವರತ್ನಾಕರವು ಪುರಾಣ ಭಾಷೆಯಲ್ಲಿ ರಚಿತವಾಗಿದ್ದರೂ ಎಲ್ಲಾ ಅಂಶಗಳನ್ನೂ ಹೊಂದಿ, ಒಂದು ಸಂಪೂರ್ಣ ಭಾರತೀಯ ಸಂಸ್ಕೃತಿ ಕೃತಿಯಾಗಿದೆ ಎಂದು ಹೇಳಬಹುದು. ಇದು ಸಂಸ್ಕೃತಿಯ ವಾಙ್ಮೂರ್ತಿ, ಸಂಸ್ಕೃತಿಯ ಕೈಗನ್ನಡಿ, ಸುಜ್ಞಾನದ ಕೈದೀವಿಗೆ. ಅಷ್ಟೇ ಅಲ್ಲದೆ ಸಾರಸಂಸ್ಕೃತಿಯ ಸರ್ವಸ್ವವೇ ಆಗಿದೆ. ಈ ಶಿವತತ್ತ್ವವೆಂಬ ಸಮುದ್ರದಲ್ಲಿ ತಡಕಾಡಿದರೆ ಹಲವು ಅಮೂಲ್ಯ ಜ್ಞಾನರತ್ನಗಳು ಕೈವಶವಾಗುವುದು ಕಟ್ಟಿಟ್ಟ ಬುತ್ತಿ. ಅಷ್ಟೇ ಅಲ್ಲದೇ ಪ್ರಸ್ತುತ ಕೃತಿಯಲ್ಲಿ 64 ಕಲೆಗಳನ್ನು ಸವಿವರವಾಗಿ ವರ್ಣಿಸಿರುವುದು ಈ ಕೃತಿಯ ಮತ್ತೊಂದು ಮಹತ್ವದ ವಿಚಾರವಾಗಿದೆ. ಹೀಗೆ ಶಿವತತ್ತ್ವರತ್ನಾಕರವು ಅಮೂಲ್ಯವಾದ ವಿಚಾರಗಳ ಆಗರ. ಇದರಲ್ಲಿ ವರ್ಣಿಸಿರುವ ಕಲೆಗಳು ಅಥವಾ ವಿದ್ಯೆಗಳು ಅತ್ಯಂತ ಆವಶ್ಯಕವಾಗಿದ್ದು, ಇದು ಹಲವಾರು ಜ್ಞಾನಶಾಖೆಗಳನ್ನು ತನ್ನಲ್ಲಿಟ್ಟುಕೊಂಡು ಸದ್ವಿದ್ಯೆಗಳ ಸಾಗರವಾಗಿ ಹೆಸರಿಗೆ ಅನ್ವರ್ಥವಾಗಿರುವುದರ ಜೊತೆಗೆ ಸಂಸ್ಕೃತ ವಾಙ್ಮಯದ ವಿಶ್ವಕೋಶವೆಂಬುದಾಗಿ ಸುಪ್ರಸಿದ್ಧವಾಗಿದೆ. 'ಶಿವ' ಎಂದರೆ ಮಂಗಳ, ಶುಭ, ಎಂದೆಲ್ಲಾ ಅರ್ಥೈಸಲಾಗಿದೆ. ಯಥಾರ್ಥ ಬೋಧೆಗೆ "ತತ್ತ್ವ" ಎನ್ನಲಾಗಿದೆ. ಅಮೂಲ್ಯವಾದ ವಿವಿಧ ವಸ್ತುಗಳ ಭಂಡಾರವೆಂದೆನಿಸಿದ ಸಮುದ್ರವನ್ನು ರತ್ನಾಕರವೆಂಬುದಾಗಿ ಇಲ್ಲಿ ಹೇಳಲಾಗಿದೆ. ಹಾಗೆಯೇ ಪ್ರಸ್ತುತ ಶಿವತತ್ತ್ವರತ್ನಾಕರ ಗ್ರಂಥದಲ್ಲಿ ಹಲವಾರು ಶಾಸ್ತ್ರಗಳು ಅಂತರ್ಗತವಾಗಿರುವುದರಿಂದ ಮಾನವನ ಸರ್ವತೋಮುಖ ಅಭಿವೃದ್ಧಿಗಾಗಿ ಹಲವಾರು ಶಾಸ್ತ್ರಗಳ ಜ್ಞಾನದ ಮೂಲವಾಗಿದೆ.

ಹೀಗೆ ಹಲವು ಶಾಸ್ತ್ರಗಳ ಆಗರವಾಗಿರುವ ಈ ಕೃತಿಯಲ್ಲಿ ನಾಟ್ಯಶಾಸ್ತ್ರಕ್ಕೆ ಸಂಬಂಧಿಸಿದ ಅನೇಕ ಮೌಲಿಕ ವಿಚಾರಗಳಿದ್ದು, ಇವುಗಳನ್ನು ನಾಟ್ಯಾಸಕ್ತರು, ವಿದ್ಯಾರ್ಥಿಗಳು ಅಧ್ಯಯನ ಮಾಡಿದ್ದೇ ಆದಲ್ಲಿ

ಅವರ ಜ್ಞಾನದಾಹವು ತಣಿವುದರಲ್ಲಿ ಸಂದೇಹವಿಲ್ಲ. ನಾಟ್ಯಶಾಸ್ತ್ರವಾದರೋ ಪೌರಾಣಿಕವಾಗಿ, ಐತಿಹಾಸಿಕವಾಗಿ, ಸಾಂಸ್ಕೃತಿಕವಾಗಿ ಹಲವು ರೀತಿಯಲ್ಲಿ ವ್ಯಾಖ್ಯಾನಿಸಿದ್ದರೂ ಇದರ ಮೂಲ ಪ್ರಸ್ತುತ ನಮಗೆ ದೊರಕಿರುವುದು ಭರತನಿಂದಲೇ ಆದ್ದರಿಂದ ಇದು ಭರತನಾಟ್ಯವೆಂದೇ ಪ್ರಸಿದ್ಧಿಯಾಗಿದೆ. ಇದು ತನ್ನದೇ ಆದ ಇತಿಹಾಸ ಪರಂಪರೆಯನ್ನು ಹೊಂದಿದ್ದು ಅದನ್ನು ಮುಂದಿನ ಅಧ್ಯಾಯದಲ್ಲಿ ವಿಸ್ತೃತವಾಗಿ ಚರ್ಚಿಸಲಾಗಿದೆ.

ನಾಟ್ಯಶಾಸ್ತ್ರವು ಪ್ರಾಯಶಃ ಪ್ರಪಂಚದ ಅತಿ ದೊಡ್ಡ ಮತ್ತು ಅತ್ಯಂತ ಸಮಗ್ರ ರಂಗಭೂಮಿ ಮತ್ತು ನೃತ್ಯ ಕೈಪಿಡಿಯಾಗಿದೆ ಇದು ಇಲ್ಲಿಯವರೆಗೆ ಭಾರತದಲ್ಲಿನ ರಂಗಭೂಮಿ ಮತ್ತು ನೃತ್ಯದ ಶಾಸ್ತ್ರೀಯ ರೂಪಗಳ ಅಡಿಪಾಯವನ್ನು ರೂಪಿಸಿದೆ. ರಂಗಭೂಮಿಯ ಶತಮಾನಗಳ ಪ್ರಾಯೋಗಿಕ ಕೆಲಸದ ಮೂಲಕ ನಾಟ್ಯಶಾಸ್ತ್ರದ ಅಂಶಗಳನ್ನು ಅಳವಡಿಸಿಕೊಳ್ಳಲಾಯಿತು. ಭರತನು ಸಾರ್ವಕಾಲಿಕ ವಿಧಾನವನ್ನು ಅಳವಡಿಸಿಕೊಂಡು ಕಲೆಯು ಭಾವನೆಗಳನ್ನು ಸಾರ್ವತ್ರಿಕಗೊಳಿಸುತ್ತದೆ ಎಂದು ದೃಢಪಡಿಸುವುದರ ಜೊತೆಗೆ ಅವುಗಳನ್ನು ಪ್ರೇಕ್ಷಕರಿಗೆ ಆಕರ್ಷಿಸುವ ಸಾಧನವಾಗಿ ಮಾಡಿತು. ನಾಟ್ಯ ಶಾಸ್ತ್ರವು ವಿದ್ವಾಂಸರಿಗಿಂತ ಅಭ್ಯಾಸಿಗಳಿಗೆ ಹೆಚ್ಚು ಪ್ರಸ್ತುತವಾಗಿದೆ ಎಂದು ಹೇಳಬಹುದು. ನಾಟ್ಯಶಾಸ್ತ್ರದ ಕರ್ತೃವಾದ ಭರತಮುನಿಯು ನಾಟಕ ಪ್ರಯೋಗಗಳನ್ನು ಮತ್ತು ಸಮಯದ ಕಲ್ಪನೆಗಳನ್ನು ಶಾಸ್ತ್ರಕ್ಕೆ ಸೇರಿಸಬೇಕೆಂದು ಸ್ಪಷ್ಟವಾಗಿ ಹೇಳಿದ್ದಾರೆ.

ಭಾರತೀಯ ರಂಗಭೂಮಿಯ ಮೂಲದಲ್ಲಿ ನಾಟ್ಯಶಾಸ್ತ್ರವು ಪ್ರದರ್ಶಕ ಕಲೆಗಳನ್ನು ಋಷಿ ಭರತ ಮುನಿಯು ಕ್ರಿ.ಪೂ 200ರಲ್ಲಿಯೇ ಗುರುತಿಸಿದ್ದಾರೆ. ಪುರಾತನ ಕಾಲದಲ್ಲಿ ಜನರು ಅನಾಗರಿಕರಾಗಿ ವರ್ತಿಸುತ್ತಿದ್ದರು ಹಾಗೂ ಕಾಮ, ಕ್ರೋಧಾದಿ ಅರಿಷಡ್ವರ್ಗವನ್ನು ಹೊಂದಿದವರಾಗಿ ರಾಕ್ಷಸೀ ಪ್ರವೃತ್ತಿಯನ್ನು ಹೊಂದಿದ್ದರು. ಇದನ್ನು ನೋಡಿದ ಇಂದ್ರನು ದೇವತೆಗಳೊಂದಿಗೆ ಬ್ರಹ್ಮನ ಬಳಿ ತೆರಳಿ ಜನರು ಶಾಂತತೆಯಿಂದ ಜೀವಿಸಲು ಉಪಾಯವೊಂದನ್ನು ದಯಪಾಲಿಸಬೇಕೆಂದು ಕೇಳಿದಾಗ ವೇದಗಳ ಸಾರರೂಪವಾದ ನಾಟ್ಯವೆಂಬ ಪಂಚಮವೇದವನ್ನು ಸೃಷ್ಟಿಸಿ ಅದನ್ನು ಬೋಧಿಸಿದನು.

जग्राहपाठ्यमृग्वेदात्सामभ्योगीतमेवच।

यजुर्वेदादभिनयान् रसानाथर्वणादपि ॥[2]

ಅರ್ಥಾತ್ ಪಾಠ್ಯಭಾಗವನ್ನು ಋಗ್ವೇದದಿಂದಲೂ, ಸಂಗೀತವನ್ನು ಸಾಮವೇದದಿಂದಲೂ, ಅಭಿನಯಾದಿಗಳನ್ನು ಯಜುರ್ವೇದದಿಂದಲೂ, ಅಥರ್ವಣವೇದದಿಂದ ರಸಗಳನ್ನು ತೆಗೆದುಕೊಂಡು

[2]ನಾಟ್ಯಶಾಸ್ತ್ರ– ಭರತಮುನಿ, ಅನುವಾದಕ– ಮನಮೋಹನ ಘೋಶ್ ಏಷಿಯಾಟಿಕ್ ಸೊಸೈಟಿ ಆಫ್ ಬೆಂಗಾಲ್, ಕಲ್ಕತ್ತ 1951

ನಾಟ್ಯವೆಂಬ ವೇದವನ್ನು ರಚಿಸಿದನು. ಇದೂ ಕೂಡ ಅರ್ಥಮಾಡಿಕೊಳ್ಳಲು ಕಷ್ಟಕರವಾದಾಗ ಇಂದ್ರನು ಪುನಃ ಬ್ರಹ್ಮನಲ್ಲಿ ತನ್ನ ಸಮಸ್ಯೆಯನ್ನು ತಿಳಿಸಲು ಬ್ರಹ್ಮನು ಇದನ್ನು ಸರಿಯಾಗಿ ಬೋಧಿಸಲು ಯೋಗ್ಯನಾದವನು ಭರತಮುನಿಯೊಬ್ಬನೇ ಎಂದು ತಿಳಿದು ಆತನಿಗೆ ಹೇಳಿದಾಗ ಭೂಲೋಕದ ಜನರಿಗೆ ಅರ್ಥವಾಗುವ ಶೈಲಿಯಲ್ಲಿ ಅಭಿನಯ ಪೂರ್ವಕವಾಗಿ ಈ ಶಾಸ್ತ್ರವನ್ನು ನಿರ್ಮಿಸಿ ಸೂಕ್ತವಾದ ಕಥಾಸನ್ನಿವೇಶವೊಂದನ್ನು ಸೃಷ್ಟಿಸಿ ಪ್ರದರ್ಶಿಸಿದನು. ಈ ಪ್ರಸಂಗವು ದೇವತೆಗಳು ರಾಕ್ಷಸರನ್ನು ಸೋಲಿಸಿದ ವಿಷಯವಾದ್ದರಿಂದ ರಾಕ್ಷಸರು ಇದನ್ನು ಪುರಸ್ಕರಿಸಲಿಲ್ಲ ಜೊತೆಗೆ ರಾಕ್ಷಸರು ಇದರ ಪ್ರದರ್ಶನಕ್ಕೆ ಅಡ್ಡಿಯುಂಟುಮಾಡಲು ಉದ್ಯುಕ್ತರಾದರು. ಆಗ ಭರತಮುನಿಯು ಈ ನಾಟ್ಯಶಾಸ್ತ್ರವು ಒಳ್ಳೆಯ ಮನಸ್ಸಿನಿಂದ ಆಸ್ವಾದಿಸುವವರಿಗೆ ಒಳಿತನ್ನೂ ದುರ್ಗುಣ ಪೂರಿತರಾಗಿ ನೋಡುವವರಿಗೆ ಕೆಡುಕನ್ನು ಉಂಟುಮಾಡುವುದಾಗಿ ತಿಳಿಹೇಳಿದನು. ಇದು ದೇವತೆಗಳು, ರಾಕ್ಷಸರು, ಋಷಿಗಳು, ಮನುಷ್ಯರು ಹೀಗೆ ಎಲ್ಲಾ ವರ್ಗದವರನ್ನೂ ಪ್ರತಿನಿಧಿಸುತ್ತದೆ ಎಂಬುದಾಗಿ ವಿವರಿಸಿ ನಾಟ್ಯವೆಂಬ ಶಾಸ್ತ್ರವನ್ನು ಪ್ರದರ್ಶಿಸಿ ಅರ್ಥಮಾಡಿಸುವ ದೊಡ್ಡ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಿದನು. ಇದು ಇಂದು ಹಲವು ಪ್ರಕಾರಗಳಾಗಿ ಬೆಳೆದು ವಿವಿಧ ಮಾಧ್ಯಮವಾಗಿ ರೂಪುಗೊಂಡಿದ್ದರೂ ಇದರ ಮೂಲ ಭರತಪ್ರಣೀತ ನಾಟ್ಯಶಾಸ್ತ್ರವೆಂದರೆ ತಪ್ಪಾಗಲಾರದು.

ಇಂತಹ ತನ್ನದೇ ಆದ ಮಹತ್ವವನ್ನು ಹಾಗೂ ಸತ್ಪರಿಣಾಮವನ್ನು ಹೊಂದಿರುವಂತಹ ನಾಟ್ಯಶಾಸ್ತ್ರವನ್ನು ಯಾರು ಅಧ್ಯಯನ ಮಾಡುತ್ತಾರೆಯೋ ಅವರು ತನ್ನಿಂತಾನೇ ಸಾತ್ವಿಕ ಮನೋಭಾವವನ್ನು ಹೊಂದುವರೆಂದು ಪ್ರತಿಪಾದಿಸಲಾಗಿದೆ. ಈ ಒಂದು ಕಾರಣದಿಂದ ಸಮಾಜದಲ್ಲಿ ತಮೋಗುಣವನ್ನು ಹೊಂದಿ ಸಮಾಜ ಘಾತುಕ ಶಕ್ತಿಗಳಾಗಿ ವರ್ತಿಸುವವರಿಗೆ ವೇದಾದಿ ಶಾಸ್ತ್ರಬೋಧೆಯು ಪರಿಣಾಮವನ್ನುಂಟುಮಾಡದು. ಅದೇ ವಿಚಾರವು ರಂಗ, ನಾಟಕ, ಇತ್ಯಾದಿ ದೃಶ್ಯಮಾಧ್ಯಮಗಳ ಮೂಲಕ ಬೋಧಿಸಿದಲ್ಲಿ ಅದು ಅವನ ಮನಃಪರಿವರ್ತನೆಗೆ ಸಹಕಾರಿಯಾಗಬಲ್ಲದು ಎಂಬ ಆಶಯದೊಂದಿಗೆ ಈ ವಿಚಾರವನ್ನು ತೆಗೆದುಕೊಂಡು ಈ ಅಂಶಗಳನ್ನು ಕೆಳದಿಯ ಅರಸಾದ ಬಸವಪ್ಪನಾಯಕನೂ ಕೂಡ ತನ್ನ ಕೃತಿಯಾದ ಶಿವತತ್ತ್ವರತ್ನಾಕರದಲ್ಲಿ ವರ್ಣಿಸಿರುವುದರಿಂದ ಇದೂ ಕೂಡ ವಿಶ್ವಕೋಶವೆಂಬ ಮಾನ್ಯತೆ ಪಡೆದಿರುವುದರಿಂದ ಈ ಕೃತಿಯಲ್ಲಿನ ನಾಟ್ಯಾಂಶಗಳನ್ನು ಮಾತ್ರ ಪರಿಗಣಿಸಿ ಪ್ರಸ್ತುತ ಅಧ್ಯಯನವನ್ನು ಮಾಡಲಾಗಿದೆ.

**ಉದ್ದೇಶ ಹಾಗೂ ಪ್ರಯೋಜನ:**

ವಿಶ್ವಮಾನ್ಯತೆ ಸಂಪಾದಿಸಿದ ಶಿವತತ್ತ್ವರತ್ನಾಕರವೆಂಬ ಕೃತಿಯು ಸಾಹಿತ್ಯಿಕವಾಗಿ ಅಮೂಲ್ಯವಾದುದು. ಈ ಗ್ರಂಥದಲ್ಲಿ ಅಡಗಿರುವ ಅಪಾರಜ್ಞಾನದ ಯಾವ ಭಾಗವನ್ನು ಆಯ್ಕೆ ಮಾಡಿಕೊಂಡು ಸಂಶೋಧನೆ ನಡೆಸಬೇಕೆಂಬ ಜಿಜ್ಞಾಸೆ ನನ್ನ ಮನದಲ್ಲಿ ಮೂಡಿದಾಗ ಜನಸಾಮಾನ್ಯರಿಗೆ ಸಾಹಿತ್ಯಿಕಮೌಲ್ಯಗಳನ್ನು ಪರಿಚಯಿಸಿ ಕೊಡುವ ದೃಷ್ಟಿಯಿಂದ 'ನಾಟ್ಯಶಾಸ್ತ್ರ'ದ ಪರಿಚಯವನ್ನು ಮಾಡಿಕೊಡಲು ಸಂಕಲ್ಪ ಮೂಡಿಬಂದಿತು. **"नाट्यं भिन्नरुचेर्जनस्य बहुधाप्येकं समाराधनम्**"ಎಂಬ ಮಹಾಕವಿ ಕಾಳಿದಾಸನ ಪ್ರಶಂಸೋಕ್ತಿಯು ಚಿಂತನೆಗೆ ಪುಷ್ಟಿ ನೀಡಿತು. ಇದರ ಮೂಲಕ ಜ್ಞಾನ ಕ್ಷಿತಿಜವನ್ನು ವಿಸ್ತರಿಸಿಕೊಳ್ಳುವ ಹುಮ್ಮಸ್ಸು ಮನದಲ್ಲಿ ಮೂಡಿ, ಪ್ರಕೃತ ಸಂಶೋಧನಾವಿಷಯಕ್ಕೆ ಸಂಬಂಧಪಟ್ಟ ಮೌಲ್ಯಗಳನ್ನು ವಸ್ತುನಿಷ್ಠವಾಗಿ ಪ್ರತಿಬಿಂಬಿಸಬೇಕೆಂಬ ಹಂಬಲ ಹೆಚ್ಚಾಗುತ್ತಾ ಸಂಶೋಧನೆಗೆ ಪೂರಕವಾದ ಸಾಹಿತ್ಯ ಸಂಗತಿಗಳನ್ನು ಸಂಗ್ರಹಿಸುವ ಕಾರ್ಯ ಪ್ರಾರಂಭವಾಯಿತು.

ಮೇಲೆ ಹೇಳಿದಂತೆ ನಾಟ್ಯವು ಎಲ್ಲಾ ವರ್ಗದ, ಎಲ್ಲಾ ವಯೋಮಾನದವರನ್ನು ಸುಲಭವಾಗಿ ತಲುಪುವ ದೃಶ್ಯಮಾಧ್ಯಮ. ಈ ಕಾರಣದಿಂದಾಗಿಯೇ ಇಂದು ದೃಶ್ಯಮಾಧ್ಯಮವು ಜಗತ್ತನ್ನೇ ಆಳುತ್ತಿರುವುದು. ಇದು ನೇರವಾಗಿ ಜನರ ಮನಸ್ಸನ್ನು ತಲುಪುವ ಶಕ್ತಿಯುಳ್ಳದ್ದರಿಂದಾಗಿರುವುದರಿಂದ ಇದು ವಿವಿಧ ಆಯಾಮಗಳಲ್ಲಿ ಬೆಳೆದು ನಿಂತಿದೆ. ಅದು ದೂರದರ್ಶನವಿರಬಹುದು, ಚಲನಚಿತ್ರವಿರಬಹುದು, ಅಂತರ್ಜಾಲ ಮಾಧ್ಯಮವಿರಬಹುದು ಎಲ್ಲದ್ದಕ್ಕೂ ಮೂಲವಾದುದೇ ಈ ನಾಟ್ಯವೆಂಬ ದೃಶ್ಯಮಾಧ್ಯಮ.

ಅರವತ್ನಾಲ್ಕು ಕಲೆಗಳಲ್ಲಿಯೂ ಜನಸಾಮಾನ್ಯರಿಗೆ ಅತಿ ರಂಜನೀಯವೂ ಆಪ್ಯಾಯಮಾನವೂ ಆದ ಕೆಲವೇ ಶಾಸ್ತ್ರಗಳಲ್ಲಿ ನಾಟ್ಯಶಾಸ್ತ್ರವೇ ಅಗ್ರಗಣ್ಯ. ಇದು ದೃಶ್ಯ ಕಾವ್ಯವಾಗಿದ್ದು ಕವಿಯ ಸಚ್ಚಿಂತನೆಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ಸಹೃದಯರ ಮನಸ್ಸಿಗೆ ತಲುಪಿಸುತ್ತದೆ. ಇದರಲ್ಲಿ ಚರ್ಚಿಸಲ್ಪಟ್ಟ ನಾಟ್ಯಶಾಸ್ತ್ರೀಯ ಅಂಶಗಳನ್ನು ಹಾಗೂ ಇನ್ನಿತರೇ ನಾಟ್ಯಶಾಸ್ತ್ರೀಯ ಕೃತಿಗಳನ್ನು ವಿಮರ್ಶಾತ್ಮಕವಾಗಿ ಅಧ್ಯಯನ ಮಾಡುವುದು. ಈ ಸಂಶೋಧನೆಯ ಮೂಲೋದ್ದೇಶ, ಏಕೆಂದರೆ ನಾನು ಸ್ವತಃ ನಾಟ್ಯದ ವಿದ್ಯಾರ್ಥಿಯಾಗಿ ಮತ್ತು ಶಿಕ್ಷಕಿಯಾಗಿ ಸ್ವತಃ ಪ್ರಾಯೋಗ ಮಾಡುವಲ್ಲಿ ಇದು ಸಹಕಾರಿಯಾಗಿದೆ.

ಶಿವತತ್ತ್ವರತ್ನಾಕರದಲ್ಲಿರುವ ಬೇರೆ ಬೇರೆ ವಿಷಯಗಳ ಮೇಲೆ ಅಧ್ಯಯನ ನಡೆದಿದ್ದು, ನಾಟ್ಯಶಾಸ್ತ್ರೀಯ ಅಂಶಗಳ ಕುರಿತು ವಿಸ್ತೃತ ಅಧ್ಯಯನ ನಡೆಯದೇ ಇರುವುದರಿಂದ ಹಾಗೂ ನಾಟ್ಯ ವಿಷಯಕವಾದ ರಂಗಪ್ರಯೋಗದಲ್ಲಿ ಈ ವಿಷಯವು ಹೆಚ್ಚು ಮಹತ್ವವಾದ ಪರಿಣಾಮವನ್ನು ಬೀರುವುದರಿಂದ ಇದರಿಂದ ಬಹುವಿಧ ಉಪಯೋಗವಾಗುವುದೆಂಬ ಉದ್ದೇಶದಿಂದ ಮನಗಂಡು ನಾಟ್ಯಶಾಸ್ತ್ರೀಯ ಅಂಶಗಳನ್ನು ಮುಖ್ಯವಾಗಿರಿಸಿಕೊಂಡು ಅಧ್ಯಯನಕ್ಕೆ ಮುಂದಾಗಿದ್ದೇನೆ.

**ಅಧ್ಯಯನ ವ್ಯಾಪ್ತಿ :**

ನಾಟ್ಯಶಾಸ್ತ್ರದ ವ್ಯಾಪ್ತಿಯು ಬಹುವಿಶಾಲವಾದುದು. ಭರತನ ನಾಟ್ಯಶಾಸ್ತ್ರವನ್ನೇ ಮೊದಲ್ಗೊಂಡು ನಾಟ್ಯಶಾಸ್ತ್ರಕ್ಕೆ ಸಂಬಂಧಿಸಿದ ಅನೇಕ ಕೃತಿಗಳು ಸಂಸ್ಕೃತ ಸಾಹಿತ್ಯದಲ್ಲಿ ಹೇರಳವಾಗಿವೆ. ಪ್ರತಿಯೊಂದು ಕಾಲಘಟ್ಟದಲ್ಲಿಯೂ ನಾಟ್ಯಶಾಸ್ತ್ರದ ಲಕ್ಷಣಗ್ರಂಥಗಳು ತಮ್ಮದೇ ಆದ ವಿಶೇಷತೆಗಳೊಂದಿಗೆ ನಾಟ್ಯಾಭ್ಯಾಸಿಗಳಿಗೆ ಮೂಲಕೃತಿಗಳಾಗಿ ಮಾರ್ಗದರ್ಶನ ಮಾಡುತ್ತಿವೆ. ಇಂದು ಈ ನಾಟ್ಯವು ಹಲವು ವಿಧಗಳಾಗಿ ಮಾರ್ಪಡುತ್ತಾ ಪ್ರಸ್ತುತ ಕಾಲದಲ್ಲಿ ಹಲವು ರೀತಿಯ ತಂತ್ರಜ್ಞಾನಗಳನ್ನು ಬಳಸುವ ಮೂಲಕ ತನ್ನದೇ ಆದ ಪ್ರಾಮುಖ್ಯತೆಯನ್ನು ಪಡೆದಿದೆ. ಆದರೆ ಈ ನಾಟ್ಯಶಾಸ್ತ್ರೀಯ ಅಂಶಗಳನ್ನು ಪ್ರಸಂಗವಶಾತ್ ಕೆಲವು ಕೃತಿಗಳಲ್ಲಿ ಉಲ್ಲೇಖಿಸಿರುವ ಅಂಶಗಳನ್ನು ಬಳಸಿಕೊಂಡು ಮುಖ್ಯವಾಗಿ ಕೆಳದಿಯ ದೊರೆ ಬಸವಪ್ಪನಾಯಕ ವಿರಚಿತ "ಶಿವತತ್ತ್ವರತ್ನಾಕರದಲ್ಲಿ ವಿಶ್ಲೇಷಿಸಿರುವ ನಾಟ್ಯಾಂಶಗಳನ್ನೇ ಕೇಂದ್ರೀಕರಿಸಿ ಆ ಅಂಶಗಳ ಅಧ್ಯಯನವನ್ನೇ ವಿಶ್ಲೇಷಣಾತ್ಮಕವಾಗಿ ಮಾಡುವ ಪ್ರಯತ್ನವನ್ನು ಮಾಡಲಾಗಿದೆ. ಪ್ರಸ್ತುತ ಕೃತಿಯಲ್ಲಿ ಬಳಸಿರುವ ನಾಟ್ಯಶಾಸ್ತ್ರೀಯ ಅಂಶಗಳಾದರೋ ಹಿಂದಿನ ಭರತ, ಅಭಿನವಗುಪ್ತ, ವಿಶ್ವನಾಥಾದಿಗಳ ಕೃತಿಗಳ ಅಂಶಗಳೇ ಆಗಿವೆ ಎಂಬುದು ಅಧ್ಯಯನ ಮಾತ್ರದಿಂದ ತಿಳಿದು ಬರುವುದು.

ಆ ಕಾರಣದಿಂದಾಗಿ ಬಸವಭೂಪಾಲನ ಶಿವತತ್ತ್ವರತ್ನಾಕರ, ಭರತನ ನಾಟ್ಯಶಾಸ್ತ್ರ, ನಂದಿಕೇಶ್ವರನ ಅಭಿನಯ ದರ್ಪಣ, ವಿಶ್ವನಾಥನ ಸಾಹಿತ್ಯದರ್ಪಣ, ಧನಂಜಯನ ದಶರೂಪಕ ಇತ್ಯಾದಿ ಕೃತಿಗಳನ್ನು ಪ್ರಾಥಮಿಕ ಆಕರವಾಗಿಟ್ಟುಕೊಂಡು ಉಳಿದಂತಹ ಜಯದೇವನ ಪ್ರತಾಪರುದ್ರೀಯ, ಮಮ್ಮಟನ ಕಾವ್ಯಪ್ರಕಾಶ, ತೀನಂಶ್ರೀಯವರ ಭಾರತೀಯ ಕಾವ್ಯಮೀಮಾಂಸೆ, ಸಂಗೀತ ರತ್ನಾಕರ ಇವುಗಳನ್ನು ಪೂರಕ ಆಕರಗಳನ್ನಾಗಿ ಬಳಸಿಕೊಳ್ಳಲಾಗಿದೆ. ಒಟ್ಟಾರೆಯಾಗಿ ಶಿವತತ್ತ್ವರತ್ನಾಕರದಲ್ಲಿನ ನಾಟ್ಯಶಾಸ್ತ್ರೀಯ ಅಂಶಗಳನ್ನಷ್ಟೇ ಕೇಂದ್ರೀಕರಿಸಿ ಅಥವಾ ಇದರ ವ್ಯಾಪ್ತಿಗೊಳಪಟ್ಟು ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲಾಗಿದೆ.

**ಅಧ್ಯಯನದ ಸ್ವರೂಪ :**

ಪ್ರಸ್ತುತ ಅಧ್ಯಯನವು ಇದರಲ್ಲಿನ ವಿಷಯಕ್ಕನುಗುಣವಾಗಿ ಐದು ಅಧ್ಯಾಯಗಳಲ್ಲಿ ವಿಭಾಗಿಸಲ್ಪಟ್ಟಿದೆ ಹಾಗೂ ಒಟ್ಟಾರೆಯಾಗಿ ಪ್ರಮಾಣಪತ್ರಗಳು, ಪರಿವಿಡಿ, ಕೃತಜ್ಞತೆ ಈ ಭಾಗಗಳನ್ನು ಹೊರತುಪಡಿಸಿ 244 ಪುಟಗಳನ್ನು ಹೊಂದಿದೆ. ಇದರಲ್ಲಿನ ಅಧ್ಯಾಯಗಳನ್ನು ಇವುಗಳ ವಿಷಯಕ್ಕನುಗುಣವಾಗಿ ಈ ಮುಂದಿನಂತೆ ಸಂಕ್ಷಿಪ್ತವಾಗಿ ಪರಿಚಯಿಸಲಾಗಿದೆ.

ಮೊದಲನೆಯ ಅಧ್ಯಾಯವು "ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ" ಎಂಬ ಶೀರ್ಷಿಕೆಯನ್ನು ಒಳಗೊಂಡಿದ್ದು, ಈ ಅಧ್ಯಾಯದ ಪ್ರಾರಂಭದಲ್ಲಿ ಅಧ್ಯಯನದ ಪರಿಚಯಾತ್ಮಕವಾದ ಪೂರ್ವಪೀಠಿಕೆ ಎಂಬ ವಿಷಯವಿದ್ದು, ಇದರಲ್ಲಿ ಶಿವತತ್ತ್ವರತ್ನಾಕರದ ಸಂಕ್ಷಿಪ್ತ ಪರಿಚಯ ಹಾಗೂ ನಾಟ್ಯಶಾಸ್ತ್ರದ ಪರಿಚಯಾತ್ಮಕ ಮಾಹಿತಿಯನ್ನು ನೀಡಿ ಇದರ ಅಧ್ಯಯನದ ಕುರಿತಾದ ವಿಷಯವನ್ನು ಹಂಚಿಕೊಳ್ಳಲಾಗಿದೆ. ನಂತರದಲ್ಲಿ ಪ್ರಸ್ತುತ ಅಧ್ಯಯನದ ಉದ್ದೇಶವನ್ನು ಹಾಗೂ ಅದರ ಅಗತ್ಯತೆಯನ್ನು ಸ್ಪಷ್ಟಪಡಿಸಲಾಗಿದೆ. ನಂತರ ಅಧ್ಯಯನದ ಪರಿಮಿತಿಯನ್ನು ಹೇಳಲು 'ವ್ಯಾಪ್ತಿ' ಎಂಬ ಉಪವಿಷಯದಲ್ಲಿ ಈ ಕಾರ್ಯಕ್ಕೆ ಬಳಸಿರುವ ಪ್ರಾಥಮಿಕ ಹಾಗೂ ಪೂರಕ ಕೃತಿಗಳ ಮಾಹಿತಿಯನ್ನು ಉಲ್ಲೇಖಿಸಲಾಗಿದೆ. ಆ ನಂತರ ಅಧ್ಯಯನದ ಸ್ವರೂಪ ಎಂಬ ಪ್ರಸ್ತುತ ವಿಷಯವನ್ನು ಕ್ರಮಶಃ ಅಧ್ಯಾಯಗಳಲ್ಲಿರುವಂತೆ ಇಲ್ಲಿ ವಿವೇಚಿಸಲಾಗಿದೆ.

ಎರಡನೇ ಅಧ್ಯಾಯವು 'ಕವಿ ಮತ್ತು ಕೃತಿ ಪರಿಚಯ'ಯೆಂಬ ಶೀರ್ಷಿಕೆಯನ್ನು ಒಳಗೊಂಡಿದ್ದು, ಶಿವತತ್ತ್ವರತ್ನಾಕರ ಕೃತಿಯ ಹಾಗು ಇದರ ಕರ್ತೃವಾದ ಬಸವಭೂಪಾಲನ ವಿಸ್ತೃತ ಮಾಹಿತಿಯನ್ನು ಈ ಅಧ್ಯಾಯದಲ್ಲಿ ನೀಡಲಾಗಿದೆ. ಈ ಕೃತಿಯ ಕರ್ತೃವು ಕೆಳದಿಯ ಹನ್ನೆರಡನೆಯ ಅರಸು ಸೋಮಶೇಖರನಾಯಕನ ಪುತ್ರನಲ್ಲದಿದ್ದರೂ ಪತ್ನಿಯಾದ ಚನ್ನಮ್ಮಳು ಈತನನ್ನು ಕೆಳದಿ ಸಿಂಹಾಸನದ ವಾರಸುದಾರನನ್ನಾಗಿಸಲು ಮಾಡಿದ ವಂಶಾವಳಿ ಪ್ರಯತ್ನ & ಬುದ್ಧಿವಂತಿಕೆ ಪ್ರಶ್ನಾತೀತವಾಗಿ ಪ್ರಶಂಸನೀಯವಾಗಿದೆ. ಬಸವಪ್ಪನಾಯಕನು ಶ್ರೀಹರ್ಷನಂತೆ ಸ್ವತ: ಕವಿಯಾಗಿದ್ದನು. ಈತನು ಪ್ರಸ್ತುತ ಕೃತಿಯಲ್ಲದೇ ಇನ್ನೂ ಕೆಲವು ವಿದ್ವತ್ಪೂರ್ಣವಾದ ಗ್ರಂಥಗಳನ್ನು ರಚಿಸಿದ್ದನೆಂದು ಅಧ್ಯಯನದಿಂದ ತಿಳಿದುಬರುವುದು ಅವನ್ನೆಲ್ಲವನ್ನು ಪ್ರಸ್ತುತ ಅಧ್ಯಾಯದಲ್ಲಿ ಸ್ಪಷ್ಟೀಕರಿಸಲಾಗಿದೆ.

ಮುಂದಿನದಾದ 'ನಾಟ್ಯಶಾಸ್ತ್ರದ ಗರಿಮೆ, ಉಗಮ, ಪರಿಚಯ, ಬೆಳವಣಿಗೆ' ಎಂಬ ಮೂರನೇ ಅಧ್ಯಾಯದಲ್ಲಿ ನಾಟ್ಯಶಾಸ್ತ್ರವು ಬೆಳೆದು ಬಂದ ಬಗೆಯನ್ನು ವಿಸ್ತೃತವಾಗಿ ಅಧ್ಯಯನಮಾಡಲಾಗಿದೆ.

ಯಾವುದೇ ಒಂದು ಕಲೆಯು ವಿಕಾಸವಾಗಬೇಕಾದಲ್ಲಿ ಹಲವಾರು ಕಾಲಘಟ್ಟದಲ್ಲಿ ಹಲವಾರು ರೂಪಾಂತಗಳನ್ನು ಪಡೆದಿರುತ್ತದೆ. ಅವುಗಳನ್ನು ಕುರಿತು ಅಧ್ಯಯನವನ್ನು ಪ್ರಸ್ತುತ ಅಧ್ಯಾಯದಲ್ಲಿ ಮಾಡಲಾಗಿದೆ. ನಾಟ್ಯಾಂಶಗಳ ಸಮಸ್ತ ಸಂಗತಿಗಳನ್ನು ಪ್ರತಿಪಾದಿಸಿರುವ ಶಾಸ್ತ್ರವೇ 'ನಾಟ್ಯಶಾಸ್ತ್ರ'. ಇದನ್ನು ಪಂಚಮವೇದವೆಂದೇ ಪರಿಗಣಿಸಲಾಗಿದೆ. ಕ್ರಿ.ಪೂ ದ್ವಿತೀಯ ಶತಕದವನೆಂದು ಗುರುತಿಸಲಾಗಿರುವ ಭರತಮುನಿಯು ದೇವತೆಗಳಿಗೆ ಮನರಂಜನೆ ಒದಗಿಸುವುದಕ್ಕಾಗಿ ಬ್ರಹ್ಮದೇವನ ಆಣತಿಯಂತೆ ಈ ನಾಟ್ಯಶಾಸ್ತ್ರವನ್ನು ರಚಿಸಿರುವನೆಂಬ ಪ್ರತೀತಿ ಇದೆ. ಈ ಶಾಸ್ತ್ರದ ಉಗಮದ ವಿಚಾರವಾಗಿ ಹಲವಾರು ಮತಭೇದಗಳಿವೆ ಅವುಗಳನ್ನೆಲ್ಲಾ ಪ್ರಸ್ತುತ ಅಧ್ಯಾಯದಲ್ಲಿ ಚರ್ಚಿಸುವ ಪ್ರಯತ್ನವನ್ನು ಮಾಡಲಾಗಿದೆ. ಇದು ಕಾಲದಿಂದ ಕಾಲಕ್ಕೆ ತನ್ನ ಸ್ವರೂಪದಲ್ಲಿ ಬದಲಾವಣೆಗೊಳ್ಳುತ್ತಾ ಬಂದಿದ್ದರೂ ಇದರ ಉದ್ದೇಶ ಮಾತ್ರ ಒಂದೇ ಆಗಿದೆ ಅದು ಮನೋರಂಜನೆಯ ಮೂಲಕ ಸಮಾಜವನ್ನು ಸತ್ಪಥದೆಡೆಗೆ ಒಯ್ಯುವುದಾಗಿದೆ. ಈ ಅಂಶಗಳನ್ನೆಲ್ಲಾ ಇಲ್ಲಿ ವಿಶದೀಕರಿಸಲಾಗಿದೆ.

ನಾಲ್ಕನೇ ಅಧ್ಯಾಯವು 'ಶಿವತತ್ತ್ವರತ್ನಾಕರದಲ್ಲಿನ ನಾಟ್ಯ ಶಾಸ್ತ್ರೀಯ ಅಂಶಗಳು ಮತ್ತು ವಿಶ್ಲೇಷಣೆ' ಎಂಬ ಶಿರೋನಾಮೆಯನ್ನು ಹೊಂದಿರುವುದಾಗಿದೆ. ಈ ಅಧ್ಯಾಯವು ಪ್ರಸ್ತುತ ಅಧ್ಯಯನದ ಪ್ರಮುಖ ಹಾಗೂ ಉದ್ದೇಶಿತ ಅಧ್ಯಾಯವಾಗಿದ್ದು, ಶಿವತತ್ತ್ವರತ್ನಾಕರದಲ್ಲಿರುವ ನಾಟ್ಯಶಾಸ್ತ್ರೀಯ ಅಂಶಗಳನ್ನು ಅಧ್ಯಯನ ಮಾಡಿ ಅವುಗಳೊಂದಿಗೆ ಇತರೇ ಶಾಸ್ತ್ರೀಯ ಕೃತಿಗಳನ್ನು ಆಧಾರವಾಟ್ಟುಕೊಂಡು ಸಮಗ್ರವಾದ ವಿಶ್ಲೇಷಣೆಯನ್ನು ಮಾಡಲಾಗಿದೆ. ಇದು ಈ ಅಧ್ಯಯನದ ಮಹತ್ವದ ಅಧ್ಯಾಯವಾಗಿದ್ದು, ಇದರಲ್ಲಿ ಶಿವತತ್ತ್ವರತ್ನಾಕರವು ನಾಟ್ಯಶಾಸ್ತ್ರಕ್ಕೆ ನೀಡಿರುವ ಪ್ರಾಮುಖ್ಯತೆಯನ್ನು ಪರಾಮರ್ಶಿಸಲಾಗಿದೆ. ಕವಿ ಬಸವಭೂಪಾಲನು ಸಮರ್ಥ ಆಡಳಿತಗಾರನೆಂದು ಜನಮನ್ನಣೆಯನ್ನು ಪಡೆದಿದ್ದಷ್ಟೇ ಅಲ್ಲದೇ ಸುಜ್ಞಾನಸಂಪನ್ನನೂ, ಸಕಲಶಾಸ್ತ್ರಪರಿವೇತ್ತಾರನೂ, ಮಹಾಮೇಧಾವಿಯೂ ಆಗಿದ್ದಾನೆ. ಅವನ ಕೃತಿಯಾದ ಶಿವತತ್ತ್ವರತ್ನಾಕರವು ವಿಶ್ವಕೋಶವೆಂಬ ಹೆಗ್ಗಳಿಕೆಗೆ ಪಾತ್ರವಾಗಿರುವುದರ ಹಿನ್ನೆಲೆಯಲ್ಲಿ ಅಗ್ರಮಾನ್ಯ ವಿದ್ವಾಂಸರ ಹಾಗೂ ವಿಮರ್ಶಕರ ಪರಿಶ್ರಮ, ಅವಲೋಕನ, ತಳಸ್ಪರ್ಶಿ ಅಧ್ಯಯನದ ನೇಪಥ್ಯವಿರುವುದು ಸುಸ್ಪಷ್ಟವಾಗಿದೆ. ಆಡುಮುಟ್ಟದ ಸೊಪ್ಪಿಲ್ಲವೆಂಬಂತೆ ಗ್ರಂಥಕಾರ ಬಸವಭೂಪಾಲನು ಸಾಹಿತ್ಯಲೋಕದಲ್ಲಿ ಅವಲೋಕಿಸದ ಯಾವ ಅಂಶವೂ ಉಳಿದಿಲ್ಲ. ಪ್ರಕೃತ 'ನಾಟ್ಯಶಾಸ್ತ್ರ'ವಿಭಾಗದಲ್ಲಿ ಗ್ರಂಥಕಾರನು ತಳಸ್ಪರ್ಶಿ ಅಧ್ಯಯನ ನಡೆಸಿರುವುದು ವಿದ್ವಜ್ಜನರಿಗೆ ಸ್ಪಷ್ಟವಾಗಿ ಗೋಚರಿಸುತ್ತಿದೆ. ನಾಟ್ಯಶಾಸ್ತ್ರವೆಂಬ ಸಂಸ್ಕೃತ ಗ್ರಂಥದ ಆರಂಭದಿಂದ ಅಂತ್ಯದವರೆಗೂ ಅವಲೋಕನ ಹಾಗೂ ಅವಗಾಹನ ಮಾಡಿರುವುದಲ್ಲದೆ ಅದರ ಹಿನ್ನೆಲೆ–

ಮುನ್ನೆಲೆಗಳ ಸಾಹಿತ್ಯವನ್ನೂ ಕರಗತಮಾಡಿಕೊಂಡಿರುವುದು ಪ್ರಕೃತ ಗ್ರಂಥಭಾಗದಲ್ಲಿ ನಿಚ್ಚಳವಾಗಿ ಗೋಚರಿಸುತ್ತಿದೆ. ಸಂಸ್ಕೃತ ಸಾಹಿತ್ಯದ ಅಲಂಕಾರಶಾಸ್ತ್ರಕಾರರ ಸಮಗ್ರ ಕೃತಿಗಳನ್ನೂ ಆಮೂಲಾಗ್ರವಾಗಿ ಪರಾಮರ್ಶಿಸಿ ತನ್ನ ನಿಲುವನ್ನು ಈ ಗ್ರಂಥದಲ್ಲಿ ಪ್ರತಿಪಾದಿಸಿರುವುದು ಗಮನಾರ್ಹ ಸಂಗತಿಯಾಗಿದೆ. ದಂಡಿ–ಭಾಮಹ, ವಾಮನ, ವಿಶ್ವನಾಥ, ವಿದ್ಯಾನಾಥ, ಪ್ರತಾಪರುದ್ರ, ರಾಜಶೇಖರಾದಿಗಳ ಗ್ರಂಥಗಳ ಛಾಯೆ ಹಾಗೂ ವಿಮರ್ಶೆಗಳು ಈತನ ಕೃತಿಯಲ್ಲಿ ರಾರಾಜಿಸುತ್ತಿರುವುದನ್ನು ಸಹೃದಯರು ಗಮನಿಸಬಹುದಾಗಿದೆ. ಇದೆಲ್ಲವನ್ನೂ ಈ ಅಧ್ಯಾಯದಲ್ಲಿ ವಿಸ್ತೃತವಾಗಿ ಅಧ್ಯಯನ ಮಾಡಲಾಗಿದೆ.

ಕೊನೆಯ ಹಾಗೂ ಐದನೆಯದಾದ 'ನಾಟ್ಯಶಾಸ್ತ್ರದ ಇತರ ಕೃತಿಗಳು ಹಾಗೂ ಅವುಗಳ ಮಹತ್ವ' ಎಂಬ ಅಧ್ಯಾಯದಲ್ಲಿ ಶೀರ್ಷಿಕೆಯನ್ನು ಹೊಂದಿದ್ದು ನಾಟ್ಯಶಾಸ್ತ್ರ ಹಾಗೂ ಇದಕ್ಕೆ ಸಂಬಂಧಿಸಿದ ಇತರೆ ನಾಟ್ಯಸಂಬಂಧ ಕೃತಿಗಳನ್ನು ಅವುಗಳ ಉದ್ದೇಶಾದಿಗಳನ್ನು ಸ್ಥೂಲವಾಗಿ ಪರಿಚಯಿಸಲಾಗಿದೆ. ನಾಟ್ಯಶಾಸ್ತ್ರ ಕೃತಿಯನ್ನು ಆಧಾರವಾಗಿಟ್ಟುಕೊಂಡು ನೋಡಿದರೆ ಇದರ ರಚನೆಗೂ ಹಿಂದೆ ನೃತ್ಯ ಕಲೆಯು ಬಳಕೆಯಲ್ಲಿತೆಂದು ತಿಳಿಯಬಹುದಾಗಿದೆ. ಭರತಾಚಾರ್ಯರು ಮೊದಲು ನೃತ್ಯ ಗ್ರಂಥ ರಚಿಸಿದವರು. ಇವರ ಸಮಕಾಲೀನರಾದ ಅನೇಕ ಆಚಾರ್ಯರು ಅಭಿನಯ ಕಲೆಯಲ್ಲಿ ಅದ್ವಿತೀಯ ಪ್ರತಿಭೆಯನ್ನು ಹೊಂದಿದ್ದರು. ಅವರಲ್ಲಿ ಕೋಹಲ, ಲೊಲ್ಲಟ, ನಂದಿ, ಬಾದರಾಯಣ, ಕಾತ್ಯಾಯನ, ತುಂಬುರ, ಕಶ್ಯಪ ನಂದಿಕೇಶ್ವರ, ಅಭಿನವಗುಪ್ತ, ಆನಂದವರ್ಧನ, ಸಾರಂಗದೇವ, ಶಾರದಾತನಯ, ಧನಂಜಯ, ಮುಂತಾದ ನಾಟ್ಯಶಾಸ್ತ್ರಜ್ಞರ ಕೊಡುಗೆಯ ಫಲವಾಗಿ ನಾಟ್ಯಕಲೆಯು ಬಹು ಪ್ರಕಾರವಾಗಿ ಬೆಳೆದಿದೆ.

ರಾಜಾಡಳಿತದ ಕಾಲದಲ್ಲಿ ಇದಕ್ಕೆ ಪ್ರೋತ್ಸಾಹಸಿಕ್ಕಿದುದರ ಫಲವಾಗಿ ಇದು ದೇಶ–ವಿದೇಶದಲ್ಲಿ ತನ್ನದೇ ಆದ ಪ್ರಾಧಾನ್ಯತೆಯನ್ನು ಕಲಾ ಪ್ರಕಾರದಲ್ಲಿ ಪಡೆದುಕೊಂಡಿತು. ಕರ್ನಾಟಕದ ಬೇಲೂರು, ಹಳೇಬೀಡು, ಸೋಮನಾಥಪುರ, ಪಟ್ಟದಕಲ್ಲು, ಬಾದಾಮಿ, ಅರಳಗುಪ್ಪೆ, ಹಾಸನ, ಹಂಪೆ ಇತ್ಯಾದಿ ಸ್ಥಳಗಳಲ್ಲಿ ಕಂಡುಬರುವ ನಾಟ್ಯಕಲಾ ಶಿಲ್ಪಗಳನ್ನು ನೋಡಿದರೆ ಹಿಂದಿನ ರಾಜಾಡಳಿತವು ಇವುಗಳಿಗೆ ನೀಡಿದ ಪ್ರಾಧಾನ್ಯತೆಯು ಅರಿವಾಗುವುದು. ಅವುಗಳನ್ನೆಲ್ಲಾ ಪ್ರಮುಖ ವಿದ್ವಾಂಸರನ್ನು ಕುರಿತು ಅವರ ಶಾಸ್ತ್ರಕೃತಿಗಳನ್ನು ಪರಿಚಯಾತ್ಮಕವಾಗಿ ಈ ಅಧ್ಯಾಯದಲ್ಲಿ ಅಧ್ಯಯನ ಮಾಡಲಾಗಿದೆ.

ಇದರ ತರುವಾಯ 'ಉಪಸಂಹಾರ' ಎಂಬ ಶಿರೋನಾಮೆಯಡಿಯಲ್ಲಿ ಇಡೀ ಅಧ್ಯಯನದ ಸಾರವನ್ನು ಸಂಗ್ರಹಿಸಲಾಗಿದೆ ಹಾಗೂ ಪ್ರಸ್ತುತ ಅಧ್ಯಯನದಿಂದ ಬಂದಂತಹ 'ಫಲಿತಾಂಶ'ವನ್ನು ಸಂಗ್ರಹಾತ್ಮಕವಾಗಿ ವಿಶದೀಕರಿಸಲಾಗಿದೆ. ಜೊತೆಗೆ ಈ ವಿಷಯಕ್ಕೆ ಸಂಬಂಧಿಸಿದಂತೆ ಮುಂದುವರೆದು ಕೈಗೊಳ್ಳಬಹುದಾದ ಸಂಶೋಧನೆಗಳ ಅವಕಾಶಗಳ ಕುರಿತು ಮಾಹಿತಿಯನ್ನು ನೀಡಲಾಗಿದೆ. ಹಾಗೂ ಅಂತಿಮವಾಗಿ ಅಧ್ಯಯನಕ್ಕೆ ಉಪಯುಕ್ತವಾದಂತಹ ಪರಾಮರ್ಶಿಸಿದ ಗ್ರಂಥಗಳನ್ನು ಪಟ್ಟಿಮಾಡಿ 'ಆಕರ ಗ್ರಂಥಗಳು' ಎಂಬ ಶೀರ್ಷಿಕೆಯಡಿ ಅಕಾರಾದಿಯಾಗಿ ಸಿದ್ಧಪಡಿಸಲಾಗಿದೆ.

# ಅಧ್ಯಾಯ – 2

# ಕವಿ ಮತ್ತು ಕೃತಿ ಪರಿಚಯ

**ಕೃತಿಕಾರನ ಪರಿಚಯ :**

ಶಿವತತ್ತ್ವರತ್ನಾಕರ ಗ್ರಂಥದ ಕರ್ತೃ ಕೆಳದಿಯ ಭೂಪಾಲನಾದ ಬಸಪ್ಪನಾಯಕ. ಕೆಳದಿಯ ಹನ್ನೆರಡನೆಯ ಅರಸು ಸೋಮಶೇಖರನಾಯಕನ ನಂತರ ರಾಜ್ಯಭಾರವನ್ನು ವಹಿಸಿಕೊಂಡು ಕೆಳದಿ ಸಾಮ್ರಾಜ್ಯವನ್ನು ಆಕ್ರಮಣಕಾರರಿಂದ ರಕ್ಷಿಸಿದ ಚನ್ನಮ್ಮಾಜಿ ಸೋಮಶೇಖರನಾಯಕರಿಗೆ ಪುತ್ರಸಂತಾನವಿಲ್ಲದ್ದಕ್ಕಾಗಿ ಮುಂದಿನ ವಾರಸುದಾರನನ್ನು ಹುಡುಕುವ ಸಂದಿಗ್ಧ ಪರಿಸ್ಥಿತಿಯಲ್ಲಿ ತನ್ನ ಮಂತ್ರಿಗಳು, ಬಂಧುವರ್ಗದವರೊಡನೆ ಚರ್ಚಿಸಲು ಮುಂದಾದಳು. ಆಗ ಆಕೆಯ ಕಣ್ಣು ತನ್ನ ಪತಿ ಸೋಮಶೇಖರನಾಯಕನ ಸಹೋದರನಾದ ಭದ್ರಪ್ಪನಾಯಕ (ಪತ್ನಿಯಾದ ಸಿದ್ಧಮ್ಮಾಜಿಯ ಸಹೋದರಿ)ನ ನಾದಿನಿ (ಗೌರಮ್ಮ ಮತ್ತು ಮರಿಯಪ್ಪಶೆಟ್ಟರ)ಯ ಪುತ್ರನಾದ ಬಸವಪ್ಪನನ್ನು ಕೆಳದಿ ಸಂಸ್ಥಾನಕ್ಕೆ ಉತ್ತರಾಧಿಕಾರಿಯಾಗಲು ಸೂಕ್ತನೆಂದು ತೀರ್ಮಾನಿಸಿದಳು. ಚನ್ನಮ್ಮಾಜಿಯ ಪತಿಯಾದ ಸೋಮಶೇಖರನಾಯಕನ ಸಹೋದರನಿಗೆ ಬಸವರಾಜನು ಸಂಬಂಧದಲ್ಲಿ ಪುತ್ರನಾಗುವುದರಿಂದ ಈತನನ್ನು ದತ್ತುಪಡೆಯಲಾಯಿತು. ಹೀಗೆ ಆಪ್ತೇಷ್ಟರು ಹಾಗೂ ರಾಜಪರಿವಾರದವರೆಲ್ಲರ ಅನುಮೋದನೆಯನ್ನು ಪಡೆದು ಈತನನ್ನು "ಕೆಳದಿಯ ನೃಪಾಲ ಬಸವಪ್ಪನಾಯಕ"ನೆಂದು ನಾಮಕರಣ ಮಾಡಿ. ಶಾಲಿವಾಹನ ಶಕ 1595 ಪರೀಧಾವಿ ಸಂವತ್ಸರದ ಶ್ರಾವಣ ಶುದ್ಧ ಚತುರ್ದಶಿಯಲ್ಲಿ ದತ್ತಕವಾಗಿ ಸ್ವೀಕರಿಸಲಾಯಿತು.[3]

ಆನಂತರ ಚನ್ನಮ್ಮಾಜಿಯು ಬಸವರಾಜನನ್ನು ಸಮಸ್ತ ವಿದ್ಯೆಗಳಲ್ಲಿ ಪಾರಂಗತನನ್ನಾಗಿಸಿದಳು. ಮುಂದೆ ಧರ್ಮದಿಂದ ರಾಜ್ಯಪಾಲನೆ ಮಾಡಲು. ಶಾ.ಶ ವರ್ಷ 1620 ನೆಯ ಈಶ್ವರನಾಮ ಸಂವತ್ಸರ ಶ್ರಾವಣ ಶುದ್ಧ ಚತುರ್ದಶಿಯಂದು ವೇಣುಪುರದ ಅರಮನೆಯಲ್ಲಿ ಬಸವರಾಜನಿಗೆ ಪಟ್ಟಾಭಿಷೇಕವಾಯಿತು. ಇದೇ ಸಂವತ್ಸರದ ಮಾಘಮಾಸದಲ್ಲಿ ಕುಟರಹಳ್ಳಿ ಬಸವಪ್ಪ ಮತ್ತು ಪುಟ್ಟವ್ವ ಸಂಜಾತ ಚನ್ನಮ್ಮಾಜಿ ಹಾಗೂ ಹೆಬ್ಬೆಕೋಟೆ ಶಿವಯ್ಯನ ಪುತ್ರಿಯಾದ ವೀರಮ್ಮಾಜಿಯರನ್ನು ವಿವಾಹ ಮಾಡಿಸಿದಳು. ಇದಕ್ಕೆ ಮುಂಚೆ ಚನ್ನಮ್ಮಾಜಿಯು ಕಾಳಯುಕ್ತಿ ಸಂವತ್ಸರ ಮಾರ್ಗಶಿರ ಮಾಸದಲ್ಲಿ ಬಸವನಾಯಕನಿಗೆ ಹೆಬ್ಬೆ ಮಹಂತಪ್ಪನ ಪುತ್ರಿ ಚನ್ನಮ್ಮಾಜಿ ಹಾಗೂ ಮಳಿಗೆ ಚನ್ನವೀರಪ್ಪನ ಪುತ್ರಿ

[3] ಶಿವತತ್ತ್ವರತ್ನಾಕರ – (ಸಂ) ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ್, ಐದು ಸಂಪುಟಗಳು, ದರೇಸಾ ಪ್ರಕಾಶನ, ಬೆಂಗಳೂರು –2013.

ಬಸಮ್ಮಾಜಿಯೊಂದಿಗೆ ವಿವಾಹವಾಯಿತು. ಹಾಗಾಗಿ ಈತನಿಗೆ ಒಟ್ಟು ನಾಲ್ವರು ಪತ್ನಿಯರಿದ್ದರೆಂದು ತಿಳಿದು ಬಂದಿದೆ.

ಮಳಿಗೆ ಚನ್ನವೀರಪ್ಪನ ಪುತ್ರಿ ಚನ್ನಬಸವಮ್ಮಾಜಿಯವರ ಗರ್ಭದಲ್ಲಿ ಪ್ರಜೋತ್ಪತ್ತಿ ಸಂವತ್ಸರದ ಕಾರ್ತೀಕ ಶುದ್ಧ ದಶಮಿಯಂದು ಸೋಮಶೇಖರನಾಯಕನೂ ಮತ್ತು ಕುಟರಹಳ್ಳಿ ಬಸವಪ್ಪ ಮತ್ತು ಪುಟ್ಟವ್ವನ ಪುತ್ರಿಯಾದ ಚನ್ನಮ್ಮಾಜಿಯ ಗರ್ಭದಲ್ಲಿ ವಿಕ್ರಮ ಸಂವತ್ಸರದ ವೈಶಾಖ ಶುದ್ಧ ಪಾಡ್ಯದಂದು ವೀರಭದ್ರನಾಯಕನೂ ಜನಿಸಿದರು. ಬಸವಪ್ಪನಾಯಕನ ಜೇಷ್ಠಪುತ್ರನಾದ ಸೋಮಶೇಖರನಾಯಕನಿಗೆ ಚಿನಲೂರು ವೀರಪ್ಪನ ಪುತ್ರಿ ವೀರಮ್ಮಾಜಿ ಮತ್ತು ಸೂರಿರಾಯನ ಕಲ್ಲಪ್ಪನ ಪುತ್ರಿ ಬಸಮ್ಮಾಜಿ ಎಂಬ ಕನ್ಯೆಯರೊಂದಿಗೆ ಚಿತ್ರಭಾನು ಸಂವತ್ಸರದ ವೈಶಾಖ ಶುದ್ಧ 3ರಲ್ಲಿ ವಿವಾಹವಾಯಿತು. ಮುಂದೆ ಸೋಮಶೇಖರ ನಾಯಕನು ಪಟ್ಟಕ್ಕೆ ಬಂದಾಗ ನಿರ್ವಾಣಯ್ಯ ಹಾಗೂ ಭದ್ರಮ್ಮನವರ ಪುತ್ರಿಯಾದ ನೀಲಮ್ಮಾಜಿಯನ್ನು ಮತ್ತೊಮ್ಮೆ ಮದುವೆಯಾದನು. ಆದರೆ ದುರಾದೃಷ್ಟವಶಾತ್ ಈ ಮೂವರಿಗೂ ಪುತ್ರ ಸಂತಾನವಿರಲಿಲ್ಲ. ಹೀಗೆ ಈತನಿಗೆ ಮೂವರು ಪತ್ನಿಯರಿದ್ದರು.

ಮುಂದೆ ಬಸವಪ್ಪನಾಯಕನು ತನ್ನ ದ್ವಿತೀಯ ಪುತ್ರನಾದ ವೀರಭದ್ರನಾಯಕನಿಗೆ ಸಾಗರ ಸೀಮೆಯ ವಾರದಚನ್ನಬಸವಪ್ಪನ ಪುತ್ರಿಯಾದ ಚನ್ನಮ್ಮಾಜಿ ಮತ್ತು ಸೂರಿರಾಯನ ಕಲ್ಲಪ್ಪನ ಸಹೋದರಿಯ ಮಗಳಾದ ಮಲ್ಲಮ್ಮಾಜಿಯರೊಂದಿಗೆ ಸರ್ವಧಾರಿ ಸಂವತ್ಸರದ ಮಾರ್ಗಶಿರ ಬಹುಳ ಪಂಚಮಿಯಂದು ಮದುವೆ ಮಾಡಿಸಿದನು. ಇವರಿಗೆ ಪ್ಲವ ಸಂವತ್ಸರದ ಮಾರ್ಗಶಿರ ಶುದ್ಧ ಮೂರರಲ್ಲಿ ಬಸವಪ್ಪನಾಯಕನೆಂಬ ಗಂಡು ಮಗು ಜನಿಸಿತು.

**ಸಾಹಿತ್ಯಕೃಷಿ :**

ಬಸವಪ್ಪನಾಯಕನು ತನ್ನ ಬಾಲ್ಯದಲ್ಲಿ ಪಡೆದ ಹಲವು ವಿಧದ ಶಾಸ್ತ್ರವಿದ್ಯೆಯಿಂದ ಶ್ರೀಹರ್ಷನಂತೆ ಸ್ವತಃ ಕವಿಯಾಗಿದ್ದನು. ಈತನಿಗೆ ಸಂಸ್ಕೃತ ಭಾಷೆಯಲ್ಲಿ ಪಾಂಡಿತ್ಯವಿದ್ದುದರಿಂದ "ಶಿವತತ್ತ್ವರತ್ನಾಕರ" ಹಾಗೂ "ಸುಭಾಷಿತ ಸುರದ್ರುಮ" (ನೀತಿಗ್ರಂಥ)ವೆಂಬ ಎರಡು ಕಾವ್ಯಗಳನ್ನು ರಚಿಸಿದನು. 'ಸೂಕ್ತಿ ಸುಧಾಕರ' ಸಂಸ್ಕೃತ ಹಾಗೂ ಕನ್ನಡ ಭಾಷೆಗಳ ವಿಶೇಷ ಗ್ರಂಥವಾಯಿತು. "ಅನುಪಮಸೂಕ್ತಿಸುಧಾಕರ ಮೆನಿಪಾ ವಸ್ತುಕಸುಕಾವ್ಯಮಂ ವಿರಚಿಸಿ ಸೂರಿನಿಕರಕಲ್ಪದ್ರುಮನೆಂದೆನಿಪೀ ಬಿರುದಾಂತು ಮೆರೆದನಾ

ಬಸವನೃಪಂ"[4] ಎಂಬುದಾಗಿ ಉಲ್ಲೇಖವಿದ್ದು, "ಸೂರಿನಿಕರ ಕಲ್ಪದ್ರುಮ" (ವಿದ್ವಾಂಸರ ಕಲ್ಪವೃಕ್ಷ)ವೆಂಬ ಬಿರುದನ್ನು ಹೊಂದಿದ್ದನೆಂಬುದಾಗಿ ತಿಳಿದುಬರುತ್ತದೆ.

**ಬಸಪ್ಪನಾಯಕನ ಜೀವನ ಕಾಲ–ಕೃತಿ:**

ದಕ್ಷಿಣ ಭಾರತದ ರಾಜಮನೆತನಗಳು ಚಾರಿತ್ರಿಕ ಕಾಲದಲ್ಲಿ ತಮ್ಮ ತಮ್ಮ ಪಾತ್ರಗಳನ್ನು ನಿರ್ವಹಿಸಿ ಕಣ್ಮರೆಯಾದವು. ಅವುಗಳಲ್ಲಿ ಕೆಳದಿ ಸಂಸ್ಥಾನವೂ ಒಂದಾಗಿತ್ತು. ಕೆಳದಿ ಸುಮಾರು 260 ವರ್ಷಕ್ಕಿಂತ ಹೆಚ್ಚು ಕಾಲ ಆಳ್ವಿಕೆಯನ್ನು ಮಾಡಿದೆ. ಮೈಸೂರು ಮತ್ತು ಕೆಳದಿ ಸಂಸ್ಥಾನಗಳೆಂಬ ಎರಡು ಮದ್ದಾನೆಗಳ ಹೋರಾಟದಲ್ಲಿ ಅವುಗಳ ಕಾಲ ಬುಡಕ್ಕೆ ಸಿಕ್ಕ ಗಿಡ–ಗಂಟೆಗಳು, ಸಸ್ಯಾದಿಗಳು ನಾಶವಾಗುವಂತೆ ಕರ್ನಾಟಕದ ತುಂಬಾ ಹರಡಿದ ಚಿಕ್ಕಪುಟ್ಟ ಪಾಳೆಯ ಪಟ್ಟುಗಳು ನಾಶವಾದವು. ಉಳಿದವರನ್ನು ಮರಾಠರು ಅಧೀನಪಡಿಸಿಕೊಂಡರು. ಇಷ್ಟಲ್ಲದೇ ಆಂಗ್ಲರು ಹೇಳಹೆಸರಿಲ್ಲದಂತೆ ಮಾಡಿದರು. ಆದರೆ ಕರ್ನಾಟಕದ ಪ್ರಭುತ್ವಕ್ಕಾಗಿ ಕೆಳದಿ ಹಾಗೂ ಮೈಸೂರು ಇವೆರಡು ಶಕ್ತಿಗಳ ನಡುವೆ ನಡೆದ ಹೋರಾಟದಲ್ಲಿ ಕರ್ನಾಟಕದ ರಾಜಲಕ್ಷ್ಮಿಯು ಕೊನೆಗೆ ಮೈಸೂರಿನ ರಾಜಮನೆತನಕ್ಕೇನೆ ವಶವಾಯಿತು. ಆದರೆ ಅಷ್ಟರಲ್ಲಿ ಕೆಳದಿಯು ಚರಿತ್ರೆಯ ಪುಟಗಳಲ್ಲಿ ತನ್ನ ಕೀರ್ತಿಸ್ಥಾನವನ್ನು ಕಲ್ಪಿಸಿಕೊಂಡಿತ್ತು. ಕೆಳದಿಯು ಕರ್ನಾಟಕವನ್ನು ಆಳಿದ ರಾಜಮನೆಗಳ ಪರಂಪರೆಯಲ್ಲಿ ಕೆಳದಿ ರಾಜ್ಯವು ತನ್ನ ಕೊನೆಯ ಕಾಲದಲ್ಲಿ ದುರಂತ ಸನ್ನಿವೇಶದಲ್ಲಿ ಸಿಕ್ಕು ಹಾಗೂ ಹೈದರಾಲಿಯ ಕುತಂತ್ರಕ್ಕೆ ಬಲಿಯಾಗಿ ಚರಿತ್ರೆಯಲ್ಲಿ ಸೇರಿತ್ತು.

ಬಸವಪ್ಪನಾಯಕರು ಕ್ರಿ.ಶ.1698 ರಲ್ಲಿ ಪಟ್ಟಕ್ಕೆ ಬಂದನು. ನವಿಲೆಗಡ,ಹೊಳೆಹನ್ನೂರು ಮೊದಲಾದವುಗಳನ್ನು ವಶಪಡಿಸಿಕೊಂಡನು. ಇವನು ಮೈಸೂರಿನ ಮಾಯಾವಿಗಳ ಸವಣೂರಿನ ನವಾಬರ ಕಿರುಕುಳವನ್ನು ಅಡಗಿಸಿದನು. ಈತನ ಸಹೋದರನಾದ ಚನ್ನಬಸಪ್ಪನೊಡನೆ ಸೇನೆಯನ್ನು ಕಳುಹಿಸಿ ನವಿಲುಗಡವನ್ನು ಗೆದ್ದು ಅದಕ್ಕೆ 'ಬಸವರಾಜದುರ್ಗ' ವೆಂಬ ತನ್ನ ಹೆಸರನ್ನಿಟ್ಟನು. ಈತನ ಆಡಳಿತ ಕಾಲ ಸುಭಿಕ್ಷವಾಗಿದ್ದು ಸುಖಶಾಂತಿಗಳಿಂದ ಕೂಡಿದ್ದ ಕಾಲವಾಗಿತ್ತು. ಆದ್ದರಿಂದ ರಾಜಕೀಯ ಗೊಂದಲಗಳು ಅಷ್ಟಾಗಿ ಇರಲಿಲ್ಲ. ತನ್ನ ತಾಯಿಯು ಉಪದೇಶಿಸಿದಂತೆ ಧರ್ಮದಿಂದ ರಾಜ್ಯ ಪಾಲಿಸಿದನು. ಧಾರ್ಮಿಕ ಪುರುಷನಾದ ಬಸವಪ್ಪನು ಪ್ರತಿವರ್ಷದ ಕಾರ್ತಿಕ ಮಾಸದ ಪ್ರತಿ ಸೋಮವಾರದಂದು ಜಂಗಮ ಪಾದಪೂಜಾ ಪದ್ಧತಿಯನ್ನು ಜಾರಿಗೆ ತಂದನು. ಶೃಂಗೇರಿ ಮಠಕ್ಕೆ ಸೇವೆ

[4] ಶಿವತತ್ತ್ವರತ್ನಾಕರ – (ಸಂ) ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ್, ಐದು ಸಂಪುಟಗಳು, ದರೇಸಾ ಪ್ರಕಾಶನ, ಬೆಂಗಳೂರು –2013.

ಸಲ್ಲಿಸಿದನು. ಮಕ್ಕಳಿಗೆ ಹಾಲು, ಬೆಣ್ಣೆ ಉಚಿತವಾಗಿ ದೊರೆಯುವಂತೆ ಮಾಡಿದನು. ತಾಯಿಯು ಶಿವೈಕ್ಯಳಾದ ದಿನನಂದು ಅನ್ನ, ವಸ್ತ್ರದಾನ ಮಾಡುವ ಪದ್ಧತಿ ಇಟ್ಟುಕೊಂಡಿದ್ದನು. ಕೆಳದಿ ವೀರಭದ್ರ ದೇವಾಲಯವನ್ನು ಶಿಲಾಮಯಗೊಳಿಸಿದನು. ವೇಣುಪುರದಲ್ಲಿ ನದಿಗೆ ಸೇತುವೆ ಕಟ್ಟಿಸಿದ್ದನು. ಹಲವು ದೇವಾಲಯಗಳಿಗೆ ದಾನದದತ್ತಿಗಳನ್ನು ಕೊಟ್ಟಿದ್ದನು. ಕ್ರಿ.ಸ. 1713 ರಲ್ಲಿ ಆಮ್ ಸ್ಟರ್ ಡಾಂ ನಲ್ಲಿ ತರಿಸಿದ ಗಂಟೆಯೊಂದು ನೀಲಕಂಠೇಶ್ವರ ದೇವಾಲಯದಲ್ಲಿದ್ದು ಅದು ಈ ಶಿವಮೊಗ್ಗದ ವಸ್ತುಸಂಗ್ರಹಾಲಯದಲ್ಲಿದೆ.

ಬಸವ ಭೂಪಾಲನು ಸಕಲವಿದ್ಯಾ ಪಾರಂಗರತ. ಸ್ವಯಂ ಪಂಡಿತ ಹಾಗೂ ಸಂಸ್ಕೃತ ಮತ್ತು ಕನ್ನಡ ಭಾಷಾ ಕವಿಯೂ ಆಗಿದ್ದಾನೆ. ಇವನು 'ಸುಭಾಷಿತಸುರದ್ರುಮ' ಎಂಬ ನೀತಿಗ್ರಂಥವನ್ನು, 'ಶಿವತತ್ತ್ವರತ್ನಾಕರ' ಎಂಬ ವಿಶ್ವಕೋಶವನ್ನು ಸಂಸ್ಕೃತದಲ್ಲಿ ರಚಿಸಿದ್ದಾನೆ. ಸೂಕ್ತಿ ಸುಧಾಕರ' ಎಂಬ ಕನ್ನಡ ಮತ್ತು ಸಂಸ್ಕೃತ ಭಾಷೆಯ ಗ್ರಂಥವನ್ನು ರಚಿಸಿ 'ಸೂರಿನಿಖರ ಕಲ್ಪದ್ರುಮ' ಎಂಬ ಬಿರುದನ್ನು ಪಡೆದಿದ್ದಾನೆ.

**ಕವಿಯ ಜೀವನ:**

'ಸೂರಿನಿಕರ ಕಲ್ಪದ್ರುಮ' ಎಂದೇ ಖ್ಯಾತನಾದ ಹಿರಿಯ ಬಸವಪ್ಪನಾಯಕರು ನಿರಿಯ ಸೋಮಶೇಖರನಾಯಕ ಮತ್ತು ಕೆಳದಿ ರಾಣಿ ಚೆನ್ನಮ್ಮಾಜಿಯರ ದತ್ತುಪುತ್ರ. ಮರಿಯಪ್ಪ ಶೆಟ್ಟಿ ಮತ್ತು ಗೌರಮ್ಮ ಎಂಬುವವರು ಬಸವಣ್ಣನ ಮೂಲ ತಂದೆ–ತಾಯಿಯರು.ಇವರಿಬ್ಬರೂ ಕೆಳದಿನಾಯಕ ಭದ್ರಪ್ಪನ ಪತ್ನಿ ಸಿದ್ಧಮ್ಮಾಜಿಯ ಅಣ್ಣನಾದ ನಂಬೆಣ್ಣಶೆಟ್ಟರ ಮಗ ಮತ್ತು ಸೊಸೆ ಎಂದು ತಿಳಿದು ಬರುತ್ತದೆ. ರಾಣಿ ಚೆನ್ನಮ್ಮಾಜಿಗೆ ಮಕ್ಕಳಿರಲಿಲ್ಲವಾದ್ದರಿಂದ ತನ್ನ ಪತಿ ಸೋಮಶೇಖರನಾಯಕನ ಅಣ್ಣನಾದ ಭದ್ರಪ್ಪನಾಯಕನ ಸಂಬಂಧಿಯ ಮಗನಾದ ಬಸಪ್ಪನನ್ನು ದತ್ತುಪುತ್ರನನ್ನಾಗಿ ಸರ್ವಜನರ ಸಮ್ಮುಖದಲ್ಲಿ ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕವರ್ಷ 1595 ನೆಯ ಪರಿಭಾವೀ ನಾಮ ಸಂವತ್ಸರದ ಶ್ರಾವಣ ಶುದ್ಧ 14ನೇ ದಿವಸದಲ್ಲಿ ದತ್ತುಮಗನನ್ನಾಗಿ ಮಾಡಿಕೊಂಡು ಅವನಿಗೆ 'ಕೆಳದಿ ನೃಪಾಲ ಬಸವಪ್ಪನಾಯಕ' ನೆಂದು ನಾಮಕರಣಮಾಡಿ ರಾಜೋಪಯುಕ್ತವಾದ ಶಸ್ತ್ರಾಭ್ಯಾಸ, ಆನೆ, ಕುದುರೆಸವಾರಿ ಮುಂತಾದ ವಿದ್ಯಾಭ್ಯಾಸಗಳನ್ನು ಮಾಡಿಸಿದ್ದಾಳೆ. ಕೆಳದಿ ಬಸವ ಭೂಪಾಲನಿಗೆ ಕಾಳಯುಕ್ತ ಸಂವತ್ಸರದ ಮಾರ್ಗಶಿರ ಮಾಸದಲ್ಲಿ ಹೆಬ್ಬೆ ಮಹಂತಯ್ಯನ ಕುಮಾರಿ ಚನ್ನಮ್ಮಾಜಿ ಮತ್ತು ಮಳಿಗೆ ಚೆನ್ನವೀರಪ್ಪನ ಕುಮಾರಿ ಬಸವಮ್ಮಾಜಿ ಎಂಬ ಇಬ್ಬರು ಕನ್ಯಾರತ್ನಗಳನ್ನು ತಂದು ಸಂಭ್ರಮದಿಂದ ಮದುವೆ ಮಾಡಿಸಿದ್ದಾಳೆ.

ಕೆಳದಿ ಬಸವ ಕ್ಷಿತೀಂದ್ರನಿಗೆ ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕವರ್ಷ 1620 ನೆಯ ಈಶ್ವರ ಸಂವತ್ಸರದ ಶ್ರಾವಣ ಶುದ್ಧ 14 ರಲ್ಲಿ ವೇಣುಪುರದ ಅರಮನೆಯಲ್ಲಿ ಪಟ್ಟಾಭಿಷೇಕವಾಯಿತು. ಅದೇ ಸಂವತ್ಸರದ ಮಾಘಮಾಸದಲ್ಲಿ ಮೊದಲಿಬ್ಬರು ಹೆಂಡತಿಯರ ಜೊತೆಗೆ ಕುಟುರಹಳ್ಳಿ ಬಸವಪ್ಪನ ಕುಮಾರಿ ಚೆನ್ನಮ್ಮಾಜಿ ಮತ್ತು ಹೆಬ್ಬ ಕೋಟೆ ಶಿವಯ್ಯನ ಕುಮಾರಿ ವೀರಮ್ಮಾಜಿ ಈ  ಇಬ್ಬರನ್ನು ವಿವಾಹ ಮಾಡಿಕೊಂಡನು. ಇವನಿಗೆ ಸೋಮಶೇಖರನಾಯಕ ಮತ್ತು ವೀರಭದ್ರನಾಯಕ ಎಂಬ ಇಬ್ಬರು ಗಂಡುಮಕ್ಕಳಿದ್ದರು. ಧಾರ್ಮಿಕ ಕಾರ್ಯಗಳಿಗೆ ಹೆಚ್ಚು ಒಲವು ತೋರಿ ಪ್ರತಿವರ್ಷದ ಕಾರ್ತಿಕಮಾಸದ ಪ್ರತಿ ಸೋಮವಾರದದಂದು ಜಂಗಮ ಪಾದಪೂಜಾ ಪದ್ಧತಿಯನ್ನು ಜಾರಿಗೆ ತಂದು ಸಕಲ ಜನದರ ಒಳಿತಿಗಾಗಿ ವೇಣುಪುರದಲ್ಲಿ ನದಿಗೆ ಶಿಲಾಸೇತುವೆಯನ್ನು ಕಟ್ಟಿಸಿರುವನು. ಪ್ರತಿದಿನವು ಅನ್ನ-ರೊಟ್ಟಿಗಳನ್ನು ಮಕ್ಕಳಿಗೆ ಹಾಲು-ಬೆಣ್ಣೆಯನ್ನು ನೀಡುವಂತೆ ಮಾಡಿದ್ದನು. ಅನೇಕ ಮಠಮಾನ್ಯಗಳಿಗೆ, ದೇವಾಲಯಗಳೆಗೆ ಭಕ್ತಿಯ ಕಾಣಿಕೆಗಳನ್ನು ಸಲ್ಲಿಸಿದ್ದಾನೆ. 'ಸಂಕುಲಮಂ ರಕ್ಷಿಸಿ ಧರ್ಮದೊಳಿಳೆಯಂ ಪಾಲಿಸಿದನೊಲ್ದು ಬಸವಮಹೀಶ' ಎಂಬ ಕೀರ್ತಿಗೆ ಪಾತ್ರನಾಗಿದ್ದಾನೆ.

ಕಾಲ:

ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಪ್ರಾಚೀನ ರಾಜಧಾನಿ ಕೆಳದಿ. 'ಸೂರಿನಿಖರಕಲ್ಪದ್ರುಮ' ರಾಜಾದಿರಾಜ ಕೋಟೆ ಕೋಲಾಹಲ" ಎಂಬ ಬಿರುದಾಂಕಿತನಾದ ಬಸವಪ್ಪನಾಯಕ ರಾಜನಾಗಿದ್ದನು.ಕೆಳದಿಯ ಬಸವಪ್ಪನಾಯಕನು ಒಳ್ಳೆಯ ರಾಜಕಾರಣಿ, ಜ್ಞಾನಿ, ಅಧ್ಯಾತ್ಮ ತತ್ತ್ವಗಳ ಸಾಧಕನಾಗಿದ್ದನು. ಚರಿತ್ರೆಯ ಗ್ರಂಥಗಳಾದ 'ಕೆಳದಿ ನೃಪವಿಜಯ' ಮತ್ತು ಬಸವಪ್ಪನಾಯಕನ 'ಶಿವತತ್ತ್ವರತ್ನಾಕರ' ವಿಶ್ವಕೋಶದಿಂದ ಇವನ ಕಾಲವನ್ನು ನಿಖರವಾಗಿ ಹೇಳಬಹುದು. ಬಸವರಾಜನು ಈ ವಂಶದ ಹದಿನಾಲ್ಕನೆಯ ಅರಸ. ಹನ್ನೆರಡನೆಯ ಅರಸನಾದ ಸೋಮಶೇಖರನಾಯಕನಿಗೆ ಸಂತಾನವಿರಲಿಲ್ಲ. ಸೋಮಶೇಖರನಾಯಕನು ನಿಧನಗೊಂಡನಂತರ ಆತನ ರಾಣಿಯಾದ ಚೆನ್ನಮ್ಮಾಜಿಗೆ 1672ರಲ್ಲಿ ರಾಜ್ಯ ಪಟ್ಟವಾಗಿತ್ತು. ಆಕೆಯ ಶೌಧೈರ್ಯಾದಿಗಳನ್ನು ಶಿವತತ್ತ್ವ ರತ್ನಾಕರದಲ್ಲಿ ವರ್ಣಿಸಲಾಗಿದೆ. ಕೆಳದಿ ಸಂಸ್ಥಾನಕ್ಕೆ ದತ್ತು ತೆಗೆದುಕೊಳ್ಳಬೇಕೆಂದು ನಿರ್ಧರಿಸಿ ಇವರ ಹತ್ತಿರದ ಸಂಬಂಧಿಯಾದ ಮರಿಯಪ್ಪಶೆಟ್ಟಿ ಗೌರಮ್ಮರ ಮಗನಾದ ಬಸವಪ್ಪನನ್ನು ಕ್ರಿ.ಶ.1673 ರಲ್ಲಿ ಅಂದರೆ ಸ್ವಸ್ತಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕವರ್ಷ 1595 ನೆಯ ಪರಿಭಾವಿ ನಾಮ ಸಂವತ್ಸರದ ಶ್ರಾವಣ ಶುದ್ಧ 14ನೆಯ ದಿನದಂದು ಬಸಪ್ಪನಾಯಕನನ್ನು ದತ್ತು ತೆಗೆದುಕೊಂಡರು. ಇವನಿಗೆ 'ಕೆಳದಿ ನೃಪಾಲ ಬಸವಪ್ಪನಾಯಕ' ಎಂಬ ಹೆಸರಿಟ್ಟು ಇವನ ಹೆಸರಿನಲ್ಲಿ ಚೆನ್ನಮ್ಮಾಜಿ ರಾಜ್ಯಭಾರ ಮಾಡತೊಡಗಿದಳು. ರಾಜೋಪಯುಕ್ತವಾದ ಶಾಸ್ತ್ರಾಭ್ಯಾಸ,ಆನೆ-ಕುದುರೆಗಳ ಸವಾರಿ  ಮುಂತಾದ ವಿದ್ಯಾಭ್ಯಾಸಗಳನ್ನು ಕಲಿಸಿ,

ವಯಸ್ಸಿಗೆ ಬಂದಮೇಲೆ ಹೆಬ್ಬೆ ಮಹಂತಯ್ಯನವರ ಕುಮಾರಿ ಬಸವಮ್ಮ ಎಂಬಿಬ್ಬರು ಕನ್ಯೆಯರನ್ನು ವಿವಾಹ ಮಾಡಿಸಿದಳು. ಇಪ್ಪೈದು ವರ್ಷಗಳ ಕಾಲ ರಾಜ್ಯ ಭಾರ ಮಾಡಿ ಕ್ರಿ.ಶ. 1697 ರಲ್ಲಿ ಬಸಪ್ಪನಾಯಕನು ಪಟ್ಟಕ್ಕೆ ಬಂದನು. ಬಸಪ್ಪನಾಯಕನು ಪಟ್ಟಕ್ಕೆ ಬಂದನಂತರ ಮೊದಲಿಬ್ಬರು ಹೆಂಡತಿಯರ ಜೊತೆ ಇನ್ನೂ ಇಬ್ಬರನ್ನು ವಿವಾಹವಾದನು. ಇವನಿಗೆ ಸೋಮಶೇಖರನಾಯಕ ಮತ್ತು ವೀರಭದ್ರನಾಯಕ ಎಂಬ ಇಬ್ಬರು ಮಕ್ಕಳು. ಬಸಪ್ಪನಾಯಕನು ತನ್ನ ಆಡಳಿತದಲ್ಲಿ ಅನೇಕರ ಜೊತೆ ಯುದ್ಧ ಮಾಡಿ ತನ್ನ ಪ್ರತಾಪವನ್ನು ಮೆರೆದನು. ಮರಾಠರು, ಮೈಸೂರಿನ ಅರಸರು, ಪೋರ್ಚಗೀಸರು, ಮಲೆಯಾಳದವರಲ್ಲಿ ಯುದ್ಧ ಮಾಡಿದ್ದನು. ಮೊಘಲರು ಆಕ್ರಮಿಸಿಕೊಂಡಿದ್ದ ಆವಟ್ಟಿಲ, ಮಹದೇವಪುರ, ಹೊನ್ನಾಳಿ ಮತ್ತು ಮಿಡಚೆ ಕೋಟೆಗಳನ್ನು ವಶಪಡಿಸಿಕೊಂಡನು. ಹೀಗೆ ರಾಜಕೀಯ ಆಡಳಿತ ನಡೆಸಿ ಕ್ರಿ.ಶ. 1715 ರಲ್ಲಿ ಶಿವೈಕ್ಯನಾದನು. ಇವನ ಸಮಾಧಿ ಬಿದನೂರಿನ ಕೊಪ್ಪಲು ಮಠದಲ್ಲಿ ಆಯಿತು.

ಕೃತಿ:

ಕೆಳದಿ ಸಂಸ್ಥಾನವು ಅನೇಕ ವಿದ್ವಾಂಸರುಗಳಿಗೆ ತವರುಮನೆಯಾಗಿತ್ತು. ಕನ್ನಡ, ಸಂಸ್ಕೃತ ಸಾಹಿತ್ಯಕ್ಕೆ ಹೆಚ್ಚು ಪ್ರೋತ್ಸಾಹ ನೀಡಿದ್ದರು. ಮೂರು ಜನ ಅರಸರು ಹಾಗೂ ಹದಿನಾರು ಸಾಹಿತಿಗಳು ಮೂವತ್ತಕ್ಕೂ ಹೆಚ್ಚು ಸಾಹಿತ್ಯ ಕೃತಿಗಳನ್ನು ರಚಿಸಿದ್ದು ಅವು ಬೆಳಕು ಕಂಡಿವೆ. ಹಿರಿಯ ವೆಂಕಟಪ್ಪನಾಯಕ, ಬಸವಪ್ಪನಾಯಕ, ಭಟ್ಟೋಜಿ ದೀಕ್ಷಿತ್, ರಂಗನಾಥ ದೀಕ್ಷಿತ್ . ರಂಗೋಜಿ ಭಟ್ಟ, ಅಶ್ವಪಂಡಿತ, ಕೊಂಡಭಟ್ಟ, ಮಾನಪ್ಪ ಪಂಡಿತ, ನಿರ್ಮಾಣ ಮಂತ್ರಿ, ಮರಿತೋಂಟದಾರ್ಯ,ಸಂಗಮೇಶ್ವರಯ್ಯ ಚೊಕ್ಕನಾಥ ಇನ್ನೂ ಅನೇಕ ಸಾಹಿತಿಗಳನ್ನು ಕಾಣಬಹುದು. ಬಸಪ್ಪನಾಯಕನ 'ಶಿವತತ್ತ್ವರತ್ನಾಕರ' 'ಸುಭಾಷಿತ ಸುರದ್ರುಮ' ಎಂಬ ಎರಡು ಸಂಸ್ಕೃತ ಗ್ರಂಥಗಳನ್ನೂ, 'ಸೂಕ್ತಿಸುಧಾಕರ' ಎಂಬ ಗೀರ್ವಾಣ ಕರ್ನಾಟಕ ಭಾಷೆಯಲ್ಲಿನ ನೀತಿಗ್ರಂಥವನ್ನು ರಚಿಸಿರುವುದಾಗಿ ಕೆಳದಿ ಆಸ್ಥಾನ ಕವಿಗಳೇ ಹೇಳಿರುವುದನ್ನು ನೋಡಬಹುದು.

ಕೆಳದಿ ಕವಿ ನಿಂಗಣ್ಣನು

ಕಂ॥ಮೆರರೆವ ಶಿವತತ್ತ್ವಾ
ಕರಮೆಂದೆನಿಪಾ ಸುಭಾಸಿತ ಸುರದ್ರುಮಮೆಂ
ಬರುತಂ ಕಾವ್ಯದ್ವಯಮಂ
ವಿರಚಿತ ಸದ್ಯಶಿವನಾತನಾ ಬಸವನಾಂತನಾ॥ ಬಸವನೃಪಂ॥[5]

–ಶ್ರೀಮನ್ ಮರಿತೋಂಟದಾರ್ಯರು.

[5] ಶಿವತತ್ತ್ವರತ್ನಾಕರ – ಸಂ: ಜಯದೇವಪ್ಪ ಜೈನಕೇರಿ, ಡಾ. ಜಗದೀಶ – ಮರುಳಸಿದ್ಧೇಶ್ವರ ವೀರಶೈವ ಅಧ್ಯಯನ ಕೇಂದ್ರ, ಕವಲೆದುರ್ಗ, ಶಿವಮೊಗ್ಗ.

ಹೀಗೆ ಮೂರು ಮೇರು ಕೃತಿಗಳನ್ನು ವಿರಚಿತ ಖ್ಯಾತನಾಗಿದ್ದಾರೆ. ಆದರೆ ಸೂರಿನಿಖರಕಲ್ಪದ್ರುಮನೆಂಬ ಬಿರುದನ್ನು ಪಡೆಯಲು ಕಾರಣವಾಗಿರುವ ಸರಳವೂ,ಮನ: ಸಂತೋಷದಾಯಕವೂ ಆದ 'ಸೂಕ್ತಿ ಸುಧಾಕರವು' ದೊರಕದಿರುವುದು ವಿಷಾದದ ಸಂಗತಿಯಾಗಿದೆ. ಇದರಿಂದ ಸಂಸ್ಕೃತ ಮತ್ತು ಕನ್ನಡ ಸಾಹಿತ್ಯಕ್ಕೆ ತುಂಬ ನಷ್ಟವಾಗಿದೆಯೆಂದು ಹೇಳಬಹುದು.

ಉಳಿದೆರೆಡು ಕೃತಿಗಳಲ್ಲಿ ಶಿವತತ್ತ್ವರತ್ನಾಕರವು ಪ್ರಕಟವಾಗಿದೆ. ಈ ಅದ್ಭುತ ವಿಶ್ವಕೋಶವಾದ ಬಸವಭೂಪಾಲನ ಕೃತಿಯು ಪ್ರಥಮ ಬಾರಿಗೆ 1927 ರಲ್ಲಿ ಶ್ರೀ.ಬಿ. ರಾಮರಾವ್ ಮತ್ತು ಶ್ರೀ.ಪಿ.ಸುಂದರಶಾಸ್ತ್ರಿಯಮವರಿಂದ ಪರಿಷ್ಕರಿಸಲ್ಪಟ್ಟು ಮಂಗಳೂರಿನ ಸದಾನಂದ ಕೋ–ಆಪರೇಟಿವ್ ಪ್ರಿಂಟಿಂಗ್ ವರ್ಕ್ಸ್ ಲಿಮಿಟೆಡ್ ಅವರಿಂದ ಮುದ್ರಿಸಲ್ಪಟ್ಟು ಮದ್ರಾಸಿನ ಬಿ.ಎಂ.ಸಾಥ್ ಎಂಡ್ ಕೋ ಅವರಿಂದ ಪ್ರಕಟಿಸಲ್ಪಟ್ಟಿತ್ತು. ನಂತರ 1964, 1969 ಮತ್ತು 1985 ರಲ್ಲಿ ಮೂರು ಸಂಪುಟಗಳಲ್ಲಿ ಕ್ರಮವಾಗಿ ವಿದ್ವಾನ್ ಎಸ್.ನಾರಾಯಣಸ್ವಾಮಿ ಶಾಸ್ತ್ರಿ. ವಿದ್ವಾನ್ ಆರ್. ರಾಮಾಶಾಸ್ತ್ರಿ ಮತ್ತು ವಿದ್ವಾನ್ ಪಿ.ಮರಿಬಸವಾರಾಧ್ಯರವರುಗಳ ಸಂಪಾದನೆಯಲ್ಲಿ ಮೈಸೂರು ಪ್ರಾಚ್ಯವಿದ್ಯಾ ಸಂಶೋಧನಾಲಯವು ಪ್ರಕಟಿಸಿದೆ. ಈ ಪ್ರಬಂಧದಲ್ಲಿ ಮೈಸೂರು ಪ್ರಾಚ್ಯವಿದ್ಯಾಸಂಶೋಧನಾಲಯದ ಸಂಪುಟವನ್ನೇ ಆಧಾರವಾಗಿಟ್ಟುಕೊಂಡು ಉಲ್ಲೇಖ ಕೊಡಲಾಗಿದೆ. ಎರಡನೆಯ ಕೃತಿಯಾದ 'ಸುಭಾಷಿತ ಸುರದ್ರುಮ'ವು ಅಪ್ರಕಟಿತವಾಗಿದ್ದು ಅದರ ಹಸ್ತ ಪ್ರತಿಗಳು ಮೈಸೂರು, ಪೂನಾ ಮತ್ತು ಶೃಂಗೇರಿಂಗಳಲ್ಲಿ ಸಿಗುತ್ತವೆ. ಇವುಗಳನ್ನೆಲ್ಲಾ ಒಂದೆಡೆ ಸೇರಿಸಿ ಪ್ರಕಟಿಸುವ ಕಾರ್ಯ ನಡೆಯಬೇಕಾಗಿದೆ.

**ಶಿವತತ್ತ್ವರತ್ನಾಕರ:**

ಸೂರಿನಿಖರಕಲ್ಪದ್ರುಮ ಶ್ರೀಮತ್ಕೆಳದಿ ಬಸವ ಕ್ಷಿತೀಂದ್ರನು ರಚಿಸಿರುವ ಈ ಕೃತಿಯು ಒಂದು 'ವಿಶ್ವಕೋಶ'ವೆಂದು ಪ್ರಸಿದ್ಧಿ ಪಡೆದಿದೆ. ಈ ಕೃತಿಯನ್ನು ರಚಿಸಲು ಬಸವ ಭೂಪಾಲನಿಗೆ ಸಂಸ್ಕೃತದಲ್ಲಿ ವಿಶ್ವಕೋಶದ ಲಕ್ಷಣಗಳನ್ನು ಹೊಂದಿರುವ ವೇದಗಳು, ರಾಮಾಯಣ, ಮಹಾಭಾರತ, ಪುರಾಣಗಳು, ತಂತ್ರಗಳು, ಸಾಮ್ರಾಜ್ಯಲಕ್ಷ್ಮೀ, ಯುಕ್ತಿಕಲ್ಪತರು, ವೀರಮಿತ್ರೋದಯ, ಮನಸೋಲ್ಲಾಸ, ಶಾರ್ಙ್ಗಧರ ಪದ್ಧತಿ, ಬೃಹತ್ ಸಂಹಿತೆ, ಸೌಂದರಾನಂದ ಈ ಕೃತಿಗಳು ಪ್ರೇರಣೆಯನ್ನು ನೀಡಿರುಬಹುದೆಂದು ತೋರುತ್ತದೆ. ಕವಿಯು ಈ ಕೃತಿಯನ್ನು 1709–10ರಲ್ಲಿ ರಚಿಸಿರುವಂತೆ ಕಂಡುಬರುತ್ತದೆ. ಈ ಕೃತಿಯು ಒಂಭತ್ತು ಕಲ್ಲೋಲಗಳು, 108 ತರಂಗಗಳು, 13000 ಶ್ಲೋಕಗಳನ್ನೊಳಗೊಂಡಿರುವ ಮಹಾಕೃತಿ.

ವಿಚಿತ್ರ ನಾನಾ ವಿಷಯಗಳಿಂದ ಕೂಡಿರುವ ಈ ಕೃತಿಯನ್ನು ಕರ್ತೃವು ಸ್ವತಃ ಅನೇಕ ವಿದ್ಯೆಗಳನ್ನು ಅಭ್ಯಾಸ ಮಾಡಿ ಲೋಕದ ಹಿತಕ್ಕಾಗಿ ರಚಿಸಿರುವುದಾಗಿ ಹೇಳಿಕೊಂಡಿದ್ದಾನೆ.[6] ಈ ಕೃತಿಯನ್ನು ರಚಿಸಿ ತನ್ನ ಮಗನಾದ ಎರಡನೇ ಸೋಮಶೇಖರನಾಯಕನಿಗೆ ಉಪದೇಶಿಸಿರುವಂತೆ ಕಂಡುಬರುತ್ತದೆ.

**ಸುಭಾಷಿತ ಸುರದ್ರುಮ**

ಸುಭಾಷಿತ ಸುರದ್ರುಮವು ಬಸವ ಕ್ಷಿತೀಂದ್ರನಿಂದ ರಚಿತವಾದ ಒಂದು ವಿಶಿಷ್ಟ ರೀತಿಯ ನೀತಿಗ್ರಂಥ. ಇದು ಅಪ್ರಕಟಿತವಾಗಿದ್ದು ಇದರ ಹಸ್ತಪ್ರತಿಗಳು ಶೃಂಗೇರಿ, ಮೈಸೂರು ಮತ್ತು ಪೂನಾಗಳಲ್ಲಿ ಹಂಚಿಹೋಗಿವೆ. ಈ ಎಲ್ಲಾ ಹಸ್ತಪ್ರತಿಗಳನ್ನು ಅವಲೋಕಿಸಿದರೆ ಇದರಲ್ಲಿ ಕಂಡುಬಂದದ್ದೇನೆಂದರೆ ಇದರಲ್ಲಿ ಒಟ್ಟು ಐದು ಸ್ಕಂದಗಳಿದ್ದು, ಪ್ರತಿಯೊಂದು ಸ್ಕಂದವನ್ನೂ ಅನೇಕ ಸ್ತಬಕಗಳನ್ನಾಗಿ ವಿಂಗಡಿಸಿದ್ದಾನೆ. ಇದೊಂದು ಬೃಹತ್ತಾದ ಗ್ರಂಥವಾಗಿದ್ದು, ಅನೇಕ ವಿಷಯಗಳಿಗೆ ಸಂಬಂಧಿಸಿದಂತೆ ಸುಮಾರು ಹದಿನೈದು ಸಾವಿರ ಶ್ಲೋಕಗಳಿರಬಹುದು. ಮೊದಲು ಸುಭಾಷಿತ ಸುರದ್ರುಮದಲ್ಲಿನ ವಿಷಯ ವಿಭಾಗಗಳನ್ನು ಹೇಳಿ ಕೊನೆಯಲ್ಲಿ ಗ್ರಂಥ ಪರಿಚಯಕ್ಕಾಗಿ ಕೆಲವು ಸುಭಾಷಿತಗಳನ್ನು ಉದಾಹರಿಸಲಾಗಿದೆ. ಪ್ರಥಮ ಸ್ಕಂದದ ಪ್ರಾರಂಭದಲ್ಲಿ ಶಿವ, ಬ್ರಹ್ಮ, ವಿಷ್ಣು ಮುಂತಾದ ದೇವತೆಗಳಿಗೆ ನಮಸ್ಕಾರರೂಪ ಪದ್ಯಗಳು, ನಂತರ ಅವರಿಂದ ಆಶೀರ್ವಾದರೂಪ ಪದ್ಯಗಳಿವೆ. ತರುವಾಯ ತನ್ನ ಪೂರ್ವಜರ ಚರಿತ್ರೆಯನ್ನು ವಿವರಿಸಿದ್ದಾನೆ. ನಂತರ ವಿಶಿಷ್ಟ ಕವಿ ಪ್ರಶಂಸಾ ಸ್ತಬಕದಲ್ಲಿ ಅನೇಕ ಕವಿಗಳು ಸ್ತುತಿ ಮಾಡಿರುವುದು ವಿಶಿಷ್ಟವಾಗಿದೆ. ಬಹುಶಃ ಆ ಕವಿಗಳ ಕೃತಿಗಳಿಂದ ಸುಭಾಷಿತಗಳನ್ನು ಸಂಗ್ರಹಿಸಿರುವಂತೆ ಕಂಡುಬರುತ್ತದೆ.

ಎರಡನೆಯ ಚಿತ್ರಾತ್ಮಕ ಸ್ಕಂದದಲ್ಲಿ ಹತ್ತು ಸ್ತಬಕಗಳಿದ್ದು ಅನ್ಯೋಕ್ತಿ ಪ್ರಶಂಸಾ, ನಿಂದಾ, ದೇವತಾನ್ಯೋಕ್ತಿ, ತೇಜೋವಾಯ್ವಾಕಾಶಾನ್ಯೋಕ್ತಿ ಮತ್ತು ಸಜ್ಜನ ಪ್ರಶಂಸೆ, ದುರ್ಜನ ನಿಂದೆ, ಶಬ್ದಾರ್ಥಾಲಂಕಾರಗಳನ್ನೊಳಗೊಂಡ ಕುಮಾರಾವಸ್ಥೆಯಲ್ಲಿ ಕೇಳಲು ಯೋಗ್ಯವಾದ ಸುಭಾಷಿತಗಳಿವೆ.

[6] ಶಿವತತ್ತ್ವರತ್ನಾಕರ – (ಸಂ) ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ್, ಸಂಪುಟ 1 ಮತ್ತು 2, – ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ – 1999.

ಮೂರನೆಯ ಸ್ಕಂದದ ಆರು ಸ್ತಬಕಗಳಲ್ಲಿ ದೇಶ, ನಗರ, ರಾಜಗೃಹ, ರಾಜಚರಿತ, ರಾಜವಿಹಾರ, ಕುಮಾರಾಭ್ಯುದಯವರ್ಣನೆಗೆ ಸಂಬಂಧಿಸಿದ ಯೌವನಾವಸ್ಥೆಯಹಲ್ಲಿ ಕೇಳಲು ಯೋಗ್ಯವಾಧ ಸೌಂದರ್ಯ, ರಸ, ಆನಂದಾದಿಗಳ ವರ್ಣನೆಯ ಸುಭಾಷಿತಗಳಿವೆ.

ನಾಲ್ಕನೆಯ ಸ್ಕಂದದ ಆರು ಸ್ತಬಕಗಳಲ್ಲಿ ವೈರಾಗ್ಯ ನಿರೂಪಣೆ, ಜಗದ್ವೈಚಿತ್ರ್ಯ ಆತ್ಮನಿರ್ವೇದ, ಸಾಂಸಾರಿಕ ಸುಖಾಭಾವ, ನಿಷೇದ್ಯೋಪದೇಶ ವಿನೇಯೋಪದೇಶ ಮತ್ತು ಫಲಸ್ತಬಕಗಳಿಗೆ ಸಂಬಂಧಿಸಿದ, ವಾರ್ಧಕ್ಯದಲ್ಲಿ ಕೇಳಲು ಯೋಗ್ಯವಾದ ಭಕ್ತಿ, ಜ್ಞಾನ, ವೈರಾಗ್ಯ ಹಾಗೂ ಶಾಂತಿ ಇವುಗಳನ್ನು ಪರಿಪೋಷಿಸುವ ಸುಭಾಷಿತಗಳಿವೆ.

ಕೊನೆಯದಾದ ಐದನೆಯ ಸ್ಕಂದದಲ್ಲಿ ಐದು ಸ್ತಬಕಗಳಿದ್ದು, ಇವುಗಳಲ್ಲಿ ವಿನಾಯಕಾದಿ ದೇವತೆಗಳು, ವಿಷ್ಣು, ಗೌರಿ, ಶಿವ ಇತ್ಯಾದಿ ಪೂರ್ವ ಕವಿ ಉಕ್ತವಾದ ಸಮಸ್ತ ದೇವತಾ ಸ್ತುತಿರೂಪದ ಸುಭಾಷಿತಗಳಿವೆ. ಈ ಮೇಲಿನ ಎಲ್ಲಾ ವಿಷಯಗಳನ್ನು ತಿಳಿಸುವ ಪದ್ಯಗಳನ್ನು ಕವಿಯು ಗ್ರಂಥಾರಂಭದಲ್ಲಿ ಹೇಳಿರುವುದನ್ನು ನೋಡಬಹುದಾಗಿದೆ.

**ಶಿವತತ್ತ್ವರತ್ನಾಕರ ಕೃತಿ ಪರಿಚಯ :**

ಈ ಕೃತಿಯಲ್ಲಿನ ವಿಷಯಗಳ ಆಧಾರದಲ್ಲಿ 'ಕಲ್ಲೋಲ'ಗಳೆಂದು ಹೆಸರಿಸಲಾಗಿದೆ. ಈ ಕಲ್ಲೋಲಗಳ ಸಂಖ್ಯೆ ಒಂಭತ್ತು. ಪ್ರತಿಯೊಂದು ಕಲ್ಲೋಲಗಳು ಪುನಃ 'ತರಂಗ'ಗಳಾಗಿ ವಿಂಗಡಿಸಲ್ಪಟ್ಟಿವೆ. ಪ್ರತಿಯೊಂದು ಕಲ್ಲೋಲದ ಅಂತ್ಯಭಾಗದಲ್ಲಿ ಚರ್ಚಿಸಲಾದ ವಿಷಯಗಳಿಗೆ ಅಧ್ಯಯನ ಮಾಡಲಾದ ಗ್ರಂಥಗಳನ್ನು ಸೂಚಿಸಿ ಆಯಾ ಕಲ್ಲೋಲಗಳಲ್ಲಿನ ತರಂಗಗಳ ಸಂಖ್ಯೆ ಹಾಗೂ ಒಟ್ಟು ಶ್ಲೋಕಗಳ ಸಂಖ್ಯೆಯನ್ನು ಕೊಡಲಾಗಿದೆ ಹಾಗೂ ಕಲ್ಲೋಲದಲ್ಲಿನ ವಿಷಯವನ್ನು ಸಂಕ್ಷಿಪ್ತಗೊಳಿಸಿ ಸೂಚಿಸಲಾಗಿದೆ. ಅವುಗಳ ಸ್ವರೂಪಾದಿಗಳನ್ನು ಹಾಗೂ ಅವುಗಳಲ್ಲಿನ ವಿಷಯ ವೈವಿಧ್ಯತೆಯನ್ನು ಈ ಕೆಳಗಿನಂತೆ ವಿಶ್ಲೇಷಿಸಲಾಗಿದೆ.

**ಮೊದಲನೆಯ ಕಲ್ಲೋಲ**

ಮೊದಲನೆಯ ಕಲ್ಲೋಲವು 'ಭುವನೋದಯಧಾಮ' ವೆಂದು ನಾಮಾಂಕಿತವಾಗಿದೆ. ವೇದ,ಆಗಮ, ಪುರಾಣಗಳಲ್ಲಿ ವ್ಯಕ್ತವಾದ ವಿಚಾರಗಳನ್ನು ವೀರಶೈವ ಧರ್ಮೋಚಿತವಾಗಿ ಐದುನೂರ ಒಂಭತ್ತು ಶ್ಲೋಕಗಳ ದ್ವಾರಾ ಸಪ್ತ ತರಂಗಗಳಲ್ಲಿ ವಿವೇಚಿಸಲಾಗಿದೆ. ಆರಂಭದಲ್ಲಿ ಶಿವ, ಆದಿಶಕ್ತಿ ಸ್ವರೂಪಿಯಾದ ಪಾರ್ವತಿ, ಶಿವಗಣಗಳು, ಪಂಚಾಚಾರ್ಯರು, ಮತ್ತು ಮಾತಾಪಿತೃಗಳನ್ನು ಕುರಿತು

ಮಂಗಳವನ್ನು ಪಾಡಲಾಗಿದೆ. ಗ್ರಂಥಾಧ್ಯಯನದಿಂದ ಭೋಗಾಪೇಕ್ಷಿಗಳು, ಕಲಾವಿದರು ಮತ್ತು ಮೋಕ್ಷಾಪೇಕ್ಷಿಗಳೆಲ್ಲರಿಗೂ ಪ್ರಯೋಜನವೆನ್ನಲಾಗಿದೆ. ತನಗಿರುವ ಕೃತಿರಚನಾ ಸಾಮರ್ಥ್ಯವನ್ನು ಉದ್ಘೋಷಿಸಿರುವುದು ಬಸವರಾಜನ ಆತ್ಮವಿಶ್ವಾಸಕ್ಕೆ ಸಾಕ್ಷಿಯಾಗಿದೆ. ಪ್ರಸ್ತುತ ಕಲ್ಲೋಲದಲ್ಲಿ ಏಳು ತರಂಗಗಳಿದ್ದು, ಸೂಕ್ತವಾದ ಶೀರ್ಷಿಕೆಗಳನ್ನು ನೀಡಲಾಗಿದೆ. 1. ಸಕಲವಿದ್ಯೋದ್ಧೇಶ 2.ವಿದ್ಯಾಸ್ವರೂಪನಿರೂಪಣ 3.ಅನಾದಿ ಭಕ್ತನಿರಂಜನ ಜಂಗಮಸೃಷ್ಟಿಕ್ರಮ ವರ್ಣನೆ 4.ಶೂನ್ಯ ನಿಷ್ಕಲ ಮಹಾಲಿಂಗಾದಿ ಸೃಷ್ಟಿಕ್ರಮ ನಿರೂಪಣೆ 5.ಪ್ರಣವಲಿಂಗಸ್ವರೂಪ ಮತ್ತು ವರ್ಣಕಲಾಸ್ವರೂಪ ನಿರೂಪಣೆ 6.ನಾದತತ್ತ್ವತ್ರಯ ಮತ್ತು ದ್ವಿಪಂಚಾಶತ್ ಮೂರ್ತಿಬೇಧ ಪ್ರದರ್ಶನ 7. ತ್ರಿಮೂರ್ತಿ ಸ್ವರೂಪ ತತ್ತ್ವಬೇಧ ಮತ್ತು ಪಂಚೀಕರಣ ವಿಭಾಗ ಪ್ರದರ್ಶನ.

**ಮೊದಲನೆಯ ತರಂಗ–** ಜ್ಞಾನಶಾಖೆಗಳು ವಿದ್ಯೆ ಮತ್ತು ವಿಜ್ಞಾನವೆಂದು ವಿಭಜಿಸಲ್ಪಟ್ಟಿವೆ. ಲೌಕಿಕ ಬದುಕಿಗೆ ಅನುಕೂಲವಾಗುವ ಶಾಸ್ತ್ರಾದಿ ಕಲೆಗಳನ್ನು ವಿಜ್ಞಾನವೆಂದೂ, ಪಾರಲೌಕಿಕ ಬದುಕಿಗೆ ಅವಶ್ಯವಾಗುವ ವೇದ, ಶಾಸ್ತ್ರ, ಪುರಾಣಾದಿ ವಿಷಯಗಳು ವಿದ್ಯೆಯೆಂದೂ ಪರಿಗಣಿತವಾಗಿವೆ. ಎರಡೂ ಶಾಖೆಗಳಿಗೆ ಮಹತ್ತ್ವವನ್ನು ನೀಡಿರುವುದು ವಿಶೇಷ.

**ಎರಡನೆಯ ತರಂಗ–** ವೇದದಲ್ಲಿ ಅಡಕವಾಗಿರುವ ವಿಧಿ ಮತ್ತು ಅರ್ಥವಾದಗಳ ಉಪಯೋಗ, ಪುರುಷಾರ್ಥಗಳ ವಿವೇಚನೆ, ನ್ಯಾಯಶಾಸ್ತ್ರದ ಯುಕ್ತಿಕ್ರಮ, ವೇದದ ಪರಿಶಿಷ್ಟ ಭಾಗಗಳೆನಿಸುವ ಪುರಾಣಗಳು, ವೀರಶೈವಾಗಮದ ಕ್ರಿಯಾದಿ ಚತುರ್ಭಾಗಗಳು, ಮತ್ತು ಶೈವಾಗಮಗಳು ಚರ್ಚಿತವಾಗಿವೆ.

**ಮೂರನೆಯ ತರಂಗ** ವೀರಶೈವ ಸಂಪ್ರದಾಯದನ್ವಯ ಅನಾದಿಭಕ್ತತಃ ಜಗತ್ ಸೃಷ್ಟಿಪರ್ಯಂತ ವ್ಯಾಪ್ತ ವಿಷಯಂಗಳೇ ಶಿವತತ್ತ್ವದ ಉಗಮಕ್ಕೆ ಕಾರಣ. ಮಹೇಶ್ವರ, ರುದ್ರ, ಜನಾರ್ಧನ, ಬ್ರಹ್ಮರೆಲ್ಲರೂ ಶಿವತತ್ತ್ವದಿಂದ ಜನಿಸಿದರೆಂದು ವಾಚಿಸಲಾಗಿದೆ. ನಂತರ ಬ್ರಹ್ಮನಿಂದ ಜಗತ್ತಿನ ಸೃಷ್ಟಿಯೆನ್ನುವಲ್ಲಿ ಸಮೀಕರಿಸಲಾಗಿದೆ. ಅನಾದಿಭಕ್ತನು ಸೃಷ್ಟಿ ಪ್ರಕ್ರಿಯೆಗಳಿಗೆಲ್ಲ ಮೂಲಹೇತುವಾಗಿ ವೈದಿಕರ ಲಕ್ಷಣಗಳಾನ್ವಿತನೆನಿಸಿದ ಪರಬ್ರಹ್ಮನೇ ಆಗಿರುತ್ತಾನೆ.

**ನಾಲ್ಕನೆಯ ತರಂಗ–** ಪರಮಾತ್ಮ ಸ್ವರೂಪಿ ಶೂನ್ಯಲಿಂಗವನ್ನು ಕರ್ಮಪ್ರಸಕ್ತಿಯಿಂದ ಹೊರತಾಗಿರುವುದನ್ನು ತೋರಿಸಲಾಗಿದೆ. ನಿಷ್ಕಲಲಿಂಗವು ತತ್ತ್ವಸ್ವರೂಪಿ. ನಾದಾತ್ಮಕವಾದ ನಿಷ್ಕಲಗುರು,ಬಿಂದ್ವಾತ್ಮಕವಾದ ಶೂನ್ಯಲಿಂಗ, ಮತ್ತು ಕಲಾತ್ಮಕವಾದ ನಿರಂಜನಜಂಗಮ (ಅಮೂರ್ತತ್ವ)ಗಳಸಮಾಗಮವೇ ಮಹಾಲಿಂಗ.

ಈ ಮಹಾಲಿಂಗವಾದರೋ ಯೋಗಿಗಳ ಹೃತ್ಕಮಲಗಳಲ್ಲಿ ವಿರಾಜಮಾನವಾಗಿ, ಸರ್ವಶಾಸ್ತ್ರಗಳಿಗೂ ಮೂಲಸ್ರೋತವಾಗಿ ವಿಜೃಂಭಿಸಿದೆ.

**ಐದನೆಯ ತರಂಗ–** ಪ್ರಣವಾತ್ಮಕ 'ಓಂ'ಕಾರವು ಮಹಾಲಿಂಗದ ಪರಾಶಕ್ತಿಯ ಪ್ರಭಾವದಿಂದ ನಾದ–ಬಿಂದು–ಕಲಾರೂಪಾದಿಗಳ ಪ್ರಕ್ರಿಯೆಗಳಿಂದ ಲಿಂಗರೂಪವನ್ನು ಪಡೆದು ವಿಶ್ವಾಧಾರವಾಗಿ ಪರಿಣಮಿಸಿತು. ವರ್ಣಮಾಲೆಯಲ್ಲಿ ಹದಿಮೂರನೆಯದಾಗಿಯೂ, ವೇದದಲ್ಲಿ ಆದ್ಯಕ್ಷರವಾಗಿದೆ ಅ– ಜಾಗ್ರತಾ, ಉ– ಸ್ವಪ್ನಾ, ಮ– ಸುಪ್ತಾ, ಓಂ– ತುರೀಯಾ ಮತ್ತು ವಾಗ್ರೂಪ ವಿಹೀನತೆಯಿಂದ ಐದನೆಯದು ತುರೀಯಾತೀತಾವಸ್ಥೆವೆಂಬುದರ ಮೂಲಕ ಪ್ರಣವಸ್ವರೂಪವನ್ನು ಸಿದ್ಧಿಸಲಾಗಿದೆ. 'ಓಂ ನಮ: ಶಿವಾಯ'ವೆಂಬ ಪ್ರತ್ಯಕ್ಷರದ ಮಂತ್ರವೂ ಶಿವನ ಪಂಚಮುಖಗಳ ಪ್ರತಿನಿಧಿಗಳೆನಿಸಿ ಮೂವತ್ತೆಂಟು ಕಲೆಗಳಿಂದ ಪಂಚಕಲಾಬ್ರಹ್ಮವೆನಿಸಿದೆ.

**ಆರನೆಯ ತರಂಗ–** 'ನಾದಮಯಂ ಶಿವಃ' . ಪ್ರಾಣಶಕ್ತಿಯೇ ಎಲ್ಲ ಚೇಷ್ಟೆಗಳಿಗೆ ಮೂಲಹೇತು. ಶಿವ, ಸದಾಶಿವ ಮತ್ತು ಮಹೇಶ ಎಂಬೀ ತತ್ತ್ವತ್ರಯಗಳು ನಿರ್ದೋಷಯುಕ್ತವಾಗಿವೆ. ಶಿವತತ್ತ್ವವು ಶಿವ, ನಾದ, ಧ್ವನಿ ಪ್ರಾಣ ಮತ್ತು ಪಿಂಡಾದಿಗಳು ಕ್ರಮವಾಗಿ ಒಂದರೊಳಗೊಂದರಂತೆ ಅಂತರ್ಗತವಾಗಿವೆ. ನಾದವು ಸಚ್ಚಿದಾನಂದ ಶಿವಚೈತನ್ಯದಿಂದ ಬ್ರಹ್ಮರೂಪವಾಗಿ ಜಗದ್ವ್ಯಾಪಿಯಾಗಿರುವುದಕ್ಕೆ ಕಾರಣ. ಪಂಚ ಸಾದಾಖ್ಯದಿಂದ ಕೂಡಿದ ಸದಾಶಿವತತ್ತ್ವವು ಲೌಕಿಕ ವ್ಯಾಪಾರಗಳಿಗೆ ಕಾರಣವಾಗಿವೆ. ಮೂರ್ತಸ್ವರೂಪೀ ಸಾದಾಖ್ಯವು(ರುದ್ರ) ಸೃಷ್ಟಿ, ಸ್ಥಿತಿ ಮತ್ತು ಲಯಗಳಿಗೆ ನಿಯಾಮಕಗಳೆನಿಸಿವೆ.[7]

**ಏಳನೆಯತರಂಗ–**ಮೂರನೆಯದಾದ ಮಹೇಶತತ್ತ್ವವು ಪುರುಷ ಸೂತ್ರದ ವಿರಾಟ್ ಪುರುಷನಂತೆ ಅನಾದಿಯೆನಿಸಿ, ವಿಷ್ಣುವು ವೀರಶೈವ ಸಂಪ್ರದಾಯದನ್ವಯ ಶೋಭೋಪೇತನಾಗಿ ಆದಿತ್ಯಾದಿ ದೇವಾನುದೇವತೆಗಳು, ಅಸುರರು, ಕಲಾದಿ ಏಕಾದಶ ರುದ್ರತತ್ತ್ವಗಳು ಮತ್ತು ಇವುಗಳ ಆವಾಂತರ ತತ್ತ್ವಗಳಿಗೆ ಆಶ್ರಿತನಾಗಿದ್ದಾನೆ. ಅನಾದಿಪುರುಷನಾದ ರುದ್ರನು ಪಂಚಕೋಶಾತ್ಮಕನಾಗಿ ಪ್ರಕೃತಿಯನ್ನು ಉಪಭೋಗಿಸಲು ಅವಿದ್ಯಾತ್ಮಕನೆನಿಸಿದವನೇ ಪುರುಷ. ತ್ರಿಗುಣಗಳು ಮತ್ತು ಪಂಚಭೂತಗಳ ಪಂಚೀಕರಣದಿಂದ ಬ್ರಹ್ಮಾಂಡವೂ, ತ್ರಿಗುಣಗಳು ಮತ್ತು ಸೂಕ್ಷ್ಮೇಂದ್ರಿಯಗಳ ಸಮನ್ವಯ ವ್ಯವಸ್ಥೆಗಳಿಂದ

---

[7] ಶಿವತತ್ತ್ವರತ್ನಾಕರ – (ಸಂ) ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ್, ಸಂಪುಟ 1 ಮತ್ತು 2, – ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ – 1999.

ಪಿಂಡಾಂಡೋತ್ಪನ್ನವಾಗಿವೆ ಹೀಗೆ ಸಾಂಖ್ಯಾದಿಶಾಸ್ತ್ರಗಳನ್ವಯ ವ್ಯಷ್ಟಿ, ಸಮಷ್ಟಿಗಳು ಸಾಧಿತವಾಗಿವೆ. ಈ ಕಲ್ಲೋಲವು ವೇದ, ಆಗಮ, ಪುರಾಣ ಮತ್ತು ಅನಾದಿ ವೀರಶೈವಾಚಾರ ಗ್ರಂಥಗಳ ಆಧಾರದಿಂದ ಸಂಯೋಜಿಸಲ್ಪಟ್ಟಿರುವುದಾಗಿರುತ್ತದೆ.

**ಎರಡನೆಯ ಕಲ್ಲೋಲ**

ಪ್ರಸ್ತುತ ಕಲ್ಲೋಲವನ್ನು ಆರುನೂರ ನಲವತ್ತು ಶ್ಲೋಕಗಳಿಂದ ಎಂಟು ತರಂಗಗಳಲ್ಲಿ ನಿಬದ್ಧಗೊಳಿಸಲಾಗಿದೆ. ಪ್ರತಿಯೊಂದು ತರಂಗಗಳಿಗೂ ಪ್ರತ್ಯೇಕವಾದ ಶಿರೋನಾಮೆಗಳನ್ನು ನೀಡಲಾಗಿದೆ. 1.ಕಾಲಾಗ್ನಿರುದ್ರನರಕಕೂಷ್ಮಾಂಡರುದ್ರಲೋಕಾನುವರ್ಣನಮ್ 2.ನರಕಯಾತನ ಅನುವರ್ಣನಮ್ 3.ದುಷ್ಕರ್ಮ ಜನ್ಮರೋಗಾದಿ ಪ್ರಾಪ್ತಿದರ್ಶನಮ್ 4.ಸಪ್ತ ಪಾತಾಳಲೋಕ ವರ್ಣನಮ್ 5.ಮೇರುವರ್ಣನಮ್ 6.ಕೇಸರಾಚಲವರ್ಣನಮ್ 7.ನವಖಂಡವರ್ಣನಮ್ 8.ಶಾಕದ್ವೀಪಾದಿಕಟಾಹಾಂತವರ್ಣನಮ್.

**ಮೊದಲನೆಯ ತರಂಗ–** ನೂರುಕೋಟಿ ಯೋಜನ(ಒಂದು ಯೋಜನ=8ಕಿ.ಮೀ.) ವಿಸ್ತೀರ್ಣವುಳ್ಳ ಬ್ರಹ್ಮಾಂಡವು ಪಂಚವಿಂಶತಿ ತತ್ತ್ವಗಳ ಆಧಾರದಲ್ಲಿ ಶಿವನಿಂದ ಸೃಷ್ಟಿಸಲ್ಪಟ್ಟಿತು. ದೂರದಳತೆಯ ಪ್ರಮಾಣದ ಕೋಷ್ಟಕಗಳನ್ನು ತಿಳಿಸಲಾಗಿದೆ. ಈ ಗೋಲದ ಊರ್ಧ್ವ ಮತ್ತು ಅಧೋಭಾಗಗಳಲ್ಲಿ ಚತುರ್ದಶಲೋಕಗಳಿದ್ದು ನಂತರ ವೈಕುಂಠಲೋಕ, ಮತ್ತು ಶಿವಲೋಕಗಳಿವೆ. ಈ ಲೋಕಗಳೆಲ್ಲವೂ ಬ್ರಹ್ಮನ ಪ್ರಾಕೃತ ಮತ್ತು ವೈಕೃತಸೃಷ್ಟಿಗಳಿಂದಾಗಿವೆ. ಈ ಲೋಕಗಳು ವೈವಿಧ್ಯಮಯವಾಗಿವೆ. ನರಕ ಲೋಕಗಳಲ್ಲಿ ಕೂಷ್ಮಾಂಡನು ತನ್ನ ಭೂತಗಣಗಳಿಂದ ಪಾಪಾತ್ಮರ ಕರ್ಮಾನುಸಾರ ಶಿಕ್ಷಿಸುವ ವಿಧಾನಗಳು ಭಯಂಕರವಾಗಿವೆ.

**ಎರಡನೆಯ ತರಂಗ–** ಸುಘೋರ, ಅತಿಘೋರಾದಿ ಬೇಧಗಳಿಂದ ಇಪ್ಪತ್ತೆಂಟುಕೋಟಿ(ವಿಭಾಗ) ನರಕಗಳಿವೆ. ಇವುಗಳು ರೌರವ, ಮಹಾರೌರವ, ತಮಸ್ಸು, ಶೀತ, ಮತ್ತು ಉಷ್ಣಗಳೆಂಬ ವಾತಾವರಣಗಳಿಂದಿದ್ದು, ಐದು ಪ್ರಧಾನ ನಾಯಕರುಗಳಿಂದ ಕೂಡಿವೆ. ಈ ಲೋಕವು ಮಾನವರು ತಮ್ಮ ಜೀವಿತಾವಧಿಯಲ್ಲಿ ನಡೆಸಿದ ದುಷ್ಕೃತ್ಯ ಮತ್ತು ಪಾಪಕರ್ಮಗಳಿಗೆ ನೀಡುವ ಶಿಕ್ಷಾ ಸ್ಥಾನವಾಗಿರುತ್ತದೆ. ಭೀಕರವಾದ ಶಿಕ್ಷಾಸ್ಥಳಗಳಲ್ಲಿ ವೈವಿಧ್ಯಮಯವಾದ ಸಾಧನಗಳಿಂದ ನೀಡುವ ಶಿಕ್ಷೆಯು ಯಾತನಾಮಯವಾಗಿರುತ್ತದೆ. ಜನ್ಮಾಂತರಗಳಿಂದ ಕರ್ಮಾನುಸಾರವಾಗಿ ಪ್ರಾಪ್ತವಾದ ಪಾಪಗಳು ಮಾನವನ ಶರೀರದಲ್ಲಿ ನಿಶ್ಚಿತವಾದ ಪಾಪ ಚಿಹ್ನೆಯನ್ನು ಹೊಂದುತ್ತವೆ.

**ಮೂರನೆಯ ತರಂಗ–** ಗತಜೀವನದ ಪಾಪಕಾರ್ಯಗಳಿಗೆ ಜೀವಿಗಳು ಪಡೆಯುವ ಚಿಹ್ನೆಗಳೆಂದರೆ:– ಸಮಾಜದ್ರೋಹ–ಊನಾಂಗ, ಜೀವಹಾನಿ–ದೀರ್ಘಕಾಲಿಕರೋಗ, ಅತ್ಯಾಚಾರ–ಗುಹ್ಯರೋಗ,ಅಶೌಚಾಚರಣೆ–ಮಾನಸಿಕ ರೋಗ, ಇತ್ಯಾದಿ.,. ಪುರಾಣಾದಿ ಆಗಮಗಳ ಪ್ರಮಾಣದಂತೆ ಈ ಎಲ್ಲಪೀಡೆಗಳಿಂದ ಮುಕ್ತರಾಗಲು ಮಾನವನಿಗೆ ಶಿವನಾಮ ಸ್ಮರಣೆಯೊಂದೇ ಸೂಕ್ತಮಾರ್ಗವೆಂದು ತಿಳಿಸುವಲ್ಲಿಪರಿಹಾರೋಪಾಯವನ್ನು ಸೂಚಿಸಲಾಗಿದೆ.[8]

**ನಾಲ್ಕನೆಯ ತರಂಗ–** ಪಾತಾಳಾದಿ ಸಪ್ತಲೋಕಗಳ ವ್ಯಾಪ್ತಿ ಮತ್ತು ಮೇಲ್ಮೈಲಕ್ಷಣಗಳು ಯೋಜನಮಾನಗಳಲ್ಲಿವೆ. ಅಷ್ಟದಿಗ್ಗಜಗಳ ಸಹವರ್ತಿಯಲ್ಲಿರುವಂತೆ ಆದಿಶೇಷನ ಲಕ್ಷಣ ಮತ್ತು ಸ್ವರೂಪವನ್ನು ಲಕ್ಷಿಸಲಾಗಿದೆ. ಆದಿಶೇಷನು ಭೂದೇವಿಯನ್ನು ಕೂರ್ಮನ ಆಧಾರದಲ್ಲಿ ಶಿವಭಕ್ತಿಯಿಂದ ಹೊತ್ತಿದ್ದಾನೆ. ಹಿರಣ್ಯಾಕ್ಷಾದಿ ದೈತ್ಯರು ಮತ್ತು ದಿವ್ಯರಸಾಯನವನ್ನು ಪಡೆದ ಯೋಗಿಗಳು ಮುಂತಾದವರು ಭವ್ಯನಿವಾಸಗಳಲ್ಲಿ ಇಚ್ಛಾರೂಪಿಗಳಾಗಿ ಹಿತಕರವಾದ ಸೂರ್ಯಚಂದ್ರರ ಕಿರಣಗಳೊಂದಿಗೆ ವಾಸಿಸುತ್ತಿದ್ದಾರೆ.

**ಐದನೆಯ ತರಂಗ–** ಪಾತಾಳಲೋಕದ ಮೇಲ್ಭಾಗದಲ್ಲಿರುವ ಜಂಬೂದ್ವೀಪಾದಿ ಸಪ್ತದ್ವೀಪಗಳು ವಿಸ್ತಾರದಲ್ಲಿ ಒಂದಕ್ಕೊಂದು ದ್ವಿಗುಣವಾಗಿವೆ. ಜಂಬೂದ್ವೀಪವನ್ನು ಲವಣ ಸಮುದ್ರವು ಆವರಿಸಿದಂತೆ ಪ್ರತಿಯೊಂದು ದ್ವೀಪವೂ ಒಂದೊಂದು ಸಮುದ್ರಗಳಿಂದ ಸುತ್ತುವರೆಯಲ್ಪಟ್ಟಿವೆ. ಜಂಬೂದ್ವೀಪದ ಕೇಂದ್ರದಲ್ಲಿರುವ ಮೇರುಪರ್ವತದ ಪರ್ವತಾವಳಿಗಳಲ್ಲಿ ಅಮರಾವತ್ಯಾದಿ ಪಟ್ಟಣಗಳು ಅಷ್ಟದಿಕ್ಪಾಲಕರುಗಳಿಂದ ರಕ್ಷಿಸಲ್ಪಟ್ಟಿವೆ. ಪ್ರತಿಯೊಂದು ಪಟ್ಟಣವೂ ವಿಸ್ತಾರವಾಗಿದ್ದು ನಾಯಕರು, ವಾಹನಗಳು, ಪರಿಜನರು, ಅನುಚರರು, ದೇವತೆಗಳು, ಪತಾಕೆಗಳನ್ನು ಹೊಂದಿವೆ. ಶಿಖರ ಭಾಗದ ಪರ್ವತ ತ್ರಯಗಳಲ್ಲಿ ತ್ರಿಮೂರ್ತಿಗಳ ನಿವಾಸ.

**ಆರನೆಯ ತರಂಗ–** ಕೇಸರಾಚಲಪರ್ವತದಲ್ಲಿರುವ ವೃಕ್ಷ, ಪರ್ವತ, ಸರೋವರ ಮತ್ತು ನಿವಾಸಿಗಳ ವಿಶೇಷತೆ, ಭೌಗೋಳಿಕ ಸನ್ನಿವೇಶಗಳು ವರ್ಣಿಸಲ್ಪಟ್ಟಿವೆ. ಮೇರುಪರ್ವತದ ದಕ್ಷಿಣಕ್ಕೆ ಜಂಬೂದ್ವೀಪವಿದೆ. ಅರುಣೋದಯಾದಿ ಪರ್ವತಾವಳಿಗಳಲ್ಲಿ ಋಷಿ, ದೇವತೆಗಳು ನೆಲೆಸಿದ್ದಾರೆ. ಶ್ವೇತಾಗ್ರದಲ್ಲಿ ಇಂದ್ರನೂ,

---

[8] ಶಿವತತ್ತ್ವರತ್ನಾಕರ – ಸಂ: ಜಯದೇವಪ್ಪ ಜೈನಕೇರಿ, ಡಾ. ಜಗದೀಶ – ಮರುಳಸಿದ್ಧೇಶ್ವರ ವೀರಶೈವ ಅಧ್ಯಯನ ಕೇಂದ್ರ, ಕವಲೆದುರ್ಗ, ಶಿವಮೊಗ್ಗ.

ವಸುಧಾರದಲ್ಲಿ ವಿಷ್ಣುವೂ, ಶ್ರೀಪರ್ವತದಲ್ಲಿ ಲಕ್ಷ್ಮಿಯೂ ನೆಲೆಸಿದ್ದಾರೆ. ಏಕಶೃಂಗಗಿರಿಯಲ್ಲಿ ಜಿತೇಂದ್ರಿಯರಾದ ಪುಣ್ಯಾತ್ಮರು ಬ್ರಹ್ಮೋಪಾಸನೆಯಲ್ಲಿದ್ದಾರೆ. ಹಂಸಶೈಲದಲ್ಲಿ ವಾಮದೇವಾದಿಗಳು, ಪಂಚಶೈಲದಲ್ಲಿ ದಾನವರು ವ್ಯವಸ್ಥಿತರಾಗಿದ್ದಾರೆ.

**ಏಳನೆಯ ತರಂಗ–** ಜಂಬೂಫಲವು ಅಮೃತಸದೃಶವಾದುದು. ಈ ದ್ವೀಪವು ಉತ್ತರ, ದಕ್ಷಿಣ ಮತ್ತು ಮಧ್ಯಭಾಗ(ಮೇರುಪರ್ವತದ ಪರಿಸರ)ಗಳಿಂದ ಕೂಡಿದ್ದು ಪ್ರತಿಯೊಂದು ಭಾಗದಲ್ಲಿಯೂ ಮೂರು ಖಂಡಗಳಿರುವಂತೆ ಪರ್ವತಗಳಿಂದ ಪ್ರತ್ಯೇಕಿಸಲ್ಪಟ್ಟು ಸಮ ವಿಸ್ತೀರ್ಣದಿಂದ ಒಂಭತ್ತು ಖಂಡಗಳನ್ನು ಹೊಂದಿವೆ. ಇದರಂತೆ ಮೇರುಪರ್ವತದ ಪೂರ್ವ ಮತ್ತು ಪಶ್ಚಿಮ ಭಾಗಗಳಲ್ಲಿ ಅನೇಕ ಉಪಪರ್ವತಗಳು ಹಾಗೂ ದೇಶಗಳಿವೆ. ಈ ಪ್ರದೇಶಗಳ ಜನರು, ಉತ್ಕೃಷ್ಟತೆಯಲ್ಲಿ ಉತ್ತರೋತ್ತರವಾಗಿ ಉತ್ತಮರು. ಮೈನಾಕಪರ್ವತದ ಪೌರಾಣಿಕ ಹಿನ್ನಲೆ, ಹಿಮವತ್ಪರ್ವತ ಮತ್ತು ಇದರ ಉಪಪರ್ವತಗಳಲ್ಲಿನ ಪರಿಸರ, ಕುರುದೇಶದ ಸಮೃದ್ಧಿ, ಮಾಲ್ಯವತ್ ಪರ್ವತದ ಧಾರ್ಮಿಕತೆ, ಐರಾವತವರ್ಷದವರ ಸತ್ತ್ವ, ಇಲಾವೃತವರ್ಷದವರ ಚಿರಯೌವನ, ಮುಂತಾದ ವಿಷಯ ವೈವಿಧ್ಯತೆಯಿಂದ ಈ ತರಂಗವು ಮೂಡಿಬಂದಿದೆ.

**ಎಂಟನೆಯ ತರಂಗ:–** ಜಂಬೂ ದ್ವೀಪವು ಒಂದು ಲಕ್ಷಯೋಜನ ವಿಸ್ತೀರ್ಣವಾಗಿದ್ದರೆ ಮುಂದಿನ ದ್ವೀಪಗಳು ವಿಸ್ತೀರ್ಣದಲ್ಲಿ ಪರಸ್ಪರ ದ್ವಿಗುಣಾತ್ಮಕವಾಗಿದ್ದು ದ್ವೀಪ, ಪರ್ವತ, ನದಿಗಳು ಸಪ್ತಸಂಖ್ಯೆಗಳಿಂದಾವೃತವಾಗಿವೆ. ಶಾಕದ್ವೀಪ– ಪುಣ್ಯಪ್ರದವಾದ ಶಾಕವೃಕ್ಷಗಳ ಆಗರವಾಗಿದೆ. ಈ ದ್ವೀಪದ ಅಧಿಪತಿ ಹವ್ಯ. ಕುಶದ್ವೀಪ– ದೇವತೆಗಳಿಂದ ನಾಮಾಂಕಿತವಾಗಿ ಕುಶಸ್ತಂಭದಿಂದ ಶೋಭಾಯಮಾನವಾಗಿದೆ. ದ್ವೀಪಾಧಿಪತಿ ಜ್ಯೋತಿಷ್ಮಂತ. ಬ್ರಹ್ಮರೂಪೀ ಮಹೇಶ್ವರನು ಆರಾಧ್ಯ. ಕ್ರೌಂಚದ್ವೀಪ– ಕ್ರೌಂಚನೆಂಬ ರಾಕ್ಷಸನಿಂದ ಈ ಹೆಸರು ಬಂದಿದೆ. ಪುಷ್ಕರವೆಂಬ ಮೋಡಗಳಿಂದ ಪ್ರಸಿದ್ಧಿ. ಶಾಲ್ಮಲೀದ್ವೀಪ– ಶಾಲ್ಮಲೀ ಎಂಬ ಬೃಹದಾಕಾರದ ವೃಕ್ಷದಿಂದ ಪ್ರಸಿದ್ಧಿ. ಇಕ್ಷುಸಮುದ್ರದಿಂದಾವೃತವಾಗಿದೆ. ಗೋಮೇಧರಾಜನ ಹಾಗೂ ಗೌತಮರ ಕಥನಗಳಿವೆ. ಪ್ಲಕ್ಷ ದ್ವೀಪ:– ಮೇಧಾತಿಥಿಯು ದ್ವೀಪಾಧಿಪತಿ. ಪ್ಲಕ್ಷವೃಕ್ಷವಿರುವುದರಿಂದ ಈ ಹೆಸರು. ಜಗತ್ ಸೃಷ್ಟಿಕಾರನಾದ ಈಶ್ವರನ ಆವಾಸವಾಗಿದೆ. ಸುರತೋಯವೆಂಬ ಮಹಾಸಾಗರವು ಈ ದ್ವೀಪವನ್ನು ಆವರಿಸಿದೆ. ಪುಷ್ಕರ ದ್ವೀಪ:– ಈ ದ್ವೀಪವು ರುಚಿಯಾದ ನೀರನ್ನು ಹೊಂದಿದ ಮಹಾಸಾಗರದಿಂದಾವೃತವಾಗಿದ್ದು, ಮಧ್ಯದಲ್ಲಿ ಮಾನಸೋತ್ತರ

ಪರ್ವತವಿದೆ.[9] ಇವೆಲ್ಲವುಗಳಿಗಿಂತ ಅತಿರಿಕ್ತವಾದ ದ್ವೀಪವೆಂದರೆ ಶ್ವೇತ ದ್ವೀಪ ಇಲ್ಲಿ ಭಕ್ತಿ ಪರಾಯಣಾನ್ವಿತ ಮುನಿ–ಸನಕಾದಿ ದೇವತೆಗಳಿಗಳಿಗಷ್ಟೇ ಪ್ರವೇಶ ಲಭ್ಯ. ಮಾನಸೋತ್ತರ ಪರ್ವತದ ಹೊರತಾಗಿ ಇನ್ನ್ಯಾವುದೇ ನದಿ, ಪರ್ವತಗಳಿಲ್ಲದೆ, ಇಲ್ಲಿನ ನಿವಾಸಿಗಳು ಮುಕ್ತಾತ್ಮರು. ಭೂಮ್ಯಾತಿರಿಕ್ತ ಲೋಕಾಲೋಕ ಪರ್ವತವೇ ಹಗಲು ರಾತ್ರಿಯನ್ನು ನಿಯಮಿಸುವುದಾಗಿರುತ್ತದೆ. ಗ್ರಂಥಋಣ– ಮಹಾಭಾರತ, ವರಾಹ, ಕೂರ್ಮ, ಸ್ಕಂದ, ವಿಷ್ಣು, ಕುಮಾರೀಕಾಂಡ, ಶಿವಪುರಾಣಾದಿಗಳು. ಕಲ್ಲೋಲಾಂತ್ಯದಲ್ಲಿ ಬಸವಭೂಪಾಲನು ತನಗೆ ದೀಕ್ಷೆ ನೀಡಿದ ಗುರುಗಳಾದ ಶ್ರೀ ಚನ್ನವೀರದೇಶೀಕೇಂದ್ರರನ್ನು ಭಕ್ತಿಯಿಂದ ಸ್ಮರಿಸಿದ್ದಾನೆ.

**ಮೂರನೆಯ ಕಲ್ಲೋಲ**

ಈ ಕಲ್ಲೋಲದಲ್ಲಿ ಏಳು ತರಂಗಗಳಿದ್ದು ಆರುನೂರ ನಲವತ್ತೈದು ಶ್ಲೋಕಗಳಿವೆ. ತರಂಗಶೀರ್ಷಿಕೆಗಳು:– 1.ಮೇಘಾಶ್ರಯಗ್ರಹಲೋಕವರ್ಣನಮ್ 2.ಮೇಘಗರ್ಭವರ್ಣನಮ್ 3.ಗುಹ್ಯಾದಿಲೋಕಸೂರ್ಯನಾಥ ಗತಿವರ್ಣನಮ್ 4.ಸೂರ್ಯಾದಿಗತಿ ಭೇದನಿರೂಪಣಮ್ 5.ಸ್ವಹಃ–ಮಹಃ–ಜನಲೋಕವರ್ಣನಮ್ 6.ತಪೋಲೋಕ–ಸತ್ಯಲೋಕ–ವಿಷಲೋಕ ವರ್ಣನಮ್ 7.ಶಿವಲೋಕಾದಿ ಕಟಾಹಾಂತ ವರ್ಣನಮ್.

**ಮೊದಲನೆಯ ತರಂಗ**:– ಭೂಲೋಕಾದಿ ಸಪ್ತಲೋಕಗಳು ಒಂದುನೂರುಕೋಟಿ ಯೋಜನಗಳಿಂದ ಸಮಾವೃತವಾಗಿವೆ. ಇವು ಕ್ರಮವಾಗಿ ಮಾನವಾದಿ ಮರ್ತ್ಯರು, ಸಿದ್ಧಾದಿ ಮುನಿಪುಂಗವರು, ದೇವತೆಗಳು, ಮರೀಚ್ಯಾದಿ ಮುನಿಗಳು, ಪಿತೃದೇವತೆಗಳು, ಭೃಗ್ವಾದಿಯೋಗಿಗಳು, ವಿಷ್ಣುಮಹೇಶ್ವರರು ನೆಲೆಸಿದ್ದಾರೆ. ಬ್ರಹ್ಮನ ಆಯುಃ ಪ್ರಮಾಣದನ್ವಯ ಕೃತ ಮತ್ತು ಅಕೃತ ಲೋಕಗಳೆನಿಸಿವೆ. ಶಿಂಶುಮಾರನು ಅಂತರಿಕ್ಷಸ್ಥಿತ ವಿದ್ಯಮಾನಗಳಿಗೆಲ್ಲ ಆಧಾರವಾಗಿದ್ದಾನೆ. ಈತನ ಆಶ್ರಯದಲ್ಲಿ ವಾಯುಸ್ಕಂಧಗಳಿದ್ದು, ವಿವಿಧ ಗ್ರಹನಕ್ಷತ್ರಾದಿಗಳ ಅಂತರವನ್ನು ಆವಹಾದಿ ವಾಯುಗಳಿಂದ ಸೂಚಿಸಲ್ಪಟ್ಟಿವೆ. ಸರ್ವಾಯುಧಯುಕ್ತನಾದ ಶಿವನು ಉಪಸ್ಥಿತನಾಗಿದ್ದಾನೆ. ಅನಿರ್ದಿಷ್ಟ ಗ್ರಹಗಳು ಸರ್ವತ್ರ ವ್ಯಾಪಿಸಲ್ಪಟ್ಟು ಶಕ್ತಿವಿಶೇಷಗಳಿಂದ ಬಲಯುತವಾಗಿರುತ್ತವೆ. ಋಣಾತ್ಮಕಭಾವದವು ಪಾಪಿಗಳನ್ನು ಶಿವನ ಅಣತಿಯಂತೆ ಸೆರೆ ಹಿಡಿಯಲು ಸಮರ್ಥವಾಗಿರುತ್ತವೆ. ಮೇಘಕಾರಕಗಳ ತಾಣಗಳೇ ಮೇಘಲೋಕ. ಭೂಮಿಯಿಂದ ಕೇವಲ ಹನ್ನೆರಡು ಯೋಜನಾಂತರದಲ್ಲಿವೆ. ವಿವಿಧ ಮೇಘಗಳ ವರ್ಣನೆಯಿದೆ. ಕಾಷ್ಟಜ್ಯೋತ್ಯಾದಿ ಮೇಘಗಳು

[9] ಶಿವತತ್ತ್ವರತ್ನಾಕರ – ಸಂ: ಜಯದೇವಪ್ಪ ಜೈನಕೇರಿ, ಡಾ. ಜಗದೀಶ – ಮರುಳಸಿದ್ಧೇಶ್ವರ ವೀರಶೈವ ಅಧ್ಯಯನ ಕೇಂದ್ರ, ಕವಲೆದುರ್ಗ, ಶಿವಮೊಗ್ಗ.

ವೈವಿಧ್ಯಮಯವಾಗಿ ಉತ್ಪತ್ತಿಯಾಗಿ ಉದ್ವಹಾದಿ ವಾಯುಸ್ಕಂಧಗಳನ್ನು ತಲುಪುತ್ತವೆ. ಹೋಮಧೂಮಾದಿ ಮೇಘಗಳು ಲೋಕಹಿತ ಕಾರಕಗಳಾಗಿದ್ದರೆ ಅಂತ್ಯೇಷ್ಟ್ಯಾದಿ ಧೂಮಗಳು ಹಿತಕಾರಕಗಳಲ್ಲ. ಪುಷ್ಕರ ಮೇಘಗಳು ಸಮುದ್ರಗಳಾಗಲು ಕಾರಣವೆನಿಸಿವೆ.

**ಎರಡನೆಯ ತರಂಗ–** ಮೇಘ ಗರ್ಭದ ಉತ್ಪತ್ತಿಯ ವೈವಿಧ್ಯಕ್ಕೆ ಅನುಗುಣವಾಗಿ ಇವುಗಳ ಬಣ್ಣ ಹಾಗೂ ನೀರಿನ ಸಾಂದ್ರತೆಗಳು ಅವಲಂಬಿಸಿರುತ್ತವೆ. ಮಳೆ ಸುರಿಯುವ ಮಾಸಗಳನ್ವಯ ಸಸ್ಯಗಳ ಶುಭಾಶುಭಗಳು ನಿರ್ಣೀತವಾಗುತ್ತವೆ. ಇದರಂತೆ ತಿಥಿ–ಪಕ್ಷ–ನಕ್ಷತ್ರಯೋಗಗಳಿಂದ ಜಲಗರ್ಭವನ್ನು ಗುರುತಿಸಬಹುದಾಗಿದೆ. ಮಿಂಚುಗಳು ಮೋಡಗಳ ದಾರಿದೀಪಗಳಾಗಿ, ಮಳೆಯೋಗ, ನಾಡಿನ ಸ್ಥಿತಿಗತಿ ಮುಂತಾದವುಗಳ ಸೂಚಕಗಳಾದಂತೆ, ಮಳೆಯ ನಿರ್ವಾಹಕರೆನಿಸಿವೆ. ಆವರ್ತ, ಸಂವರ್ತಾದಿ ಒಂಭತ್ತು ಮಹಾಮೇಘಗಳಿವೆ. ವಿವಿಧ ಮಾಸಗಳ ಮಳೆಪ್ರಮಾಣಗಳಿಗೆ ಗ್ರಹ ನಕ್ಷತ್ರಗಳ ಯೋಗವನ್ನವಲಂಬಿಸಿರುತ್ತವೆ.

**ಮೂರನೆಯ ತರಂಗ–** ಗುಹ್ಯಲೋಕ– ಸಮಾಜದ ಸೇವೆಯನ್ನು ಪ್ರತಿಫಲಾಪೇಕ್ಷೆಯಿಲ್ಲದೆ ನಿರ್ವಂಚನೆಯಿಂದ ಮಾಡಿದವರು ಗುಹ್ಯರು. ತಮ್ಮ ಪುಣ್ಯಶೇಷದಿಂದ ಈ ಲೋಕವನ್ನು ಪಡೆದವರಾಗಿರುತ್ತಾರೆ. ಗಂಧರ್ವಲೋಕ:– ಭೂಲೋಕದಲ್ಲಿ ಸಂಗೀತಾರಾಧನೆಯಲ್ಲಿ ತೊಡಗಿ ದಾನಧರ್ಮಾದಿಗಳನ್ನು ಮಾಡಿದವರಿಗೆ ಗಂಧರ್ವತ್ವ ಪ್ರಾಪ್ತಿ. ಗಂಧರ್ವಜಾತಿಯಲ್ಲಿ ಅನೇಕಭೇದಗಳಿವೆ. ವಿದ್ಯಾಧರ ಲೋಕ:– ಈ ಲೋಕವು ದೇವತೆಗಳಿಂದ ವರ ಪಡೆದವರ ಸ್ಥಾನವಾಗಿರುತ್ತದೆ. ಚಂದ್ರಾಪೀಡ ರಾಜನು ಇಂತಹ ಲಕ್ಷ ಸಂಖ್ಯಾತರೊಂದಿಗೆ ನೆಲೆಸಿರುವವನಾಗಿದ್ದಾನೆನ್ನಲಾಗಿದೆ. ಅಪ್ಸರ ಲೋಕ:– ಮಹಾವ್ರತಾಚರಣೆ ಮತ್ತು ದೇಶರಕ್ಷಣಾರ್ಥವಾಗಿ ಜೀವನವನ್ನು ಅರ್ಪಿಸಿದವರಿಗೆ ಈ ಲೋಕ ಪ್ರಾಪ್ತಿ. ಇಲ್ಲಿ ರಂಭೋರ್ವಶಿ ಮುಂತಾದ ಅಪ್ಸರೆಯರು ಸಂಗೀತನೃತ್ಯಗಳಲ್ಲಿ ನಿಪುಣರಾಗಿ, ಅಪರಿಮಿತವಾದ ಲೋಕಜ್ಞಾನದಿಂದ ಇಚ್ಛಾಶರೀರಿಗಳಾಗಿ ದಿವ್ಯಭೋಗಭಾಗ್ಯಾದಿಗಳನ್ನು ಹೊಂದಿದವರಾಗಿದ್ದಾರೆ. ಸೂರ್ಯಮಂಡಲ:– ಭೂಮಿಯಿಂದ ಸರಿಯಾಗಿ ಒಂದು ಲಕ್ಷಯೋಜನ ದೂರದಲ್ಲಿದೆ. ಸೂರ್ಯನ ರಥ ಮತ್ತು ಇದರ ಭಾಗಗಳ ವ್ಯಾಪಿಯು ಯೋಜನ ಪ್ರಮಾಣಗಳಲ್ಲಿವೆ. ಸಪ್ತಾಶ್ವಗಳು ತ್ರಿಸಪ್ತಕ ಛಂದಸ್ಸಿನ ಪ್ರಥಮ ಗಣದ ಹೆಸರುಗಳನ್ನು ಹೊಂದಿವೆ. ಸೂರ್ಯನು ಉದಯಾಸ್ತಗಳಿಲ್ಲದವನು. ದಕ್ಷಿಣೋತ್ತರ ಸಂಚಲನದಿಂದ ದಿನಮಾನಾದಿಗಳು ಗಣಿಸಲ್ಪಡುತ್ತವೆ. ಜ್ಯೋತಿಶ್ಶಾಸ್ತ್ರ ಮತ್ತು ಸಂಧ್ಯೋಪಾಸನೆಗಳಿಗೆಲ್ಲ ಈತನೇ ಆಧಾರ. ಹಗಲು–ರಾತ್ರಿಗಳ ಮಧ್ಯಕಾಲವು ಅರ್ಘ್ಯಪ್ರಧಾನದ ಸಂಧ್ಯಾಕಾಲವೆನಿಸಿ ಸೂರ್ಯನ **'**ವಾಲಖಿಲ್ಯಾದಿಮುನಿಗಮನಪ್ರಸ್ಥಾನ**'**ವೆನ್ನಲಾಗುತ್ತದೆ.

**ನಾಲ್ಕನೆಯ ತರಂಗ:–** ಸೂರ್ಯನ ಸಂಚಲನದಿಂದ ಕಾಲಬೇಧಗಳುಂಟಾಗುತ್ತವೆ. ಸೂರ್ಯ ಮತ್ತು ಚಂದ್ರಗ್ರಹಣಗಳನ್ನು ವೈಜ್ಞಾನಿಕವಾಗಿ ಮುಂಚಿತವಾಗಿ ತಿಳಿಯಬಹುದಾಗಿರುತ್ತವೆ. ಸೂರ್ಯಕಿರಣಗಳು ಶೈತ್ಯ, ವರ್ಷ ಮತ್ತು ಉಷ್ಣಕಿರಣಗಳಿಂದಿದ್ದು ಅವಾಂತರಭೇದಗಳಿಂದ ಕೂಡಿವೆ. ಅಗ್ನ್ಯಾದಿ ಪಿತೃಗಣಗಳು ಚಂದ್ರಕಲೆಗಳನ್ನು ಪಾನಮಾಡುತ್ತಾರೆ. ನಕ್ಷತ್ರ ಮತ್ತು ಗ್ರಹಗಳ ನಡುವಿನ ದೂರವನ್ನು ಜ್ಯೋತಿಶಾಸ್ತ್ರದಿಂದ ತಿಳಿಯಲಾಗಿದೆ. ಸಪ್ತರ್ಷಿಮಂಡಲವು ಇವುಗಳಿಂದಾಚೆಗಿದೆ. ಧ್ರುವನಕ್ಷತ್ರ ದರ್ಶನವು ಶ್ರೇಯಸ್ಕರವೆನಿಸಿದೆ.

**ಐದನೆಯತರಂಗ:–** ನಕ್ಷತ್ರ ಮಂಡಲದಿಂದಾಚೆಗಿರುವ ಧ್ರುವಪ್ರದೇಶಗಳ ತುದಿಯ ಮೇಲ್ಭಾಗದಿಂದ ಹದಿನೈದು ಲಕ್ಷ ಯೋಜನಾಂತರದಲ್ಲಿ ಭುವರ್ಲೋಕವಿದೆ. ಸರ್ಪಾದಿ ಪಕ್ಷಿ, ಯಕ್ಷ, ರಾಕ್ಷಸ, ಪುಣ್ಯಾತ್ಮರು ಇಲ್ಲಿನ ನಿವಾಸಿಗಳು. ಸ್ವರ್ಲೋಕವು ಭುವರ್ಲೋಕಕ್ಕಿಂತ ಎಂಭತ್ತೈದುಲಕ್ಷ ಯೋಜನಗಳ ದೂರದಲ್ಲಿದ್ದು ಅಮರಾವತ್ಯಾದಿ ಅಷ್ಟಪುರಗಳ ನಾಯಕರು ತಮ್ಮ ಅನುಚರರಿಂದಲೂ ಸರ್ವಸಂಪತ್ತಿನಿಂದಲೂ ಪೂಜನೀಯರಾಗಿದ್ದಾರೆ. ಇಲ್ಲಿ ದಿವ್ಯ ಹಾಗೂ ಭವ್ಯವಸ್ತುಗಳು ಸಮಾವೇಶಿತವಾಗಿ ಮೂರ್ತಸ್ವರೂಪವನ್ನು ಪಡೆದಿರುವುದು ವಿಶೇಷ. ಇಲ್ಲಿನ ನಿವಾಸಿಗಳು ಪುಣ್ಯಪ್ರದಾಯಕರಾಗಿದ್ದಾರೆ. ಮಹರ್ಲೋಕವು ಸ್ವರ್ಲೋಕದಿಂದ ಎರಡು ಕೋಟಿ ಯೋಜನಾಂತರದಲ್ಲಿದೆ. ಪರಶಿವನು ಮಾರ್ಕಂಡೇಯ, ಮರೀಚಿ ಮುಂತಾದವರಿಂದ ಪೂಜಿಸಲ್ಪಡುತ್ತಿದ್ದಾನೆ. ಜನಲೋಕವು ಮಹರ್ಲೋಕದಿಂದ ಎಂಟುಕೋಟಿ ದೂರದಲ್ಲಿದೆ. ವಶಿಷ್ಠಾದಿ ಗೋತ್ರಪ್ರವರ್ತಕರೆಲ್ಲರೂ ಪಿತೃದೇವತೆಗಳೊಂದಿಗೆ ಸ್ಥಾನವನ್ನು ಪಡೆದಿದ್ದಾರೆ.

**ಆರನೆಯ ತರಂಗ–** ತಪೋಲೋಕವು ಜನಲೋಕದಿಂದ ಹನ್ನೆರಡು ಕೋಟಿ ಯೋಜನ ದೂರದಲ್ಲಿದ್ದು 'ಸಾಧ್ಯ'ರೆಂಬ ದೇವತೆಗಳು, ಸನಕಸನತ್ಕುಮಾರಾದಿಯಾಗಿ ನೆಲೆಸಿದ್ದಾರೆ. ಸತ್ಯಲೋಕವು ತಪೋಲೋಕದಿಂದ ಎಂಟುಕೋಟಿ ದೂರದಲ್ಲಿದೆ. ಬ್ರಹ್ಮಲೋಕವು ಸತ್ಯಲೋಕದ ಮೇಲಿದೆ. ಚತುರ್ಮುಖಬ್ರಹ್ಮನು ಸರಸ್ವತಿಯೊಡನೆ ಸಕಲ ಜ್ಞಾನಶಾಖೆಗಳೊಂದಿಗೆ ಪೂಜಿಸಲ್ಪಟ್ಟಿದ್ದಾನೆ. ಸರ್ವಲೋಕಾಧಿಪತಿಗಳು ಪರಬ್ರಹ್ಮ ವಿಶೇಷ ಚಿಂತನಾಕಲಾಪಗಳಲ್ಲಿ ಉಪಸ್ಥಿತರಾಗುತ್ತಾರೆ. ಈ ಲೋಕದ ಊರ್ಧ್ವ ಭಾಗದಲ್ಲಿ ವಿಷ್ಣುಲೋಕವು ನಾಲ್ಕುಕೋಟಿ ಯೋಜನ ದೂರದಲ್ಲಿದೆ. ಭಕ್ತಾದಿಗಳು ವಿಷ್ಣುಸಿದ್ಧಿಯನ್ನು ಹೊಂದಿ ಇವನನ್ನು ಪೂಜಿಸುತ್ತಾರೆ.

**ಏಳನೆಯ ತರಂಗ–** ಶಿವಲೋಕವು ವಿಷ್ಣು, ಷಣ್ಮುಖ, ಉಮಾಲೋಕಗಳೆಲ್ಲದರ ಮೇಲಿನ ಲೋಕವಾಗಿದೆ. ಶಿವಲೋಕವು ಸರ್ವಶಾಸ್ತ್ರ, ವಿಚಾರ, ವಿಶೇಷಗಳೆಲ್ಲದರ ಭೂಯಿಷ್ಠಾತ್ಮಕವಾಗಿದೆ. ಸಮಸ್ತಲೋಕ ನಾಯಕರಿಗೆಲ್ಲ ಶಿವನೇ ಆರಾಧ್ಯದೈವ. ಜೀವವೈವಿಧ್ಯ ಮತ್ತು ಸಮಸ್ತ ಲೋಕಪರಿವಾರಗಳೆಲ್ಲವೂ ಒಬ್ಬೊಬ್ಬ

ಪ್ರತಿನಿಧಿಗಳಿಂದ ನಿಯಮಿಸಲ್ಪಟ್ಟಿವೆ. ಕೋಟಿಕೋಟಿ ಬ್ರಹ್ಮಾಂಡಗಳು ಅತ್ತಿಹಣ್ಣುಗಳಂತೆ ಶಿವನ ವಿವಿಧ ಅಂಗಗಳಲ್ಲಿ ಅಲಂಕೃತಗೊಂಡಿವೆ.[10] ಸಮಸ್ತಲೋಕಗಳಲ್ಲೂ ಈತನ ಸಂಚಾರವಿದ್ದು ವಿಷ್ಣು ಸಹಿತ ದೇವಾಧಿ ದೇವತೆಗಳನ್ನೆಲ್ಲ ಕಾಪಾಡುವವನೆನಿಸಿದ್ದಾನೆ. ಗ್ರಂಥಋಣ:–ವರಾಹ–ಕೂರ್ಮ–ಸ್ಕಾಂದವಿಷ್ಣು–ಶಿವಪುರಾಣ, ಮಹಾಭಾರತ, ಕುಮಾರೀಕಾಂಡ.

**ನಾಲ್ಕನೆಯ ಕಲ್ಲೋಲ**

ಈ ಕಲ್ಲೋಲದಲ್ಲಿ ಒಟ್ಟು ಹನ್ನೆರಡು ತರಂಗಗಳಿದ್ದು ಶ್ಲೋಕಗಳ ಸಂಖ್ಯೆ ಒಂದು ಸಾವಿರದ ಒಂದುನೂರ ನಲವತ್ತೆರೆಡು. ತರಂಗಗಳಿಗೆ ನೀಡಲಾಗಿರುವ ಶಿರೋನಾಮೆಗಳು– 1.ನದಿದೇಶಾದಿ ವರ್ಣನೆ 2.ಪ್ರಧಾನದೇಶ–ಶೈಲ–ತೀರ್ಥಕ್ಷೇತ್ರ ವರ್ಣನೆ 3.ಯುಗಕಲ್ಪವ್ಯವಸ್ಥೆ ಹಾಗೂ ಶಾಕಾಧಿಪತಿಗಳ ವರ್ಣನೆ 4.ಚಾತುರ್ವರ್ಣ್ಯ ಮತ್ತು ಬ್ರಹ್ಮಚಾರಿಧರ್ಮವರ್ಣನೆ 5.ಗೃಹಸ್ಥ–ವಾನಪ್ರಸ್ಥ–ಸಂನ್ಯಾಸಧರ್ಮವರ್ಣನೆ 6.ವರ್ಣಾಶ್ರಮಗಳ ಸಾಧಾರಣಧರ್ಮಗಳು ಮತ್ತು ಸ್ವರೂಪನಿರೂಪಣೆ 7.ಪ್ರಾಯಶ್ಚಿತ್ತನಿರೂಪಣೆ 8.ನಂದ್ಯಾವತಾರ ವೃತ್ತಾಂತ 9.ಬಸವೇಶ್ವರಾವತಾರ ವೃತ್ತಾಂತ 10.ಕಲಿಧರ್ಮ ವರ್ಣನೆ 11.ಕಲಿಯುತ್ಪತ್ತಿ ನಿರೂಪಣೆ 12.ನರಪತಿ ಸಿಂಹಾಸನವೃತ್ತಾಂತ ವರ್ಣನೆ.

**ಮೊದಲನೆಯ ತರಂಗ– 'ಭರತ'** ಶಬ್ದದ ವ್ಯುತ್ಪತ್ತಿಕ್ರಮ, ಭಾರತವರ್ಷದಲ್ಲಿರುವ ದ್ವೀಪಗಳ ಸಂಖ್ಯೆ, ಇವುಗಳ ವಿಸ್ತಾರ, ಸಮುದ್ರ, ಪರ್ವತಗಳ ಉತ್ಪತ್ತಿ ಕ್ರಮಗಳನ್ನು ತಿಳಿಸಲಾಗಿದೆ. ಕನ್ಯಾದ್ವೀಪವು ಇದರ ನಾಮಾಂತರ. ಸ್ವರ್ಗ ಮೋಕ್ಷಗಳ ಹೇತೋಪಾಯವು ಕರ್ಮದಿಂದ ಸಿದ್ಧಿ ಹಾಗಾಗಿ ಇದು ಕರ್ಮಭೂಮಿ. ಇಲ್ಲಿರುವ ಸಪ್ತಪರ್ವತಗಳು ಮತ್ತು ಉಪಪರ್ವತಗಳ ಮಡಿಲು ಆರ್ಯಾದಿ ಜನಾಂಗಗಳಿಗೆ ಆಶ್ರಯ ತಾಣವಾಗಿದೆ. ಇಲ್ಲಿರುವ ನದಿ ಹಾಗೂ ಪ್ರದೇಶಗಳನ್ನು ಪ್ರಸ್ತುತ ಮತ್ತು ಪುರಾತನ ಹೆಸರುಗಳಿಂದ ಗುರುತಿಸಲಾಗಿದೆ.

**ಎರಡನೆಯ ತರಂಗ:–** ಕನ್ಯಾದ್ವೀಪದಲ್ಲಿ ಪ್ರಸಿದ್ಧಿಯಾಗಿರುವ ಅಂಗವಂಗಾದಿ ಐವತ್ತಾರು ದೇಶಗಳು ಕೋಲಾಹಲವೈಭ್ರಾಜಾದಿ ಪುರಾಣ ಪ್ರಸಿದ್ಧ ಕುಲಪರ್ವತಗಳ ತಪ್ಪಲಿನಲ್ಲಿವೆ. ಗಂಗಾದಿ ಹಲವಾರು ನದಿಗಳು ಹಿಮಾಲಯಾದಿ ಪರ್ವತಗಳಲ್ಲಿ ಉಗಮಿಸಿ ಜೀವಜಂತುಗಳಿಗೆ ಉಪಕೃತವಾಗಿವೆ. ಪ್ರಾಜ್ಞರು

---

[10] ಶಿವತತ್ತ್ವರತ್ನಾಕರ – (ಸಂ) ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ್, ಸಂಪುಟ 1 ಮತ್ತು 2, – ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ – 1999. (3–7–66)

ನೆಲೆಸಲು ಪ್ರಶಸ್ತವಾದ ಸ್ಥಳ, ಪುಣ್ಯಕ್ಷೇತ್ರ, ಧರ್ಮದೇಶ, ಜನಸಮುದಾಯ ಮತ್ತು ಪುಣ್ಯಾರಣ್ಯಗಳಿಂದ ಕೂಡಿದ ಭಾರತವರ್ಷದ ವರ್ಣನೆ ಇದೆ.

**ಮೂರನೆಯ ತರಂಗ :–** ಸೂರ್ಯ, ಚಂದ್ರ ಹಾಗೂ ನಕ್ಷತ್ರಗಳ ಯೋಗಗಳನ್ವಯ ಕಾಲವು ಬ್ರಾಹ್ಮಾದಿ ಒಂಭತ್ತು ಪ್ರಕಾರಗಳಲ್ಲಿವೆ. ಆದರೆ ಈ ಕಾಲಗಣನೆಯು ಮಾನಂಂಷಂ, ಪಿತೃ ಮತ್ತು ದೈವಮಾನಗಳಲ್ಲಿ ಬೇರೆ ಬೇರೆ ಯಾಗಿರುತ್ತವೆ. ಯುಗಗಳನ್ನು ದಿವ್ಯಮಾನಗಳಲ್ಲಿ ಗಣಿಸಲಾಗುತ್ತದೆ. ಯುಗಗಳು ಪರಸ್ಪರ ವ್ಯತ್ಯಸ್ತವಾಗಿರುತ್ತವೆ. ಪ್ರತಿ ಯುಗಗಳಲ್ಲಿಯೂ ಅನೇಕ ಶಕಪುರುಷರು, ತೀರ್ಥಕ್ಷೇತ್ರಗಳು, ಧರ್ಮ–ಧರ್ಮಶಾಸ್ತ್ರಗಳು ಮತ್ತು ದೇವತೆಗಳ ಪ್ರಭಾವಗಳು ಒಂದೊಂದು ಮಹತ್ತ್ವವೆನಿಸಿವೆ. ಕ್ರಿಮಿಕೀಟಾದಿ ಸಕಲ ಜೀವವೈವಿಧ್ಯಗಳ ಆಯುಃ ಪ್ರಮಾಣಗಳು ಪ್ರಾಜ್ಞರಿಂದ ಗುರುತಿಸಲ್ಪಟ್ಟಿರುವುದು ಉಲ್ಲಿಖಿತವಾಗಿವೆ.

**ನಾಲ್ಕನೆಯ ತರಂಗ :–** ಚಾತುರ್ವರ್ಣ್ಯ ಪದ್ಧತಿಗಳು ಶ್ರೇಯಸ್ಸಾಧಕಗಳೆನಿಸಿ, ವರ್ಣೋಚಿತವಾಗಿ ಆಚರಿಸಬೇಕಾದ ಸ್ವಕರ್ಮಗಳಿಂದ ಪೂರಿತವಾಗಿವೆ. ವೈಶ್ಯೋಚಿತ ವಾಣಿಜ್ಯೋಪಕರಣಗಳು ಲೌಕಿಕ ವ್ಯವಹಾರಗಳಿಗೆ ಅನುಕೂಲಕರವೆನಿಸಿವೆ. ಉತ್ತಮ ಭೂಮಿ, ನೀರಿನ ಆಶ್ರಯ, ಬಿತ್ತನೆಗಾಗಿ ಧಾನ್ಯ ಮತ್ತು ಉಳುಮೆ ಹಾಗೂ ಸಾಗಾಟಕ್ಕಾಗಿ ಗೋಸಂತಾನಗಳೆಂಬ ನಾಲ್ಕು ಸಾಧನಗಳು ಕೃಷಿಕಾರ್ಯಕ್ಕೆ ಮುಖ್ಯವಾದವುಗಳೆನಿಸಿವೆ. [11] ಗೋದ್ವಿಜದೇವತಾಸೇವೋಪಪವೃತ್ತಿಗಳು ಶೂದ್ರಧರ್ಮವೆನಿಸಿ ಮೇಲಿನ ಆಶ್ರಮಗಳಿಗೆ ಸಹಾಯಕರೆನಿಸಿವೆ. ಚತುರಾಶ್ರಮ ಪದ್ಧತಿಗನುಗುಣವಾಗಿ ಜೀವಿಸುವ ಪರಿಪಾಠವಿದೆ. ಪ್ರತಿಯೊಂದು ಆಶ್ರಮಗಳೂ ತಮ್ಮದೇ ಆದ ವಿಧಿವಿಧಾನಗಳಿಂದ ರೂಪಿತವಾಗಿದ್ದು ವೈಶಿಷ್ಟ್ಯಪೂರ್ಣವೆನಿಸುತ್ತದೆ. ತ್ರಿವರ್ಣಿಗಳಾದ ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯರುಗಳು ಅನುಸರಿಸುವ ಸಂಸ್ಕಾರಗಳು ವೈಶಿಷ್ಟ್ಯಪೂರ್ಣವಾಗಿರುತ್ತದೆ. ಬ್ರಹ್ಮಚರ್ಯಾಶ್ರಮವು ಮೂಲಾಧಾರವೆನಿಸಿದ್ದರಿಂದ ಬ್ರಹ್ಮಚಾರಿಯು ಕರ್ಮಭೂಮಿಯಾಗಿರುವುದರಿಂದ ಮಾಡಿದ ಕರ್ಮಗಳೆಲ್ಲವೂ ನಿಷ್ಫಲವೆನಿಸುವುದರಿಂದ ಸುಶೀಲವ್ಯಕ್ತಿತ್ವ ನಿರ್ಮಾಣದ ಭೂಮಿಕೆಯ ಮಹತ್ತ್ವವನ್ನು ಸಾರಲಾಗಿದೆ.

**ಐದನೆಯ ತರಂಗ:–** ಗೃಹಸ್ಥಾಶ್ರಮ– ಮಿಕ್ಕೆಲ್ಲಾ ಆಶ್ರಮಗಳಿಗೂ ಆಧಾರಭೂತವಾಗಿದ್ದು, ಪಂಚಯಜ್ಞಗಳು ಗೃಹಸ್ಥಧರ್ಮಕ್ಕೆ ಕರ್ತವ್ಯವೆನಿಸಿವೆ. ಯುಕ್ತ ಸಮಯಗಳಲ್ಲಿ ಔಪಾಸನಾಗ್ನಿ, ಪಿತೃಶ್ರಾದ್ಧ ಮತ್ತು ಉತ್ತಮ ಸಂತಾನವನ್ನು ಹೊಂದುವುದು ಗೃಹಸ್ಥನ ಕರ್ತವ್ಯವಾಗಿರುತ್ತದೆ. ಗೃಹಸ್ಥರು ಯತಾಮೃತಾದಿ ಪಂಚವಿಧ

---

[11] ಶಿವತತ್ತ್ವರತ್ನಾಕರ – (ಸಂ) ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ್, ಸಂಪುಟ 1 ಮತ್ತು 2, – ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ – 1999. (4-4-21)

ವೃತ್ತಿಗಳಲ್ಲಿ ತೊಡಗಬಹುದಾಗಿರುತ್ತದೆ. ವಾನಪ್ರಸ್ಥಾಶ್ರಮ– ಔದುಂಬರಾದಿ ನಾಲ್ಕು ವಿಧ ವಾನಪ್ರಸ್ಥ ಪದ್ಧತಿಗಳಿವೆ. ಅರಣ್ಯೋತ್ಪನ್ನಗಳಲ್ಲಿಯೇ ತಮ್ಮ ಸಂಪೂರ್ಣ ಅವಶ್ಯಕತೆಗಳನ್ನು ಪೂರೈಸಿಕೊಳ್ಳಬೇಕು. ಸಂನ್ಯಾಸಾಶ್ರಮ– ಸಮಸ್ತ ವಸ್ತುಗಳಲ್ಲಿ ವೈರಾಗ್ಯ ಪ್ರವೃತ್ತಿಯಾದಾಗ ವಿದ್ವಾಂಸನು ಸಂನ್ಯಾಸವನ್ನು ಸ್ವೀಕರಿಸಿ, ಅಶನವಸನಾದಿಗಳಲ್ಲಿ ನಿರಾಸಕ್ತನಾಗಿ ಶಮದಮಾದಿಗುಣಗಳಿಂದ ಶಾಂತನೂ ಸಂಪನ್ನನೂ ಆಗಿ ತೀರ್ಥ, ಆಶ್ರಮಾದಿ ಒಂಭತ್ತು ವಿಧಗಳಲ್ಲೊಂದರಲ್ಲಿ ನಾಮಾಂಕಿತನಾಗಿ 'ಯತಿ'ಯೆನಿಸುತ್ತಾನೆ. ಈ ಹಂತದಲ್ಲಿ ಕೇವಲ ವೇದಾಂತವಷ್ಟೇ ಅಧ್ಯಯನದ ವಸ್ತುವಾಗಿರಬೇಕು. ಲೌಕಿಕಶಾಸ್ತ್ರಾಧ್ಯಯನಗಳು ನಿಷೇದಿಸಲ್ಪಟ್ಟಿರುತ್ತವೆ. ಕುಟೀಚಕಾದಿ ಚತುರ್ವಿಧ ಸಂನ್ಯಾಸಿಗಳ ಜೀವನ ಕ್ರಮಗಳು ವೈವಿಧ್ಯಮಯವಾಗಿವೆ.

**ಆರನೆಯ ತರಂಗ:**–ಶುಚಿತ್ವದಿಂದಲೇ ದ್ವಿಜತ್ವ ಪ್ರಾಪ್ತಿ. ಚತುರ್ವರ್ಣೀಯರಿಗೂ ಶೌಚಕ್ರಿಯೆ ಅನಿವಾರ್ಯ. ಶೌಚವಿಲ್ಲದ ಅನುಷ್ಠಾನಾದಿಗಳು ನಿಷ್ಪ್ರಯೋಜಕ.ಜಪಾನುಷ್ಠಾನಗಳು ಆಶ್ರಮಿಗಳನ್ವಯ ವ್ಯತಿರಿಕ್ತವಾಗಿರುತ್ತವೆ. ಅಧರ್ಮಾಚರಿತರಿಗೆ ಮಾಡುವ ಅಭಿವಾದನಗಳು ಪೂರ್ವಪುಣ್ಯಗಳನ್ನು ನಿರ್ವ್ಯಾಪ್ಯಗೊಳಿಸುವವುಗಳು. ಆತ್ಮದರ್ಶಿಗಳೇ ಅತ್ಯಾಶ್ರಮಿಗಳು. ಅತ್ಯಾಶ್ರಮಿಯು ಮೇಲಿನ ಚತುರಾಶ್ರಮಿಗಳಿಗೂ ಗುರುವಾಗಲು ಅರ್ಹ. ಮೇಲಿನ ಆಶ್ರಮ ಸಿದ್ಧಾಂತಗಳೆಲ್ಲವೂ ಜಾತಿಯ ಹೊರತಾಗಿ ಸ್ವಸಾಮರ್ಥ್ಯದಿಂದ ಮಾತ್ರ ಶಕ್ಯವೆಂದು ಅರಿಯಬೇಕು.

**ಏಳನೆಯ ತರಂಗ:**– ವಿಧಿನಿಷೇದಗಳನ್ನು ಆಚರಿಸಲು ವ್ಯತ್ಯಯವುಂಟಾದಾಗ ಪ್ರಾಯಶ್ಚಿತ್ತಾರ್ಹವೆನಿಸುತ್ತವೆ. ಸೂಕ್ತ ಪ್ರಾಯಶ್ಚಿತ್ತಗಳಿಂದ ಚಿತ್ತಸ್ವಾಸ್ಥ್ಯವನ್ನು ಪುನ: ಗಳಿಸಬಹುದಾದ ಮಾರ್ಗೋಪಾಯವೆನಿಸಿವೆ. ಮಹಾಪಾತಕಿಗಳು ಅಧ್ಯಯನ, ಅಧ್ಯಾಪನಾ ವೃತ್ತಿಗಳಿಂದ ಬಹಿಷ್ಕೃತರು. ಇವರಿಗೆ ಆಶ್ರಯ ಕಲ್ಪಿಸುವವರೂ ಕೂಡ ಸಮಾನ ದೋಷಿಗಳೆನಿಸುವರು. ಪ್ರಾಯಶ್ಚಿತ್ತಾರ್ಥವಾಗಿ ವ್ರತಾಚರಣೆ ಮತ್ತು ಪಂಚಗವ್ಯದ ಮಹತ್ತ್ವವನ್ನು ಸಾರಲಾಗಿದೆ. ಕ್ಷತ್ರಿಯ–ವೈಶ್ಯರಿಗೆ ಪ್ರಾಯಶ್ಚಿತ್ತವು ದ್ವಿಗುಣ, ತ್ರಿಗುಣಾತ್ಮಕವಾಗಿದ್ದು ಶೂದ್ರಮಹಾಪಾತಕನು ರಾಜಪ್ರಮಾಣಂ ವರಮ್ ಎನ್ನಲಾಗಿದೆ.

**ಎಂಟನೆಯ ತರಂಗ:**– ರಾಜರುಗಳ ವರ್ಣಸಂಕರವಶಾತ್ ಧರ್ಮಚ್ಯುತಿಯುಂಟಾಗಿ ಶಿವಾಂಶಸಂಭೂತ, ಅಯೋನಿಜನಾದ ನಂದೀಶ್ವರನ ಅವತಾರಕ್ಕೆ ಕಾರಣವೆಂದು ನಂಬಲಾಗಿದೆ. ನಂದಿಕೇಶ್ವರ ಕಾರಿಕೆಯಲ್ಲಿರುವಂತೆ ಶಿವನು ನಂದಿ ನಾಮಾಂಕಿತನಾಗಿ ಶಿವಾದಿಯ ಯಜ್ಞವೇದಿಕೆಯಲ್ಲಿ ಮುನಿ–ದೇವತಾವೃಂದದವರ ಎದುರಿನಲ್ಲಿ ಆತನ ಪುತ್ರನಾಗಿ ತೋರ್ಪಡಿಸಿಕೊಂಡನು. ಅಲ್ಪಾಯುವಾದ

ನಂದಿಯನ್ನು ಶಿಲಾದಿಯ ಪ್ರಾರ್ಥನೆಯಂತೆ ತನ್ನ ಪತಾಕೆಯಾಗಿರಿಸಿ, ರುದ್ರಗಣಗಳಿಗೆಲ್ಲ ನಾಯಕನನ್ನಾಗಿ ಅಭಿಷೇಕಿಸಿ ಮರುತ್ತುಗಳ ಪುತ್ರಿಯಾದ ಸುಯಶಾಳೊಂದಿಗೆ ವಿವಾಹವನ್ನು ಮಾಡಿದನು.

**ಒಂಭತ್ತನೆಯ ತರಂಗ:–** ದಕ್ಷಿಣ ಭಾರತದಲ್ಲಿ ನಾಸ್ತಿಕವಾದಿಗಳ ಉಪಟಳದಿಂದ ಧರ್ಮಕ್ಷಯವಾಗಿ ವೃಷಭೇಶ್ವರನು ಬಸವ ನಾಮಾಂಕಿತನಾಗಿ ಅವತರಿಸಲು ಶಿವನಿಂದ ಆದೇಶಿಸಲ್ಪಟ್ಟನು. ಮುಂದೆ ಬಸವನು ಬಿಜ್ಜಳನ ಆಸ್ಥಾನದಿಂದ ಪರಾಙ್ಮುಖನಾಗಿ ಆಧ್ಯಾತ್ಮ ಜೀವನದಲ್ಲಿ ಬಹುಬೇಗ ಉತ್ಕರ್ಷವನ್ನು ಪಡೆದು ವೀರಶೈವ ಪಂಥದಲ್ಲಿ ಒಲವನ್ನು ತೋರಿ ಪುನರುಜ್ಜೀವ ಗೊಳಿಸಿದನು. ಬಸವೇಶ್ವರನು ಗಣೇಶ್ವರರ ಮತ್ತು ಜಂಗಮರ ಗಮನವು ಮುಂದೆ ಮಲ್ಲರಾಷ್ಟ್ರದೆಡೆಗಾಗುವುದೆಂಬಂತೆ ಕೆಳದಿಸಾಮ್ರಾಜ್ಯದ ಉದಯಕ್ಕೆ ಕಾರಣೀಭೂತವಾಗಿದೆ.[12]

**ಹತ್ತನೆಯ ತರಂಗ:–** ಆರಂಭದಲ್ಲಿ ಕಲಿಯುಗದ ಲಕ್ಷಣಗಳನ್ನು ತಿಳಿಸಲಾಗಿದೆ. ಮಾನವನು ಅಲ್ಪಾಯುಷಿಯಾಗಿರುವುದರಿಂದ ಸಂಪೂರ್ಣ ವಿದ್ಯೆಯು ಸಾಧಿತವಾಗದೇ, ವೇದವಿದರೂ ಕಲೆಗಳಲ್ಲಿ ಒಲವನ್ನು ತೋರುವುದರಿಂದ ಅಧರ್ಮ ಪ್ರಸಾರವಾಗಿ ವ್ಯತ್ಕ್ರಮ(ಹಿರಿಯರ ಎದುರಿನಲ್ಲಿಯೇ ಕಿರಿಯರ ಅವಸಾನ)ವಾಗಿ ಮರಣಮುಖರಾಗುವುದರ ಮೂಲಕ ಮಾನವರು ಸಂತಾಪಗೊಳ್ಳುತ್ತಾರೆ. ಕಲಿಯುಗದ ತಮೋಗುಣ ಪ್ರಭಾವದಿಂದಾಗಿ ವೇದೋಕ್ತ ವಿಚಾರಗಳು ನ್ಯೂನಾತಿರೇಕದಿಂದಿರುತ್ತವೆ. ಶಿವನಾಮ ಸ್ಮರಣೆಯು ಭವಸಾಗರವನ್ನು ದಾಟುವ ಸೂತ್ರಮಾತ್ರವಾಗಿರುತ್ತದೆ.

**ಹನ್ನೊಂದನೆಯ ತರಂಗ:–** ದುಷ್ಕರವಾದ ಚಟುವಟಿಕೆಗಳಿಂದ ಗಳಿಸಿದ ದ್ರವ್ಯಾದಿಗಳು ಅನ್ನರೂಪದಲ್ಲಿ ಸಂಗ್ರಹವಾಗುತ್ತದೆಂಬುದು ಸ್ಮೃತಿವಾಕ್ಯ. ಪ್ರಜೆಗಳು ದುಷ್ಕೃತ್ಯಗಳಲ್ಲಿ ತೊಡಗಿ ದೋಷರಾಶಿಯು ವಿಪರೀತವಾಗಿ ಉತ್ಪಾತಗಳು ಸಂಭವಿಸುತ್ತವೆ. ಶಕುನಗಳಿಂದ ಮುಂಚಿತವಾಗಿಯೇ ಉತ್ಪಾತಗಳನ್ನು ತಿಳಿಯಬಹುದು. ದಿವ್ಯ–ಅಂತರಿಕ್ಷ–ಭೌಮವೆಂದು ಉತ್ಪಾತಗಳು ಮೂರು ವಿಧಗಳಲ್ಲಿದ್ದು ವಾತಾವರಣ, ಪ್ರಾಣಿವರ್ಗ ಮತ್ತು ಮಾನವಸಂಕುಲಕ್ಕೆ ಮಾರಕವಾಗಿರುತ್ತವೆ. ಇವುಗಳಿಂದುಂಟಾಗುವ ದುರ್ಘಟನಾ ನಿವಾರಣೋಪಾಯವಾಗಿರುವ ಪೂಜಾದಿ ಕೈಂಕರ್ಯಗಳನ್ನು ತಿಳಿಸುವುದರ ಮೂಲಕ ಬಸವೇಶ್ವರರು ಭೂಮಂಡಲದಲ್ಲಿ ಜರುಗುವ ಕಲಿಕಾಲದ ಅದ್ಭುತ ಘಟನೆಗಳನ್ನು ನಿರೂಪಿಸಿದ್ದಾರೆ.

---

[12] ಶಿವತತ್ತ್ವರತ್ನಾಕರ – (ಸಂ) ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ್, ಸಂಪುಟ 1 ಮತ್ತು 2, – ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ – 1999. (4-9-96)

**ಹನ್ನೆರಡನೇ ತರಂಗ:–** ರಾಜ್ಯಹೇತೂಪಾಯಕ್ಕೆ ಅವಿರತವಾದ ಮಾನವಪ್ರಯತ್ನ ಮತ್ತು ದೈವೀಶಕ್ತಿಗಳ ಸಂಯೋಗವೆಂದೇ ವ್ಯಾಖ್ಯಾನಿಸಿ, ವಿಜಯನಗರ ಸಂಸ್ಥಾನದ ಉದಯವನ್ನು ಆರಂಭದಲ್ಲಿ ತಿಳಿಸಲಾಗಿದೆ. ಶಿವಧರ್ಮನನ್ನು ಇಲ್ಲಿ ವಿದ್ಯಾರಣ್ಯರೆಂದು ನಂಬಲಾಗಿದೆ. ವೀರಭದ್ರಭೂಪನ ಕೋಶಾಧಿಕಾರಿಗಳಾದ ಹಕ್ಕ–ಬುಕ್ಕರು ಕ್ಷೇತ್ರಪರ್ಯಟನೆಯಲ್ಲಿರುವಾಗ ವಿದ್ಯಾರಣ್ಯರ ಭೇಟಿ ಇವರ ಮಧ್ಯೆ ಜರುಗುವ ಸ್ವಪ್ನವೃತ್ತಾಂತ ಹಾಗೂ ಕುರಿಗಾಹಿಯ ಪ್ರತೀತಿ ಮತ್ತು ವಿದ್ಯಾರಣ್ಯರು ದೇವಿಯ ಆದೇಶದಂತೆ ನಗರವನ್ನು ನಿರ್ಮಿಸಿದ್ದರಿಂದ ಮೂರುಕಾಲು ಘಳಿಗೆ ಸುವರ್ಣವರ್ಷದಂತಹ ಪವಾಡಗಳೆಲ್ಲವೂ ಸುಸಂಗತವಾಗಿ ನಡೆದುದರ ಪರಿಣಾಮವಾಗಿ ಭವ್ಯವಾದ ಸಾಮ್ರಾಜ್ಯದ ಕಥನವನ್ನು ಮಾಡಲಾಗಿದೆ.
ಗ್ರಂಥಋಣ:– ಇಲ್ಲಿ ನಿರ್ಧಿಷ್ಟವಾದ ಗ್ರಂಥದ ಹೆಸರುಗಳನ್ನು ಉಲ್ಲೇಖಿಸದೇ ಪುರಾಣ, ಸ್ಮೃತಿ, ಸಿದ್ಧಾಂತಗಳನ್ನು ಮತ್ತು ಇತಿಹಾಸದೊಡನೆ ಆಯೋಜಿಸಲಾಗಿದೆಯೆಂದು ಸೂಚಿಸಲಾಗಿದೆ.

**ಐದನೆಯ ಕಲ್ಲೋಲ**

ಈ ಕಲ್ಲೋಲದಲ್ಲಿ ಹದಿನೈದು ತರಂಗಗಳಿದ್ದು ಒಂದು ಸಾವಿರದ ಐದುನೂರಮೂವತ್ತೊಂದು ಶ್ಲೋಕಗಳಿವೆ. ಶೀರ್ಷಿಕೆಗಳು:– 1. ಕುಡಚಾದ್ರಿ–ವಯಃಸ್ತಂಭ–ಕಾಲವಂಚನೆ–ಮೃತಸಂಜೀವಿನೀ ವಿದ್ಯೆದೃಶ್ಯಕರಣ–ಪರಕಾಯಪ್ರವೇಶಾದಿ ವರ್ಣನೆ 2. ದೇಶವರ್ಣನೆ, ಚೌಡಪ್ಪನಾಯಕನಿಗೆ ರಾಮೇಶ್ವರನ ಅನುಗ್ರಹ ವರ್ಣನೆ. 3. ಶುಭಾಶುಭ ಸ್ವಪ್ನಫಲ ನಿರೂಪಣೆ. 4. ನಿಧಿಚಿಹ್ನೆ, ಅಂಜನಸಾಧಾರಣ ಮತ್ತು ರಾಜನೀತಿ ವರ್ಣನೆ. 5. ಸದಾಶಿವರಾಜನ ಚರಿತ್ರೆ, ಮಾಯೋಪಾಯ ವರ್ಣನೆ. 6. ರಾಜದುರ್ಗ, ಕರದಾನ ದುರ್ಗಲಕ್ಷಣ ಮತ್ತು ಬಲವರ್ಣನೆ. 7. ಶಕ್ತಿತ್ರಯ ಹಾಗೂ ದೊಡ್ಡಸಂಕಣ್ಣನಾಯಕನ ಚರಿತ್ರೆ. 8. ಶಕುನಫಲ ಕಥನಮ್. 9. ಸಂಕಣ್ಣನಾಯಕನ ಯಾತ್ರಾವೃತ್ತಾಂತ ಹಾಗೂ ಖಡ್ಗಲಕ್ಷಣ ಕಥನಮ್. 10.ದೇವತಾ ಪ್ರತಿಷ್ಠಾಪನೆ, ಕಾಲಗೃಹನಿರ್ಮಾಣ. 11. ಪಟ್ಟಾಬಿಭಿಷೇಕ ವಿಧಿ, ಸಂಧಿವಿಗ್ರಹ, ಯಾತ್ರಾಸ್ವರೂಪ ವರ್ಣನೆ. 12. ಆಸನ, ದ್ವೈಧೀಭಾವ, ಸಮಾಶ್ರಯ ಚತುರೋಪಾಯ ವರ್ಣನೆ. 13. ಸ್ವರಮುಹೂರ್ತ, ಭೂಮಿವರ್ಗ ಮತ್ತು ಯೋಗಿನೀಬಲ ವರ್ಣನೆ. 14. ದಂಡ, ಯುದ್ಧೋಪಾಯ, ವ್ಯೂಹರಚನಾಕ್ರಮ ವರ್ಣನೆ. 15. ವೇದಾಗಮಾಂತರ್ಗತ ವಿವಿಧ ವಿದ್ಯಾತತ್ತ್ವಸಾರಭೂತ ರಾಜ್ಯಸಪ್ತಾಂಗ ಕಥನಮ್.

**ಮೊದಲನೆಯ ತರಂಗ–** ಕುಟಚಾದ್ರಿ ಮತ್ತು ಬನವಾಸಿಯ ನಡುವಿನ ನಾಡೇ ಪೂರ್ವಿಕರ ಸ್ಥಾನವೆಂದು ಕೃತಿಕಾರನ ಸಮ್ಮತ. ಮೂಕಾಸುರನನ್ನು ಸಂಹರಿಸಿದ 'ಮೂಕಾಂಬಿಕೆ'ಯ ಪ್ರಸ್ತಾಪವಿದೆ. ಈ ಪ್ರದೇಶವು ಅತ್ಯಂತ ಸಂಪದ್ಭರಿತವಾದ ಪ್ರದೇಶವೆಂದೂ ಗಿಡಮೂಲಿಕೆಗಳ ಆಗರವೆಂದೂ ತಿಳಿಸಿ, ಇವುಗಳ ಪೂರ್ವಾಪರಗಳನ್ನು ಬಲ್ಲವರು 'ಸಿದ್ಧ'ರೆನಿಸಲ್ಪಟ್ಟಿದ್ದರು. ವೃಕ್ಷದ 'ಅಂಗಪಂಚಕ'(ಬೇರು, ತೊಗಟೆ, ಪತ್ರ,

ಫಲ ಮತ್ತು ಪುಷ್ಪ)ಗಳ ಪ್ರಸ್ತಾಪವಿದೆ. ಇವುಗಳಿಂದ ಯೋಗಿಗಳು ಪಡೆಯತ್ತಿದ್ದ ಅನೇಕ ಸಿದ್ಧಿಗಳ ಮಾಹಿತಿಯಿದ್ದು, ಇಲ್ಲಿನ ಪರಿಸರವು ಯೋಗಿಗಳ ಪ್ರಯೋಗಶಾಲೆಯಂತೆ ಚಿತ್ರಿತವಾಗಿದೆ.

**ಎರಡನೆಯ ತರಂಗ–** ಕೆಳದಿಯ ಪ್ರಕೃತಿ ವರ್ಣನೆ, ಜನರ ಸಂಸ್ಕಾರ, ಸ್ವಭಾವ, ಮತ್ತು ಸಮೃದ್ಧಿಗಳನ್ನು ತಿಳಿಸಿ ಕೆಳದಿ ಸಾಮ್ರಾಜ್ಯದ ಮೂಲ ಪುರುಷರಾದ ಕೆಳದಿಯು ಒಂದು ಸಂಸ್ಥಾನವಾಗಿ ರೂಪಿಸಲ್ಪಡುವಂತಾಗಲು ಸರ್ಪ–ಸ್ವಪ್ನ–ನಿಧಿವೃತ್ತಾಂತಗಳು ಕಾರಣೀಭೂತವೆನಿಸಿವೆ.

**ಮೂರನೆಯ ತರಂಗ–** ಸಾಂದರ್ಭಿಕಾನುಗುಣವಾಗಿ ಸ್ವಪ್ನಫಲದ ನಿರೂಪಣೆಗಾಗಿಯೇ ವಾಚಿಸಲ್ಪಟ್ಟ ತರಂಗವಾಗಿ ಮೂಡಿ ಬಂದಿದೆ. ಸ್ವಪ್ನಗಳು ಕಂಡ ಹೊತ್ತು ಮತ್ತು ವ್ಯಕ್ತಿಯ ತ್ರಿದೋಷಗಳಿಗನುಗುಣವಾಗಿ ಸ್ವಪ್ನದೃಶ್ಯಗಳಿರುತ್ತವೆ. ನರ, ನಾರಿ, ಪ್ರಾಣಿ ಮತ್ತು ಪಕ್ಷಿಗಳು ಸ್ವಪ್ನದಲ್ಲಿ ಶುಭಾಶುಭ ಸೂಚಕಗಳೆಂದು ಪರಿಗಣಿಸಲ್ಪಟ್ಟು ಸ್ವಪ್ನಫಲಗಳು ನಿರ್ಧಾರಿತವಾಗುತ್ತವೆ. ದುಸ್ಸ್ವಪ್ನ ಪರಿಹಾರಾರ್ಥ ಉಪಾಯಗಳನ್ನು ಸೂಚಿಸಲಾಗಿದೆ

**ನಾಲ್ಕನೆಯ ತರಂಗ–** ನಿಧಿ ಶೋಧನೆಗಾಗಿ ತೊಡಗಬೇಕಾದ ಮಾರ್ಗೋಪಾಯಗಳು, ನಿಧಿ ಶೋಧನೆಗೆ ಅಗತ್ಯವಾದ ಪರಿಕರವೆನಿಸಿದ ಅಂಜನ ತಯಾರಿಕಾ ಕ್ರಮಗಳು ಉಕ್ತವಾಗಿವೆ. ಮುಂದೆ ಚೌಡಪ್ಪ ನಾಯಕನು ವಿಜಯನಗರದರಸರಿಂದ ಪ್ರವರ್ಧಮಾನಕ್ಕೆ ಬಂದು ನಂತರ ಸದಾಶಿವಪ್ಪನು ಪಟ್ಟಕ್ಕೆ ಬಂದನೆನ್ನುವಲ್ಲಿ ತರಂಗಾಂತ್ಯಗೊಳಿಸಲಾಗಿದೆ.

**ಐದನೆಯ ತರಂಗ–** ಸದಾಶಿವನಾಯಕನ ರಾಜ್ಯಭಾರ ಕ್ರಮ ಮತ್ತು ಈತನ ಪುತ್ರರ ವಿವರ, ನಡೆಸಿದ ಸಂಗ್ರಾಮ ತತ್ಪರಿಣಾಮವಾಗಿ ಸಾರ್ವಭೌಮರಿಂದ ಲಭಿಸಿದ ಬಿರುದಾವಳಿಗಳು ಉಲ್ಲಿಖಿತವಾಗಿವೆ ರಾಜನು ಅಭಿಚಾರಕ್ಕೆ ಸಂಬಂಧಿಸಿದ ರಣತಂತ್ರಗಳು, ಕೇರಳೀಯರಿಂದ ಸಂಗ್ರಹಿಸಿದ ಕಪ್ಪಕಾಣಿಕೆ, ವಿರೋಧಿಗಳೆನಿಸಿದ ಯಾದವಮುರಾರಿಗಳ ಪ್ರಸ್ತಾಪ, ಜನಪರ ಕಾರ್ಯಗಳನ್ನು ಪ್ರಸ್ತಾಪಿಸಲಾಗಿದೆ.

**ಆರನೆಯ ತರಂಗ–** ರಾಜ್ಯ ಸ್ಥಿರೀಕರಣೋಪಾಯಗಳೆನಿಸುವ ರಾಜನಲ್ಲಿರಬೇಕಾದ ಗುಣ, ಪ್ರಾಂತ್ಯಾವಾರು ಅಧಿಕಾರಿಗಳ ನಿಯೋಜನಾಕ್ರಮ, ತೆರಿಗೆ ಪದ್ಧತಿ, ಕೋಟೆಗಳ ನಿರ್ವಹಣೆ, ವಿವಿಧ ಪ್ರಕಾರದ ಸೈನ್ಯ ಮತ್ತು ಸೈನಿಕರ ಪರಿಕರಗಳು, ಇವರಿಗೆ ಒದಗಿಸಬೇಕಾದ ಸವಲತ್ತುಗಳನ್ನು ಲಕ್ಷಿಸಲಾಗಿದೆ.

**ಏಳನೆಯ ತರಂಗ–** ಈ ಭಾಗದಲ್ಲಿ ರಾಜರ ಲಕ್ಷಣಗಳು ಶಕ್ತಿತ್ರಯಗಳ ಮಹತ್ತ್ವ ಮಂತ್ರಾಲೋಚನಾಕ್ರಮ ರಾಜನೀತಿಬೋಧನೆ ಮತ್ತು ಸದಾಶಿವನಾಯಕನ ಅವಸಾನವನ್ನು ತಿಳಿಸಲಾಗಿದೆ. ದೊಡ್ಡಸಂಕಣ್ಣನಾಯಕನು ಸಾರ್ವಭೌಮರೊಂದಿಗೆ ವಾಸಿಸಲು ಘಟಿಸಿದ ಕಾರಣ ಮತ್ತು ಲಭಿಸಿದ ಪ್ರಯೋಜನಗಳನ್ನು ಪ್ರಸ್ತುತಪಡಿಸಲಾಗಿದೆ. ತೀರ್ಥಕ್ಷೇತ್ರಗಳ ದರ್ಶನಾದಿಗಳನ್ನು ವಿವರಿಸಲಾಗಿದೆ.

**ಎಂಟನೆಯ ತರಂಗ–** ಶಕುನಗಳು ಜನಪದದಲ್ಲಿ ಹಾಸುಹೊಕ್ಕಾಗಿದೆ. ದೊಡ್ಡಸಂಕಣ್ಣನಾಯಕನಿಗೆ ಶಕುನಶಾಸ್ತ್ರದ ಪರಿಚಯವಿತ್ತು. ಭವಿಷ್ಯತ್ತಿನಲ್ಲಿ ಯಾವುದಾದರೂ ಶುಭಾಶುಭ ಕಾರ್ಯಗಳ ಸಂಭವಿಸುವಿಕೆಯನ್ನು ಪ್ರಾಣಿಪಕ್ಷಿಗಳ ಕೂಗಿನ ಮೂಲಕವೋ, ವಿಶಿಇಂಷಂವಾದ ವಸ್ತುವೊಂದರ ಗೋಚರವಾಗುವುದರ ಮೂಲಕವೋ ಅರಿಯುವ ಕ್ರಿಯೆಯಾಗಿರುತ್ತದೆ. ಶಕುನಗಳ ಶುಭಾಶುಭ ಫಲಗಳು ಸ್ತ್ರೀಪುರುಷರಿಗೆ ಸಂಬಂಧಿಸಿದಂತೆ ಏಕಪ್ರಕಾರವಾಗಿರುವುದಿಲ್ಲ ಪ್ರಯಾಣ ಕಾಲದಲ್ಲಿ ಎದುರಾಗುವ ವ್ಯಕ್ತಿಗಳ ಶರೀರಲಕ್ಷಣ ಮತ್ತು ಜಾತಿ, ಗುಣ, ವಯಸ್ಸುಗಳ ಆಧಾರದ ಮೇಲೆಯೂ ಶಕುನಗಳು ನಿರ್ಧರಿಸಲ್ಪಡುತ್ತವೆ.

**ಒಂಭತ್ತನೆಯ ತರಂಗ–** ದೊಡ್ಡಸಂಕಣ್ಣನಾಯಕನ ತೀರ್ಥಯಾತ್ರಾ ಪ್ರಸಂಗದಿಂದ ಆರಂಭವಾಗಿದೆ. ಈ ಸಂದರ್ಭದಲ್ಲಿ ದಕ್ಷಿಣದ ರಾಮೇಶ್ವರವನ್ನು ಸಂದರ್ಶಿಸಿ, ಕಾಶಿ, ನೇಪಾಳ ಮುಂತಾದ ಕ್ಷೇತ್ರಗಳಿಗೆ ತೆರಳಿದನು. ಈ ಸಮಯದಲ್ಲಿ ದೊಡ್ಡ ಸಂಕಣ್ಣನಾಯಕನು ಅಂಕುಶಖಾನನನ್ನು ಪರಾಭವಗೊಳಿಸಿದ ಪ್ರಸಂಗವಿದೆ ಕಾಶಿಯಲ್ಲಿ ಈತನಿಂದ ಧಾರ್ಮಿಕ ಚಟುವಟಿಕೆಗಳು. ಕೆಳದಿಯಲ್ಲಿಯೂ ವಿವಿಧ ಸಾಮಾಜಿಕ ಮತ್ತು ಧಾರ್ಮಿಕ ಕಾರ್ಯಗಳುನಡೆಸಲ್ಪಟ್ಟವು. ಖಡ್ಗದ ವಿವಿಧ ಲಕ್ಷಣ ಮತ್ತು ಇವುಗಳಿಗೆ ಒದಗಿಸಬೇಕಾದ ಸೂಕ್ತ ಸಂಸ್ಕಾರಗಳ ವಿವರಣೆಗಳಿವೆ.

**ಹತ್ತನೆಯ ತರಂಗ–** ದೇವತಾ ಪ್ರತಿಷ್ಠಾಪನೆಗೆ ಪ್ರಶಸ್ತಸಮಯ ಮತ್ತು ಪ್ರತಿಷ್ಠೆಗೆ ವಿವಿಧ ಮಾಸಗಳಲ್ಲಿ ಕಂಡು ಬರುವ ಶುಭಾಶುಭ ಫಲಗಳನ್ನು ವಾಚಿಸಲಾಗಿದೆ. ಶಿಲೆಗಳಿಗೆ ಆಗಮಿಕಾಚಾರ್ಯರಿಂದ ವಿಧಿಪೂರ್ವಕವಾಗಿ ಅರ್ಚಿಸುವುದು ಅವಶ್ಯ. ದೇವಾಲಯಗಳನ್ನು ಶಿಲ್ಪಶಾಸ್ತ್ರದನ್ವಯ ನಿರ್ಮಿಸಲಾಗುತ್ತದೆ. ಸಂಕಣ್ಣನಾಯಕನು ಭದ್ರಪ್ಪನಾಯಕನಿಗೆ ಪಟ್ಟಾಭಿಷೇಕವನ್ನು ಮಾಡಿ ರಾಜನೀತಿಯನ್ನು ಉಪದೇಶಿಸಿದ ಭಾಗವಿದೆ.

**ಹನ್ನೊಂದನೆಯ ತರಂಗ–** ರಾಜ್ಯದ ಹಿತದೃಷ್ಠಿಯಿಂದ ಪಟ್ಟಾಭಿಷೇಕದ ಮುಹೂರ್ತ ಸಾಧನೆಯನ್ನು ಮಾಡುವುದು ಶ್ರೇಯಸ್ಕರ. ಪಟ್ಟಾಭಿಷೇಕವು ಅನೇಕ ವಿಧಿವಿಧಾನಗಳಿಂದ ಕೂಡಿರುತ್ತದೆ.

ರಾಜ್ಯಭಾರವೆಂದರೆ ರಾಜಧರ್ಮದಿಂದ ಕೂಡಿರುವುದಾಗಿರುತ್ತದೆ. ರಾಜನಾದವನಿಗೆ ಚತುರ್ವಿದ ಸಂಧಿ ಹಾಗೂ ಯುದ್ಧದ ಸಿದ್ಧತಾಕ್ರಮಗಳ ಅರಿವನ್ನು ಹೊಂದುವುದು ಮಹತ್ವದ್ದಾಗಿರುತ್ತದೆ.

**ಹನ್ನೆರಡನೆಯ ತರಂಗ** ಆಶ್ರಯದ ಬಗೆಗಳು. ದ್ವೈಧೀಭಾವ, ಚತುರೋಪಾಯಾದಿಗಳ ಅರಿವು ಅಗತ್ಯ. 'ಪ್ರತಾಪವಿಲ್ಲದ ರಾಜನ ಸಂಪತ್ತು ಬೆಸ್ತನ ಜೀವನದಷ್ಟೇ ಪ್ರಗತಿಹೀನ'ವೆಂಬ ಉಕ್ತಿ ಮಾರ್ಮಿಕವಾಗಿದೆ. ಶತ್ರು ರಾಜನನ್ನು ಹತೋಟಿಯಲ್ಲಿಡುವ ಉದ್ದಿಷ್ಟ ರಣತಂತ್ರಗಳ ಮಾಹಿತಿಗಳಿವೆ.

**ಹದಿಮೂರನೆಯ ತರಂಗ–** ಕುಂಡಲಿನೀ ನಾಡಿಯ ಸ್ವರೂಪ ಮತ್ತು ಇದರ ಪೂರಕ ನಾಡಿಗಳು ವೈಶಿಷ್ಟ್ಯಪೂರ್ಣವಾಗಿರುತ್ತದೆ. ಇಡಾ ಪಿಂಗಳಾದಿ ನಾಡಿಗಳ ಗತಿಗಳಿಂದ ಶುಭಾಶುಭಗಳನ್ನರಿಯಬಹುದಾಗಿದೆ. ರಾಜನಾದವನು ರಾಜ್ಯಾಭಿವೃದ್ಧಿಗಾಗಿ ಸ್ವರ, ಮುಹೂರ್ತಗಳಷ್ಟೆ ಭೂಬಲಚಕ್ರವನ್ನರಿಯುವುದು ಉಚಿತವಾಗಿರುತ್ತದೆ ಹದಿನಾಲ್ಕನೆಯ ತರಂಗವು ಯುದ್ಧದ ಮುನ್ನಾದಿನದಂದು ರಾಜನು ಮಂತ್ರಿ–ಅಧಿಕಾರಿ– ಸೈನಿಕರೊಂದಿಗೆ ಸಂವಹಿಸುವ ಕ್ರಮ ಮಾರ್ಮಿಕವಾಗಿ ಮೂಡಿಬಂದಿದೆ. ಸಂಗ್ರಾಮ ನಡೆಯುತ್ತಿರುವಾಗ ವೀರರಿಗೆ ಬಗೆಬಗೆಯ ಬಹುಮಾನಗಳ ಘೋಷಣೆಗಳನ್ನು ಮೇಲಿಂದ ಮೇಲೆ ಮೊಳಗಿಸಲಾಗುತ್ತದೆ. ವಿವಿಧ ಸೇನಾಪಡೆಗಳ ರಚನಾವ್ಯೂಹ ಮತ್ತು ಇವುಗಳ ನಿಯೋಜನೆಗಳು ಉತ್ತಮ ರಣತಂತ್ರವಾಗಿರುತ್ತದೆ.

**ಹದಿನಾಲ್ಕನೇ ತರಂಗ:–** ಇದು ಒಳಾಂಗಣ ವಾಸ್ತುವಿನ್ಯಾಸ ಪೂರ್ವಕವಾಗಿ ವಾತಾಯನ ವ್ಯವಸ್ಥೆಯನ್ನು ಅಳವಡಿಸಿಕೊಳ್ಳುವುದು ಉತ್ತಮ ಗೃಹದ ಲಕ್ಷಣ ಕ್ರಮವರಿತು ಅಭ್ಯಂಗಸ್ನಾನವನ್ನು ಮಾಡುವುದು ಯುಕ್ತವಾಗಿರುತ್ತದೆ. ಕೇಸರಾದಿ ಪುಷ್ಪಗಳಿಮದ ಸುಗಂಧಗಳು ಸಂಸ್ಕರಿಸಲ್ಪಡುತ್ತವೆ. ವೈವಿಧ್ಯಮಯವಾದ ಪರಿಮಳಯುಕ್ತ ಪ್ರಸಾದನ ಸಾಮಗ್ರಿಗಳು ರಾಜಭೋಗ್ಯಾರ್ಹವಾಗಿವೆ.[13]

**ಹದಿನೈದನೆಯ ತರಂಗ–** ಚಿಕ್ಕಸಂಕಣ್ಣನಾಯಕನಿಂದ ಸಿದ್ಧಪ್ಪ ನಾಯಕನ ಜನನದಿಂದಾರಭ್ಯ ಚಿಕ್ಕಸಂಕಣ್ಣನಾಯಕನ ವಿರಕ್ತಿಯವರೆಗೆ ಪ್ರಸ್ತಾಪಿಸಲ್ಪಟ್ಟ ಭಾಗವಾಗಿದೆ. ಏತನ್ಮಧ್ಯೆ ಚಿಕ್ಕಸಂಕಣ್ಣನಾಯಕನ ರಾಜ್ಯಭಾರಕ್ರಮ ಮತ್ತು ವೆಂಕಟಪ್ಪನಾಯಕನಿಗೆ ನೀಡಲಾದ ರಾಜನೀತಿ, ಸಪ್ತಾಂಗಗಳ ಮತ್ತು ಅಷ್ಟಾದಶ ಅಧಿಕಾರಿಗಳ ಲಕ್ಷಣ, ಅಂಕೆಸಂಖ್ಯೆಗಳ ಲೆಕ್ಕಾಚಾರಕ್ರಮಗಳು ವಿಶಿಷ್ಟವಾಗಿವೆ.. ಸಿದ್ಧಪ್ಪನಾಯಕನು

---

[13] ಶಿವತತ್ತ್ವರತ್ನಾಕರ – (ಸಂ) ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ್, ಸಂಪುಟ 1 ಮತ್ತು 2, – ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ – 1999. (6-14-88)

ವಾನಪ್ರಸ್ಥಾಶ್ರಮವನ್ನು ಸ್ವೀಕರಿಸಿದ ಮಾಹಿತಿಯಿದೆ. ಪಂಚಮಕಲ್ಲೋಲದ ಪರಾಮರ್ಶನಗ್ರಂಥಗಳು:– ಕಾಮಂದಕೀಯ ನೀತಿ, ಬೃಹಸ್ಪತಿನೀತಿ, ಶುಕ್ರನೀತಿ ವಡ್ಡಾಮರೇಶ್ವರ ತಂತ್ರ, ಸಹ್ಯಾದ್ರಿಖಂಡ, ನಿಧಿಪ್ರದೀಪಿಕಾ, ಜ್ಯೋತಿಷಾರ್ಣವ, ಆಗಮ, ಶಿಲ್ಪಶಾಸ್ತ್ರ, ಶಕುನಶಾಸ್ತ್ರ ಮುಂತಾದವು.

**ಆರನೆಯ ಕಲ್ಲೋಲ**

ಆರನೆಯ ಕಲ್ಲೋಲವು ಅತ್ಯಂತ ವಿಸ್ತಾರವಾದುದಾಗಿದೆ. ಇಪ್ಪತ್ತೇಳು ತರಂಗಗಳಲ್ಲಿನ ಮೂರು ಸಾವಿರದ ಏಳುನೂರ ಇಪ್ಪತ್ತೆರಡುಶ್ಲೋಕಗಳ ಮೂಲಕ ದಾಖಲಾಗಿದೆ. ಇದೊಂದು ವೈಶಿಷ್ಟ್ಯ ಪೂರ್ಣವಾದ ಕಲ್ಲೋಲವೆಂದು ಪರಿಗಣಿಸಬಹುದಾಗಿದೆ. ಪ್ರಸ್ತುತ ಕಲ್ಲೋಲದಲ್ಲಿ ಮೂಡಿಬಂದಿರುವ ತರಂಗಗಳಿಗೆ ನೀಡಲಾದ ಶೀರ್ಷಿಕೆಗಳು– 1. ಪುರಭವನ ನಿರ್ಮಾಣ ಕಥನಮ್ 2. ವರ್ಣಸಂಯೋಜನಚಿತ್ರ ಲೇಖನ–ಪ್ರತಿಮಾಲಕ್ಷಣ ನಿರೂಪಣಮ್ 3. ನಾಟ್ಯಕ್ರಮ ನಿರೂಪಣಮ್ 4. ಶಿಂಷುಂಜ� ಕಂಠಾಂತ ಅಭಿನಯ ನಿರೂಪಣಮ್ 5. ಹಸ್ತಾಭಿನಯ ವರ್ಣನಮ್ 6. ವಕ್ಷಸ್ಥಲಾದಿ ಪಾದಪರ್ಯಂತಮಭಿನಯಮ್ ಸ್ಥಾನಕ–ಚಾರಿ–ಮಂಡಲಭೇದ ಕಥನಮ್ 7. ನಾದಾದಿ ಗಮಕಾಂತ ನಿರೂಪಣಮ್ 8. ಜಾತ್ಯಾದಿ ಅಂಗಗಾಯಕಲಕ್ಷಣ ನಿರೂಪಣಮ್ 9. ತಾಲಪ್ರಸಾರ ಹಾಗೂ ವಾದ್ಯಾದಿ ವರ್ಣನಮ್ 10. ಉಪವನ ನಿರ್ಮಾಣಮ್ ಜಲಭೂಮಿ ಪರೀಕ್ಷಾವರ್ಣನಮ್ 11. ತರುಚಿಕಿತ್ಸೆ ಪೋಷಣಮ್ ವಿಚಿತ್ರಕರಣದೋಹದ ವರ್ಣನಮ್ 12. ಕಾಮಶಾಸ್ತ್ರಾಂತರ್ಗತ ಜಾತಿ, ಸ್ವಭಾವ, ಗುಣ, ದೇಶ, ಧರ್ಮ, ಚೇಷ್ಟಾದಿ� ನಿರೂಪಣಮ್ 13. ಬಾಹ್ಯರತ, ಬಂಧಪ್ರಬೇಧ, ಯೌವನ ಸ್ಥಿರೀಕರಣ ಹಾಗೂ ವೆಂಕಟಪ್ಪನಾಯಕ ಚರಿತ್ರ ವರ್ಣನಮ್ 14. ಗೃಹಸ್ನಾನ ಪಾದುಕಾಲೇಪನ, ಉಪಭೋಗವರ್ಣನಮ್. 15.ಗಂಧಮುಕ್ತಿ ನಿರೂಪಣಮ್ 16. ವಸ್ತ್ರ, ಮಾಲ್ಯ, ಭೂಷಣೋಪಭೋಗಚಿತ್ರಣಮ್. 17.ರತ್ನಸ್ವರೂಪ ವರ್ಣನಮ್ 18. ಸೂಪಶಾಸ್ತ್ರವಿವರಣಮ್ 19. ಭಕ್ಷ್ಯ, ಲೇಹ್ಯಾದಿ ಪಾಕಕ್ರಮ ವಿವರಣಮ್ 20. ಭೋಜನ, ಶಯನ, ಉತ್ಥಾನಾದಿ ವರ್ಣನಮ್ 21. ಆದಾನನಿದಾನ ಚಿಕಿತ್ಸಾನಿರೂಪಣಮ್ 22. ದ್ರವ್ಯಗುಣಮಹಾರಸಾದಿ ನಿರೂಪಣಮ್ 23. ರಸೋಪರಸಾದಿ ವರ್ಣನಮ್. 24.ರಸಸಂಸ್ಕಾರಾದಿ ನಿರೂಪಣಮ್ 25. ರಸಶಾಲಾಯಂತ್ರಾದಿ ವರ್ಣನಮ್ 26. ವಿಷ ನಿರೂಪಣಮ್, ಸರ್ಪದಂಶನ ವರ್ಣನಮ್ 27. ವಿಷಚಿಕಿತ್ಸಾಯಾಂ ಮಂತ್ರ ದ್ರವ್ಯಾಗದ ವೀರಭದ್ರನಾಯಕ ಚರಿತ್ರ ವರ್ಣನಮ್.

**ಮೊದಲನೆಯ ತರಂಗ–** ಕೆಳದಿ ಸಾಮ್ರಾಜ್ಯಕ್ಕೆ ವೆಂಕಟಪ್ಪನಾಯಕನ ಕೊಡುಗೆಯನ್ನು ಪ್ರಾರಂಭದಲ್ಲಿ ತಿಳಿಸಲಾಗಿದೆ ವಿವಿಧ ಶ್ರೇಣೀಕೃತ ಜನವಸತಿ ಪ್ರದೇಶಗಳು ಜನರ ವೃತ್ತಿಗಳಿಗನುಸಾರವಾಗಿ ವಸತಿ

ಯೋಜನೆಗಳು, ವಾಸ್ತುನಿರ್ಮಾಣ ಮತ್ತು ಗೃಹಪ್ರವೇಶಗಳಿಗೆ ಪ್ರಶಸ್ತವಾದ ಮಾಸಗಳು, ದೇವಾಲಯ ನಿರ್ಮಾಣಕ್ಕೆ ಬಳಸಲು ಯೋಗ್ಯವಾದ ಮತ್ತು ಕೂಡದ ತ್ಯಾಜ್ಯ ವೃಕ್ಷ ಪ್ರಬೇಧಗಳು, ದೇವಾಲಯಗಳನ್ನು ನಿರ್ಮಿಸಬಹುದಾದ ವಿವಿಧ ಆಯ ನಮೂನೆಗಳು. ಬೃಹತ್ ಭವನಗಳ ನಿರ್ಮಾಣಕ್ಕಾಗಿ ಚತುಃಶಾಲಾ, ತ್ರಿಶಾಲಾ, ದ್ವಿಶಾಲಾ ಮತ್ತು ಏಕಶಾಲಾಗಳಂತಹ ವಾಸ್ತುವಿನ್ಯಾಸಗಳನ್ನು ಸಲಕ್ಷಣವಾಗಿ ತಿಳಿಸಲಾಗಿದೆ. ಸ್ತಂಭದ ಆಧಾರದಲ್ಲಿ (ಗೋಡೆಗಳಿರದ) ನಿರ್ಮಿಸಿದ ಭವನ ಭಾಗವನ್ನು 'ಶಾಲೆ' ಗಳೆಂದೂ ಭವನದ ಯಾವ ಭಾಗವು ಗೋಡೆಗಳ ಆಧಾರದಲ್ಲಿ ನಿರ್ಮಿತವಾದ ವಾಸ್ತು ವಿನ್ಯಾಸವನ್ನು 'ಅಲಿಂದ'ಗಳೆಂದು ಕರೆಯಲ್ಪಡುತ್ತವೆ. ಭವನದ ಆಲಿಂದ ಮತ್ತು ಶಾಲೆಗಳು ಹೊಂದಿರುವ ದಿಕ್ಕುಗಳನ್ವಯ ರಾಜನಿಗೆ ಒದಗಬಹುದಾದ ಯೋಗಗಳಿಗೆ ಕಾರಣವೆನಿಸುತ್ತವೆ. ಹಾಗಾಗಿ ಭವನದ ನಿರ್ಮಾಣವು ಯೋಜನಾಬದ್ಧವಾಗಿದ್ದು ಸುಲಕ್ಷಣವಾಗಿರಬೇಕು.

**ಎರಡನೆಯ ತರಂಗ–** ಪ್ರಸ್ತುತ ತರಂಗವು ವಾಸ್ತುಶಾಸ್ತ್ರದ ಬಗೆಗೆ ಸಾಕಷ್ಟು ಮಾಹಿತಿಯನ್ನು ನೀಡುತ್ತದೆ. ರಂಗ ಮಂದಿರದ ಸ್ಥಳ, ಪರಿಸರ ಮತ್ತು ಒಳಾಂಗಣ ವ್ಯವಸ್ಥೆಗಳನ್ನು ವಿವೇಚಿಸಲಾಗಿದೆ. ಭವನವು ಸ್ತಂಭ, ಗೋಡೆ ಮತ್ತು ವಿವಿಧ ಚಿತ್ತಾರಗಳಿಂದ ಭವ್ಯವಾಗಿರಬೇಕು ಲೇಪದ್ರವ್ಯ ತಯಾರಿಕೆ, ಬಣ್ಣಗಳ ತಯಾರಿಕೆ, ವಿವಿಧ ಅಳತೆಯ ಕುಂಚಗಳನ್ನು ಸಿದ್ಧಪಡಿಸಿಕೊಳ್ಳುವ ಕ್ರಮಗಳನ್ನು ವಿವೇಚಿಸಲಾಗಿದೆ. ಚಿತ್ರರಚನಾಶಾಸ್ತ್ರಕ್ಕೆ ಅಗತ್ಯವಾದ ಮಾಪಕಗಳು, ಪ್ರಮಾಣಬದ್ಧ ಪ್ರತಿಮೆಗಳ ನಿರ್ಮಾಣದ ಮಾಹಿತಿಯಿದೆ.

**ಮೂರನೆಯ ತರಂಗ–** ಅರವತ್ತನಾಲ್ಕು ಕಲೆಗಳಲ್ಲೊಂದಾದ ನಾಟ್ಯ ಕಲೆಯು ಎಲ್ಲಾ ವರ್ಗದ ಜನರಿಗೂ ಒಂದಿಲ್ಲೊಂದು ರೂಪದಲ್ಲಿ ರಂಜನಾತ್ಮಕವಾಗಿರುತ್ತದೆ ಈ ಶಾಸ್ತ್ರವು ಪ್ರಯೋಗಶಾಸ್ತ್ರಗಳಲ್ಲೊಂದಾಗಿರುವುದರಿಂದ ಸತತಾಭ್ಯಾಸ ಅವಶ್ಯಕ. ನೃತ್ತ ಮತ್ತು ನೃತ್ಯವು ನಾಟ್ಯದಲ್ಲಿ ಪರಿಪೂರ್ಣತೆಯನ್ನು ಸಾಧಿಸಲ್ಪಡುವಂತಹವು. ಇವುಗಳು ವೈವಿಧ್ಯಮಯವಾದ ಪದ್ಧತಿ ಮತ್ತು ಶಿಕ್ಷಣದಿಂದ ಕೂಡಿದ್ದು, ಬೆಳೆದು ಬಂದ ದಾರಿಯನ್ನು ತಿಳಿಸಲಾಗಿದೆ.

**ನಾಲ್ಕನೆಯ ತರಂಗ:–** ಧ್ರುತಾದಿ ಹದಿಮೂರು ಗತಿಗಳಿಂದ ಕುತ್ತಿಗೆಯ ಮೂಲಕ ನಟಿಸಬಹುದಾಗಿದೆ, ಸ್ಥಾಯಿಭಾವ, ವ್ಯಭಿಚಾರೀಭಾವ, ರಸದೃಷ್ಟಿಗಳೆಂಬ ದೃಷ್ಟಿತ್ರಯ ಬೇಧಗಳಿವೆ. ಆಲೋಕಿತಾದಿ ಅಷ್ಟವಿಧ ದರ್ಶನ ಬೇಧಗಳಿವೆ. ಕನೀನಿಕ, ಹುಬ್ಬು, ನಾಸಿಕ. ಗಂಡಸ್ಥಲ ಮತ್ತು ಓಷ್ಠಾದಿ ಅಭಿನಯಗಳನ್ನು ಲಕ್ಷಿಸಲಾಗಿದೆ. ದಂತ, ನಾಲಿಗೆ, ಗಲ್ಲಗಳ ಸಂಯೋಗದಿಂದ ಭಾವ ಪ್ರಕಟಣೆಗೆ ಪೂರಕವೆನ್ನಲಾಗಿದೆ.

**ಐದನೆಯ ತರಂಗ–** ನಾಟ್ಯಾಭಿನಯದಲ್ಲಿ ನರ್ತಕನು ಹಸ್ತವನ್ನು ಅರವತ್ತನಾಲ್ಕು ವಿಧಗಳಲ್ಲಿ ಬಳಸುವ ಕ್ರಮಗಳಿವೆ. ಪ್ರಾಥಮಿಕವಾಗಿ ವಿಸರ್ಗಾದಿ ಹಸ್ತಕಟಕರ್ಮಗಳು, ಕರವಿನ್ಯಾಸ ಮತ್ತು ಅಂಗುಲೀಕರಣಗಳಿಂದ ಇಪ್ಪತ್ತು ಬಗೆಯಲ್ಲಿವೆ. ನೃತ್ಯದಲ್ಲಿ ಸಂಯುಕ್ತಹಸ್ತಗಳೆನ್ನುವ ಮೂವತ್ತು ವಿಧಗಳಿಂದಲೂ, ಅಸಂಯುತ ಹಸ್ತಗಳೆನ್ನಲಾಗುವ ಇಪ್ಪತ್ತನಾಲ್ಕು ಹಸ್ತಮುದ್ರೆಗಳಿಂದಲೂ, ಮತ್ತು ಸಂಯುತ ಹಸ್ತಗಳೆನ್ನಲಾಗುವ ಅಂಜಲಿ ಮುಂತಾದ ಹದಿಮೂರು ನಮೂನೆಗಳಿಂದ ವಿನಿಯೋಗಿಸಬಹುದಾಗಿರುತ್ತದೆ.

**ಆರನೆಯ ತರಂಗ–** ವಕ್ಷಸ್ಥಲದ ಚಲನೆಯು ಸಮ ಮುಂತಾದ ಪಂಚ ವಿಧಗಳಲ್ಲಿವೆ. ಜಠರ ಪ್ರದೇಶದ ದ್ವಾರಾ ತ್ರಿವಿಧ ಚಲನೆಗಳನ್ನು ಮೂಡಿಸಬಹುದಾಗಿರುತ್ತದೆ. ಭುಜ, ಸೊಂಟ ಮತ್ತು ಹೆಗಲುಗಳ ವಿವಿಧ ಭಂಗಿಗಳಿಂದಲೂ ಸಾಧಿಸಬಹುದಾಗಿದೆ. ವಲಿತಾದಿ ಪಂಚ ಪ್ರಭೇದಗಳು ಕಟಿ ಪ್ರದೇಶಕ್ಕೆ ಸಂಬಂಧಿಸಿದವು ಉದ್ವಾಹಿತಾದಿ ಪಂಚ ಬಗೆಗಳು ಜಂಘಾಭಿನಯಕ್ಕೆ ಪೂರಕವಾಗಿವೆ. ಏತನ್ಮಧ್ಯೆ ಸ್ತ್ರೀಯರಿಗಾಗಿ ತ್ರಿಸ್ಥಾನಗಳು, ಷಂಟುಸ್ಥಾನಕಗಳು ಮತ್ತು ಇಪ್ಪತ್ತೊಂದು ಆವಾಂತರ ಬೇಧಗಳನ್ನು ವಾಚಿಸಲಾಗಿದೆ.

**ಏಳನೆಯ ತರಂಗ–** ಗೀತೆ ನಾದಾತ್ಮಕ. ವಾಗ್ಪ್ರಪಂಚದ ವ್ಯವಹಾರಗಳೆಲ್ಲವಕ್ಕೂ ನಾದವೇ ಆಧಾರ. ನಾದವು ಇಪ್ಪತ್ತೆರಡು ಧ್ವನಿಗಳ ಉತ್ಪತ್ತಿಗೆ ಕಾರಣವಾಗುತ್ತವೆ. ಸ್ವರಗಳು ಕುಲ, ಬಣ್ಣ, ದೇವತೆ, ಛಂದಸ್ಸು ಮತ್ತು ರಸಗಳಿಂದ ವಿಭಕ್ತವಾಗಿವೆ. ಷಡ್ಜ, ಮಧ್ಯಮ, ಗಾಂಧಾರಗಳು 'ಗ್ರಾಮ' ಸ್ಥಾಯಿ–ಆರೋಹಿ–ಅವರೋಹಿ–ಸಂಚಾರಿಗಳು ವರ್ಣಗಳು. ಸ್ವರಕಂಪನ ಕ್ರಮದಿಂದ ಉತ್ಪತ್ತಿಯಾದವುಗಳು ಗಮಕಗಳೆಂದು ಗುರುತಿಸಲ್ಪಟ್ಟಿವೆ.

**ಎಂಟನೆಯ ತರಂಗ–** ಷಡ್ಜಾದಿ 'ಸ್ವರಗಳು ಮತ್ತು ಇವುಗಳ ಪ್ರಬೇಧಗಳು ವೈವಿಧ್ಯಮಯವಾಗಿವೆ. ಸ್ವರವರ್ಣಯುಕ್ತ ಮನೋರಂಜಕವಾದ ಧ್ವನಿವಿಶೇಷಕ್ಕೆ ರಾಗವೆನ್ನಲಾಗುವುದು. ಎಂಟು ಪುರುಷರಾಗಗಳು ಮತ್ತು ಇಪ್ಪತ್ತನಾಲ್ಕು ಸ್ತ್ರೀರಾಗಗಳಿವೆ. ಪ್ರತಿ ಪುರುಷರಾಗಕ್ಕೆ ಮೂರು ಸ್ತ್ರೀರಾಗಗಳಿದ್ದು, ಅನೇಕ ಉಪವಿಭಾಗಗಳಿಂದ ಕೂಡಿವೆ. ಗಾಯಕನ ಅರ್ಹತೆಯನ್ನು ಲಕ್ಷಣಗಳಿಂದ ತಿಳಿಸಲಾಗಿದೆ.

**ಒಂಭತ್ತನೆಯ ತರಂಗ–** ಈ ವಿಭಾಗದಲ್ಲಿ ತಾಳದ ಬಗೆಗೆ ಚರ್ಚಿಸಿ ಇದರ ವ್ಯುತ್ಪತ್ತಿ ಕ್ರಮವನ್ನು ವಾಚಿಸಿ, ತಾಳಗಳ ಸಂಖ್ಯೆಗಳನ್ನು ತಿಳಿಸಲಾಗಿದೆ. ಇವುಗಳು ಪ್ರತ್ಯೇಕ ಲಕ್ಷಣಗಳೊಂದಿಗೆ ಕೂಡಿವೆ ತಾಳವು ಲಘು, ಗುರು, ಪ್ಲುತವೆಂದು ಮೂರು ಮಾತ್ರಾಕಾಲಗಳಲ್ಲಿ ಗುರುತಿಸಲಾಗಿದೆ, ತಾಳವನ್ನು ಕೋಷ್ಟಕ ಕ್ರಮಗಳಲ್ಲಿ ರಚಿಸಿ ತಯಾರಿಸಿರುವುದು ಸಂಗೀತ ಕ್ಷೇತ್ರಕ್ಕೆ ಉಪಕಾರಕಗಳಾಗಿವೆ. ತಾಡನ ವಾದ್ಯಗಳು ಉಗಮಿಸಲು

ಪ್ರತೀತಿಯೊಂದಿದೆ. ಅವನದ್ಧ, ಘನ, ತತ ಮತ್ತು ಸುಷಿರವೆಂಬವು ನಾಲ್ಕು ವಿಧದ ವಾದ್ಯಗಳೆಂದು ಶಾಸ್ತ್ರಕಾರರ ಮತ.[14]

**ಹತ್ತನೆಯ ತರಂಗ–** ಉದ್ಯಾನವನದ ನಿರ್ಮಾಣಕ್ಕಾಗಿ ಸಮಗ್ರ ಮಾಹಿತಿಯೋಪಾದಿಯಲ್ಲಿ ಪ್ರಸ್ತುತ ಭಾಗವು ಸಂಗೃಹಿತವಾಗಿದೆ. ಉದ್ಯಾನವನಗಳು ಸುಖದ ಹೇತುಗಳು. ಮನೆಯ ವಿವಿಧ ಭಾಗಗಳಲ್ಲಿ ಭೂಗುಣಕ್ಕೆ ತಕ್ಕಂತೆ ವೃಕ್ಷಗಳನ್ನು ಬೆಳೆಸುವ ಕ್ರಮವಿದೆ. ಪ್ರಾಕೃತಿಕವಾಗಿ ಬೆಳೆದ ಗಿಡಮರಗಳು ಜಲಮೂಲದ ಸುಳಿವನ್ನು ನೀಡುವವು. ಇಲ್ಲಿ ತಿಳಿಸಲಾದ ಬೀಜೋಪಚಾರ ಮತ್ತು ಸಸ್ಯೋಪಚಾರ ಕೀಟೋಪಚಾರ ಕ್ರಮಗಳು ಅನುಕರಣೀಯ.

**ಹನ್ನೊಂದನೆಯ ತರಂಗ:–** ಸಸ್ಯಗಳ ಪುಷ್ಪ ಮತ್ತು ಫಲಸಂವರ್ಧನೋಪಾಯಗಳನ್ನು ಆರಂಭದ ಇಪ್ಪತ್ತೊಂಭತ್ತು ಶ್ಲೋಕಗಳಲ್ಲಿವೆ. ವಾತ–ಪಿತ್ತ–ಕಫ ಪ್ರಕೋಪಗಳೇ ರೋಗ ಬಾಧೆಗಳು. ಕ್ರಿಮಿಕೀಟ ಮತ್ತು ಪ್ರಾಕೃತಿಕ ಬಾಧೆಗಳಿಗೂ ಉಪಶಮನಗಳಿವೆ. ವೃಕ್ಷಾಯುರ್ವೇದದ ಅಧ್ಯಯನದಿಂದ ಹಲವಾರು ಪ್ರಯೋಜನಗಳಿವೆ. ವಿವಿಧ ಬಗೆಯ ದೇಹದ ಕ್ರಿಯೆಗಳು ಉಕ್ತವಾಗಿವೆ.

**ಹನ್ನೆರಡನೆಯ ತರಂಗದ–** ವರಾಂಗನೆಯರು ರೂಪ, ಯುವಾವಸ್ಥೆ, ರತೀಭಾವ, ಸಂಗೀತ, ನಾಟ್ಯ ಮುಂತಾದ ಗುಣಗಳ ಆಧಾರದನ್ವಯ ಪದ್ಮಿನಿ, ಮುಂತಾದ ನಾಲ್ಕು ಜಾತಿಗಳಲ್ಲಿದ್ದು, ವಿವಿಧ ಲಕ್ಷಣಗಳಿಂದ ಕೂಡಿರುತ್ತಾರೆ. ಸಂಪೂರ್ಣ ಸುಖಕ್ಕೆ ಸಂಭೋಗಪೂರ್ವ ಕಾಮಕ್ರಿಯೆಗಳು ಅನಿವಾರ್ಯ. ಸಂಭೋಗರತವು ಒಂಭತ್ತು ವಿಧ. ಯೋನಿ ಮತ್ತು ಕಾಮಾಂಕುಶಗಳ ಅಳತೆಗಳು ವೈವಿಧ್ಯವಾಗಿರುತ್ತವೆ. ಯೋನಿ ಸ್ವರೂಪವು ಆಕಾರ ಕಾರ್ಯಗಳಿಗನುಸಾರವಾಗಿರುತ್ತವೆ. ಕಾಮಾಸಕ್ತ ಪುರುಷರು ದೂತಿಯರನ್ನು ನಿಯೋಜಿಸಿಕೊಳ್ಳುವ ವಾಡಿಕೆಯಿದೆ.

**ಹದಿಮೂರನೆಯ ತರಂಗ:–** ಸ್ತ್ರೀಪುರುಷರ ವೈವಿಧ್ಯಮಯವಾದ ಸಮಾಗಮದ ರತಿಭಾವೋತ್ಕರ್ಷಕ್ಕಾಗಿ ಆಲಿಂಗನ ಚುಂಬನ ಮುಂತಾದವು ಸಂಭೋಗಪೂರ್ವ ಕಾಮಚರ್ಯೆಗಳೆನಿಸಿವೆ. ಸಮಪಾದ ಮುಂತಾದ

---

[14] ನಾಟ್ಯಶಾಸ್ತ್ರ– ಭರತಮುನಿ, ಅನುವಾದಕ– ಮನಮೋಹನ ಘೋಶ್ ಏಷಿಯಾಟಿಕ್ ಸೊಸೈಟಿ ಆಫ್ ಬೆಂಗಾಲ್, ಕಲ್ಕತ್ತ 1951

ರತಿಬಂಧಗಳು ಕಾಮಿಗಳ ಸುರತ ಕ್ರಿಯೆಗಳಾಗಿವೆ ಸ್ತ್ರೀಯರ ಮದನಾಂಗಗಳ ಪುನಶ್ಚೇತನ ಮತ್ತು ಪುರುಷರಿಗಾಗಿ ದೇಹ, ಮನಸ್ಸುಗಳ ಪಟುತ್ವವನ್ನು ಸಾಧಿಸುವ ಮಾರ್ಗಗಳು ಉಕ್ತವಾಗಿವೆ.[15]

**ಹದಿನಾಲ್ಕನೆಯ ತರಂಗ:–** ಒಳಾಂಗಣ ವಾಸ್ತುವಿನ್ಯಾಸ ಪೂರ್ವಕವಾಗಿ ವಾತಾಯನ ವ್ಯವಸ್ಥೆಯನ್ನು ಅಳವಡಿಸಿಕೊಳ್ಳುವುದು ಉತ್ತಮ ಗೃಹದ ಲಕ್ಷಣ. ಕ್ರಮವರಿತು ಅಭ್ಯಂಗಸ್ನಾನವನ್ನು ಮಾಡುವುದು ಯುಕ್ತವಾಗಿರುತ್ತದೆ ಕೇಸರಾದಿ ಪುಷ್ಪಗಳಿಂದ ಸುಗಂಧಗಳು ಸಂಸ್ಕರಿಸಲ್ಪಡುತ್ತವೆ. ವೈವಿಧ್ಯಮಯವಾದ ಪರಿಮಳಯುಕ್ತ ಪ್ರಸಾದನ ಸಾಮಗ್ರಿಗಳು ರಾಜಭೋಗ್ಯಾರ್ಹವಾಗಿವೆ.

**ಹದಿನೈದನೆಯ ತರಂಗ–** ಸುಗಂಧದ್ರವ್ಯಗಳ ಸಂಸ್ಕರಣವು ಮಾನವನ ನಿಶಿತ ಕೌಶಲ್ಯಕ್ಕೆ ಹಿಡಿದ ಕನ್ನಡಿಯಾಗಿದೆ. ಗಂಧನಕ್ರಿಯೆಯು ಮರ್ದನಾದಿ ಪಂಚ ವಿಧಾನಗಳಿಂದ ತಯಾರಿಸಲ್ಪಡುತ್ತದೆ. ಸುಗಂಧದ್ರವ್ಯಗಳ(ಹದಿನಾರು ಬಗೆ) ಪರಸ್ಪರ ಮಿಶ್ರಣಕ್ರಿಯೆಗಳಿಂದ ಅಸಂಖ್ಯಾತ ಗಂಧಗಳಲ್ಲಿರಿಸಬಹುದಾಗಿರುತ್ತದೆ. ಸುಗಂಧದ್ರವ್ಯಗಳು ದುರ್ಗಂಧ ನಿವಾರಣೆಗಾಗಿಯೂ ವಾತಾವರಣದ ಶುದ್ಧಿಗಾಗಿಯೂ ಬಳಕೆಯಲ್ಲಿವೆ.

**ಹದಿನಾರನೆಯ ತರಂಗ:–** ನೂತನ ವಸ್ತ್ರೋಪಭೋಗಕ್ಕನುಗುಣವಾಗಿ ಶುಭಾಶುಭ ಫಲಗಳುಂಟಾಗುತ್ತವೆ. ಸಮಯ ಸಂದರ್ಭಗಳಿಗನುಗುಣವಾಗಿ ವಿವಿಧ ಬಗೆಯ ಪೋಷಾಕುಗಳನ್ನು ಧರಿಸುವುದುಚಿತ. ಋತುಗಳಿಗನುಸಾರವಾಗಿ ಪುಷ್ಪಿಸುವ ಮಾಲಿಕಾ ಧಾರಣವೂ ಒಂದು ಭೋಗವೇ ಆಗಿರುತ್ತದೆ. ರತ್ನಾಹಾರಗಳನ್ನು ವಿಚಕ್ಷಣರು ಸರಗಳನ್ನಾಗಿಸುತ್ತಾರೆ. ಇವುಗಳು ಸ್ತ್ರೀಪುರುಷರಿಗಾಗಿ ವಿಭಿನ್ನ ನಮೂನೆಗಳಲ್ಲಿರುತ್ತವೆ. ಈ ಭೋಗಗಳೆಲ್ಲವೂ ಧರಿಸುವವರ ಐಶ್ವರ್ಯ, ಕಾಂತಿ, ಯಶಸ್ಸು ಮತ್ತು ಆಯುರ್ವರ್ಧಕಗಳಾಗಿರುತ್ತವೆ.

**ಹದಿನೇಳನೆಯ ತರಂಗ–** ವೈವಿಧ್ಯಮಯ ರತ್ನಗಳನ್ನು ಅನಾವರಣಗೊಳಿಸಿದ ಭಾಗವಿದು. ರತ್ನಗಳು ಹತ್ತು ವಿಧಗಳಲ್ಲಿರುತ್ತವೆ. ವಜ್ರ, ಮುತ್ತು, ಪದ್ಮರಾಗ, ಇಂದ್ರನೀಲ ಮತ್ತು ಮರಕತ(ಗಾರುತ್ಮತ)ಗಳು ಮಹಾರತ್ನಗಳೆನಿಸಲ್ಪಟ್ಟಿವೆ. ಪುಷ್ಯರಾಗ, ವೈಢೂರ್ಯ, ಗೋಮೇದ, ಸ್ಫಟಿಕ ಮತ್ತು ಪ್ರವಾಳಗಳೆಂದು

---

[15] ಶಿವತತ್ತ್ವರತ್ನಾಕರ – ಸಂಪುಟ 1 – ಸಂ: ಎಸ್.ನಾರಾಯಣ ಶಾಸ್ತ್ರಿ ಮತ್ತು ಆರ್. ರಾಮಾಶಾಸ್ತ್ರಿ, ಪ್ರಾಚ್ಯವಿದ್ಯಾ ಸಂಶೋಧನಾ ಕೇಂದ್ರ, ಮೈಸೂರು ವಿಶ್ವವಿದ್ಯಾಲಯ, ಮೈಸೂರು –1964. (6–13–199)

ಪಂಚರತ್ನಗಳೆನಿಸಿವೆ. ಈ ಎಲ್ಲ ರತ್ನಗಳ ಲಕ್ಷಣ, ಜಾತಿ, ದೊರಕುವ ಪ್ರದೇಶ, ಉತ್ಪತ್ತಿಕ್ರಮ, ಭೇದ, ದೋಷ ಮತ್ತು ಶುಭಾಶುಭಗಳಿಂದ ಪ್ರಭಾವಿತವಾಗಿವೆ.

**ಹದಿನೆಂಟನೆಯ ತರಂಗ:–** ಷಡ್ರಸೋಪೇತವಾದ ಪಾಕವೈವಿಧ್ಯಗಳನ್ನು ತಯಾರಿಸುವ ಪ್ರಕೋಷ್ಠವು ವಿಶಾಲವಾಗಿರುತ್ತದೆ. ಪಾಚಕರು ಉತ್ತಮ ಲಕ್ಷಣದಿಂದಿರಬೇಕು. ಸಸ್ಯಮೂಲಗಳು ಮತ್ತು ಧಾನ್ಯಸಪ್ತಕಗಳು ಉತ್ತಮ ಆರೋಗ್ಯವರ್ಧಕಗಳಾಗಿರುತ್ತವೆ. ನುರಿತ ಬಾಣಸಿಗರು ಇವುಗಳಿಂದ ತರಹೇವಾರಿ ವ್ಯಂಜನಗಳನ್ನು ತಯಾರಿಸಬಹುದು.

**ಹತ್ತೊಂಭತ್ತನೆಯ ತರಂಗ–** ಭಕ್ಷ್ಯ–ಬೋಜ್ಯ–ಚೋಷ್ಯ–ಚರ್ವ್ಯ–ಲೇಹ್ಯ–ಪೇಯಗಳೆಂಬ ಷಡ್ವಿಧ ಆಹಾರಕ್ರಮಗಳನ್ನು ವಿವೇಚಿಸಲಾಗಿದೆ. ಕ್ರಮವಾಗಿ ಕಡಿದು ತಿನ್ನುವ (ಕರಿದ), ಕಲಸಿ ತಿನ್ನುವ, ಸುಲಿದು ಸೇವಿಸುವ, ಅಗಿಯುತ್ತಾ ಮೆಲುಕುವ, ನೆಕ್ಕಿ ತಿನ್ನುವ ಮತ್ತು ಕುಡಿದು ಸೇವಿಸುವಂತಹ ಪದಾರ್ಥಗಳು ವೈವಿಧ್ಯಮಯವಾಗಿದ್ದು, ಷಡ್ರಸಗಳಿಗೂ ಮೂಲದ್ರವ್ಯವಾಗಬಹುದಾದ ಕ್ಷೀರವು 'ಪಾಕರಾಜ' ವೆನಿಸಿದೆ.

**ಇಪ್ಪತ್ತನೆಯ ತರಂಗ–** ಈ ತರಂಗಾರಂಭದಲ್ಲಿ ಉತ್ತಮ ಭೋಜನಶಾಲೆಯ ಸ್ಥಳ, ಪಾಚಕರು ಮತ್ತು ಪರಿಚಾರಕರು, ಪೀಠೋಪಕರಣಗಳು, ಬೆಳಕಿನ ವ್ಯವಸ್ಥೆಗಳು ಮುಂತಾದವುಗಳನ್ನು ಲಕ್ಷಿಸಲಾಗಿದೆ. ವಿಷಂಮಿಶ್ರಿತ ಆಹಾರಗಳಿಗೆ ಪ್ರಾಣಿಪಕ್ಷಿಗಳ ಪ್ರತಿಕ್ರಿಯೆಗಳೂ ವಿಭಿನ್ನವಾಗಿರುತ್ತವೆ. ಭೋಜನವೈವಿಧ್ಯ, ಮತ್ತು ಇವುಗಳನ್ನು ಬಡಿಸುವ ಕ್ರಮಗಳು ವೈಶಿಷ್ಟ್ಯಪೂರ್ಣವಾಗಿರುತ್ತವೆ.[16] ವಿವಿಧ ಜಲಮೂಲಗಳು ಮತ್ತು ಶುದ್ಧಜಲದ ಸಂಸ್ಕಾರಕ್ರಿಯೆಗಳು ಅನಾವರಣಗೊಂಡಿವೆ. ಪಾದಾಭ್ಯಂಜನ, ಪೂಗೀಫಲ ಸಂಸ್ಕರಣೆ, ಶಯ್ಯಾಭೋಗದ ವಿಧಿವಿಧಾನಗಳು ಅನುಕರಣೀಯ.

**ಇಪ್ಪತ್ತೊಂದನೆಯ ತರಂಗ–** ಈ ತರಂಗದಲ್ಲಿ ಆಯುರ್ವೇದದ ಸ್ವರೂಪ ಹಾಗೂ ಈ ಶಾಸ್ತ್ರದ ಚಿಕಿತ್ಸಾವಿಧಾನಗಳನ್ನು ತಿಳಿಸುವುದಾಗಿರುತ್ತದೆ. ಆಯುರ್ವೇದವು ಮುಖ್ಯವಾಗಿ ರೋಗದ ಕಾರಣ, ಲಕ್ಷಣ ಮತ್ತು ಪ್ರತೀಕಾರಗಳೆಂಬ ಮೂರು ಚಿಕಿತ್ಸಾ ಶಾಖೆಗಳಲ್ಲಿದ್ದು, ವೈದ್ಯನ ಲಕ್ಷಣಗಳನ್ನೂ ಶ್ರುತಪಡಿಸಲಾಗಿದೆ.

---

[16] ಶಿವತತ್ತ್ವರತ್ನಾಕರ – ಸಂಪುಟ 1 – ಸಂ: ಎಸ್.ನಾರಾಯಣ ಶಾಸ್ತ್ರಿ ಮತ್ತು ಆರ್. ರಾಮಾಶಾಸ್ತ್ರಿ, ಪ್ರಾಚ್ಯವಿದ್ಯಾ ಸಂಶೋಧನಾ ಕೇಂದ್ರ, ಮೈಸೂರು ವಿಶ್ವವಿದ್ಯಾಲಯ, ಮೈಸೂರು –1964. (6–20–49)

ಆಯುರ್ವೇದವು ತಿಚಿದಇಂಂಷಂಗಿಂಳ ಆಧಾರದಲ್ಲಿ ಕಂಡುಕೊಳ್ಳುವ ಚಿಕಿತ್ಸಾ ಪದ್ಧತಿಯಾಗಿದೆ. ಮಿಥ್ಯಾಹಾರ, ಅಕಾಲ ಭೋಜನ, ಕಲುಷಿತ ಪದಾರ್ಥ ಸೇವನೆಗಳು ರೋಗಕಾರಕಗಳೆನಿಸಿವೆ.

**ಇಪ್ಪತ್ತೆರಡನೆಯ ತರಂಗ–** ಆಯುರ್ವೇದೋಕ್ತ ರೀತ್ಯಾ ಪ್ರತಿಯೊಂದು ಆಹಾರ ಪದಾರ್ಥಗಳೂ ನಿರ್ದಿಷ್ಟವಾದ ದ್ರವ್ಯಗುಣಗಳನ್ನು ಹೊಂದಿರುತ್ತದೆ. ಹಸುಗಳ ಬಣ್ಣಗಳನ್ವಯ ಅವುಗಳ ಹಾಲು ಮತ್ತು ಸ್ಥಿತಿಗನುಗುಣವಾಗಿ ಆಹಾರ ಪದಾರ್ಥಗಳು ಗುಣಧರ್ಮಗಳಿಂದ ವೈವಿಧ್ಯಮಯವಾಗಿರುತ್ತವೆ ಆಹಾರ ಪದಾರ್ಥಗಳನ್ನು ಸ್ವೀಕರಿಸುವ ವಿಧಾನಗಳನ್ನು ಚರ್ಚಿಸಲಾಗಿದೆ. ವಮನ, ವಿರೇಚನ, ಸ್ವೇದನಾದಿಗಳು ಚಿಕಿತ್ಸಾಕ್ರಮಗಳು. ರಸಾಯನಗಳನ್ನು ತಯಾರಿಸುವ ವಿಧಾನಗಳು ಸ್ವಾರಸ್ಯಕರವಾಗಿವೆ.

**ಇಪ್ಪತ್ತಮೂರನೆಯ ತರಂಗ–** ಪಾರದದ ಮೂಲದನ್ವಯ ವಿವಿಧ ನಿರುಕ್ತಿಗಳಿಂದ ಪರಿಚಯಿಸಲಾಗಿದೆ. ಇವುಗಳ ಪ್ರಯೋಜನವನ್ನು ಕ್ರಮವಾಗಿ ರೋಗ, ರಸಕರ್ಮ, ಧಾತುವಾದ, ರಸಾಯನ ಮತ್ತು ಮಾನವ–ಮೃಗ–ಪಕ್ಷಿಗಳ ಸರ್ವಸಿದ್ಧಿಗಳಿಗೂ ತಾರಕಮಂತ್ರವೆಂದು ತಿಳಿಯಲಾಗಿದೆ. ಅಷ್ಟಾದಶ ಸಂಸ್ಕಾರ ಸಮಯದಲ್ಲಿ ಐದು ಅವಸ್ಥೆಗಳನ್ನು ಹೊಂದುತ್ತದೆ. ಅದಿರುಗಳ ಉತ್ಪತ್ತಿ ಕ್ರಮಗಳನ್ನು ಪೌರಾಣಿಕ ಹಿನ್ನೆಲೆಯಿಂದ ಗುರುತಿಸಿ, ಇವುಗಳು ದೊರಕುವ ಸ್ಥಳ, ಲಕ್ಷಣ ಮತ್ತು ಉಪಯೋಗಗಳೊಂದಿಗೆ ತಿಳಿಸಲ್ಪಟ್ಟಿದೆ.

**ಇಪ್ಪತ್ತನಾಲ್ಕನೆಯ ತರಂಗ–** ರಸಸಂಬಂಧವು ಸಸ್ಯಮೂಲಗಳಿಂದಾಗುವುವು. ಸಸ್ಯಮೂಲಗಳ ಪಂಚಾಂಗಗಳು ಪಾರದದ ನಿಯಾಮಕಗಳಾಗಿ, ರಸಭಸ್ಮೀಕರಣಕ್ಕೂ ಪ್ರಯೋಜನವಿದೆ. ಇವುಗಳ ಕಷಾಯವನ್ನು ಆಮ್ಲದ್ರವ್ಯಾದಿಗಳೊಂದಿಗೆ ಸೇರಿಸಿ ಲೋಹ, ಪಾಷಾಣ, ಗಂಧಕ, ಅಭ್ರಕಗಳ ಶುದ್ಧಿಗೆ ಪ್ರಯೋಜನವಿದೆ. ಅಷ್ಟಾದಶ ಸಂಸ್ಕಾರಗಳಿಂದ ಸಿದ್ಧಗೊಂಡ ಪಾರದ 'ರಸರಾಜ'ವೆನಿಸುತ್ತದೆ.

**ಇಪ್ಪತ್ತೈದನೆಯ ತರಂಗ–** ರಸಕ್ರಿಯೆಗೆ ಸಂಬಂಧಿಸಿದ ಕಾರ್ಯಾಲಯವನ್ನು ಸೂಕ್ತ ಪ್ರದೇಶ ಮತ್ತು ವಾಸ್ತುಕ್ರಮದಂತೆ ನಿರ್ಮಿಸುವುದು ಅವಶ್ಯ. ಪಾರದದ ಅಷ್ಟಾದಶ ಸಂಸ್ಕಾರಕ್ಕೆ ಅವಶ್ಯವಿರುವ ಸಾಧನ ಸಲಕರಣೆಗಳನ್ನು ಹತ್ತೊಂಭತ್ತನೆಯ ಶ್ಲೋಕದಿಂದ ಎಂಭತ್ತಮೂರನೆಯ ಶ್ಲೋಕ ಪರ್ಯಂತ ಸೊಗಸಾಗಿ ಚಿತ್ರಿಸಲಾಗಿದೆ. ಇಂತಹ ಪಾರದವು ಮಾನವನನ್ನು ವೇದನೆಗಳಿಲ್ಲದ ವಜ್ರಕಾಯದಂತೆ ರೂಪಿಸುವುದರಲ್ಲಿ ಸಾಕಾರವಾಗುತ್ತದೆ .

**ಇಪ್ಪತ್ತಾರನೆಯ ತರಂಗ–** ಜೀವ ಮತ್ತು ಜೀವಕೋಶಗಳಿಗೆ ಪ್ರತಿಕೂಲವಾಗಿ ಪರಿಣಮಿಸಿ ತನ್ನ ತೀವ್ರತರವಾದ ಚಟುವಟಿಕೆಯಿಂದ ವ್ಯಾಪಿಸುವ ಪ್ರಕ್ರಿಯೆಯನ್ನು ಹೊಂದಿರುವವುಗಳು ವಿಷವೆನಿಸುತ್ತವೆ. ಪ್ರಾಣಿವರ್ಗಗಳಲ್ಲಿ ಸರ್ಪವರ್ಗವು ಅತ್ಯಂತ ಸೂಕ್ಷ್ಮತರವಾದ ವಿಷವನ್ನು ಹೊಂದಿರುತ್ತದೆ. ಸರ್ಪಗಳಲ್ಲಿನ ವಿಷಾಂಶವು ಋತುಮಾನ ಮತ್ತು ವಯೋಮಾನಕ್ಕನುಗುಣವಾಗಿ ವ್ಯತ್ಯಸ್ತವಾಗಿರುತ್ತವೆ. ಹಾವುಗಳು ಕಡಿಯಲಿಕ್ಕಿದ್ದ ಕಾರಣದನ್ವಯ ವಿಷಂದಂ ತೀವ್ರತೆಯಿರುತ್ತದೆ. ಇವುಗಳಲ್ಲೆಲ್ಲಾ ಪೂರ್ವವೈರ ಮತ್ತು ಹಸಿವಿ(ಕ್ಷುಧೆ)ನ ಕಾರಣದಿಂದ ಕಚ್ಚಿದ ವಿಷವು ತೀವ್ರಗತಿಯಲ್ಲಿರುತ್ತದೆ.

**ಇಪ್ಪತ್ತೇಳನೆಯ ತರಂಗ–** ಹಾವು ಕಚ್ಚಿದವರಿಗೆ ಮೂರು ಹಂತಗಳಲ್ಲಿ ಪ್ರಾಥಮಿಕ ಉಪಚಾರವನ್ನು ನೀಡಲಾಗುತ್ತದೆ. ಚಿತ್ತಸ್ವಾಸ್ಥ್ಯವನ್ನು ನಿಯಂತ್ರಣ–ರಜ್ಜುಬಂಧನಾದಿಗಳು, ದ್ವಿತೀಯ ಘಟ್ಟದಲ್ಲಿ ಡಮೂಲಿಕೆಗಳಿಂದ ಉಪಚಾರಗಳು, ತೃತೀಯ ಘಟ್ಟದಲ್ಲಿ ಅಭ್ಯಂಗ ಚಿಕಿತ್ಸೆಗಳು ಅನುಸರಣೀಯ. ಇತರ ಕ್ರಿಮಿಕೀಟಾದಿಗಳಿಂದುಂಟಾದ ವಿಷಗಳಿಗೂ ಚಿಕಿತ್ಸೆಗಳಿವೆ. ಕೆಳದಿಯ ವೀರಭದ್ರನಾಯಕನಿಗೆ ಪಟ್ಟಾಭಿಷೇಕ ರಾಜ್ಯಭಾರ ಕ್ರಮ ಹಾಗೂ ಈತನನುಸರಿಸಿದ ಆಧ್ಯಾತ್ಮ ಜೀವನವನ್ನು ವಾಚಿಸಿ ಕಲ್ಲೋಲಾಂತ್ಯವನ್ನು ಮಾಡಲಾಗಿದೆ.[17]

ಪರಾಮರ್ಶನಗ್ರಂಥಗಳು:– ದತ್ತಿಲ, ನಂದಿ, ಭೃಂಗಿ, ಕೋಹಲ, ಭರತ, ಆದಿಭರತ, ಗೀತರತ್ನಾಕರ, ಉತ್ಪಲ, ಶಾರ್ಙ್ಗಧರ, ವಿಶ್ವಕರ್ಮ, ಯಮ, ವರುಣ, ವಾತ್ಸ್ಯಾಯನ, ನಂದೀಶ, ಗೌಣೀಕಾಪುತ್ರ, ಶುಕ್ರ, ಬೃಹಸ್ಪತಿ, ನಳ, ಧನ್ವಂತರಿ, ಅಶ್ವಿನಿದೇವತೆಗಳು, ರತ್ನಶಾಸ್ತ್ರ, ಖನಿಶಾಸ್ತ್ರ, ಮಂತ್ರಶಾಸ್ತ್ರ, ಯೋಗರತ್ನಾವಲಿ, ಪ್ರಯೋಗಸಾರ ಮತ್ತು ಗರುಡಸಂಹಿತೆ.

**ಏಳನೆಯ ಕಲ್ಲೋಲ**

ಸಪ್ತಮ ಕಲ್ಲೋಲವು ಹದಿನೈದು ತರಂಗಗಳನ್ನು ಹೊಂದಿದ್ದು ಒಟ್ಟು ಎರಡು ಸಾವಿರದ ನಾಲ್ಕುನೂರ ಅರವತ್ತಮೂರು ಶ್ಲೋಕಗಳಿಂದ ನಿಬದ್ಧವಾಗಿದೆ. ತರಂಗಗಳಿಗೆ ನೀಡಲಾದ ಶೀರ್ಷಿಕೆಗಳು– 1.ಆಸ್ಥಾನ ಉಪಭೋಗ ವರ್ಣನೆ 2. ಇಂದ್ರಜಾಲವಿದ್ಯಾ ಪ್ರದರ್ಶನ 3. ಸಾಹಿತ್ಯಶಾಸ್ತ್ರ, ಕಾವ್ಯಲಕ್ಷಣಾದಿ ರಸಪರ್ಯಂತ ವರ್ಣನೆ 4. ನಾಯಕ–ನಾಯಕಿ ಗುಣಸ್ವಭಾವ, ವೃತ್ತಿ, ಗುಣದೋಷವರ್ಣನೆ 5. ಅಲಂಕಾರಶಾಸ್ತ್ರ ಪರಿಚಯಾತ್ಮಕ ಅಧ್ಯಯನ 6. ನಾಟಕ ಇತಿಹಾಸ ಸ್ವರೂಪ ನಿರೂಪಣೆ 7. ಪುತ್ರೋಪಭೋಗ ನಿರೂಪಣೆ 8.ಹೋರಾಶಾಸ್ತ್ರ ನಿರೂಪಣೆ 9. ಸಾಮುದ್ರಿಕಾಶಾಸ್ತ್ರದಲ್ಲಿ ಸ್ತ್ರೀಲಕ್ಷಣ

[17] ಶಿವತತ್ತ್ವರತ್ನಾಕರ – (ಸಂ) ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ್, ಸಂಪುಟ 1 ಮತ್ತು 2, – ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ – 1999. (6-27-118,139)

ನಿರೂಪಣೆ 10.ಸಾಮುದ್ರಿಕಾಶಾಸ್ತ್ರದಲ್ಲಿ ಪುರುಷಲಕ್ಷಣ ನಿರೂಪಣೆ 11.ಗಜಲಕ್ಷಣ ನಿರೂಪಣೆ 12.ಅಶ್ವಶಾಸ್ತ್ರ ಪ್ರಕರಣ 13. ಅಶ್ವ–ರಥ–ಗೋಲಕ್ಷಣಗಳು ಮತ್ತು ಚಿಕಿತ್ಸಾ ವಿಧಾನ 14. ಶಿವಭೂಪನ ಚರಿತ್ರೆ, ಕೋಟಾಚರಿತ್ರೆ 15. ಯೋಗೋಪದೇಶವರ್ಣನೆ.

**ಮೊದಲನೆಯ ತರಂಗ–** ಪ್ರಸ್ತುತ ತರಂಗವು ರಾಜಾಸ್ಥಾನ(ಸಭಾಗೃಹ)ದ ಚಿತ್ರಣದಿಂದ ತುಂಬಿದೆ. ಆರಂಭದಲ್ಲಿ ಸಿಂಹಾಸನದ ಲಕ್ಷಣವನ್ನು ತಿಳಿಸಲಾಗಿದೆ. ಸಿಂಹಾಸನಾಧೀಶ ರಾಜಾಸ್ಥಾನ ಚಿತ್ರಣವನ್ನು ಸೊಗಸಾಗಿ ಮೂಡಿಸಲಾಗಿದೆ. ರಾಜಕುಮಾರರ, ಮಂತ್ರಿಗಳ ಮತ್ತು ವಿವಿಧ ವರ್ಗದ ಅಧಿಕಾರಿಗಳ ಆಸನಗಳು ಹೇಗೆ ಶ್ರೇಣೀಕೃತವಾಗಿರಬೇಕೆಂದೂ, ರಾಜನಲ್ಲಿ ಮಾಡಿಕೊಳ್ಳುವ ಅರಿಕೆಯ ಕ್ರಮ ಹಾಗೂ ರಾಜಾಸ್ಥಾನದಲ್ಲಿ ಪಡೆದುಕೊಳ್ಳುವ ಕ್ರಮಗಳು ಉಲ್ಲಿಖಿತವಾಗಿವೆ.

**ಎರಡನೆಯ ತರಂಗ–** ರಾಜರು ವಿರಾಮ ಸಮಯಗಳಲ್ಲಿ ರಂಜಿಸಬಹುದಾದ ಇಂದ್ರಜಾಲ ಪ್ರದರ್ಶನಗಳ ಕುರಿತಾದ ತರಂಗವಾಗಿದೆ. ವಿವಿಧ ರಸ, ಕಷಾಯಗಳಿಂದ ತಯಾರಿಸಿದ ಸಿದ್ಧವಸ್ತುಗಳು ಈ ವಿದ್ಯೆಗೆ ಪೂರಕ. ಈ ವಿದ್ಯೆಯಿಂದ ಮನರಂಜನೆ ಮಾತ್ರವಲ್ಲದೆ ವಾದಪ್ರತಿವಾದಗಳಲ್ಲಿ, ಪರಾಕ್ರಮಗಳಲ್ಲಿ ಮತ್ತು ಗಜಭೀತಿ(ಯುದ್ಧದಲ್ಲಿ)ಯಿಂದ ಪಾರಾಗಬೇಕಾದ ಸಂದರ್ಭಗಳಲ್ಲಿ ಉಪಯುಕ್ತವೆಂದು ತಿಳಿಯಲಾಗಿದೆ.

**ಮೂರನೆಯ ತರಂಗವು:–** ಕಾವ್ಯಶಾಸ್ತ್ರದ ಬಗೆಗೆ ಹೇಳುವುದಾಗಿರುತ್ತದೆ. ಅಲಂಕಾರಶಾಸ್ತ್ರವೆಂದರೆ ಕಾವ್ಯಸಾಧನ, ಸ್ವರೂಪ ಮತ್ತು ಪ್ರಕಾರಾದಿಗಳ ಬಗೆಗೆ ವಿವೇಚಿಸುವುದಾಗಿದೆ. ಛಂದಸ್ಸು, ವಿವಿಧ ಕಾವ್ಯಾರ್ಥಗಳು ಮತ್ತು ರಸವ್ಯಂಜಕತೆಗಳ ವೈಶಿಷ್ಟ್ಯಗಳು ಅವಲೋಕಿಸಲ್ಪಟ್ಟಿವೆ. ಅಲಂಕಾರಶಾಸ್ತ್ರಕ್ಕೆ ಸಂಬಂಧಿಸಿದ ಸಮಗ್ರ ಅಂಶಗಳನ್ನು ಸ್ಥೂಲವಾಗಿ ಪರಿಚಯಿಸುವ ಪ್ರಯತ್ನವಾಗಿ ಮೂಡಿ ಬಂದಿದೆ.

**ನಾಲ್ಕನೆಯ ತರಂಗ:–** ಅಲಂಕಾರಶಾಸ್ತ್ರದ ಮುಂದುವರೆದ ಭಾಗವಾಗಿದೆ. ಈ ಭಾಗದಲ್ಲಿ ನಾಯಕ ಮತ್ತು ನಾಯಕಿಯರ ವಿಧಗಳು ಸಾಮಾನ್ಯಗುಣಗಳು, ರೂಪಕ ವೈದರ್ಭ್ಯಾದಿ ಶೈಲಿಗಳು ಕಾವ್ಯದೋಷಗಳ ಬಗೆಗೆ ಪ್ರಸ್ತಾಪ ಮಾಡಲಾಗಿದೆ.

**ಐದನೆಯ ತರಂಗ:–**ಕಾವ್ಯಶಾಸ್ತ್ರದಲ್ಲಿ ಲಾಕ್ಷಣಿಕರು ಅನೇಕ ಸಿದ್ಧಾಂತಗಳನ್ನು ಪ್ರತಿಪಾದಿಸಿದ್ದಾರೆ. ಕಾವ್ಯವನ್ನು ಧ್ವನಿ, ಗುಣೀಭೂತವ್ಯಂಗ್ಯ ಮತ್ತು ಚಿತ್ರಕಾವ್ಯಗಳೆಂಬ ಮೂರು ವಿಭಾಗಗಳನ್ನು ಸಾದ್ಯಂತವಾಗಿ ವಿವರಿಸಲಾಗಿದೆ. ಧ್ವನಿಸಿದ್ಧಾಂತದ ಮೂರ್ಧನ್ಯನು ಆನಂದವರ್ಧನ. ಇವನು ನವೀನ ಅಲಂಕಾರಿಕನೆಂದು

ಪರಿಗಣಿಸಲ್ಪಟ್ಟಿದ್ದಾನೆ. ಈ ಸಿದ್ಧಾಂತದನ್ವಯ ಇಂದ್ರಿಯ ಗೋಚರವಾಗದ ಸಂಕೇತ ಹಾಗೂ ಅವಿನಾಭಾವ ಸಂಬಂಧವನ್ನು ಮೀರಿ ಸ್ಫುರಿಸುವ ವಾಕ್ಯೋಕ್ತಿಯನ್ನು 'ಧ್ವನಿ' ಎನ್ನಲಾಗುತ್ತದೆ. ಉಪಮಾಲಂಕಾರದಿಂದ ಸಂಕರಾಲಂಕಾರದವರೆಗಿನ ಅರವತ್ತೆಂಟು ಅರ್ಥಾಲಂಕಾರಗಳನ್ನು ಹೆಸರಿಸಿ ಸಾದ್ಯಂತವಾಗಿ ವಿವರಿಸಿ ತರಂಗಾಂತ್ಯವನ್ನು ಮಾಡಲಾಗಿದೆ.

**ಆರನೆಯ ತರಂಗ:–** ಈ ತರಂಗವು ಭರತಮುನಿಯ ನಾಟ್ಯಶಾಸ್ತ್ರಕ್ಕೆ ಸಂಬಂಧಪಟ್ಟಿರುವುದಾಗಿರುತ್ತದೆ. ನಾಟ್ಯಶಾಸ್ತ್ರದ ದಶರೂಪಕಗಳ ಬಗೆಗಿನ ಪರಿಚಯವಿದೆ. ಅರ್ಥಪ್ರಕೃತಿಗಳು, ಅವಸ್ಥೆಗಳು ಮತ್ತು ಸಂಧಿಗಳು ಪರಸ್ಪರ ಅವಲಂಬಿಸಲ್ಪಟ್ಟು ರೂಪಕದ ತಂತ್ರಾಂಶಗಳೆನಿಸಿವೆ. ರಸಪುಷ್ಟಿಯ ಸಹಕಾರಕ್ಕಾಗಿ ಮೂರು ವಿಧದ ಅರ್ಥೋಪಕ್ಷೇಪಗಳಿವೆ. ವೃತ್ತಗಳನ್ನು ಬಳಸುವ ಪದ್ಧತಿಯು ವಿಶೇಷವಾಗಿರುತ್ತದೆ.

**ಏಳನೆಯ ತರಂಗ:–** ಸ್ಥೂಲ ಹಾಗೂ ಸೂಕ್ಷ್ಮೇಂದ್ರಿಯಗಳಿಗೆ ಅನ್ನಮೂಲದಿಂದುಂಟಾಗುವ ದೋಷ ಪರಿಹಾರಕ್ಕಾಗಿ ಷೋಡಶ ಸಂಸ್ಕಾರಗಳಿವೆ. ಈ ಗ್ರಂಥದಲ್ಲಿ ಗರ್ಭಾಧಾನಮ್, ಪುಂಸವನಮ್, ಸೀಮಂತ, ಜಾತಕರ್ಮ,ಉಪನಿಷ್ಕರಣಮ್, ಅನ್ನಪ್ರಾಶನಮ್, ಚೌಲ, ಉಪನಯನಮ್, ಸಮಾವರ್ತನಮ್(ಸ್ನಾತಕ) ಮತ್ತು ವಿವಾಹಗಳೆಂಬ ಹತ್ತು ಸಂಸ್ಕಾರಗಳು ಇನ್ನುಳಿದ ಪ್ರಾಜಾಪತ್ಯವ್ರತ, ಸೌಮ್ಯವ್ರತ, ಆಗ್ನೇಯವ್ರತ, ವೈಶ್ವದೇವವ್ರತ, ಗೋದಾನ ಮತ್ತು ಅಂತ್ಯೇಷ್ಟಿಗಳೆಂಬ ಆರು ಸಂಸ್ಕಾರಗಳ ಬಗೆಗೆ ಈ ಗ್ರಂಥದಲ್ಲಿ ಉಲ್ಲೇಖವಿಲ್ಲ.

**ಎಂಟನೆಯ ತರಂಗ:–** ರಾಶ್ಯಾಧಿಪರ ಪ್ರಭಾವವಶಾತ್ ಜಾತಕನಿಗೆ ಶುಭಾಶುಭ ಫಲಗಳು ಪ್ರಾಪ್ತವಾಗುವುದೆಂದು ಜ್ಯೋತಿಶ್ಯಾಸ್ತ್ರದ ಸಿದ್ಧಾಂತ ಜಾತಕನ ಜನ್ಮಕಾಲದನ್ವಯ ಮೇಷಾದಿ ದ್ವಾದಶ ರಾಶಿಗಳು ಮತ್ತು ರವ್ಯಾದಿ ನವಗ್ರಹಗಳು ಹನ್ನೆರಡು ಭಾವಗಳಲ್ಲಿರುವಂತೆ ಜಾತಕದಲ್ಲಿ ಗೋಚರಿಸುವ ವಿಷಯಗಳನ್ನು ವಿವೇಚಿಸುವ ಜ್ಯೋತಿಃಶಾಸ್ತ್ರದ ಸ್ಥೂಲ ಪರಿಚಯದ ತರಂಗವಾಗಿದೆ.[18]

**ಒಂಭತ್ತನೆಯ ತರಂಗವು:–** ಹೋರಾಶಾಸ್ತ್ರದನುಗುಣವಾಗಿ ಸ್ತ್ರೀಯರ ಲಕ್ಷಣಗಳನ್ನು ತಿಳಿಸಲಾಗಿದೆ. ಅಂಗವಿನ್ಯಾಸವನ್ನಧಿಕರಿಸಿ ಸುಲಕ್ಷಣಾಶೀಲಳಾದವಳಿಗೆ ಅಷ್ಟಲಕ್ಷಣಭೂಮಿಕೆಯಲ್ಲಿರುವುದು ಅವಶ್ಯ

---

[18] ಶಿವತತ್ತ್ವರತ್ನಾಕರ – (ಸಂ) ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ್, ಸಂಪುಟ 1 ಮತ್ತು 2, – ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ – 1999. (7-8-4-13)

ಪಾದತಳದಿಂದ ಕೇಶಪರ್ಯಂತ ಅರವತ್ತಾರು ಅಂಗಗಳು ಸ್ತ್ರೀಯರ ಉಗಮಸ್ಥಾನವೆನಿಸಿವೆ. ಈ ಅಂಶಗಳನ್ನು ಅಧಿಕರಿಸಿ ಸ್ತ್ರೀಯರ ತರತಮ ಭಾವಗಳನ್ನು ವಿಶೇಷವಾಗಿ ತರಂಗದುದ್ದಕ್ಕೂ ಲಕ್ಷಿಸಲಾಗಿದೆ.

**ಹತ್ತನೆಯ ತರಂಗ:–** ಸಾಮುದ್ರಿಕಾ ಶಾಸ್ತ್ರದಲ್ಲಿ ಪಾರಂಗತನಾಗಬೇಕಿರುವವನಿಗೆ ವ್ಯಕ್ತಿಯ ಶರೀರಲಕ್ಷಣಗಳ ಜ್ಞಾನ ಅವಶ್ಯಕ. ವ್ಯಕ್ತಿಯ ಅಂಗಾಂಗಗಳು ಹೊಂದಿರುವ ಮೃದುತ್ವಾದಿಗಳು, ದೇಹದ ಸ್ವರೂಪ, ಹಸ್ತದಲ್ಲಿರುವ ರೇಖಾವಿನ್ಯಾಸ, ಪಂಚತತ್ತ್ವಗಳಿಂದ ಪೋಷಿತವಾದ ಸುಪ್ತಸ್ಥಿತಿಯಲ್ಲಿನ ಕಣಗಳು ಇವುಗಳ ಮಾಹಿತಿಗಳಿಗನುಗುಣವಾಗಿ ಸುಖ–ದುಃಖ, ವೀರ್ಯ, ರೂಪ, ವಿದ್ಯೆಗಳು ನಿರ್ಣಯಿಸಲ್ಪಡುತ್ತದೆ. ಒಟ್ಟಾರೆಯಾಗಿ ಇವುಗಳು ವ್ಯಕ್ತಿಯ ರಾಜಯೋಗ, ಶ್ರೀಮಂತಿಕೆ, ಧರ್ಮ, ದಾರಿದ್ರ್ಯ, ಸುಖ–ದುಃಖ, ಸಾಂಸಾರಿಕ ಸ್ಥಿತಿಗತಿಗಳನ್ನು ಅವಲಂಭಿಸಿರುತ್ತದೆಂದು ಅಭಿಪ್ರಾಯಪಡಲಾಗಿದೆ.

**ಹನ್ನೊಂದನೆಯ ತರಂಗ:–** ಹನ್ನೊಂದನೆಯ ತರಂಗವು ಆನೆಗಳ ಪೌರಾಣಿಕ ಹಿನ್ನೆಲೆಯೊಂದಿಗೆ ಪ್ರಾರಂಭಿಸಲಾಗಿದೆ. ಆನೆಗಳ ಉಗಮಸ್ಥಾನ, ಶರೀರ ದಾರ್ಷ್ಯತೆ, ಗುಣಸ್ವಭಾವ, ರೂಪಗಳಿಗನುಗುಣವಾಗಿ ವೈವಿಧ್ಯಮಯವಾಗಿರುತ್ತವೆ. ರಾಜಯೋಗ್ಯ ಮತ್ತು ಪರಿವಾರಯೋಗ್ಯವಾದವುಗಳ ಬಗೆಗೆ ತಿಳಿಸಲಾಗಿದೆ. ಅವುಗಳು ಹೊಂದಿರುವ ರೇಖೆ, ಮಚ್ಚೆ, ಬಣ್ಣ, ರೋಮ, ಬಾಲ, ಹಣೆ, ಆಸನ, ಮುಂಗಾಲು, ನಿರ್ದಿಷ್ಟ ಜಾಗದಲ್ಲಿನ ಕೂದಲು, ದಂತಗಳ ಮೂಲಕಶುಭಾಶುಭಗಳನ್ನು ತಿಳಿಯಲಾಗುತ್ತದೆ.

**ಹನ್ನೆರಡನೆಯ ತರಂಗದಲ್ಲಿ:–** ಅಶ್ವಶಾಸ್ತ್ರಕ್ಕೆ ಸಂಬಂಧಪಟ್ಟ ವಿಷಯಗಳಿವೆ. ಅಶ್ವದ ಉಚ್ಚೈಶ್ರವಸ್ ಮುಂತಾದ ಏಳು ಉತ್ಪತ್ತಿ ಸ್ಥಾನಗಳನ್ನು ಗುರುತಿಸಲಾಗಿದೆ. ಖರಗಳೂ ಈ ಜಾತಿಗೆ ಸಂಬಂಧಿಸಿದವು. ವಿವಿಧ ಋತುಮಾನಗಳಲ್ಲಾದ ಸಂಯೋಗವನ್ನನುಸರಿಸಿ ಇವುಗಳ ಪ್ರಕೃತಿಯು ರೂಪಿಸಲ್ಪಡುತ್ತದೆ. ಅಶ್ವಗಳನ್ನು ಶರೀರಾದಿ ಎಂಟು ಲಕ್ಷಣಗಳಲ್ಲಿ ಗಣಿಸಲ್ಪಡುತ್ತವೆ. ಅಶ್ವಗಳ ಶರೀರದಲ್ಲಿ ಮೂಡಿರುವ ಸುಳಿಯಿಂದ ಶುಭಾಶುಭಗಳನ್ನು ತಿಳಿಯುವ ಕ್ರಮವಿದೆ. ದಂತ, ಕಿವಿ ಮತ್ತು ಲಲಾಟ ರೇಖೆಗಳಿಂದ ಆಯು ಪ್ರಮಾಣವನ್ನು ಅರಿಯಲಾಗುವುದು.

**ಹದಿಮೂರನೆಯ ತರಂಗ:–** ಅಶ್ವಗಳ ಲಕ್ಷಣವನ್ನು ಹೇಳುವಾಗ ಪರಿಣಿತರು ಮೂವತ್ತೆರಡುಶುಭಲಕ್ಷಣಗಳನ್ನು ಹೇಳಿದ್ದಾರೆ. ಅಶ್ವಗಳು ಪ್ರಾಂತಭೇದದಿಂದ ಐವತ್ತನಾಲ್ಕು ಕುಲಗಳಿದ್ದು, ಇವುಗಳ ಲಕ್ಷಣಗಳನ್ನು ಒಂದುನೂರ ನಲವತ್ತು ಶ್ಲೋಕಗಳವರೆಗೆ ವಿವರಿಸಲಾಗಿದೆ. ಅಶ್ವಾರೋಹಿಯು ಉತ್ತಮ ಪರಿಶ್ರಮಿಯಾಗಿರಬೇಕು. ಋಷಿಗಳು ಅಶ್ವಗಳ ಓಟದ ಗತಿಗಳಿಗನುಸಾರವಾಗಿ ವಿಭ್ರಮಾದಿ ಐದು

ಧಾರೆಗಳಲ್ಲಿವೆ ಎಂದಿದ್ದಾರೆ. ವಿವಿಧ ರೀತಿಯ ವಾಹನಗಳಿಗೆ ಪ್ರಾಣಿಗಳೆ ವಾಹಕಗಳು. ಭದ್ರಪ್ಪನಾಯಕನ ಲಗ್ನ ಮತ್ತು ಅತನ ಅಶ್ವಾರೋಹಿ ಕೌಶಲ್ಯಗಳು ತರಂಗಾಂತ್ಯದಲ್ಲಿ ಹೇಳಲಾಗಿದೆ.

**ಹದಿನಾಲ್ಕನೆಯ ತರಂಗ:–** ರಾಜನಾದವನು 'ಕೋಟಾಚಕ್ರಶಾಸ್ತ್ರ'ವನ್ನು ಅರಿತಿರಬೇಕು. ಕೋಟೆಗಳು ಎಂಟು ಬಗೆಯಲ್ಲಿದ್ದು ಅವುಗಳನ್ನು ಉಪಾಯದಿಂದ ವಶಪಡಿಸಿಕೊಳ್ಳುವುದು ಅವಶ್ಯವಾದುದು. ಸ್ವರಜ್ಞಾನ ತಿಳಿದವರಿಂದ ಸೂಚಿಸಿ ಕೋಟಾಚಕ್ರವನ್ನು ರಚಿಸಬೇಕು. ಖಂಡೀಸ್ಥಾನವನ್ನರಿತು ಯುದ್ಧ ಮಾಡುವುದುಚಿತ. ಶಿವಭೂಪಾಲನಿಂದ ವೇಲಾಪುರಿ ಕೋಟೆಯನ್ನು ವಶಮಾಡಿಕೊಂಡ ಮಾಹಿತಿ ಇದೆ.[19] ಈತನು ಕೋಟಾಚಕ್ರಶಾಸ್ತ್ರದಲ್ಲಿ ಪಾರಂಗತನಾಗಿದ್ದು, ಯೋಗವಿದ್ಯಾವಿಶಾರದನಾಗಿದ್ದನು. ತಾನು ನೀಡಿದ 'ಮಹಾದಾನ'ದಿಂದ ಖ್ಯಾತನಾಗಿದ್ದನು.

**ಹದಿನೈದನೆಯ ತರಂಗ:–** ಪ್ರಸ್ತುತ ಗ್ರಂಥದಲ್ಲಿ ಯೋಗವಿದ್ಯೆಯನ್ನು ಸಿದ್ಧರು ಶಿವನಿಂದ ಪಡೆದವರೆನ್ನಲಾಗಿದೆ. ಯೋಗಶಾಸ್ತ್ರವು ಅಂಶಗಳಿಂದ ಸಮಾವೃತವಾಗಿದೆ. ಕುಂಡಲಿನೀ ಚಕ್ರದ ಅಸ್ತಿತ್ವವನ್ನರಿತು ಜಾಗೃತಿಗೊಳಿಸುವುದೆ ಇದರ ತಂತ್ರ. ದೇಹಪಟುತ್ವ ಮುಂತಾದ ಅಷ್ಟಸಿದ್ಧಿಗಳು ಹಠಯೋಗದಿಂದ ಸಾಧ್ಯ. ಪ್ರಾಣಾಯಾಮವೆಂದರೆ ಶ್ವಾಸೋಚ್ಛ್ವಾಸದ ನಿಗ್ರಹವಾಗಿದ್ದು ಏಳು ವಿಧಗಳಲ್ಲಿರುತ್ತದೆ. ಧ್ಯಾನದ ಪರಾಕಾಷ್ಠೆಯ ಸ್ಥಿತಿ ಸಮಾದಿ. ಯೋಗ ಸಿದ್ಧಿಗಾಗಿ ಅನೇಕ ಮುದ್ರೆಗಳನ್ನು ಅನುಷ್ಠಿಸಲಾಗುತ್ತದೆ. ಪರರ ವಸ್ತುಗಳಲ್ಲಿ ಜಿಗುಪ್ಸೆ ಸರ್ವಜೀವರಲ್ಲಿ ಆತ್ಮಭಾವ
ಯೋಗದಿಂದ ಸಾಧ್ಯ.

ಪರಾಮರ್ಶನ ಗ್ರಂಥ– ಹರಮೇಖಲಿಕಾತಂತ್ರ, ಮೇರುತಂತ್ರ, ಮಾನಸೋಲ್ಲಾಸ, ಕೌತುಕಚಿಂತಾಮಣಿ, ವಾಗ್ಭಟ, ಅಮೃತಾನಂದಕೃತಿ, ದಶರೂಪಕ, ವಿದ್ಯಾನಾಥ ಕೃತಿ, ಪುರಾಣ ಸಮುಚ್ಛಯ, ಸಾಮುದ್ರಿಕ ತಿಲಕ, ಹೋರಶಾಸ್ತ್ರ, ವರಾಹಸಂಹಿತಾ, ಬಾರ್ಹಸ್ಪತ್ಯ, ಪಾಲಕಾಪ್ಯ, ಶಾಲೀಹೋತ್ರ, ಗಾರುಡ, ನಲಮತ, ಕುಲಮತ, ಪಾರಾಶರಮತ, ಶಿವಯೋಗ, ಶಿವಾಲೋಕ, ಹಠಯೋಗಪ್ರದೀಪಿಕೆ.

**ಎಂಟನೆಯ ಕಲ್ಲೋಲ**

---

[19] ಶಿವತತ್ತ್ವರತ್ನಾಕರ – (ಸಂ) ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ್, ಸಂಪುಟ 1 ಮತ್ತು 2, – ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ – 1999. (7-14-102)

ಪ್ರಸ್ತುತ ಕಲ್ಲೋಲದಲ್ಲಿ ಎಂಟು ತರಂಗಗಳಿದ್ದು ಒಟ್ಟು ಶ್ಲೋಕಗಳ ಸಂಖ್ಯೆ ಒಂಭತ್ತುನೂರಾ ತೊಂಭತ್ತೆಂಟು. ಪ್ರತಿಯೊಂದು ತರಂಗಗಳಿಗೂ ಪ್ರತ್ಯೇಕವಾದ ಶೀರ್ಷಿಕೆಗಳನ್ನು ನೀಡಲಾಗಿದೆ– 1. ವ್ಯವಹಾರ ನಿರೂಪಣೆ 2. ಧನುಚಕ್ರಗದಾಲಕ್ಷಣ ಸಾಧನಕ್ರಮ ನಿರೂಪಣೆ. 3.ಮಲ್ಲವಿನೋದ ನಿರೂಪಣೆ. 4.ಕುಕ್ಕುಟ–ಲಾವಯುದ್ಧ–ಶುಕಚ್ಛಾಗ–ಶುನಕ ಲಕ್ಷಣಾನುವರ್ಣನೆ 5. ವಿಭೂತಿವಿಧಾನ ಕ್ರಮಮ್ (ಸೋಮಶೇಖರಚರಿತಮ್) 6. ರುದ್ರಾಕ್ಷಧಾರಣವಿಧಿ ಮತ್ತು ಜಪವಿಧಿ ವರ್ಣನೆ (ಸೋಮಶೇಖರಚರಿತಮ್) 7. ಶಿವಪೂಜಾಕ್ರಮ ನಿರೂಪಣೆ 8. ಚನ್ನಾಂಬಿಕಾಚರಿತ್ರ ಮಾಹೇಶ್ವರಮಹಿಮತದ್ಧಾನಫಲಾತಿಶಯಾದಿ ವರ್ಣನಮ್.

**ಮೊದಲನೆಯ ತರಂಗ:–** ವೆಂಕಟಪ್ಪನಾಯಕನು ನವೀನವಾದ ಅನೇಕ ಜನಪ್ರಿಯ ಸಾಮಾಜಿಕ ಕಾರ್ಯಗಳನ್ನು ಅನುಷ್ಠಾನಕ್ಕೆ ತಂದಿರುವುದು ಚರಿತ್ರಾರ್ಹವೆನಿಸಿದೆ. ಸಮಾಜದಲ್ಲಿ ಬಳಕೆಯಲ್ಲಿದ್ದ ಸ್ಮೃತ್ಯುಕ್ತವಾದ ವ್ಯವಹಾರಗಳನ್ನು ಪರಿಚಯಿಸಲಾಗಿದೆ. ಕುಟುಂಬದಲ್ಲಿ ಉದ್ಭವಿಸಬಹುದಾದ ವಿವಿಧ ಬಗೆಯ ಸಮಸ್ಯೆಗಳನ್ನು ಚರ್ಚಿಸಿ ಮಾರ್ಗೋಪಾಯಗಳನ್ನು ಸೂಚಿಸಲಾಗಿದೆ. ಅಪರಾಧಿಗಳಿಗೆ ನೀಡುವ ಶಿಕ್ಷಾಕ್ರಮಗಳನ್ನೂ ಲಕ್ಷಿಸಲಾಗಿದೆ.

**ಎರಡನೆಯ ತರಂಗ:–** ಭದ್ರಪ್ಪನಾಯಕನು ಕೆಳದಿ ಸಾಮ್ರಾಜ್ಯವನ್ನು ವಿಸ್ತರಿಸಿದ ಕ್ರಮಗಳಿಂದ ಆರಂಭವಾಗುತ್ತದೆ. ಪ್ರಮುಖವಾದ ಯುದ್ಧಾಸ್ತ್ರಗಳ ವಿನಿಯೋಗದನ್ವಯ ಯೋಧಲಕ್ಷಣಗಳನ್ನು ತಿಳಿಯಲಾಗುತ್ತದೆ. ಧನುರ್ವಿದ್ಯೆ, ಕುಂತ, ಗದಾವಿದ್ಯೆಗಳನ್ನು ಸೂಚಿಸಲಾಗಿದೆ.

**ಮೂರನೆಯ ತರಂಗ:–** ಈ ತರಂಗವು ಮಲ್ಲಕ್ರೀಡೆಗೆ ಸಂಬಂದಿಸಲ್ಪಟ್ಟಿದ್ದಾಗಿರುತ್ತದೆ ಎದುರಾಳಿಯನ್ನು ಆಕ್ರಮಿಸಿ ಹಿಡಿಯುವ ತಂತ್ರವು 'ಪಟ್ಟು'ಗಳೆನಿಸಿ, ಇವು ಅನೇಕವರಸೆಗಳಲ್ಲಿವೆ. ಇಂತಹ ಪಟ್ಟುಗಳನ್ನು ನಿವಾರಿಸಿಕೊಳ್ಳುವ ಅನೇಕ ಉಪಾಯಗಳನ್ನು ಶಾಸ್ತ್ರವರೇಣ್ಯರಿಂದ ತಿಳಿಯಬಹುದಾಗಿರುತ್ತದೆ. ಭಾರಶ್ರಮ, ಭ್ರಮಣಶ್ರಮಗಳಿಂದ ಮಲ್ಲರು ತಮ್ಮ ಶರೀರದ ಪಟುತ್ವವನ್ನು ವರ್ಧಿಸಿಕೊಳ್ಳುವುದು ದೈನಂದಿನ ಚಟುವಟಿಕೆಯ ಭಾಗವಾಗಿರುತ್ತದೆ. ಮಲ್ಲರಿಗೆ ರಾಜಾಶ್ರಯ ಅವಶ್ಯವಾಗಿರುತ್ತದೆ.

**ನಾಲ್ಕನೆಯ ತರಂಗ:–** ಕೋಳಿ ಕಾಳಗವು ಒಂದು ಪುರಾತನ ಕ್ರೀಡೆಯಾಗಿದ್ದು ಇವುಗಳನ್ನು ಅನೇಕ ಜಾತಿಗಳಲ್ಲಿ ಗುರುತಿಸಲಾಗಿದೆ. ಜಯವನ್ನು ತಂದುಕೊಡುವ ಕೋಳಿಗಳು ವಿಶೇಷ ಲಕ್ಷಣಗಳಿಂದಿರುವುವು. ಕಾಳಗದ ನಂತರ ಸೂಕ್ತ ಉಪಶಮನ ಅವಶ್ಯಕ. ಇದರಂತೆ ಲಾವಕ್ಕಿಗಳ ಕಾಳಗವನ್ನೂ

ಆಯೋಜಿಸಲಾಗುತ್ತದೆ. ಇವುಗಳ ಆಹಾರಕ್ರಮಗಳೂ ಉಕ್ತವಾಗಿವೆ. ಇದರಂತೆ ಕೋಣ, ಜಿಂಕೆ, ಗಿಣಿಗಳನ್ನು ಸಾಕಿ ಕಾಳಗ ಮಾಡಿಸಿ ವಿನೋದವನ್ನು ಪಡೆಯಬಹುದಾಗಿರುತ್ತದೆ.

**ಐದನೆಯತರಂಗ:–** ಸೋಮಶೇಖರನಾಯಕನ ರಾಜ್ಯಭಾರಕ್ರಮದಿಂದ ಆರಂಭವಾಗಿದೆ. ವೀರಶೈವರಿಗೆ ಸ್ನಾನ, ರುದ್ರಾಕ್ಷಿ ಮತ್ತು ತ್ರಿಪುಂಡ್ರಧಾರಣೆಯು ಮಹತ್ತರವಾಗಿದ್ದು, ತ್ರಿಪುಂಡ್ರವನ್ನು ಕ್ರಮಪ್ರಕಾರವಾಗಿ ಧರಿಸಬೇಕಾಗಿದೆ. ಸ್ನಾನವು ವಿವಿಧ ಕ್ರಮಗಳಲ್ಲಿರುತ್ತವೆ. ವಿಭೂತಿಯು ವಿಶಿಷಂಔಕಂಚಿಮದಲ್ಲಿ ಸಂಸ್ಕರಿಸಲ್ಪಡುತ್ತದೆ. ಇದು ಐಹಿಕ ಮತ್ತು ಪಾರಮಾರ್ಥಿಕಗಳೆರೆಡಕ್ಕೂ ಪ್ರಯೋಜನಕಾರಿ.

**ಆರನೆಯ ತರಂಗ:–** ಆರಂಭದಲ್ಲಿ ರುದ್ರಾಕ್ಷದ ಬಗೆಗಿರುವ ಪೌರಾಣಿಕ ಹಿನ್ನೆಲೆಗಳನ್ನು ತಿಳಿಸಲಾಗಿದೆ. ಇವುಗಳಲ್ಲಿ ಅನೇಕ ಭೇದಗಳಿವೆ. ವಿಶೇಷ ಫಲಪ್ರಾಪ್ತಿಯ ಹಿನ್ನಲೆಯಲ್ಲಿ ಧರಿಸಲಾಗುತ್ತದೆ. ಸೂಕ್ತ ಪ್ರದೇಶಗಳಲ್ಲಿ ಜಪ–ತಪಾಚರಣೆಗಳನ್ನು ವಿವಿಧಕ್ರಮಗಳಿಂದ ನಡೆಸಿದರೆ ಅನೇಕ ಪ್ರಯೋಜನವಿದೆ. ಸೂಕ್ತಕ್ರಮದಲ್ಲಿ ಸಂಸ್ಕರಿಸಲ್ಪಟ್ಟು, ವಿವಿಧ ವಿನ್ಯಾಸಗಳಲ್ಲಿ ಮಾಲೆಯನ್ನು ರಚಿಸಲಾಗುತ್ತದೆ. ಮತ್ತು ವಿವಿಧ ಆಸನ ಪರಿಕರಗಳಲ್ಲಿ ಕುಳಿತು ನಡೆಸಿದ ಅನುಷ್ಠಾನಗಳು ಶುಭಾಶುಭ ಫಲವನ್ನು ನೀಡುವುವು.

**ಏಳನೆಯ ತರಂಗ:–** ಇಷ್ಟಲಿಂಗಾರಧನೆಯ ಮಹತ್ವ ಮತ್ತು ದೇವಾನುದೇವತೆಗಳ ಲಿಂಗಪೂಜಾ ವಿಧಾನಗಳನ್ನು ಸಾರಲಾಗಿದೆ. ಶಿವಾರ್ಚನೆಗೆ ದೇಶಕಾಲಗಳ ಯಾವುದೇ ನಿರ್ಬಂಧವಿಲ್ಲದೆ ಅಸಂಸ್ಕರಿತ ಪದಾರ್ಥಗಳಿಂದ ಪೂಜಿಸಿದರೆ ಶಿವನು ಸುಪ್ರೀತನಾಗುವನು. ವೈವಿಧ್ಯವಾದ ಉಪಚಾರ ಪೂಜಾಕ್ರಮಗಳಿಗನುಗುಣವಾಗಿ ವಿಶೇಷ ಫಲಪ್ರಾಪ್ತಿಯಿದೆ ಸೋಮಶೇಖರನಾಯಕನ ನಂತರ ಚನ್ನಮಾಂಬೆಯ ಚರಿತೆಯನ್ನು ಶ್ರುತಪಡಿಸಲಾಗಿದೆ.[20]

**ಎಂಟನೆಯ ತರಂಗ:–** ಎಂಟನೆಯ ತರಂಗವು ಕೃತಿಕಾರನ ಚರಿತೆಯ ದೃಷ್ಟಿಯಿಂದ ಅತ್ಯಂತ ಮುಖ್ಯವಾದುದಾಗಿರುತ್ತದೆ. ಮಹಾರಾಷ್ಟ್ರದ ರಾಮರಾಜನಿಗೆ ಆಶ್ರಯ ನೀಡಿದ ಧೀಮಂತೆ. ಬ್ರಾಹ್ಮಣರ ಮೂಲಕ ಧರ್ಮ ಸಾಮ್ರಾಜ್ಯವನ್ನು ಬೆಳಗಿಸಿ ಅವರನ್ನು ಪೋಷಿಸಿದಳು. ಈಕೆಯು ಬಸವರಾಜನಿಗೆ ನೀಡಿದ ಉಪದೇಶವು ಸಾರ್ವಕಾಲಿಕ ಬೋಧೆಯಾಗಿದ್ದು ಮೌಲ್ಯಯುತವಾಗಿದೆ. ಗ್ರಂಥ ಋಣ– ಪರಾಶರ,

---

[20] ಶಿವತತ್ತ್ವರತ್ನಾಕರ – ಸಂ: ಜಯದೇವಪ್ಪ ಜೈನಕೇರಿ, ಡಾ. ಜಗದೀಶ – ಮರುಳಸಿದ್ಧೇಶ್ವರ ವೀರಶೈವ ಅಧ್ಯಯನ ಕೇಂದ್ರ, ಕವಲೆದುರ್ಗ, ಶಿವಮೊಗ್ಗ.

ಮಾನವ, ಯಾಜ್ಞವಲ್ಕ್ಯ, ಪರಶುರಾಮ ಮತ್ತು ದ್ರೋಣಾಚಾರ್ಯರ ಮತ, ವರಾಹ ಸಂಹಿತಾ, ವಾತುಲಾಗಮ, ಪಾರಮೇಶ್ವರಾಗಮ, ಜಾಬಾಲೋಪನಿಷಂತು, ಶಿವಾಗಮ.

**ಒಂಭತ್ತನೆಯ ಕಲ್ಲೋಲದಲ್ಲಿ** ಒಂಭತ್ತು ತರಂಗಗಳಿದ್ದು, ಒಂದುಸಾವಿರದ ಇಪ್ಪತ್ತೈದು ಶ್ಲೋಕಗಳಿವೆ. ತರಂಗದ ಶಿರೋನಾಮೆಗಳು– 1. ಕಿಂಡಾಂಡ ವಿವರಣಮ್ 2.ಮಾನವರ ಅಬಾಲ ವೃದ್ಧಾಪ್ಯ ಸೂನಾದಿಗಳು 3. ಶೈವತತ್ತ್ವಜ್ಞಾನ ನಿರೂಪಣಮ್ 4. ನಾನಾಶಾಸ್ತ್ರ ನಿರೂಪಣಮ್ 5. ವೈದಿಕ ದರ್ಶನಮ್ 6. ಲೋಕಾಯತ–ಜೈನ–ಬೌದ್ಧ–ವೈಷ್ಣವದರ್ಶನ ಮತ್ತು ಶಿವಸಂಕಲ್ಪೋಪನಿಷಂತು 7. ದೀಕ್ಷಾಬೇಧ, ಗುರುಶಿಷ್ಯರ, ಋತ್ವಿಕ್, ಕಾಲ–ದೇಶಾದಿ ನಿರೂಪಣಮ್ 8.ದೀಕ್ಷಾವಿಧಾನ, ಮಂಟಪಲಕ್ಷಣಾದಿ ನಿರೂಪಣಮ್ 9. ಷಟ್‌ಸ್ಥಲಜ್ಞಾನ ನಿರೂಪಣಮ್.

**ಮೊದಲನೆಯ ತರಂಗ:–** ಜಗದುತ್ಪತ್ತಿಗೆ ಮತ್ತು ಜೀವಿಗಳ ವಿಕಾಸಕ್ಕೆ ಪಂಚೀಕರಣವೇ ಕಾರಣ. ಸ್ತ್ರೀ ಪುರುಷರ ಸಮಾಗಮದನ್ವಯ ಮಗುವಿನ ಭವಿಷ್ಯವು ರೂಪಿಸಲ್ಪಡುತ್ತದೆ. ಗರ್ಭಸ್ಥ ಶಿಶುವಿನ ಮುಕ್ತಿಯ ಬಯಕೆಯು ನಷ್ಟೀಭೂತವಾಗುವ ಕಾರಣವಿದೆ. ಶರೀರವು ಸಂಕೀರ್ಣವಾದ ಅಂಗೋಪಾಂಗಗಳಿಂದಾಗಿದೆ. ತ್ರಿಗುಣಗಳು ಅಂತಃಕರಣದ ಮೇಲೆ ಪ್ರಭಾವವನ್ನು ಬೀರುತ್ತವೆ. ಆಧ್ಯಾತ್ಮ ಸಾಧನೆಯಲ್ಲಿ ಷಟ್ ಚಕ್ರಗಳೇ ಪ್ರಭಾವ. ಶರೀರದಲ್ಲಿ ಬ್ರಹ್ಮಾಂಡ ಮತ್ತು ತ್ರಿಮೂರ್ತಿಗಳ ಸ್ವರೂಪಾಭಾವವೇ ಅದ್ವೈತತ್ತ್ವದ ಆದಿಮ ಕಿರಣಗಳೆನಿಸಿವೆ.

**ಎರಡನೆಯ ತರಂಗ:–** ಶರೀರವು ತ್ರಿಗುಣಗಳ ವ್ಯತ್ಯಯದಿಂದ ತ್ರಿದೋಷಗಳಾಗಿ ಪರಿಣಮಿಸುತ್ತವೆ. ಪ್ರಾರಬ್ಧಕರ್ಮವೇ ನಾನಾ ಯೋನಿಗಳಲ್ಲಿ ಜನಿಸಲು ಮೂಲಹೇತು. ಹಸಿವೆಯೆಂಬುದನ್ನು ರೋಗವೆಂದು ತಿಳಿದು ಆಹಾರವನ್ನು ಔಷಧವೆಂದುತಿಳಿದವರು ಧರೆಯೊಳುತ್ತಮರು.ವ್ಯಕ್ತಿಯ ಗುಣ, ವಿದ್ಯೆ, ಶೀಲಾದಿಗಳೆಲ್ಲವೂ ಸಂಗ್ರಹಿಸಿದಂತೆ ಉಳಿಯಲಾರವು. ರೋಗವು ಚಿಕಿತ್ಸೆಯಿಂದಲೂ, ಭವತಾಪವು ಈಶ್ವರ ಸೇವೆಯಿಂದಲೂ ಗುಣಹೊಂದಬಹುದಾದ ಉಪಾಯವೆನ್ನಲಾಗಿದೆ.

**ಮೂರನೆಯ ತರಂಗ:–** ತತ್ತ್ವಶಾಸ್ತ್ರದನ್ವಯ ಕರ್ಮಫಲದಂತೆ ಶರೀರದಲ್ಲಿ ಸ್ಥೂಲ, ಸೂಕ್ಷ್ಮ ರೂಪಗಳು ರಚಿಸಲ್ಪಡುತ್ತವೆ. ಪಂಚಭೂತಗಳು, ಕರ್ಮೇಂದ್ರಿಯಗಳು ಮತ್ತು ಪಂಚತನ್ಮಾತ್ರೆಗಳ ಪರಸ್ಪರ ಸಹಕಾರ ಜೀವಿಗಳ ಸಮಸ್ತ ವ್ಯವಹಾರಗಳಿಗೆ ಕಾರಣಗಳೆನಿಸಿವೆ. ಬದ್ಧಜೀವರುಗಳ ವೈವಿಧ್ಯಗಳು ಪಾಶಬಂಧಾನುಗತಿಯಲ್ಲಿ ಸಕಲ, ವಿಜ್ಞಾನ ಮತ್ತು ಪ್ರಳಯಕಲೆಗಳಿಗೆ ಸಂಬಂಧಿಸಿದವುಗಳಾಗಿರುತ್ತವೆ.

ಬ್ರಹ್ಮಾಂಡದ ವಿಸ್ತಾರವನ್ನು ಜ್ಞಾನಕೋಟಿ ವಿಸ್ತಾರದಲ್ಲಿ ವಾಚಿಸಿರುವುದು ರಹಸ್ಯಮಯವಾಗಿದೆ. ಭೂತಾದಿಗಳು, ಇಂದ್ರಿಯಗಳು ಮತ್ತು ಪ್ರಕೃತಿಯು ಬಿಂದು(ಈಶ್ವರಾಂಶ)ವಿನಲ್ಲಿ ಲಯವಾಗುತ್ತವೆ.[21]

**ನಾಲ್ಕನೆಯ ತರಂಗ:–**ಈ ತರಂಗವು ನ್ಯಾಯವೈಶೇಷಿಕ ದರ್ಶನಗಳ ಸ್ಥೂಲ ಪರಿಚಯವನ್ನು ಒದಗಿಸುತ್ತದೆ. ಷಡದರ್ಶನಗಳ ಉಗಮವು ಸೌರ, ವೈನಾಯಕ, ಬ್ರಾಹ್ಮ(ವೇದಾಂತ) ಶಾಕ್ತ, ಶೈವ ಮತ್ತು ವೈಷ್ಣವ ದೇವತಾಕಗಳನ್ವಯ ಉಗಮಿಸಿವೆ. ಮೀಮಾಂಸಾ, ವೈಶೇಷಿಕ ಮತ್ತು ನ್ಯಾಯ ದರ್ಶನಗಳ ತತ್ತ್ವಗಳನ್ನು ಕ್ರಮವಾಗಿ ಪ್ರಸ್ತುತ ತರಂಗದ 26–29–68 ಶ್ಲೋಕಗಳಲ್ಲಿ ಪ್ರತಿಪಾದಿಸಲಾಗಿದೆ.

**ಐದನೆಯ ತರಂಗ:–** ಸಾಂಖ್ಯದರ್ಶನದಲ್ಲಿ ಪುರುಷ– ಪ್ರಕೃತಿಯ ತತ್ತ್ವಗಳೆಲ್ಲವನ್ನು ಸಂಖ್ಯಾತ್ಮಕವಾಗಿ (ಇಪ್ಪತ್ತೈದು ಸಂಖ್ಯೆಗಳಲ್ಲಿ) ವಿಭಾಗಿಸಿ ಮೋಕ್ಷತ್ವದ ಅನಾವರಣವನ್ನು ಮಾಡಲಾಗಿದೆ. ವಿವೇಕದಿಂದ ಬಂಧಮುಕ್ತತೆ ಮತ್ತು ಪ್ರಕೃತಿಯು ತಾನೇತಾನಾಗಿ ಪುರುಷನನ್ನು ಅಗಲುವ ಪ್ರಕ್ರಿಯೆಯಿಂದ ಪುರುಷನ ಪ್ರಕಾಶವೆನ್ನಲಾಗಿದೆ. ಯೋಗದರ್ಶನವು ಈಶ್ವರವಾದವಾಗಿದ್ದು, ಇಪ್ಪತ್ತಾರು ತತ್ತ್ವಗಳನ್ನು ಹೊಂದಿರುತ್ತದೆ. ಹಾಗಾಗಿ ಮುಕ್ತತ್ವಕ್ಕೆ ಈಶ್ವರ ಪ್ರಣೀಧಾನದಿಂದ ಸಾಧ್ಯವೆನ್ನಲಾಗಿದೆ. ಈಶ್ವರಾನುಗ್ರಹವು ಪ್ರಾಪ್ತವಾಗಲು ವೈರಾಗ್ಯ, ವಿಷಯ ದೋಷದರ್ಶನ ನಿರಂತರ ಅಭ್ಯಾಸ ಮತ್ತು ಏಕಾಗ್ರತೆಗಳು ಅವಶ್ಯಕ. ವೇದಾಂತ ದರ್ಶನದಲ್ಲಿ ಜೀವ–ಜಗತ್–ಈಶ್ವರ ಎಂಬ ತ್ರಿಪುಟಿಗಳ ಚಿಂತನೆಯಿರುತ್ತದೆ. ಈ ತ್ರಿಪುಟಿಗಳ ವಿಷಯದಲ್ಲಿ ಹಲವಾರು ದಾರ್ಶನಿಕರು ತಮ್ಮ ಸಿದ್ಧಾಂತವನ್ನು ಮಂಡಿಸಿರುತ್ತಾರೆ.

**ಆರನೆಯ ತರಂಗ:–** ಆರನೆಯ ತರಂಗದಲ್ಲಿ ಪರಿಚಯಿಸಲಾದ ದರ್ಶನಗಳೆಂದರೆ– ಚಾರ್ವಾಕ, ಬೌದ್ಧ ಮತ್ತು ಜೈನಗಳೆಂಬ ಅವೈದಿಕ ದರ್ಶನಗಳು; ಪಾಂಚರಾತ್ರ; ಪಾಶುಪತ; ಮಹಾವ್ರತ; ಕಾಪಾಲಿಕ; ಸಿದ್ಧಾಂತಶಾಸ್ತ್ರ. ತರಂಗಾಂತ್ಯದಲ್ಲಿ ಶಿವಸಂಕಲ್ಪೋಪನಿಷತ್ತು, ಮೈತ್ರೇಯೋಪನಿಷತ್ತು ಮತ್ತು ದತ್ತಾತ್ರೇಯ ಉಪನಿಷತ್ತುಗಳಲ್ಲಿ ಪ್ರಣೀತವಾದ ಅಂಶಗಳನ್ನು ತಿಳಿಸಲಾಗಿದೆ. ಶಿವತತ್ತ್ವದ ಸ್ವರೂಪವನ್ನು ಸಾರಲಾಗಿದೆ.

**ಏಳನೆಯ ತರಂಗ:–** ಕ್ರಮ ಪೂರ್ವಕವಾಗಿ ಶಿವದೀಕ್ಷೆಯನ್ನು ಪಡೆಯುವುದುಚಿತವಾಗಿದ್ದು, ದೀಕ್ಷಾರ್ಥಿಯ ಲಕ್ಷಣವನ್ನುತಿಳಿಸಲಾಗಿದೆ. ದೀಕ್ಷಿತಾರ್ಥಿಯು ಕೆಲವು ವಿಧಿಗಳನ್ನು ಅನುಸರಿಸಬೇಕು. ಮಂತ್ರೋಪದೇಶಕ್ಕೆ

[21] ಶಿವತತ್ತ್ವರತ್ನಾಕರ – ಸಂ: ಜಯದೇವಪ್ಪ ಜೈನಕೇರಿ, ಡಾ. ಜಗದೀಶ – ಮರುಳಸಿದ್ಧೇಶ್ವರ ವೀರಶೈವ ಅಧ್ಯಯನ ಕೇಂದ್ರ, ಕವಲೆದುರ್ಗ, ಶಿವಮೊಗ್ಗ. (9-3-124)

ಪ್ರಶಸ್ತವಾದ ಮುಹೂರ್ತ ಸಾಧನೆಯನ್ನು ಸಾಧಿಸುವುದರಿಂದ ಶಾಸ್ತ್ರೀಯ ದೀಕ್ಷಾಕ್ರಮವನ್ನು ಅನುಸರಿಸಿದಂತಾಗಿ ಶುಭಪ್ರದವಾಗುವುದು.

**ಎಂಟನೆಯ ತರಂಗ:–** ದೀಕ್ಷಾ ಮಂಟಪ ನಿರ್ಮಾಣ ಮತ್ತು ಇದರ ಪೂಜೆ, ಶಿಷ್ಯನ ಲಕ್ಷಣ, ಶಿಷ್ಯನ ಶುದ್ಧೀಕರಣಕಾರ್ಯ, ಗುರುವಿನಿಂದ ಲಿಂಗಸಂಸ್ಕಾರ, ಲಿಂಗಧಾರಣೆ, ಶಿಷ್ಯನ ಪ್ರಾಣಲಿಂಗ ಅರ್ಚನಾಕ್ರಮಗಳು, ಷಡಂಗಾಂಗ ಸಾಮರಸ್ಯ ಸಾಧನೆಗಳು ಕ್ರಮವಾಗಿ ಪ್ರಸ್ತುತ ತರಂಗದ 3,30,45,66,72,99,120 ಮತ್ತು 128ನೆಯ ಶ್ಲೋಕಗಳಲ್ಲಿ ಸಾದ್ಯಂತವಾಗಿ ಉಕ್ತವಾಗಿವೆ.

**ಒಂಭತ್ತನೆಯ ತರಂಗ:–** ಷಟ್‌ಸ್ಥಲಾತ್ಮಕವಾದ ಲಿಂಗಾಂಗ ಸಂಬಂಧ ರಹಸ್ಯವು ಪರಮ ಜ್ಞಾನವಾಚಕವಾಗಿದ್ದು, ಶಿವನು ಪಾರ್ವತಿಗೆ ಉಪದೇಶಿಸಿರುವುದರಿಂದ ವೀರಶೈವ ಸಂಪ್ರದಾಯಕ್ಕೆ ಭದ್ರಬುನಾದಿಯಾಗಿದೆ.[22] ಇದರ ಆಧಾರದಲ್ಲಿ ಗುರುಲಿಂಗಾದಿ ಷಡ್ವಿಧವಾದ ಲಿಂಗಗಳ ಸ್ವರೂಪಗಳು ಪ್ರಣೀತವಾಗಿದ್ದು, ತರಂಗದುದ್ದಕ್ಕೂ ವಿಸ್ತಾರವಾಗಿ ಅರ್ಥೈಸಲಾಗಿದೆ. ಗ್ರಂಥ ಋಣ ಶರೀರೋಪನಿಷತ್ ಗರ್ಭೋಪನಿಷತ್, ಪುರಾಣಗಳು, ಶೈವಸಿದ್ಧಾಂತದೀಪಿಕೆ, ಮೀಮಾಂಸಾ, ನ್ಯಾಯ, ಕಣಾದ, ಯೋಗ, ವೇದಾಂತ, ಸಾಂಖ್ಯ, ಬೌದ್ಧ, ಚಾರ್ವಾಕ, ಜೈನದರ್ಶನಗಳು.

[22] ಶಿವತತ್ತ್ವರತ್ನಾಕರ – (ಸಂ) ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ್, ಸಂಪುಟ 1 ಮತ್ತು 2, – ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ – 1999. (9-9-6)

# ಅಧ್ಯಾಯ–3

## ನಾಟ್ಯಶಾಸ್ತ್ರದ ಗರಿಮೆ, ಉಗಮ, ಪರಿಚಯ, ಬೆಳವಣಿಗೆ

ಭರತನ ನಾಟ್ಯಶಾಸ್ತ್ರವು ಸದ್ಯ ಇರುವ ನಾಟ್ಯಲಕ್ಷಣ ಗ್ರಂಥಗಳಿಗಿಂತ ಪ್ರಾಚೀನವಾದುದು ಎಂಬ ಪ್ರತೀತಿ ಇದೆ. ಪ್ರಸ್ತುತ ಅಧ್ಯಯನವು ಈ ಶಾಸ್ತ್ರಾಂಶಗಳ ಕುರಿತಾದದ್ದೇ ಆದದ್ದರಿಂದ ಅದರ ಪರಿಚಯ, ಉಗಮಾದಿಗಳ ಕುರಿತು ಅಧ್ಯಯನ ಮಾಡಬೇಕಾದುದು ಉಚಿತವಾದುದು. ಆ ಕಾರಣದಿಂದ ಪ್ರಸ್ತುತಾಧ್ಯಾಯದಲ್ಲಿ ಇದರ ಪರಿಚಯವನ್ನು ವಿವಿಧ ಶಾಸ್ತ್ರಕಾರರು ತಿಳಿಸಿರುವಂತೆ ಪರಿಚಯಾತ್ಮಕವಾಗಿ ಅಧ್ಯಯನ ಮಾಡಲಾಗಿದೆ.

**ನಾಟ್ಯಶಾಸ್ತ್ರದ ಉಗಮ :**

ಸಂಸ್ಕೃತ ಸಾಹಿತ್ಯದಲ್ಲಿ ಸಂಗೀತಶಾಸ್ತ್ರದಂತೆ ನಾಟ್ಯಶಾಸ್ತ್ರವೂ ಸಹ ಮಹನೀಯ ಸ್ಥಾನಪಡೆದು ವಿರಾಜಮಾನವಾಗಿದೆ. ನಾಟ್ಯಶಾಸ್ತ್ರವೆಂಬುದು ಯಾವಾಗ–ಎಲ್ಲಿ–ಏತಕ್ಕಾಗಿ ಹುಟ್ಟಿಕೊಂಡಿತು? ಎಂಬ ಪ್ರಶ್ನೆ ಮಹತ್ವಪೂರ್ಣವಾಗಿದೆ. ಯದ್ಯಪಿ ಈ ಪ್ರಶ್ನೆಯು ಇಂದಿಗೂ ಸಹ ಸಾಧನ–ಸೌಕರ್ಯಗಳ ಅಭಾವದಿಂದಾಗಿ ಹೀಗೆ ಎಂದು ನಿರ್ಣಯಿಸಲು ಸುಲಭವಾಗಿಲ್ಲ, ತಥಾಪಿ ಸಂಪ್ರತಿ ಸಂಪ್ರಾಪ್ತವಾಗಿರುವ ಸಂಕೀರ್ಣ ಸಾಹಿತ್ಯಾಂಶಗಳಿಂದ ಹೀಗೆ ನಿರ್ಧರಿಸಲು ಸಾಧ್ಯವಾಗಿದೆ. ಅದೆಂದರೆ ಮುನಿವರರಾದ ಭರತಾಚಾರ್ಯರೇ ಈ ನಾಟ್ಯಶಾಸ್ತ್ರದ ಪ್ರಮುಖ ಪ್ರವರ್ತಕರು ಎಂದು. ಹಾಗಾದರೆ ಈ ಶಾಸ್ತ್ರವನ್ನು ಭರತನು ಬರೆಯುವ ಸಾಹಸಮಾಡಿದರೆ ಅವನಿಗೆ ಮೂಲ ಪ್ರೇರಣೆ ಎಲ್ಲಿಂದ ದೊರೆಯಿತು? ಎಂಬ ಪ್ರಶ್ನೆ ಸಹಜವಾಗಿ ಮೂಡುತ್ತದೆಯಷ್ಟೆ. ಅದರ ಮೂಲಬೀಜವನ್ನು ಸ್ವಯಂ ಭರತಮುನಿಯೇ ಈ ರೀತಿ ತಮ್ಮ ಶಾಸ್ತ್ರದಲ್ಲಿ ಹೇಳಿದ್ದಾನೆ.

"ದೇವತೆಗಳಿಗೆ ಮನರಂಜನೆ ಒದಗಿಸಲು ಸ್ವಯಂ ಬ್ರಹ್ಮದೇವನಿಂದ ಆಜ್ಞಾಪಿತನಾದ ಭರತಮುನಿಯು ಋಗ್ವೇದದಿಂದ ಪಾಠ್ಯವನ್ನೂ, ಸಾಮವೇದದಿಂದ ಗೀತವನ್ನೂ, ಯಜುರ್ವೇದದಿಂದ ಅಭಿನಯವನ್ನೂ, ಅಥರ್ವವೇದದಿಂದ ರಸಭಾವವನ್ನೂ ಸಂಗ್ರಹಿಸಿ ನಾಟ್ಯವೆಂಬ ಪಂಚಮವೇದವನ್ನು ಸೃಷ್ಟಿಸಿದನು"[23] ಹೀಗೆ ಭಗವದ್ವೇದಗಳಿಂದ ಋಷಿಗೆ ಈ ಶಾಸ್ತ್ರ

---

[23] ನಾಟ್ಯಶಾಸ್ತ್ರ– ಭರತಮುನಿ, ಅನುವಾದಕ– ಮನಮೋಹನ ಘೋಶ್ ಏಷಿಯಾಟಿಕ್ ಸೊಸೈಟಿ ಆಫ್ ಬೆಂಗಾಲ್, ಕಲ್ಕತ್ತ 1951

ಪ್ರೇರಕವಾದ ಬೀಜವು ದೊರೆಯಿತು. ವೇದಗಳ ಆಯ್ದ ಭಾಗಗಳಲ್ಲಿ ಹೇಳಲಾಗಿರುವ ಕಥೆ–ಉಪಕಥೆ–ಸಂವಾದ–ಸಂಗೀತವೇ ಮೊದಲಾದ ನಾಟಕೀಯ ತತ್ತ್ವಗಳೇ ನಾಟ್ಯಶಾಸ್ತ್ರ ರಚನೆಗೆ ಪ್ರಮುಖ ಕಾರಣ ಸಾಮಗ್ರಿಗಳಾಗಿವೆ. ಮುಂದೆ ರಾಮಾಯಣದಲ್ಲಿ ಕಂಡು ಬಂದ ನಟ–ನರ್ತಕ–ರಂಗ ಮುಂತಾದ ಶಬ್ದಗಳ ಪ್ರಯೋಗಗಳು, ಮಹಾಭಾರತದ ಉದ್ಧತ ಪ್ರಸಂಗಗಳೂ ಸೇರ್ಪಡೆಗೊಂಡು ನಾಟ್ಯಶಾಸ್ತ್ರವು ಪರಿಪುಷ್ಟಿಗೊಂಡಿತು. ಹೀಗೆಯೇ ಕವಿಕುಲಮೂರ್ಧನ್ಯ ಸ್ವರೂಪರಾದ ಭಾಸ–ಕಾಳಿದಾಸ–ಭವಭೂತಿಯೇ ಮೊದಲಾದಮಹಾಕವಿಗಳು ಈ ಶಾಸ್ತ್ರದ ಶ್ರೀಮಂತಿಕೆಯನ್ನು ಮತ್ತಷ್ಟು ಉಜ್ಜ್ವಲಗೊಳಿಸಿದರು. ಸರ್ವೋತ್ಕೃಷ್ಟವೂ, ಸರ್ವ ಪ್ರಾಥಮ್ಯವೂ ಆದ ಸ್ಥಾನವನ್ನು ಪಡೆದು ಅನರ್ಘ್ಯರತ್ನದಂತೆ ಬೆಳಗುತ್ತಿರುವ ಸರ್ವೋತ್ಕೃಷ್ಟವಾದ ಈ ನಾಟ್ಯಶಾಸ್ತ್ರಕ್ಕೆ ವೇದಗಳ ಸಾರವೇ ಮೂಲವೆನಿಸಿದೆ. ಮುಂದೆ ಆದ್ಯಮುನಿ ಭರತ–ಭಾಸ–ಕಾಳಿದಾಸ–ಭವಭೂತಿಯೇ ಮೊದಲಾದ ಮೇರುಕವಿಗಳ ಅಪ್ರತಿಮ ಪ್ರತಿಭಾಶೋಭೆಯಿಂದ ಮೆರುಗನ್ನು ಪಡೆದು ವಿರಾಜಮಾನವಾಯಿತು. ಹೀಗೆ ತಾತ್ತ್ವಿಕವಾಗಿ ವಿಮರ್ಷಿಸಲಾದ ಈ ಭಾರತೀಯ ನಾಟ್ಯಶಾಸ್ತ್ರವು ವಿಶ್ವನಾಟಕಚಕ್ರದ ಕೀಲಿನಂತೆಯೂ, ಪ್ರಕಾಶಸ್ತಂಭದಂತೆಯೂ ಪ್ರಮುಖ ಸ್ಥಾನಾಪನ್ನವಾಗಿದೆ ಎಂದು ಸಗರ್ವದಿಂದ ಹೇಳಿಕೊಳ್ಳಲು ಸಾಧ್ಯವಾಗಿದೆ.

ಸಂಪ್ರತಿ ಉಪಲಬ್ಧವಾಗಿರುವ ನಾಟ್ಯಾಲಂಕಾರ ವಿಷಯಕವಾದುದೂ, ಅತ್ಯಂತ ಪ್ರಾಚೀನತಮವಾದುದೂ, ಭರತಮುನಿ ಪ್ರಣೀತವಾದುದೂ ಆದ ಈ ನಾಟ್ಯಶಾಸ್ತ್ರವೆಂಬ ಅನರ್ಘ್ಯರತ್ನಕ್ಕೆ ನಾಟ್ಯಕ್ಕೆ ಸಂಬಂಧಪಟ್ಟ–ಅಲಂಕಾರ–ಸಂಗೀತ–ಛಂದಸ್ಸು ಮೊದಲಾದ ಶಾಸ್ತ್ರಗಳ ಮೌಲಿಕ ಅಂಶಗಳು ಅಪೂರ್ವ ಮೆರುಗನ್ನು ನೀಡಿವೆ. ಈ ಶಾಸ್ತ್ರವು 36 ಅಧ್ಯಾಯಗಳನ್ನು ಒಳಗೊಂಡಿದೆ. ಐದು ಸಾವಿರಕ್ಕೂ ಮಿಗಿಲಾದ ಶ್ಲೋಕಗಳನ್ನು ಸಂಪಾದಿಸಿಕೊಂಡಿದೆ.[24] ಕೇವಲ ಅನುಷ್ಟುಪ್ ಛಂದಸ್ಸನ್ನೆ ಪ್ರಧಾನವಾಗಿ ಹೊಂದಿದೆ. ಆರು–ಏಳು ಮತ್ತು ಇಪ್ಪತ್ತೆಂಟನೇ ಅಧ್ಯಾಯಗಳು ಗದ್ಯಭಾಗಭೂಯಿಷ್ಠವಾಗಿವೆ. ಈ ಶಾಸ್ತ್ರದ ಬಹುತೇಕ ಪದ್ಯಭಾಗವು ಅಭಿನವಗುಪ್ತರ ಮತಾಭಿಪ್ರಾಯದಂತೆ ಭರತನಿಗಿಂತಲೂ ಪ್ರಾಚೀನರಾಗಿದ್ದ ಕೆಲವು ಪ್ರಸಿದ್ಧ ಆಚಾರ್ಯರುಗಳಿಂದ ಸೇರ್ಪಡೆಗೊಂಡಿದೆ ಎಂಬ ಸಂಗತಿಯು ಪ್ರಚಲಿತವಾಗಿದೆ. ಅವುಗಳಿಗೆ

---

24 ನಾಟ್ಯಶಾಸ್ತ್ರ– ಭರತಮುನಿ, ಅನುವಾದಕ– ಮನಮೋಹನ ಘೋಶ್ ಏಷಿಯಾಟಿಕ್ ಸೊಸೈಟಿ ಆಫ್ ಬೆಂಗಾಲ್, ಕಲ್ಕತ್ತ 1951

ಪೂರಕವಾದ ಸೂತ್ರೋಪಪತ್ತಿಗಳು ಮಂಥನಾರ್ಹವಾಗಿ ಭರತಮುನಿಯಿಂದ ವ್ಯಾಖ್ಯಾನಗೊಂಡಿವೆ. ಇದಕ್ಕೆ ಪೂರಕವಾದ ಉಕ್ತಿಯೊಂದು ಪುಷ್ಟಿನೀಡಿದೆ–

**ता एता ह्यार्या एकप्रघट्टकतया**

**पूर्वाचार्यलक्षणत्वेन पाठिताः ।**

**मुनिना तु सुखसङ्ग्रहाय**

**यथास्थानं निवेशिताः ॥**[೨೫] ಎಂಬುದಾಗಿದೆ.

ಕಾವ್ಯವು ದೃಶ್ಯ–ಶ್ರವ್ಯತ್ವ ಭೇದದಿಂದ ಎರಡು ಪ್ರಕಾರವಾಗಿದೆ. ಅವುಗಳಲ್ಲಿ ನಾಟ್ಯ–ನಾಟಕ–ರೂಪಕಗಳ ಅಭಿಲೇಪನವುಳ್ಳದ್ದು ದೃಶ್ಯಕಾವ್ಯ. ಛಂದೋಬದ್ಧವಾದುದು ಶ್ರವ್ಯಕಾವ್ಯ. ಶ್ರವ್ಯಕ್ಕಿಂತಲೂ ದೃಶ್ಯಕಾವ್ಯವೇ ಅತಿ ಆಕರ್ಷಕವಾಗಿದೆ ಎಂದು ಕಾವ್ಯರಹಸ್ಯ ಕೋವಿದರ ಅಭಿಪ್ರಾಯವಾಗಿದೆ. ಸುಕುಮಾರ ಮತಿಸ್ವಭಾವಶೀಲರಿಗೂ ದೃಶ್ಯಕಾವ್ಯವು ಸುಲಭ ಗ್ರಾಹ್ಯವಾಗಿದೆ. ದೃಶ್ಯ ಕಾವ್ಯದಲ್ಲಿ ಮುಖಾದಿಗಳಿಗೆ ಚಂದ್ರನೇ ಮೊದಲಾದ ಉಪಮಾನಗಳ ಆರೋಪಗಳು ಆಕರ್ಷಕಗಳಾಗಿ ತೋರುವುದರಿಂದ ಇದಕ್ಕೆ ರೂಪಕವೆಂಬ ಹೆಸರು ಅನ್ವರ್ಥವಾಗಿದೆ. ಈ ಆರೋಪರೂಪಧರ್ಮಸಾಮ್ಯದಿಂದಲೇ ರೂಪಕವು ದಶವಿಧವಾಗಿದೆ ಎಂದು ದಶರೂಪಕ ಗ್ರಂಥರಚನೆಯಲ್ಲಿ ಧನಂಜಯನು ಸಾದರಪಡಿಸಿದ್ದಾನೆ–

नाटकं सप्रकरणं भाणः प्रहसनं डिमः ।

व्यायोगसमवकारौ वीथ्यङ्केहामृगा दश ॥[೨೬] ಎಂದು,

ಈ ಪ್ರಕಾರವಾದ ರೂಪಕಗಳಲ್ಲಿ ಪುರಾಣ–ಇತಿಹಾಸ ಪ್ರಸಿದ್ಧವಾದ ಕಥಾವಸ್ತುಗಳು ಉಪನಿಬಂಧನೆಗೊಂಡಿವೆ. ದಶವಿಧವಾದ ರೂಪಕಗಳಲ್ಲಿ ಸಂಸ್ಕೃತ ಮತ್ತು ಪ್ರಾಕೃತವೆಂಬ ಎರಡು ಭಾಷೆಗಳು ಬಳಕೆಯಾಗಿವೆ. ಪ್ರಕೃತಿಯು ಸಂಸ್ಕೃತವಾದರೆ, ಪ್ರವೃತ್ತವು ಪ್ರಾಕೃತವೆನಿಸುತ್ತದೆ. ಇದನ್ನೇ–

"प्रकृतेः संस्कृतायास्तु विकृतिः प्राकृती मता"ಎಂದು

[25] Natyasatra with the commentary Abhinavabharati by Abhinavaguptacharya by Dr.k Krishnamurthy,published byDr.Ramakrishma T.vyas oriental institute ,Maharaja sayajirao university of Baroda,LVadodara 1992

[26] ಧನಂಜಯನ ದಶರೂಪಕ (ಕನ್ನಡ ಅನುವಾದ) – ಕೆ.ವಿ.ಸುಬ್ಬಣ್ಣ – ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ ತಾಲ್ಲೂಕು – 2014

ಆಚಾರ್ಯರು ಹೇಳಿದ್ದಾರೆ. ಸಂಸ್ಕೃತವು ಬೇರೆ ಯಾವುದೇ ಭಾಷೆಯ ವಿಕೃತಿಯಲ್ಲ. ಸಂಸ್ಕೃತವೆಂದರೆ ಸ್ವತಃಸಿದ್ಧವಾದ ಭಾಷೆ. ಕೇವಲ ಸಂಸ್ಕೃತದಿಂದ ಮಾತ್ರವೇ ಇತರ ಅಖಿಲ ಭಾಷೆಗಳೂ ಪ್ರವೃತ್ತಗೊಂಡಿವೆ. ಅದಕ್ಕೆ ಸಂಸ್ಕೃತಭಾಷೆಗೆ "संस्कृतं नाम हि दैवी वागिति"[27]ಎಂದು ಆಚಾರ್ಯ ದಂಡಿಯು ಪ್ರತಿಪಾದಿಸಿದ್ದಾನೆ.

**ನಾಟ್ಯದ ಆವಿರ್ಭಾವ ಕಾಲ:**

ಅಮೂಲ್ಯವಾದ ನಾಟ್ಯಶಾಸ್ತ್ರದ ಪ್ರಮುಖಾವಿರ್ಭಾವದ ಕಾಲವನ್ನು ಕಾಲಜ್ಞರು ಕ್ರಿ.ಪೂ. ದ್ವಿತೀಯಶತಕವೆಂದು ನಿರ್ಧರಿಸಿದ್ದಾರೆ. ಈ ರೀತಿಯ ದೃಶ್ಯಕಾವ್ಯೋಪಜ್ಞತೆಯು ಭಗವಾನ್ ಭರತಮುನಿಯವರಿಗೆ ಸಲ್ಲುತ್ತದೆ. ಶ್ರವ್ಯಕಾವ್ಯಾರಂಭದ ಕಾಲವಾದರೋ ಕ್ರಿ.ಶ. ಐದನೆಯ ಶತಮಾನದಿಂದ ಆವಿರ್ಭಾವಗೊಂಡಂತಿದೆ.

ಭಾರತೀಯ ನಾಟ್ಯಪ್ರಪಂಚದಲ್ಲಿ ಗ್ರೀಕ್‌ದೇಶದ ನಾಟಕಗಳ ಪ್ರಭಾವವಿದೆಯೆಂಬ ವಾದವನ್ನು ಮಂಡಿಸುವವರ ಅಭಿಪ್ರಾಯವನ್ನು ಕೇವಲ ಭ್ರಮೆಯೆಂದು ಕಟುವಾಗಿ ಟೀಕಿಸಲಾಗಿದೆ. ಮೇಲ್ಕಂಡ ವಿವರಣೆಗಳಿಂದ ಈ ನಾಟ್ಯಶಾಸ್ತ್ರವನ್ನು ಪ್ರಪ್ರಥಮವಾಗಿ ರಚಿಸಿದವನು ಭರತಮುನಿಯೇ ಹೊರತು ಬೇರೆ ಯಾರೂ ಅಲ್ಲ ಎಂದು ಖಚಿತವಾಗಿ ಹೇಳಬಹುದಾಗಿದೆ. ಈ ನಾಟ್ಯಕಲೆಯ ಆರಂಭದ ಉದ್ಗಾರ ಕೇವಲ ಭರತಮುನಿಯದ್ದೇ ಆಗಿದೆ. ಸಂಸ್ಕೃತದ ನಾಟ್ಯಕಲೆಯಿಂದಲೇ ಜಗತ್ತಿನಾದ್ಯಂತ ನಾಟ್ಯತಂತ್ರವು ಹುಟ್ಟಿತು. ಆದ್ದರಿಂದಲೇ ಭಾರತೀಯ ನಾಟ್ಯಕಲೆಯು ಪರಮೋತ್ಕೃಷ್ಟ ಸ್ಥಾನದಲ್ಲಿ ವಿರಾಜಮಾನವಾಗಿದೆ.

ಬಹುತೇಕ ಭಾರತೀಯ ನಾಟಕಗಳು ಬಹುಶಃ ಸುಖಾಂತ್ಯಗಳಾಗಿವೆಯೇ ಹೊರತು ಎಂದಿಗೂ ದುಃಖಾಂತ್ಯಗಳಾಗಿಲ್ಲ. ಆದರೆ ಸಂಪೂರ್ಣವಾಗಿ ದುಃಖಾಂತ್ಯ ನಾಟಕಗಳು ಇಲ್ಲವೆಂಬ ಅಭಿಪ್ರಾಯಕ್ಕೆ ಪೂರಕವಾಗಿ ಭಾಸನ ಒಂದೆರಡು ಕೃತಿಗಳು ನಿದರ್ಶನವಾದರೂ ಬಾಧಕವಿಲ್ಲ. ಅವನ ಕೃತಿಪ್ರೇರಣೆಯು ಪಾಶ್ಚಾತ್ಯ ನಾಟಕಕಾರರ ಮೇಲೆ ಪರಿಣಾಮ ಬೀರಿ ಷೇಕ್ಸ್‌ಪಿಯರ್‌ನಂತಹ ಶ್ರೇಷ್ಠ ಕವಿಗಳು ತಮ್ಮ ಕೃತಿಗಳನ್ನು ದುಃಖಾಂತಗೊಳಿಸಿ ಜನಮನ್ನಣೆಗಳಿಸಿದ್ದಾರೆ.

[27] ಸಂಸ್ಕೃತ ಶಾಸ್ತ್ರ ಮಂಜೂಷ — ಡಾ.ಉದಯಶಂಕರ ಝಾ – ಚೌಖಾಂಬ ಸುರಭಾರತೀ ಪ್ರಕಾಶನ, ವಾರಾಣಸೀ– 2014.

**“नाट्यं भिन्नरुचेर्जनस्य बहुधाप्येकं समाराधनम्”** [28] ಎಂದು ಮಹಾಕವಿ ಕಾಳಿದಾಸನು ತನ್ನ ಮಹೋನ್ನತ ನಾಟಕಕೃತಿಯಾದ ಮಾಳವಿಕಾಗ್ನಿಮಿತ್ರದಲ್ಲಿ ನಾಟ್ಯಶಾಸ್ತ್ರದ ಗರಿಮೆಯನ್ನು ಗೌರವಿಸಿ ವರ್ಣಿಸಿದ್ದಾನೆ. ನಾಟ್ಯಾಂಶಗಳ ಸಮಸ್ತ ಸಂಗತಿಗಳನ್ನು ಪ್ರತಿಪಾದಿಸಿರುವ ಶಾಸ್ತ್ರವೇ “ನಾಟ್ಯಶಾಸ್ತ್ರ”. ಇದನ್ನು ಪಂಚಮವೇದವೆಂದೇ ಪರಿಗಣಿಸಲಾಗಿದೆ. ಕ್ರಿ.ಪೂ ದ್ವಿತೀಯ ಶತಕದವನೆಂದು ಗುರುತಿಸಲಾಗಿರುವ ಭರತಮುನಿಯು ದೇವತೆಗಳಿಗೆ ಮನರಂಜನೆ ಒದಗಿಸುವುದಕ್ಕಾಗಿ ಬ್ರಹ್ಮದೇವನ ಆಣತಿಯಂತೆ ಈ ನಾಟ್ಯಶಾಸ್ತ್ರವನ್ನು ರಚಿಸಿರುವನೆಂಬ ಪ್ರತೀತಿ ಇದೆ. ಇದನ್ನು ಪುಷ್ಟೀಕರಿಸುವದಕ್ಕಾಗಿ ಈ ಶ್ಲೋಕವನ್ನು ಉದ್ಧರಿಸಲಾಗಿದೆ–

**उद्धृत्योद्धृत्य सारं यमखिलनिगमान्न्यावेदं विरिञ्चिः**
**चक्रे यस्य प्रयोगं मुनिरपि भरतस्ताण्डवं नीलकण्ठः ।**
**शर्वाणी लास्यमस्य प्रतिपादमपरं लक्ष्मकः कर्तुमीष्टे**
**नाट्यानां किन्तु किञ्चित्प्रगुणरचनया लक्षणं सङ्क्षिपन्ति ॥**[29]

ಋಗ್ಯಜೂಸ್ಸಾಮಾಥರ್ವಗಳೆಂಬ ನಾಲ್ಕೂ ವೇದಗಳ ಸಾರವನ್ನು ಸಂಗ್ರಹಿಸಿ ಬ್ರಹ್ಮದೇವನು “ನಾಟ್ಯವೇದ”ವನ್ನು ವಿರಚಿಸಿದನು. ಅದನ್ನು ಮುನಿಯಾದ ಭರತನು ವಿಸ್ತರಿಸಿ ಪ್ರಯೋಗಾತ್ಮಕವಾಗಿ ಪ್ರದರ್ಶಿಸಿದನು. ನೀಲಕಂಠನಾದ ಪರಶಿವನು ಅದಕ್ಕನುಸಾರವಾಗಿ ಉದ್ಧತ ನೃತ್ಯವಾದ ತಾಂಡವವನ್ನು ಪ್ರದರ್ಶಿಸಿ ನಟರಾಜನಾದನು. ಮುಂದೆ ಇದೇ ತಾಂಡವನೃತ್ಯವನ್ನು ಪ್ರದರ್ಶಿಸಿ ಅಂತ್ಯದಲ್ಲಿ ತನ್ನ ಡಮರುಗದಿಂದ ಹದಿನಾಲ್ಕು ಶಬ್ಧಗಳನ್ನು ಭಾರಿಸಿ ಪಾಣಿನಿ ಮಹರ್ಷಿಗೆ ಮಾಹೇಶ್ವರ ಸೂತ್ರಗಳನ್ನು ಅನುಗ್ರಹಿಸಿದನು. ಅವನ ಈ ಅನುಗ್ರಹದಿಂದ ಕ್ಲಿಷ್ಟಕರವಾದ ವ್ಯಾಕರಣಶಾಸ್ತ್ರವು ಉಗಮವಾಯಿತು–

**नृत्तावसाने नटराजराजो ननाद ढक्कां नवपञ्चवारम् ।**
**उद्धर्तुकामान्सनकादिसिद्धानेतद्विमर्शे शिवसूत्रजालम् ॥** [३०]

ಎಂಬ ಆಧಾರದಮೇರೆಗೆ ಅಕ್ಷರ ಸಮಾಮ್ನಾಯವು ಮಹೇಶ್ವರನಿಂದಲೇ ಅನುಗ್ರಹವಾಯಿತು. ಮುಂದೆ ಈ ಸೂತ್ರಗಳಿಗೆ **माहेश्वरसूत्र**ಗಳೆಂದು ಹೆಸರಿಸಲಾಯಿತು.

---

[28] मालविकाग्निमित्रम्, कालिकासः ನಿರ್ಣಯ ಸಾಗರ್ ಕೊಲಬಹತ್ ಲಾನೆ ಬಾಂಬೆ1924

[29] ಧನಂಜಯನ ದಶರೂಪಕ (ಕನ್ನಡ ಅನುವಾದ) – ಕೆ.ವಿ.ಸುಬ್ಬಣ್ಣ – ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ ತಾಲ್ಲೂಕು – 2014

[30] ಶಿವತತ್ತ್ವರತ್ನಾಕರ ಸಂಪಾದಕರು ಬಿ.ರಾಮರಾವ್ ಮತ್ತು ಪಿ.ಸುಂದರ ಸಾಸ್ತ್ರೈರ್ ಪ್ರಕಾಶನ ಬಿ.ಎಮ್. ನಾಥ್ & ವೆಪ್ರೆ ಮದ್ರಾಸ್. 1927

ಮುಂದೆ ಇದೇ ನಾಟ್ಯಶಾಸ್ತ್ರವನ್ನನುಸರಿಸಿ ಪಾರ್ವತೀದೇವಿಯು ಲಾಸ್ಯವನ್ನು ಪ್ರದರ್ಶಿಸಿದಳು. **अन्यद्भावाश्रयम् नृत्यम्** ಎಂಬ ಲಕ್ಷಣವನ್ನು ಭಾವಾಶ್ರಯ ಗರ್ಭಿತವಾಗಿ ನಿರೂಪಿಸಲಾಯಿತು. ಈಶ್ವರನ ನೃತ್ಯವು "ನೃತ್ತ"ವಾಯಿತು. **नृत्तं ताललयाश्रयम्** ಎಂಬ ಲಕ್ಷಣವನ್ನು ಪಡೆಯಿತು. ಇಂತಹ ನಾಟ್ಯವೇದಕ್ಕೆ ಪ್ರತಿಪಾದನಪೂರ್ವಕವಾಗಿ ನೃತ್ಯಲಕ್ಷಣವನ್ನು ರಚಿಸಲು ಯಾರಿಗೆ ತಾನೇ ಸಾಧ್ಯವಾದೀತು? ಎಂದು ಪ್ರಶ್ನಿಸಿರುವ ದಶರೂಪಕಕಾರನಾದ ಧನಂಜಯನು ಕೆಲವು ವಿಶೇಷ ಗುಣಗಳನ್ನು ತನ್ನ ಕೃತಿಯಲ್ಲಿ ಪ್ರತಿಪಾದಿಸಿ ನಾಟ್ಯಶಾಸ್ತ್ರದ ಹಿರಿಮೆ–ಗರಿಮೆಗಳಿಗೆ ಪುಷ್ಟಿನೀಡಿದನು. ಆದ್ದರಿಂದಲೇ ಈ ಶಾಸ್ತ್ರಕ್ಕೆ ಪಂಚಮವೇದ **नाट्यं नाम पञ्चमो वेदः**[३१] ಎಂಬ ಬಿರುದು ಸಾರ್ಥಕವಾಯಿತು.

ಹೀಗೆ ದೇವತೆಗಳಿಗೆ ವ್ಯರ್ಥವಾಗಿ ಕಾಲಕಳೆಯುವುದು ಕಷ್ಟಕರವಾಯಿತು. ಅದನ್ನು ಸರಿಪಡಿಸಿಕೊಳ್ಳಲು ಒಂದು ಉಪಾಯವನ್ನು ಚಿಂತಿಸಿದರು. ಇಂದ್ರದೇವನನ್ನು ಮುಂದೆ ಮಾಡಿಕೊಂಡು ದೇವತೆಗಳು ಬ್ರಹ್ಮದೇವನ ಬಳಿ ಹೋಗಿ ತಮ್ಮ ಸಮಸ್ಯೆಯನ್ನು ಭಿನ್ನವಿಸಿಕೊಂಡರು–

**क्रीडनीयकमिच्छामो दृश्यं श्रव्यं च यद्भवेत् ।**

**न वेदव्यवहारोऽयं संश्राव्यः स्त्रीशूद्रादिषु ॥**

**तस्मात् सज्जापरं वेदं पञ्चमं सार्ववर्णिकम् ॥**[३२]

"ಕ್ರೀಡನೀಯಕ ಅಂದರೆ ಮನೋವಿನೋದದ ಸಾಧನವೊಂದನ್ನು ನಾವು ಬಯಸಿದ್ದೇವೆ. ಅದು ದರ್ಶನಯೋಗ್ಯವೂ, ಶ್ರವಣಯೋಗ್ಯವೂ ಆಗಿರಬೇಕು. ವೇದೋಕ್ತವೂ ಆಗಿರಬೇಕು. ಅದರಲ್ಲಿ ಸ್ತ್ರೀಯರು ಹಾಗೂ ಶೂದ್ರಾದಿಗಳಿಗೆ ಕೇಳಿಸಬಾರದಂತಿರುವ ಪ್ರಸ್ತುತ ಪ್ರಸಂಗವನ್ನು ಬದಲಿಸಿ ಎಲ್ಲ ವರ್ಗ–ವರ್ಣಗಳಿಗೂ ಲಭಿಸುವುದು ಸುಲಭವಾಗುವಂತೆ ಭಿನ್ನವಾದ ಐದನೆಯ ವೇದ ಇದಾಗಿರಬೇಕು" ಎಂದು.

---

31 ನಾಟ್ಯಶಾಸ್ತ್ರ– ಭರತಮುನಿ, ಅನುವಾದಕ– ಮನಮೋಹನ ಘೋಶ್ ಏಷಿಯಾಟಿಕ್ ಸೊಸೈಟಿ ಆಫ್ ಬೆಂಗಾಲ್, ಕಲ್ಕತ್ತ 1951

32 ನಾಟ್ಯಶಾಸ್ತ್ರ– ಭರತಮುನಿ, ಅನುವಾದಕ– ಮನಮೋಹನ ಘೋಶ್ ಏಷಿಯಾಟಿಕ್ ಸೊಸೈಟಿ ಆಫ್ ಬೆಂಗಾಲ್, ಕಲ್ಕತ್ತ 1951

ಬ್ರಹ್ಮದೇವನು ದೇವತೆಗಳ ಪ್ರಾರ್ಥನೆಯನ್ನು ಅಂಗೀಕರಿಸಿ ಯೋಗಸ್ಥಿತನಾದನು. ನಾಲ್ಕೂ ವೇದಗಳನ್ನೂ ಮನನಮಾಡಿಕೊಂಡನು. ಎಲ್ಲರೂ ಅನುಭವಿಸಲು ಯೋಗ್ಯವಾದ ಐದನೆಯ ವೇದವೊಂದನ್ನು ಸೃಷ್ಟಿಸಿದನು. ಅದು ಧರ್ಮ–ಅರ್ಥ–ಕಾಮ–ಮೋಕ್ಷರೂಪವಾದ ಎಲ್ಲ ಯಶಸ್ಸುಗಳಿಗೂ ಕಾರಣವಾಗುವ ಲೋಕಜ್ಞಾನಬೋಧಕವಾಗಿತ್ತು. ಮುಂದಿನ ಪೀಳಿಗೆಗೆ ಅವಶ್ಯ ಕರ್ಮಗಳನ್ನು ಭೋಧಿಸುವಂತಿತ್ತು. ಎಲ್ಲ ಶಾಸ್ತ್ರಗಳ ಅರ್ಥಗಳನ್ನು ಒಳಗೊಂಡಿತ್ತು. ಸಕಲ ಕಲೆಗಳ ಪ್ರದರ್ಶನಕ್ಕೆ ಅನುವು ಮಾಡಿಕೊಟ್ಟಿತ್ತು. ನಾನಾರಸಗಳ ಅನುಭೂತಿಗೆ ಅನುಕೂಲಕರವಾಗಿತ್ತು. ಗತಕಾಲದ ಇತಿಹಾಸ–ಇತಿವೃತ್ತ (ಕಥಾಸಂವಿಧಾನ) ಗಳನ್ನು ಒಳಗೊಂಡಿತ್ತು–

**जग्राह पाद्यमृग्वेदात्सामभ्यो गीतमेव च**

**यजुर्वेदादभिनयान् रसानाथर्वणादपि ॥**[३३]

ಹೀಗೆ ಸಂಕಲ್ಪಿಸಿದ ಸೃಷ್ಟಿಕರ್ತ ಬ್ರಹ್ಮದೇವನು ಋಗ್ವೇದದಿಂದ ಪಾಠ್ಯವನ್ನು, ಸಾಮವೇದದಿಂದ ಸಂಗೀತವನ್ನು, ಯಜುರ್ವೇದದಿಂದ ಅಭಿನಯಕಲೆಯನ್ನು, ಅಥರ್ವವೇದದಿಂದ ತಂತ್ರ ಹಾಗೂ ರಸ ಸಂಯೋಜನೆಗಳನ್ನು ಆಯ್ದುಕೊಂಡನು. ಐದನೆಯ ವೇದವಾದ ನಾಟ್ಯವೇದವನ್ನು ಸೃಷ್ಟಿಸಿದನು. ಭರತಮುನಿಗೆ ಅದನ್ನು ಉಪದೇಶಿಸಿ ಪ್ರಯೋಗ ಮಾಡುವಂತೆ ಆದೇಶಿಸಿದನು. ಬ್ರಹ್ಮನ ಆದೇಶವನ್ನು ಶಿರಸಾಪಾಲಿಸಿದ ಭರತಮುನಿಯು ಪ್ರಯೋಗಮಾಡಿದನು. ಅದಕ್ಕೆ ಭಾರತೀ–ಸಾತ್ವತೀ–ಆರಭಟೀ ಕೈಶಿಕೀ ಎಂಬ ನಾಲ್ಕೂ ವೃತ್ತಿಗಳೂ ಬಳಕೆಯಾದವು–

**भारती संस्कृतप्रायः वाग्व्यापारो नटाश्रयः ।**

**भेद्यः प्ररोचनायुक्तैः वीथी प्रहसनामुखैः ॥**[34]

ಬ್ರಹ್ಮದೇವನ ಆಣತಿಯಂತೆ ಪ್ರಯೋಗ ಮಾಡಿದ ರೂಪಕದಲ್ಲಿ ಭಾಷೆಯು ಸಂಸ್ಕೃತಭಾಷಾ ಬಾಹುಲ್ಯದಿಂದ ಕೂಡಿರಬೇಕು. ಅದು ಭಾರತೀ ವೃತ್ತಿ ಬಾಹುಲ್ಯದಿಂದ ಯುಕ್ತವಾಗಿರಬೇಕು. ಬಹಳವಾಗಿ ಪುರುಷಪಾತ್ರವೇ ಆ ಸಂಭಾಷಣೆಯನ್ನು ನಿರ್ವಹಿಸಬೇಕು.

---

[33] ನಾಟ್ಯಶಾಸ್ತ್ರ– ಭರತಮುನಿ, ಅನುವಾದಕ– ಮನಮೋಹನ ಘೋಶ್ ಏಷಿಯಾಟಿಕ್ ಸೊಸೈಟಿ ಆಫ್ ಬೆಂಗಾಲ್, ಕಲ್ಕತ್ತ 1951

[34] **ಧ**ನಂಜಯನ ದಶರೂಪಕ (ಕನ್ನಡ ಅನುವಾದ) – ಕೆ.ವಿ.ಸುಬ್ಬಣ್ಣ – ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ ತಾಲ್ಲೂಕು – 2014

ಅದರಲ್ಲಿ ಭಾರತೀವೃತ್ತಿಯ ಪ್ರರೋಚನಾ, ವೀಥೀ, ಪ್ರಹಸನ, ಆಮುಖ ರೂಪವಾದ ಭೇದಗಳು ಒಳಗೊಂಡಿರಬೇಕು.

ಭಾರತೀವೃತ್ತಿಯಲ್ಲಿ प्ररोचना, वीथी, प्रहसनम्, आमुखम् ಎಂದು ಪ್ರಧಾನವಾಗಿ 4 ಬಗೆಗಳಿವೆ. ವಿವರಗಳು ಹೀಗಿವೆ.

**१) <u>प्ररोचनाः–</u>**

उन्मुखीकरणं तत्र प्रशंसातः प्ररोचना । ನಾಟ್ಯಾರ್ಥದಲ್ಲಿ ಪ್ರಶಂಸೆಯ ಮೂಲಕ ಸಹೃದಯ ಸಾಮಾಜಿಕರ ಮನಸ್ಸನ್ನು ಸೆಳೆಯುವುದಕ್ಕೆ 'ಪ್ರರೋಚನಾ'ಎಂದು ಕರೆಯಲಾಗಿದೆ. ಉದಾಹರಣೆಗೆ,

**श्रीहर्षो निपुणः कविः परिषदप्येषा गुणग्राहिणी**[३५] ಇತ್ಯಾದಿ.

२) **<u>वीथी लक्षणम् :–</u>**

**वीथीप्रहसनं चापि स्वप्रसङ्गेऽभिधास्यते ।**

**वीथ्यङ्गान्यामुखाङ्गत्वादुच्यन्तेऽत्रैव तत्पुनः ॥**

ವೀಥೀಯ ಅಂಗಗಳು ಆಮುಖದ ಅಂಗಗಳೂ ಆಗಿರುವ ಕಾರಣ ಅವುಗಳನ್ನು ಇಲ್ಲಿ ಹೇಳಲಾಗಿದೆ.

३) **<u>प्रहसनम् :–</u>**

**भाणवत्सन्धिसन्ध्यङ्गलास्याङ्गाङ्कैर्विनिर्मितम् ।**

**भवेत्प्रहसनं वृत्तं निन्द्यानां कविकल्पितम् ॥**[३६]

---

[35] ನಾಟ್ಯಶಾಸ್ತ್ರ– ಭರತಮುನಿ, ಅನುವಾದಕ– ಮನಮೋಹನ ಘೋಶ್ ಏಷಿಯಾಟಿಕ್ ಸೊಸೈಟಿ ಆಫ್ ಬೆಂಗಾಲ್, ಕಲ್ಕತ್ತ 1951

[36] ಸಂಸ್ಕೃತ ಭಾಷಾಶಾಸ್ತ್ರ ಮತ್ತು ಸಾಹಿತ್ಯ ಚರಿತ್ರೆ – ಡಾ.ಕೃಷ್ಣಮೂರ್ತಿ – ಕರ್ನಾಟಕ ಸರ್ಕಾರ ಪಠ್ಯಪುಸ್ತಕ ಇಲಾಖೆ, ಬೆಂಗಳೂರು – 1993.

ಭಾಣದಂತೆಯೇ ಸಂಧಿ, ಸಂಧ್ಯಂಗ, ಲಾಸ್ಯಾಂಗಗಳಿಂದ ನಿರ್ಮಿತವಾದುದಕ್ಕೆ **प्रहसनवृत्तम्**ಎಂದು ಕರೆಯಲಾಗಿದೆ. ಇದು ಕವಿಕಲ್ಪಿತವಾಗಿರುತ್ತದೆ.

೪) <u>**आमुखम् :-**</u>

**सूत्रधारो नटीं ब्रूते मार्षं वाथ विदूषकम् ।**

**स्वकार्यं प्रस्तुताक्षेपि चित्रोक्त्या यत्तदामुखम् ॥**

**प्रस्तावना वा ।**[३७]

ಸೂತ್ರಧಾರನು ನಟಿ, ಮಾರಿಷ ಅಥವಾ ವಿದೂಷಕನನ್ನು ಕರೆದು ಚಿತ್ರವಾಕ್ಯ (ಸುಂದರ ಅಥವಾ ಚತುರವಾದ ಮಾತು) ಗಳಿಂದ ಪ್ರಸ್ತುತವಾದ ತನ್ನ ಕಾರ್ಯವನ್ನು ಎತ್ತಿ ಹೇಳುತ್ತಾನೆ. ಇದೇ ಆಮುಖ ಅಥವಾ ಪ್ರಸ್ತಾವನಾ ಎನಿಸುತ್ತದೆ. ಮಾರಿಷನಿಗೆ ಪಾರಿಪಾರ್ಶ್ವಕನೆಂದೂ ಹೇಳಲಾಗಿದೆ.

<u>**आरभटी :-**</u>

**एभिरङ्गैश्चतुर्धेयं सात्त्वत्यारभटी पुनः ।**

**मायेन्द्रजालसङ्ग्रामक्रोधोद्भ्रान्तादि चेष्टितैः ॥**

**संक्षिप्तिका स्यात्सम्फेटो वस्तूत्थानावपातने ।**

ಲಕ್ಷಿತವಾದ ನಾಲ್ಕೂ ಅಂಗಗಳನ್ನುಳ್ಳ ಸತ್ತ್ವವೇ ವೃತ್ತಿ ಎನಿಸಿದರೆ, ಇನ್ನು ಆರಭಟೀವೃತ್ತಿಯು ಮಾಯ, ಇಂದ್ರಜಾಲ, ಯುದ್ಧ, ಕ್ರೋಧ, ಉದ್ಭ್ರಾಂತ ಮೊದಲಾದ ಚೇಷ್ಟೆಗಳಿಂದ ಕೂಡಿರುತ್ತದೆ. ಇದರಲ್ಲಿ ಸಂಕ್ಷಿಪ್ತಿಕಾ, ಸಂಫೇಟ, ವಸ್ತು, ಉತ್ಥಾನ, ಅವಪಾತನ ಎಂಬ ನಾಲ್ಕು ಅಂಗಗಳಿರುತ್ತವೆ.

---

[37] **ಧ**ನಂಜಯನ ದಶರೂಪಕ (ಕನ್ನಡ ಅನುವಾದ) – ಕೆ.ವಿ.ಸುಬ್ಬಣ್ಣ – ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ ತಾಲ್ಲೂಕು – 2014

**<u>कैशिकीवृत्ति :–</u>**

**तद्व्यापारात्मिका वृत्तिश्चतुर्धा तत्र कैशिकी ।**

**गीतनृत्यविलासाद्यैर्मृदु श्रृङ्गार चेष्टितैः ॥[38]**

ನಾಯಕನ ವ್ಯಾಪಾರಾತ್ಮಕವಾಗಿರುವ ವೃತ್ತಿಗಳು ನಾಲ್ಕು ವಿಧ. ಅವುಗಳಲ್ಲಿ ಒಂದು ಕೈಶಿಕೀವೃತ್ತಿ. ಗೀತ–ನೃತ್ಯ–ವಿಲಾಸಗಳುಳ್ಳ ಶೃಂಗಾರ ರಸಚೇಷ್ಟಿತಗಳಿಂದ ಲಲಿತವಾಗಿರುತ್ತದೆ. ಇದರ ಅಂಗಗಳು–ನರ್ಮ, ನರ್ಮಸ್ಫಿಂಜ, ನರ್ಮಸ್ಫೋಟ ಮತ್ತು ನರ್ಮಗರ್ಭ ಎಂದು. ಹೀಗೆ ವೃತ್ತಿಗಳು ನಾಟ್ಯಶಾಸ್ತ್ರದಲ್ಲಿ ಅವಿಭಾಜ್ಯ ಅಂಗಗಳೇ ಆಗಿ ಶಾಸ್ತ್ರೀಯ ಮಹತ್ವವನ್ನು ಅಧಿಕಗೊಳಿಸಿವೆ. ಸರ್ವ ಪ್ರಾಣಿಗಳ ಆನಂದಕ್ಕೆ ಉತ್ಕೃಷ್ಟ ಕೊಡುಗೆಯನ್ನು ನೀಡಿವೆ. ದುಃಖದ ನಿವೃತ್ತಿಗಾಗಿ ಇವುಗಳ ಪ್ರಯತ್ನ ಅಪಾರವಾಗಿದೆ.

ಮಾನವನಿಗೆ ಸಾಧಾರಣವಾದ ಮನರಂಜನೆಯಲ್ಲಿ ತೃಪ್ತಿಸಿಗದಾಗ ಬ್ರಹ್ಮದೇವನಿಂದ ಅನುಗ್ರಹ ಪಡೆದ ಭರತಮುನಿ ಪ್ರಸ್ತುತಪಡಿಸಿದ ನಾಟ್ಯಶಾಸ್ತ್ರವನ್ನೇ ವಿಸ್ತೃತಗೊಳಿಸಿ ವಿಶೇಷ ಆನಂದವನ್ನು ಸಂಪಾದಿಸಲು ವಿವಿಧ ಕಲೆಗಳ ಅನ್ವೇಷಣೆ ಹಾಗೂ ಆರಾಧನೆಗಳನ್ನು ಆರಂಭಿಸಿದ. ಕಲಾರಸಿಕರಿಗೆ ಕಾವ್ಯಾನಂದಕ್ಕಿಂತ ಮಿಗಿಲಾದ ಆನಂದ ಬೇರೊಂದಿಲ್ಲವೆಂಬುದನ್ನು ಅರಿತ ಬುದ್ಧಿವಂತ ಮಾನವ ಮನರಂಜನೆಯ ಮನೋಭೂಮಿಕೆಯನ್ನು ಸನ್ನದ್ಧಗೊಳಿಸಲು ನಾಟ್ಯ ಸಂಗತಿಗಳನ್ನು ನಟನೆಗೆ ಅನುವುಗೊಳಿಸಿದ. ರೂಪಕಗಳ ರಚನೆಗೆ ತೊಡಗಿದ. ಅಲೌಕಿಕ ಆನಂದವನ್ನು ಅದರಲ್ಲಿ ಅಳವಡಿಸಿದ. ರಸವ್ಯಂಜಕ ವಾಕ್ಯಗರ್ಭಿತವಾದ ಕಾವ್ಯಗಳನ್ನು ಸಿದ್ಧಪಡಿಸಿ ಭಾವುಕರು ಕಾವ್ಯಾನಂದವನ್ನು ಅನುಭವಿಸಿ, ಆಸ್ವಾದಿಸಿ ಮೈಮರೆಯುವಂತೆ ಮಾಡಿದ. ಅದೇ ಮುಂದೆ ರಸವ್ಯಂಜಕ ಕಾವ್ಯದ ಸೃಷ್ಟಿಗೆ ನಾಂದಿಯಾಯಿತು. ಶ್ರವ್ಯ–ದೃಶ್ಯಗಳೆಂದು ಕಾವ್ಯಗಳು ವಿಭಜನೆಗೊಂಡವು. ಗದ್ಯ–ಪದ್ಯ–ಚಂಪೂ ಮುಂತಾದವು ಶ್ರವ್ಯ ಕಾವ್ಯಗಳಾದರೆ, ರೂಪಕಾದಿಗಳು ದೃಶ್ಯಕಾವ್ಯಗಳಾದವು. ದೃಶ್ಯಕಾವ್ಯವೇ ರೂಪಕವೆಂದು ಹೆಸರು ಪಡೆಯಿತು. ಯದ್ಯಪಿ ದೃಶ್ಯವೇ ಶ್ರವ್ಯವೂ ಆಗಿದ್ದರೂ ದೃಶ್ಯಾಂಶವೇ ಹೆಚ್ಚು ಆಕರ್ಷಕವಾದುದರಿಂದ 'ದೃಶ್ಯಕಾವ್ಯ' ವೆಂದು ಲೋಕಪ್ರಸಿದ್ಧಿ ಪಡೆಯಿತು. ಮುಂದೆ ಇದೇ ನಾಟ್ಯ, ನಾಟಕ, ರೂಪ, ರೂಪಕ, ದೃಶ್ಯಕಾವ್ಯವೆಂದೆಲ್ಲಾ ಲೋಕಪ್ರಸಿದ್ಧಿ ಪಡೆಯಿತು. ಎಲ್ಲವೂ ಒಂದೇ ಅರ್ಥದಲ್ಲಿ ಸಮ್ಮಿಳಿತವಾಯಿತು.

---

[38] ಧನಂಜಯನ ದಶರೂಪಕ (ಕನ್ನಡ ಅನುವಾದ) – ಕೆ.ವಿ.ಸುಬ್ಬಣ್ಣ – ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ ತಾಲ್ಲೂಕು – 2014

ನಾಟ್ಯವೆಂದರೆ ನಟರಿಂದ ರಾಮ–ಯುಧಿಷ್ಠಿರ–ಶ್ರೀಕೃಷ್ಣಾದಿ ಮಹಾನಾಯಕರ ಅವಸ್ಥೆಗಳನ್ನು ಅನುಕರಣೆ ಮಾಡಿ ಸಹೃದಯಿಗಳಿಗೆ ರಸಾನಂದವನ್ನುಂಟುಮಾಡುವುದೇ ಆಗಿದೆ. ನಾಟ್ಯವನ್ನು ಅಭಿನಯಿಸುವ ನಟನು ಅನುಕರಣಮಾಡುವ ಪಾತ್ರಕ್ಕೆ ಜೀವಂತಿಕೆ ತುಂಬಿ, ಆ ಪಾತ್ರದ ದೇಶ–ಭಾಷೆ ಕಾಲಾನುಗುಣವಾದ ವೇಷಭೂಷಣಗಳನ್ನು ತೊಟ್ಟು ಅನುಕರಣೆ–ಅಭಿನಯ–ಆಡುನುಡಿಗಳ ಮೂಲಕ ಸಂದರ್ಭೋಚಿತವಾದ ರಸ–ಭಾವಾದಿಗಳನ್ನು ಅಭಿವ್ಯಕ್ತಗೊಳಿಸಿ ಪಾತ್ರಗಳಿಗೆ ಜೀವತುಂಬುತ್ತಾನೆ. ಹೀಗೆ ನಾಟ್ಯವು ದೃಶ್ಯವಾದುದರಿಂದ ರೂಪವಾಯಿತು. ಧೀರೋದಾತ್ತಾದ್ಯವಸ್ಥಾರೋಪವಿರುವುದರಿಂದ ರೂಪಕವಾಯಿತು. ದೃಶ್ಯವಾಗಿಯೂ–ಕವಿಕೃತವೂ ಆಗಿರುವುದರಿಂದ ನಾಟ್ಯಶಾಸ್ತ್ರವು ದೃಶ್ಯಕಾವ್ಯದಲ್ಲಿ ಅಂತರ್ಭಾವಗೊಂಡಿತು. ದೃಶ್ಯಕಾವ್ಯಕ್ಕೆ ಪರಿಪುಷ್ಟಿಯನ್ನು ನೀಡಿತು.

ರಸಗಳನ್ನಾಶ್ರಯಿಸಿ ವಾದ್ಯವೂ ಸೇರಿದ್ದರಿಂದ ರಸಾಯನ ರೂಪಪಡೆದು ಮುಂದೆ ರೂಪಕವು ಹತ್ತು ಬಗೆಯಾಯಿತು–

**नाटकमथप्रकरणं भाणव्यायोगसमवकारडिमाः ।**

**ईहामृगाङ्कवीथ्यः प्रहसनमिति रूपकाणि दश ॥**[३९]

ಅಭಿನಯಾತ್ಮಕ ರೂಪಕಗಳಿಗೆ ಪರಿಪೋಷಣೆ ನೀಡುವುವೇ ರಸಗಳು. ಇವು ಎಂಟು "ಶಾಂತ"ಸೇರಿ ಒಂಬತ್ತಾಗಿವೆ. ಮುಂದೆ "ವತ್ಸಲ"ವೂ ಸೇರಿ ರಸಗಳು ಹತ್ತು ಬಗೆಯೆಂದು ಆಲಂಕಾರಿಕರು ಅಭಿಪ್ರಾಯಪಟ್ಟಿದ್ದಾರೆ.

**श्रृङ्गारहास्यकरुणाः रौद्रवीरभयानकाः ।**

**बीभत्साद्भुतशान्ताश्च नव नाट्येरसाः स्मृताः ॥**[४०]

ಮೇಲೆ ಹೇಳಿದ ಒಂಬತ್ತು ರಸಗಳ ಉತ್ಪತ್ತಿಗೆ ಕಾರಣವಾದವು ಒಂಬತ್ತು ಸ್ಥಾಯಿಭಾವಗಳು–

**रतिर्हासश्च शोकश्च क्रोधोत्साहौ भयं तथा ।**

**जुगुप्साविस्मयशमाः स्थायिभावाः प्रकीर्तिताः ॥**[४१]

**–साहित्यदर्पणः, षष्ठः परिच्छेदः, विश्वनाथः ।**

---

[39] ಧನಂಜಯನ ದಶರೂಪಕ (ಕನ್ನಡ ಅನುವಾದ) – ಕೆ.ವಿ.ಸುಬ್ಬಣ್ಣ – ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ ತಾಲ್ಲೂಕು – 2014

[40] ಸಾಹಿತ್ಯ ದರ್ಪಣ ವಿಶ್ವನಾಥ ಕವಿರಾಜ್, ಪಾಂಡುರಂಗ್ ವಾಮನ ಕಾನೆ, ಆಂಗ್ರೇ ವಾಡೆ ಬಾಂಬೆ 4, 1956.

[41] ಅದೇ

ಸ್ಥಾಯಿಭಾವಗಳಿಂದ ಉದ್ಬುದ್ಧವಾದ ರಸಗಳು ನಾಲ್ಕು ಬಗೆಯ ಅಭಿನಯಗಳಿಂದ ಸಹೃದಯ ಗಮ್ಯಗಳಾಗುತ್ತವೆ. ಅವುಗಳೆಂದರೆ–

**आङ्गिको वाचिकश्चैव आहार्यः सात्त्विकस्तथा ।**

**चत्वारोऽभिनया ह्येते विज्ञेया नाट्यसंश्रयाः ॥**[४२]

**–साहित्यदर्पणः, षष्ठः परिच्छेदः, विश्वनाथः ।**

ನಾಟ್ಯವನ್ನಾಶ್ರಯಿಸಿದ ಅಭಿನಯಗಳಲ್ಲಿ "ಆಂಗಿಕ"ವು ಶರೀರಸಂಬಂಧವುಳ್ಳದ್ದು. ಸಂಭಾಷಣಾ ರೂಪದಿಂದ "ವಾಚಿಕ"ವು ಅಭಿನಯಕ್ಕೆಪ್ರಕಟಗೊಳ್ಳುತ್ತದೆ. ಆಭರಣ ಹಾಗೂ ಬಣ್ಣ ವಿನ್ಯಾಸಗಳಿಂದ "ಅಹಾರ್ಯ"ವು ಅಭಿನಯಕ್ಕೆ ಸಹಕಾರಿಯಾಗುತ್ತದೆ. ಸತ್ತ್ವಗುಣವಿಶಿಷ್ಟಪೂರ್ಣವಾದ ಮನಸ್ಸಿನಿಂದ ಸಂಪನ್ನಗೊಳ್ಳುವುದು. "ಸಾತ್ತ್ವಿಕ" ವೆನಿಸುತ್ತದೆ.

ಮಾನವನಕಂಠ, ಪಶುಗಳ ಹಾಗೂ ಪಕ್ಷಿಗಳ ಕಂಠದಿಂದ ಮತ್ತು ಕೊಳಲಿನಿಂದ ಉತ್ಪನ್ನವಾಗುವ ಸ್ವರಗಳು ಏಳು.

**शारीरा वैणवाश्चैव सप्त षड्जादयः स्वराः ।**

**विषादर्षभगान्धार मध्यपञ्चमधैवताः ॥**[४३]

ಷಡ್ಜ ಸ್ವರದಲ್ಲಿ ನವಿಲು ಧ್ವನಿಮಾಡುತ್ತದೆ. ಹಸುಗಳು ವೃಷಭ ಸ್ವರದಲ್ಲಿ ಧ್ವನಿಗೈಯ್ಯುತ್ತವೆ. ಮೇಕೆಯೇ ಮೊದಲಾದವು ಗಾಂಧಾರಸ್ವರದಲ್ಲಿ ಉಲಿಯುತ್ತವೆ. ಕ್ರೌಂಚ ಪಕ್ಷಿಯು ಮಧ್ಯಮ ಸ್ವರದಲ್ಲಿ ಉಲಿಯುತ್ತದೆ. ಹೂಬಿಡುವ ಸಾಧಾರಣ ಕಾಲದಲ್ಲಿ ಅಂದರೆ ವಸಂತ ಕಾಲದಲ್ಲಿ ಕೋಗಿಲೆಯು ಪಂಚಮ ಸ್ವರದಲ್ಲಿ ಕೂಗುತ್ತದೆ. ಕುದುರೆಯು ಧೈವತ ಸ್ವರದಲ್ಲಿ ಕೆನೆಯುತ್ತದೆ. ಆನೆಯು ನಿಷಾದಸ್ವರದಲ್ಲಿ ಘೀಳಿಡುತ್ತದೆ.

ಆತೋದ್ಯವೆಂಬ ವಾದ್ಯವಿಶೇಷವು ತತ–ಅವನದ್ಧ–ಘನ–ಸುಷಿರವೆಂದು ನಾಲ್ಕು ವಿಧವಾಗಿದೆ.

**ततं चैवावनद्धञ्च घनं सषिरमेव च ।**

**चतुर्विधं तु विज्ञेयम् आतोद्यं लक्षणान्वितम् ॥**

---

42 ಸಾಹಿತ್ಯ ದರ್ಪಣ ವಿಶ್ವನಾಥ ಕವಿರಾಜ್, ಪಾಂಡುರಂಗ್ ವಾಮನ ಕಾನೆ,ಆಂಗ್ರೇ ವಾಡೆ ಬಾಂಬೆ 4, 1956.

43 Samgeetaratnakara of sarangadeva,translatedby Dr.k kunjunni Raja & RadhaBurnier,Adyarlibrary & Research Centre,1976.

**ततं तन्त्रीगतं ज्ञेयम् अवनद्धं तु पौष्करम् ।**

**धनस्तु लालो विज्ञेयः सुषिरो वंश एव च ॥४४**

ತಂತಿಯ ಸಹಾಯದಿಂದ ನುಡಿಸುವ ಸ್ವರಕ್ಕೆ 'ತತ' ವೆನ್ನುತ್ತಾರೆ. ಮೃದಂಗಾದಿವಾದ್ಯವಿಶೇಷಗಳ ಸ್ವರಕ್ಕೆ "ಅವನದ್ಧ" ವೆಂದು ಹೆಸರು. ತಾಳವಾದ್ಯಕ್ಕೆ "ಘನ" ವೆನ್ನಲಾಗಿದೆ. ಬಿದಿರಿನಿಂದ ರಚಿಸಿದ ಕೊಳಲು ಮೊದಲಾದ ವಾದ್ಯವಿಶೇಷಗಳ ಸ್ವರಕ್ಕೆ "ಸುಷಿರ" ವೆಂದು ಕರೆಯಲಾಗಿದೆ.

ರೂಪಕಗಳಲ್ಲಿ ಪ್ರಧಾನಪಾತ್ರ ನಿರ್ವಹಿಸುವ ನಟರಲ್ಲಿ ನಾಲ್ಕು ವಿಧವಾದ ನಾಯಕರಿರುತ್ತಾರೆ.

**धीरोद्धतो धीरललितो धीरोदात्तस्तथैव च ।**

**धीरप्रशान्तश्चैवेति नायकाः नाटकाश्रयाः ॥**

**–सा. द. षष्ठः परिच्छेदः, विश्वनाथः**

1. ರಾವಣ, ದುರ್ಯೋಧನ, ಭೀಮಾದಿಗಳು ಧೀರೋದ್ಧತರು.
2. ಶ್ರೀಕೃಷ್ಣ, ಉದಯನ (ವತ್ಸರಾಜ) ಮುಂತಾದವರು ಧೀರಲಲಿತರು.
3. ಶ್ರೀರಾಮ, ಅರ್ಜುನ, ದುಷ್ಯಂತಾದಿಗಳು ಧೀರೋದಾತ್ತರು.
4. ಜೀಮೂತವಾಹನ, ಧರ್ಮರಾಜ, ಬುದ್ಧ, ಚಾರುದತ್ತಾದಿಗಳು ಧೀರಪ್ರಶಾಂತರು.

ನಾಯಕರಿಗನುಗುಣವಾಗಿ ನಾಯಿಕೆಯರಲ್ಲಿಯೂ ನಾಲ್ಕುವಿಧವಾದ ಪಾತ್ರಗಳಿರುತ್ತವೆ.

**नायिकाश्चैववक्ष्यामि चतस्रः पुनरेव तु ।**

**दिव्या च नृपपत्नी च कुलस्त्री गणिका तथा ॥४५**

ನಾಟಕಾದಿ ರೂಪಕಗಳಲ್ಲಿ ದಿವ್ಯಾ, ನೃಪಪತ್ನೀ, ಕುಲಸ್ತ್ರೀ, ಗಣಿಕಾ ಎಂದು ನಾಯಿಕೆಯರಿರುತ್ತಾರೆ.

1) ದೇವತಾಸ್ತ್ರೀಯರಾದ ಮೇನಕೆ, ಊರ್ವಶೀ ಮುಂತಾದವರು ದಿವ್ಯಾ ನಾಯಕಿಯರು.
2) ದ್ರೌಪದೀ, ಸೀತಾ, ರತ್ನಾವಳೀ, ವಿಲಾಸವತೀ ಮುಂತಾದವರು ನೃಪಪತ್ನಿಯರು.
3) ಸಾವಿತ್ರೀ, ಅರುಂಧತೀ ಮುಂತಾದವರು ಕುಲಸ್ತ್ರೀಯರು.

[44] ಭರತನಾಟ್ಯ ದಿಗ್ದರ್ಶನ–ವಿ. ಎಸ್. ಕೌಶಿಕ್. ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು 2015.

[45] ಸಾಹಿತ್ಯದರ್ಪಣ – ಅನುವಾದ: ಡಾ.ಟಿ.ಜಿ.ಸಿದ್ದಪ್ಪಾರಾಧ್ಯ – ಹೇಮಾಪ್ರಿಂಟರ್ಸ್, ಮೈಸೂರು –1967

4) ಪರಪುರುಷರಲ್ಲಿ ಆಸಕ್ತರಾದ ವಸಂತಸೇನಾ ಮುಂತಾದವರು ಗಣಿಕಾಸ್ತ್ರೀಯರು.

ಈ ಎಲ್ಲ ವಿಧವಾದ ನಾಟಕಲಕ್ಷಣಗಳು ಭರತಮುನಿಯ ನಾಟ್ಯಶ್ಸಾಸ್ತ್ರದಲ್ಲೂ ಮೂಲರೂಪದಲ್ಲಿ ಪ್ರಸ್ತಾಪಗೊಂಡಿವೆ. ಅಲ್ಲದೆ ನಾಟ್ಯ–ನಾಟಕಾದಿಗಳಿಗೆ ಸಂಬಂಧಪಟ್ಟಂತೆ ಇತರೆ ಕೆಲವು ಪ್ರಸಿದ್ಧ ಗ್ರಂಥಗಳಲ್ಲಿ ಉಕ್ತವಾಗಿರುವ ಲಕ್ಷಣ ಸಂಗತಿಗಳನ್ನು ಈ ಕೆಳಕಂಡಂತೆ ಮನಗಾಣಬಹುದು.

**ಭರತಮುನಿಯ ನಾಟ್ಯಶಾಸ್ತ್ರದಲ್ಲಿ ವ್ಯಭಿಚಾರಿ ಭಾವದ ಪ್ರಸ್ತಾವನೆ**

ಭರತಮುನಿಯು ತನ್ನ ಕೃತಿಯಾದ "ನಾಟ್ಯಶಾಸ್ತ್ರ"ದ ಆರನೆಯ ಅಧ್ಯಾಯದಲ್ಲಿ ಮುವತ್ಮೂರು ಬಗೆಯ ವ್ಯಭಿಚಾರಿಭಾವಗಳನ್ನು ನಿರೂಪಿಸಿದ್ದಾನೆ. ನಾಟ್ಯದಲ್ಲಿ ಈ ಭಾವಭಂಗಿಗಳ ಅವಶ್ಯಕತೆಯನ್ನು ಪ್ರಮುಖವಾಗಿ ಪ್ರಸ್ತಾಪಿಸಿದ್ದಾನೆ. ಅವುಗಳ ವಿವರಣೆಗಳು ಏಳನೆಯ ಅಧ್ಯಾಯದಲ್ಲಿ ನಿರೂಪಗೊಂಡಿವೆ. ಮೊದಲಿಗೆ ಗ್ರಂಥಕಾರನು "ವ್ಯಭಿಚಾರಿಭಾವ" ಪದದ ನಿಷ್ಪತ್ತಿಯನ್ನು ನೀಡಿದ್ದಾನೆ. "ವಿ" ಮತ್ತು "ಅಭಿ" ಎಂಬ ಎರಡು ಉಪಸರ್ಗಗಳಿಂದ ಕೂಡಿದ चर् गतौ ಎಂಬ ಅರ್ಥವುಳ್ಳ 'चर्'ಧಾತುವಿನಿಂದ ಈ ಶಬ್ದವು ನಿಷ್ಪನ್ನಗೊಂಡಿದೆ ಎಂದು ಹೇಳಿದ್ದಾನೆ. ಮುಂದೆ ಎಲ್ಲ ಭೇದಗಳ ಸ್ವರೂಪವನ್ನು ಅವುಗಳ विभाव ಮತ್ತು अनुभाव ಗಳ ಲಕ್ಷಣಗಳೊಂದಿಗೆ ವಿವರಿಸಿದ್ದಾನೆ.

ಸಂಸ್ಕೃತ ಸಾಹಿತ್ಯದಲ್ಲಿ ಕಾವ್ಯ ಪ್ರಕಾರಕ್ಕೆ ರಸ–ಭಾವಗಳ ಪ್ರವೃತ್ತಿಗಳು ಅತ್ಯಂತ ಪ್ರಶಸ್ತವಾಗಿವೆ. 'ರಸ' ಎಂದರೆ रस्यते आस्वाद्यते इति रसः [೪೬] ಎಂಬ ನಿಷ್ಪತ್ತಿಯಿಂದ ಕಾವ್ಯದಲ್ಲಿ ವ್ಯಕ್ತವಾಗುತ್ತದೆ. 'ಭಾವ' ಎಂದರೆ 'ಇರುವಿಕೆ'. ಆದರೆ ಅದರ ನಿಷ್ಪತ್ತಿಗನುಸಾರವಾಗಿ ಅದಕ್ಕೆ ಅನೇಕಾರ್ಥಗಳನ್ನು ಹೇಳಲಾಗಿದೆ. ಅವುಗಳಲ್ಲೊಂದಾದ चित्तवृत्तिः ಎಂಬುದು ಕಾವ್ಯಸಂದರ್ಭಕ್ಕೆ ಹೊಂದಿಕೊಳ್ಳುವ ಅರ್ಥವಾಗಿದೆ. ಆದ್ದರಿಂದ ಭಾವ ಸಾಮಾನ್ಯವಾಗಿ ಸ್ಥಾಯಿಭಾವಕ್ಕೆ ಅನ್ವಯಿಸುತ್ತದೆ. ಸ್ಥಾಯಿಭಾವಗಳು ಉದ್ಬುದ್ಧವಾಗದೇ ರಸವು ಸ್ಪಂದಿಸುವುದಿಲ್ಲ. ರಸವು ಕಾವ್ಯದಲ್ಲಿ ಪುಷ್ಟಿ ಹೊಂದಬೇಕಾದರೆ ಭಾವದ ಅವಶ್ಯಕತೆ ಅನಿವಾರ್ಯ. ಭಾವಕ್ಕೆ ಸಂಬಂಧಪಟ್ಟ ಅನುಭವವು ದೃಶ್ಯಕಾವ್ಯದಲ್ಲಿ ಸೇರಿ ಶಾಸ್ತ್ರೀಯ ಸ್ಪರ್ಶವನ್ನು ಪ್ರಸ್ತುತಪಡಿಸುವುದೇ **'ರಸ'.** ಅಂತಹ ರಸಗಳು ಒಂಬತ್ತು. ಶೃಂಗಾರ, ಹಾಸ್ಯ, ಕರುಣ, ರೌದ್ರ, ವೀರ, ಭಯಾನಕ,

[46] Natyashastra of Bharataamuni Volumes.-Editor, R.S. Nagar

ಬೀಭತ್ಸ, ಅದ್ಭುತ ಮತ್ತು ಶಾಂತ ಇವೇ ರಸಗಳು. ಬ್ರಹ್ಮಸಾಕ್ಷಾತ್ಕಾರಕ್ಕೆ ಹಾಗೂ ಅನುಭವಕ್ರಮಕ್ಕೆ ಕಾವ್ಯಾನುಭವವನ್ನು ರೂಪಿಸಿಕೊಡುವುದೇ **'ರಸ'.**

ಕ್ರೌಂಚಪಕ್ಷಿಗಳ ವಿಪತ್ತಿನಲ್ಲಿ ವಾಲ್ಮೀಕಿಯು ಶೋಕಪೂರಿತನಾಗಿ ಆಡಿದ ಮಾತುಗಳು, ನೀಡಿದ ಸ್ಫೂರ್ತಿ ರಸಾನುಭವವಾಗಿ ಪರಿಣಮಿಸಿದ ಪ್ರಸಂಗವು ರಸ ಸ್ಪಂದನೆಗೆ ಉತ್ತಮ ಉದಾಹರಣೆಯಾಗಿದೆ. शोकः श्लोकत्वमागतः ಎಂಬ ಉಕ್ತಿ ಇದಕ್ಕೆ ಸಾಕ್ಷಿಯಾಗಿದೆ.

'ರಸ'ದ ಶಾಸ್ತ್ರೀಯ ವಿಮರ್ಶೆಯನ್ನು ಪ್ರತಿಪಾದಿಸಿದ ಸರ್ವಪ್ರಥಮ ಕೃತಿ ಭರತಮುನಿಯ "ನಾಟ್ಯಶಾಸ್ತ್ರ". ಇದರ ಪ್ರಕಾರ ವಿಭಾವ, ಅನುಭಾವ, ವ್ಯಭಿಚಾರಿಭಾವಗಳ ಸಂಯೋಗವೇ ರಸೋತ್ಪತ್ತಿಗೆ ಮೂಲ ಪ್ರೇರಕ. ಇದನ್ನೇ **"विभावानुभावव्यभिचारिसंयोगाद्रसनिष्पत्तिः"**[47] ಎಂದು ಕಾವ್ಯಮೂಲಗ್ರಂಥದ ಲಕ್ಷಣದ ಮೂಲಕ ದೃಢೀಕರಿಸಲಾಗಿದೆ.

ರಸವು ಈ ರೀತಿ ನಿಷ್ಪನ್ನಗೊಂಡು ಅಭಿವ್ಯಕ್ತಗೊಳ್ಳುವುದಕ್ಕೆ ಕ್ರಮವಾಗಿ 9 ಭಾವಗಳು ಪ್ರಮುಖ ಪಾತ್ರ ನಿರ್ವಹಿಸುತ್ತವೆ. ಅವೇ ಕ್ರಮವಾಗಿ ರತಿ, ಹಾಸ, ಶೋಕ, ಕ್ರೋಧ, ಉತ್ಸಾಹ, ಭಯ, ಜಿಗುಪ್ಸೆ, ವಿಸ್ಮಯ ಹಾಗೂ ಶಮಗಳು. ಹೀಗೆ ರಸಾನುಭವವು ಸ್ಥಾಯಿಭಾವಗಳ ಮೂಲಕ, ವಿಭಾವ–ಅನುಭಾವ–ವ್ಯಭಿಚಾರಿಭಾವಗಳೆಂಬ ಕಾರಣ ಸಾಮಗ್ರಿಯಿಂದ ಗೋಚರಿಸುತ್ತದೆ. ರಸಕ್ಕೆ ಸಂಬಂಧಪಟ್ಟಂತೆ ಮುವತ್ತಮೂರು ವ್ಯಭಿಚಾರಿ ಭಾವಗಳು ಪ್ರಮುಖ ಪಾತ್ರವಹಿಸುತ್ತವೆ. ಇವು ಬೇಗ ಬಂದು ಬೇಗ ಹೋಗುವ ಸ್ವಭಾವವುಳ್ಳವಾಗಿರುವುದರಿಂದ ಇವುಗಳಿಗೆ "ಸಂಚಾರಿಭಾವ"ಗಳೆಂದೂ ಕರೆಯಲಾಗಿದೆ. ಇಂತಹ 'ವ್ಯಭಿಚಾರಿ' ಅಥವಾ ಸಂಚಾರಿಭಾವಗಳು ಕ್ರಮವಾಗಿ १)"निर्वेदः, २) ग्लानिः, ३) शङ्का, ४) असूया, ५) मदः, ६) श्रमः, ७) आलस्यम्, ८) दैन्यम्, ९) चिन्ता, १०) मोहः, ११) स्मृतिः, १२) धृतिः, १३) व्रीडा, १४) चपलता, १५) हर्षः, १६) आवेगः,

[47] ಧನಂಜಯನ ದಶರೂಪಕ (ಕನ್ನಡ ಅನುವಾದ) – ಕೆ.ವಿ.ಸುಬ್ಬಣ್ಣ – ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ ತಾಲ್ಲೂಕು – 2014

१७) जडता, १८) गर्वः, १९) विषादः, २०) औत्सुक्यम्, २१) निद्रा, २२) अपस्मारः, २३) सुप्तः, २४) विबोधः, २५) अमर्षः, २६) अवहित्थः, २७) उग्रता, २८) मतिः, २९) व्याधिः, ३०) उन्मादः, ३१) मरणम्, ३२) त्रासः, ३३) वितर्कः [४८] ಎಂದಾಗಿವೆ. ಕ್ರಮವಾಗಿ ಇವುಗಳ ವಿವರಣೆಗಳು नाट्यशास्त्र ದಲ್ಲಿ ಹೀಗೆ ಉಕ್ತವಾಗಿವೆ.

**ವ್ಯಭಿಚಾರಿಭಾವ:**

**1. निर्वेद :**

तत्र निर्वेदो नाम–दारिद्र्यव्याध्यवमानाधिक्षेपाक्रुष्टक्रोधताडनेष्ट–जनवियोगतत्त्वज्ञानादिभिर्विभावैः समुत्पद्यते स्त्रीनीचकुसत्त्वानाम् । रुदित निःश्वसितोच्छ्वसितसम्प्रधारणादिभिरनुभावैस्तमभिनयेत् । अत्र श्लोकः–

दारिद्र्येष्टवियोगाद्यैः निर्वेदो नाम जायते ।
सम्प्रधारणनिःश्वासैस्तस्य त्वभिनयो भवेत् ॥

अत्रानुवंश्ये आर्ये भवतः–

इष्टजनविप्रयोगाद्दारिद्र्याद्व्याधितस्तथा दुःखात् ।
ऋद्धिं परस्य दृष्ट्वा निर्वेदो नाम सम्भवति ।
बाष्पपरिप्लुतनयनः पुनश्च निःश्वासदीनमुखनेत्रः ।
योगीव ध्यानपरो भवति हि निर्वेदवान् पुरुषः ॥[४९]

"ಅವುಗಳಲ್ಲಿ ನಿರ್ವೇದವೆಂಬುದು ಬಡತನ, ವ್ಯಾಧಿ, ಅವಮಾನ, ಖಂಡನ, ಎಳೆದಾಟ, ಕ್ರೋಧ, ತಾಡನ, ಪ್ರಿಯಜನರ ವಿಯೋಗ, ತತ್ತ್ವಜ್ಞಾನ ಮುಂತಾದ ವಿಭಾವಗಳಿಂದ ಉಂಟಾಗುತ್ತದೆ. ಅದು ಸ್ತ್ರೀಯರು, ನೀಚ ಪ್ರಕೃತಿಯವರು ಮತ್ತು ಕೀಳು ಪ್ರಾಣಿಗಳಲ್ಲಿ ಉಂಟಾಗುತ್ತದೆ. ಅದನ್ನು ಅಳುವುದು, ನಿಃಶ್ವಾಸ ಮತ್ತು ಉಚ್ಛ್ವಾಸಗಳು, ನಿರ್ಧಾರಣ ಮುಂತಾದ

---

[48] Natyashastra of Bharataamuni Volumes.-Editor, R.S. Nagar

[49] ನಾಟ್ಯಶಾಸ್ತ್ರ–ಆದ್ಯ ರಂಗಾಚಾರ್ಯ.ಅಕ್ಷರ ಪ್ರಕಾಶನ ಹೆಗ್ಗೋಡು 2003

ಅನುಭಾವಗಳ ಮೂಲಕ ಅಭಿನಯಿಸಬೇಕು. "ಬಡತನ, ಪ್ರಿಯಜನರ ವಿಯೋಗ ಮುಂತಾದವುಗಳಿಂದ ನಿರ್ವೇದವು ಉತ್ಪನ್ನವಾಗುತ್ತದೆ. ಅದರ ಅಭಿನಯವು ನಿರ್ಧಾರಣ, ನಿಃಶ್ವಾಸ ಮುಂತಾದವುಗಳ ಮೂಲಕ ಆಗಬೇಕು."

"ಪ್ರಿಯಜನರ ವಿಯೋಗದಿಂದ, ಬಡತನದಿಂದ, ವ್ಯಾಧಿಯಿಂದ, ಹಾಗೆಯೇ ದುಃಖದಿಂದ, ಪರರ ವೃದ್ಧಿಯನ್ನು ನೋಡುವುದರಿಂದ ನಿರ್ವೇದವೆಂಬುದು ಸಂಭವಿಸುತ್ತದೆ.

"ನಿರ್ವೇದವುಳ್ಳ ವ್ಯಕ್ತಿಯು ಕಣ್ಣೀರಿನಿಂದ ತುಂಬಿದ ಕಣ್ಣುಗಳುಳ್ಳವನು, ನಿಃಶ್ವಾಸದಿಂದ ದೀನವಾದ ಮುಖ ಮತ್ತು ಕಣ್ಣುಗಳುಳ್ಳವನು, ಯೋಗಿಯ ಹಾಗೆ ಧ್ಯಾನಮಗ್ನನು ಆಗಿರುವವನು".

ನಿರ್ವೇದವೆಂದರೆ ಉತ್ಸಾಹದ ಕುಸಿತ, ನಿರಾಸಕ್ತಿ, ವಿಷಾದ, ಚಿಂತಾಕ್ರಾಂತತೆ ಇತ್ಯಾದಿ ಅರ್ಥ. ಉನ್ನತ ಅರ್ಥದಲ್ಲಿ ಅದಕ್ಕೆ ಇಲ್ಲಾ ಲೌಕಿಕ ವಿಷಯಗಳ ಬಗ್ಗೆ ನಿರಾಸಕ್ತಿ (ವೈರಾಗ್ಯ) ಎಂಬ ಭಾವವಿದೆ. ಈ ಅರ್ಥದ ನಿರ್ವೇದವು ತತ್ತ್ವಜ್ಞಾನ (ಪಾರಮಾರ್ಥಿಕ ಜ್ಞಾನ)ದಿಂದ ಹುಟ್ಟುತ್ತದೆ. ತತ್ತ್ವಜ್ಞಾನದಿಂದ ಉಂಟಾಗುವ ನಿರ್ವೇದವನ್ನೇ ಶಾಂತರಸದ ಸ್ಥಾಯಿಭಾವವೆಂದು ಪರಿಗಣಿಸುತ್ತಾರೆ. ಅದನ್ನು ಬಡತನ ಮುಂತಾದವುಗಳಿಂದ ಉಂಟಾಗುವ ವಿಷಾದ, ಚಿಂತಾಕ್ರಾಂತತೆ ಮುಂತಾದ ಅರ್ಥವುಳ್ಳ ನಿರ್ವೇದಕ್ಕಿಂತ ಭಿನ್ನವೆಂದು ತಿಳಿಯಬೇಕು. ಇದು ಕೇವಲ ವ್ಯಭಿಚಾರಿಭಾವ.

ಭರತನು ಉನ್ನತ ಪ್ರಕಾರದ ಮತ್ತು ಕೀಳು ಪ್ರಕಾರದ ಎರಡೂ ವಿಧವಾದ ನಿರ್ವೇದವನ್ನು ಅಂಗೀಕರಿಸಿದ್ದಾನೆ. ಇದು ಅವನು ಕೊಟ್ಟ ವಿಭಾವಗಳು ಮತ್ತು ಅನುಭಾವಗಳಿಂದ ಸ್ಪಷ್ಟವಾಗುತ್ತದೆ. ಬಡತನ, ನಿಂದನೆ, ಅವಹೇಳನ, ಸಿಟ್ಟಿನಿಂದ ಹೊಡೆಯುವುದು, ಪ್ರಿಯಜನರ ಅಗಲಿಕೆ ಮುಂತಾದವನ್ನು ವಿಭಾವಗಳಾಗಿ ಒಂದು ಕಡೆ ಹೇಳಿದರೆ, ಇನ್ನೊಂದು ಕಡೆ ತತ್ತ್ವಜ್ಞಾನವನ್ನು ಅದರ ವಿಭಾವವಾಗಿ ಹೇಳಲಾಗಿದೆ. ಇಲ್ಲಿ ತತ್ತ್ವಜ್ಞಾನದಿಂದ ಉಂಟಾಗುವ ನಿರ್ವೇದವು ಉನ್ನತ ಪ್ರಕಾರದ್ದು. ಆದರೆ ಬಡತನ ಮುಂತಾದ ವಿಭಾವಗಳಿಂದ ಉತ್ಪನ್ನವಾದ ನಿರ್ವೇದವು ಕೀಳು ಪ್ರಕಾರದ್ದು. ಇಲ್ಲಿ ಪೂರ್ವದ್ದು (ತತ್ತ್ವಜ್ಞಾನದಿಂದ ಉಂಟಾದ ನಿರ್ವೇದವು) ಶಾಂತರಸದ ಸ್ಥಾಯಿಭಾವ ಮತ್ತು ಎರಡನೆಯ ಪ್ರಕಾರದ ನಿರ್ವೇದವು ಕೇವಲ ವ್ಯಭಿಚಾರಿಭಾವ. ಹೇಳಲಾದ ನಿರ್ವೇದದ ಅನುಭಾವಗಳಲ್ಲಿ ಎರಡು ಗುಂಪುಗಳನ್ನು ಮಾಡಬಹುದು. ಅಳುವುದು, ಕೂಗಾಡುವುದು, ನಿಟ್ಟುಸಿರುಬಿಡುವುದು ಮುಂತಾದವು ಮೊದಲನೆಯ ಗುಂಪಿಗೆ ಸೇರಿದರೆ, ನಿರ್ಧಾರಣ, ವಿರಾಗ, ಧ್ಯಾನ ಮುಂತಾದವು ಎರಡನೆಯ ಗುಂಪಿಗೆ ಸೇರಿವೆ. ಮೊದಲನೆಯ ಗುಂಪಿನ ಅನುಭಾವಗಳು ಕೀಳು ಪ್ರಕಾರದ

ನಿರ್ವೇದಕ್ಕೆ ಸಂಬಂಧಪಟ್ಟವುಗಳು. ಎರಡನೆಯ ಗುಂಪಿನ ಅನುಭಾವಗಳು ಉನ್ನತ ಪ್ರಕಾರದ ನಿರ್ವೇದಕ್ಕೆ ಸಂಬಂಧಿಸಿದವುಗಳು. ಅದು ಸ್ತ್ರೀಯರು, ನೀಚಪ್ರಕೃತಿಯವರು, ಕೀಳು ಪ್ರಾಣಿಗಳಲ್ಲಿ ಉಂಟಾಗುತ್ತದೆ ಎಂದು ಹೇಳಿರುವುದು ಮಾತ್ರ ಕೀಳು ಪ್ರಕಾರದ ನಿರ್ವೇದಕ್ಕೆ ಸಂಬಂಧಪಟ್ಟಂತೆ.

28ನೆಯ ಶ್ಲೋಕವು ಎರಡೂ ಗುಂಪಿನ ಅನುಭಾವಗಳನ್ನು ಉಲ್ಲೇಖಿಸುತ್ತದೆ. 29ನೆಯ ಶ್ಲೋಕದಲ್ಲಿ ಪರರ ವೃದ್ಧಿಯನ್ನು ನಿರ್ವೇದದ ಅನುಭಾವ ಎಂದು ಹೇಳಲಾಗಿದೆ. 30ನೆಯ ಶ್ಲೋಕದಲ್ಲಿ ಕೆಳದರ್ಜೆಯ ನಿರ್ವೇದಕ್ಕೆ ಸಂಬಂಧಪಟ್ಟಂತೆ ಕಣ್ಣೀರಿನಿಂದ ತುಂಬಿದ ಕಣ್ಣುಗಳು, ವಿಷಾದದಿಂದ ತುಂಬಿದ ಮುಖ ಮತ್ತು ನೇತ್ರಗಳನ್ನು ಅನುಭಾವಗಳೆಂದು ಹೇಳಲಾಗಿದೆ ಮತ್ತು ಯೋಗಿಯಂತೆ ಧ್ಯಾನ ಮಗ್ನನಾದವನು ಎಂದು ಉನ್ನತ ದರ್ಜೆಯ ನಿರ್ವೇದಯುಕ್ತ ಮನುಷ್ಯನನ್ನು ವರ್ಣಿಸಲಾಗಿದೆ.

2. **<u>ग्लानिः</u>**

ग्लानिर्नाम–वान्तविरिक्तव्याधितपोनियमोपवासमनस्तापातिशयमदनमद्यसेवनाति व्यायामाध्वगमनक्षुत्पिपासानिद्राच्छेदादिभिर्विभावैः समुत्पद्यते । तस्याः क्षामवाक्यनयनकपोलोदरमन्दपदोत्क्षेपणवेपनानुत्साहतनुगात्रवैवर्ण्यस्वरभेदादिभिरनुभावैर भिनयः प्रयोक्तव्यः । अत्रार्ये भवतः–

वान्तविरिक्तव्याधिषु तपसा जरसा च जायते ग्लानिः ।
कार्श्येन साऽभिनेया मन्दभ्रमणेन कम्पेन ॥
गदितैः क्षामक्षामैर्नेत्रविकारैश्च दीनसञ्चारैः ।
श्लथभावेनाङ्गानां मुहुर्मुहुर्निर्दिशेद् ग्लानिम् ॥[५०]

"ಗ್ಲಾನಿಯೆಂಬುದು ವಾಂತಿ, ಅತಿಸಾರ, ವ್ಯಾಧಿ, ತಪಸ್ಸಿನ ನಿಯಮಗಳು, ಉಪವಾಸ, ಮನಸ್ಸಿನ ತಾಪ, ಅತಿಕಾಮ, ಮದ್ಯಸೇವನೆ, ಅತಿ ವ್ಯಾಯಾಮ, ದೂರ ಪ್ರಯಾಣ, ಹಸಿವು, ಬಾಯಾರಿಕೆ, ನಿದ್ರೆಯ ಭಂಗ ಮುಂತಾದ ಅನುಭಾವಗಳಿಂದ ಉಂಟಾಗುತ್ತದೆ. ಅದನ್ನು ಕ್ಷೀಣವಾದ ಮಾತು, ಮಂಕಾದ ಕಣ್ಣು, ಕಳೆಗುಂದಿದ ಕಪೋಲಗಳು, ಕ್ಷೀಣವಾದ ಹೊಟ್ಟೆ, ನಿಧಾನವಾಗಿ ಹೆಜ್ಜೆಹಾಕುವುದು, ನಡುಗುವುದು, ಅನುತ್ಸಾಹ, ತೆಳು ಶರೀರ, ಮುಖದ ಬಣ್ಣ

[50] ಶಿವತತ್ತ್ವರತ್ನಾಕರ – (ಸಂ) ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ್, ಐದು ಸಂಪುಟಗಳು, ದರೇಸಾ ಪ್ರಕಾಶನ, ಬೆಂಗಳೂರು –2013.

ಬದಲಾಗುವುದು, ಸ್ವರಭಂಗ ಮುಂತಾದ ಅನುಭಾವಗಳ ಮೂಲಕ ಅಭಿನಯದಲ್ಲಿ ತರಬೇಕು. ಈ ವಿಷಯದಲ್ಲಿ ಎರಡು ಆರ್ಯಾ ಛಂದಸ್ಸಿನ ಶ್ಲೋಕಗಳಿವೆ–

"ವಾಂತಿ, ಅತಿಸಾರ, ವ್ಯಾಧಿಗಳಲ್ಲಿ, ತಪಸ್ಸಿನಿಂದ, ವೃದ್ಧಾಪ್ಯದಿಂದ ಗ್ಲಾನಿಯು ಹುಟ್ಟುತ್ತದೆ. ಅದನ್ನು ಕೃಶತ್ವದಿಂದ, ಮಂದವಾಗಿ ಚಲಿಸುವುದರಿಂದ, ಕಂಪದಿಂದ ಅಭಿನಯಿಸಬೇಕು.

"ಗದ್ಗದ ಮಾತುಗಳಿಂದ, ಕಳೆಗುಂದಿದ ಕಣ್ಣುಗಳ ವಿಕೃತ ಚಲನೆಗಳಿಂದ, ದೈನ್ಯದಿಂದ ಕೂಡಿದ ಓಡಾಟಗಳಿಂದ, ಅಂಗಾಂಗಗಳ ಶಿಥಿಲತೆಯಿಂದ ಗ್ಲಾನಿಯನ್ನು ಮತ್ತೆ ಮತ್ತೆ ಅಭಿನಯಿಸಿ ತೋರಿಸಬೇಕು."

ಗ್ಲಾನಿ ಎಂದರೆ ಆಯಾಸ, ಕಳೆಗುಂದುವಿಕೆ, ಬಳಲಿಕೆ, ಕುಂದುವುದು, ಇಳಿಮುಖವಾಗುವುದು ಎಂಬ ಅರ್ಥಗಳಿವೆ.

**"मनश्च ग्लानिमृच्छति" |**

**"अङ्गग्लानिं सुरतजनितान्" |**

**"आत्मोदयः परग्लानिर्द्वयं नीतिरितीयती"[51]|**

**यदा यदा हि धर्मस्य ग्लानिर्भवति भारत**

**अभ्युत्थानमधर्मस्य तदात्मानं सृजाम्यहम् ॥**

ಇಲ್ಲಿ ಗ್ಲಾನಿಯೆಂಬುದು ಬಳಲಿಕೆ, ಆಯಾಸ ಮುಂತಾದವುಗಳಿಂದ ಉಂಟಾದ ಮಾನಸಿಕ ಸ್ಥಿತಿ. ಆ ಬಳಲಿಕೆ ಅತಿ ವ್ಯಾಯಾಮ, ದೂರದ ಪ್ರಯಾಣ, ಕ್ಲೇಶ ಮುಂತಾದವುಗಳಿಂದ ಉಂಟಾಗುವುದು. ಮಾನಸಿಕ ಬಳಲಿಕೆ, ಜಡತ್ವ, ವಾಂತಿ, ಅತಿಸಾರ, ವ್ಯಾಧಿ, ಹಸಿವು, ನೀರಡಿಕೆ, ನಿದ್ರಾಭಂಗ ಮುಂತಾದವು ಗ್ಲಾನಿಯ ಇತರ ವಿಭಾವಗಳು. ಅಭಿನಯದಲ್ಲಿ ಅವುಗಳನ್ನು ಪ್ರದರ್ಶಿಸಲು ಬೇಕಾದ ಅನುಭಾವಗಳೆಂದರೆ ಕ್ಷೀಣವಾದ ಮಾತು, ಮಂಕಾದ ಕಣ್ಣುಗಳು, ಹಳದಿಯಾದ ಕಪೋಲಗಳು, ನಿಧಾನ ಗತಿ, ನಡುಗುವಿಕೆ ಮುಂತಾದವು. ಇವೇ ವಿಭಾವಗಳು ಮತ್ತು ಅನುಭಾವಗಳನ್ನೇ ಆರ್ಯಾ ಛಂದಸ್ಸಿನ ಶ್ಲೋಕಗಳಲ್ಲಿ ಹೇಳಲಾಗಿದೆ.

---

[51] Shishupalavadha ,Maghabatta commentarian vallabhadeva, published by Maharaja shri harisinghji bahadur G C S J GCI E KCVO.Jammu&Kashmir 1935

3. **शङ्का :–**

शङ्का नाम–सन्देहात्मिका स्त्रीनीचप्रभवा ।

चौर्याभिग्रहनृपापराधपापकर्मकरणादिभिर्वि –भावैः समुत्पद्यते ।

तस्या मुहुर्मुहुरवलोकनावकुण्ठनमुखशोषणजिह्वापरिलेहनमुखवैवर्ण्यस्वरभेद –वेपत्युशुष्कोष्ठकण्ठायाससाधर्म्यादिभिरनुभावैरभिनयः प्रयोक्तव्यः ।

चौर्यादिजनिता शङ्का प्रायः कार्या भयानकः ।

प्रियव्यलीकजनिता तथा श्रृङ्गारिणी मता ॥३३॥

अत्राकारसंवरणमपि केचिदिच्छिन्ति । तच्च कुशलैरुपाधिभिरिङ्गितैश्चोपलक्ष्यम् ।

अत्रार्ये भवतः–

द्विविधा शङ्का कार्या ह्यात्मसमुत्था परसमुत्था च ।

या तत्रात्मसमुत्था सा ज्ञेया दृष्टिचेष्टादिभिः ॥

किञ्चित्प्रवेपिताङ्गस्त्वधोमुखो वीक्षते च पार्श्वानि ।

गरुसज्जमानजिह्वः श्यामास्यः शङ्कितः पुरुषः ॥[५२]

"ಶಂಕಾ ಎಂಬುದು ಸಂದೇಹ ಸ್ವರೂಪವುಳ್ಳದ್ದು, ಅದು ಸ್ತ್ರೀಯರು ಮತ್ತು ನೀಚ ಪ್ರಕೃತಿಯ ಜನರಲ್ಲಿ ಉಂಟಾಗುತ್ತದೆ. ಕಳ್ಳತನದಿಂದ ಸಂಪಾದಿಸಿದ ಸಂಪತ್ತು, ರಾಜನ ವಿರುದ್ಧ ಅಪರಾಧ, ಪಾಪಕರ್ಮವನ್ನು ಮಾಡುವುದು ಮುಂತಾದ ವಿಭಾವಗಳಿಂದ ಅದು ಹುಟ್ಟುತ್ತದೆ. ಮತ್ತೆ ಮತ್ತೆ ನೋಡುವುದು, ಪರದೆಯಿಂದ ಮುಚ್ಚಿಕೊಳ್ಳುವುದು, ಬಾಯಿ ಒಣಗುವುದು, ಒಡೆದ ಧ್ವನಿ, ನಡುಗುವುದು, ತುಟಿಗಳು ಒಣಗುವುದು, ಕಂಠದ ಆಯಾಸ ಮುಂತಾದ ಅನುಭಾವಗಳಿಂದ ಅಭಿನಯಿಸಬೇಕು."

---

[52] ಶಿವತತ್ತ್ವರತ್ನಾಕರ – ಸಂಪುಟ 2 – ಸಂ: ಎಸ್.ನಾರಾಯಣ ಶಾಸ್ತ್ರಿ ಮತ್ತು ಆರ್. ರಾಮಾಶಾಸ್ತ್ರಿ, ಪ್ರಾಚ್ಯವಿದ್ಯಾ ಸಂಶೋಧನಾ ಕೇಂದ್ರ, ಮೈಸೂರು ವಿಶ್ವವಿದ್ಯಾಲಯ, ಮೈಸೂರು –1964.

"ಕಳ್ಳತನ ಮುಂತಾದುದರಿಂದ ಹುಟ್ಟಿದ ಶಂಕೆಯು ಬಹುಶಃ ಭಯಾನಕ ರಸದಲ್ಲಿ ಪ್ರದರ್ಶಿಸಲ್ಪಡುತ್ತದೆ. ಪ್ರಣಯಿಯ ಇಷ್ಟವಲ್ಲದ ಕ್ರಿಯೆಯಿಂದ ಹುಟ್ಟಿದಾಗ ಅದು ಶೃಂಗಾರಕ್ಕೆ ಸಂಬಂಧಿಸಿದುದಾಗುತ್ತದೆ."

"ಕೆಲವರು 'ಆಕಾರಸಂವರಣ' (ಆಕಾರವನ್ನು ಮರೆ ಮಾಡಿಕೊಳ್ಳುವುದು, ಮುಚ್ಚಿಕೊಳ್ಳುವುದು, ಆಂತರಿಕ ಭಾವಗಳ ಬಾಹ್ಯ ಅಭಿವ್ಯಕ್ತಿಗಳನ್ನು ತಡೆಹಿಡಿಯುವುದು) ಎಂಬುದನ್ನೂ ವಿಭಾವಗಳಲ್ಲಿ ಒಂದೆಂದು ಹೇಳುತ್ತಾರೆ. ಅದನ್ನು ಕುಶಲವಾದ ಕುಟಿಲತೆಯಿಂದ ಮತ್ತು ಹಾವಭಾವಗಳಿಂದ ತಿಳಿಯಬೇಕು." ಇಲ್ಲಿ ಈ ಅರ್ಥವನ್ನು ಕೊಡುವ ಎರಡು ಆರ್ಯಾಛಂದಸ್ಸಿನ ಶ್ಲೋಕಗಳಿವೆ–

"ಶಕೆಯು ಆತ್ಮಸಮುತ್ಥಾ ಮತ್ತು ಪರಸಮುತ್ಥಾ ಎಂದು ಎರಡು ವಿಧವಾಗಿ ಅಭಿನಯಿಸಲ್ಪಡಬೇಕು. ಯಾವುದು ಅದರಲ್ಲಿ ಆತ್ಮಸಮುತ್ಥಾ ಎಂಬ ಶಂಕೆಯೋ ಅದನ್ನು ಕಣ್ಣೋಟ ಮತ್ತು ನಟನೆಗಳಿಂದ ತಿಳಿಯಬೇಕು.

"ಶಂಕೆಗೊಳಗಾದ ವ್ಯಕ್ತಿಯು ಸ್ವಲ್ಪ ಕಂಪಿಸುವ ಶರೀರವುಳ್ಳವನು, ಅಧೋಮುಖನು, ಅಕ್ಕಪಕ್ಕ ನೋಡುವವನು, ಭಾರವಾಗಿ ಅಂಟಿಕೊಳ್ಳುವ ನಾಲಿಗೆಯುಳ್ಳವನು ಮತ್ತು ಮುಖ ಕಪ್ಪಾದವನು ಆಗಿರುತ್ತಾನೆ."

ಶಂಕೆಯೆಂದರೆ ಸಂಶಯ, ಸಂದೇಹ, ಅನಿಶ್ಚಿತತೆ. ಅದು ಆತಂಕದ ಅರ್ಥವನ್ನು ಕೊಡುತ್ತದೆ. ಉದಾಹರಣೆಗೆ "अपायशङ्का""अरिष्टशङ्का"ಎಂಬ ಪ್ರಯೋಗಗಳು ಉದಾಹರಿಸಲಾಗಿದೆ. ಶಂಕೆ ಎಂದರೆ ಭಯ, ಆತಂಕದ ಭಾವನೆ, ಹೆದರಿಕೆ ಅಥವಾ ಭೀತಿ. "जाताशङ्कैर्दैवैर्मेनका नामाप्सराः प्रेषिता ।" [53] ಅದು ತಪ್ಪು ಕಲ್ಪನೆಯೆಂಬ ಅರ್ಥವನ್ನು ಹೊಂದಿದೆ. "कुर्वन् वधूजनमनस्सु शशाङ्काम् ।"[54]

[53] ಅಭಿಜ್ಞಾನಶಾಕುಂತಲಮ್– ಸಂ: ಪಾಂಡುರಂಗಿ, ಪ್ರಕಾಶಕರು–ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ– 1978

[54] किरातार्जुनीयम्, महाकवि भारवि विरचितम् व्याख्याकार डा.वीरेन्द्रकुमार वर्मा, प्रकाशक :जमुना पाठक वाराणासी १९७८

ಭರತನು ಶಂಕೆಯೆಂಬುದು ಸಂಶಯ, ಸಂದೇಹ ಎಂಬ ಅರ್ಥದಲ್ಲಿದೆಯೆಂದು ಸ್ಪಷ್ಟಪಡಿಸಿದ್ದಾನೆ. ಅದು ಸ್ತ್ರೀಯರಲ್ಲಿ ಮತ್ತು ನೀಚ ಪ್ರಕೃತಿಯ ಜನರಲ್ಲಿ ಹೆಚ್ಚಾಗಿ ಕಂಡು ಬರುವ ಮನೋಭಾವ. ಇಲ್ಲಿ ಹೇಳಿದ ವಿಭಾವಗಳೆಂದರೆ ಕಳ್ಳತನದಿಂದ ಹಣದ ಸಂಪಾದನೆ, ರಾಜನ ವಿರುದ್ಧ ಅಪರಾಧ, ಪಾಪಕೃತ್ಯಗಳು ಮುಂತಾದವು. ಶಂಕೆಯನ್ನು ಅಭಿನಯದಲ್ಲಿ ತರುವ ಸಾಧನಗಳಾದ ಅನುಭಾವಗಳು ಮತ್ತೆ ಮತ್ತೆ ನೋಡುವುದು, ಪರದೆಯಿಂದ ಮರೆ ಮಾಡಿಕೊಳ್ಳುವುದು, ಬಾಯಿ ಒಣಗುವುದು, ನಾಲಿಗೆಯಿಂದ ತುಟಿಗಳನ್ನು ಸವರಿಕೊಳ್ಳುವುದು ಮುಂತಾದವು.

ಕಳ್ಳತನ ಮುಂತಾದವುಗಳಿಂದ ಉಂಟಾದ ಶಂಕೆಯು ಭಯಾನಕ ರಸದಲ್ಲಿ ಒಂದು ವ್ಯಭಿಚಾರಿಭಾವ. ಹಾಗೆಯೇ ಪ್ರಣಯಿಯ ಕುಟಿಲ ನಡತೆಯಿಂದುಂಟಾದ ಶಂಕೆಯು ಶೃಂಗಾರ ರಸದಲ್ಲಿ ವ್ಯಭಿಚಾರಿಭಾವ. ಆರ್ಯಾ ಛಂದಸ್ಸಿನ ಎರಡು ಪದ್ಯಗಳಲ್ಲಿ ಶಂಕೆಯು ಆತ್ಮಸಮುತ್ಥಾ ಮತ್ತು ಪರಸಮುತ್ಥಾ ಎಂಬ ಪ್ರಕಾರಗಳ ಉಲ್ಲೇಖವಿದೆ. ಆತ್ಮಸಮುತ್ಥಾ ಎಂಬುದು ತನ್ನಲ್ಲಿಯೇ ಉಂಟಾದ ಸಂಶಯ, ಅಂದರೆ ತನ್ನ ಕಾರ್ಯದ ಬಗ್ಗೆ ತನ್ನದೇ ಸಂದೇಹ. ಇದನ್ನು ತನ್ನ ನೋಟಗಳಿಂದ ಮತ್ತು ನಟನೆಗಳಿಂದ ಗುರುತಿಸಬಹುದು. ಇನ್ನೊಂದು ಬೇರೆಯವರಿಗೆ ಸಂಬಂಧಿಸಿದುದು. ಇದನ್ನು ಆ ವ್ಯಕ್ತಿಯ ನಡತೆಯ ಮೂಲಕ ತಿಳಿದುಕೊಳ್ಳಬಹುದು. ಅಂತಹ ನಡತೆಗಳೆಂದರೆ ದೇಹ ನಡುಗುವುದು, ಮುಖ ತಗ್ಗಿಸುವುದು, ಅಕ್ಕಪಕ್ಕ ನೋಡುವುದು ಮುಂತಾದವು.

4. **असूया :–**

असूया नाम– नानापराधद्वेषपरैश्वर्यसौभाग्यमेधाविद्यालीलादिभिर्विभावैः समुत्पद्यते । तस्याश्चपरिषदि दोषपख्यापनगुणोपद्यातेर्ष्या चक्षुःप्रदानाधोमुख भ्रुकुटीक्रियावज्ञानकुत्सनादिभिरनु भावैरभिनयः प्रयोक्तव्यः । अत्रार्ये भवतः –

परसौभाग्येश्वरतामेधालीलासमुच्छ्रयान्दृष्ट्वा ।
उत्पद्यते ह्यसूया कृतापराधो भवेद्यच्च ॥
भ्रुकुटिकुटिलोत्कटमुखैःसेर्ष्याक्रोधपरिवृत्तनेत्रैश्च।
गुणनाशनविद्वेषैस्तत्राभिनयः प्रयोक्तव्यः ॥

"ಅಸೂಯೆಯೆಂಬುದು-ಬಹುವಿಧ ದ್ವೇಷ, ಬೇರೆಯವರ ಐಶ್ವರ್ಯ, ಸೌಭಾಗ್ಯ, ಬುದ್ಧಿಶಕ್ತಿ, ವಿದ್ಯೆ, ಆಟದ ಚಟುವಟಿಕೆ ಮುಂತಾದ ವಿಭಾವಗಳಿಂದ ಉಂಟಾಗುತ್ತದೆ. ಅದರ ಅಭಿನಯವನ್ನು ಸಭೆಯಲ್ಲಿ ದೋಷವನ್ನೆತ್ತಿ ಆಡುವುದು, ಗುಣಗಳ ತಿರಸ್ಕಾರ, ಈರ್ಷ್ಯೆ ತುಂಬಿದ ಕಣ್ಣುಗಳಿಂದ ನೋಡುವುದು, ಮುಖತಗ್ಗಿಸುವುದು, ಹುಬ್ಬನ್ನು ಗಂಟಿಕ್ಕುವುದು, ತಿರಸ್ಕಾರ ಮಾಡುವುದು, ನಿಂದಿಸುವುದು ಮುಂತಾದವುಗಳ ಮೂಲಕ ಪ್ರಯೋಗಿಸಬೇಕು."

"ಬೇರೆಯವರ ಸೌಭಾಗ್ಯ, ಐಶ್ವರ್ಯ, ಬುದ್ಧಿವಂತಿಕೆ, ಆಟದ ಚಟುವಟಿಕೆ, ಶ್ರೇಯಸ್ಸು ಮುಂತಾದವುಗಳನ್ನು ನೋಡಿ, ಅಪರಾಧಿಯಾದವನಲ್ಲಿ ಅಸೂಯೆಯೆಂಬುದು ಉಂಟಾಗುತ್ತದೆ.

"ಹುಬ್ಬನ್ನು ವಕ್ರವಾಗಿಸಿ, ಕ್ರೂರಮುಖ ಮಾಡುವುದರಿಂದ ಈರ್ಷ್ಯೆ, ಕ್ರೋಧಗಳಿಂದ ತುಂಬಿದ ಕಣ್ಣುಗಳಿಂದ, ಗುಣಗಳ ತಿರಸ್ಕಾರದಿಂದ, ದ್ವೇಷದಿಂದ ಅದರ ಅಭಿನಯವನ್ನು ಪ್ರಯೋಗಿಸಬೇಕು." ಅಸೂಯೆಯೆಂದರೆ ಈರ್ಷ್ಯೆ, ಅಸಹನೆ, ಹೊಟ್ಟೆಕಿಚ್ಚು. ಅದು ಬೇರೆಯವರ ಗುಣಗಳಲ್ಲಿಯೂ ದೋಷವನ್ನು ಕಾಣುವ ಪ್ರವೃತ್ತಿ.

**"असूया परगुणेषु दोषाविष्करणम्"**[55] ಅದು ಕೋಪ, ಮುನಿಸು ಎಂಬ ಅರ್ಥವನ್ನು ಕೊಡುತ್ತದೆ. **"वधूरसूयाकुटिलं ददर्श"**

ಭರತನು ಅಸೂಯಾ ಎಂಬುದನ್ನು ಈರ್ಷ್ಯೆ ಎಂಬ ಅರ್ಥದಲ್ಲಿ ಗ್ರಹಿಸುತ್ತಾನೆ. ಇದು ಅವನು ಕೊಟ್ಟ ವಿಭಾವಗಳು ಮತ್ತು ಅನುಭಾವಗಳಿಂದ ಗೊತ್ತಾಗುತ್ತದೆ. ಅಸೂಯೆಯು ನಾನಾ ವಿಧವಾದ ದೋಷಗಳಿಂದ ಉಂಟಾಗುತ್ತದೆ. ಅಂದರೆ ಅಸಹನೆ ಎಂದು ಅದರ ಅರ್ಥ. ಬೇರೆಯವರ ಐಶ್ವರ್ಯ ಮುಂತಾದವು ಅಸೂಯೆಯನ್ನು ಹುಟ್ಟಿಸುತ್ತವೆ. ಈ ಅಸೂಯೆಯನ್ನು ಸಭೆಯಲ್ಲಿ ಬೇರೆಯವರ ದೋಷಗಳನ್ನು ಉಲ್ಲೇಖಿಸುವುದು, ತಿರಸ್ಕಾರವನ್ನು ತೋರುವುದು, ಅಸಹನೆಯಿಂದ ನೋಡುವುದು ಮುಂತಾದವುಗಳ ಮೂಲಕ ಅಭಿನಯಿಸಿ ತೋರಿಸಬೇಕು. ಅವೇ ವಿಭಾವಗಳನ್ನು ಮತ್ತು ಅನುಭಾವಗಳನ್ನು ಆರ್ಯಾ ವೃತ್ತದ ಪದ್ಯಗಳು ಉಲ್ಲೇಖಿಸುತ್ತವೆ.

5. **मदः :**

मदो नाम–मद्योपयोगादुत्पद्यते । स च त्रिविधः पञ्चविधभावश्च । अत्रार्या भवन्ति–

---

[55] रघुवंश महाकवि कालिदास, मोतिलाल बनारसी दास, जैनेन्द्रप्रकाश जैन, श्रीजैनेन्द्र प्रेस नई दिल्लि १९८७

ज्ञेयस्तु मदस्त्रिविधस्तरुणो मध्यस्तथावकृष्टश्च ।

करणं पञ्चविधं स्यात्तस्याभिनयः प्रयोक्तव्यः ॥

कश्चिन्मत्तो गायति रोदिति कश्चित्तथा हसति कश्चित् ।

परुषवचनाभिधायी कश्चित्कश्चित्तथा स्वपिति ॥३९॥

उत्तमसत्त्वः शेते हसति च गायति च मध्यमप्रकृतिः ।

परुषवचनाभिधायी रोदित्यपि चाधमप्रकृतिः ॥

स्मितवचनमधुररागो ह्यष्टतनुः किञ्चिदाकुलितवाक्यः ।

सुकुमाराविद्धगतिस्तरुणमदस्तूत्तमप्रकृतिः ॥

स्खलिताघूर्णितनयनः स्रस्तव्याकुलितबाहुविक्षेपः ।

कुटिलव्याविद्धगतिर्मध्यमदो मध्यमप्रकृतिः ॥

नष्टस्मृतिर्हतगतिश्छर्दितहिक्काकफैः सुबीभत्सः ।

गुरुसज्जमानजिह्वो निष्ठीवति चाधमप्रकृतिः ॥

रङ्गे पिबतः कार्या मदवृद्धिर्नाव्ययोगमासाद्य ।

कार्यो मदक्षयो वै यः खलु पीत्वा प्रविष्टः स्यात् ॥[५६]

सन्त्रासाच्छोकाद्वा भयात्प्रहर्षाच्च करणोपगतात् ।

उत्क्रम्यापि हि कार्यो मदप्रणाशः क्रमात्तज्ज्ञैः ॥

एभिर्भावविशेषीर्मदो द्रुतं सम्प्रणाशमुपयाति ।

अभ्युदयसुखैर्वाक्यैर्यथैव शोकः क्षयं याति ॥

"ಮದವೆಂದರೆ ಮದ್ಯಪಾನದಿಂದ ಉಂಟಾಗುವಂತಹುದು. ಅದು ಮೂರು ವಿಧ ಮತ್ತು ಅದನ್ನು ಐದು ವಿಧ ಭಾವಗಳಿಂದ ಪ್ರದರ್ಶಿಸಬೇಕು."

ಮದವನ್ನು ತರುಣ, ಮಧ್ಯಮ ಮತ್ತು ಅವಕೃಷ್ಟ (ಅಧಮ)ವೆಂದು ಮೂರು ವಿಧವಾಗಿ ತಿಳಿಯಬೇಕು. ಅದರ ವಿಧಾನಗಳು ಐದು ವಿಧ. ಅದರ ಅಭಿನಯವನ್ನು ಪ್ರಯೋಗಿಸಬೇಕು.

---

[56] ನಾಟ್ಯಶಾಸ್ತ್ರ–ಆದ್ಯ ರಂಗಾಚಾರ್ಯ.ಅಕ್ಷರ ಪ್ರಕಾಶನ ಹೆಗ್ಗೋಡು 2003

"ಮತ್ತನೊಬ್ಬನು ಹಾಡುತ್ತಾನೆ, ಅಳುತ್ತಾನೆ, ಮತ್ತೊಬ್ಬನು ಹಾಗೆಯೇ ನಗುತ್ತಾನೆ, ಮಗದೊಬ್ಬನು ಕಟುವಾದ ಮಾತುಗಳನ್ನಾಡುತ್ತಾನೆ, ಮತ್ತೊಬ್ಬ ವ್ಯಕ್ತಿಯು ಹಾಗೆಯೇ ನಿದ್ರಿಸುತ್ತಾನೆ."

"ಉತ್ತಮ ಪ್ರಕೃತಿಯ ವ್ಯಕ್ತಿಯು ನಿದ್ರಿಸುತ್ತಾನೆ, ಮಧ್ಯಮ ಪ್ರಕೃತಿಯ ವ್ಯಕ್ತಿಯು ನಗುತ್ತಾನೆ ಅಥವಾ ಹಾಡುತ್ತಾನೆ, ನೀಚ ಪ್ರಕೃತಿಯ ಮನುಷ್ಯನು ಕಟುವಾಗಿ ಮಾತನಾಡುತ್ತಾನೆ."

"ತರುಣ ಮದದಿಂದ ಮತ್ತನಾದ ಉತ್ತಮ ಪ್ರಕೃತಿಯ ಮನುಷ್ಯನು. ನಗುಮುಖದವನು, ಇಂಪಾದ ಧ್ವನಿಯವನು, ದೃಢ ಶರೀರವುಳ್ಳವನು, ಸ್ವಲ್ಪ ಮಾತ್ರ ತೊದಲು ಮಾತಿನವನು ಮತ್ತು ಮನೋಹರತೆಯಿಂದ ತುಂಬಿದ ನಡಿಗೆಯುಳ್ಳವನು ಆಗಿರುತ್ತಾನೆ."

"ಮಧ್ಯಮ ಮದದಿಂದ ಕೂಡಿದ ಮಧ್ಯಮ ಪ್ರಕೃತಿಯ ಪುರುಷನು. ಚಂಚಲ ಹಾಗೂ ಸುತ್ತುವ ಕಣ್ಣುಗಳುಳ್ಳವನು, ಕುಸಿದ ಹಾಗೂ ವ್ಯಾಕುಲಗೊಂಡ ಬಾಹುಗಳ ಚಲನೆಯುಳ್ಳವನು, ವಕ್ರ ಹಾಗೂ ಅಸ್ಥಿರವಾದ ನಡಿಗೆಯುಳ್ಳವನು ಆಗಿರುತ್ತಾನೆ."

"ಅಪಕೃಷ್ಟ (ಅಧಮ) ಮದಯುಕ್ತ. ಅಧಮ ಪ್ರಕೃತಿಯ ವ್ಯಕ್ತಿಯು ಸ್ಮರಣ ಶಕ್ತಿಯನ್ನು ಕಳೆದುಕೊಂಡವನು, ಅಡ್ಡಾದಿಡ್ಡಿ ನಡಿಗೆಯವನು, ವಾಂತಿ, ಬಿಕ್ಕು, ಕಫಗಳಿಂದ ಬೀಭತ್ಸನಾಗಿ ಕಾಣುವವನು ಮತ್ತು ಭಾರವಾದ ಅಂಟಿಕೊಳ್ಳುವ ನಾಲಿಗೆಯುಳ್ಳವನಾಗಿ ಉಗುಳುವವನು ಆಗಿರುತ್ತಾನೆ."

"ರಂಗಭೂಮಿಯ ಮೇಲೆ ಕುಡಿಯುವವನ (ಕುಡಿಯುವ ನಟನೆ ಮಾಡುವವನ) ಮದದ ವೃದ್ಧಿಯನ್ನು ನಾಟ್ಯದ ಅಭ್ಯಾಸ ಬಲದಿಂದ ಮಾಡಬೇಕು. ಯಾರು ಕುಡಿದು ರಂಗಭೂಮಿಯನ್ನು ಪ್ರವೇಶಿಸುತ್ತಾನೋ ಅವನ ಮತ್ತನ್ನು ಇಳಿಯುವಂತೆ ಮಾಡಬೇಕು."

"ಹೆದರಿಸುವುದರಿಂದ, ಶೋಕದಿಂದ, ಭಯದಿಂದ, ಹರ್ಷದಿಂದ ಅಥವಾ ಯುಕ್ತಿಪೂರ್ವಕವಾಗಿ, ಕಡೆಗೆ ಬಲಾತ್ಕಾರದಿಂದ ಮದವನ್ನು ತಜ್ಞರು ಇಳಿಯುವಂತೆ ಮಾಡಬೇಕು."

"ಇಂತಹ ವಿಧಾನಗಳಿಂದ ಮದವು ಶೀಘ್ರವೇ ಇಳಿಯುತ್ತದೆ. ಹೇಗೆ ಸೌಭಾಗ್ಯದ ಸುಖಗಳಿಂದ ಶೋಕವು ಕ್ಷಯವಾಗುವುದೋ ಹಾಗೆ."

ಮದವೆಂದರೆ ಮತ್ತು, ಕುಡಿದ ಸ್ಥಿತಿ, ಮತ್ತಿನಸ್ಥಿತಿ. ''मदेनास्पृश्ये''[57] ''मदविकाराणां दर्शकः'' ಇತ್ಯಾದಿ ವ್ಯಾಖ್ಯೆಗಳಿವೆ.

---

[57] Dasakumaracharita Dandi viracharita,Kasinath pandurang parab, published by nirnaya-sagara press 1889

ಭರತನು ತನ್ನ "मद्योपयोगादुत्पद्यते" ಎಂಬ ಮಾತಿನಿಂದ ಸೂಚಿಸುವಂತೆ ಮದ ಶಬ್ದವನ್ನು ಕುಡಿತದಿಂದಾದ ಮತ್ತಿನ ಅರ್ಥದಲ್ಲಿ ತೆಗೆದುಕೊಳ್ಳುತ್ತಾನೆ. ಮದವನ್ನು ಅನೇಕ ರಸಗಳಿಗೆ ಸಂಬಂಧಿಸಿದಂತೆ ವ್ಯಭಿಚಾರಿಭಾವವೆಂದು ಹೇಳಲಾಗಿದೆ. ಅಂದರೆ ಅದು ವ್ಯಭಿಚಾರಿಭಾವವಾಗಿ ಕುಡಿತದಿಂದ ಉಂಟಾದ ಮತ್ತಿನ ಸ್ಥಿತಿಯಂತಹ ಸ್ಥಿತಿಯೆಂದು ತಿಳಿದುಕೊಳ್ಳಬೇಕು. ಈ ಮದವು ತರುಣ ಮದ, ಮಧ್ಯಮ ಮದ ಮತ್ತು ಅವಕೃಷ್ಟಮದವೆಂದು ಮೂರು ವಿಧ. ಆ ತ್ರಿವಿಧ ಮದವನ್ನು ಹಾಡುವುದು, ರೋದಿಸುವುದು, ನಗುವುದು, ಕಟು ಮಾತನ್ನಾಡುವುದು ಮತ್ತು ನಿದ್ರಿಸುವುದು ಎಂಬ ಐದು ಭಾವಗಳಿಂದ, ಅಂದರೆ, ರೀತಿಗಳಿಂದ ಪ್ರದರ್ಶಿಸಬಹುದು. ತರುಣ ಮದವು ಉತ್ತಮ ಪ್ರಕೃತಿಯ ಜನರಿಗೆ ಸೇರಿದುದು. ಈ ಮದದ ಪ್ರಭಾವವನ್ನು ನಗುಮುಖದ ಮಾತು, ಇಂಪಾದ ಧ್ವನಿ, ಶಾರೀರಿಕವಾಗಿ ಶಾಂತವಾಗಿರುವುದು, ಸ್ವಲ್ಪಮಟ್ಟಿಗೆ ತೊದಲು ಮಾತು, ಮನೋಹರವಾದ ನಡಿಗೆಗಳ ಮೂಲಕ ಪ್ರದರ್ಶಿಸುತ್ತಾರೆ.

ಮಧ್ಯಮ ಪ್ರಕೃತಿಯ ವ್ಯಕ್ತಿಗಳು ಮಧ್ಯಮ ಮದಕ್ಕೆ ಒಳಗಾಗುತ್ತಾರೆ. ಆ ಮದದ ಪ್ರಭಾವಕ್ಕೆ ಒಳಗಾದ ಅವರು ಹಾಡುತ್ತಾರೆ, ನಗುತ್ತಾರೆ. ಅವರ ಕಣ್ಣುಗಳು ಅಸ್ಥಿರ ಮತ್ತು ಸುತ್ತುತ್ತ ಇರುತ್ತವೆ, ಭುಜಗಳು ಕುಸಿಯುತ್ತವೆ, ನಡಿಗೆ ವಕ್ರವಾಗಿರುತ್ತದೆ ಮಾತು ತಪ್ಪುತ್ತದೆ. ಅಧಮ ಪ್ರಕೃತಿಯ ಜನರು ಅವಕೃಷ್ಟಮದದ ಪ್ರಬಾವಕ್ಕೆ ಒಳಗಾಗಿ ಕಟುವಾದ ಮಾತುಗಳನ್ನಾಡುತ್ತಾರೆ ಮತ್ತು ರೋದಿಸುತ್ತಾರೆ. ಅವರು ಸ್ಮರಣಶಕ್ತಿಯನ್ನು ಕಳೆದುಕೊಳ್ಳುತ್ತಾರೆ. ವಾಂತಿ, ಬಿಕ್ಕು, ಕಫಗಳಿಂದ ವಿಕಾರವಾಗಿ ಕಾಣುತ್ತಾರೆ. ಅವರ ನಾಲಿಗೆ ಭಾರವಾಗಿರುತ್ತದೆ ಮತ್ತು ಅಂಟಂಟಾಗಿರುತ್ತದೆ.

ರಂಗಭೂಮಿಯ ಮೇಲೆ ನಟರು ಪ್ರದರ್ಶಿಸಬೇಕಾದ ಮದವನ್ನು ಕುರಿತು ಹೇಳುತ್ತಾ ಭರತನು ಆ ಮದವನ್ನು ಪಾತ್ರದ ಪ್ರಕೃತಿಗೆ ಅನುಗುಣವಾಗಿ ಹೆಚ್ಚಿಸಬೇಕೆಂದು ತಿಳಿಸುತ್ತಾನೆ. ನಟನು ರಂಗಭೂಮಿಯ ಮೇಲೆ ಬರುವಾಗ ಕುಡಿದು ಬಂದಿದ್ದರೆ ಆ ಕುಡಿತದ ಪರಿಣಾಮವಾಗಿ ಬಂದ ಮತ್ತನ್ನು ಹೆದರಿಸುವುದು, ಶೋಕ ಬರುವಂತೆ ಮಾಡುವುದು, ಭಯವನ್ನು ಹುಟ್ಟಿಸುವುದು, ಸುಖ ತಂದ ಸನ್ನಿವೇಶ ಒದಗಿ ಬಂದಿರುವ ಸುದ್ದಿ ತಿಳಿಸುವುದು ಮುಂತಾದ ವಿಧಾನಗಳಿಂದ ಬಿಡಿಸಬೇಕು. ಸಂತೋಷದ ವಾರ್ತೆಯಿಂದ ಶೋಕವು ಪರಿಹೃತವಾದಂತೆ ಈ ವಿಧಾನಗಳಿಂದ ಮತ್ತು ಪರಿಹೃತವಾಗುವುದು.

6. **श्रमः :**

श्रमो नाम– अध्वव्यायामसेवनादिभिर्विभावैः समुत्पद्यते । तस्य गात्रपरिमर्दनसंवाहन– निःश्वसितविजृम्भितमन्दपदोक्षेपणनयनवदनविकूणनसीत्कारादिभिरनुभावैरभिनयः प्रयोक्तव्यः ।

नृत्ताध्वव्यायामान्नरस्य सञ्जायते श्रमो नाम ।

निःश्वासखेदगमनैस्तस्याभिनयः प्रयोक्तव्यः ॥[58]

"ಶ್ರಮವೆಂಬುದು ದೀರ್ಘ ಪ್ರಯಾಣ, ವ್ಯಾಯಾಮ ಮಾಡುವುದು ಮುಂತಾದ ವಿಭಾವಗಳಿಂದ ಉತ್ಪನ್ನವಾಗುತ್ತದೆ. ಅದನ್ನು ಅಭಿನಯದಲ್ಲಿ ಶರೀರವನ್ನು ಒತ್ತಿಕೊಳ್ಳುವುದು, ಮಾಲೀಸು ಮಾಡುವುದು, ನಿಟ್ಟುಸಿರು ಬಿಡುವುದು, ಆಕಳಿಸುವುದು, ಮಂದವಾಗಿ ಹೆಜ್ಜೆ ಇಡುವುದು, ಕಣ್ಣುಗಳನ್ನು ಮತ್ತು ಮುಖವನ್ನು ತಿರುಗಿಸುವುದು, ಸೀತ್ಕಾರ ಮಾಡುವುದು ಮುಂತಾದ ಅನುಭಾವಗಳ ಮೂಲಕ ಪ್ರಯೋಗಿಸಬೇಕು.

"ನೃತ್ಯ, ದೀರ್ಘ ಪ್ರಯಾಣ, ವ್ಯಾಯಾಮಗಳಿಂದ ಶ್ರಮವು ಉಂಟಾಗುತ್ತದೆ. ನಿಟ್ಟುಸಿರು, ಖೇದದ ನಡಿಗೆ ಮುಂತಾದವುಗಳ ಮೂಲಕ ಅದನ್ನು ಅಭಿನಯದಲ್ಲಿ ಪ್ರಯೋಗಿಸಬೇಕು."

ಶ್ರಮವೆಂದರೆ ಆಯಾಸ, ಪ್ರಯಾಸ, ಖೇದ ಪಡುವುದು, ಪ್ರಯತ್ನ–

"अलं महीपाल तव श्रमेण"

ಅದು ಬಳಲಿಕೆ, ನೋವು, ದುರ್ಬಲಗೊಳ್ಳುವುದು ಎಂಬ ಅರ್ಥವನ್ನು ಕೊಡುತ್ತದೆ.

"विनयन्ते स्म तत्योधा मधुभिर्विजयश्रमम्"

ವ್ಯಭಿಚಾರಿಭಾವವಾಗಿ ಅದು ಆಯಾಸ, ಬಳಲಿಕೆ ಎಂಬ ಅರ್ಥವನ್ನು ಕೊಡುತ್ತದೆ. ದೀರ್ಘಪ್ರಯಾಣ, ಶಾರೀರಿಕ ವ್ಯಾಯಾಮ ಮುಂತಾದ ವಿಭಾವಗಳು ಅದನ್ನು ಉಂಟುಮಾಡುತ್ತದೆ. ಶರೀರವನ್ನು ಒತ್ತಿಕೊಳ್ಳುವುದು, ಮಾಲೀಸು ಮಾಡುವುದು, ದೀರ್ಘ ನಿಃಶ್ವಾಸ ಬಿಡುವುದು, ಆಕಳಿಸುವುದು, ಮಂದವಾಗಿ ಹೆಜ್ಜೆಯಿಡುವುದು, ಕಣ್ಣುಗಳನ್ನು ಮತ್ತು

---

[58] ಶಿವತತ್ತ್ವರತ್ನಾಕರ – (ಸಂ) ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ್, ಸಂಪುಟ 1 ಮತ್ತು 2, – ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ – 1999.

ಮುಖವನ್ನು ತಿರುಗಿಸುವುದು, ಸೀತ್ಕಾರ ಮಾಡುವುದು ಮುಂತಾದ ಅನುಭಾವಗಳ ಮೂಲಕ ಶ್ರಮವನ್ನು ಅಭಿನಯದಲ್ಲಿ ಪ್ರಯೋಗಿಸಬೇಕು.

7. **आलस्यम् :-**

आलस्यं नाम–खेदव्याधिगर्भस्वभावश्रमसौहित्यादिभिर्विभावैः समुत्पद्यते स्त्रीनीचानाम् । तदभिनयेत् सर्वकर्मानभिलाषशयनासननिद्रातन्द्रासेवनादिभिरनुभावैः ।

आलस्यं त्वभिनेयं खेदोपगतं स्वभावजं वापि ।

आहारवर्जितानामारम्भाणामनारम्भणात् । ॥[५९]

"ಆಲಸ್ಯವೆಂಬುದು ಖೇದ, ವ್ಯಾಧಿ, ಗರ್ಭದ ಸ್ಥಿತಿ, ಶ್ರಮ, ಅತಿಶಯದ ತೃಪ್ತಿ ಮುಂತಾದ ವಿಭಾವಗಳಿಂದ ಉಂಟಾಗುತ್ತದೆ. ಅದನ್ನು ಎಲ್ಲಾ ಕರ್ಮಗಳಿಂದ ವಿಮುಖತೆ, ಹಾಸಿಗೆಯಲ್ಲಿ ಮಲಗಿರುವುದು, ಆಸನದ ಮೇಲೆ ಕುಳಿತಿರುವುದು, ನಿದ್ರಿಸುವುದು, ಜಡವಾಗಿರುವುದು ಮುಂತಾದ ಅನುಭಾವಗಳ ಮೂಲಕ ಅಭಿನಯದಲ್ಲಿ ಪ್ರಯೋಗಿಸಬೇಕು. ಈ ವಿಚಾರವನ್ನು ತಿಳಿಸುವ ಆರ್ಯಾಛಂದಸ್ಸಿನ ಒಂದು ಶ್ಲೋಕವಿದೆ–

"ಖೇದ ಮುಂತಾದವುಗಳಿಂದ ಹುಟ್ಟಿದ ಅಥವಾ ಸ್ವಾಭಾವಿಕವಾದ ಆಲಸ್ಯವನ್ನು ಆಹಾರವನ್ನು ತ್ಯಜಿಸುವುದರಿಂದ ಮತ್ತು ಆರಂಭಿಸಬೇಕಾದ ಕಾರ್ಯವನ್ನು ಆರಂಭಿಸದಿರುವುದರಿಂದ ಅಭಿನಯಿಸಬೇಕ"

ಆಲಸ್ಯವೆಂದರೆ ಸೋಮಾರಿತನ, ಜಡತನ, ಶಕ್ತಿರಹಿತತ್ತ್ವ, ಸುಶ್ರುತನು ಹೇಳುತ್ತಾನೆ.

**"शक्तस्य चाप्यनुत्साहः कर्मस्वालस्यमुच्यते"[60]**

"ಶಕ್ತನಾಗಿದ್ದರೂ ಕರ್ಮಗಳಲ್ಲಿ ಉತ್ಸಾಹವಿಲ್ಲದಿರುವುದನ್ನೇ ಆಲಸ್ಯವೆನ್ನುತ್ತಾರೆ" ಎಂದು. ವ್ಯಭಿಚಾರಿಭಾವವಾಗಿ ಅದು ಶಕ್ತಿಯ ಅಭಾವ, ಮಂದತನ ಎಂಬ ಅರ್ಥವನ್ನು ಹೊಂದಿದೆ. ಖೇದ, ವ್ಯಾಧಿ, ಗರ್ಭಿಣಿ ಸ್ಥಿತಿ, ಆಯಾಸ, ಅತ್ಯಂತ ತೃಪ್ತಿ ಮುಂತಾದ ವಿಭಾವಗಳಿಂದ ಅದು ಉಂಟಾಗುತ್ತದೆ. ಅತ್ಯಂತ ತೃಪ್ತಿ (ಸೌಹಿತ್ಯ)ಯ ಹೊರತಾಗಿ ಎಲ್ಲಾ ವಿಭಾವಗಳು 'ಖೇದದ ಆಲಸ್ಯ'ಕ್ಕೆ ಸಂಬಂಧಿಸಿವೆ. 48ನೇ ಶ್ಲೋಕದಲ್ಲಿ ಇದನ್ನು ಹೇಳಲಾಗಿದೆ. ಇನ್ನೊಂದು ವಿಧದ

[59] ನಾಟ್ಯಶಾಸ್ತ್ರ– ಭರತಮುನಿ, ಅನುವಾದಕ– ಮನಮೋಹನ ಘೋಶ್ ಏಷಿಯಾಟಿಕ್ ಸೊಸೈಟಿ ಆಫ್ ಬೆಂಗಾಲ್, ಕಲ್ಕತ್ತ 1951

[60] The sushruta samhita edited by kaviraj kunja lal bhishagratna,published by s.l.Bhaduri B.L Calcutta 1916

ಆಲಸ್ಯವೆಂದರೆ 'ಸ್ವಭಾವಜ ಆಲಸ್ಯ', ಅದು ಒಬ್ಬ ವ್ಯಕ್ತಿಯಲ್ಲಿ ಸಹಜವಾದ ಆಲಸ್ಯ. ಆ ಉಭಯಾತ್ಮಕ ಆಲಸ್ಯದ ಅಭಿನಯವನ್ನು ಎಲ್ಲಾ ಕರ್ಮಗಳಿಂದ ವಿಮುಖತೆ, ನಿದ್ರಿಸುವುದು, ಕೆಲಸವಿಲ್ಲದೆ ಕುಳಿತಿರುವುದು, ಜಡತ್ವ ಮುಂತಾದ ಅನುಭಾವಗಳ ಮೂಲಕ ಪ್ರಯೋಗಿಸಬೇಕು. ಊಟ ಮಾಡದಿರುವುದು ಮತ್ತು ಕಾರ್ಯದಲ್ಲಿ ತೊಡಗದಿರುವುದು ಮುಂತಾದವುಗಳನ್ನು ಅನುಭಾವಗಳೆಂದು 48ನೇ ಶ್ಲೋಕದಲ್ಲಿ ಹೇಳಲಾಗಿದೆ.

8. **दैन्यम् :–**

दैन्यं नाम– दौर्गत्यमनस्तापादिभिर्विभावैः समुत्पद्यते । तस्याधृतिशिरोरोगगात्रगौरवान्य –मनस्कतामृजापरिवर्तनादिभिरनुभावैरभिनयः प्रयोक्तव्यः । अत्रार्या–

चिन्तौत्सुक्यसमुत्था दुःखाद्या भवति दीनता पुंसाम् ।
सर्वमृजापरिहारैर्विविधोऽभिनयो भवेत्तस्य ॥

"ದೈನ್ಯವೆಂಬುದು ಬಡತನ, ಮನಸ್ಸಿನ ತಾಪ ಮುಂತಾದ ವಿಭಾವಗಳಿಂದ ಉತ್ಪನ್ನವಾಗುತ್ತದೆ. ಅದನ್ನು ಧೈರ್ಯವಿಲ್ಲದಿರುವುದು, ತಲೆನೋವು, ದೇಹದಭಾರ, ಅನ್ಯಮನಸ್ಕತೆ, ಶುಚಿತ್ವವನ್ನು ಬಿಡುವುದು ಮುಂತಾದ ಅನುಭಾವಗಳ ಮೂಲಕ ಅಭಿನಯಿಸಬೇಕು. ಇಲ್ಲಿ ಈ ವಿಷಯವನ್ನು ನಿರೂಪಿಸುವ ಒಂದು ಆರ್ಯಾಛಂದಸ್ಸಿನ ಪದ್ಯವಿದೆ–

"ದೈನ್ಯವೆಂಬುದು ಮನುಷ್ಯರಲ್ಲಿ ಚಿಂತೆ, ಕಾತರ, ದುಃಖ ಮುಂತಾದವುಗಳಿಂದ ಉಂಟಾಗುವುದು. ಅದನ್ನು ಅಭಿನಯದಲ್ಲಿ ವಿವಿಧ ರೀತಿಗಳಿಂದ ಶುಚಿತ್ವವನ್ನು ಬಿಡುವುದು ಮುಂತಾದವುಗಳಿಂದ ಪ್ರಯೋಗಿಸಬೇಕು." ದೈನ್ಯವೆಂದರೆ ದೀನವಾದ ಅಥವಾ ಅನುಕಂಪನೀಯ ಸ್ಥಿತಿ, ದುಃಖದ ಸ್ಥಿತಿ.

**"दरिद्राणां दैन्यम्"**[61]

**"इन्दोर्दैन्यं त्वदनुसरणक्लिष्टकान्तेर्बिभर्ति"**[62]

---

[61] गङ्गालहरि जगन्नाथ ,संपादक ल.गो.विंझे, प्रकाशन बलवन्त पुस्तक भाण्डार,मुम्बई,१८७८.

[62] The meghaduta of kalidasa ,lateMr.M.R.kale, published by D.V.& B.D mulgaokarproprietors Gopal narayan & co.book-sellers Bomay.-1934

ಬಡತನ, ಮಾನಸಿಕ ತಾಪ ಮುಂತಾದವು ಅದನ್ನುಂಟುಮಾಡುವ ವಿಭಾವಗಳು. ಅದನ್ನು ಅಭಿನಯದಲ್ಲಿ ತರಲು ಬೇಕಾದ ಅನುಭಾವಗಳೆಂದರೆ ಅಧೈರ್ಯ, ತಲೆನೋವು, ಶರೀರದಭಾರ, ಅನ್ಯಮನಸ್ಕತೆ, ಶುಚಿತ್ವವಿಲ್ಲದಿರುವುದು ಮುಂತಾದವು. 49ನೆಯ ಶ್ಲೋಕದಲ್ಲಿ ಚಿಂತೆ, ಉತ್ಸುಕತೆಗಳನ್ನು ವಿಭಾವಗಳಾಗಿಯೂ ಎಲ್ಲಾ ವಿಧವಾದ ಶುಚಿತ್ವವಿಲ್ಲದಿರುವುದನ್ನು ಅನುಭಾವವೆಂದೂ ಹೇಳಲಾಗಿದೆ.

9. **चिन्ता :–**

चिन्ता नाम–ऐश्वर्यभ्रंशेष्टद्रव्यापहारदारिद्र्यादिभिर्विभावैरुत्पद्यते । तामभिनयेन्निः – श्वसितोच्छ्वसितसन्तापध्यानाधोमुखचिन्तनतनुकार्श्यादिभिरनुभावैः । अत्रार्ये भवतः –

ऐश्वर्यभ्रंशेष्टद्रव्यक्षयजा बहुप्रकारा तु ।
हृदयवितर्कोपगता नृणां चिन्ता समुद्भवति ॥
सोच्छ्वासैर्निःश्वसितैः सन्तापैश्चैव हृदयशून्यतया ।
अभिनेतव्या चिन्ता मृजाविहीनैरधृत्या च ॥[63]

ಚಿಂತೆಯೆಂಬುದು ಸಂಪತ್ತಿನ ನಾಶ, ಪ್ರಿಯವಸ್ತುವಿನ ಅಪಹರಣ, ಬಡತನ ಮುಂತಾದ ವಿಭಾವಗಳಿಂದ ಉತ್ಪನ್ನವಾಗುತ್ತದೆ. ಅದನ್ನು ಉಸಿರು ಬಿಡುವುದು, ಉಸಿರೆಳೆದುಕೊಳ್ಳುವುದು, ಸಂತಾಪ, ಧ್ಯಾನ, ಮುಖ ಕೆಳಗೆ ಮಾಡಿ ಯೋಚಿಸುವುದು, ದೇಹವು ಕೃಶವಾಗುವುದು ಮುಂತಾದ ಅನುಭಾವಗಳ ಮೂಲಕ ಅಭಿನಯದಲ್ಲಿ ಪ್ರಯೋಗಿಸಬೇಕು. ಈ ವಿಷಯದಲ್ಲಿ ಎರಡು ಆರ್ಯಾವೃತ್ತದ ಪದ್ಯಗಳಿವೆ–

"ಐಶ್ವರ್ಯನಾಶ ಪ್ರಿಯವಸ್ತುವಿನ ಅಪಹರಣಗಳಿಂದ ಹುಟ್ಟಿದೆ. ಬಹು ಪ್ರಕಾರವಾದ ಮತ್ತು ಹೃದಯದಲ್ಲಿ ಸಂಶಯದಿಂದ ಕೂಡಿದ ಚಿಂತೆಯು ಮನುಷ್ಯರಲ್ಲಿ ಉಂಟಾಗುತ್ತದೆ."

"ಉಸಿರೆಳೆದುಕೊಳ್ಳುವುದು, ಉಸಿರು ಬಿಡುವುದು ಮುಂತಾದವುಗಳಿಂದ, ಸಂತಾಪಗಳಿಂದ, ಹೃದಯ ಶೂನ್ಯತೆ, ಶುಚಿತ್ವಗಳಿಲ್ಲದೆ ಮತ್ತು ಅಧೈರ್ಯದಿಂದ ಚಿಂತೆ ಎಂಬುದನ್ನು ಅಭಿನಯಿಸಿ ತೋರಿಸಬೇಕು."

[63] ಧನಂಜಯನ ದಶರೂಪಕ (ಕನ್ನಡ ಅನುವಾದ) – ಕೆ.ವಿ.ಸುಬ್ಬಣ್ಣ – ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ ತಾಲ್ಲೂಕು – 2014

ಚಿಂತೆಯೆಂಬುದು ಸಾಮಾನ್ಯವಾಗಿ ಯೋಚನೆ, ಚಿಂತನೆ ಎಂಬ ಅರ್ಥವನ್ನು ಕೊಡುತ್ತದೆ. ಅದು ದುಃಖಕರವಾದ ಯೋಚನೆ ಅಥವಾ ವಿಷಾದಮಯ ಯೋಚನೆ, ಅವಧಾನ ಅಥವಾ ಕಾತರತೆ.

**"चिन्ताजडं दर्शनम्"[64]**

ಅದು ಬಡತನ, ಇಷ್ಟವಾದ ವಸ್ತುವಿನ ಅಪಹರಣ ಮುಂತಾದ ವಿಭಾವಗಳಿಂದ ಉತ್ಪನ್ನವಾಗುತ್ತದೆ. ಅದನ್ನು ಅಭಿನಯದಲ್ಲಿ ಪ್ರಯೋಗಿಸಲು ಬೇಕಾದ ಅನುಭಾವಗಳೆಂದರೆ ನಿಟ್ಟುಸಿರು ಬಿಡುವುದು, ಉದ್ವೇಗ, ಧ್ಯಾನ, ಮುಖವನ್ನು ಕೆಳಮುಖಮಾಡಿ ಯೋಚಿಸುವುದು ಮುಂತಾದವು. 51ನೇ ಪದ್ಯದಲ್ಲಿ ಅನ್ಯಮನಸ್ಕತೆ, ಶುಚಿತ್ವವಿಲ್ಲದಿರುವುದು ಮತ್ತು ಅಧೈರ್ಯಗಳನ್ನು ಅಭಿನಯದಲ್ಲಿ ತರಲು ಅನುಭಾವಗಳಾಗಿ ಹೇಳಲಾಗಿದೆ.

10. **मोहः :–**

मोहो नाम–दैवोपघातव्यसनाभिघातव्याधिभयावेगपूर्ववैरानुसरणादिभिर्विभावैः समुत्पद्यते । तस्य निश्चैतन्यभ्रमणपतनाघूर्णनादर्शनादिभिरनुभावैरभिनयः प्रयोक्तव्यः । अत्र श्लोकस्तावदार्या च–

अस्थाने तस्करान् दृष्ट्वा त्रासनैर्विविधैरपि ।
तत्प्रतीकारशून्यस्य मोहः समुपजायते ॥
व्यसनाभिघातभयपूर्ववैरसंस्मरणगोचरो मोहः ।
सर्वेन्द्रियसंमोहात्तस्याभिनयः प्रयोक्तव्यः ॥

"ಮೋಹವೆಂಬುದು ದೈವದ ಆಘಾತ, ವ್ಯಸನವು ಬಂದೊದಗುವುದು, ಭಯ, ಉದ್ವೇಗ, ಹಳೆಯ ವೈರತ್ವದ ಸ್ಮರಣೆ ಮುಂತಾದ ವಿಭಾವಗಳಿಂದ ಉತ್ಪನ್ನವಾಗುತ್ತದೆ. ಅದನ್ನು ನಿಶ್ಚೇತನನಾಗುವುದು, ಸುತ್ತುವುದು, ಬೀಳುವುದು, ತಿರುಗುವುದು, ದೃಷ್ಟಿಯನ್ನು ಕಳೆದುಕೊಳ್ಳುವುದು ಮುಂತಾದ ಅನುಭಾವಗಳ ಮೂಲಕ ಅಭಿನಯದಲ್ಲಿ ಪ್ರಯೋಗಿಸಬೇಕು." ಈ ವಿಷಯಕ್ಕೆ ಸಂಬಂಧಿಸಿದಂತೆ ಒಂದು ಶ್ಲೋಕವು ಮತ್ತು ಆರ್ಯಾಛಂದಸ್ಸಿನ ಒಂದು ಪದ್ಯವೂ ಇರುವವು–

---

[64] Kalidasa Shakuntala translated by Arthur W.Ryder publications Sanskrit series Cambridge,Ontario 1999

"ಇದ್ದಕ್ಕಿದ್ದಂತೆ ಕಳ್ಳರನ್ನು ನೋಡುವುದರಿಂದ, ಬಹು ವಿಧವಾದ ಭಯಂಕರವಾದ ಸನ್ನಿವೇಶಗಳಿಂದ ಅಂತಹ ಸನ್ನಿವೇಶಗಳಿಗೆ ಪರಿಹಾರ ಕಾಣದ ವ್ಯಕ್ತಿಯಲ್ಲಿ ಮೋಹವು ಉಂಟಾಗುವುದು."

"ವ್ಯಸನವು ಬಂದೊದಗುವುದರಿಂದ, ಭಯದಿಂದ, ಹಿಂದಿನ ವೈರದ ಸಂಸ್ಮರಣದಿಂದ ಮೋಹವುಂಟಾಗುತ್ತದೆ. ಅದನ್ನು ಎಲ್ಲಾ ಇಂದ್ರಿಯಗಳ ಸ್ತಂಭನದ ಮೂಲಕ ಅಭಿನಯದಲ್ಲಿ ಪ್ರಯೋಗಿಸಬೇಕು." ಮೋಹವೆಂದರೆ ಸಂಭ್ರಾಂತಿ, ಭ್ರಮೆ, ಸನ್ನಿ ಇತ್ಯಾದಿ.

**"यज्ज्ञात्वा न पुनर्मोहमेव यास्यसि पाण्डव"[65]**

ಅದು ಚೇತನರಹಿತತ್ವ, ಪ್ರಜ್ಞೆ ಕಳೆದುಕೊಳ್ಳುವುದು. ಮೂರ್ಛೆಹೋಗುವುದು, ಎಚ್ಚರವಿಲ್ಲದಿರುವುದು ಎಂಬ ಅರ್ಥವನ್ನು ಕೊಡುತ್ತದೆ.

**"मोहेनान्तर्वरतनुरियं लक्ष्यते मुच्यमाना"**

**–ವಿಕ್ರಮೋರ್ವಶೀಯ, 1–8, ಕುಮಾರಸಂಭವ, 3–37**

ಉದಾಹರಣೆಯಾಗುತ್ತದೆ.

ಅದು ಮೂರ್ಖತನ, ಅಜ್ಞಾನ ಎಂಬ ಅರ್ಥವನ್ನೂ ನೀಡುತ್ತದೆ.

**"तितीर्षुर्दुस्तरं मोहादुडुपेनास्मि सागरम्"| (ರಘುವಂಶ, 1–2)**

ವ್ಯಭಿಚಾರಿಭಾವವಾಗಿ ಅದು ಭ್ರಮೆ, ಸಂಭ್ರಾಂತಿ ಎಂಬ ಅರ್ಥವನ್ನು ಕೊಡುತ್ತದೆ. ಇಲ್ಲಿ ದೈವದ ಆಘಾತ, ವ್ಯಸನ ಬಂದೊದಗುವುದು, ಭಯ, ಉದ್ವೇಗ, ಪೂರ್ವವೈರದ ಸಂಸ್ಮರಣೆ ಮುಂತಾದವು ಅದರ ವಿಭಾವಗಳು. ಎಚ್ಚರತಪ್ಪುವುದು ಮುಂತಾದವು ಅದರ ಅನುಭಾವಗಳು. ನೆಲದ ಮೇಲೆ ಹೊರಳಾಡುವುದು ಮುಂತಾದವೂ ಕೂಡ ಅನುಭಾವಗಳು. ವಿಶೇಷ ಸನ್ನಿವೇಶಗಳನ್ನು ವಿಭಾವಗಳಾಗಿ ಕೊಡುತ್ತಾ 52ನೇ ಶ್ಲೋಕವು ಇದ್ದಕ್ಕಿದ್ದಂತೆ ಕಳ್ಳರನ್ನು ನೋಡುವುದು ಮತ್ತು ವಿವಿಧ ಭಯಗೊಳಿಸುವ ಸನ್ನಿವೇಶಗಳನ್ನು ಉಲ್ಲೇಖಿಸುತ್ತದೆ. 53ನೆಯ ಶ್ಲೋಕದಲ್ಲಿ ಹೇಳಲಾದ ಸರ್ವೇಂದ್ರಿಯ ಸಂಮೋಹವೆಂಬ ಅನುಭಾವವನ್ನು ನಿಶ್ಚೈತನ್ಯವೆಂಬುದನ್ನು ಹೇಳುವ ಮೂಲಕ ಭರತನು ಅನುಭಾವಗಳ ಮಧ್ಯದಲ್ಲಿ ಉಲ್ಲೇಖಿಸಿದ್ದಾನೆ.

---

[65] ಸಂಪೂರ್ಣ ಮಹಾಭಾರತ – ಕೃ ನಾರಾಯಣರಾವ್ – ಮೆ॥ಟಿ.ನಾರಾಯಣ ಅಯ್ಯಂಗಾರ್, ಬೆಂಗಳೂರು.

11. **<u>स्मृतिः :–</u>**

स्मृतिर्नाम–सुखदुःखकृतानां भावानामनुस्मरणम् । सा च स्वास्त्यजघन्यरात्रिनिद्राच्छेद –समानदर्शनोदाहरणचिन्ताभ्यासादिभिर्विभावैःसमुत्पद्यते ।

तामभिनयेच्छिरःकम्पनावलोकन –भ्रूसमुन्नमनादिभिरनुभावैः । अत्रार्ये भवतः–

सुखदुःखमतिक्रान्तं तथा मतिविभावितं यथावृत्तम् ।

चिरविस्मृतं स्मरति यः स्मृतिमानिति वेदितव्योऽसौ ॥

स्वास्थ्याभ्याससमुत्था श्रुतिदर्शनसम्भवा स्मृतिर्निपुणैः ।

शिरौद्वाहनकम्पैर्भ्रूक्षेपैश्चाभिनेतव्या ॥

"ಸ್ಮೃತಿಯೆಂಬುದು ಸುಖವನ್ನೋ ದುಃಖವನ್ನೋ ಉಂಟು ಮಾಡುವ ಹಿಂದಿನ ಸಂದರ್ಭಗಳನ್ನು ಸ್ಮರಿಸಿಕೊಳ್ಳುವುದು. ಅದು ನೆಮ್ಮದಿ, ಕೊನೆಯ ಯಾಮಕ್ಕಿಂತ ಹಿಂದಿನ ಯಾಮದಲ್ಲಾದ ನಿದ್ರಾಭಂಗ, ಸದೃಶ ವ್ಯಕ್ತಿಯ ದರ್ಶನ ಅಥವಾ ಅಂಥವನೊಂದಿಗೆ ಸಂಭಾಷಣೆ, ಚಿಂತನೆಯ ಅಭ್ಯಾಸ ಮುಂತಾದ ವಿಭಾವಗಳಿಂದ ಉಂಟಾಗುತ್ತದೆ. ಅದನ್ನು ತಲೆಯಲ್ಲಾಡಿಸುವುದು, ನೋಡುವುದು, ಹುಬ್ಬುಗಳನ್ನು ಕುಣಿಸುವುದು ಮುಂತಾದ ಅನುಭಾವಗಳ ಮೂಲಕ ಅಭಿನಯದಲ್ಲಿ ಪ್ರಯೋಗಿಸಬೇಕು. ಈ ಬಗ್ಗೆ ಎರಡು ಆರ್ಯಾವೃತ್ತದ ಪದ್ಯಗ

ಳಿವೆ–

"ಯಾರು ಮನಸ್ಸಿನಲ್ಲಿ ಹೇಗೆ ಆಗಿದ್ದವೋ ಹಾಗೆ ನೆನಪಿಸಿಕೊಂಡ ಮತ್ತು ಬಹು ಹಿಂದೆಯೇ ಮರೆತುಹೋಗಿದ್ದ ಹಿಂದಿನ ಸುಖದ ಅಥವಾ ದುಃಖದ ಸನ್ನಿವೇಶಗಳನ್ನು ಸ್ಮರಿಸಿಕೊಳ್ಳುವನೋ ಅವನನ್ನು ಸ್ಮೃತಿಮಾನ್ (ಸ್ಮೃತಿವಂತ) ಎಂದು ಭಾವಿಸಬೇಕು."

"ನೆಮ್ಮದಿ ಮತ್ತು ಅಭ್ಯಾಸಗಳಿಂದ ಹುಟ್ಟಿದ ಮತ್ತು ಯಾವುದಾದರೂ ಸದೃಶವಾದುದನ್ನು ನೋಡುವುದು ಅಥವಾ ಕೇಳುವುದರಿಂದ ಉಂಟಾದ ಸ್ಮರಣೆಯನ್ನು ತಲೆಯಲ್ಲಾಡಿಸುವುದು, ಹುಬ್ಬುಗಳನ್ನು ಕುಣಿಸುವುದು ಮುಂತಾದವುಗಳ ಮೂಲಕ ಪ್ರಯೋಗದಲ್ಲಿ ತರಬೇಕು."

ಸ್ಮೃತಿ ಎಂದರೆ ಸ್ಮರಣೆ, ಜ್ಞಾಪಿಸಿಕೊಳ್ಳುವುದು, ನೆನಪು,

**"करधृतधनुः किं न यातः स्मृतिं**

**“संस्कारमात्रजन्यं ज्ञानं स्मृतिः”[66]**

**“स्मृत्युपस्थितौ इमौ द्वौ श्लोकौ”**

ಅದು ಪೌರುಷೇಯವಾದ ಕೃತಿಗಳಿಗೆ ಕೊಟ್ಟ ಹೆಸರಾಗಿದ್ದು, ಅಪೌರುಷೇಯವಾದ ಶ್ರುತಿಗಿಂತ ಭಿನ್ನವಾದದ್ದೆಂದು ಪ್ರಸಿದ್ಧವಾಗಿದೆ, ಉದಾಹರಣೆಗೆ ಮನಸ್ಮೃತಿ, ಯಾಜ್ಞವಲ್ಕ್ಯಸ್ಮೃತಿ ಇತ್ಯಾದಿ. ಅದಕ್ಕೆ ಕಾನೂನಿನ ಸಂಹಿತೆ, ಕಾನೂನಿನ ಗ್ರಂಥ ಎಂಬ ಅರ್ಥವಿದೆ. ವ್ಯಭಿಚಾರಿಭಾವವಾಗಿ ಅದು ಸ್ಮರಣೆ, ಜ್ಞಾಪಕ, ನೆನಪು ಎಂಬ ಅರ್ಥದಲ್ಲಿದೆ. ಅದು ನೆಮ್ಮದಿ, ರಾತ್ರಿಯ ಕೊನೆಯಾಮಕ್ಕಿಂತ ಹಿಂದಿನ ಯಾಮದಲ್ಲಿ ನಿದ್ರಾಬಂಗ, ಸದೃಶ ವ್ಯಕ್ತಿಯ ದರ್ಶನ ಅಥವಾ ಆ ವ್ಯಕ್ತಿಯೊಂದಿಗೆ ಮಾತುಕತೆ ಮುಂತಾದ ವಿಭಾವಗಳಿಂದ ಉಂಟಾಗುತ್ತದೆ. ಅದರ ಅನುಭಾವಗಳೆಂದರೆ ತಲೆಯನ್ನು ಅಲ್ಲಾಡಿಸುವುದು, ನೆಟ್ಟದೃಷ್ಟಿಯಿಂದ ನೋಡುವುದು, ಹುಬ್ಬುಗಳನ್ನು ಏರಿಸುವುದು ಮುಂತಾದವು. ಸದೃಶವಾದ ಪದಾರ್ಥವನ್ನು ನೋಡಿದಾಗ ಹಿಂದೆ ನೋಡಿದ ಪದಾರ್ಥದ ಸಂಸ್ಕಾರವು ಮನಸ್ಸಿನಲ್ಲಿ ಮೂಡುವುದು ಸ್ಮೃತಿ. ಇಲ್ಲಿ ಹಿಂದೆ ನೋಡಿದ ವಸ್ತುವಿನ ಜ್ಞಾನವು ಉಂಟಾಗುತ್ತದೆ. ವ್ಯಕ್ತಿಯೊಬ್ಬನ ನೆಮ್ಮದಿಯ ಕಾಲದಲ್ಲಿ ಹಿಂದಿನ ಸ್ಮರಣೆ ಬರುವುದು ಸಹಜ. ‘ಜಘನ್ಯ’ ಎಂಬುದು ‘ರಾತ್ರಿ’ ಎಂಬುದರ ವಿಶೇಷಣ. ರಾತ್ರಿಯ ಕಡೆ ಯಾಮದ ಹಿಂದಿನ ಯಾಮವೆಂದು ಅದರ ಅರ್ಥ. ಆಗ ನಿದ್ರಾಭಂಗವಾದರೆ ಸ್ಮರಣೆಗಳು ಬರುತ್ತವೆ.

12.**धृतिः :–**

धृतिर्नाम–

शौर्यविज्ञानश्रुतिविभवशौचाचारगुरुभक्त्यधिकमनोरथार्थलाभक्रीडादिभिर्विभावैः समुत्पद्यते। तामभिनयेत्प्राप्तानां विषयाणामुपभोगादप्राप्तोपह्यतविनष्टानामननुशोचनादिभिरनुभावैः। अत्रार्ये भवतः–

विज्ञानशौचविभवश्रुतिशक्तिसमुद्भवा धृतिः सद्भिः ।

भयशोकविषादाद्यै रहिता तु सदा प्रयोक्तव्या ॥

---

[66] तर्क–संग्रहदीपिका ,आचार्यआनंद .झा,प्रकाशक,ब्रह्मानन्द् दीक्षित,उ.हिं,ग्रं,अ,लखनऊ १९७६

प्राप्तानामुभोगः शब्दरसस्पर्शरूपगन्धानाम् ।

अप्रापैश्च न शोको यस्यां हि भवेद्धृतिः सा तु ॥[67]

"ಧೃತಿಯೆಂಬುದು ಶೌರ್ಯ, ವಿಶೇಷಜ್ಞಾನ, ವಿದ್ವತ್ತು, ಸಂಪತ್ತು, ಶುದ್ಧಾಚಾರ, ಗುರುಭಕ್ತಿ, ಬಯಸಿದುದಕ್ಕಿಂತ ಹೆಚ್ಚು ದೊರೆಯುವುದು, ಆಟಗಳು ಮುಂತಾದ ವಿಭಾವಗಳಿಂದ ಉತ್ಪನ್ನವಾಗುತ್ತದೆ. ಅದನ್ನು ಪ್ರಾಪ್ತವಾದ ಇಂದ್ರಿಯ ವಿಷಯಗಳನ್ನು ಅನುಭವಿಸುವುದು, ದೊರೆಯದ, ಕೊಂಡೊಯ್ಯಲಾದ, ನಾಶವಾದ ಯಾವುದಕ್ಕೂ ಅನುತಾಪ ಪಡದಿರುವುದು ಮುಂತಾದ ಅನುಭಾವಗಳ ಮೂಲಕ ಅಭಿನಯದಲ್ಲಿ ತರಬೇಕು." ಇದೇ ವಿಷಯವನ್ನು ತಿಳಿಸುವ ಎರಡು ಆರ್ಯಾವೃತ್ತದ ಪದ್ಯಗಳಿವೆ–

ಧೃತಿಯೆಂಬುದು ವಿಶೇಷ ಜ್ಞಾನ, ಶುಚಿತ್ವ, ಸಂಪತ್ತು, ವಿದ್ವತ್ತು, ಶಕ್ತಿಗಳಿಂದ ಉತ್ಪನ್ನವಾಗುತ್ತದೆ. ಅದು ಭಯ, ಶೋಕ, ವಿಷಾದ ಮುಂತಾದವುಗಳಿಲ್ಲದೆ ಉತ್ತಮ ನಟರಿಂದ ಯಾವಾಗಲೂ ಅಭಿನಯಿಸಲ್ಪಡಬೇಕು."

"ಪ್ರಾಪ್ತವಾದ ಶಬ್ದ, ರಸ, ಸ್ಪರ್ಶ, ರೂಪ, ಗಂಧಗಳೆಂಬ ಇಂದ್ರಿಯವಿಷಯಗಳನ್ನು ಅನುಭವಿಸುವುದು ಮತ್ತು ದೊರೆಯದಿರುವುದಕ್ಕೆ ಶೋಕಿಸದಿರುವುದು ಯಾವುದರಲ್ಲಿ ಇರುತ್ತವೆಯೋ ಅದೇ ಧೃತಿಯಾಗಿದೆ."

ಧೃತಿಯೆಂಬ ಪದವು 'ಧೃ–ಧಾರಣ' ಎಂಬ ಧಾತುವಿನಿಂದ ನಿಷ್ಪನ್ನವಾಗಿದೆ. ಅದರ ಸಾಮಾನ್ಯ ಅರ್ಥವೆಂದರೆ ತೆಗೆದುಕೊಳ್ಳುವುದು, ಹಿಡಿದುಕೊಳ್ಳುವುದು, ಪ್ರತಿಬಂಧಿಸುವುದು, ಧರಿಸಿರುವುದು ಇತ್ಯಾದಿ. ಅದು ದೃಢತೆ, ಸಿದ್ಧಸ್ಥಿತಿ, ಏಕರೂಪತೆ, ದೃಢಚಿತ್ತತೆ, ಶಕ್ತಿ, ನಿಶ್ಚಿತತೆ, ಧೈರ್ಯ, ಸ್ವನಿಯಂತ್ರಣ ಎಂಬ ಅರ್ಥಗಳನ್ನು ಕೊಡುತ್ತದೆ.

**"भज धृतिं त्यज भीतिमहेतुकाम्"**

ಆ ಪದಕ್ಕೆ ತುಷ್ಟಿ, ಸಂತೃಪ್ತಿ, ಸುಖ, ಸಂತೋಷ, ಪ್ರಮೋದ, ಹರ್ಷ ಎಂಬ ಅರ್ಥಗಳೂ ಇವೆ. **"धृतेश्च धीर सदृशीर्व्यधत्त सः"** ವಿಶ್ವಕೋಶ ಹೇಳುತ್ತದೆ.

**"धृतिर्योगान्तरे धैर्ये धारणाध्वरतुष्टिषु"**ಎಂದು ವ್ಯಭಿಚಾರಿಭಾವವಾಗಿ ಅದರ ಅರ್ಥ ತುಷ್ಟಿ, ಸಂತೃಪ್ತಿ ಎಂದು. ಅದು ಶೌರ್ಯ, ವಿಶೇಷಜ್ಞಾನ, ವಿದ್ವತ್ತು, ಸಂಪತ್ತು, ಶುದ್ಧ ಆಚಾರ, ಗುರುಭಕ್ತಿ, ಬಯಸಿದ್ದುದಕ್ಕಿಂತ ಅಧಿಕವಾಗಿ ದೊರೆಯುವುದು, ಆಟಗಳು ಮುಂತಾದ ಭಾವಗಳಿಂದ ಉಂಟಾಗುತ್ತದೆ. ಇವೆಲ್ಲಾ ಒಂದೊಂದಾಗಿ ಅಥವಾ ಒಟ್ಟಿಗೆ ಸಂತೃಪ್ತಿಗೆ ಕಾರಣ

---

[67] ಧನಂಜಯನ ದಶರೂಪಕ (ಕನ್ನಡ ಅನುವಾದ) – ಕೆ.ವಿ.ಸುಬ್ಬಣ್ಣ – ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ ತಾಲ್ಲೂಕು – 2014

ಅಥವಾ ಕಾರಣಗಳು. ಅದನ್ನು ಅಭಿನಯದಲ್ಲಿ ಪ್ರಾಪ್ತವಾದದ್ದನ್ನು ಎಲ್ಲವನ್ನೂ, ಅಂದರೆ ಎಲ್ಲಾ ಇಂದ್ರಿಯ ಸುಖಗಳನ್ನು ಅನುಭವಿಸುವುದು, ದೊರೆಯದಿದ್ದುದರ ಬಗ್ಗೆ ಅನುತಾಪಪಡದಿರುವುದು ಮುಂತಾದ ಅನುಭಾವಗಳ ಮೂಲಕ ಪ್ರಯೋಗಿಸಬೇಕು. ಆರ್ಯಾಛಂದಸ್ಸಿನ ಎರಡು ಶ್ಲೋಕಗಳಲ್ಲಿಯೂ ಇವೇ ವಿಭಾವಗಳು ಮತ್ತು ಅನುಭಾವಗಳು ಹೇಳಲ್ಪಟ್ಟಿವೆ.

13. **व्रीडा :–**

व्रीडा नाम– अकार्यकरणात्मिका । सा च गुरुव्यतिक्रमावज्ञानप्रतिज्ञातानिर्वहणपश्चात्तापादिभिर्विभावैः समुत्पद्यते । तां निगूढवदनाधोमुखविचिन्तनोर्वीलेखनवस्त्राङ्गुलीयकस्पर्शननखनिकृन्तनादिभिरनुभावैरभिनयेत । अत्रार्ये भवतः –

किञ्चिदकार्यं कुर्वन्नेवं यो दृश्यते शुचिभिरन्यैः ।
पश्चात्तापेन युतो व्रीडित इति वेदितव्योऽसौ ॥
लज्जानिगूढमुखो भूमिं विलिखन् नखांश्च निकृन्तन् ।
वस्त्राङ्गुलीयकानां संस्पर्शं व्रीडितः कुर्यात् ॥[६८]

"ವ್ರೀಡಾ ಎಂಬುದು ಅಕಾರ್ಯವನ್ನು ಮಾಡಿದುದರ ಸ್ಥಿತಿ. ಅದು ಹಿರಿಯರ ಮಾತನ್ನು ಮೀರುವುದು, ಅವಮಾನ, ಹೇಳಿದಂತೆ ನಡೆದುಕೊಳ್ಳದಿರುವುದು, ಪಶ್ಚಾತ್ತಾಪ ಮುಂತಾದ ವಿಭಾವಗಳಿಂದ ಉಂಟಾಗುತ್ತದೆ. ಅದನ್ನು ಮುಖ ಮುಚ್ಚಿಕೊಳ್ಳುವುದು, ಕೆಳಮುಖಮಾಡಿ ಚಿಂತಿಸುವುದು, ನೆಲವನ್ನು ಕೆರೆಯುವುದು, ವಸ್ತ್ರವನ್ನೋ ಉಂಗುರವನ್ನೋ ಮುಟ್ಟಿಕೊಳ್ಳುವುದು, ಉಗುರುಗಳನ್ನು ಕಡಿಯುವುದು ಮುಂತಾದ ಅನುಭಾವಗಳ ಮೂಲಕ ಅಭಿನಯಿಸಬೇಕು. ಇಲ್ಲಿ ಇದೇ ವಿಷಯವನ್ನು ಹೇಳುವ ಎರಡು ಆರ್ಯಾಛಂದಸ್ಸಿನ ಶ್ಲೋಕಗಳಿವೆ–

"ಯಾವುದೋ ಒಂದು ಕೆಟ್ಟ ಕಾರ್ಯವನ್ನು ಮಾಡಿ ಯಾರು ಬೇರೆ ಶುಚಿಯಾದ ವ್ಯಕ್ತಿಗಳಿಂದ ನೋಡಲ್ಪಟ್ಟಾಗ ಪಶ್ಚಾತ್ತಾಪದಿಂದ ಕೂಡಿದವನಾಗುತ್ತಾನೋ ಅವನನ್ನು

[68] ನಾಟ್ಯಶಾಸ್ತ್ರ – ಆದ್ಯ ರಂಗಾಚಾರ್ಯ – ನೀನಾಸಮ್ ರಂಗಶಿಕ್ಷಣಕೇಂದ್ರ, ಹೆಗ್ಗೋಡು,– 2003

ವ್ರೀಡಿತನೆಂದು ತಿಳಿದುಕೊಳ್ಳಬೇಕು." "ವ್ರೀಡಿತನು ಲಜ್ಜೆಯಿಂದ ಮುಖ ಮುಚ್ಚಿಕೊಂಡು, ಭೂಮಿಯನ್ನು ಕೆರೆಯುತ್ತಾ ಉಗುರು ಕಡಿಯುತ್ತಾ ಬಟ್ಟೆ ಅಥವಾ ಉಂಗುರವನ್ನು ಮುಟ್ಟಬೇಕು." ವ್ರೀಡಾ ಎಂದರೆ ನಾಚಿಕೆ (ಲಜ್ಜೆ), **"व्रीडामावहति मे स(शब्दः) सम्प्रति"**[69]

ಇದು ಹಿರಿಯರ ಮಾತನ್ನು ಮೀರುವುದು, ಅವಮಾನ, ನುಡಿದಂತೆ ನಡೆಯದಿರುವುದು, ಪಶ್ಚಾತ್ತಾಪ ಮುಂತಾದ ಅಕಾರ್ಯಗಳಿಂದ ಉಂಟಾಗುತ್ತದೆ. ಅದರ ಹೊರ ಅಭಿವ್ಯಕ್ತಿಗಳನ್ನು ಮುಖ ಮುಚ್ಚಿಕೊಳ್ಳುವುದು, ಮುಖ ಕೆಳಗೆಮಾಡಿ ಚಿಂತಿಸುವುದು, ಮೌನಧರಿಸುವುದು, ನೆಲವನ್ನು ಕೆರೆಯುವುದು ಮುಂತಾದ ಅನುಭಾವಗಳನ್ನು ಅಭಿನಯಿಸುವ ಮೂಲಕ ಪ್ರದರ್ಶಿಸಬೇಕು. ಆರ್ಯಾಛಂದಸ್ಸಿನ ಶ್ಲೋಕಗಳಲ್ಲಿ ಅವೇ ವಿಭಾವಗಳನ್ನು ಮತ್ತು ಅನುಭಾವಗಳನ್ನು ಹೇಳಲಾಗಿದೆ.

14. **चपलता :–**

चपलता नाम– रागद्वेषमात्सर्यामर्षेर्ष्याप्रतिकूलादिभिर्विभावैः समुत्पद्यते । तस्याश्च वाक्पारुष्यनिर्भर्त्सनवधबन्धसम्प्रहारताडनादिभिरनुभावैरभिनयः प्रयोक्तव्यः । अत्रार्या भवति–

अविमृश्य तु यः कार्यं पुरुषो वधताडनं समारभते ।
अविनिश्चितकार्यत्वात्स तु खलु चपलो बुधैर्ज्ञेयः ॥[೭೦]

"ಚಪಲತೆಯೆಂಬುದು ರಾಗ, ದ್ವೇಷ, ಮತ್ಸರತೆ, ಅಮರ್ಷ, ಈರ್ಷ್ಯೆ, ವಿರೋಧ ಮುಂತಾದ ವಿಭಾವಗಳಿಂದ ಉತ್ಪನ್ನವಾಗುತ್ತದೆ. ಅದನ್ನು ಕಟು ಮಾತು, ನಿಂದಿಸುವುದು, ಕೊಲ್ಲುವುದು, ಬಂಧಿಸುವುದು, ಹೊಡೆಯುವುದು, ಬಡಿಯುವುದು ಮುಂತಾದ ಅನುಭಾವಗಳ ಮೂಲಕ ಭಿನಯದಲ್ಲಿ ಪ್ರಯೋಗಿಸಬೇಕು."

---

[69] ಪ್ರತಾಪರುದ್ರೀಯನಾಟಕಲಕ್ಷಣಮ್ – ಜಿ.ವಿಷ್ಣುಮೂರ್ತಿ ಭಟ್ಟ – ಶ್ರೀಪತಿರಾವ್ ಮಾರ್ಪಳ್ಳಿ, ಮೈಸೂರು – 1967

[70] ನಾಟ್ಯಶಾಸ್ತ್ರ – ಆದ್ಯ ರಂಗಾಚಾರ್ಯ – ನೀನಾಸಮ್ ರಂಗಶಿಕ್ಷಣಕೇಂದ್ರ, ಹೆಗ್ಗೋಡು,– 2003

"ವಿಚಾರ ಮಾಡದೆ ಯಾವ ವ್ಯಕ್ತಿಯು ಕಾರ್ಯಮಾಡುತ್ತಾನೋ, ಹಾಗೆಯೇ ವಧೆ, ತಾಡನವನ್ನು ಮಾಡತೊಡಗುತ್ತಾನೋ ಅಂಥಹವನನ್ನು ಅನಿಯಮಿತ ಕಾರ್ಯವನ್ನು ಮಾಡುವವನಾದ್ದರಿಂದ ಚಪಲನೆಂದು ಜ್ಞಾನಿಗಳು ತಿಳಿಯಬೇಕು."

ಚಪಲತಾ ಎಂದರೆ ಚಂಚಲತೆ, ಅಸ್ಥಿರತೆ, ರಾಗ, ದ್ವೇಷ, ಕೋಪ, ಹೊಟ್ಟೆಕಿಚ್ಚು, ವಿರೋಧ ಮುಂತಾದವುಗಳು ಅದನ್ನು ಉಂಟು ಮಾಡುತ್ತವೆ. ಚಪಲತೆಯ ಬಾಹ್ಯ ಅಭಿವ್ಯಕ್ತಿಗಳಾದ ಕಟುಮಾತು, ನಿಂದಿಸುವುದು, ಕೊಲ್ಲುವುದು, ಬಂಧಿಸುವುದು, ಹೊಡೆಯುವುದು ಮುಂತಾದವೇ ಅದರ ಅನುಭಾವಗಳು. ಆರ್ಯಾವೃತ್ತದ ಶ್ಲೋಕವು ಯಾರನ್ನು ಚಪಲನೆಂದು ತಿಳಿಯಬೇಕೆಂದು ತಿಳಿಸುತ್ತದೆ.

15. **हर्षः :–**

हर्षो नाम मनोरथलाभेष्टजनसमागममनः परितोषदेवगुरुराजभर्तृप्रसादभोजनाच्छादनलाभोपभोगादिभिर्विभावैः समुत्पद्यते । तमभिनयेन्नयनवदनप्रसादप्रियभाषणालिङ्गनकण्ठकितपुलकितास्त्रखेदादिभिरनुभावैः। अत्रार्ये भवतः –

अप्राप्ये प्राप्ये वा लब्धेऽर्थे प्रियसमागमे वाऽपि ।
हृदयमनोरथलाभे हर्षः सञ्जायते पुंसाम् ॥
नयनवदनप्रसादप्रियभाषालिङ्गनैश्च रोमाञ्चैः ।
ललितैश्चाङ्गविहारैः खेदाद्यैरभिनयस्तस्य ॥

"ಹರ್ಷವೆಂಬುದು ಮನಸ್ಸಿನ ಅಭಿಲಾಷೆ ಈಡೇರುವುದು, ಪ್ರಿಯಜನರ ಭೇಟಿ, ಮನಸ್ಸಿನ ತೃಪ್ತಿ, ದೇವ, ಗುರು, ರಾಜ ಮತ್ತು ಯಜಮಾನನ ಅನುಗ್ರಹ, ಊಟ, ಹೊದಿಕೆಗಳ ಪ್ರಾಪ್ತಿ, ಅವುಗಳ ಸುಖವನ್ನು ಹೊಂದುವುದು ಮುಂತಾದ ವಿಭಾವಗಳಿಂದ ಉತ್ಪನ್ನವಾಗುತ್ತದೆ. ಅದನ್ನು ಕಣ್ಣುಗಳ ಮತ್ತು ಮುಖದ ಪ್ರಸನ್ನತೆ, ಪ್ರಿಯವಾದ ಮಾತು, ಆಲಿಂಗನ, ಪುಲಕ, ರೋಮಾಂಚನ, ಆನಂದಬಾಷ್ಪ, ಬೆವರು ಮುಂತಾದ ಅನುಭಾವಗಳ ಮೂಲಕ ಅಭಿನಯದಲ್ಲಿ ತರಬೇಕು. ಆ ಬಗ್ಗೆ ಎರಡು ಆರ್ಯಾಛಂದಸ್ಸಿನ ಶ್ಲೋಕಗಳಿವೆ–

"ದೊರೆಯಲಾಗದ ಅಥವಾ ದೊರೆಯಬಹುದಾದ ಇಷ್ಟಾರ್ಥವು ದೊರೆತಾಗ, ಪ್ರಿಯಜನರ ಭೇಟಿಯಾದಾಗ, ಮನೋರಥವು ನೆರವೇರಿದಾಗ ಜನರಿಗೆ ಹರ್ಷವುಂಟಾಗುತ್ತದೆ."

"ಕಣ್ಣುಗಳ ಮತ್ತು ಮುಖದ ಪ್ರಸನ್ನತೆ, ಪ್ರಿಯವಾದ ಮಾತು ಮತ್ತು ಆಲಿಂಗನಗಳಿಂದ, ರೋಮಾಂಚನಗಳಿಂದ, ಮನೋಹರವಾದ ಅಂಗ ವಿನ್ಯಾಸಗಳಿಂದ, ಬೆವರು ಮುಂತಾದವುಗಳಿಂದ ಅದರ ಅಭಿನಯವು ನಡೆಯಬೇಕು."

ಹರ್ಷವೆಂದರೆ ಸಂತೋಷ, ಆನಂದ, ಸುಖ, ತೃಪ್ತಿ, **"हर्षो हर्षो हृदयवसतिः पञ्चबाणस्तु बाणः"** [71] ಬಯಸಿದ ವಸ್ತುವಿನ ಪ್ರಾಪ್ತಿ ಮುಂತಾದವುಗಳಿಂದ ಉಂಟಾಗುವ ಸಂತೋಷದ ಭಾವನೆಯೇ ಹರ್ಷ. ಅದರ ವಿಭಾವಗಳು ಹೃದಯಾಭಿಲಾಷೆಯು ಈಡೇರುವುದು, ಪ್ರಿಯಜನರ ಸಮಾಗಮ, ಮಾನಸಿಕ ತೃಪ್ತಿ, ದೇವತೆಗಳು, ಗುರು, ರಾಜ, ಒಡೆಯ ಮುಂತಾದವರ ಅನುಗ್ರಹ, ಒಳ್ಳೆಯ ಊಟ, ಒಳ್ಳೆಯ ಉಡುಪು, ಸುಖಗಳ ಅನುಭವ ಮುಂತಾದವು. ಅದನ್ನು ಅಭಿನಯದಲ್ಲಿ ತರಬೇಕಾದ ಅನುಭಾವಗಳೆಂದರೆ ಕಣ್ಣುಗಳ ಮತ್ತು ಮುಖದ ಪ್ರಸನ್ನತೆ, ಪ್ರಿಯವಾದ ಮಾತು, ಆಲಿಂಗನ, ಆನಂದಬಾಷ್ಪ, ಬೆವರುವುದು ಮುಂತಾದವು. ಈ ವಿಭಾವಗಳನ್ನು ಮತ್ತು ಅನುಭಾವಗಳನ್ನು ಆರ್ಯಾಛಂದಸ್ಸಿನ ಎರಡು ಶ್ಲೋಕಗಳಲ್ಲಿ ಮತ್ತೆ ಹೇಳಲಾಗಿದೆ.

16. **आवेगः :–**

आवेगो नाम–उत्पातवातवर्षाग्निकुञ्जरोद्
भ्रमणप्रियाप्रियश्रवणव्यसनाभिघातादिभिर्विभावैः समुत्पद्यते । तत्रोत्पातकृतो नाम
विद्युदुल्कानिर्घातप्रपतनचन्द्रसूर्योपरागकेतुदर्शनकृतः । तमभि–
नयेत्सर्वाङ्गस्त्रस्ततावैमनस्यमुखवैवर्ण्यविषादविस्मयादिभिः । वातकृतं
पुनरवकुण्ठनाक्षिपरिमार्ज–नवस्त्रसंगूहनत्वरित गमनादिभिः । वर्षकृतं पुनः
सर्वाङ्गसम्पिण्डनप्रधावनच्छन्नाश्रयमार्गणादिभिः। अग्निकृतं तु

[71] ಸಾಹಿತ್ಯದರ್ಪಣ – ಅನುವಾದ: ಡಾ.ಟಿ.ಜಿ.ಸಿದ್ದಪ್ಪಾರಾಧ್ಯ – ಹೇಮಾಪ್ರಿಂಟರ್ಸ್, ಮೈಸೂರು –1967

धूमाकुलनेत्रताङ्गसङ्कोचनविधूननातिक्रान्तापक्रान्तादिभिः अनुभावैरभिनयेत् । कुञ्जरोद्भ्रमणकृतं नाम त्वरितापसर्पणचञ्चलगमनभयस्तम्भवेपथुपश्चादवलोकनाः विस्मयादिभिः । प्रियश्रवणकृतं नामाभ्युत्थानालिङ्गनवस्त्राभरणप्रदानाश्रुपुलकितादिभिः । अप्रियश्रवणकृतं नाम भूमिपतनविषमविवर्तनपरिधावनविलापनाक्रन्दनादिभिः । व्यसनाभिघात– जंतु सहसोपसर्पणशस्त्रचर्मवर्मधारणगजतुरगरथारोहणसम्प्रधारणादिभिः ।

एवमष्टविकल्पोऽयमावेगः सम्भ्रमात्मकः ।
स्थैर्येणोत्तममध्यानां नीचानां चापसर्पणैः ॥

अत्रार्ये भवतः–

अप्रियनिवेदनाद्वा सहसा ह्यवधारितारिवचनस्य ।
शस्त्राक्षेपात् त्रासादावेगो नाम सम्भवति ॥६४॥
अप्रियनिवेदनाधो विषादभावाश्रयोऽनुभावोऽस्य ।
सहसारिदर्शनाच्चेत्प्रहरणपरिघट्टनैः कार्यः ॥६५॥

"ಆವೇಗವೆಂಬುದು ಉತ್ಪಾತ, ವಾತ (ಬಿರುಗಾಳಿ), ವರ್ಷಾ (ಮಳೆ), ಅಗ್ನಿ (ಬೆಂಕಿ), ಕುಂಜರೋದ್ಭ್ರಮಣ (ಆನೆಯ ಭ್ರಮಣ), ಪ್ರಿಯಶ್ರವಣ, ಅಪ್ರಿಯಶ್ರವಣ, ವ್ಯಸನಾಭಿಘಾತ ಮುಂತಾದ ವಿಭಾವಗಳಿಂದ ಉತ್ಪನ್ನವಾಗುತ್ತದೆ. ಇವುಗಳಲ್ಲಿ ಉತ್ಪಾತಗಳಿಂದ ಉಂಟಾದುದು ಎಂದರೆ ವಿದ್ಯುತ್, ಉಲ್ಕಾಪಾತ, ನಕ್ಷತ್ರಪತನ, ಚಂದ್ರಗ್ರಹಣ, ಸೂರ್ಯಗ್ರಹಣ, ಧೂಮಕೇತುವಿನ ದರ್ಶನಗಳಿಂದ ಉಂಟಾದುದು. ಅದನ್ನು ಅಭಿನಯದಲ್ಲಿ ಸರ್ವಾಂಗಗಳ ಕುಸಿತ, ಅನ್ಯಮನಸ್ಕತೆ, ಮುಖದ ಬಣ್ಣ ಬದಲಾಗುವುದು, ವಿಷಾದ, ಆಶ್ಚರ್ಯಗಳೆಂಬ ಅನುಭಾವಗಳ ಮೂಲಕ ಪ್ರಯೋಗಿಸಬೇಕು. ವಾತಕೃತವಾದ ಆವೇಗವನ್ನು ಮುಖವನ್ನು ಮುಚ್ಚಿಕೊಳ್ಳುವುದು, ಕಣ್ಣುಗಳನ್ನು ಉಜ್ಜಿಕೊಳ್ಳುವುದು, ಬಟ್ಟೆಯನ್ನು ಸುತ್ತಿಕೊಳ್ಳುವುದು, ವೇಗದಿಂದ ಹೋಗುವುದು ಮುಂತಾದ ಅನುಭಾವಗಳಿಂದ ಅಭಿನಯಿಸಬೇಕು. ವರ್ಷಾಕೃತ ಆವೇಗವನ್ನು ಎಲ್ಲಾ ಅಂಗಾಂಗಗಳನ್ನು ಮುದುಡಿಕೊಳ್ಳುವುದು, ಓಡುವುದು, ಹೊದಿಕೆಯಿರುವ ಆಶ್ರಯವನ್ನು ಹುಡುಕುವುದು ಮುಂತಾದವುಗಳ ಮೂಲಕ ಅಭಿನಯಿಸಬೇಕು. ಅಗ್ನಿಕೃತವಾದ ಆವೇಗವನ್ನು ಹೊಗೆ ತುಂಬಿದ ಕಣ್ಣುಗಳು, ದೇಹವನ್ನು ಮುದುಡಿಕೊಳ್ಳುವುದು, ಹೊಗೆಯನ್ನು ಸರಿಸಲು ಕೈಗಳನ್ನು ಅತ್ತಿತ್ತ

ಬೀಸುವುದು, ದೂರ ಹೋಗುವುದು, ಧಾವಿಸುವುದು ಮುಂತಾದ ಅನುಭಾವಗಳ ಮೂಲಕ ಅಭಿನಯಿಸಬೇಕು. ಕುಂಜರೊದ್ಭ್ರಮಣದಿಂದ ಉಂಟಾದ ಉದ್ವೇಗವನ್ನು ಜೋರಾಗಿ ಓಡುವುದು, ಅಸ್ಥಿರವಾದ ಗಮನ, ಭಯ, ಸ್ತಂಭನ, ನಡುಕ, ಹಿಂದಿರುಗಿ ನೋಡುವುದು, ಚಕಿತತೆ ಮುಂತಾದ ಅನುಭಾವಗಳ ಮೂಲಕ ಪ್ರದರ್ಶಿಸಬೇಕು. ಪ್ರಿಯಶ್ರವಣಕೃತ ಉದ್ವೇಗವನ್ನು ಆಹ್ವಾನ ಮಾಡುವುದು, ಆಲಂಗಿಸುವುದು, ಬಹುಮಾನದ ರೂಪದಲ್ಲಿ ಬಟ್ಟೆಗಳನ್ನೋ, ಆಭರಣಗಳನ್ನೋ ಕೊಡುವುದು, ಆನಂದಬಾಷ್ಪ, ರೋಮಾಂಚನ ಮುಂತಾದ ಅನುಭಾವಗಳ ಮೂಲಕ ಅಭಿನಯಿಸಬೇಕು. ಅಪ್ರಿಯಶ್ರವಣಕೃತವಾದ ಉದ್ವೇಗವನ್ನು ನೆಲದ ಮೇಲೆ ಬೀಳುವುದು, ಹೊರಳಾಡುವುದು, ಅತ್ತಿತ್ತ ಧಾವಿಸುವುದು, ಪ್ರಲಾಪ ಮಾಡುವುದು, ಜೋರಾಗಿ ರೋದಿಸುವುದು ಮುಂತಾದ ಅನುಭಾವಗಳ ಮೂಲಕ ಪ್ರದರ್ಶಿಸಬೇಕು. ವ್ಯಸನಾಭಿಘಾತಕೃತವಾದ ಆವೇಗವನ್ನು ತಕ್ಷಣವೇ ಓಡಿ ಹೋಗುವುದು, ಆಯುಧಗಳನ್ನು ಚರ್ಮವನ್ನು ಕವಚಗಳನ್ನು ಧರಿಸುವುದು, ಆನೆ, ಕುದುರೆ ಅಥವಾ ರಥವನ್ನು ಹತ್ತುವುದು, ಪ್ರಹಾರ ಮಾಡುವುದು ಮುಂತಾದವುಗಳ ಮೂಲಕ ಅಭಿನಯಿಸಬೇಕು.

"ಸಂಭ್ರಾಂತಿ ಸ್ವರೂಪದ ಈ ಆವೇಗವು (ಮೇಲೆ ಹೇಳಿದ ಹಾಗೆ) ಎಂಟು ವಿಧವಾಗಿದೆ. ಅದನ್ನು ಉತ್ತಮ ಪ್ರಕೃತಿಯ ಮತ್ತು ಮಧ್ಯಮ ಪ್ರಕೃತಿಯ ಜನರು ಸ್ಥೈರ್ಯದಿಂದ ಮತ್ತು ನೀಚಪ್ರಕೃತಿಯ ಜನರು ಅಪಸರ್ಪಣದಿಂದ (ದೂರ ಹೋಗುವುದರಿಂದ) ಎದುರಿಸುತ್ತಾರೆ."

"ಆವೇಗವೆಂಬುದು ಅಪ್ರಿಯವಾದ ವಿಷಯವನ್ನು ಕೇಳುವುದರಿಂದ, ಇದ್ದಕ್ಕಿಂದ್ದಂತೆ ವೈರಿಯ ಧ್ವನಿಯನ್ನು ಕೇಳುವುದರಿಂದ, ಶಸ್ತ್ರ ಪ್ರಹಾರದಿಂದ, ಭಯದ ಸನ್ನಿವೇಶದಿಂದ ಉಂಟಾಗುತ್ತದೆ." ಅಪ್ರಿಯ ವಾರ್ತೆಯನ್ನು ಕೇಳುವುದರಿಂದ ಉಂಟಾದ ಆವೇಗಕ್ಕೆ, ವಿಷಾದಭಾವಕ್ಕೆ ಗುರಿಯಾಗುವುದೇ ಅನುಭಾವ. ಇದ್ದಕ್ಕಿಂದ್ದಂತೆ ವೈರಿಯ ಧ್ವನಿಯನ್ನು ಕೇಳುವುದರಿಂದ ಉಂಟಾದ ಆವೇಗಕ್ಕೆ ಅಭಿನಯದ ಮೂಲಕ ಪ್ರದರ್ಶಿಸಬೇಕಾದ ಅನುಭಾವಗಳೆಂದರೆ ಶಸ್ತ್ರಗಳ ಪ್ರಯೋಗ, ತತ್‌ಕ್ಷಣ ಹಿಂದಕ್ಕೆ ತಿರುಗಿ ನೋಡುವುದು ಇತ್ಯಾದಿಗಳು." ಆವೇಗವೆಂದರೆ ಅಸ್ವಸ್ಥತೆ, ಕಾತರ, ಉದ್ರೇಕ, ವಿಚಲಿತವಾಗುವುದು,

ಅದು ತ್ವರೆ, ಶೀಘ್ರತೆ ಎಂಬ ಅರ್ಥವನ್ನು ಕೊಡುತ್ತದೆ. ವ್ಯಭಿಚಾರಿಭಾವವಾಗಿ ಅದರ ಅರ್ಥ ವಿಚಲಿತವಾಗುವುದು. ಅದು ಯಾವುದಾದರೂ ಒಂದು ಆಘಾತಕರ ಸನ್ನಿವೇಶದಿಂದ

ಉಂಟಾದ ಸಂಭ್ರಾಂತಿಯ ಛಾಯೆಯುಳ್ಳ ಮನಸ್ಸಿನ ಸ್ಥಿತಿ. ಭರತನು ಆವೇಗವುಂಟಾಗಲು ಎಂಟು ವಿಭಾವಗಳನ್ನು ಉಲ್ಲೇಖಿಸಿದ್ದಾನೆ. ಆವೇಗದ ಕಾರಣಗಳಾದ ಅವು. ಉತ್ಪಾತ, ವಾತ, ವರ್ಷಾ, ಅಗ್ನಿ, ಕುಂಜರೋದ್‌ಭ್ರಮಣ, ಪ್ರಿಯಶ್ರವಣ ಮತ್ತು ವ್ಯಸನಾಭಿಘಾತ. ಉತ್ಪಾತವನ್ನು ವ್ಯಸನಕ್ಕಿಂತ ಬೇರೆಯೆಂದು ತೋರಿಸಲು ಭರತನು ಉತ್ಪಾತಕೃತವೆಂದರೆ ಮಿಂಚಿನಿಂದ, ಉಲ್ಕಾಪಾತದಿಂದ, ನಕ್ಷತ್ರದ ಪತನದಿಂದ, ಚಂದ್ರಗ್ರಹಣ, ಸೂರ್ಯಗ್ರಹಣ, ಧೂಮಕೇತುವಿನ ದರ್ಶನಗಳಿಂದ ಉಂಟಾದುದು ಎಂದು ವಿವರಿಸಿದ್ದಾನೆ. ಉತ್ಪಾತಕೃತವಾದ ಆವೇಗವನ್ನು ಅಭಿನಯಿಸಲು ಎಲ್ಲಾ ಅಂಗಾಂಗಗಳ ಕುಸಿತ (ಶಿಥಿಲವಾಗುವುದು), ವಿಷಾದದ ಭಾವ, ಮುಖದ ಬಣ್ಣ ಬದಲಾಯಿಸುವುದು, ಮುಂತಾದ ಅನುಭಾವಗಳನ್ನು ಹೇಳಿದ್ದಾನೆ. ವ್ಯಸನವೆಂದರೆ ನೈಸರ್ಗಿಕವಾದ ಆಘಾತಗಳು.

ಭರತನು ಒಂದೊಂದು ಪ್ರಕಾರದ ಆವೇಗವನ್ನು ಅಭಿನಯಿಸಲು ಎಂತಹ ಅನುಭಾವಗಳನ್ನು ಪ್ರಯೋಗಿಸಬೇಕು ಎಂಬುದರ ಬಗ್ಗೆ (ನಟರಿಗೆ) ಮಾರ್ಗದರ್ಶನವನ್ನು ಮಾಡಿದ್ದಾನೆ. ಅದರಂತೆ ಉತ್ಪಾತಕೃತವಾದ ಆವೇಗವನ್ನು ಅಭಿನಯಿಸಲು ಹೇಳಿದ ಅನುಭಾವಗಳನ್ನು ಮೇಲೆ ಕೊಟ್ಟಿದೆ. ವಾತ(ಬಿರುಗಾಳಿ)ಕೃತವಾದ ಆವೇಗವನ್ನು ಮುಖಮುಚ್ಚಿಕೊಳ್ಳುವುದು, ಕಣ್ಣುಗಳನ್ನು ಉಜ್ಜಿಕೊಳ್ಳುವುದು ಮುಂತಾದ ಅನುಭಾವಗಳ ಮೂಲಕ ಅಭಿನಯಿಸಬೇಕು. ವರ್ಷಾಕೃತವಾದ ಆವೇಗವನ್ನು ಅಭಿನಯಿಸಲು ಅನುಭಾವಗಳೆಂದರೆ ಅಂಗಾಂಗಗಳನ್ನು ಮುದುಡಿಕೊಳ್ಳುವುದು, ಓಡುವುದು, ಹೊದಿಕೆಯಿರುವ ಆಶ್ರಯವನ್ನು ಹುಡುಕುವುದು ಮುಂತಾದವು. ಅಗ್ನಿಕೃತವಾದ ಆವೇಗಕ್ಕೆ ಹೊಗೆ ತುಂಬಿದ ಕಣ್ಣುಗಳು, ದೇಹವನ್ನು ಸಂಕುಚಿತಗೊಳಿಸಿಕೊಳ್ಳುವುದು, ಜೋರಾಗಿ ಜಿಗಿಯುವುದು, ಕೈಯಾಡಿಸಿ ಹೊಗೆಯನ್ನು ಸರಿಸುವುದು ಮುಂತಾದವು ಅನುಭಾವಗಳು. ಆನೆಯ ಆಕ್ರಮಣದಿಂದ ಉಂಟಾದ ಆವೇಗವನ್ನು ಜೋರಾಗಿ ಓಡುವುದು, ಅವಸರದ ನಡಿಗೆ, ಭಯ, ಸ್ತಂಭನ, ನಡುಗುವುದು ಮುಂತಾದ ಅನುಭಾವಗಳ ಮೂಲಕ ಪ್ರದರ್ಶಿಸಬೇಕು. ಇವೆಲ್ಲಾ ಭಯದಿಂದ ಉಂಟಾದವುಗಳು. ಪ್ರಿಯಶ್ರವಣಕೃತವೆಂಬ ಆವೇಗಕ್ಕೆ ಸಂಬಂಧಿಸಿದ ಅನುಭಾವಗಳು ಸಂತೋಷದ ಪಕ್ಷಕ್ಕೆ ಸೇರಿವೆ. ಅವುಗಳೆಂದರೆ ಆಹ್ವಾನಿಸುವುದು, ಆಲಂಗಿಸುವುದು, ಬಹುಮಾನಗಳನ್ನು ಕೊಡುವುದು, ಆನಂದಬಾಷ್ಪವನ್ನು ಸುರಿಸುವುದು ಮುಂತಾದವು. ಅಪ್ರಿಯಶ್ರವಣಕೃತವಾದ ಆವೇಗದ ಅನುಭಾವಗಳೆಂದರೆ ನೆಲದ ಮೇಲೆ ಬೀಳುವುದು, ಹೊರಳಾಡುವುದು. ರೋದಿಸುವುದು, ಪ್ರಲಾಪ ಮಾಡುವುದು ಮುಂತಾದವು. ಕಡೆಯದಾಗಿ

ವ್ಯಸನಾಭಿಘಾತದಿಂದ ಉಂಟಾಗುವ ಆವೇಗಕ್ಕೆ ಅನುಭಾವಗಳು ಓಡಿಹೋಗುವುದು, ಶಸ್ತ್ರಗಳನ್ನು ಧರಿಸುವುದು, ಆನೆ, ಕುದುರೆ ಅಥವಾ ರಥವನ್ನು ಹತ್ತುವುದು ಮುಂತಾದವು. 63ನೇ ಶ್ಲೋಕದಲ್ಲಿ ತಿಳಿಸಿದಂತೆ ಈ ಎಂಟೂ ತರಹದ ಆವೇಗಗಳನ್ನು ಉತ್ತಮ ಪ್ರಕೃತಿಯ ಮತ್ತು ಮಧ್ಯಮ ಪ್ರಕೃತಿಯ ಜನರು 'ಸ್ಥೈರ್ಯ'ದಿಂದಲೂ ನೀಚ ಪ್ರಕೃತಿಯ ಜನರು ಅಪಸರ್ಪಣ (ಪಲಾಯನ)ದಿಂದಲೂ ಎದುರಿಸುತ್ತಾರೆ.

ಆರ್ಯಾಛಂದಸ್ಸಿನ ಎರಡು ಶ್ಲೋಕಗಳಲ್ಲಿ ಆವೇಗದ ಎರಡು ವಿಭಾವಗಳು ಮಾತ್ರ ಹೇಳಲ್ಪಟ್ಟಿವೆ. ಅವು ಅಪ್ರಿಯನಿವೇದನ ಮತ್ತು ಸಹಸಾ ಅರಿದರ್ಶನ. ಅಪ್ರಿಯನಿವೇದನಕೃತ ಆವೇಗದ ಅನುಭಾವ, ವಿಷಾದಭಾವ ಮತ್ತು ಸಹಸಾ ಅರಿದರ್ಶನಕೃತ ಆವೇಗದ ಅನುಭಾವ ಪ್ರಹರಣ.

### 17. **जडता :–**

जडता नाम–सर्वकार्याप्रतिपत्तिः । इष्टानिष्टश्रवणदर्शनव्याध्या–दिभिर्विभावैः समुत्पद्यते ।
तामभिनयेदकथनाभिभाषणतूष्णींभावाप्रतिभाऽनिमेषनिरीक्षणपरवशत्वादिभिरनुभावैरभिनयेत् । अत्रार्या भवति–

इष्टं वानिष्टं वा सुखदुःखे वा यो मोहात् ।

तूष्णीकः परवशगो भवति स जडसंज्ञितः पुरुषः ॥[७२]

"ಜಡತಾ ಎಂಬುದು ಎಲ್ಲಾ ಕಾರ್ಯಗಳಲ್ಲಿ ಪ್ರವೃತ್ತಿಯಿಲ್ಲದಿರುವುದು, ಅರಿವೇ ಇಲ್ಲದಿರುವುದು. ಅದು ಇಷ್ಟವಾದುದರ ಮತ್ತು ಇಷ್ಟವಲ್ಲದ್ದರ ಶ್ರವಣ ಅಥವಾ ದರ್ಶನ, ವ್ಯಾಧಿ ಮುಂತಾದ ವಿಭಾವಗಳಿಂದ ಉಂಟಾಗುತ್ತದೆ. ಅದನ್ನು ಮಾತನಾಡದಿರುವುದು, ಮಾತಿಗೆ ಪ್ರತಿಕ್ರಿಯಿಸದಿರುವುದು, ಮೌನ ತಾಳುವುದು, ಪ್ರಜ್ಞೆ ಇಲ್ಲದಿರುವುದು, ರೆಪ್ಪೆ ಬಡಿಯದೆ ನೋಡುವುದು, ಅನ್ಯಾಧೀನತೆ ಮುಂತಾದ ಅನುಭಾವಗಳ ಮೂಲಕ ಅಭಿನಯಿಸಬೇಕು. ಈ ವಿಷಯಕ್ಕೆ ಇಲ್ಲೊಂದು ಆರ್ಯಾವೃತ್ತದ ಶ್ಲೋಕವಿದೆ–

---

[72] ಸಂಸ್ಕೃತ ಶಾಸ್ತ್ರ ಮಂಜೂಷ — ಡಾ.ಉದಯಶಂಕರ ಝಾ – ಚೌಖಾಂಬ ಸುರಭಾರತೀ ಪ್ರಕಾಶನ, ವಾರಾಣಸೀ– 2014.

"ಇಷ್ಟವಾದುದೋ ಇಷ್ಟವಲ್ಲದುದೋ, ಸುಖವೋ ದುಃಖವೋ ಯಾವುದನ್ನೂ ಯಾರು ಮೋಹವಶಾತ್ ಅರಿಯನೋ, ಯಾರು ಮೌನವಾಗಿದ್ದು ಬೇರೆಯವರಿಗೆ ಅಧೀನನೋ ಅವನು ಜಡನೆಂದು ಕರೆಯಲ್ಪಡುವ ವ್ಯಕ್ತಿಯು."

ಜಡತಾ ಎಂದರೆ ಮಂದತ್ವ, ಕಾರ್ಯವಿಮುಖತೆ, ಸೋಮಾರಿತನ, ಅಜ್ಞಾನ, ಮೂರ್ಖತ್ವ, ವ್ಯಭಿಚಾರಿಭಾವವಾಗಿ ಅದು ಮಂದತನದ ಅರ್ಥವನ್ನು ಕೊಡುತ್ತದೆ. ಆರ್ಯಾವೃತ್ತದ ಪದ್ಯದಲ್ಲಿ ಜಡವ್ಯಕ್ತಿಯ ಲಕ್ಷಣವನ್ನು ಕೊಡಲಾಗಿದೆ. ಜಡವ್ಯಕ್ತಿಯು ಮೌನವಾಗಿರುವನು. ಅವನು ಬೇರೆಯವರನ್ನು ಅವಲಂಬಿಸಿರುವನು. ಅವನು ಪ್ರಜ್ಞಾಹೀನತೆಯ ಸ್ಥಿತಿಯಲ್ಲಿರುವನು. ಆದ್ದರಿಂದ ಅವನು ಇಷ್ಟ-ಅನಿಷ್ಟಗಳನ್ನು, ಸುಖದುಃಖಗಳನ್ನು ಅರಿಯನು. ಇಂತಹ ಮಂದತ್ವವು ಸರ್ವಕಾರ್ಯಗಳಲ್ಲಿ ಅಪ್ರವೃತ್ತಿಯ ಸ್ವರೂಪದ್ದು. ಅದು ಇಷ್ಟ ಮತ್ತು ಅನಿಷ್ಟಗಳ ಬಗ್ಗೆ ಕೇಳುವುದು ಮತ್ತು ಅವುಗಳನ್ನು ನೋಡುವುದು, ವ್ಯಾಧಿ ಮುಂತಾದವುಗಳಿಂದ ಉಂಟಾಗುತ್ತದೆ. ಅದನ್ನು ಮಾತನಾಡದಿರುವುದು, ಮಾತಿಗೆ ಪ್ರತಿಕ್ರಿಯಿಸದಿರುವುದು, ಅನ್ಯರನ್ನು ಅವಲಂಬಿಸಿರುವುದು ಮುಂತಾದ ಅನುಭಾವಗಳ ಮೂಲಕ ಅಭಿನಯಿಸಬೇಕು.

ಜಡತೆ ಎಂಬುದು ಮನೋದೌರ್ಬಲ್ಯದ ನಿಮಿತ್ತ ಪ್ರತಿಕಾರ್ಯದಲ್ಲಿ ಅಪ್ರವೃತ್ತಿಯ ಒಂದು ಮನೋವೃತ್ತಿ. ಈ ಸ್ಥಿತಿಯಲ್ಲಿ ಯಾವುದೇ ಕೆಲಸದಲ್ಲಿ ಪ್ರವೃತ್ತಿಯಿರುವುದಿಲ್ಲ. ಭ್ರಮೆಯ ಕಾರಣದಿಂದ ಏನನ್ನೂ ನೋಡಲು ಸಾಧ್ಯವಿಲ್ಲ. ವಸ್ತುಗಳು ಕಣ್ಣಿಗೆ ಬಿದ್ದರೂ ಅವುಗಳನ್ನು ಗುರುತು ಹಿಡಿಯುವುದು ಸಾಧ್ಯವಿಲ್ಲ.

18. **गर्वः :–**

गर्वो नाम–ऐश्वर्यकुलरूपयौवनविद्याबलधनलाभादिभिर्विभावैः समुत्पद्यते । तस्यासूयावज्ञाधर्षणानुत्तरदानासम्भाषणाङ्गावलोकनविभ्रमापहसनवाक्पारुष्यगुरुव्यतिक्रमणाधिक्षेप– वचनविच्छेदादिभिरनुभावैरभिनयेत् । अत्रार्या भवति–

विद्यावाप्ते रूपादैश्वर्यादथ धनागमाद्वापि ।
गर्वः खलु नीचानां दृष्ट्यङ्गविचालनैः कार्यः ॥[७३]

---

[73] _रघुवंश महाकवि कालिदास, मोतिलाल बनारसी दास, जैनेन्द्रप्रकाश जैन, श्रीजैनेन्द्र प्रेस नई दिल्लि १९८७

"ಗರ್ವವೆಂಬುದು ಒಡೆತನ, ಕುಲ, ರೂಪ, ಯೌವನ, ವಿದ್ಯೆ, ಬಲ, ಧನಲಾಭ ಮುಂತಾದ ವಿಭಾವಗಳಿಂದ ಉತ್ಪನ್ನವಾಗುತ್ತದೆ. ಅದನ್ನು ಅಸೂಯೆ, ತಿರಸ್ಕಾರ, ದಬ್ಬುವುದು, ಉತ್ತರಕೊಡದಿರುವುದು, ತನ್ನ ಅಂಗಾಂಗಗಳನ್ನು ನೋಡಿಕೊಳ್ಳುವುದು, ವಿಭ್ರಮ, ಅಪಹಾಸ್ಯ ಮಾಡುವುದು, ಕಟುಮಾತು, ಹಿರಿಯರ ಮಾತನ್ನು ಮೀರುವುದು, ನಿಂದಾಪರವಾದ ಮಾತು, ಮಾತನಾಡದಿರುವುದು(ಸ್ನೇಹ ತೊಡೆದುಕೊಳ್ಳುವುದು) ಮುಂತಾದ ಅನುಭಾವಗಳ ಮೂಲಕ ಅಭಿನಯಿಸಬೇಕು. "ವಿದ್ಯೆ ದೊರೆತಾಗ, ರೂಪ, ಒಡೆತನ, ಧನಾಗಮಗಳಿಂದ ನೀಚ ಸ್ವಭಾವದವರಲ್ಲಿ ಗರ್ವವುಂಟಾಗುತ್ತದೆ. ಅದನ್ನು ಕಣ್ಣು ಮತ್ತು ಅಂಗಗಳ ವಿಚಾಲನೆಗಳಿಂದ ಅಭಿನಯಿಸಬೇಕು."

ಗರ್ವವೆಂದರೆ ದರ್ಪ, ಅಹಂಕಾರ.

**"मा कुरु धनजनयौवनगर्वं हरति निमेषात्कालः सर्वम्"**

**"मुधेदानीं यौवनगर्वं वहसि"**[74]

ವ್ಯಭಿಚಾರಿಭಾವವಾಗಿ ಅದು ಅಹಂಕಾರದ ಅರ್ಥವನ್ನು ಕೊಡುತ್ತದೆ. ಅದು ಒಡೆತನ, ಕುಲ, ರೂಪ, ಯೌವನ, ವಿದ್ವತ್ತು, ಬಲ, ಸಂಪತ್ತು ಇತ್ಯಾದಿ ವಿಭಾವಗಳಿಂದ ಉಂಟಾಗುತ್ತದೆ. ಅದರ ಅನುಭಾವಗಳು ಬಹಳ. ಅವೆಂದರೆ ಈರ್ಷ್ಯೆ, ತಿರಸ್ಕಾರ, ಮೇಲೆ ಬೀಳುವುದು, ಉತ್ತರ ಕೊಡದಿರುವುದು, ಮಾತನಾಡದಿರುವುದು, ತನ್ನ ಅಂಗಾಂಗಗಳನ್ನು ತಾನೇ ನೋಡಿಕೊಳ್ಳುವುದು, ವಿಭ್ರಮ, ಅಪಹಾಸ್ಯ, ಕಟುಮಾತು, ದೊಡ್ಡ ಅಪರಾಧ (ಹಿರಿಯರ ಮಾತನ್ನು ಮೀರುವುದು), ಬಯ್ಯುವುದು, ಮಧ್ಯದಲ್ಲಿ ಮಾತು ನಿಲ್ಲಿಸುವುದು ಮುಂತಾದವು. ಅವುಗಳ ಮೂಲಕ ಅದನ್ನು ಅಭಿನಯಿಸಬೇಕು.

ಗರ್ವದ ಕಾರಣಗಳು ಒಡೆತನ, ಸಂಪತ್ತು, ವಿದ್ವತ್ತು ಮುಂತಾದವು. ತನ್ನ ಸಂಪತ್ತಿನ ಬಗ್ಗೆ ತಾನೇ ಹೇಳಿಕೊಳ್ಳುವುದು, ಬೇರೆಯವರ ಬಗ್ಗೆ ಹಗುರವಾಗಿ ಮಾತನಾಡುವುದು, ತನ್ನನ್ನು ತಾನು ದೊಡ್ಡವನೆಂದು ತಿಳಿಯುವುದು ಇವೆಲ್ಲಾ ಗರ್ವದ ಸಹಜ ಲಕ್ಷಣಗಳು.

[74] रघुवंश महाकवि कालिदास, मोतिलाल बनारसी दास, जैनेन्द्रप्रकाश जैन, श्रीजैनेन्द्र प्रेस नई दिल्लि १९८७

19. **विषादः :–**

विषादो नाम– कार्यानिस्तरणदैवव्यापत्तिसमुत्थः । तमभिनयेत् सहायान्वेषणोपायचिन्तनोत्साहविघातवैमनस्यनिःस्वसितादिभिरनुभावैरुत्तम मध्यमानाम् । अधमानां तु विपरिधावनालोकनमुखशोषणसृक्वपरिहेलननिद्रा निःश्वसितध्यानादिभिरनुभावैः । अत्रार्याश्लोकौ–

कार्यानिस्तरणाद्वा चौर्याभिग्रहणराजदोषाद्वा ।
दैवादर्थविपत्तेर्भवति विषादः सदा पुंसाम् ॥

वैचित्र्योपायचिन्ताभ्यां कार्यं उत्तममध्यमोः ।
निद्रानिःश्वसितध्यानैरधमानां तु योजयेत् ॥

"ವಿಷಾದವೆಂಬುದು ಕೈಕೊಂಡ ಕಾರ್ಯವನ್ನು ಮುಗಿಸದೇ ಇದ್ದಾಗ, ದೈವದುರ್ವಿಘಾತದಿಂದ ಉತ್ಪನ್ನವಾಗುತ್ತದೆ. ಉತ್ತಮ ಪ್ರಕೃತಿಯ ಮತ್ತು ಮಧ್ಯಮ ಪ್ರಕೃತಿಯ ಜನರಿಗೆ ಸಂಬಂಧಿಸಿದಂತೆ ಸಹಾಯವನ್ನು ಹುಡುಕುವುದು, ಪರಿಹಾರವನ್ನು ಕುರಿತು ಚಿಂತಿಸುವುದು, ಉತ್ಸಾಹಭಂಗ, ಅನ್ಯಮನಸ್ಕತೆ, ನಿಟ್ಟುಸಿರುಬಿಡುವುದು ಮುಂತಾದ ಅನುಭಾವಗಳ ಮೂಲಕ ಅದನ್ನು ಅಭಿನಯಿಸಬೇಕು. ಅಧಮ ಪ್ರಕೃತಿಯ ಜನರಿಗೆ ಸಂಬಂಧಿಸಿದಂತೆ ದೂರ ಓಡುವುದು, ಬಗ್ಗಿ ಕೆಳಗೆ ನೋಡುವುದು, ಬಾಯಿ ಒಣಗುವುದು, ತುಟಿಗಳನ್ನು ನಾಲಿಗೆಯಿಂದ ಸವರಿಕೊಳ್ಳುವುದು, ನಿದ್ರಿಸುವುದು, ಆಳವಾಗಿ ಉಸಿರು ಬಿಡುವುದು, ಧ್ಯಾನಿಸುವುದು ಮುಂತಾದ ಅನುಭಾವಗಳ ಮೂಲಕ ಅದನ್ನು ಅಭಿನಯಿಸಬೇಕು. ಇಲ್ಲಿ ಈ ವಿಷಯಕ್ಕೆ ಸಂಬಂಧಿಸಿದಂತೆ ಎರಡು ಆರ್ಯಾಛಂದಸ್ಸಿನ ಶ್ಲೋಕಗಳಿವೆ–

"ಕಾರ್ಯವನ್ನು ಪೂರ್ಣಮಾಡದಿರುವುದರಿಂದ ಕಳ್ಳತನದ ಕಾರಣಕ್ಕೆ ಬಂಧನದಿಂದ, ರಾಜನ ಕಡೆಯಿಂದಾದ ತೊಂದರೆಯಿಂದ, ದುರ್ದೈವದ ಕಾರಣದಿಂದ ಉಂಟಾದ ಅರ್ಥನಾಶದಿಂದ ಮನುಷ್ಯರಲ್ಲಿ ವಿಷಾದವೆಂಬುದು ಉಂಟಾಗುತ್ತದೆ."

"ಉತ್ತಮ ಪ್ರಕೃತಿಯ ಮತ್ತು ಮಧ್ಯಮ ಪ್ರಕೃತಿಯ ಜನರ ವಿಷಯದಲ್ಲಿ ಬಹು ಸಹಾಯವನ್ನು ಹುಡುಕುವುದು ಮುಂತಾದವುಗಳ ಮೂಲಕ ಅದನ್ನು ಅಭಿನಯಿಸಬೇಕು.

ಅಧಮ ಪ್ರಕೃತಿಯ ಜನರ ವಿಷಯದಲ್ಲಿ ನಿದ್ರೆ, ದೀರ್ಘ ನಿಟ್ಟುಸಿರು, ಧ್ಯಾನ ಮುಂತಾದವುಗಳ ಮೂಲಕ ಅದನ್ನು ಅಭಿನಯಿಸಬೇಕು."

ವಿಷಾದವೆಂದರೆ ನಿರಾಶೆ, ಹತಾಶೆ, ಮಂದಚೇತನ, ದುಃಖ, ಶೋಕ, **"मद्वाणि मा कुरु विषादम्"**[75]

ಅದು ಆಶಾಭಂಗ, ನಿರಾಸಕ್ತಿ, ನಿಷ್ಪ್ರಭೆ ಎಂಬ ಅರ್ಥವನ್ನು ಕೊಡುತ್ತದೆ. **"विषादलुप्तप्रतिपत्तिसैन्यम्"** ಅದು ಪರಿಹಾರರಾಹಿತ್ಯ ಅಥವಾ ವಿನಾಶದ ಕಾರಣದಿಂದ ಉಂಟಾದ ನಿಷ್ಪ್ರಭತ್ವ. ಇದು ಹೃದಯದ ಹಂಬಲವು ಕೈಗೂಡದಿದ್ದಾಗ ಉಂಟಾಗುವುದು. ಇದೊಂದು ರೀತಿಯ ಮನಸ್ಸಿನ ಕುಸಿತ. ಹೃದಯದ ಹಂಬಲ ಕೈಗೂಡದಿರುವುದು ಎಂಬುದು ಕೈಕೊಂಡ ಕಾರ್ಯವನ್ನು ಮುಗಿಸದಿರುವ ಅಥವಾ ದೈವದುರ್ವಿಘಾತದ ಸ್ವರೂಪದಲ್ಲಿ ಇರಬಹುದು. ಅದನ್ನು ಅಭಿನಯಿಸಲು ಬೇಕಾದ ಅನುಭಾವಗಳು ವ್ಯಕ್ತಿಗಳ ಉತ್ತಮ ಪ್ರಕೃತಿತ್ವ ಮತ್ತು ಮಧ್ಯಮ ಪ್ರಕೃತಿತ್ವವನ್ನು ಅವಲಂಬಿಸಿ ಒಂದು ತರಹವಾದರೆ, ಅಧಮ ಪ್ರಕೃತಿತ್ವವನ್ನು ಅವಲಂಬಿಸಿ ಬೇರೊಂದು ತರಹವಾಗುತ್ತವೆ. ಉತ್ತಮ ಪ್ರಕೃತಿ ಮತ್ತು ಮಧ್ಯಮ ಪ್ರಕೃತಿಯ ಜನರಿಗೆ ಸಂಬಂಧಿಸಿದಂತೆ ಪರಿಹಾರವನ್ನು ಹುಡುಕುವುದು, ಉತ್ಸಾಹಭಂಗ, ಮನಸ್ಸು ದುರ್ಬಲವಾಗುವುದು, ದೀರ್ಘನಿಃಶ್ವಾಸ ಮುಂತಾದವು ಅನುಭಾವಗಳು. ಅಧಮ ಪ್ರಕೃತಿಯ ಜನರ ವಿಷಯದಲ್ಲಿ ದೂರ ಓಡುವುದು, ಕೆಳಗೆ ನೋಡುವುದು, ಬಾಯಿ ಒಣಗುವುದು, ತುಟಿಗಳನ್ನು ನಾಲಿಗೆಯಿಂದ ಸವರಿಕೊಳ್ಳುವುದು, ನಿದ್ರಿಸುವುದು, ದೀರ್ಘವಾಗಿ ಉಸಿರು ಬಿಡುವುದು ಮುಂತಾದವು ಅನುಭಾವಗಳು.

### 20. **औत्सुक्यम् :–**

औत्सुक्यं नाम– इष्टजनवियोगानुस्मरणोध्यानदर्शनादिभिर्विभावैः समुत्पद्यते । तस्य दीर्घनिःश्वसिताधोमुखचिन्तननिद्रातन्द्रीशयनाभिलाषादिभिरनुभावैरभिनयः प्रयोक्तव्यः । अत्रार्या भवति–

इष्टजनस्य वियोगादौत्सुक्यं जायते ह्यनुस्मृत्या ।
चिन्तानिद्रातन्द्रीगात्रगुरुत्वैरभिनयोऽस्य ॥

---

[75] ಸಾಹಿತ್ಯ ದರ್ಪಣ –ವಿಶ್ವನಾಥ –ಕವಿರಾಜ್, ಪಾಂಡುರಂಗ್ ವಾಮನ ಕಾನೆ,ಆಂಗ್ರೇ ವಾಡೆ ಬಾಂಬೆ 4, 1956.

"ಔತ್ಸುಕ್ಯವೆಂಬುದು ಪ್ರಿಯಜನರ ಅಗಲಿಕೆಯ ಸ್ಮರಣೆ, ಉದ್ಯಾನದ ದರ್ಶನ ಮುಂತಾದ ವಿಭಾವಗಳಿಂದ ಉತ್ಪನ್ನವಾಗುತ್ತದೆ. ಅದನ್ನು ದೀರ್ಘ ನಿಟ್ಟುಸಿರು, ಮುಖ ತಗ್ಗಿಸಿ ಚಿಂತಿಸುವುದು, ನಿದ್ರಿಸುವುದು, ತೂಕಡಿಕೆ, ಮಲಗುವ ಇಚ್ಛೆ ಮುಂತಾದ ಅನುಭಾವಗಳ ಮೂಲಕ ಅಭಿನಯದಲ್ಲಿ ಪ್ರಯೋಗಿಸಬೇಕು. ಈ ವಿಷಯವನ್ನು ತಿಳಿಯಪಡಿಸುವ ಒಂದು ಆರ್ಯಾವೃತ್ತದ ಶ್ಲೋಕವಿದೆ–

"ಪ್ರಿಯಜನರ ವಿಯೋಗದ ಸ್ಮರಣೆಯಿಂದ ಔತ್ಸುಕ್ಯವೆಂಬುದು ಉಂಟಾಗುತ್ತದೆ. ಅದನ್ನು ಚಿಂತನೆ, ನಿದ್ರೆ, ತೂಕಡಿಕೆ, ದೇಹದ ಭಾರ ಮುಂತಾದವುಗಳನ್ನು ಪ್ರದರ್ಶಿಸುವ ಮೂಲಕ ಅಭಿನಯಿಸಬೇಕು."

ಔತ್ಸುಕ್ಯವೆಂದರೆ ಕಾತರತೆ, ಅಸ್ವಸ್ಥತೆ, ಆಳವಾದ ಬಯಕೆ, ಕುತೂಹಲ, ಉತ್ಸುಕತೆ. ವ್ಯಭಿಚಾರಭಾವವಾಗಿ ಅದು ಆಳವಾದ ಬಯಕೆ, ಕಾತರತೆ ಎಂಬ ಅರ್ಥವನ್ನು ಕೊಡುತ್ತದೆ.

**"औत्सुक्यमात्रमवसादयति प्रतिष्ठा"**

**"औत्सुक्येन कृतत्वरा सहभुवा व्यावर्तमाना ह्रिया"[76]**

ಪ್ರಿಯಜನರ ವಿಯೋಗ ಸ್ಮರಣೆ, ಉದ್ಯಾನದರ್ಶನ ಮುಂತಾದವು ಅದರ ವಿಭಾವಗಳು. ಅದನ್ನು ಅಭಿನಯದಲ್ಲಿ ತರಬೇಕಾದ ಅನುಭಾವಗಳೆಂದರೆ ದೀರ್ಘ ನಿಟ್ಟುಸಿರು, ತಲೆಬಗ್ಗಿಸಿ ಚಿಂತೆಮಾಡುವುದು, ತೂಕಡಿಕೆ, ನಿದ್ರೆ ಮುಂತಾದವುಗಳು. ಅವೇ ವಿಭಾವಗಳು ಮತ್ತು ಅನುಭಾವಗಳನ್ನು ಆರ್ಯಾಛಂದಸ್ಸಿನ ಪದ್ಯದಲ್ಲಿ ಹೇಳಲಾಗಿದೆ.

21. **निद्रा :–**

निद्रा नाम– दौर्बल्यश्रमक्लममदालस्यचिन्ताऽत्याहारस्वभावादिभिर्विभावैः समुत्पद्यते ।

तामभिनयेद्वदनगौरवशरीरावलोकननेत्रघूर्णनगात्रविजृम्भणमान्द्योच्छ्वसितसन्नगात्रताऽक्षिनिमीलना– दिभिरनुभावैः । अत्रार्ये भवतः–

[76] Kalidasa Shakuntala translated by Arthur W.Ryder publications Sanskrit series Cambridge,Ontario 1999

आलस्यदौर्बल्यात्क्लमाच्छमाच्चिन्तनात्स्वभावाच्च ।

रात्रौ जागरणादपि निद्रा पुरुषस्य सम्भवति ॥

तां मुखगौरवगात्रप्रतिलोलननयनमीलनजडत्वैः ।

जृम्भणगात्रविमर्दैरनुभावैरभिनयेत् प्राज्ञः ॥

"ನಿದ್ರಾ ಎಂಬುದು ದುರ್ಬಲತೆ, ಶ್ರಮ, ಆಯಾಸ, ಮದದಿಂದ ಆಲಸ್ಯ, ಚಿಂತೆ, ಅತಿಆಹಾರ, ವೈಯಕ್ತಿಕ ಸ್ವಭಾವ ಮುಂತಾದವುಗಳಿಂದ ಉಂಟಾಗುತ್ತದೆ. ಅದನ್ನು ಮುಖದ ಭಾರ, ಶರೀರವನ್ನು ನೋಡಿಕೊಳ್ಳುವುದು, ಕಣ್ಣುಗಳನ್ನು ತಿರುಗಿಸುವುದು, ಮೈಯನ್ನು ಹಿಗ್ಗಿಸುವುದು (ಮೈಮುರಿಯುವುದು), ಮಂದತ್ವ, ನಿಧಾನವಾಗಿ ಉಸಿರಾಡುವುದು, ಶಾರೀರಿಕ ನಿಶ್ಚೇಷ್ಟಿತತ್ವ, ಕಣ್ಣು ಮುಚ್ಚುವುದು ಮುಂತಾದ ಅನುಭಾವಗಳ ಮೂಲಕ ಅಭಿನಯಿಸಬೇಕು.

"ನಿದ್ರೆಯು ಮನುಷ್ಯರ ವಿಷಯದಲ್ಲಿ ಆಲಸ್ಯ, ದುರ್ಬಲತೆ, ಆಯಾಸ, ಬಳಲಿಕೆ, ಚಿಂತೆ, ವೈಯಕ್ತಿಕ ಸ್ವಭಾವ, ರಾತ್ರಿ ಜಾಗರಣಗಳೆಂಬವುಗಳಿಂದ ಉಂಟಾಗುತ್ತದೆ. "ಅದನ್ನು ಮುಖದಭಾರ, ದೇಹವನ್ನು ಅತ್ತಿತ್ತ ತಿರುಗಿಸುವುದು, ಕಣ್ಣುಗಳನ್ನು ಮುಚ್ಚುವುದು, ಜಡತೆ, ಆಕಳಿಕೆ, ದೇಹವನ್ನು ಒತ್ತಿಕೊಳ್ಳುವುದು ಎಂಬ ಅನುಭಾವಗಳ ಮೂಲಕ ಅಭಿನಯಿಸಬೇಕು."

ನಿದ್ರಾ ಎಂದರೆ ಮಲಗುವುದು, ಮಂಪರು. **"प्रच्छायसुलभनिद्रा दिवसाः"**[77] ಅದರ ಕಾರಣಗಳು (ವಿಭಾವಗಳು) ದುರ್ಬಲತೆ, ಆಯಾಸ, ಬಳಲಿಕೆ, ಅತಿಆಹಾರ, ವೈಯಕ್ತಿಕಸ್ವಭಾವ ಮುಂತಾದವುಗಳು. ಅದರ ಅನುಭಾವಗಳೆಂದರೆ ಮುಖಭಾರವೆನ್ನಿಸುವುದು, ದೇಹವನ್ನು ನೋಡಿಕೊಳ್ಳುವುದು, ಕಣ್ಣುಗಳನ್ನು ತಿರುಗಿಸುವುದು, ದೇಹವನ್ನು ಹಿಗ್ಗಿಸುವುದು, ಮಂದವಾಗಿ ಉಸಿರಾಡುವುದು, ಶಾರೀರಕ ಕ್ರಿಯೆ ಇಲ್ಲದಿರುವುದು, ಕಣ್ಣುಗಳನ್ನು ಮುಚ್ಚಿಕೊಳ್ಳುವುದು ಮುಂತಾದವು ಆರ್ಯಾಛಂದಸ್ಸಿನ ಎರಡು ಶ್ಲೋಕಗಳು ನಿದ್ರೆಯ ವಿಭಾವಗಳು ಮತ್ತು ಅನುಭಾವಗಳನ್ನು ಹೇಳುತ್ತವೆ. ಇಲ್ಲಿ ಹೇಳಿದ ವಿಭಾವಗಳಲ್ಲಿ ಒಂದು 'ರಾತ್ರಿ ಜಾಗರಣ' ಎಂಬುದು. ಇದರಿಂದ ನಿದ್ರೆಯೆಂಬುದು ಯಾವುದಾದರೂ ವಿಶೇಷ ಕಾರಣದಿಂದ ಉಂಟಾದ ನಿದ್ರಾವಸ್ಥೆಯೇ ಹೊರತು, ರಾತ್ರಿಯ ಸಹಜ ನಿದ್ರೆಯಲ್ಲ ಎಂಬುದು ಸೂಚಿತವಾಗುತ್ತದೆ. ಕೆಲವರು

---

[77] ನಾಟ್ಯಶಾಸ್ತ್ರ–ಆದ್ಯ ರಂಗಾಚಾರ್ಯ.ಅಕ್ಷರ ಪ್ರಕಾಶನ ಹೆಗ್ಗೋಡು 2003

ಸ್ವಭಾವತಃ ನಿದ್ರೆಯವರಿರುತ್ತಾರೆ. ಅಂತಹದನ್ನು 'ಸ್ವಭಾವದಿಂದ' ಎಂದು ಹೇಳಿ ವಿಭಾವವಾಗಿ ಗ್ರಹಿಸಲಾಗಿದೆ.

22. **अपस्मारः :–**

अपस्मारो नाम–

देवयक्षनागब्रह्मराक्षसभूतप्रेतपिशाचग्रहणानुस्मरणोच्छिष्टशून्यागारसेवनाशुचिकालान्तरापर–पतनव्याध्यादिब्हिर्विभावैः समुत्पद्यते । तस्य स्फुरितनिःश्वसितोत्कम्पितधावनपतनस्वेद–स्तम्भनवदनफेनजिह्वापरिलेहनादिभिरनुभावैरभिनयः प्रयोक्तव्यः । अत्रार्ये भवतः–

भूतपिशाचग्रहणानुस्मरणोच्छिष्टशून्यगृहगमनात् ।
कालान्तरातिपातादशुचेश्च भवत्यपस्मारः ॥७३॥

सहसा भूमौ पतनं प्रवेपनं वदनफेनमोक्षश्च ।
निःसंज्ञस्योत्थानं रुपाण्येतान्यपस्मारे ॥७४॥

"ಅಪಸ್ಮಾರವೆಂಬುದು ದೇವ, ಯಕ್ಷ, ನಾಗ, ಬ್ರಹ್ಮ, ರಾಕ್ಷಸ, ಭೂತ, ಪ್ರೇತ, ಪಿಶಾಚಗಳು ಹಿಡಿಯುವುದು ಮತ್ತು ಅದರ ಸ್ಮರಣೆ, ಎಂಜಲನ್ನು ಉಣ್ಣುವುದು, ಶೂನ್ಯ ಗ್ರಹದಲ್ಲಿ ವಾಸ, ಅಶುಚಿ, ಅಮಂಗಲಕರವಾದ ಕಾಲ ಬರುವುದು, ವ್ಯಾಧಿ ಮುಂತಾದ ವಿಭಾವಗಳಿಂದ ಉತ್ಪನ್ನವಾಗುತ್ತದೆ. ಅದನ್ನು ನಡುಗುವಿಕೆ, ನಿಟ್ಟುಸಿರು, ಕಂಪನ, ಓಡುವುದು, ಬೀಳುವುದು, ಸ್ವೇದ, ಸ್ತಂಭನ, ಬಾಯಲ್ಲಿ ಬುರುಗು, ನಾಲಿಗೆಯಿಂದ ತುಟಿಗಳನ್ನು ಸವರುವುದು ಮುಂತಾದ ಅನುಭಾವಗಳ ಮೂಲಕ ಅಭಿನಯಿಸಬೇಕು. "ಅಪಸ್ಮಾರವು ಭೂತ, ಪಿಶಾಚಗಳು ಹಿಡಿದುಕೊಳ್ಳುವುದು, ಅದನ್ನು ಸ್ಮರಿಸಿಕೊಳ್ಳುವುದು, ಎಂಜಲನ್ನು ಊಟ ಮಾಡುವುದು, ಶೂನ್ಯಗೃಹಕ್ಕೆ ಹೋಗುವುದು, ಅಮಂಗಲಕರ ಕಾಲಬರುವುದು, ಅಶುಚಿ ಮುಂತಾದವುಗಳಿಂದ ಉಂಟಾಗುತ್ತದೆ.

"ಇದ್ದಕ್ಕಿದ್ದಂತೆ ಭೂಮಿಯ ಮೇಲೆಬೀಳುವುದು, ಕಂಪಿಸುವುದು, ಬಾಯಿಂದ ನೊರೆಬರುವುದು, ನಿಶ್ಚೇತನವಾಗಿ ಎದ್ದುನಿಲ್ಲುವುದು ಇವು ಅಪಸ್ಮಾರದಲ್ಲಿಕಂಡುಬರುವ

ರೂಪಗಳು." ಅಪಸ್ಮಾರವೆಂದರೆ ಮೈಮರೆಯುವಿಕೆ, ಅದು ಮೂರ್ಛೆರೋಗವು ಆಗಬಹುದು. ವ್ಯಾಧಿಗ್ರಸ್ತವಾಗುವುದು ಅದು. ವ್ಯಭಿಚಾರಿಭಾವವಾಗಿ ಅದು ಮೂರ್ಛೆಹೋಗುವುದು ಎಂಬ ಅರ್ಥವನ್ನು ಹೊಂದಿದೆ. ದೇವ, ಯಕ್ಷ ಮುಂತಾದವು ಹಿಡಿದುಕೊಳ್ಳುವುದು, ಅದರ ಅನುಸ್ಮರಣ, ಎಂಜಲನ್ನು ಊಟ ಮಾಡುವುದು, ಅಶುಚಿ ಮುಂತಾದವು ಅದರ ಕಾರಣಗಳು (ವಿಭಾವಗಳು). ಅದರ ಅನುಭಾವಗಳೆಂದರೆ ನಡುಗುವುದು, ನಿಟ್ಟುಸಿರುಬಿಡುವುದು, ಕಂಪಿಸುವುದು, ಓಡುವುದು ಮತ್ತು ಬೀಳುವುದು, ಬೆವರುವುದು, ಸ್ತಂಭನ, ಬಾಯಲ್ಲಿ ನೊರೆಬರುವುದು ಮುಂತಾದವು ಈ ಅನುಭಾವಗಳ ಮೂಲಕ ಅಪಸ್ಮಾರವನ್ನು ಪ್ರಯೋಗದಲ್ಲಿ ತರಬೇಕು.

23. ***सुप्तम् :–***

सुप्तं नाम–

निद्राभिभवविषयोपगमनमोहनक्षितितलशयनप्रसारणानुकर्षणादिभिर्विभावैः समुत्पद्यते । निद्रासमुत्थं तमुच्छ्वसितसन्नगात्राक्षिनिमीलनसर्वेन्द्रियसंमोहनोत्स्वप्रायितादिभि–रनुभावैः अभिनेयम् । अत्रार्ये भवतः –

निद्राभिभवेन्द्रियोपरमणमोहनैर्भवेत् सुप्तम् ।
अक्षिनिमीलनोच्छ्वसनैः स्वप्रायितजल्पितैः कार्यः
सोच्छ्वासैर्निःश्वासैर्मन्दाक्षिनिमीलनेन निश्चेष्टः ।
सर्वेन्द्रियसंमोहसुप्तं स्वप्नैश्च युञ्जीत ॥[೭೮]

"ಸುಪ್ತವೆಂಬುದು ನಿದ್ರೆಯ ಅತ್ಯಂತ ಪ್ರಭಾವ, ಇಂದ್ರಿಯ ಸುಖಗಳ ಅನುಭವ, ಮೋಹನ, ನೆಲದ ಮೇಲೆ ಒರಗುವುದು, ದೇಹವನ್ನು ಉದ್ದಗೊಳಿಸುವುದು ಮತ್ತು ಮುದುಡಿಕೊಳ್ಳುವುದು ಮುಂತಾದ ವಿಭಾವಗಳಿಂದ ಉತ್ಪನ್ನವಾಗುತ್ತದೆ. ನಿದ್ರೆಯಿಂದುಂಟಾದ ಸುಪ್ತವನ್ನು ದೀರ್ಘವಾದ ಉಸಿರಾಟ, ದೇಹದ ಶಿಥಿಲತೆ, ಕಣ್ಣುಗಳನ್ನು ಮುಚ್ಚಿಕೊಳ್ಳುವುದು,

[78] ಶಿವತತ್ತ್ವರತ್ನಾಕರ – (ಸಂ) ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ್, ಸಂಪುಟ 1 ಮತ್ತು 2, – ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ – 1999.

ಎಲ್ಲಾ ಇಂದ್ರಿಯಗಳ ಕಾರ್ಯವು ನಿಲ್ಲುವುದು, ಕನವರಿಸುವುದು ಮುಂತಾದ ಅನುಭಾವಗಳ ಮೂಲಕ ಅಭಿನಯಿಸಬೇಕು.

"ನಿದ್ರೆಯ ಪ್ರಭಾವ, ಇಂದ್ರಿಯಸುಖಾನುಭವ, ಮೋಹನಗಳಿಂದ ಸುಪ್ತವು ಉಂಟಾಗುವುದು. ಅದನ್ನು ಕಣ್ಣು ಮುಚ್ಚಿಕೊಳ್ಳುವುದು, ದೀರ್ಘವಾಗಿ ಉಸಿರಾಟ, ಕನವರಿಕೆಗಳ ಮೂಲಕ ಅಭಿನಯಿಸಬೇಕು."

"ಉಚ್ಛ್ವಾಸ– ನಿಃಶ್ವಾಸಗಳಿಂದ, ಹಗುರವಾಗಿ ಕಣ್ಣುಗಳನ್ನು ಮುಚ್ಚಿಕೊಳ್ಳೂವುದರಿಂದ ನಿಶ್ಚೇಷ್ಟಿತನಾಗಿರಬೇಕು. ಎಲ್ಲಾ ಇಂದ್ರಿಯಗಳು ಸ್ಟಂಭಿತವಾಗಿದ್ದು ಸ್ವಪ್ನಗಳಿಂದ (ಕನವರಿಕೆಗಳಿಂದ) ಕೂಡಿರಬೇಕು." ಸುಪ್ತ ಎಂದರೆ ಗಾಢನಿದ್ರೆ, ಸ್ತಂಭಿತ ಸ್ಥಿತಿ, ನಿಶ್ಚೇತನ ಸ್ಥಿತಿ, ಅರಿವಳಿಕೆ. ಅದು ನಿದ್ರೆಯಿಂದ ಉತ್ಪನ್ನವಾದ ಸ್ಥಿತಿ. ಸುಪ್ತ ಎಂಬುದು ಗಾಢನಿದ್ರೆ. ನಿದ್ರೆಯಲ್ಲಿ, ಮನಸ್ಸು ಜಾಗೃತವಾಗಿರುತ್ತದೆ. ಆದರೆ ಸುಪ್ತದಲ್ಲಿ ಮನಸ್ಸು ಜಾಗೃತವಾಗಿರುವುದಿಲ್ಲ. ನಿದ್ರೆಯ ಎಲ್ಲಾ ವಿಭಾವಗಳು ಸುಪ್ತದಲ್ಲಿಯೂ ಕಾರಣಗಳಾಗಿವೆ(ವಿಭಾವಗಳಾಗಿವೆ). ನಿದ್ರೆಯಿಂದ ಹುಟ್ಟಿದ ಸುಪ್ತವು ಇಂದ್ರಿಯ ಸುಖಗಳ ಅನುಭವ, ಇಂದ್ರಿಯಗಳ ಸ್ತಂಭನ, ನೆಲದ ಮೇಲೆ ಒರಗುವುದು ಮುಂತಾದ ವಿಭಾವಗಳಿಂದ ಉತ್ಪನ್ನವಾಗಿದೆ. ಅದರ ಅನುಭಾವಗಳು ಆಳವಾಗಿ ಉಸಿರುಬಿಡುವುದು ಮತ್ತು ಉಸಿರು ಎಳೆದುಕೊಳ್ಳುವುದು, ದೇಹದ ನಿಶ್ಚೇಷ್ಟಿತತೆ, ಕಣ್ಣುಗಳನ್ನು ಮುಚ್ಚಿಕೊಳ್ಳುವುದು, ಎಲ್ಲಾ ಅಂಗಾಂಗಗಳ ಸ್ತಂಭನ ಮುಂತಾದವುಗಳು. ಅವುಗಳ ಮೂಲಕ ಸುಪ್ತದ ಸ್ಥಿತಿಹಯನ್ನು ಅಭಿನಯದಲ್ಲಿ ತರಬೇಕು.

24. **विबोधः**

विबोधो नाम–आहारपरिणामनिद्राच्छेदस्वप्रान्ततीव्रशब्दस्पर्शश्रवणादिभिर्विभावैः समुत्पद्यते । तमभिनयेज्जृम्भणाक्षिपरिमर्दनशयनमोक्षणादिभिरनुभावैः । अत्रार्या भवति–

आहारविपरिणामाच्छब्दस्पर्शादिभिश्च सम्भूतः ।

प्रतिबोधस्त्वभिनेयो जृम्भणवदनाक्षिपरिमर्दैः ॥

"ವಿಬೋಧವೆಂಬುದು ಆಹಾರದ ಪಚನ, ನಿದ್ರಾಭಂಗ, ಸ್ವಪ್ನದ ಕೊನೆ, ಜೋರಾದ ಶಬ್ದ, ಸ್ಪರ್ಶ, ಏನನ್ನಾದರೂ ಕೇಳುವುದು ಮುಂತಾದ ವಿಭಾವಗಳಿಂದ ಉಂಟಾಗುತ್ತದೆ. ಅದನ್ನು ಆಕಳಿಸುವುದು, ಕಣ್ಣುಗಳನ್ನು ತಿಕ್ಕಿಕೊಳ್ಳುವುದು, ಹಾಸಿಗೆಯನ್ನು ಬಿಡುವುದು ಮುಂತಾದ ಅನುಭಾವಗಳ ಮೂಲಕ ಅಭಿನಯಿಸಬೇಕು." "ಆಹಾರವು ಪಚನವಾಗುವುದು, ಶಬ್ದ,

ಸ್ಪರ್ಶ ಮುಂತಾದವುಗಳಿಂದ ಹುಟ್ಟಿದ ವಿಬೋಧವು ಆಕಳಿಕೆ, ಮುಖ ಮತ್ತು ಕಣ್ಣುಗಳನ್ನು ತಿಕ್ಕಿಕೊಳ್ಳುವುದು ಮುಂತಾದವುಗಳ ಮೂಲಕ ಅಭಿನಯಿಸಲ್ಪಡಬೇಕು."

ವಿಬೋಧವೆಂದರೆ ಎಚ್ಚರಗೊಳ್ಳುವುದು, ಎಚ್ಚರವಾಗಿರುವುದು. ವ್ಯಭಿಚಾರಿಭಾವವಾಗಿ ಅದು ಎಚ್ಚರಿಕೆ, ಪ್ರಜ್ಞೆ ಹೊಂದುವುದು ಎಂಬ ಅರ್ಥವನ್ನು ಕೊಡುತ್ತದೆ. ಅದು ನಿದ್ರೆಯ ಅನಂತರ ಬರುವ ಎಚ್ಚರಿಕೆಯ ಅಥವಾ ತಿಳಿವಳಿಕೆಯ ಸ್ಥಿತಿ. ಅದು ತೆಗೆದುಕೊಂಡ ಆಹಾರ ಪಚನವಾಗುವುದು, ನಿದ್ರೆ ಮಧ್ಯದಲ್ಲಿ ಎಚ್ಚರವಾಗುವುದು, ಜೋರಾದ ಧ್ವನಿಯನ್ನು ಕೇಳುವುದು, ಸ್ಪರ್ಶ, ಯಾವುದಾದರೂ ಶಬ್ದವನ್ನು ಕೇಳುವುದು ಮುಂತಾದ ವಿಭಾವಗಳಿಂದ ಉತ್ಪನ್ನವಾಗುತ್ತದೆ. ಅದನ್ನು ಆಕಳಿಸುವುದು, ಕಣ್ಣುಗಳನ್ನು ಉಜ್ಜುವುದು, ಹಾಸಿಗೆಬಿಟ್ಟು ಏಳುವುದು ಮುಂತಾದ ಅನುಭಾವಗಳ ಮೂಲಕ ಅಭಿನಯಿಸಬೇಕು. ಆರ್ಯಾಛಂದಸ್ಸಿನ ಶ್ಲೋಕದಲ್ಲಿ ಅವೇ ವಿಭಾವಗಳು ಮತ್ತು ಅನುಭಾವಗಳನ್ನು ಹೇಳಲಾಗಿದೆ.

25. अमर्षः :

अमर्षो नाम– विद्यैश्वर्यशौर्यबलाधिकैरधिक्षिप्तस्यावमानितस्य वा समुत्पद्यते । समभिनयेच्छिरःकम्पनप्रस्वेदनाधोमुखचिन्तनध्यानाध्यवसायोपायसहायान्वेषणादिभिरनुभावैः । अत्र श्लोकौ–

आक्षिप्तानां सभामध्ये विद्याशौर्यबलाधिकैः ।
नृणामुत्साहसंयोगादमर्षो नाम जायते ॥
उत्साहाध्यवसायाभ्यामधोमुखविचिन्तनैः ।
शिरःप्रकम्पस्वेदाद्यैस्तं प्रयुञ्जीत पण्डितः ॥[७९]

"ಅಮರ್ಷವೆಂಬುದು ವಿದ್ಯೆ, ಐಶ್ವರ್ಯ, ಶೌರ್ಯ, ಬಲಗಳಲ್ಲಿ ಹೆಚ್ಚಿನವರಿಂದ ನಿಂದಿತನೋ ಅವಮಾನಿತನೋ ಆದವನಲ್ಲಿ ಉಂಟಾಗುತ್ತದೆ. ಅದನ್ನು ತಲೆಯನ್ನು ಅಲ್ಲಾಡಿಸುವುದು, ಬೆವರುವುದು, ಕೆಳಮುಖಮಾಡಿ ಚಿಂತಿಸುವುದು, ಧ್ಯಾನ, ಪ್ರಯತ್ನ, ಉಪಾಯ

[79] Kalidasa Shakuntala translated by Arthur W.Ryder publications Sanskrit series Cambridge,Ontario 1999.

ಅಥವಾ ಸಹಾಯವನ್ನು ಹುಡುಕುವುದು ಮುಂತಾದ ಅನುಭಾವಗಳ ಮೂಲಕ ಅಭಿನಯಿಸಬೇಕು. ಈ ವಿಷಯದಲ್ಲಿ ಎರಡು ಶ್ಲೋಕಗಳಿವೆ–

"ವಿದ್ಯೆ, ಐಶ್ವರ್ಯ, ಬಲಗಳಲ್ಲಿ ಅಧಿಕರಾದವರಿಂದ ಸಭೆಯಲ್ಲಿ ನಿಂದಿಸಲ್ಪಟ್ಟ ಜನರಲ್ಲಿ ಉತ್ಸಾಹದ ಸಂಯೋಗದಿಂದ ಅಮರ್ಷವೆಂಬುದು ಹುಟ್ಟುತ್ತದೆ." "ಅದನ್ನು ಉತ್ಸಾಹ, ಪ್ರಯತ್ನಗಳಿಂದ, ಮುಖಕೆಳಗೆಮಾಡಿ ಚಿಂತಿಸುವುದರಿಂದ, ತಲೆಯನ್ನು ಅಲ್ಲಾಡಿಸುವುದರಿಂದ, ಬೆವರು ಮುಂತಾದವುಗಳಿಂದ ನಿಪುಣನು ಪ್ರಯೋಗಿಸಬೇಕು."(79)

ಅಮರ್ಷವೆಂದರೆ ಅಸಹನೆ, ತಾಳ್ಮೆಗೆಡುವುದು, ಆವೇಗಕ್ಕೊಳಗಾಗುವುದು.

**"अमर्षशून्येन जनस्य जन्तुना न जातहार्देन न विद्विषादरः"**[80] ಅದು ಈರ್ಷ್ಯೆ, ಅಸೂಯಾಜಾತ ಕೋಪ ಎಂಬ ಅರ್ಥವನ್ನು ಕೊಡುತ್ತದೆ.

"किं नु भवतस्तातप्रतापोल्कर्षेऽप्यमर्षः"

ವ್ಯಭಿಚಾರಿಭಾವವಾಗಿ ಅದು ಅಸೂಯೆಯಿಂದ ಉತ್ಪನ್ನವಾದ ಕೋಪವೆಂಬ ಅರ್ಥವನ್ನು ಕೊಡುತ್ತದೆ. ಅಧಿಕವಾದ ವಿದ್ಯೆ, ಐಶ್ವರ್ಯ, ಶೌರ್ಯ ಅಥವಾ ಬಲ ಇರುವವರಿಂದ ನಿಂದನೆ ಅಥವಾ ಅಪಮಾನವಾದಾಗ ಅದು ಉಂಟಾಗುತ್ತದೆ. ಶಿರಸ್ಸನ್ನು ಅಲ್ಲಾಡಿಸುವುದು, ಬೆವರುವುದು, ತಲೆ ಬಗ್ಗಿಸಿ ಚಿಂತಿಸುವುದು, ಧ್ಯಾನ, ಪ್ರಯತ್ನ, ಉಪಾಯ ಅಥವಾ ಸಹಾಯವನ್ನು ಹುಡುಕುವುದು ಮುಂತಾದವು ಅದರ ಅನುಭಾವಗಳು, ಅವೇ ವಿಭಾವಗಳು ಮತ್ತು ಅನುಭಾವಗಳನ್ನು ಶ್ಲೋಕಗಳು ಹೇಳುತ್ತವೆ.

26. **अवहित्थम् :**

अवहित्थं नाम–आकारप्रच्छादनात्मकम् । तच्च लज्जाभयापजयगौरवजैह्मयादिभिर्विभावैः समुत्पद्यते । तस्यान्यथाकथनावलोकितकथाभङ्गकृतकधैर्यादिभिरनुभावैरभिनयः प्रयोक्तव्यः । अत्र श्लोको भवति–

---

[80] किरातार्जुनीयम्, महाकवि भारवि विरचितम् व्याख्याकार डा.वीरेन्द्रकुमार वर्मा, प्रकाशक :जमुना पाठक वाराणसी १९७८

धार्ष्ट्यजैह्मादिसंभूतमवहित्थं भयात्मकम् ।

तच्चागणनया कार्यं नातीवोत्तरभाषणात् ॥

"ಅವಹಿತ್ಥವೆಂಬುದು ಆಂತರಿಕ ಭಾವನೆಗಳನ್ನು ಮುಚ್ಚಿಟ್ಟುಕೊಳ್ಳುವ, ಮರೆಮಾಡುವ ಸ್ವರೂಪವುಳ್ಳದ್ದು. ಅದು ಲಜ್ಜೆ, ಭಯ, ಸೋಲು, ಗೌರವ, ವಕ್ರಸ್ವಭಾವ ಮುಂತಾದ ವಿಭಾವಗಳಿಂದ ಉತ್ಪನ್ನವಾಗುತ್ತದೆ. ಅದನ್ನು ಮಾತು ಬದಲಾಯಿಸುವುದು, ಕೆಳಗೆ ನೋಡುವುದು, ಮಾತನ್ನು ಮಧ್ಯದಲ್ಲಿಯೇ ನಿಲ್ಲಿಸುವುದು, ಕೃತಕವಾದ ಧೈರ್ಯವನ್ನು ತೋರುವುದು ಮುಂತಾದ ಅನುಭಾವಗಳ ಮೂಲಕ ಅಭಿನಯಿಸಬೇಕು. "ದರ್ಪ, ವಕ್ರಸ್ವಭಾವ ಮುಂತಾದವುಗಳಿಂದ ಉಂಟಾದ ಅವಹಿತ್ಥವು ಭಯದ ಸ್ವರೂಪದ್ದು. ಅದನ್ನು ಯಾವುದನ್ನೂ ಪರಿಗಣಿಸದೆ ಉತ್ತರವಾಗಿ ಹೆಚ್ಚು ಮಾತನಾಡದೆ ಅಭಿನಯಿಸಬೇಕು."

ಅವಹಿತ್ಥವೆಂದರೆ ಸಾಮಾನ್ಯವಾಗಿ ಎಲ್ಲಾ ರೀತಿಯ ಮರೆಮಾಡುವಿಕೆ. ಅದು ಆಂತರಿಕ ಭಾವನೆಗಳನ್ನು ಬಿಟ್ಟುಕೊಡದಿರುವುದು ಅಥವಾ ಮರೆಮಾಡುವುದು. ಅದು ಲಜ್ಜೆ, ಭಯ, ಅಪಜಯ, ಗೌರವ, ವಕ್ರಸ್ವಭಾವ ಮುಂತಾದ ವಿಭಾವಗಳಿಂದ ಉಂಟಾಗುತ್ತದೆ. ಅದನ್ನು ವಿಷಯವನ್ನು ಬೇರೆ ರೀತಿಯಲ್ಲಿ ಹೇಳುವುದು, ಕೆಳಗೆ ನೋಡುವುದು, ಮಧ್ಯದಲ್ಲಿ ಮಾತನ್ನು ನಿಲ್ಲಿಸುವುದು, ಸುಳ್ಳು ಧೈರ್ಯವನ್ನು ಪ್ರದರ್ಶಿಸುವುದು ಮುಂತಾದ ಅನುಭಾವಗಳ ಮೂಲಕ ಅಭಿನಯಿಸಬೇಕು. ಶ್ಲೋಕದ ಪ್ರಕಾರ ದರ್ಪ ಮತ್ತು ವಕ್ರಸ್ವಭಾವಗಳಿಂದ ಅದು ಉಂಟಾಗುತ್ತದೆ. ಇಲ್ಲಾ ಕಾರ್ಯದ ಬಗ್ಗೆ ಅಸಡ್ಡೆ, ಉತ್ತರಿಸುವಾಗ ಹೆಚ್ಚು ಮಾತನಡದಿರುವುದು ಅದರ ಅನುಭಾವಗಳು.

27. **उग्रता**

उग्रता नाम–चौर्याभिग्रहणनृपापराधासत्प्रलापादिभिर्विभावैः समुत्पद्यते । तां च वधबन्धनताडननिर्भर्त्सनादिभिरनुभावैरभिनयेत् । अत्रार्या भवति –

चौर्याभिग्रहणवशान्नृपापराधादथोग्रता भवति ।

वधबन्धताडनादिभिरनुभावैरभिनयस्तस्याः ॥[८१]

---

81 ನಾಟ್ಯಶಾಸ್ತ್ರ–ಆದ್ಯ ರಂಗಾಚಾರ್ಯ.ಅಕ್ಷರ ಪ್ರಕಾಶನ ಹೆಗ್ಗೋಡು 2003

"ಉಗ್ರತಾ ಎಂಬುದು ಕಳ್ಳತನದ ಕಾರಣ ಬಂಧನ, ರಾಜನ ಕಡೆಯಿಂದ ಅತಿಕ್ರಮ, ಸಲ್ಲದಮಾತು ಮುಂತಾದ ವಿಭಾವಗಳಿಂದ ಉಂಟಾಗುತ್ತದೆ. ಅದನ್ನು ವಧೆ, ಬಂಧನ, ಹೊಡೆಯುವುದು, ನಿಂದಿಸುವುದು ಮುಂತಾದ ಅನುಭಾವಗಳ ಮೂಲಕ ಅಭಿನಯಿಸಬೇಕು. ಈ ವಿಷಯದಲ್ಲಿ ಆರ್ಯಾಛಂದಸ್ಸಿನ ಶ್ಲೋಕವೊಂದಿದೆ–

"ಕಳ್ಳತನದ ಕಾರಣ ಬಂಧನ, ರಾಜನ ಕಡೆಯಿಂದ ಅಪರಾಧ, ಇವುಗಳಿಂದ ಉಗ್ರತೆಯು ಉಂಟಾಗುತ್ತದೆ. ಅದರ ಅಭಿನಯವು ವಧ, ಬಂಧನ, ತಾಡನ ಮುಂತಾದ ಅನುಭಾವಗಳ ಮೂಲಕ ಆಗಬೇಕು." ಉಗ್ರತಾ ಎಂದರೆ ರೋಷಾವೇಶ. ಕಳ್ಳತನದ ಕಾರಣ ಬಂಧನ, ರಾಜನ ಕಡೆಯಿಂದ ಅಪಚಾರ, ಅಲ್ಲಸಲ್ಲದ ಮಾತು ಮುಂತಾದವುಗಳಿಂದ ಅದು ಉಂಟಾಗುತ್ತದೆ. ಅವು ಅದರ ವಿಭಾವಗಳು. ಇನ್ನು ಅದರ ಅನುಭಾವಗಳೆಂದರೆ ವಧೆ, ಬಂಧನ, ತಾಡನ, ನಿಂದನೆ ಮುಂತಾದವು. ಆರ್ಯಾವೃತ್ತದ ಶ್ಲೋಕದಲ್ಲಿಯೂ ಅವೇ ವಿಭಾವಗಳು ಮತ್ತು ಅನುಭಾವಗಳನ್ನು ಹೇಳಲಾಗಿದೆ.

28. **मतिः**

मतिर्नाम–नानाशास्त्रविचिन्तनोहापोहादिभिर्विभावैः समुत्पद्यते ।तामभिनयेच्छिष्योपदेशार्थविकल्पनसंशयच्छेदादिभिरनुभावैः । भवति चात्र श्लोकः–

नानाशास्त्रार्थबोधेन मतिः सञ्जायते नृणाम् ।
शिष्योपदेशार्यकृतस्तस्यास्त्वभिनयो भवेत् ॥

"ಮತಿಯೆಂಬುದು ನಾನಾ ಶಾಸ್ತ್ರಗಳ ವಿಚಾರ, ಊಹಾಪೋಹ ಮುಂತಾದ ವಿಭಾವಗಳಿಂದ ಉಂಟಾಗುತ್ತದೆ. ಅದನ್ನು ಶಿಷ್ಯರಿಗೆ ಉಪದೇಶ ಮಾಡುವುದು, ಅರ್ಥದ ಬಗ್ಗೆ ಚರ್ಚೆ, ಸಂಶಯ, ಪರಿಹಾರ ಮುಂತಾದ ಅನುಭಾವಗಳ ಮೂಲಕ ಅಭಿನಯಿಸಬೇಕು." ಇಲ್ಲಿ ಇದೇ ವಿಷಯದಲ್ಲಿ ಒಂದು ಶ್ಲೋಕವಿದೆ–

"ಮತಿ ಎಂಬುದು ಅನೇಕ ಶಾಸ್ತ್ರಗಳ ಅರ್ಥದ ಜ್ಞಾನದಿಂದ ಮನುಷ್ಯರಲ್ಲಿ ಉಂಟಾಗುತ್ತದೆ. ಅದರ ಅಭಿನಯವು ಶಿಷ್ಯರಿಗೆ ಉಪದೇಶ ಕೊಡುವುದು ಮುಂತಾದವುಗಳ ಮೂಲಕ ಆಗಬೇಕು." ಮತಿ ಎಂದರೆ ಬುದ್ಧಿ, ತಿಳಿವಳಿಕೆ. ಅರ್ಥ, ಜ್ಞಾನ, ನಿಶ್ಚಿತಜ್ಞಾನ. **"मतिरेष**

**बलाद्गरीयसी”**[82] **“न चाल्पविषया मतिः”** ಅದು ಮನಸ್ಸು, ಹೃದಯ ಎಂಬ ಅರ್ಥವನ್ನು ಕೊಡುತ್ತದೆ. **“मम तु मतिर्न मनागपैतु धर्मात्”**

‘ದುರ್ಮತಿ’ ಮತ್ತು ‘ಸುಮತಿ’ ಎಂಬ ಶಬ್ದಗಳಲ್ಲಿಯೂ ಅದೇ ಅರ್ಥವಿದೆ. ಅಲ್ಲದೆ ಅದು ಯೋಚನೆ, ಭಾವನೆ, ನಂಬಿಕೆ, ಅಭಿಪ್ರಾಯ, ಭಾವ, ಊಹೆ, ಸಂಸ್ಕಾರ, ಮತ ಎಂಬ ಅನೇಕ ಅರ್ಥಗಳನ್ನು ಹೊಂದಿದೆ. **“विधिरहो बलवानिति मे मतिः”**

ವ್ಯಭಿಚಾರಿಭಾವವಾಗಿ ಅದರ ಅರ್ಥ ಜ್ಞಾನ, ತೀರ್ಮಾನ. ಅದರ ವಿಭಾವಗಳು ಅನೇಕ ಶಾಸ್ತ್ರಗಳ ಚಿಂತನೆ, ಗುಣದೋಷಗಳ ಪರಿಗಣನೆ ಮುಂತಾದವು. ಅದರ ಅಭಿನಯಕ್ಕಾಗಿ ಅನುಭಾವಗಳು ಶಿಷ್ಯರಿಗೆ ಉಪದೇಶ ಮಾಡುವುದು, ಅರ್ಥದ ವಿಷಯದಲ್ಲಿ ಚರ್ಚೆ, ಸಂಶಯಗಳ ಪರಿಹಾರ ಮುಂತಾದವು, ಇವೇ ಜ್ಞಾನದ ಅಭಿವ್ಯಕ್ತಿಯ ಮಾರ್ಗಗಳು. ಇಲ್ಲಿ ಬಂದಿರುವ ಶ್ಲೋಕವು ಅವೇ ವಿಭಾವಗಳನ್ನು ಮತ್ತು ಅನುಭಾವಗಳನ್ನು ಹೇಳುತ್ತದೆ.

29. **व्याधिः**

व्याधिर्नाम–वातपित्तकफसन्निपातप्रभवः । तस्य ज्वरादयो विशेषाः । ज्वरस्तु द्विविधः सशीतः सदाहश्च । तत्र सशीतो नाम– प्रवेपित सर्वाङ्गोत्कम्पननिकुञ्चनाग्न्यभिलाषरोमाञ्च–हनुवलननासविकूणनमुखशोषणपरिदेवितादिभिरनुभावैरभिनेयः । सदाहो नाम–विक्षिप्ताङ्गकरचरणभूम्यभिलाषानुलेपनशीताभिलाषपरिदेवनमुखशोषोत्क्रुष्टादिभिरनुभावैः । ये चान्ते व्याधयस्तेऽपि खलु मुखविकूणनगात्रस्तम्भर्त्रस्ताक्षिनिःश्वस्त–नस्तनितोत्क्रुष्टवपनादिभिरनुभावैरभिनेयाः । अत्र श्लोको भवति–

समासतस्तु व्याधीनां कर्तव्योऽभिनयो बुधैः ।
स्रस्ताङ्गगात्रविक्षेपैस्तथा मुखविकूणनैः ॥[८३]

---

[82] हितोपदेशः नारायणपण्डितः,अनुवादक पण्डित् रामेश्वर, भट्ट प्रकाशक,चौकम्ब संस्कृत प्रतिष्ठान दिल्लि–२०१७

[83] ಶಿವತತ್ತ್ವರತ್ನಾಕರ – (ಸಂ) ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ್, ಐದು ಸಂಪುಟಗಳು, ದರೇಸಾ ಪ್ರಕಾಶನ, ಬೆಂಗಳೂರು –2013.

“ವ್ಯಾಧಿಯೆಂಬುದು ವಾತ, ಪಿತ್ತ, ಕಫ, ಸನ್ನಿಪಾತಗಳಿಂದ ಉಂಟಾಗುತ್ತದೆ. ಜ್ವರ ಮುಂತಾದವು ಅದರ ವಿಶೇಷಗಳು. ಜ್ವರವು ಸಶೀತಜ್ವರ ಮತ್ತು ಸದಾಹಜ್ವರವೆಂದು ಎರಡು ವಿಧ. ಅವುಗಳಲ್ಲಿ ಸಶೀತ ಜ್ವರವೆಂಬುದನ್ನು ನಡುಕ, ಎಲ್ಲಾ ಅಂಗಾಂಗಗಳು ಕಂಪಿಸುವುದು, ದೇಹವನ್ನು ಮುದುಡಿಕೊಳ್ಳುವುದು, ಬಿಸಿಯ ಅಭಿಲಾಷೆ, ರೋಮಾಂಚ, ಮತ್ತೆ ಮತ್ತೆ ದವಡೆಗಳನ್ನು ಅಲುಗಾಡಿಸುವುದು, ಮೂಗನ್ನು ಹಿಂಡುವುದು, ಬಾಯಿ ಒಣಗುವುದು, ಗೋಳಾಡುವುದು ಮುಂತಾದ ಅನುಭಾವಗಳ ಮೂಲಕ ಅಭಿನಯಿಸಬೇಕು. ಸದಾಹ ಜ್ವರವನ್ನು ಅಂಗಾಂಗಗಳನ್ನು, ಕೈಕಾಲುಗಳನ್ನುಚಾಚುವುದು, ಭೂಮಿಯ ಮೇಲೆ ಹೊರಳಾಡುವ ಇಚ್ಛೆ, ಮುಲಾಮುಗಳನ್ನು ಹಚ್ಚಿಕೊಳ್ಳುವುದು, ತಂಪಿನ ಅಭಿಲಾಷೆ, ಬಾಯಿ ಒಣಗುವುದು, ಗೋಳಾಡುವುದು ಮುಂತಾದ ಅನುಭಾವಗಳ ಮೂಲಕ ಅಭಿನಯಿಸಬೇಕು. ಮತ್ತೆ ಇತರ ವ್ಯಾಧಿಗಳನ್ನು ಮುಖ ತಿರುಗಿಸುವುದು. ದೇಹದ ಸ್ತಂಭನ, ಆಳವಾಗಿ ಉಸಿರಾಡುವುದು, ಕಿರುಚುವುದು, ಅಳುವುದು, ನಡುಗುವುದು ಮುಂತಾದ ಅನುಭಾವಗಳ ಮೂಲಕ ಅಭಿನಯಿಸಬೇಕು. ಈ ವಿಷಯಕ್ಕೆ ಸಂಬಂಧಿಸಿದಂತೆ ಒಂದು ಶ್ಲೋಕವಿದೆ–

“ಸಾಮಾನ್ಯವಾಗಿ ಕುಶಲ ನಟರು ವ್ಯಾಧಿಗಳನ್ನು ಅಂಗಾಂಗಗಳನ್ನು ಇಡೀ ದೇಹವನ್ನು ಶಿಥಿಲಗೊಳಿಸುವುದು, ಮುಖವನ್ನು ತಿರುಗಿಸುವುದು ಮುಂತಾದವುಗಳ ಮೂಲಕ ಅಭಿನಯಿಸಬೇಕು.” ವ್ಯಾಧಿ ಎಂದರೆ ಕಾಯಿಲೆ, ರೋಗ, ಅಸ್ವಸ್ಥತೆ, ಜಾಡ್ಯ. ಇದು ಸಾಮಾನ್ಯವಾಗಿ ಶಾರೀರಿಕ ಕ್ಲೇಶ, ಮಾನಸಿಕ ಕ್ಲೇಶವಾದ ‘ಆಧಿ’ ಎಂಬುದಕ್ಕಿಂತ ಭಿನ್ನ. ಅದು ರೋಗದಿಂದ ಉಂಟಾಗುವ ಮನೋಸ್ಥಿತಿಯೂ ಹೌದು. ಭರತನು ವಿವರಿಸಿದಂತೆ ಅದು ವಾತ, ಪಿತ್ತ ಮತ್ತು ಕಫಗಳೆಂಬ ಮೂರು ಧಾತುಗಳ ಅಸಮತೋಲನದಿಂದ ಉಂಟಾದ ಶಾರೀರಿಕ ಅಸ್ವಸ್ಥತೆ. ಅದು ಜ್ವರ ಮುಂತಾದ ರೂಪದಲ್ಲಿರುತ್ತದೆ. ಜ್ವರವು ವಿಶೇಷವಾಗಿ ಶೀತಜ್ವರ ಮತ್ತು ದಾಹಜ್ವರವೆಂದು ಎರಡು ಬಗೆ. ಅವುಗಳನ್ನು ಬೇರೆ ಬೇರೆ ಅನುಭಾವಗಳ ಮೂಲಕ ಅಭಿನಯಿಸಬೇಕು. ಶೀತದಿಂದುಂಟಾದ ಶಿತಜ್ವರದ ಲಕ್ಷಣಕ್ಕೆ ಅನುಗುಣವಾಗಿ ನಡುಕ, ಅಂಗಾಂಗಗಳ ಕಂಪನ, ದೇಹವನ್ನು ಮುದುಡಿಕೊಳ್ಳುವುದು, ಉಷ್ಣದ ಅಭಿಲಾಷೆ, ರೋಮಾಂಚ, ದವಡೆಗಳನ್ನು ಅಲ್ಲಾಡಿಸುವುದು, ಮೂಗನ್ನು ಹಿಂಡುವುದು ಮುಂತಾದವು ಅನುಭಾವಗಳು. ಉಷ್ಣದಿಂದುಂಟಾದ ದಾಹಜ್ವರದ ಲಕ್ಷಣಕ್ಕೆ ಅನುಗುಣವಾಗಿ ಕೈಕಾಲುಗಳನ್ನು ಚಾಚುವುದು, ನೆಲದ ಮೇಲೆ ಹೊರಳಾಡುವುದು, ಮುಲಾಮುಗಳನ್ನು ಹಚ್ಚಿಕೊಳ್ಳುವುದು, ಜೋರಾಗಿ ಅಳುವುದು ಮುಂತಾದವು ಅನುಭಾವಗಳು. ಬೇರೆ ವ್ಯಾಧಿಗಳನ್ನು ಸಾಮಾನ್ಯವಾಗಿ ಮುಖ

ತಿರುಗಿಸುವುದು, ದೇಹ ಸ್ತಂಭನ, ದೀರ್ಘವಾಗಿ ಉಸಿರಾಡುವುದು ಮುಂತಾದವುಗಳ ಮೂಲಕ ಅಭಿನಯಿಸಬೇಕು. ಇಲ್ಲಿ ಬಂದಿರುವ ಶ್ಲೋಕವು ಅನುಭಾವಗಳನ್ನು ಸಂಕ್ಷಿಪ್ತವಾಗಿ ತಿಳಿಸುತ್ತದೆ.

30. **उन्मादः :**

उन्मादो नाम–

इष्टजनविभवनाशाभिघाताद्वातपित्तकफकोपात् ।
विविधाश्चित्तविकारादुन्मादो नाम सम्भवति ॥
अनिमित्तरुदितहसितोपविष्टगीतप्रधावितोत्क्रुष्टैः ।
अन्यैश्चविकारकृतैरुन्मादं सम्प्रयुञ्जीत ॥[೮೪]

"ಉನ್ಮಾದವೆಂಬುದು ಪ್ರಿಯಜನರ ವಿಯೋಗ, ಸಂಪತ್ತಿನ ನಾಶ, ಆಪತ್ತು ಬಂದೊದಗುವುದು, ವಾತ, ಪಿತ್ತ ಮತ್ತು ಕಫಗಳ ಪ್ರಕೋಪ ಮುಂತಾದ ವಿಭಾವಗಳಿಂದ ಉತ್ಪನ್ನವಾಗುತ್ತದೆ. ಅದನ್ನು ಕಾರಣವಿಲ್ಲದೆ ನಗುವುದು, ಅಳುವುದು, ರೋಧಿಸುವುದು, ಅಸಂಬದ್ಧವಾಗಿ ಮಾತನಾಡುವುದು, ಮಲಗುವುದು, ಕುಳಿತುಕೊಳ್ಳುವುದು, ಓಡುವುದು, ನಟಿಸುವುದು, ಓದುವುದು, ಬೂದಿಯನ್ನೋ, ಧೂಳನ್ನೋ ಹಚ್ಚಿಕೊಳ್ಳುವುದು, ಹುಲ್ಲು, ನಿರ್ಮಾಲ್ಯ (ಧರಿಸಿದ ಹೂವುಗಳು), ಚಿಂದಿ ಬಟ್ಟೆಗಳು, ಸೀರೆ, ಬಿಂದಿಗೆ, ಬಟ್ಟಲು, ಮಡಕೆಮುಚ್ಚಳ ಮುಂತಾದವುಗಳಿಂದ ಅಲಂಕರಿಸಿಕೊಳ್ಳುವುದು, ಮತ್ತಹಾಸ, ವಿಚಿತ್ರವಾದ ವಿವಿಧ ರೀತಿಯ ಚೇಷ್ಟೆಗಳು ಮುಂತಾದ ಅನುಭಾವಗಳ ಮೂಲಕ ಅಭಿನಯಿಸಬೇಕು. ಈ ವಿಷಯಕ್ಕೆ ಸಂಬಂಧಿಸಿದಂತೆ ಎರಡು ಆರ್ಯಾಛಂದಸ್ಸಿನ ಶ್ಲೋಕಗಳಿವೆ–

"ಉನ್ಮಾದವು ಪ್ರಿಯಜನರ ಅಗಲಿಕೆ, ಸಂಪತ್ತಿನ ನಾಶ, ವಿಪತ್ತು ಬಂದೊದಗುವುದು, ವಾತ, ಪಿತ್ತ ಮತ್ತು ಕಫಗಳ ವಿಕಾರ. ವಿವಿಧ ಮನೋವಿಕಾರಗಳು ಮುಂತಾದವುಗಳಿಂದ ಉಂಟಾಗುತ್ತದೆ. "ಅದನ್ನು ಅಕಾರಣವಾಗಿ ನಗುವುದು, ಅಳುವುದು, ಕುಳಿತುಕೊಳ್ಳುವುದು, ಹಾಡುವುದು, ಓಡುವುದು, ಜೋರಾಗಿ ಅಳುವುದು ಮತ್ತು ಇತರ ವಿಚಿತ್ರ ಚೇಷ್ಟೆಗಳಿಂದ ಅಭಿನಯಿಸಬೇಕು."

---

[84] ಧನಂಜಯನ ದಶರೂಪಕ (ಕನ್ನಡ ಅನುವಾದ) – ಕೆ.ವಿ.ಸುಬ್ಬಣ್ಣ – ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ ತಾಲ್ಲೂಕು – 2014

ಉನ್ಮಾದವೆಂದರೆ ಹುಚ್ಚು, ಅದು ಪ್ರಿಯಜನರ ವಿಯೋಗ, ಸಂಪತ್ತಿನ ನಾಶ, ವಾತ, ಪಿತ್ತ ಮತ್ತು ಕಫಗಳೆಂಬ ತ್ರಿಧಾತುಗಳ ವಿಕಾರ ಮುಂತಾದವುಗಳಿಂದ ಉತ್ಪನ್ನವಾಗುತ್ತದೆ. ಉನ್ಮಾದದ ಅನುಭಾವಗಳು ಬಹು ವಿಧವಾದವುಗಳು. ಏಕೆಂದರೆ ಹುಚ್ಚನ ವರ್ತನೆಯನ್ನು ಇಷ್ಟೇ ಎಂದು ಹೇಳಲು ಸಾಧ್ಯವಿಲ್ಲ. ಮಾದರಿಗಾಗಿ ಇಲ್ಲಿ ಕೆಲವು ಅನುಭಾವಗಳನ್ನು ಇಲ್ಲಿ ಭರತನು ಉಲ್ಲೇಖಿಸಿದ್ದಾನೆ. ಕಾರಣವಿಲ್ಲದೆ ನಗುವುದು, ಅಳುವುದು, ಕೂಗುವುದು, ಅಸಂಬದ್ಧವಾಗಿ ಮಾತನಾಡುವುದು ಮುಂತಾದವು. ವಿಶೇಷವಾಗಿ ಹುಲ್ಲು, ನಿರ್ಮಾಲ್ಯ, ಮಣ್ಣಿನಗಡಿಗೆಗಳು, ಮುಚ್ಚಳಗಳು ಮುಂತಾದವುಗಳಿಂದ ಅಲಂಕಾರ ಮಾಡಿಕೊಳ್ಳುವುದು ಹುಚ್ಚರ ವಿಶೇಷ. ಇವೆಲ್ಲಾ ಅನುಭಾವಗಳ ಜೊತೆಗೆ ಹಾಡುವುದು, ಕುಣಿಯುವುದು, ಬೂದಿ ಬಳಿದುಕೊಳ್ಳುವುದು ಮುಂತಾದವು ಹುಚ್ಚರ ವೈವಿಧ್ಯಮಯ ಚಟುವಟಿಕೆಗಳನ್ನು ಹೃದಯಂಗಮವಾಗಿ ಬಿಂಬಿಸುವವು.

31. **मरणम्**

मरणं नाम–व्याधिजमभिघातजञ्च । तत्र यदान्त्रयकृच्छूल दोषवैषम्यगण्डपिटकज्वरविषूचिकादिभिरुत्पद्यतेतद्व्याघिप्रभवम् । अभिघातजं तु शस्त्राहिदंशविषपानश्वापदगजतुरगरथपशुयानपातविनाशप्रभवम् । एतयोरभिनयविशेषान्वक्ष्यामः– तत्र व्याधिजं विषण्णगात्रव्यायताङ्गविचेष्टितनिमीलितनयनहिक्काश्वासोपेतानवेक्षितपरिजनाव्यक्ता–क्षरकथनादिभिरनुभावैरभिनयेत् । अत्र श्लोको भवति–

व्याधीनामेकभावो हि मरणाभिनयः स्मृतः ।
विषण्णगात्रैर्निश्चेष्टैरिन्द्रियैश्च विवर्जितः ॥

अभिघातजे तु नानाप्रकारा अभिनयविशेषाः शस्त्रक्षता हिदष्टविषपीतगजादिपतित–श्वापदहताः । यथा तत्र शस्त्रक्षते तावत्सहसाभूमिपतनवेपनस्फुरणादिभिरभिनयः प्रयोक्तव्यः । अहिदष्टविषपीतयोर्विषवेगो यथा कार्श्यवेपथुविदाहहिक्काफेनस्कन्धभङ्गजडतामरणानीत्यष्टौ विषवेगाः । अत्र श्लोकौ भवतः–

काश्यं तु प्रथमे वेगे द्वितीये वेपथुर्भवेत् ।
दाहं तृतीये हिक्कां च चतुर्थे सम्प्रयोजयेत् ॥
फेनं च पञ्चमे कुर्यात्षष्ठे स्कन्धस्य भञ्जनम् ।
जडतां सप्तमे कुर्यादष्टमे मरणं भवेत् ॥

अत्रार्या भवति–

श्वापदगजतुरगरथोद्भवं तु पशुयानपतनजं वापि ।
शस्त्रक्षतवत्कुर्यादनवेक्षितगात्रसञ्चारम् ॥
इत्येवं मरणं ज्ञेयं नानावस्थान्तरात्मकम् ।
प्रयोक्तव्यं बुधैः सम्यग्यथा भावाङ्गचेष्टितैः ॥

"ಮರಣವೆಂಬುದು ವ್ಯಾಧಿಗಳಿಂದ ಉಂಟಾದುದು (ವ್ಯಾಧಿಜ) ಮತ್ತು ಆಘಾತಗಳಿಂದ ಉಂಟಾದುದು(ಅಭಿಘಾತಜ) ಎಂದು ಎರಡು ವಿಧ. ಯಾವ ಮರಣವು ಕರುಳು, ವಪೆಗಳಲ್ಲಿನ ದೋಷ, ವಾತ, ಪಿತ್ತ ಮತ್ತು ಕಫಗಳ ವಿಕಾರ, ಹುಣ್ಣು, ಕುರು, ಜ್ವರ, ವಿಷೂಚಿ (ಅತಿಸಾರ, ಕಾಲರಾ) ಮುಂತಾದವುಗಳಿಂದ ಉಂಟಾಗುವುದೋ ಅದು ವ್ಯಾಧಿಜ. ಅಭಿಘಾತಜ ಮರಣವೆಂಬುದು ಶಸ್ತ್ರ, ಹಾವಿನ ಕಡಿತ, ವಿಷಪಾನ, ಕ್ರೂರಮೃಗ, ಗಜ, ಅಶ್ವ, ರಥ, ಎತ್ತಿನಗಾಡಿಯಿಂದ ಪತನ, ವಿನಾಶನಗಳಿಂದ ಉಂಟಾದುದು. ಇವೆರಡು ತರಹದ ಮರಣಗಳ ಅಭಿನಯ ವಿಶೇಷಗಳನ್ನು ಹೇಳುತ್ತೇವೆ. ಅವುಗಳಲ್ಲಿ ವ್ಯಾಧಿಜ ಮರಣವನ್ನು ದುಃಖತಪ್ತ ದೇಹ, ಶಾರೀರಿಕ ಚಟುವಟಿಕೆಯ ಸ್ತಂಭನ, ಕಣ್ಣುಮುಚ್ಚುವುದು, ಬಿಕ್ಕುವುದು, ದೀರ್ಘವಾಗಿ ಉಸಿರಾಡುವುದು, ಪರಿಜನರನ್ನು ತಿರಸ್ಕರಿಸುವುದು, ಅಸ್ಪಷ್ಟವಾದ ಮಾತು ಮುಂತಾದ ಅನುಭಾವಗಳ ಮೂಲಕ ಅಭಿನಯಿಸಬೇಕು. ಈ ವಿಷಯದಲ್ಲಿ ಒಂದು ಶ್ಲೋಕವಿದೆ–

"ವ್ಯಾಧಿಗಳ ಒಂದು ಸ್ಥಿತಿಯು ಮರಣದ ಅಭಿನಯವೆಂದು ತಿಳಿಯಬೇಕು. ಅದನ್ನು ದುಃಖತಪ್ತವಾದ ಶರೀರ ಮತ್ತು ಇಂದ್ರಿಯಗಳ ವ್ಯವಹಾರಗಳಿಂದ ಮುಕ್ತವಾಗಿ ಪ್ರಯೋಗಿಸಬೇಕು." "ಅಭಿಘಾತಜ ಮರಣದ ವಿಷಯದಲ್ಲಿ ಶಸ್ತ್ರದಗಾಯ, ಹಾವಿನ ಕಡಿತ, ವಿಷಪಾನ, ಗಜ ಮುಂತಾದವುಗಳಿಂದ ಬೀಳುವುದು, ಕ್ರೂರಮೃಗಗಳಿಂದ ಹತವಾಗುವುದು, ಇತ್ಯಾದಿಯಾಗಿರುವ ನಾನಾ ಪ್ರಕಾರದ ಅಭಿನಯ ವಿಶೇಷಗಳಿವೆ. ಹೇಗೆಂದರೆ ಅವುಗಳಲ್ಲಿ ಶಸ್ತ್ರದ ಗಾಯದ ವಿಷಯದಲ್ಲಿ ಕೂಡಲೆ ನೆಲದ ಮೇಲೆ ಬೀಳುವುದು, ವೇಪನ, ಒದ್ದಾಡುವುದು ಮುಂತಾದವುಗಳ ಮೂಲಕ ಅದರ ಅಭಿನಯವನ್ನು ಪ್ರದರ್ಶಿಸಬೇಕು. ಹಾವಿನ ಕಡಿತ ಮತ್ತು

ವಿಷಪಾನಗಳಿಂದ ಆದ ವಿಷದ ವೇಗವು (ಪ್ರಭಾವವು) ಹೇಗೆಂದರೆ–ಕಾರ್ಶ್ಯ, ವೇಪಥು, ವಿದಾಹ, ಹಿಕ್ಕಾ (ಬಿಕ್ಕು), ಫೇನ (ಬುರುಗು), ಸ್ಕಂಧ ಭಂಗ (ಹೆಗಲು ಕುಸಿಯುವುದು), ಜಡತ್ವ, ಮರಣ ಎಂದು ಎಂಟು ವಿಷವೇಗಗಳು.

"ಮೊದಲ ವೇಗದಲ್ಲಿ ಕಾರ್ಶ್ಯ, ಎರಡನೆಯದರಲ್ಲಿ ವೇಪಥು (ನಡುಕ), ಮೂರನೆಯದರಲ್ಲಿ ವಿದಾಹ (ಸುಡುವ ಅನುಭವ), ನಾಲ್ಕನೆಯದರಲ್ಲಿ ಬಿಕ್ಕನ್ನು ಅಭಿನಯಿಸಬೇಕು. ಐದನೆಯದರಲ್ಲಿ ಫೇನ (ಬರುಗು) ವನ್ನುಂಟುಮಾಡಬೇಕು. ಆರನೆಯದರಲ್ಲಿ ಸ್ಕಂಧಭಂಗ, ಏಳನೆಯದಲ್ಲಿ ಜಡತ್ವ ಮತ್ತು ಎಂಟನೆಯದರಲ್ಲಿ ಮರಣವು ಆಗಬೇಕು.

"ಕ್ರೂರಮೃಗ, ಆನೆ, ಕುದುರೆ, ರಥಗಳಿಂದ ಆದ ಮತ್ತು ಎತ್ತಿನಗಾಡಿ ಯಿಂದಾದ ಮರಣವನ್ನು ಶಸ್ತ್ರದ ಗಾಯದಿಂದಾದ ಮರಣದಂತೆ ಚಲನೆಯಿಲ್ಲದ ದೇಹದ ಮೂಲಕ ಪ್ರದರ್ಶಿಸಬೇಕು. "ಹೀಗೆ ಮರಣವನ್ನು ಅನೇಕ ಅವಸ್ಥೆಗಳನ್ನೊಳಗೊಂಡುದೆಂದು ತಿಳಿಯಬೇಕು. ನಿಪುಣರಾದ ನಟರು ಯೋಗ್ಯವಾದ ಅನುಭಾವಗಳು ಮತ್ತು ಶಾರೀರಿಕ ಅಭಿನಯಗಳಿಂದ ಅವುಗಳನ್ನು ಪ್ರಯೋಗಿಸಬೇಕು." ಮರಣವೆಂದರೆ ಸಾವು, ಸಾವಿನ ಸ್ಥಿತಿ. **"मरणं प्रकृतिः शरीरिणाम्"**[85] **"सम्भावितस्य चाकीर्तिर्मरणादतिरिच्यते"**

ಅದು ರೋಗದಿಂದಲೋ ಅಪಘಾತದಿಂದಲೋ ಉಂಟಾದ ಒಂದು ಸ್ಥಿತಿ. ರೋಗದ (ವ್ಯಾಧಿಯ) ಕಾರಣದಿಂದಾದ ಮರಣವು ವ್ಯಾಧಿಜ ಮತ್ತು ಅಪಘಾತದ ಕಾರಣದಿಂದಾದ ಮರಣವು ಅಭಿಘಾತಜ. ಯಾವುದು ಕರುಳು, ವಪೆ ಮುಂತಾದವುಗಳ ದೋಷದಿಂದ, ವಾತ, ಪಿತ್ತ, ಕಫಗಳೆಂಬ ತ್ರಿಧಾತು ವಿಕಾರದಿಂದ, ಗೆಡ್ಡೆ, ವ್ರಣ, ಜ್ವರ, ಅತಿಸಾರ (ಕಾಲರಾ) ಮುಂತಾದ ವ್ಯಾಧಿಗಳಿಂದ ಉಂಟಾದುದೋ ಅದು ವ್ಯಾಧಿಜ ಮರಣ. ಯಾವುದು ಶಸ್ತ್ರಘಾತದಿಂದ, ಹಾವಿನ ಕಡಿತದಿಂದ, ವಿಷಪಾನದಿಂದ, ಕ್ರೂರಮೃಗಗಳಿಂದ, ಆನೆ ಮುಂತಾದವುಗಳಿಂದ ಮತ್ತು ಎತ್ತಿನ ಗಾಡಿಯಿಂದ ಬೀಳುವುದರಿಂದ ಉಂಟಾದುದೋ ಅದು ಅಭಿಘಾತಜ ಮರಣ.

ವ್ಯಾಧಿಜ ಮರಣವನ್ನು ಚೈತನ್ಯರಹಿತ ದೇಹ, ಶಾರೀರಿಕ ಚಲನೆಯ ಸ್ತಂಭನ, ಕಣ್ಣುಗಳನ್ನು ಮುಚ್ಚಿಕೊಳ್ಳುವುದು, ಬಿಕ್ಕು, ಸೇವಕರೆಡೆ ಗೊಣಗುವುದು, ಅಸ್ಪಷ್ಟವಾದ ಮಾತು

---

[85] रघुवंश महाकवि कालिदास, मोतिलाल बनारसी दास, जैनेन्द्रप्रकाश जैन, श्रीजैनेन्द्र प्रेस नई दिल्लि १९८७

ಮುಂತಾದವುಗಳ ಮೂಲಕ ಅಭಿನಯದಲ್ಲಿ ಪ್ರಯೋಗಿಸಬೇಕು. ಇದಕ್ಕೆ ಸಂಬಂಧಿಸಿದ ಶ್ಲೋಕದಲ್ಲಿ ವ್ಯಾಧಿಜ ಮರಣವನ್ನು ಚೇತನರಹಿತ ಶರೀರ, ಇಂದ್ರಿಯಗಳ ವ್ಯಾಪಾರ ನಿಲ್ಲುವುದು ಮುಂತಾದವುಗಳಿಂದ ಅಭಿನಯಿಸುವುದು ಒಂದು ರೀತಿಯದಾದರೆ, ಅಭಿಘಾತಜ ಮರಣವನ್ನು ಅಭಿನಯಿಸುವುದು ಬಹು ವಿಧವಾದ ಅನುಭಾವಗಳಿಂದ. ಶಸ್ತ್ರಘಾತ ಮುಂತಾದವುಗಳಿಂದ ಅಭಿಘಾತಜ ಮರಣ ಸಂಭವಿಸುವುದೆಂದು ಹೇಳಿದೆ. ಅವುಗಳಲ್ಲಿ ಶಸ್ತ್ರಘಾತದಿಂದಾದ ಮರಣವನ್ನು ಭೂಮಿಯ ಮೇಲೆ ಕೂಡಲೇ ಬೀಳುವುದು, ಕಂಪಿಸುವುದು ಮುಂತಾದವುಗಳ ಮೂಲಕ ಅಭಿನಯಿಸಬೇಕು. ಹಾವಿನ ಕಡಿತ ಮತ್ತು ವಿಷಪಾನಗಳಿಂದಾದ ಮರಣದ ಅಭಿನಯವು ಎಂಟು ಪ್ರಕಾರಗಳ ವಿಷವೇಗ ಪರಿಣಾಮಗಳಿಗೆ ಅನುಗುಣವಾಗಿ ಅಭಿನಯಿಸಬೇಕು. ವಿಷವೇಗಗಳು ಎಂಟು. ಮೊದಲನೆಯ ವೇಗದಲ್ಲಿ ಕಾರ್ಶ್ಯ (ದೇಹದ ಕೃಶತೆ), ಎರಡನೆಯದರಲ್ಲಿ ವೇಪಥು (ಕಂಪನ), ಮೂರನೆಯದರಲ್ಲಿ ವಿದಾಹ (ಉರಿಯುವ ಅನುಭವ), ನಾಲ್ಕನೆಯದರಲ್ಲಿ ಬಿಕ್ಕು (ಹಿಕ್ಕಾ), ಐದನೆಯದರಲ್ಲಿ ಫೇನ (ಬುರುಗು) ಬಾಯಿಂದ ಬರುವುದು, ಆರನೆಯದರಲ್ಲಿ ಸ್ಕಂಧಭಂಗ (ಹೆಗಲು ಶಿಥಿಲವಾಗುವುದು), ಏಳನೆಯದರಲ್ಲಿ ನಿಶ್ಚೇತನವಾಗುವುದು ಮತ್ತು ಎಂಟನೆಯದರಲ್ಲಿ ಮರಣ. ಇವುಗಳನ್ನು ಸೂಕ್ತವಾಗಿ ಅಭಿನಯಿಸಬೇಕು. ಮತ್ತೆರಡು ಶ್ಲೋಕಗಳು ಅಭಿಘಾತಜ ಮರಣವನ್ನು ಕುರಿತು ಸಂಕ್ಷೇಪವಾಗಿ ಹೇಳುತ್ತವೆ. ಆನೆ ಮುಂತಾದವುಗಳ ಮೇಲಿನಿಂದ ಬೀಳುವುದರಿಂದ ಉಂಟಾದ ಮರಣವನ್ನು ಶಸ್ತ್ರಘಾತಜ ಮರಣದಂತೆ ಅದರ ಅನುಭಾವಗಳಾದ ನೆಲದ ಮೇಲೆ ಕೂಡಲೇ ಬೀಳುವುದು ಮುಂತಾದವುಗಳಿಂದ ಅಭಿನಯಿಸಬೇಕು.

## 32. **त्रासः**

त्रासो नाम– विद्युदुल्काशनिपातनिर्घाताम्बुधरमहासत्त्वपशुरवादिभिर्विभावैरुत्पद्यते । तमभिनयेत् सङ्क्षिप्ताङ्गोत्कम्पनवेपथुस्तम्भरोमाञ्चगद्गदप्रलापादिभिरनुभावैः । अत्र श्लोको भवति–

महाभैरवनादाद्यैस्त्रासः समुपजायते ।
स्रस्ताङ्गाक्षिनिमेषैश्च तस्य त्वभिनयो भवेत् ॥

“ತ್ರಾಸವೆಂಬುದು ಮಿಂಚು, ಉಲ್ಕೆಗಳು ಬೀಳುವುದು, ಸಿಡಿಲು ಹೊಡೆಯುವುದು, ಭೂಕಂಪ, ಕ್ರೂರಮೃಗಗಳ ಸ್ವರ ಮುಂತಾದ ವಿಭಾವಗಳಿಂದ ಉಂಟಾಗುತ್ತದೆ. ಅದನ್ನು

ಅಂಗಾಂಗಗಳ ಮುದುಡುವಿಕೆ, ನಡುಗುವುದು, ಕಂಪಿಸುವುದು, ಸ್ತಂಬನ, ರೋಮಾಂಚನ, ಗದ್ಗದ, ಪ್ರಲಾಪ ಮುಂತಾದ ಅನುಭಾವಗಳ ಮೂಲಕ ಅಭಿನಯಿಸಬೇಕು. ಈ ವಿಷಯದಲ್ಲಿ ಒಂದು ಶ್ಲೋಕವಿದೆ–

"ಬಹಳ ಭಯಂಕರವಾದ ಶಬ್ದ ಮುಂತಾದವುಗಳಿಂದ ತ್ರಾಸವು ಉತ್ಪನ್ನವಾಗುತ್ತದೆ. ಅದರ ಅಭಿನಯವು ಅಂಗಗಳ ಶಿಥಿಲತೆ, ಕಣ್ಣು ಬಡಿಯುವುದು ಮುಂತಾದವುಗಳ ಮೂಲಕ ಆಗಬೇಕು." ತ್ರಾಸವೆಂದರೆ ಭಯ, ಭೀತಿ, ಚಕಿತಗೊಳ್ಳುವುದು.

**"अन्तः कञ्चुकिकञ्चुकस्य विशति त्रासादयं वामनः"**[86]

ಅದರ ವಿಭಾವಗಳು ಮಿಂಚು, ಉಲ್ಕಾಪಾತ, ಸಿಡಿಲುಬಡಿಯುವುದು, ಭೂಕಂಪ, ಕ್ರೂರಮೃಗಗಳ ಶಬ್ದ ಮುಂತಾದವು. ಅಂಗಾಂಗಗಳನ್ನು ಮುದುಡಿಕೊಳ್ಳುವುದು, ನಡುಗುವುದು, ಕಂಪಿಸುವುದು, ಸ್ತಂಭ, ರೋಮಾಂಚ ಇತ್ಯಾದಿಗಳು ಅನುಭಾವಗಳು. ಶ್ಲೋಕದಲ್ಲಿ ಭಯಂಕರ ಶಬ್ದವನ್ನು ವಿಭಾವವಾಗಿಯೂ, ಅಂಗಾಂಗಗಳ ಶಿಥಿಲತೆ, ಕಣ್ಣುಮುಚ್ಚಿಕೊಳ್ಳುವುದು ಮುಂತಾದವನ್ನು ಅನುಭಾವಗಳಾಗಿಯೂ ಹೇಳಲಾಗಿದೆ.

33. **वितर्कः :**

वितर्को नाम– सन्देहविमर्शप्रतिपत्त्यादिभिर्विभावैरुत्पद्यते । तमभिनयेद्विविधविचारितप्र–श्नसम्प्रधारणमन्त्रसङ्गूहनादिभिरनुभावैः । अत्र श्लोको भवति–

विचारणादिसम्भूतः सन्देहातिशयात्मकः ।
वितर्कः सोऽभिनेयस्तु शिरोभ्रूक्षेपकम्पनैः ॥

"ವಿತರ್ಕವೆಂಬುದು ಸಂಶಯ, ವಿಚಾರಣೆ, ವಿವಾದ ಮುಂತಾದ ವಿಭಾವಗಳಿಂದ ಉಂಟಾಗುತ್ತದೆ. ಅದನ್ನು ವಿವಿಧ ಚರ್ಚೆ, ಪ್ರಶ್ನೆ, ನಿಶ್ಚಯ, ರಹಸ್ಯದ ಆಲೋಚನೆಯನ್ನು ರಹಸ್ಯವಾಗಿಡುವುದು ಮುಂತಾದ ಅನುಭಾವಗಳ ಮೂಲಕ ಅಭಿನಯಿಸಬೇಕು. ಈ ವಿಷಯಕ್ಕೆ ಸಂಬಂಧಿಸಿದಂತೆ ಇಲ್ಲೊಂದು ಶ್ಲೋಕವಿದೆ–

[86] Ratnavali,Harshavardhana, srisachandra chakravarti, publisher Hari ramadhar -1902

"ವಿಚಾರಣೆ(ಚಿಂತನೆ) ಮುಂತಾದವುಗಳಿಂದ ಉಂಟಾದ, ಸಂದೇಹದ ಅತಿಶಯ ಸ್ವರೂಪವುಳ್ಳ ವಿತರ್ಕವು ತಲೆಯನ್ನು ಅಲ್ಲಡಿಸುವುದು, ಹುಬ್ಬೇರಿಸುವುದು ಮುಂತಾದವುಗಳ ಮೂಲಕ ಅಭಿನಯಿಸಲ್ಪಡಬೇಕು."

ವಿತರ್ಕವೆಂದರೆ ವಾದಮಾಡುವುದು, ಹೇತುವಿಚಾರ, ಅನುಮಾನ, ವಿಮರ್ಶೆ, ಚರ್ಚೆ. ಅದರ ವಿಭಾವಗಳೆಂದರೆ ಸಂಶಯ, ವಿಮರ್ಶೆ. ಅದರ ಅನುಭಾವಗಳು, ಪ್ರಶ್ನೆಕೇಳುವುದು, ನಿರ್ಧಾರಕ್ಕೆ ಬರುವುದು, ರಹಸ್ಯ ಮಂತ್ರಾಲೋಚನೆ ಮಾಡುವುದು ಮುಂತಾದವು. ಈ ಸಂಬಂಧದಲ್ಲಿ ಬಂದ ಶ್ಲೋಕವು ವಿತರ್ಕವನ್ನು ಸಂದೇಹಸ್ವರೂಪದ್ದು ಎಂದು ಹೇಳಿ, ಅದನ್ನು ತಲೆಯನ್ನು ಅಲ್ಲಾಡಿಸುವುದು, ಹುಬ್ಬೇರಿಸುವುದು ಮುಂತಾದವುಗಳ ಮೂಲಕ ಅಭಿನಯದಲ್ಲಿ ಪ್ರಯೋಗಿಸಬೇಕು ಎಂದು ತಿಳಿಸುತ್ತದೆ.

एवमेते त्रयस्त्रिंशद्व्यभिचारिणो भावा देशकालावस्थारुप्येणात्मगतपरगतमध्यस्था उत्तममध्यमाधमैः स्त्रीपुंसैः स्वप्रयोगवशादुपपाद्या इति ।

त्रयस्त्रिंशदिमे भावा विज्ञेया व्यभिचारिणः ।

सात्त्विकांस्तु पुनर्भावान्वक्ष्याम्यनुपूर्वशः ॥[೮೭]

"ಹೀಗೆ ಇವು ಮುವತ್ಮೂರು ವ್ಯಭಿಚಾರಿಭಾವಗಳು. ಇವುಗಳನ್ನು ದೇಶ-ಕಾಲ ಪರಿಸ್ಥಿತಿಗಳಿಗೆ ಅನುಗುಣವಾಗಿ ಸ್ವಗತ, ಪರಗತ ಅಥವಾ ಮಧ್ಯಸ್ಥರಿಗೆ ಸಂಬಂಧಿಸಿದಂತೆ ಉತ್ತಮ, ಮಧ್ಯಮ ಮತ್ತು ಅಧಮ ಪಾತ್ರಗಳನ್ನು ಧರಿಸಿದ ನಟಿಯರು ಮತ್ತು ನಟರಿಂದ ತಮ್ಮ ಪ್ರಯೋಗ ಕೌಶಲದಿಂದ ಅಭಿನಯಿಸಬೇಕು. "ಈ ಮೂವತ್ಮೂರು ಭಾವಗಳನ್ನು ವ್ಯಭಿಚಾರಿಭಾವಗಳೆಂದು ತಿಳಿಯಬೇಕು. ಮತ್ತೆ ಈಗ ಸಾತ್ತ್ವಿಕಭಾವಗಳನ್ನು ಕ್ರಮವಾಗಿ ಹೇಳುತ್ತೇನೆ."

ಹೀಗೆ ಭರತನು ಮೂವತ್ಮೂರು ವ್ಯಭಿಚಾರಿಭಾವಗಳ ನಿರೂಪಣೆಯನ್ನು ಉಪಸಂಹರಿಸಿದ್ದಾನೆ ಮತ್ತು ಮುಂದೆ ಸಾತ್ತ್ವಿಕಭಾವಗಳ ನಿರೂಒಪಣೆಯನ್ನು ಹೇಳುತ್ತೇನೆ ಎಂದು ಮುಂದಿನ ಶೀರ್ಷಿಕೆಯನ್ನು ಸೂಚಿಸಿದ್ದಾನೆ. ಇಲ್ಲಿಯವರೆಗೆ ಹೇಳಿದ ವ್ಯಭಿಚಾರಿಭಾವಗಳನ್ನು ಅಭಿನಯದಲ್ಲಿ ತರಬೇಕೆಂದು ಹೇಳಿದ್ದಾನೆ. ಅಭಿನಯವು ರಂಗಭೂಮಿಯ ಮೇಲೆ ಬರುವ ಪಾತ್ರಗಳ ಸ್ವಭಾವಕ್ಕೆ ಅನುಗುಣವಾಗಿರಬೇಕು. ಬೇರೆ ಬೇರೆ

---

[87] ನಾಟ್ಯಶಾಸ್ತ್ರ-ಆದ್ಯ ರಂಗಾಚಾರ್ಯ.ಅಕ್ಷರ ಪ್ರಕಾಶನ ಹೆಗ್ಗೋಡು 2003

ಸ್ವಭಾವದ ಪಾತ್ರಗಳನ್ನು ಬೇರೆ ಬೇರೆ ರೀತಿಯ ಅಭಿನಯದ ಮೂಲಕ ಪ್ರತಿನಿಧಿಸಬೇಕು. ಸ್ವಭಾವಕ್ಕೆ ಅನುಗುಣವಾಗಿ ಪಾತ್ರಗಳು ಮೂರು ವಿಧ. ಅವು ಉತ್ತಮ, ಮಧ್ಯಮ ಮತ್ತು ಅಧಮ ಪ್ರಕೃತಿಗಳವು. ಉತ್ತಮ ಮತ್ತು ಮಧ್ಯಮ ಪ್ರಕೃತಿಯ ಪಾತ್ರಗಳು ತಮ್ಮ ದೃಢತೆ ಮತ್ತು ಧೈರ್ಯಗಳಿಂದ ಪರಿಗಣಿತವಾದವುಗಳು. ಈ ಪಾತ್ರಗಳಿಗೆ ಸಂಬಂಧಿಸಿದಂತೆ ಯಾವುದೇ ಭಾವವನ್ನು ಅಭಿನಯದಲ್ಲಿ ತರುವಾಗಲೂ ಒಂದು ರೀತಿಯ ನಿಯಂತ್ರಣವನ್ನು ಇಟ್ಟುಕೊಂಡಿರಬೇಕು. ಅವುಗಳಿಗೆ ತಕ್ಕಂತೆ ಅಭಿನಯಕ್ಕೆ ಅನುಭಾವಗಳನ್ನು ಆಯ್ದುಕೊಳ್ಳಬೇಕು. ಹಾಗೆಯೇ ಅಧಮ ಪ್ರಕೃತಿಯ ಪಾತ್ರಗಳ ಭಾವಗಳನ್ನು ಅಭಿನಯಿಸುವಾಗ ಅವುಗಳಿಗೆ ಸೂಕ್ತವಾದ ಅನುಭಾವಗಳನ್ನು ಆಯ್ದುಕೊಳ್ಳಬೇಕು. ಅವುಗಳ ವಿಷಯದಲ್ಲಿ ಭಾವಗಳನ್ನು ಹೆಚ್ಚು ಜೋರಾಗಿ ಮತ್ತು ಹೆಚ್ಚು ಎದ್ದು ಕಾಣುವಂತೆ ಅಭಿನಯಿಸಲು ಯೋಗ್ಯವಾದ ಅನುಭಾವಗಳನ್ನು ಆಯ್ದುಕೊಳ್ಳಬೇಕು.

ಭರತನು ಈ ಅಂಶಕ್ಕೆ ಅನೇಕ ಭಾವಗಳನ್ನು ವಿವರಿಸುವ ಸಂದರ್ಭದಲ್ಲಿ ಗಮನವಿತ್ತಿದ್ದಾನೆ. ಉದಾಹರಣೆಗೆ ನಿರ್ವೇದದ ಬಗ್ಗೆ ಹೇಳುವಾಗ, ಬಡತನ ಮುಂತಾದ ಪರಿಸ್ಥಿತಿಗಳಿಂದ ಹುಟ್ಟಿದ ನಿರ್ವೇದವು ಸ್ತ್ರೀಯರು ಮತ್ತು ನೀಚ ಪ್ರಕೃತಿಯ ಜನರಿಗೆ ಸಂಬಂಧಿಸಿದುದು ಎಂದು ಹೇಳಿ, ತತ್ತ್ವಜ್ಞಾನದಿಂದ ಉಂಟಾಗುವ ನಿರ್ವೇದವು ಉತ್ತಮ ಮತ್ತು ಮಧ್ಯಮ ಪ್ರಕೃತಿಗಳ ಜನರಿಗೆ ಸಂಬಂಧಿಸಿದುದು ಎಂದು ಸೂಚಿಸಿದ್ದಾನೆ. ಶಂಕೆಯ ಬಗ್ಗೆ ಹೇಳುವಾಗ, ಅವನು ಅದನ್ನು ಸ್ತ್ರೀಯರು ಮತ್ತು ನೀಚ ಪ್ರಕೃತಿಯವರಿಗೆ ಸಂಬಂಧಿಸಿದಂತೆ ಅಭಿನಯಿಸಬೇಕೆಂದು ಹೇಳಿದ್ದಾನೆ. ಮತ್ತೆ ಮದದ ಸ್ವರೂಪವನ್ನು ನಿರೂಪಿಸುವಾಗ, ಅದನ್ನು ತರುಣಮದ, ಮಧ್ಯಮದ ಮತ್ತು ಅಧಮ(ಅಥವಾ ಅವಕೃಷ್ಟ)ಮದವೆಂದು ಮೂರು ವಿಧವಾಗಿ ಪರಿಗಣಿಸಿದ್ದಾನೆ. ಹಾಡುವುದು, ಅಳುವುದು, ನಗುವುದು, ಕಟು ಮಾತುಗಳನ್ನಾಡುವುದು ಮತ್ತು ನಿದ್ರಿಸುವುದು ಎಂಬವು ಐದು ರೀತಿಯ ಮದದ ಭಾವಗಳು. ಈ ಸಂದರ್ಭದಲ್ಲಿ ಭರತನು ಉತ್ತಮ ಪ್ರಕೃತಿಯವರು ನಿದ್ರಿಸುವರು, ಮಧ್ಯಮ ಪ್ರಕೃತಿಯವರು ನಗುತ್ತಾರೆ ಅಥವಾ ಹಾಡುತ್ತಾರೆ ಮತ್ತು ನೀಚ ಪ್ರಕೃತಿಯವರು ಕಟುವಾದ ಮಾತುಗಳನ್ನಾಡುತ್ತಾರೆ ಅಥವಾ ರೋದಿಸುತ್ತಾರೆ ಎಂದು ಹೇಳಿದ್ದಾನೆ. ನಗುವಿನಿಂದ ಕೂಡಿದ ಮಾತುಳ್ಳ, ಮಧುರಧ್ವನಿಯಿಂದ ಕೂಡಿದ, ಪ್ರಸನ್ನವಾದ ಮುಖಭಾವವುಳ್ಳ ಮತ್ತು ಸ್ವಲ್ಪಮಾತ್ರ ತೊದಲು ಮಾತುಗಳುಳ್ಳ ತರುಣ ಮದವು ಉತ್ತಮ ಪ್ರಕೃತಿಯವರಿಗೆ ಸೇರಿದ್ದು, ಕಣ್ಣುಗಳನ್ನು ತಿರುಗಿಸುವುದು, ಭುಜಗಳು ಕುಸಿದಂತಿರುವುದು, ವಕ್ರವಾದ ನಿಲುವು ಮುಂತಾದ ಲಕ್ಷಣಗಳುಳ್ಳ ಮಧ್ಯಮದವು ಮಧ್ಯಮ ಪ್ರಕೃತಿಯವರಿಗೆ ಸಂಬಂಧಿಸಿದುದು ಮತ್ತು ಸ್ಮರಣೆಯ ನಾಶ, ಎಡವುವನಡಿಗೆ, ಬಿಕ್ಕು, ಕಫವು

ಹೊಮ್ಮುವುದು ಮುಂತಾದ ಲಕ್ಷಣಗಳಿಂದ ಕೂಡಿದ ಅವಕೃಷ್ಟಮದವು ಅಧಮ ಪ್ರಕೃತಿಯವರಿಗೆ ಸೇರಿದುದು ಎಂದು ತಿಳಿಸಿದ್ದಾನೆ. ಆವೇಗಕ್ಕೆ ಸಂಬಂಧಿಸಿದಂತೆ ಅದನ್ನು ಉತ್ತಮ ಮತ್ತು ಮಧ್ಯಮ ಪ್ರಕೃತಿಯವರ ವಿಷಯದಲ್ಲಿ ಧೈರ್ಯದಿಂದ ಮತ್ತು ನೀಚ ಪ್ರಕೃತಿಯವರ ವಿಷಯದಲ್ಲಿ ಪಲಾಯನಾದಿಗಳಿಂದ ಎದುರಿಸಬೇಕು ಎಂದು ಹೇಳಿದ್ದಾನೆ. ಹಾಗೆಯೇ ಗರ್ವದ ವಿಷಯದಲ್ಲಿ ಹೇಳುವಾಗ, ಅದು ನೀಚಪ್ರಕೃತಿಯವರಿಗೆ ಸಂಬಂಧಿಸಿದುದು ಎಂದು ತಿಳಿಸಿದ್ದಾನೆ. ವಿಷಾದದ ವಿಷಯದಲ್ಲಿ ಹೇಳುತ್ತಾ ಅದನ್ನು ಉತ್ತಮ ಮತ್ತು ಮಧ್ಯಮ ಪ್ರಕೃತಿಯ ಜನರು ಬೇರೆ ಬೇರೆ ಪರಿಹಾರಗಳಿಂದ ಎದುರಿಸುವಂತೆಯೂ, ನೀಚ ಪ್ರಕೃತಿಯವರು ನಿದ್ರೆ, ದೀರ್ಘ ನಿಟ್ಟುಸಿರು ಮುಂತಾದವುಗಳಿಂದ ಎದುರಿಸುವಂತೆಯೂ ಪ್ರಯೋಗದಲ್ಲಿ ತರಬೇಕೆಂದು ತಿಳಿಸಿದ್ದಾನೆ.

ಭರತನ ಪ್ರಕಾರ ವ್ಯಭಿಚಾರಿಭಾವಗಳು ಆತ್ಮಗತ, ಪರಗತ ಮತ್ತು ಮಧ್ಯಸ್ಥಗತವೆಂದೂ, ಅವು ದೇಶ, ಕಾಲ, ಪರಿಸ್ಥಿತಿಗಳಿಗೆ ಅನುಗುಣವಾಗಿರಬೇಕೆಂದೂ ತಿಳಿಯಬೇಕು. ಇವುಗಳನ್ನು ಅಭಿನಯ ಮಾಡುವಾಗ ಈ ವಿಷಯವನ್ನು ಗಮನದಲ್ಲಿಟ್ಟುಕೊಳ್ಳಬೇಕು.

**ಸಾತ್ತ್ವಿಕ ಭಾವಗಳು :**

अत्राह–किमन्ये भावा सत्त्वेन विनाऽभिनीयन्ते यस्मादुच्यन्ते एते सात्त्विका इति? अत्रोच्यते–इह हि सत्त्वं नाम मनःप्रभवम् । तच्च समाहितमनस्त्वादुच्यते । मनसः समाधौ सत्त्वनिष्पत्तिर्भवति । तस्य च योऽसौ स्वभावो रोमाञ्चाश्रुवैवर्ण्यादिलक्षणो यथाभावोपगतः स न शक्योऽन्यमनसा कर्तुमिति । लोकस्वभावानुकरणत्त्वाच्च नाट्यस्य सत्त्वमीप्सितम् ।

को दृष्टान्तः? इह हि नाट्यधर्मिप्रवृत्ताः सुखदुःखकृता भावास्तथा सत्त्वविशुद्धाः कार्याः यथा सरूपा भवन्ति । तत्र दुःखं नाम रोदनात्मके तत्कथमदुःखितेन सुखं प्रहर्षात्मकमसुखितेन वाऽभिनेयम्? एतदेवास्य सत्त्वं यत् दुःखितेन सुखितेन वाऽश्रुरोमाञ्चौ दर्शयितव्यौ इति कृत्वा सात्त्विका भावा इत्यभिव्याख्याताः । त इमे–

स्तम्भः स्वेदोऽथ रोमाञ्चः स्वरभेदोऽथ वेपथुः ।

वैवर्ण्यमश्रु प्रलय इत्यष्टौ सात्त्विका मताः ॥[88]

"ಇಲ್ಲಿ ಹೀಗೆ ಪ್ರಶ್ನಿಸಬಹುದು–ಇವುಗಳಿಗೆ ಸಾತ್ತ್ವಿಕಭಾವಗಳೆಂದು ಹೆಸರಿದೆಯಲ್ಲಾ, ಹಾಗಂದರೆ ಬೇರೆಲ್ಲಾ ಭಾವಗಳನ್ನು 'ಸತ್ತ್ವ'ವಿಲ್ಲದೆ (ಆಂತರಿಕ ಶಕ್ತಿಯಿಲ್ಲದೆ) ಅಭಿನಯದಲ್ಲಿ ತರುವುದು ಸಾಧ್ಯವೇ? ಅದಕ್ಕೆ ಉತ್ತರ ಹೀಗಿದೆ–ಇಲ್ಲಿ 'ಸತ್ತ್ವ'ವೆಂದರೆ ಮನಸ್ಸಿನಿಂದ ಹುಟ್ಟಿದುದು. ಈ 'ಸತ್ತ್ವ'ವು ಮನಸ್ಸಿನ ಸಮಾಹಿತ (ಏಕಾಗ್ರತೆಯ) ಸ್ಥಿತಿಯಿಂದ ಉಂಟಾಗುತ್ತದೆ. ಏಕಾಗ್ರತೆ ಅಥವಾ ಸ್ಥಿರತೆಯಿಲ್ಲದ ಮನಸ್ಸಿನ ವ್ಯಕ್ತಿಗಳು ರತಿ ಮುಂತಾದ ಸ್ಥಾಯಿಭಾವಗಳಿಗೆ ಅನುಗುಣವಾದ ರೋಮಾಂಚ, ಅಶ್ರು, ವೈವರ್ಣ್ಯ ಮುಂತಾದ ಭಾವಗಳನ್ನು ಅಭಿನಯದಲ್ಲಿ ತರುವುದು ಅಸಾಧ್ಯ. ಆದ್ದರಿಂದ ಲೋಕಸ್ವಭಾವದ ಅನುಕರಣ ಸ್ವರೂಪದ ನಾಟ್ಯದಲ್ಲಿ 'ಸತ್ತ್ವ'ವು ಅತ್ಯಂತ ಆವಶ್ಯಕ. "ದೃಷ್ಟಾಂತವೇನು? ಇಲ್ಲಿ ನಾಟ್ಯದ ಅವಶ್ಯಕತೆಗಳಿಗೆ ಅನುಗುಣವಾಗಿ ಅಭಿನಯದಲ್ಲಿ ತರಲಾಗುವ ಸುಖ–ದುಃಖಗಳಿಂದ ಉಂಟಾಗುವ ಭಾವಗಳನ್ನು ಲೋಕಸದೃಶ ಸ್ವರೂಪದಲ್ಲಿ ಪ್ರದರ್ಶಿಸಲು ಅವು ಸತ್ತ್ವವಿಶುದ್ಧವಾಗಿ (ಏಕಾಗ್ರತೆಯುಳ್ಳ ಮನಸ್ಸಿನಿಂದ) ಮೂಡಿ ಬರಬೇಕು. ಇಲ್ಲಿ ರೋದನ ಸ್ವರೂಪದ ದುಃಖವನ್ನು ದುಃಖಿತನಲ್ಲದವನು ಮತ್ತು ಪ್ರಹರ್ಷ ಸ್ವರೂಪದ ಸುಖವನ್ನು ಸುಖಿತನಲ್ಲದವನು ಹೇಗೆ ಅಭಿನಯಿಸಬೇಕು? ಯಾವುದರ ಬಲದಿಂದ ಒಬ್ಬ ನಟನು ದುಃಖಿತನಾಗಿರಲಿ ಅಥವಾ ಸುಖಿತನಾಗಿರಲಿ ಅಶ್ರು ರೋಮಾಂಚ ಮುಂತಾದವುಗಳನ್ನು ಸಹಜವಾಗಿ ಪ್ರದರ್ಶಿಸುತ್ತಾನೋ ಅದು 'ಸತ್ತ್ವ'." ಈ ಆಧಾರದ ಮೇಲೆ ಇವುಗಳಿಗೆ ಸಾತ್ತ್ವಿಕಭಾವಗಳೆಂದು ಹೆಸರು.

"ಸಾತ್ತ್ವಿಕಭಾವಗಳು ಎಂಟು. ಅವು ಸ್ತಂಭ, ಸ್ವೇದ, ರೋಮಾಂಚ, ಸ್ವರಭೇದ, ವೇಪಥು, ವೈವರ್ಣ್ಯ, ಅಶ್ರು ಮತ್ತು ಪ್ರಲಯ." 'ಸತ್ತ್ವ' ಎಂದರೆ 'ಸತಃ ಭಾವಃ', ಈ ಅರ್ಥದಲ್ಲಿ ಅದು ಇರುವಿಕೆ, ಅಸ್ತಿತ್ವ, ವಸ್ತು. ಸ್ವಭಾವ, ಸಾರ, ಜೀವನ, ಚೇತನ, ಉಸಿರು, ಬಲ, ಸಾಮರ್ಥ್ಯತತ್ತ್ವ ಇತ್ಯಾದಿ ಅರ್ಥಗಳನ್ನು ಕೊಡುತ್ತದೆ. ಒಳ್ಳೆಯತನ, ಗುಣ, ಉತ್ಕೃಷ್ಟತೆ, ಸತ್ಯ, ನಿಜಭಾವ, ನಿಶ್ಚಯ ಎಂಬವುಗಳನ್ನೂ ಪ್ರತಿನಿಧಿಸುತ್ತದೆ. ಇಲ್ಲಿ ಸತ್ತ್ವವನ್ನು ಮನಸ್ಸಿನಿಂದ ಅಂದರೆ ಏಕಾಗ್ರಮನಸ್ಸಿನಿಂದುದ್ಭವಿಸುವ ಆಂತರಿಕ ಶಕ್ತಿ. ರಜಸ್ ಮತ್ತು ತಮಸ್ಸುಗಳಿಂದ ಪ್ರಭಾವಿತವಾಗದ ಮನಸ್ಸು ಎಂದು ಅರ್ಥೈಸಲಾಗಿದೆ. **"रजस्स्तमोभ्यामस्पृष्टं मनः** ಅದು ತನ್ನಲ್ಲಿ ತಾನು ವಿಶ್ರಾಂತಿ ಹೊಂದುವ ಮತ್ತು ಕೆಲವು ಕಾರ್ಯಗಳನ್ನು ಪ್ರದರ್ಶಿಸುವ ಆಂತರಿಕ ಧರ್ಮ

[88] ನಾಟ್ಯಶಾಸ್ತ್ರ–ಆದ್ಯ ರಂಗಾಚಾರ್ಯ.ಅಕ್ಷರ ಪ್ರಕಾಶನ ಹೆಗ್ಗೋಡು 2003

**"सत्त्वं नाम स्वात्मविश्रामप्रकाशकारी कश्चनान्तरो धर्मः"**

ರುಚಿರಾದಲ್ಲಿ ಉಲ್ಲೇಖಿಸಲ್ಪಟ್ಟ 'ವಿವೃತಿಕಾರ'ನ ಪ್ರಕಾರ (ಪು. 196, ರತಿ ಮುಂತಾದವು ತಮ್ಮಲ್ಲಿ ತಾನು ವಿಶ್ರಾಂತಿ ಹೊಂದುವ ಭಾವಗಳು ಮತ್ತು ಅವುಗಳನ್ನು ಪ್ರದರ್ಶಿಸುವಂಥದೇ 'ಸತ್ತ್ವ'

**स्वात्मन्येव विश्रामो यस्य स रत्यादिः, तस्य प्रकाशः उद्बोधस्तत्कारी"**ದಶರೂಪಕದ ಮೇಲಿನ ಧನಿಕನ ಅವಲೋಕವು ಪರರ ದುಃಖ–ಸುಖಗಳಿಗೆ ಸ್ಪಂದಿಸುವ ಸಹಾನುಭೂತಿಯುಕ್ತ ಹೃದಯವೇ ಸತ್ತ್ವವೆಂದು ವಿವರಿಸುತ್ತದೆ.

**"परगतदुःखहर्षादिभाव नायामत्यन्तानुकूलान्तःकरणत्वं सत्त्वम्"**

ಅದರಂತೆ 'ಸಾತ್ತ್ವಿಕ'ವೆಂದರೆ 'ಸತ್ತ್ವೇನ ನಿವೃತ್ತ'. ಇಲ್ಲಿ ಧನಿಕನು ಭರತನ **"सत्त्वं नाम मनःप्रभवम्"** ಇತ್ಯಾದಿ ಉಕ್ತಿಯನ್ನು ತನ್ನ ಅಭಿಪ್ರಾಯಕ್ಕೆ ಸಮರ್ಥಕವಾಗಿ ಉಲ್ಲೇಖಿಸಿದ್ದಾನೆ. 'ಸತ್ತ್ವ'ದ ಅರ್ಥದ ಬಗ್ಗೆ ರಸತರಂಗಿಣಿಯು ವ್ಯಕ್ತಪಡಿಸಿದ ಇನ್ನೊಂದು ಅಭಿಪ್ರಾಯವೂ ಇದೆ. ರಸತರಂಗಿಣಿ (4)ಯ ಪ್ರಕಾರ, ಸತ್ತ್ವವೆಂದರೆ ಜೀವಂತ ಶರೀರ. "सत्त्वं जीवशरीरम्" ಆ ಶರೀರದ ಧರ್ಮಗಳು ಸಾತ್ತ್ವಿಕಗಳು, ಶರೀರದ ಭಾವಗಳಾದ ಸ್ತಂಭ, ಸ್ವೇದ ಮುಂತಾದವುಗಳನ್ನು ಸಾತ್ತ್ವಿಕಭಾವಗಳೆಂದು ಕರೆಯಲಾಗಿದೆ

**"तस्य धर्माः सात्त्विकाः । इत्थं च शरीरभावाः स्तम्भादयः सात्त्विका भावा इत्यभिधीयन्ते ।"[89]** ಭರತನು 'ಸತ್ತ್ವ'ವನ್ನು ಮನಸ್ಸಿನಿಂದ ಹುಟ್ಟಿದುದು ಎಂದು ವಿವರಿಸುತ್ತಾನೆ. ಅದು ಮನಸ್ಸಿನಲ್ಲಿ ಸುಪ್ತವಾಗಿರುವ ಸಮಾವೇಶ ಶಕ್ತಿ. ಅದು ಮನಸ್ಸಿನ ಏಕಾಗ್ರತೆಯೇ ಆಗಿದೆ. ಆದ್ದರಿಂದ 'ಸತ್ತ್ವ'ದ ಮೂಲವು ಮನಸ್ಸಿನ ಏಕಾಗ್ರತೆಯಲ್ಲಿದೆ ಎಂದು ಹೇಳಿರುವುದು. ಅದು ರತಿ ಮುಂತಾದ ಭಾವಗಳನ್ನು ನಿರೂಪಿಸುವ ಸನ್ನಿವೇಶದೊಂದಿಗೆ ಸಂಪೂರ್ಣ ತನ್ಮಯೀಭಾವ. ರೋಮಾಂಚ, ಅಶ್ರು, ವೈವರ್ಣ್ಯ ಮುಂತಾದವುಗಳನ್ನು ಸಹಜವಾಗಿರುವಂತೆ ಸಾಕ್ಷಾತ್ತಾಗಿಸಲು ಮನಸ್ಸಿನ ಆಳವಾದ ಏಕಾಗ್ರತೆಯು ಅತ್ಯಂತ ಆವಶ್ಯಕ. ಸ್ಥಿರವಲ್ಲದ ಮನಸ್ಸಿನ ವ್ಯಕ್ತಿಗೆ ಅಂತಹವುಗಳನ್ನು ಸಾಕ್ಷಾತ್ತಾಗಿಸುವುದು ಸಾಧ್ಯವಿಲ್ಲ. ಈ ಮನಸ್ಸಿನ

---

[89] ನಾಟ್ಯಶಾಸ್ತ್ರ – ಆದ್ಯ ರಂಗಾಚಾರ್ಯ – ನೀನಾಸಮ್ ರಂಗಶಿಕ್ಷಣಕೇಂದ್ರ, ಹೆಗ್ಗೋಡು,– 2003

ಏಕಾಗ್ರತೆಯು ಲೋಕಸ್ವಭಾವವನ್ನು ಅನುಕರಣೆ ಮಾಡುವ ನಾಟಕದಲ್ಲಿ ಬೇಕಾದ ಆಂತರಿಕ ಶಕ್ತಿಯಾದ ಸತ್ತ್ವಕ್ಕೆ ಜನ್ಮಕೊಡುತ್ತದೆ.

ಇಲ್ಲಿ ನಾಟಕದ ಅಭಿನಯದಲ್ಲಿ ಸತ್ತ್ವದ ಅವಶ್ಯಕತೆಯನ್ನು ಬಿಂಬಿಸಲು ಒಂದು ದೃಷ್ಟಾಂತವನ್ನು ಕೊಡಲಾಗಿದೆ. ದುಃಖ–ಸುಖದಂತಹ ಭಾವಗಳನ್ನು ನಾಟಕದ ಅಭಿನಯಕ್ಕೆ ಸಂಬಂಧಿಸಿದ ನಿಯಮಗಳಿಗೆ ಅನುಗುಣವಾಗಿರುವ ಅನುಭಾವಗಳ ಮೂಲಕ ಪ್ರಯೋಗಿಸಬೇಕು. ಮನಸ್ಸಿನ ಏಕಾಗ್ರತೆಯಿಂದ ಉತ್ಪನ್ನವಾಗುವ ಸತ್ತ್ವವು ಅಂತಹ ಪ್ರಯೋಗವನ್ನು ಲೋಕಸ್ವಭಾವಕ್ಕೆ ಅನುಗುಣವಾಗುವಂತೆ ಮಾಡುತ್ತದೆ. ಸಾಮಾನ್ಯವಾಗಿ ರೋದನ ಮುಂತಾದವುಗಳ ಮೂಲಕ ಪ್ರದರ್ಶಿಸುವ ದುಃಖವನ್ನು ಸ್ವತಃ ದುಃಖಿತನಾಗದ (ನಟನು) ವ್ಯಕ್ತಿಯು ಅಭಿನಯಿಸಲಾರನು. ಹಾಗೆಯೇ ಪ್ರಹರ್ಷದ ಸ್ವರೂಪವುಳ್ಳ ಸುಖವನ್ನು ಸ್ವತಃ ಸುಖಿತನಾಗಿರದ (ನಟ) ವ್ಯಕ್ತಿಯು ಅಭಿನಯಿಸಲಾರ. ಆದರೆ ಕುಶಲನಾದ ನಟನು ಅವನ ಮನಸ್ಸಿನ ಏಕಾಗ್ರತೆ ಮತ್ತು ಸನ್ನಿವೇಶದಲ್ಲಿ ತನ್ಮಯೀಭಾವಗಳಿಂದ ಉಂಟಾಗುವ ಆಂತರಿಕ ಶಕ್ತಿಯೇ ಆದ ಸತ್ತ್ವದ ಬಲದಿಂದ ಸುಖದ ಅಥವಾ ದುಃಖದ ಪರಿಣಾಮಗಳಾದ ರೋಮಾಂಚ, ಅಶ್ರು ಮುಂತಾದವುಗಳನ್ನು ಸಹಜವಾಗಿ ಸಾಕ್ಷಾತ್ತಾಗುವಂತೆ ಅಭಿನಯದಲ್ಲಿ ತರಬಲ್ಲನು. ಸ್ತಂಭ, ಸ್ವೇದ ಮುಂತಾದವು ಸತ್ತ್ವದಿಂದುಂಟಾಗುವುದರಿಂದ ಸಾತ್ತ್ವಿಕಭಾವಗಳು.

एवमेते बुधैर्ज्ञेया भावा ह्यष्टौ तु सात्त्विकाः ।
कर्म चैषां प्रवक्ष्यामि रसभावानुभावकम् ॥

निःसंज्ञो निष्प्रकम्पश्च स्थिरः शून्यजडाकृतिः ।
स्कन्नगात्रतया चैव स्तम्भं त्वभिनयेद्बुधः ॥

व्यजनग्रहणाच्चापि स्वेदापनयनेन च ।
स्वेदस्याभिनयो योज्यस्तथा वाताभिलाषतः ॥

मुहुः कण्टकितत्वेन तथोल्लुकसनेन च ।
पुलकेन च रोमाञ्चं गात्रस्पर्शेन दर्शयेत् ॥

स्वरभेदोऽभिनेतव्यो भिन्नगद्गदनिस्वनैः ।

वेपनात्स्फुरणात्कम्पाद्वेपथुं सम्प्रदर्शयेत् ॥

मुखवर्णपरावृत्त्या नाडीपीडनयोगतः ।

वैवर्ण्यमभिनेतव्यं प्रयत्नात्तद्धि दुष्करम् ॥

बाष्पाम्बुप्लुतनेत्रत्वान्नेत्रसंमार्जनेन च ।

मुहुरश्रुकणापातैरास्रं त्वभिनयेद्बुधः ॥

निश्चेष्टो निष्प्रकम्पत्वादव्यक्तश्वसितादपि ।

महीनिपातनाच्चापि प्रलयाभिनयो भवेत् ॥[९०]

"ಸ್ವೇದ (ಬೆವರು) ಎಂಬುದು ಕೋಪ, ಭಯ, ಹರ್ಷ, ಲಜ್ಜೆ, ದುಃಖ, ಆಯಾಸ, ರೋಗ, ತಾಪ, ಗಾಯ, ವ್ಯಾಯಾಮ, ಕ್ಲೇಶ, ಬೇಸಿಗೆ ಮತ್ತು ಅಂಗಾಂಗಗಳ ಪೀಡನದಿಂದ ಉಂಟಾಗುತ್ತದೆ."

"ಸ್ತಂಭ (ನಿಶ್ಚಲತೆ) ಎಂಬುದು ಹರ್ಷ, ಭಯ, ಶೋಕ, ವಿಸ್ಮಯ, ವಿಷಾದ, ಕ್ರೋಧ ಮುಂತಾದವುಗಳಿಂದ ಉಂಟಾಗುತ್ತದೆ."

"ಕಂಪ (ವೇಪಥು=ನಡುಗು) ಎಂಬುದು ಶೀತ, ಭಯ, ಹರ್ಷ, ಕೋಪ, ಸ್ಪರ್ಶ, ಮುದಿತನ ಮತ್ತು ರೋಗಗಳಿಂದ ಉಂಟಾಗುತ್ತದೆ."

"ಅಶ್ರು (ಕಣ್ಣೀರು) ಎಂಬುದು ಪ್ರಹರ್ಷ, ಅಸೂಯೆ, ಧೂಮ, ಅಂಜನ, ಆಕಳಿಕೆ, ಭಯ, ದುಃಖ, ಅನಿಮಿಷ ನೋಟ, ಶೀತ ಮತ್ತು ರೋಗಗಳಿಂದ ಉಂಟಾಗುತ್ತದೆ."

"ವೈವರ್ಣ್ಯ (ಬಣ್ಣ ಬದಲಾಗುವುದು) ಎಂಬುದು ಶೀತ, ಕೋಪ, ಭಯ, ಶ್ರಮ, ರೋಗ, ಕ್ಲೇಶ ಮತ್ತು ತಾಪಗಳಿಂದ ಉಂಟಾಗುತ್ತದೆ." "ರೋಮಾಂಚ (ರೋಮಹರ್ಷ) ಎಂಬುದು ಸ್ಪರ್ಶ, ಭಯ, ಶೀತ, ಹರ್ಷ, ಕೋಪ ಮತ್ತು ರೋಗಗಳಿಂದ ಉಂಟಾಗುತ್ತದೆ." "ಸ್ವರಭೇದ (ಧ್ವನಿ ಒಡೆಯುವುದು) ಎಂಬುದು ಭಯ, ಹರ್ಷ, ಕೋಪ, ಮುದಿತನ, ಗಂಟಲು ಒಣಗುವುದು, ಕಾಯಿಲೆ ಮತ್ತು ಮದಗಳಿಂದ ಉಂಟಾಗುತ್ತದೆ." "ಪ್ರಲಯ (ಕ್ರಿಯಾರಹಿತತ್ವ ಮತ್ತು ನಿಶ್ಚೇಷ್ಟಿತತ್ವ) ಎಂಬುದು ಶ್ರಮ, ಮೂರ್ಛೆ, ಮದ, ನಿದ್ರೆ, ಆಘಾತ ಮತ್ತು ಭ್ರಮೆಗಳಿಂದ ಉಂಟಾಗುತ್ತದೆ." "ಹೀಗೆ ಇವುಗಳನ್ನು ಎಂಟು ಸಾತ್ತ್ವಿಕಭಾವಗಳೆಂದು ಜ್ಞಾನಿಗಳು

---

[90] ನಾಟ್ಯಶಾಸ್ತ್ರ – ಆದ್ಯ ರಂಗಾಚಾರ್ಯ – ನೀನಾಸಮ್ ರಂಗಶಿಕ್ಷಣಕೇಂದ್ರ, ಹೆಗ್ಗೋಡು,– 2003

ತಿಳಿಯಬೇಕು. ರಸಭಾವಗಳ ಅನುಭವವನ್ನು ತಂದು ಕೊಡಲೆಂದು ಅವುಗಳಿಗೆ ಸಂಬಂಧಿಸಿದ ಕ್ರಿಯೆಗಳನ್ನು (ಅನುಭಾವಗಳನ್ನು) ಹೇಳುತ್ತೇನೆ." "ಬುದ್ಧಿವಂತನಾದ ನಟನು ಸ್ತಂಭವನ್ನು ಪ್ರಜ್ಞಾಹೀನನಾಗಿರುವುದು, ನಿಶ್ಚಲವಾಗಿ ಮಲಗಿರುವುದು, ಜಡವಾಗಿರುವುದು ಮತ್ತು ನೆಲದ ಮೇಲೆ ಬೀಳುವುದು ಮುಂತಾದವುಗಳ ಮೂಲಕ ಅಭಿನಯಿಸಬೇಕು."

"ಸ್ವೇದವನ್ನು ಬೀಸಣಿಕೆಯನ್ನು ತೆಗೆದುಕೊಳ್ಳುವುದು, ಬೆವರನ್ನು ಒರೆಸಿಕೊಳ್ಳುವುದು, ಗಾಳಿ ಬೀಸಲು ಕೇಳಿಕೊಳ್ಳುವುದು ಮುಂತಾದವುಗಳಿಂದ ಅಭಿನಯಿಸಬೇಕು." "ರೋಮಾಂಚವನ್ನು ಕೂದಲು ಎದ್ದು ನಿಂತುಕೊಳ್ಳುವುದು, ಮತ್ತೆ ಮತ್ತೆ ರೋಮಹರ್ಷ, ಚಕಿತಗೊಳ್ಳುವುದು, ದೇಹದ ಸ್ಪರ್ಶ ಮುಂತಾದವುಗಳಿಂದ ಅಭಿನಯಿಸಬೇಕು "ಸ್ವರಭೇದವನ್ನು ಒಡೆದ ಅಸ್ಪಷ್ಟವಾದ ಧ್ವನಿಯಿಂದ ಅಭಿನಯಿಸಬೇಕು. ವೇಪಥುವನ್ನು ನಡುಗುವುದು, ಕಂಪಿಸುವುದು, ಅದುರುವುದು ಮುಂತಾದವುಗಳಿಂದ ಅಭಿನಯಿಸಬೇಕು." "ವೈವರ್ಣ್ಯವನ್ನು ಮುಖದ ಬಣ್ಣ ಬದಲಾಗುವುದು, ಪ್ರಯತ್ನಪೂರ್ವಕವಾಗಿ ನರಗಳನ್ನು ಒತ್ತುವುದು ಮುಂತಾದವುಗಳಿಂದ ಅಭಿನಯಿಸಬೇಕು. ಇದು ದುಷ್ಕರ." "ಅಶ್ರುವನ್ನು ಕುಶಲ ನಟನು ಕಣ್ಣೀರು ತುಂಬಿದ ಕಣ್ಣುಗಳು, ಕಣ್ಣುಗಳನ್ನು ಒರೆಸಿಕೊಳ್ಳುವುದು ಮತ್ತು ಮತ್ತೆ ಮತ್ತೆ ಕಣ್ಣೀರು ಸುರಿಸುವುದು ಇವುಗಳಿಂದ ಅಭಿನಯಿಸಬೇಕು." "ಪ್ರಲಯ ಎಂಬುದನ್ನು ನಿಶ್ಚೇಷ್ಟಿತನಾಗಿರುವುದು, ಚಲನೆಯಿಲ್ಲದಿರುವುದು, ಮಂದವಾಗಿ ಉಸಿರಾಡುವುದು, ಭೂಮಿಯ ಮೇಲೆ ಒರಗುವುದು ಮುಂತಾದವುಗಳ ಮೂಲಕ ಅಭಿನಯಿಸಬೇಕು."

## प्रमुखाः सात्त्विकभावाः

<u>**स्तम्भः–**</u>ಸ್ತಂಭ ಎಂದರೆ ಜಡೀಭಾವ, ಅಂದರೆ ನಿಶ್ಚೇಷ್ಟಿತವಾಗುವುದು, **"स्तम्भौ स्थूणाजडीभावौ"** [91] ಅದು ಚಟುವಟಿಕೆಯು ನಿಲ್ಲುವುದು, "चेष्टाप्रतीघातः ।"ಇಲ್ಲಿ ಚಟುವಟಿಕೆಯೆಂದರೆ ಶಾರೀರಿಕ ಚಟುವಟಿಕೆ ಮತ್ತು ಮಾನಸಿಕ ವ್ಯವಹಾರಗಳೆರಡನ್ನೂ ಗ್ರಹಿಸಬೇಕು. ಈ ಸ್ತಂಭವು ಹರ್ಷ, ಭಯ, ಶೋಕ, ವಿಸ್ಮಯ, ವಿಷಾದ, ಕೋಪ ಮುಂತಾದವುಗಳಿಂದ ಉಂಟಾಗುತ್ತದೆ. ಅದರ ಅಭಿನಯವನ್ನು ನಿಪುಣ ನಟನು ನಿಶ್ಚೇತನನಾಗಿ ಬೀಳುವುದು, ಎಲ್ಲಾ ಚಲನವಲನಗಳನ್ನು ನಿಲ್ಲಿಸುವುದು, ನಿಶ್ಚೇಷ್ಟಿತ ಸ್ಥಿತಿಯಲ್ಲಿರುವುದು,

[91] Aamarasosha shri Amarasinha shri mannalal 'Abhimanyu' published by master khelarilal & sons 1937.

ಶಾರೀರಿಕವಾಗಿ ಚೇತನ ರಹಿತವಾಗಿರುವುದು ಮುಂತಾದವುಗಳ ಮೂಲಕ ಪ್ರಯೋಗಿಸಬೇಕು. ಉದಾಹರಣೆಗೆ, ಓರ್ವಳು ಸುಂದರಿಯ ಓರೆನೋಟದಿಂದ ಯುವಕರು ಚಿತ್ರದಲ್ಲಿ ಬರೆದಂತೆ ನಿಂತರು ಎಂದು ಹೇಳಿದಾಗ, ಸಂತೋಷದಿಂದ ಉಂಟಾದ ಒಂದು ಸ್ತಂಭದ ಚಿತ್ರವು ಕಣ್ಣಿನ ಮುಂದೆ ನಿಂತಂತಾಗುವುದು. ಇದನ್ನು ಅಭಿನಯದಲ್ಲಿ ನಿಶ್ಚೇಷ್ಟಿತವಾಗಿರುವುದರಿಂದ ತರಬಹುದು.

**स्वेदः**– ಸ್ವೇದ ಎಂದರೆ **'ಸ್ವೇದನ'**, ಬೆವರುವುದು, ''स्वेदो धर्मे स्वेदने च'' **''अङ्गलिस्वेदेन दूष्येरन्नक्षराणि''** ಸಾಹಿತ್ಯದರ್ಪಣದಲ್ಲಿ ಹೇಳಿದಂತೆ ದೇಹದಿಂದ ಬೆವರು ಹುಟ್ಟುವುದು– (ವಪುರ್ಜಲೋದ್ಗಮ). ಅದು ಕೋಪ, ಭಯ, ಹರ್ಷ, ಲಜ್ಜೆ, ಶೋಕ, ಶ್ರಮ, ರೋಗ, ತಾಪ, ಆಘಾತ, ವ್ಯಾಯಾಮ, ಕ್ಲೇಶ, ಸೂರ್ಯನ ತಾಪ ಮುಂತಾದ ಅನೇಕ ಕಾರಣಗಳಿಂದ ಉಂಟಾಗುತ್ತದೆ. ಅದನ್ನು ಬೀಸಣಿಕೆಯನ್ನು ತೆಗೆದುಕೊಳ್ಳುವುದು, ಬೆವರನ್ನು ಒರೆಸಿಕೊಳ್ಳುವುದು, ಗಾಳಿ ಬೀಸಲೆಂದು ಕೇಳಿಕೊಳ್ಳುವುದು ಮುಂತಾದವುಗಳ ಮೂಲಕ ಅಭಿನಯಿಸಬೇಕು.

**रोमाञ्चः** ರೋಮಾಂಚವೆಂದರೆ ಕೂದಲು ಎದ್ದು ನಿಲ್ಲುವುದು (ರೋಮೋದ್ಗಮಃ). **''रोमाञ्चो रोमहर्षणम्''** ಅದು ಸ್ಪರ್ಶ, ಭಯ, ಶೀತ, ಹರ್ಷ, ಕೋಪ, ರೋಗ ಮುಂತಾದವುಗಳಿಂದ ಉಂಟಾಗುತ್ತದೆ. ಆಶ್ಚರ್ಯಕರವಾದ ದೃಶ್ಯವೂ ರೋಮಾಂಚವನ್ನುಂಟುಮಾಡುತ್ತದೆ. ಅದನ್ನು ರೋಮಗಳ ಉದ್ಗಮದ ಮೂಲಕ ಅಭಿನಯಿಸಬೇಕು. ದೇಹವನ್ನು ಸ್ಪರ್ಶಿಸುವ ಮೂಲಕವೂ ಅಭಿನಯಿಸಬಹುದು.

**स्वरभेदः** ಸ್ವರಬೇದ ಎಂದರೆ ಸ್ವರಭಂಗ, ಧ್ವನಿ ಒಡೆಯುವುದು. ಅದು ಭಯ, ಹರ್ಷ, ಕ್ರೋಧ, ಮುಪ್ಪು, ಗಂಟಲು ಒಣಗುವುದು, ರೋಗ, ಮದ ಮುಂತಾದವುಗಳಿಂದ ಉಂಟಾಗುತ್ತದೆ. ಗಂಟಲು ಕಟ್ಟಿದಂತಾಗಿ ಅಸ್ಪಷ್ಟವಾದ ಮಾತುಗಳು ಹೊರಡುವುದಕ್ಕೆ ಸ್ವರಭಂಗವೆನ್ನುತ್ತಾರೆ. ಬೇರೆ ಬೇರೆ ರೀತಿಯಲ್ಲಿ ಅಸ್ಪಷ್ಟ ಮಾತುಗಳ ಮೂಲಕ ಅದನ್ನು ಅಭಿನಯದಲ್ಲಿ ತರಬೇಕು.

**वेपथुः**–ವೇಪಥು ಎಂದರೆ ನಡುಗುವುದು (ಕಂಪ); **"अथ वेपथुः कम्पः"**[92] ಅದು ಶೀತ, ಭಯ, ಹರ್ಷ, ಕೋಪ, ಸ್ಪರ್ಶ, ಮುಪ್ಪು, ರೋಗ ಮುಂತಾದವುಗಳಿಂದ ಉಂಟಾಗುತ್ತದೆ. ಅದನ್ನು ಅಂಗಾಂಗಗಳನ್ನು ನಡುಗಿಸುವುದು, ಕಂಪಿಸುವುದು, ನಡುಗುವುದು ಮುಂತಾದವುಗಳಿಂದ ಅಭಿನಯಿಸಬೇಕು.

वैवर्ण्यम्–ವೈವರ್ಣ್ಯ–"विगतो वर्णो रूपं यस्य तस्य भावः वैनर्ण्यम्"ಅದರ ಅರ್ಥ ಬಣ್ಣ ಬದಲಾಗುವುದು, ಮುಖದ ಬಣ್ಣ ಬದಲಾಗುವುದು. ಅದು ಶೀತ, ಕೋಪ, ಭಯ, ಶ್ರಮ, ರೋಗ, ಕ್ಲೇಶ ಮುಂತಾದವುಗಳಿಂದ ಉಂಟಾಗುತ್ತದೆ. ಮುಖದ ಬಣ್ಣ ಬದಲಾಗುವುದು, ನರಗಳನ್ನು ಒತ್ತಿಕೊಳ್ಳುವುದು ಮುಂತಾದವುಗಳಿಂದ ವೈವರ್ಣ್ಯವನ್ನು ಅಭಿನಯಿಸಬೇಕು. ಅದನ್ನು ಅಭಿನಯದಲ್ಲಿ ತರುವುದು ಬಹಳ ಕಷ್ಟ. ಅದನ್ನು ಪ್ರಯತ್ನಪೂರ್ವಕವಾಗಿ ಮಾಡಬೇಕು. ಅತ್ಯಂತ ಏಕಾಗ್ರತೆಯಿಂದ ನಟನು ಇದನ್ನು ಅಭಿನಯಿಸಲು ಸಮರ್ಥನು.

**<u>अश्रुः</u>**–ಅಶ್ರುವೆಂದರೆ ಕಣ್ಣೀರು. ಕಣ್ಣೀರು ಸುರಿಸುವುದು ಎಂದರ್ಥ. **"रोदनं चास्रमश्रु च"**[93] ಭರತನು ಅದರ ಅನೇಕ ವಿಭಾವಗಳನ್ನು ಹೇಳಿದ್ದಾನೆ. ಹರ್ಷ, ಕೋಪ, ಹೊಗೆ, ಅಂಜನ, ಆಕಳಿಕೆ, ಭಯ, ಶೋಕ, ರೆಪ್ಪೆ ಬಡಿಯದೆ ನೋಡುವುದು ಮುಂತಾದವು ಅದರ ವಿಭಾವಗಳು. ಅದನ್ನು ನೀರು ತುಂಬಿದ ಕಣ್ಣುಗಳು, ಕಣ್ಣೀರು ಒರೆಸಿಕೊಳ್ಳುವುದು ಮತ್ತೆ ಮತ್ತೆ ಕಣ್ಣೀರನ್ನು ಸುರಿಸುವುದು ಮುಂತಾದವುಗಳಿಂದ ಅಭಿನಯಿಸಬೇಕು.

**<u>प्रलयः</u>**–ಪ್ರಲಯವೆಂದರೆ ಶಾರೀರಿಕ ಚಟುವಟಿಕೆ ನಿಲ್ಲುವುದು, ನಿಶ್ಚೇಷ್ಟಿತವಾಗಿರುವುದು. ಅದು ಶ್ರಮ, ಮೂರ್ಛೆ, ಮದ, ನಿದ್ರೆ, ಆಘಾತ, ಭ್ರಮೆ ಮುಂತಾದವುಗಳಿಂದ ಉಂಟಾಗುತ್ತದೆ. ಅದನ್ನು ನಿಶ್ಚೇಷ್ಟಿತನಾಗಿ ಬಿದ್ದಿರುವುದು,ಚಲನವಲನವಿಲ್ಲದಂತಿರುವುದು, ಮಂದವಾಗಿ ಉಸಿರಾಡುವುದು, ಭೂಮಿಯ ಮೇಲೆ ಬಿದ್ದಿರುವುದು ಮುಂತಾದವುಗಳ ಮೂಲಕ ಅಭಿನಯಿಸಬೇಕು.

ಹೀಗೆ ಭರತನು ಎಂಟು ಸಾತ್ತ್ವಿಕಭಾವಗಳ ವಿಭಾವಗಳು ಮತ್ತು ಅನುಭಾವಗಳನ್ನು ಹೇಳಿದ್ದಾನೆ. ವಿಭಾವಗಳು ಮತ್ತು ಅನುಭಾವಗಳು ಲೋಕಪ್ರಸಿದ್ಧ. ನಾಟಕದಲ್ಲಿ ಪ್ರಪಂಚದಲ್ಲಿರುವ

---

92 Amarakosha- shri Amarasinha- shri mannalal- 'Abhimanyu' published by master khelarilal & sons 1937.

93 Amarakosha- shri Amarasinha- shri mannalal- 'Abhimanyu' published by master khelarilal & sons 1937.

ಅವುಗಳ ಅನುಕರಣೆಯನ್ನು ಮಾಡಬೇಕು. ವಿವಿಧವಾದ ಅನುಭಾವಗಳನ್ನು ಹೇಳುವ ಮೂಲಕ ಭರತನು ಸಾತ್ತ್ವಿಕಭಾವಗಳನ್ನು ಅಭಿನಯಿಸುವುದುಕ್ಕೆ ನಟರಿಗೆ ವಿವಿಧ ಪ್ರಕಾರಗಳನ್ನು ಪರಿಚಯಿಸಿದ್ದಾನೆ.

एकोनपञ्चाशदिमे यथावद्भावास्त्र्यवस्था गदिता मयेह ।

भूयश्च ये यत्र रसे नियोज्यास्तान्श्रोतुमर्हन्ति च विप्रमुख्याः ॥[९४]

अत्र श्लोकाः–

शङ्का व्याधिस्तथा ग्लानिश्चिन्तासूया भयं तथा ।

विस्मयश्च वितर्कश्च स्तम्भश्चपलता तथा ॥

रोमाञ्चहर्षौ निद्रा च तथोन्मादमदावपि ।

स्वेदश्चैवावहित्थं च प्रलयो वेपथुस्तथा ॥

विषादश्रमनिर्वेदा गर्वावेगौ धृति स्मृतिः ।

मतिर्मोहो विबोधश्च सुप्तमौत्सुक्यवर्जिते ॥

क्रोधामर्षो च हासश्च शोकोपस्मार एव च ।

दैन्यं च मरणं चैव रतिरुत्साहसस्ंयुता ॥

त्रासवैवर्ण्यरुदितैः स्वरभेदः शमोऽपि वा ।

जडता च तथा षट् च चत्वारिंशत्प्रकीर्तिताः ॥

आलस्यौग्र्यजुगुप्साख्यैरैवं भावैस्तु वर्जिताः ।

उद्भावयन्ति श्रृङ्गारं सर्वे भावाः स्वसंज्ञया ॥

ाथावसरमेते हि स्थायिसञ्चारिसत्त्वजाः ।

उद्दीपयन्ति श्रृङ्गारं रसमासाद्य संज्ञितम् ॥]

ग्लानिः शङ्का ह्यसूया च श्रमश्चपलता तथा ।

सुप्तं निद्राऽवहित्थं च हास्ये भावाः प्रकीर्तिताः ॥

---

94 Natyashastra by bharathamuni,Mahamahopadhyaya pamdit durgaprasad published by satyabhamani pandurang ‘Nirnaya-sagar’ press Bombay 1943.

निर्वेदश्चैव चिन्ता च दैन्यं ग्लान्यास्रमेव च ।
जडता मरणं चैव व्याधिश्च करुणे स्मृताः ॥

गर्वोऽसूया मदोत्साहावावेगोऽमर्ष एव च
क्रोधश्चपलतौग्र्यं च विज्ञेया रौद्रसम्भवाः ॥

असंमोहस्तथोत्साह आवेगो हर्ष एव च ।
मतिश्चैव तथोग्रत्वममर्षो मद एव च ॥

रोमाञ्चः स्वरभेदश्च क्रोधोऽसूया धृतिस्तथा ।
गर्वश्चैव वितर्कश्च वीरे भावा भवन्ति हि ॥

स्वेदश्च वेपथुश्चैव रोमाञ्चो गद्गदस्तथा ।
त्रासश्च मरणं चैव वैवर्ण्यं च भयानके ॥

अपस्मारस्तथोन्मादो विषादो मद एव च ।
मृत्युर्व्याधिर्भयं चैव भावा बीभत्ससंश्रयाः ॥

स्तम्भः स्वेदश्च मोहश्च रोमाञ्चो विस्मयस्तथा ।
आवेगो जडता हर्षो मूर्च्छा चैवाद्भुताश्रयाः ॥

ये त्वेते सात्त्विका भावा नानाभिनयसंश्रिताः ।
रसेष्वेतेषु सर्वे ते ज्ञेया नाट्यप्रयोक्तृभिः ॥

न ह्येकरसजं काव्यं किञ्चिदस्ति प्रयोगतः ।
भावो वापि रसो वापि प्रवृत्तिर्वृत्तिरेव च ॥

“शङ्का, व्याधिः, ग्लानिः, चिंता, असूया, भयः, विस्मयः, वितर्कः, स्तम्भः, चपलता, रोमाञ्चः, हर्षः, निद्रा, उन्मादः, मदः, स्वेदः, अवहित्थः, प्रलयः, वेपथुः, विषादः, श्रमः, निर्वेदः, गर्वः, आवेगः, धृतिः, स्मृतिः, गतिः, मोहः, विबोधः, सुप्तः, औत्सुक्यः, क्रोधः, अमर्षः, हासः, शोकः, अपस्मारः, दैन्यं, मरणं, रतिः, उत्साहः, त्रासः, वैवर्ण्यः, रुदितं, स्वरभेदः, जडता भयानक च ಇವು ನಲವತ್ತಾರು ಭಾವಗಳು.

"ಆಲಸ್ಯ, ಔಗ್ರ್ಯ ಮತ್ತು ಜಿಗುಪ್ಸೆಗಳನ್ನು ಬಿಟ್ಟು ಉಳಿದೆಲ್ಲಾ ಆಯಾ ಹೆಸರುಗಳಿಂದ ಕರೆಯಲ್ಪಟ್ಟ ಭಾವಗಳು ಶೃಂಗಾರವನ್ನು ಭಾವಿತಗೊಳಿಸುತ್ತವೆ." "ಸ್ಥಾಯಿಭಾವಗಳು, ವ್ಯಭಿಚಾರಿಭಾವಗಳು, ಸಾತ್ತ್ವಿಕಭಾವಗಳು ಎಂದು ಕರೆಯಲಾದ ಈ ಭಾವಗಳು ಸಂದರ್ಭಾನುಸಾರವಾಗಿ ಶೃಂಗಾರರಸವನ್ನು ಉದ್ದೀಪನಗೊಳಿಸುತ್ತವೆ." "ಗ್ಲಾನಿ, ಶಂಕಾ, ಅಸೂಯಾ, ಶ್ರಮ, ಚಪಲತಾ, ಸುಪ್ತ, ನಿದ್ರಾ, ಅವಹಿತ್ಥಾ–ಇವು ಹಾಸ್ಯದಲ್ಲಿನ ಭಾವಗಳು."

"ನಿರ್ವೇದ, ಚಿಂತಾ, ದೈನ್ಯ, ಗ್ಲಾನಿ, ಅಶ್ರು, ಜಡತಾ, ಮರಣ, ವ್ಯಾಧಿ–ಇವು ಕರುಣರಸದಲ್ಲಿನ ಭಾವಗಳು." "ಗರ್ವ, ಅಸೂಯಾ, ಮದ, ಉತ್ಸಾಹ, ಆವೇಗ, ಅಮರ್ಷ, ಕ್ರೋಧ, ಚಪಲತಾ–ಈ ಭಾವಗಳನ್ನು ರೌದ್ರರಸಕ್ಕೆ ಸಂಬಂಧಿಸಿದವುಗಳೆಂದು ತಿಳಿಯಬೇಕು."

"ಅಸಂಮೋಹ, ಉತ್ಸಾಹ, ಆವೇಗ, ಹರ್ಷ, ಮತಿ, ಉಗ್ರತಾ, ಅಮರ್ಷ, ಮದ, ರೋಮಾಂಚ, ಸ್ವರಭೇದ, ಕ್ರೋಧ, ಅಸೂಯಾ, ಧೃತಿ, ಗರ್ವ, ವಿತರ್ಕ–ಇವು ವೀರರಸದಲ್ಲಿ ಕಂಡು ಬರುತ್ತವೆ. ವೇಪಥು, ರೋಮಾಂಚ, ಗದ್ಗದ, ತ್ರಾಸ, ಮರಣ ಮತ್ತು ವೈವರ್ಣ್ಯ–ಈ ಭಾವಗಳು ಭಯಾನಕ ರಸದಲ್ಲಿವೆ. "ಅಪಸ್ಮಾರ, ಉನ್ಮಾದ, ವಿಷಾದ, ಮದ, ಮರಣ, ವ್ಯಾಧಿ, ಭಯ–ಈ ಭಾವಗಳು ಬೀಭತ್ಸವನ್ನು ಆಶ್ರಯಿಸಿವೆ. "ಸ್ತಂಭ, ಸ್ವೇದ, ಮೋಹ, ರೋಮಾಂಚ, ವಿಸ್ಮಯ, ಆವೇಗ, ಜಡತಾ, ಹರ್ಷ, ಮೂರ್ಛಾ– ಈ ಭಾವಗಳು ಅದ್ಭುತ ರಸವನ್ನು ಆಶ್ರಯಿಸಿವೆ. "ಸಾತ್ತ್ವಿಕ ಭಾವಗಳೆಂದು ಕರೆಯಲಾಗುವ ಮತ್ತು ಬಹು ವಿಧವಾದ ಅಭಿನಯಗಳನ್ನು ಆಶ್ರಯಿಸಿದ ಭಾವಗಳು ಈ ರಸಗಳಿಗೆ ಸೇರಿದವುಗಳೆಂದು ಅಭಿನಯಪಟುಗಳು ತಿಳಿದಿದ್ದಾರೆ. "ನಾಟ್ಯ ಪ್ರಯೋಗದಲ್ಲಿ ಯಾವುದೇ ಕಾವ್ಯವು ಒಂದೇ ರಸವುಳ್ಳದ್ದೆಂಬುದಿಲ್ಲ. ಭಾವವಾಗಲಿ, ಪ್ರವೃತ್ತಿಯಾಗಲಿ, ವೃತ್ತಿಯಾಗಲಿ ಒಂದೇ ರಸದಿಂದ ಕೂಡಿದುದು ಎಂಬುದೂ ಇಲ್ಲ." [95]

**ನಲವತ್ತೊಂಬತ್ತು ಭಾವಗಳು :**

ಭರತನು ನಲವತ್ತೊಂಬತ್ತು ಭಾವಗಳನ್ನು ಹೇಳಿದ್ದಾನೆ. ಅವುಗಳಲ್ಲಿ ಎಂಟು ಸ್ಥಾಯಿಭಾವಗಳು, ಮೂವತ್ಮೂರು ವ್ಯಭಿಚಾರಿಭಾವಗಳು ಮತ್ತು ಎಂಟು ಸಾತ್ತ್ವಿಕಭಾವಗಳು ಸೇರಿವೆ. ಆ ಎಲ್ಲಾ ನಲವತ್ತೊಂಭತ್ತು ಭಾವಗಳ ವಿಷಯವನ್ನು ಅವುಗಳ ವಿಭಾವಗಳು

[95] ನೃತ್ಯ ಲಕ್ಷಣಂ–ಲೇಖಕರು ಹಾಗೂ ಪ್ರಕಾಶಕರು ಗುರುನಾಟ್ಯವಿದುಷಿ, ಪ್ರೊ. ಜಯಾ 2009

(ಕಾರಣಗಳು) ಮತ್ತು ಅನುಭಾವಗಳೊಂದಿಗೆ ವಿವರಿಸಲಾಗಿದೆ. ವಿಭಾವಗಳನ್ನು ಮತ್ತು ಅನುಭಾವಗಳನ್ನು ಇಷ್ಟೇ ಎಂದು ಸಂಖ್ಯಾನಿರ್ದೇಶಪೂರ್ವಕವಾಗಿ ಹೇಳಿಲ್ಲ. ಏಕೆಂದರೆ ಅವು ಅಸಂಖ್ಯ ಮತ್ತು ಲೋಕದಿಂದ ಗ್ರಹಿಸಬೇಕಾದವುಗಳು. ಪ್ರತಿಯೊಂದು ರಸದ ವಿಷಯದಲ್ಲಿ ಇವುಗಳನ್ನು ಹೇಳಲಾಗಿದೆ. ಇವುಗಳನ್ನು ವ್ಯಭಿಚಾರಿಭಾವಗಳೆಂದೂ, ಸಾತ್ತ್ವಿಕಭಾವಗಳೆಂದೂ ಸ್ಥಾಯಿಭಾವಗಳಿಗೆ ಸಂಬಂಧಿಸಿದಂತೆ ಹೇಳಲಾಗಿದೆ. ಇಲ್ಲಿ ಭರತನು ಮತ್ತೆ ಸ್ಥಾಯಿಭಾವಗಳನ್ನು, ವ್ಯಭಿಚಾರಿಭಾವಗಳನ್ನು ಮತ್ತು ಸಾತ್ತ್ವಿಕಭಾವಗಳನ್ನು ಪ್ರತಿಯೊಂದು ರಸಕ್ಕೆ ಸಂಬಂಧಿಸಿದಂತೆ ಹೇಳಿದ್ದಾನೆ.

**<u>ರಸಭಾವಗಳು ಮತ್ತು ಭಾವಗಳು:</u>**

[बहूनां समवेतानां रूपं यस्य भवेद्बहु ।
स मन्तव्यो रसः स्थायी शेषाः सञ्चारिणो मताः ॥
दीपयन्तः प्रवर्तन्ते ये पुनः स्थायिनं रसम् ।
ते तु सञ्चारिणो ज्ञेयास्ते हि स्थायित्वमागताः ॥
विभावानुभावयुतो ह्यङ्गवस्तुसमाश्रयः ।
सञ्चारिभिस्तु संयुक्तः स्थाय्येव तु रसो भवेत् ॥
स्थायी सत्त्वातिरेकेण प्रयोक्तव्यः प्रयोक्तृभिः ।
सञ्चार्याकारमात्रेण स्थायी यस्मादवस्थितः ॥
ये त्वेते सात्त्विका भावा नानाभिनययोजिताः ।
रसेष्वेतेषु सर्वेषु ते ज्ञेया नाट्यकोविदैः ॥
न ह्येकरसजं काव्यं नैकभावैकवृत्तिकम् ।
विमर्दे रागमायाति प्रयुक्तं हि प्रयत्नतः ॥
भावा वापि रसा वापि प्रवृत्तिर्वृत्तिरेव वा ।
बीभत्साद्भुतशान्तानां त्रैविध्यं नात्र कथ्यते ॥

षण्णां रसाना त्रैविध्यं नानाभावरसान्वितम् ।

सत्त्वप्रयोजितो ह्यर्थः प्रयोगोऽत्र विधीयते ॥

विदित्वा हि विराजन्ते लोके चित्रं हि दुर्लभम् ।]

नानाभावार्थसम्पन्नाः स्थायिसत्त्वाभिचारिणः ।

पुष्पावकीर्णाः कर्तव्याः काव्येषु हि रसा बुधैः ॥

एवं रसाश्च भावाश्च् त्र्यवस्था नाटके स्मृताः ।

य एवमेताञ्जानाति स गच्छेत्सिद्धिमुत्तमाम् ॥

"ಒಂದು ಕಾವ್ಯದಲ್ಲಿ ಅನೇಕ ರಸಗಳನ್ನು ಒಟ್ಟಿಗೆ ನಿರೂಪಿಸಿದಾಗ, ಯಾವ ಭಾವವು ಸಂಪೂರ್ಣವಾಗಿ ವೃದ್ಧಿ ಹೊಂದಿದೆಯೋ ಅದು ಸ್ಥಾಯಿಭಾವ, ಉಳಿದವುಗಳೆಲ್ಲಾ ವ್ಯಭಿಚಾರಿಭಾವಗಳು." "ಇತರ ರಸಗಳನ್ನು ಉದ್ದೀಪಿಸಲು ಯಾವ ಸ್ಥಾಯಿಭಾವಗಳು ಸಹಾಯಕಗಳಾಗಿ ಬರುತ್ತವೆಯೋ ಅವು ಸಂಚಾರಿ (ವ್ಯಭಿಚಾರಿ) ಭಾವಗಳು. ಅವು ಸಂಬಂಧಿಸಿದ ರಸಗಳ ವಿಷಯದಲ್ಲಿ ಮಾತ್ರ ಸ್ಥಾಯಿಭಾವಗಳು." "ಯಾವುದು ವಿಭಾವಗಳು ಮತ್ತು ಅನುಭಾವಗಳೆಂಬ ಸಾಮಗ್ರಿಗಳಿಂದ ಯುಕ್ತವಾಗಿ ವ್ಯಭಿಚಾರಿಭಾವಗಳಿಂದ ಪೋಷಿಸಲ್ಪಡುವ ಸ್ಥಾಯಿಭಾವವೋ ಅದು ಮಾತ್ರ ರಸವಾಗಿ ಪರಿಣಮಿಸುತ್ತದೆ." "ನಟರು ಸ್ಥಾಯಿಭಾವವನ್ನು ಪ್ರಧಾನವಾಗಿ ಸಾತ್ತ್ವಿಕಭಾವಗಳ ಮೂಲಕವೇ ಅಭಿನಯದಲ್ಲಿ ತರಬೇಕು. ಏಕೆಂದರೆ ವ್ಯಭಿಚಾರಿಭಾವಗಳು ಕೇವಲ ಮೂಡಿ ಮರೆಯಾಗುವ ಭಾವಗಳಾಗಿ ವಿವಕ್ಷಿತವಾಗಿವೆ.

"ವಿವಿಧ ರೀತಿಯ ಅಭಿನಯಗಳ ಮೂಲಕ ಪ್ರಯೋಗದಲ್ಲಿ ತರಲಾಗುವ ಈ ಸಾತ್ತ್ವಿಕಭಾವಗಳನ್ನು ನಟರು ಎಲ್ಲಾ ರಸಗಳಿಗೆ ಸೇರಿದವುಗಳೆಂದು ತಿಳಿಯಬೇಕು." "ಒಂದೇ ರಸವಿರುವ ಕಾವ್ಯ (ನಾಟಕ)ವಿಲ್ಲ. ಅಲ್ಲದೇ ಅದು ಒಂದೇ ಭಾವ ಅಥವಾ ಒಂದೇ ವೃತ್ತಿಯಿಂದ ಕೂಡಿದ್ದೂ ಅಲ್ಲ. ಅನೇಕ ರಸ, ಭಾವ, ವೃತ್ತಿಗಳಿಂದ ಕೂಡಿದ್ದರಲ್ಲಿ ಆಳವಾದ ಆಸಕ್ತಿಯುಂಟಾಗುತ್ತದೆ. ಹಾಗೆ ಅವುಗಳನ್ನು ಕೂಡಿ ತರುವುದು ಪರಿಣಾಮಕಾರಿ." "ಭಾವಗಳಾಗಲಿ, ರಸಗಳಾಗಲಿ, ಪ್ರವೃತ್ತಿಗಳಾಗಲಿ ಅವುಗಳ ವಿಷಯದಲ್ಲಿ ಬೀಭತ್ಸ, ಅದ್ಭುತ ಮತ್ತು ಶಾಂತಗಳ ತ್ರೈವಿಧ್ಯವನ್ನು ಹೇಳಿಲ್ಲ." "ಆರು ರಸಗಳ ತ್ರೈವಿಧ್ಯ ಸ್ವರೂಪವು ನಾನಾ ಭಾವಗಳು ಮತ್ತು ರಸಗಳೊಂದಿಗೆ ಸೇರಿದಂತೆ ಕಂಡು ಬರುತ್ತದೆ. ಇದನ್ನು ತಿಳಿದವರು ವಿರಾಜಿಸುತ್ತಾರೆ. ವೈವಿಧ್ಯವು ಲೋಕದಲ್ಲಿ ಕಾಣುವುದು ವಿರಳ." "ಸ್ಥಾಯಿಭಾವಗಳು,

ಸಾತ್ತ್ವಿಕಭಾವಗಳು ಮತ್ತು ವ್ಯಭಿಚಾರಿಭಾವಗಳೆಂಬ ಅನೇಕ ಭಾವಗಳಿಂದ ಯುಕ್ತವಾಗಿರುವಂತೆ ರಸಗಳನ್ನು ಕುಶಲರು ಕಾವ್ಯಗಳಲ್ಲಿ ಹೂವಿನ ಹಾರದ ಹಾಗೆ ಕಾಣುವಂತೆ ಪ್ರಯೋಗಿಸಬೇಕು.

"ಹೀಗೆ ರಸಗಳು ಮತ್ತು ಭಾವಗಳನ್ನು ನಾಟಕದಲ್ಲಿ ತ್ರೈವಿದ್ಯವುಳ್ಳವುಗಳಂತೆ ತಿಳಿಯಬೇಕು. ಹಾಗೆ ತಿಳಿದವನು ಉತ್ತಮ ಸಿದ್ಧಿಯನ್ನು ಪಡೆಯುತ್ತಾನೆ."

ನಾಟ್ಯ ಮತ್ತು ನಾಟಕದಲ್ಲಿ ಅನೇಕ ರಸಗಳು ಬರುತ್ತವೆ. ಏಕರಸವುಳ್ಳ ನಾಟ್ಯ, ನಾಟಕ ಅಥವಾ ಇತರ ಕಾವ್ಯ ಯಾವುದೂ ಇರುವುದು ವಿರಳ. ಹಾಗೆಯೇ ಭಾವಗಳು, ಪ್ರವೃತ್ತಿಗಳು ಮತ್ತು ವೃತ್ತಿಗಳು ಒಂದೊಂದೇ ಇರುವುದಿಲ್ಲ. ಅನೇಕ ಇರುತ್ತವೆ. ನಾಟ್ಯ ಅಥವಾ ನಾಟಕವು ವೈವಿಧ್ಯಕ್ಕೆ ಪ್ರಸಿದ್ಧ. ಅಂತಹ ವೈವಿಧ್ಯವು ಪ್ರಪಂಚದಲ್ಲಿ ಕಾಣುವುದು ವಿರಳ. ನಾಟ್ಯ ಅಥವಾ ನಾಟಕದಲ್ಲಿ ವೈವಿಧ್ಯವೇ ಸ್ವಾರಸ್ಯ. ಆದ್ದರಿಂದಲೇ ಭರತನು ಹೇಳುತ್ತಾನೆ–

"न ह्येकरसजं काव्यं किञ्चिदस्ति प्रयोगतः ।"-----

ಅದೇ ರೀತಿ ಇನ್ನೊಮ್ಮೆ ಹೀಗೆ ಹೇಳಿದ್ದಾನೆ–

"न ह्येकरसजं काव्यं नैकभावैकवृत्तिकम् ।

विमर्दे रागमायाति प्रयुक्तं हि प्रयत्नतः ॥

**ಸ್ಥಾಯಿಭಾವಗಳು ಮತ್ತು ಇತರ ಭಾವಗಳು: –**

ನಾಟಕದಲ್ಲಿ ಅನೇಕ ಭಾವಗಳು ನಿರೂಪಿಸಲ್ಪಟ್ಟಾಗ, ಯಾವುದು ಪ್ರಧಾನವಾಗುತ್ತದೆಯೋ ಅದು ಸ್ಥಾಯಿಭಾವ ಮತ್ತು ಇತರ ಭಾವಗಳು ವ್ಯಭಿಚಾರಿಭಾವಗಳು ಎಂದು ಕರೆಯಲ್ಪಡುತ್ತವೆ. ಸಂಬಂಧಪಟ್ಟ ರಸಗಳ ಸಂದರ್ಭದಲ್ಲಿ ಪ್ರಧಾನ ಭಾವಗಳು ಸ್ಥಾಯಿಭಾವಗಳು. ಹಾಗಂದರೆ ರತಿ, ಹಾಸ, ಶೋಕ, ಕ್ರೋಧ, ಉತ್ಸಾಹ, ಭಯ, ಜಿಗುಪ್ಸಾ ಮತ್ತು ವಿಸ್ಮಯಗಳು ಕ್ರಮವಾಗಿ ಶೃಂಗಾರ, ಹಾಸ್ಯ, ಕರುಣ, ರೌದ್ರ, ವೀರ, ಭಯಾನಕ, ಬೀಭತ್ಸ ಮತ್ತು ಅದ್ಭುತಗಳಿಗೆ ಸಂಬಂಧಿಸಿದಂತೆ ಸ್ಥಾಯಿಭಾವಗಳು. ಆದರೆ ಅವು ಬೇರೆ ರಸಗಳ ಸಂದರ್ಭದಲ್ಲಿ ಬಂದಾಗ, ಅಂದರೆ ರತಿಯು ಹಾಸ್ಯದ ಸಂದರ್ಭದಲ್ಲಿ, ಹಾಸವು ಶೃಂಗಾರದ ಸನ್ನಿವೇಶದಲ್ಲಿ ಇತ್ಯಾದಿಯಾಗಿ ಬಂದಾಗ ಅವುಗಳನ್ನು ವ್ಯಭಿಚಾರಿಭಾವಗಳೆಂದೇ ಪರಿಗಣಿಸಬೇಕು. ಸ್ಥಾಯಿಭಾವಗಳ ನಿರೂಪಣೆಗಾಗಿ ಬಂದಾಗ ಅವುಗಳನ್ನು ವ್ಯಭಿಚಾರಿಭಾವಗಳೆಂದೇ ಪರಿಗಣಿಸಬೇಕು. ಸ್ಥಾಯಿಭಾವಗಳ

ನಿರೂಪಣೆಗಾಗಿ ಸಾತ್ತ್ವಿಕಭಾವಗಳನ್ನು ಸರಿಯಾಗಿ ತಿಳಿದುಕೊಳ್ಳಬೇಕು ಮತ್ತು ಅಭಿನಯದಲ್ಲಿ ತರಬೇಕು.

ಭರತನು ಉಪದೇಶಿಸಿದಂತೆ, ಸ್ಥಾಯಿಭಾವಗಳು, ವ್ಯಭಿಚಾರಿಭಾವಗಳು ಮತ್ತು ಸಾತ್ತ್ವಿಕಭಾವಗಳೆಂಬ ಬೇರೆ ಬೇರೆ ಭಾವಗಳನ್ನು, ರಸಾನುಭವಗಳನ್ನು ತಂದುಕೊಡುವುದಕ್ಕಾಗಿ ಹಾರದಲ್ಲಿ ಹೂವುಗಳನ್ನು ಪೋಣಿಸಿದಂತೆ ಪ್ರಯೋಗಿಸಬೇಕು. ಇದೇ "विभावानुभावव्यभिचारिसंयोगाद् रसनिष्पत्तिः" ಎಂಬ ರಸ ಸೂತ್ರದ ಅಭಿಪ್ರಾಯ. ಇದರ ವಿಸ್ತಾರವನ್ನು ಹೀಗೆ ಭರತನೇ ಕೊಟ್ಟಿದ್ದಾನೆ–

"विभावानुभावयुतो ह्यङ्गवस्तुसमाश्रितः ।

सञ्चारिभिश्च संयुक्तः स्थाय्येव तु रसो भवेत् ॥[९६]

ಸೂತ್ರದಲ್ಲಿ ವಿಭಾವಗಳು, ಅನುಭಾವಗಳು ಮತ್ತು ವ್ಯಭಿಚಾರಿಭಾವಗಳ ಸಂಯೋಗದಿಂದ ರಸನಿಷ್ಪತ್ತಿಯು (ರಸದ ಆಸ್ವಾದ ಅಥವಾ ಅನುಭವವು) ಉಂಟಾಗುತ್ತದೆ ಎಂದು ಹೇಳಲಾಗಿದೆ. ಶ್ಲೋಕದಲ್ಲಿ ಬಂದ ವಿವರಣೆಯಂತೆ ರತಿ, ಹಾಸ, ಶೋಕ ಇತ್ಯಾದಿ ಸ್ಥಾಯಿಭಾವಗಳೇ ಅನುಭವದಲ್ಲಿ ಶೃಂಗಾರ, ಹಾಸ್ಯ, ಕರುಣ ಮುಂತಾದ ರಸಗಳಾಗುತ್ತವೆ. ಸ್ಥಾಯಿಭಾವವು ರಸವಾಗಿ ಪರಿಣಮಿಸಲು ಅದಕ್ಕೆ ವಿಭಾವಗಳು, ಅನುಭಾವಗಳು (ಸಾತ್ತ್ವಿಕಭಾವಗಳು ಸೇರಿ) ಮತ್ತು ವ್ಯಭಿಚಾರಿಭಾವಗಳೆಂಬ ಸಾಮಗ್ರಿಗಳು ಬೇಕು. ಕವಿಯು ತನ್ನ ಸಂಭಾಷಣೆ ಮತ್ತು ಗೀತೆಗಳ ಮೂಲಕ ಮತ್ತು ನಟರು ತಮ್ಮ ಅಭಿನಯಗಳ ಮೂಲಕ ಈ ಸಾಮಗ್ರಿಗಳನ್ನು ಒದಗಿಸುತ್ತಾರೆ ಮತ್ತು ಅಂತಹ ನಾಟಕದ ಸನ್ನಿವೇಶವನ್ನು ನೋಡುವ ಪ್ರೇಕ್ಷಕರು ತಮ್ಮಲ್ಲಿಯೇ ಸುಪ್ತವಾಗಿರುವ ಸ್ಥಾಯಿಭಾವದ ಆಸ್ವಾದವೇ ಆದ ಅಂದರೆ, ಅದಕ್ಕಿಂತ ಭಿನ್ನವಲ್ಲದ, ರಸದ ಅನುಭವವನ್ನು ಪಡೆಯುತ್ತಾರೆ.

ಇಲ್ಲಿ ಬಂದಿರುವ ಶ್ಲೋಕಗಳು ಒಂಬತ್ತನೆಯದಾದ ಶಾಂತರಸವನ್ನೂ ಸೇರಿಸಿಕೊಂಡು ಒಂಬತ್ತು ರಸಗಳನ್ನು ಉಲ್ಲೇಖಿಸುತ್ತವೆ. ಬೀಭತ್ಸ, ಅದ್ಭುತ ಮತ್ತು ಶಾಂತ ರಸಗಳಲ್ಲಿ ತ್ರೈವಿದ್ಯವಿಲ್ಲ. ಆದರೆ ಮಿಕ್ಕ ಆರು ರಸಗಳಲ್ಲಿ ತ್ರೈವಿಧ್ಯವು ಕಂಡು ಬರುತ್ತದೆ ಎಂದು ಅವುಗಳಲ್ಲಿ ಹೇಳಲಾಗಿದೆ. ಹೀಗೆ ಶಾಂತವನ್ನು ಒಂಬತ್ತನೆಯ ರಸವೆಂದು ಹೇಳಿರುವುದೂ ಮತ್ತು ಆರು

---

96 ಭರತನಾಟ್ಯ ದಿಗ್ದರ್ಶನ–ವಿ. ಎಸ್. ಕೌಶಿಕ್. ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು 2015

ರಸಗಳ ತ್ರೈವಿಧ್ಯ ಹಾಗೂ ಮೂರು ರಸಗಳ ತ್ರೈವಿಧ್ಯ ರಹಿತತ್ವಗಳನ್ನು ಉಲ್ಲೇಖಿಸಿರುವುದೂ ಶಾಂತ ರಸಕ್ಕೆ ಸಂಬಂಧಿಸಿದ ಭಾಗಗಳ ಹಾಗೆ ಈ ಶ್ಲೋಕಗಳೂಕೂಡ ಪ್ರಕ್ಷಿಪ್ತವೆಂಬುದನ್ನು ಬಿಂಬಿಸುತ್ತವೆ. ಶೃಂಗಾರ, ರೌದ್ರ, ಕರುಣ, ವೀರ ಮತ್ತು ಭಯಾನಕಗಳ ತ್ರೈವಿಧ್ಯದ ಬಗ್ಗೆ ಹೇಳುವುದಾದರೆ ಆ ವಿಷಯವು ಆರನೆಯ ಅಧ್ಯಾಯದ 77, 78, 79 & 80 ನೆಯ ಶ್ಲೋಕಗಳಲ್ಲಿ ಬಂದಿದೆ. ಹಾಸ್ಯದ ತ್ರೈವಿಧ್ಯದ ಜೊತೆಗೆ ಆತ್ಮಸ್ಥ ಮತ್ತು ಪರಸ್ಥವೆಂದು ಅದರ ದ್ವೈವಿಧ್ಯವೂ, ಸ್ಮಿತ, ಹಸಿತ, ವಿಹಸಿತ, ಉಪಹಸಿತ, ಅಪಹಸಿತ ಮತ್ತು ಅತಿಹಸಿತವೆಂದು ಷಡ್ವಿಧತ್ವವೂ ಹೇಳಲ್ಪಟ್ಟಿದೆ. ಆರನೆಯ ಅಧ್ಯಾಯದಲ್ಲಿ ಬರುವ ಮಾಹಿತಿಯ ಪ್ರಕಾರ (ಶ್ಲೋಕ 82), ಅದ್ಭುತವು ದಿವ್ಯದರ್ಶನಜ ಮತ್ತು ಆನಂದಜ ಎಂದು ಎರಡು ವಿಧ, ಬೀಭತ್ಸವು ಕ್ಷೋಭಜ ಮತ್ತು ಉದ್ವಿಜ ಎಂದು (ಶ್ಲೋಕ 81) ಎರಡು ವಿಧ. ಹೀಗೆ ಎಲ್ಲ ರಸಗಳಲ್ಲಿ ಕೆಲವು ಮೂರು ವಿಧ ಮತ್ತೆ ಕೆಲವು ಎರಡು ವಿಧ ಇತ್ಯಾದಿಯಾಗಿ ಆರನೆಯ ಅಧ್ಯಾಯದಲ್ಲಿ ಹೇಳಲಾಗಿದೆ. ಏಳನೆಯ ಅಧ್ಯಾಯದಲ್ಲಿ ಬಂದಿರುವ ಈ ವಿವರಗಳು ಸಂಪೂರ್ಣವಾಗಿ ಭಿನ್ನವಾಗಿವೆ.

**ನಾಟ್ಯಾಂಶಗಳು :**

ನಾಟ್ಯಕ್ಕೆ ಸಂಬಂಧಪಟ್ಟ ಅಂಶಗಳನ್ನು ಭರತನು ಈ ಶ್ಲೋಕದಲ್ಲಿ "ಸಂಗ್ರಹ" ಮಾಡಿದ್ದಾನೆ–

**रसा भावा ह्यभिनयाः धर्मीवृत्तिप्रवृत्तयः ।**

**सिद्धिस्स्वरास्तथातोद्यं गानं रङ्गश्च सङ्ग्रहः ॥**[९७]

ಇವುಗಳ ಸ್ವರೂಪವನ್ನು ನೋಡೋಣ–

**ನಾಟ್ಯವು ರಸ –ಭಾವಾಶ್ರಯಪ್ರಧಾನ :–नाट्यं नाम रसभावाश्रयम्:**

ನಾಟ್ಯದಲ್ಲಿ 'ರಸ' ವು ಪ್ರಧಾನವಾದ ಅಂಶ. ಅದು ನಾಟ್ಯದ ಜೀವ. ನಾಟ್ಯದ ಸೊಗಸನ್ನು ಅನುಭವಿಸಿದಾಗ ನಮ್ಮ ಹೃದಯದಲ್ಲಿ ಉಂಟಾಗತಕ್ಕ ಆನಂದಕ್ಕೆ ಕಾರಣ: ಇದರ ಸ್ವರೂಪವನ್ನು**"विभानुभाव व्यभिचारि संयोगाद्रसनिष्पत्तिः"** ಎಂದು ಭರತಸೂತ್ರವು ತಿಳಿಸುತ್ತದೆ. ವಿಭಾವ–ಅನುಭಾವ ವ್ಯಭಿಚಾರೀ ಅಥವಾ ಸಂಚಾರೀ ಭಾವಗಳು ಸೇರಿದರೆ ರಸ ಹುಟ್ಟುತ್ತದೆ ಎಂಬುದು ಇದರ ಅಕ್ಷರಾರ್ಥ; ವಿಭಾವ–ಅನುಭಾವಗಳೆಂದರೆ ಚಿತ್ತವೃತ್ತಿಯ ಕಾರಣ–ಕಾರ್ಯಗಳು; ಸಂಚಾರೀ ಭಾವಗಳೆಂದರೆ ಮನಸ್ಸಿನಲ್ಲಿ ಉಂಟಾಗತಕ್ಕ ರಸೋಚಿತವಾದ

---

97 Natyashastra by bharathamuni,Mahamahopadhyaya pamdit durgaprasad published by satyabhamani pandurang 'Nirnaya-sagar' press Bombay 1943.

ನಾನಾ ಮನೋವಿಕಾರಗಳು; ಇವುಗಳನ್ನು ನಟರು ಅಭಿನಯಿಸಿದಾಗ ಪ್ರೇಕ್ಷಕರ ಮನಸ್ಸಿನಲ್ಲಿರುವ 'ಸ್ಥಾಯಿ' ಭಾವಗಳು ಉದ್ಬುದ್ಧವಾಗಿ, ಸ್ವಾದುಸ್ವರೂಪವನ್ನು ತಾಳಿ ಅವರಿಗೆ ಆನಂದವನ್ನು ಕೊಡುತ್ತವೆ–ಎಂಬುದು ಈಚಿನ ಲಾಕ್ಷಣಿಕರು ಅದರ ಮೇಲೆ ಮಾಡಿರುವ ವಿವರಣೆ. ಉದಾಹರಣೆ–ಶಕುಂತಲೆ.

**ವಿಭಾವ**; ಅವಳನ್ನು ಕಂಡು ದುಷ್ಯಂತನು ತೋರಿಸುವ ನಡೆನುಡಿಗಳು.

**ಅನುಭಾವ**; ಸಂತೋಷ, ಸಂದೇಹ ಮುಂತಾದ ಅವರ ಚಿತ್ತವೃತ್ತಿಗಳು.

**ಸಂಚಾರೀಭಾವ**; ಇವುಗಳ ಅಭಿನಯವನ್ನು ನೋಡಿದ ಪ್ರೇಕ್ಷಕರ ಮನಸ್ಸಿನಲ್ಲಿ 'ರತಿ' ಸ್ಥಾಯಿಭಾವವು ಉದ್ಬುದ್ಧವಾಗಿ ಸ್ವಾದುರೂಪವನ್ನು ತಾಳಿ ಶೃಂಗಾರ ರಸವಾಗುತ್ತದೆ.

ನಿರ್ವೇದ (ಬೇಸರ), ಗ್ಲಾನಿ (ಬಳಲಿಕೆ), ಶಂಕೆ (ಕಳವಳ), ಅಸೂಯೆ, ಮದ (ಮತ್ತು), ಶ್ರಮ, ಆಲಸ್ಯ (ಚಟುವಟಿಕೆ ಇಲ್ಲದಿರುವಿಕೆ), ದೈನ್ಯ, ಚಿಂತೆ, ಮೋಹ (ಮಂಕು), ಸ್ಮೃತಿ, ಧೃತಿ (ಧೈರ್ಯ), ಲಜ್ಜೆ ಚಪಲತೆ, ಹರ್ಷ, ಆವೇಗ (ಸಂಭ್ರಮ), ಜಡತ್ವ, ಗರ್ವ, ವಿಷಾದ, ಔತ್ಸುಕ್ಯ (ಆತುರ), ನಿದ್ರೆ (ಜೋಂಪು), ಅಪಸ್ಮಾರ (ಮೂರ್ಛೆ), ಸ್ವಪ್ನ ಪ್ರಬೋಧ (ಎಚ್ಚರಿಕೆ), ಅಮರ್ಷ (ಕೋಪ), ಅವಹಿತ್ಥ (ಭಾವವನ್ನು ಮರೆಮಾಚುವುದು), ಉಗ್ರತೆ (ದುಷ್ಟರ ಅಪರಾಧಾದಿಗಳಿಂದ ರೇಗುವುದು), ಮತಿ (ನಿಶ್ಚಯ), ವ್ಯಾಧಿ (ಸಂಕಟ), ಉನ್ಮಾದ (ಚಿತ್ತವಿಭ್ರಮ), ಮರಣ, ತ್ರಾಸ (ಭಯ), ವಿತರ್ಕ (ವಿಚಾರ)–ಈ 33 ಸಂಚಾರಿ ಭಾವಗಳು ನಾಟ್ಯಶಾಸ್ತ್ರದಲ್ಲಿ ಪ್ರಣೀತಗಳಾಗಿವೆ.[98]

ರತಿ (ಪ್ರೀತಿ), ಹಾಸ (ವಿನೋದ), ಶೋಕ, ಕ್ರೋಧ, ಉತ್ಸಾಹ, ಭಯ, ಜುಗುಪ್ಸೆ (ಅಸಹ್ಯ), ವಿಸ್ಮಯ (ಆಶ್ಚರ್ಯ), ಶಮ (ಶಾಂತಿ)–ಇವು ಒಂಬತ್ತು ಸ್ಥಾಯಿಭಾವಗಳು. ಇವುಗಳಿಂದ ಕ್ರಮವಾಗಿ ಶೃಂಗಾರ, ಹಾಸ್ಯ, ಕರುಣ, ರೌದ್ರ, ವೀರ, ಭಯಾನಕ, ಬೀಭತ್ಸ, ಅದ್ಭುತ, ಶಾಂತ–ಎಂಬ ಒಂಬತ್ತು ರಸಗಳು ಹುಟ್ಟುತ್ತವೆ. ಇವುಗಳಲ್ಲಿ ಕಡೆಯದಾದ 'ಶಾಂತ' ವು ಭರತನಿಂದ ಉಕ್ತವಾಗಿಲ್ಲ.

**ನಾಟ್ಯದ ಜೀವಾಳ ಅಭಿನಯ :–**

'ಅಭಿನಯ'ವು ನಾಟ್ಯದಲ್ಲಿ ಬಹುಮುಖ್ಯವಾದದ್ದು; ನಾಟ್ಯವು ಅಭಿನಯ ರೂಪವಾದದ್ದು ಎಂದು ಬೇಕಾದರೂ ಹೇಳಿಬಿಡಬಹುದು. ರಸಭಾವಗಳು ಅದರ ಜೀವ; ಅಭಿನಯವು ಅದರ

[98] ನಾಟ್ಯಶಾಸ್ತ್ರ–ಆದ್ಯ ರಂಗಾಚಾರ್ಯ.ಅಕ್ಷರ ಪ್ರಕಾಶನ ಹೆಗ್ಗೋಡು 2003

ದೇಹ. ಆದ್ದರಿಂದ ಭರತನು ತನ್ನ ಗ್ರಂಥದಲ್ಲಿ ಅರ್ಧಕ್ಕಿಂತ ಹೆಚ್ಚಾದ ಭಾಗವನ್ನು 'ಅಭಿನಯ' ಕ್ಕೇ ಕೊಟ್ಟಿದ್ದಾನೆ.

ಅಭಿನಯವು ಆಂಗಿಕ, ವಾಚಿಕ, ಆಹಾರ್ಯಕ, ಸಾತ್ವಿಕ ಎಂದು ನಾಲ್ಕು ವಿಧ. ಆಂಗಿಕಾಭಿನಯವು ಶಾರೀರ, ಮುಖಜ, ಚೇಷ್ಟಾಕೃತ ಎಂದು ಮೂರು ವಿಧ; ಕೈ ಕಣ್ಣು ಮುಂತಾದ ಆಂಗೋಪಾಂಗಗಳ ಚಲನೆಗಳು ಶಾರೀರ ಮತ್ತು ಮುಖಜಃ ನೃತ್ತವಿಶೇಷಗಳು ಚೇಷ್ಟಾಕೃತಗಳು. ನಾಟಕಗಳಲ್ಲಿ ಉಪಯುಕ್ತವಾದ ಸಂಸ್ಕೃತ–ಪ್ರಾಕೃತ ಭಾಷೆಗಳು, ಅವುಗಳನ್ನು ಪ್ರಯೋಗಿಸುವ ರೀತಿ, ಆಡುವ ವಿಧಾನ, ಇತಿವೃತ್ತ ಅಥವಾ ವಸ್ತು, ಛಂದಸ್ಸು, ಗುಣ, ದೋಷ, ಅಲಂಕಾರ ಇವೆಲ್ಲವೂ ವಾಚಿಕಾಭಿನಯದಲ್ಲಿ ಸೇರುತ್ತವೆ. ಆಹಾರ್ಯಾಭಿನಯವೆಂದರೆ ನಾಟ್ಯಪ್ರದರ್ಶನಕ್ಕೆ ಬೇಕಾದ ವೇಷಭೂಷಾದಿಗಳು.

"ನೇಪಥ್ಯ"ದ ರಚನೆ; ನೇಪಥ್ಯವು ವಸ್ತ್ರ, ಅಲಂಕಾರ, ಅಂಗರಚನಾ, ಸಜ್ಜೀವ ಎಂದು ನಾಲ್ಕು ವಿಧ. ವಾಹನ, ವಿಮಾನ, ಬಂಡೆ ಬೆಟ್ಟ, ಧ್ವಜ ಕವಚಾದಿ ಪದಾರ್ಥಗಳು 'ವಸ್ತ್ರ'; ಮಾಲ್ಯ, ಆಭರಣ, ಉಡುಪು ಮುಂತಾದವು ಅಲಂಕಾರ; ಬಣ್ಣ, ಗಡ್ಡ, ಮೀಸೆ ಮುಂತಾದ ಸಲಕರಣೆಗಳು, ಬಟ್ಟೆಬರೆಗಳು ಇವೆಲ್ಲ ಅಂಗರಚನಾ; ನಾಟ್ಯದಲ್ಲಿ ಪ್ರದರ್ಶಿಸುವುದಕ್ಕೆ ಕೃತಕವಾಗಿ ಮಾಡಿಕೊಳ್ಳಬೇಕಾದ ಪ್ರಾಣಿರಚನೆಯೇ ಸಜ್ಜೀವ;

'ಸಾತ್ತ್ವಿಕಾಭಿನಯ' ವೆಂದರೆ ಸಾತ್ತ್ವಿಕ ಭಾವಗಳ ಪ್ರದರ್ಶನ : ಸ್ತಂಭ (ಸ್ತಬ್ಧತೆ), ಪ್ರಲಯ (ಮೂರ್ಛೆ), ರೋಮಾಂಚ, ಸ್ವೇದ (ಬೆವರುವಿಕೆ); ವೈವರ್ಣ್ಯ (ವರ್ಣ ಬದಲಾಗುವುದು)–ಇವು 'ಸಾತ್ತ್ವಿಕ' ಭಾವಗಳು; ಇವುಗಳಲ್ಲಿ ಕೆಲವು 'ಅನುಭಾವ' ರೂಪಗಳಾಗಿ ಕಂಡರೂ, ಅವಕ್ಕೆ ಕಾರಣವಾದ ಭಾವ ವಿಶೇಷಗಳನ್ನೇ ಸಾತ್ವಿಕಗಳನ್ನಾಗಿ ಗ್ರಹಿಸಬೇಕು.

ಈ ನಾಲ್ಕು ವಿಧವಾದ ಅಭಿನಯಗಳಲ್ಲದೆ ಭರತಶಾಸ್ತ್ರದಲ್ಲಿ 'ಸಾಮಾನ್ಯಾಭಿನಯ' 'ಚಿತ್ರಾಭಿನಯ' ಎಂಬ ಮತ್ತೆರಡು ಅಭಿನಯಗಳೂ ಹೇಳಲ್ಪಟ್ಟಿವೆ. 'ಸಾಮಾನ್ಯಾಭಿನಯ' ಪ್ರಕರಣಸಂಬಂಧದಲ್ಲಿಯೇ ನಾಯಕ ನಾಯಿಕೆಯರ ಭೇದ, ಅವರ ಶೀಲಸ್ವರೂಪಗಳು, ಪರಿವಾರ, ಸೂತ್ರಧಾರ, ಪಾರಿಪಾರ್ಶ್ವಕ ಮುಂತಾದವರ ಗುಣಗಳು, ರಂಗದಲ್ಲಿ ಪ್ರತ್ಯಕ್ಷವಾಗಿ ಅಭಿನಯಿಸಬಾರದ ಸಂಗತಿಗಳು ಇವೆಲ್ಲಾ ನಿರೂಪಿಸಲ್ಪಟ್ಟಿವೆ; 'ಚಿತ್ರಾಭಿನಯ'ದಲ್ಲಿ

'ಬಾಹ್ಯಮಸ್ತುಗಳನ್ನು ಅಂಗಾಂಗ ಸಂಕೇತಗಳಿಂದ ತಿಳಿಸುವ ಕ್ರಮವು ವಿವರಿಸಲ್ಪಟ್ಟಿದೆ; ಹೀಗೆ ಅಂಗಾಭಿನಯಗಳು ಆಂತರಿಕವಾದ ಭಾವಗಳಿಗೆ ಸೂಚಕಗಳಾಗುವುದಲ್ಲದೆ, ಚಂದ್ರ, ಸೂರ್ಯ, ಹುಲಿ, ಕರಡಿ, ನದಿ, ಪರ್ವತ ಮುಂತಾದ ಬಾಹ್ಯವಸ್ತುಗಳಿಗೂ ಸಂಕೇತಗಳಾಗುವುವು. ಇವುಗಳ ವಿವರ, ಹರ್ಷಾದಿ ಭಾವಗಳಿಗೆ ಅನುರೂಪವಾದ ಅಭಿನಯ, 'ಆಕಾಶವಚನ''ಜನಾಂತಿಕ' ಮುಂತಾದವುಗಳನ್ನು ಅಭಿನಯಿಸುವ ರೀತಿ –ಇವೂ ಈ ಪ್ರಕರಣದಲ್ಲಿಯೇ ಬರತ್ತವೆ.

**ಧರ್ಮಿ–ವೃತ್ತಿ–ಪ್ರವೃತ್ತಿಗಳ ಸಿದ್ಧಿ :–**

(ನಾಟ್ಯ) 'ಧರ್ಮಿ' ಎಂದರೆ ನಟರು ಆಚರಣೆಯಲ್ಲಿಟ್ಟುಕೊಂಡಿರತಕ್ಕ "ಸಮಯ" ಅಥವಾ ಸಂಪ್ರದಾಯ. ಆಡುವ ಮಾತನ್ನು ಸಂಗೀತದಲ್ಲಿ ಹೇಳುವುದು, ನರ್ತನ ಮಾಡುತ್ತ ನಡೆದುಬರುವುದು, ಸ್ವಗತದಲ್ಲಿ ಹತ್ತಿರವಿರುವ ನಟರು ಆಡಿದ ಮಾತನ್ನು ಕೇಳದಂತಿರುವುದು– ಇತ್ಯಾದಿ.

'ವೃತ್ತಿ' ಎಂದರೆ ನಾಟಕದಲ್ಲಿ ಅಭಿನಯಿಸತಕ್ಕ ವಿಷಯಗಳ ಸ್ವರೂಪ ವಿಶೇಷ; ಇದು कैशिकी,सात्त्वती, आरभटी,भारती[೯೯] ಎಂದು ನಾಲ್ಕು ವಿಧ.

ಕೈಶಿಕಿಯು ನೃತ್ಯಗೀತ ವಿಲಾಸಾದಿಗಳಿಂದ ಕೂಡಿ ಮೃದುವಾಗಿರುವುದು. ಉದಾಹರಣೆ– ರತ್ನಾವಳಿ. ಸಾತ್ವತಿಯು ಸತ್ತ್ವ, ಶೌರ್ಯ, ತ್ಯಾಗ, ದಯೆ, ಹರ್ಷ ಮುಂತಾದುವುಗಳಿಂದ ಕೂಡಿ ಗೆಲುವಾಗಿರುವುದು. ಉದಾಹರಣೆ–ನಾಗಾನಂದ.

ಆರಭಟಿಯು ಮಾಯೆ, ಇಂದ್ರಜಾಲ, ಜಗಳ, ಕೋಪ, ಕಳವಳ ಇವುಗಳಿಂದ ಕೂಡಿ ಉದ್ಧತವಾಗಿರುವುದು. ಉದಾಹರಣೆ–ಮುದ್ರಾರಾಕ್ಷಸ, ವೇಣೀಸಂಹಾರಗಳು. 'ಭಾರತಿ'ಯು ಅಷ್ಟಾಗಿ ಘಟನಾಸ್ವರೂಪಕ್ಕೆ ಸಂಬಂಧಪಟ್ಟದ್ದಲ್ಲ; ಮುಖ್ಯವಾಗಿ ಮಾತಿನ ಸ್ವರೂಪವನ್ನು ವಿವರಿಸತಕ್ಕದ್ದು; ಅದೊಂದು 'ಉಕ್ತಿವೈಚಿತ್ರ್ಯವಿಶೇಷ'ವೆಂದು ಹೇಳಬಹುದು; ಸೂತ್ರಧಾರನು ಆ ಮಾತು ಈ ಮಾತು ಆಡುತ್ತ ಪ್ರಸ್ತುತ ವೃತ್ತಾಂತವೆನ್ನುವುದು ಇದಕ್ಕೆ ಒಂದು ಉದಾಹರಣೆ.

ಪಾತ್ರಭೇದ, ದೇಶಭೇದಗಳನ್ನು ಅನುಸರಿಸಿ, ಅವುಗಳಿಗೆ ಉಚಿತವಾಗುವಂತೆ, ನಟರು ಉಪಯೋಗಿಸುವ ಭಾಷೆ, ವೇಷ, ಭೂಷ ಮುಂತಾದವುಗಳ ಭೇದಗಳು 'ಪ್ರವೃತ್ತಿ'ಗಳೆನ್ನಿಸಿಕೊಳ್ಳುತ್ತವೆ.

---

[99] ಭರತನಾಟ್ಯ ದಿಗ್ದರ್ಶನ–ವಿ. ಎಸ್. ಕೌಶಿಕ್. ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು 2015

ಗಲಭೆ ಗದ್ದಲಗಳಾಗದೆ ಪ್ರೇಕ್ಷಕರು ಉತ್ಸಾಹದಿಂದ ನಾಟಕ ನೋಡಿ ಸಂತೋಷಪಡುವುದೇ 'ಸಿದ್ಧಿ'. 'ಸ್ವರ', 'ಅತೋದ್ಯ', 'ಗಾನ' ಇವು ನಾಟ್ಯೋಪಯುಕ್ತವಾದ ಸಂಗೀತಕ್ಕೆ ಸಂಬಂಧಿಸುವ ವಿಷಯಗಳು. ಹೀಗೆ ಮೇಲೆ ನಿರ್ದಿಷ್ಟವಾದ ನಾಟ್ಯಾಂಶಗಳಲ್ಲಿ ಸಂಗೀತ, ಅಭಿನಯ, ಅಲಂಕಾರ– ಈ ಶಾಸ್ತ್ರಗಳಿಗೆ ಸಾಕ್ಷಾತ್ ಸಂಬಂಧಪಡುವ ವಿಷಯಗಳನ್ನು ಬಿಟ್ಟು ಮಿಕ್ಕವುಗಳನ್ನು ಮುಂದೆ ವಸ್ತು, ಪಾತ್ರ, ಛಂದಸ್ಸು, ಗದ್ಯ, ಭಾಷೆ, ರಂಗ ಎಂಬ ಪ್ರಕರಣಗಳಲ್ಲಿ ಪ್ರತಿಪಾದಿಸಿದೆ. ನಾಟ್ಯಶಾಸ್ತ್ರದಲ್ಲಿ 'ವಸ್ತು', 'ಪಾಠ್ಯ' (ಭಾಷೆ, ಪದ್ಯ, ಗದ್ಯ) ವಿಚಾರಗಳು ವಾಚಿಕಾಭಿನಯದ ಒಳಗೂ "ಪಾತ್ರ" ವಿಚಾರವು ಸಾಮಾನ್ಯಾಭಿನಯದ ಒಳಗೂ ಬರುತ್ತದೆ.

**ಇತಿವೃತ್ತ:**

ಇತಿವೃತ್ತವೆಂದರೆ "ವಸ್ತು". ಅಂದರೆ ನಾಟಕದಲ್ಲಿರತಕ್ಕ ಕಥಾಭಾಗ. ಇದಕ್ಕೆ "ಇತಿವೃತ್ತ" ವೆಂದೂ ಹೆಸರು. ಇದು "ಅಧಿಕಾರಿಕ", 'ಪ್ರಾಸಂಗಿಕ' ಎಂದು ಎರಡು ವಿಧ. ಅಧಿಕಾರಿಕವೆಂದರೆ ನಾಟಕದ ಉದ್ದಕ್ಕೂ ಬರುವ ಮುಖ್ಯವಾದ ಕಥೆ. ಉದಾಹರಣೆ–ಶಾಕುಂತಲ ನಾಟಕದಲ್ಲಿ ಶಕುಂತಲಾ–ದುಷ್ಯಂತರ ವೃತ್ತಾಂತ. ಪ್ರಾಸಂಗಿಕವೆಂದರೆ, ಮುಖ್ಯಕಥೆಗೆ ಅಂಗವಾಗಿ ಮಧ್ಯೆ ಬರತಕ್ಕ ಕಥೆ. ಉದಾಹರಣೆ–ಮೇನಕೆ ಶಕುಂತಳೆಯನ್ನು ಎತ್ತಿಕೊಂಡುಹೋಗಿ ಮಾರೀಚಾಶ್ರಮದಲ್ಲಿ ಬಿಡಲು ಅಲ್ಲಿ ಸರ್ವದಮನನು ಹುಟ್ಟಿ ಬೆಳೆದದ್ದು. ಹೀಗೆ ಪ್ರಾಸಂಗಿಕವು ದೊಡ್ಡದಾಗಿದ್ದರೆ ಅದಕ್ಕೆ "ಪತಾಕಾ" ಎಂದೂ, ಸಣ್ಣದಾಗಿದ್ದರೆ (ಉದಾಹರಣೆ–ಬೆಸ್ತನ ವೃತ್ತಾಂತ, ಶಕುಂತಲೆಗೆ ವನದೇವತೆಯರು ಆಭರಣಗಳನ್ನು ಕೊಟ್ಟದ್ದು). "ಪ್ರಕರೀ" ಎಂದೂ ಹೆಸರು. ಈ ಮೂರು ವಿಧವಾದ ವಸ್ತುವು "ಪ್ರಖ್ಯಾತ"[100] ಎಂದರೆ–ರಾಮಾಯಣ ಭಾರತ ಕಥಾಸರಿತ್ಸಾಗರ ಮುಂತಾದ ಗ್ರಂಥಗಳಲ್ಲಿ ಬಂದಿದ್ದು–ಪ್ರಸಿದ್ಧವಾಗಿರಬಹುದು; ಅಥವಾ 'ಉತ್ಪಾದ್ಯ' ಎಂದರೆ ಕವಿಕಲ್ಪಿತವಾಗಿರಬಹುದು; ಇಲ್ಲವೇ 'ಮಿಶ್ರ' ಎಂದರೆ ಪ್ರಸಿದ್ಧವಾದ ಕಥೆಯಲ್ಲಿ ಬದಲಾವಣೆಗಳನ್ನು ಮಾಡಿದ್ದು ಆಗಿರಬಹುದು.

**ಅರ್ಥೋಪಕ್ಷೇಪಕಗಳು :**

ನೀರಸವಾದ ಅಥವಾ ಅನುಚಿತವಾದ ವಸ್ತುಭಾಗವನ್ನು 'ಅರ್ಥೋಪಕ್ಷೇಪಕ' ಗಳಿಂದ ಸೂಚಿಸಬೇಕು. ದೂರ ಪ್ರಯಾಣ, ಕೊಲೆ, ಯುದ್ಧ, ರಾಜ್ಯವಿಪ್ಲವ, ಮುತ್ತಿಗೆ, ಊಟ, ಸ್ನಾನ, ಲೇಪನ, ಬಟ್ಟೆಹಾಕಿಕೊಳ್ಳುವುದು, ಮಲಗುವುದು ಮುಂತಾದವು 'ಅನುಚಿತ'; ಇವುಗಳನ್ನು

[100] Kathasaristagara of Somadevabhatta edited by pandit.Durgaprasad &Asinath pamdurang parab, published byPandurang jawagji 'nirnaya-sagar 'press Bombay-1930

ರಂಗದಲ್ಲಿ ಪ್ರತ್ಯಕ್ಷವಾಗಿ ಅಭಿನಯಿಸಬಾರದು. ನಾಯಕನ ವಧೆಯನ್ನು ಎಲ್ಲಿಯೂ ವರ್ಣಿಸಲೂ, ಸೂಚಿಸಲೂ ಬಾರದು. ಮಧುರವಾಗಿಯೂ ಉದಾತ್ತವಾಗಿಯೂ ರಸಭಾವಗಳು ಪರಿಪೂರ್ಣವಾಗಿಯೂ ಇರುವ ಭಾಗಗಳನ್ನು ಮಾತ್ರ ಪ್ರದರ್ಶಿಸಬೇಕೆಂಬುದು ಇದರ ಭಾವ.

ಈ ಅರ್ಥೋಪಕ್ಷೇಪಕಗಳು ಯಾವುವೆಂದರೆ–

1. **ವಿಷ್ಕಂಭ–** ನಡೆದುಹೋದ ಕಥಾಂಶವನ್ನು ಸಂಕ್ಷೇಪವಾಗಿ ಸೂಚಿಸುವುದು; ಇದನ್ನು ಪ್ರಧಾನ ಪಾತ್ರಗಳು ಮಾಡುವುದಿಲ್ಲ. ಮಧ್ಯಮ ಪಾತ್ರಗಳಿಂದಾದರೆ "ಶುದ್ಧವಿಷ್ಕಂಭ"ವಾಗುತ್ತದೆ; ಮಧ್ಯಮ ನೀಚ ಪಾತ್ರಗಳೆರಡೂ ಸೇರಿ ಆದರೆ "ಮಿಶ್ರವಿಷ್ಕಂಭ"ವಾಗುತ್ತದೆ.
2. **ಪ್ರವೇಶಕ**–ನಡೆದುಹೋದ ಕಥಾಂಶವನ್ನು ಬರಿಯ ನೀಚಪಾತ್ರಗಳಿಂದಲೇ ಸೂಚಿಸುವುದು; ಇದು ಎರಡು ಅಂಕಗಳ ಮಧ್ಯದಲ್ಲಿಯೇ ಬರುತ್ತದೆ. (ಎಂದರೆ ವಿಷ್ಕಂಭವು ನಾಟಕದ ಮೊದಲಲ್ಲಿಯೇ ಬರಬಹುದು. ಪ್ರವೇಶಕವು ಹಾಗೆ ಬರುವುದಿಲ್ಲ; ಒಂದು ಅಂಕ ಮುಗಿದು ಮತ್ತೊಂದು ಆರಂಭವಾಗುವುದಕ್ಕಿಂತ ಮುಂಚೆ ಬರತಕ್ಕದ್ದು).
3. **ಚೂಲಿಕಾ**–ಪಾತ್ರಗಳು ರಂಗಕ್ಕೆ ಬರದೆ ತೆರೆಯ ಹಿಂದೆಯೆ ಇದ್ದು ಮಾತನಾಡಿ ಯಾವುದಾದರೂ ಒಂದು ಸಂಗತಿಯನ್ನು ಸೂಚಿಸುವುದು.
4. **ಅಂಕಾಸ್ಯ**–ಒಂದು ಅಂಕದ ಕೊನೆಯಲ್ಲಿ ಪಾತ್ರಗಳು ಹೋಗುವಾಗ ಮುಂದಿನ ಅಂಕದ ಆರಂಭದಲ್ಲಿ ಬರುವ ಬೇರೊಂದು ವಿಷಯವನ್ನು ಸೂಚಿಸುವುದು.
5. **ಅಂಕಾವತಾರ**–ಒಂದು ಅಂಕದ ಕೊನೆಯಲ್ಲಿ ಪ್ರಾತ್ರಗಳು ಹೋಗುವಾಗ ಸೂಚಿಸುವ ವಿಷಯದಿಂದಲೇ ಮತ್ತು ಅದೇ ಪಾತ್ರಗಳಿಂದಲೇ ಮುಂದಿನ ಅಂಕವು ಆರಂಭವಾಗುವುದು.

**ಶ್ರಾವ್ಯಾಶ್ರಾವ್ಯಗಳು:**

ವಸ್ತುವಿನಲ್ಲಿ ಕೆಲವು ಭಾಗಗಳು "ಶ್ರಾವ್ಯ"ವಾಗಿಯೂ ಮತ್ತೆ ಕೆಲವು ಭಾಗಗಳು "ಅಶ್ರಾವ್ಯ"ವಾಗಿಯೂ ಇರುತ್ತವೆ. ಅವು ಯಾವುವೆಂದರೆ–

1. **ಪ್ರಕಾಶ**–ಎಲ್ಲರೂ ಕೇಳಬಹುದಾದದ್ದು (ಶ್ರಾವ್ಯ).
2. **ಸ್ವಗತ**–ಮಾತನಾಡುವ ಪಾತ್ರವಲ್ಲದೆ ಮತ್ತಾರೂ ಕೇಳದ್ದು (ಅಶ್ರಾವ್ಯ).
3. **ಜನಾಂತಿಕ**–ಒಬ್ಬರನ್ನುಮರೆಮಾಡಿಕೊಂಡು ಮತ್ತೊಬ್ಬರೊಡನೆ ಮಾತನಾಡುವುದು.
4. **ಅಪವಾರಿತ**–ಹಿಂದಕ್ಕೆ ತಿರುಗಿಕೊಂಡು ಗುಟ್ಟು ಮಾತನಾಡುವುದು.

5. **ಆಕಾಶಭಾಷಿತ**–ಯಾವ ಪಾತ್ರಗಳೂ ಮಾತನಾಡದೆ ಇದ್ದರೂ ಮಾತನ್ನು ಕೇಳಿದಂತೆ ನಟಿಸಿ **"**ಏನೆಂದೆ?**"**, **"**ಹೀಗೆಂದೆಯೋ?**"** ಎಂದುಕೊಂಡು ಉತ್ತರಕೊಡುವುದು.[101]

**ಅರ್ಥಪ್ರಕೃತಿಗಳು:**

ಕಥಾವಿಸ್ತರೀಕರಣದ ದೃಷ್ಟಿಯಿಂದ ವಸ್ತುವಿನಲ್ಲಿ ಐದು ಅಂಶಗಳು ಕಂಡುಬರುತ್ತವೆ. ಅವುಗಳಿಗೆ 'ಅರ್ಥಪ್ರಕೃತಿ'ಗಳೆಂದು ಹೆಸರು. ಅವು ಯಾವುವೆಂದರೆ–

1. **ಬೀಜ**–ಕಥೆಗೆ ಮೂಲಭೂತವಾದ ಘಟನೆಯ ಸೂಚನೆ.
2. **ಬಿಂದು**–ಬೀಜರೂಪವಾದ ಘಟನೆಯ ವಿಸ್ತಾರ.
3. **ಪತಾಕಾ**–ಉಪಕಥೆ.
4. **ಪ್ರಕರೀ**–ಪ್ರಾಸಂಗಿಕ ವೃತ್ತಾಂತ.
5. **ಕಾರ್ಯ**–ಕಥಾಪರಿಣಾಮ ಅಥವಾ ಫಲ.

**ಅವಸ್ಥೆಗಳು:**

ನಾಯಕನ ಕಾರ್ಯದೃಷ್ಟಿಯಿಂದ ವಸ್ತುವಿನಲ್ಲಿ ಐದು ಸ್ಥಿತಿಗಳಿರುತ್ತವೆ. ಅವುಗಳಿಗೆ **"**ಅವಸ್ಥೆ**"** ಗಳೆಂದು ಹೆಸರು. ಅವು ಯಾವುವೆಂದರೆ–

1. **ಆರಂಭ**–ಮುಖ್ಯ ಕಾರ್ಯ ಸಾಧನೆಯಲ್ಲಿ ನಾಯಕಾದಿಗಳ ಔತ್ಸುಕ್ಯ.
2. **ಯತ್ನ**–ಅಡ್ಡಿ ಬರಲು, ಅದನ್ನು ನಿವಾರಣೆ ಮಾಡಿಕೊಂಡು ಕಾರ್ಯಸಾಧನೆಗಾಗಿ ಅವರು ಮಾಡುವ ಪ್ರಯತ್ನ.
3. **ಪ್ರಾಪ್ತ್ಯಾಶಾ**–ಸಾಧನೋಪಾಯಗಳೂ ಅವುಗಳಿಗೆ ಅಡಚಣೆಗಳೂ ಎರಡೂ ಇರುವುದರಿಂದ, ಫಲಪ್ರಾಪ್ತಿಯ ಸಂಭವ.
4. **ನಿಯತಾಪ್ತಿ**–ಅಡಚಣೆಗಳು ಕಳೆದುಹೋಗಿ ಫಲಪ್ರಾಪ್ತಿ ನಿಶ್ಚಯವಾಗಿ ಆಗುವುದೆಂಬ ಭರವಸೆ.
5. **ಫಲಾಗಮ**–ಕಾರ್ಯ ಕೈಗೂಡುವಿಕೆ.

---

[101] ಪ್ರತಾಪರುದ್ರೀಯನಾಟಕಲಕ್ಷಣಮ್ – ಜಿ.ವಿಷ್ಣುಮೂರ್ತಿ ಭಟ್ಟ – ಶ್ರೀಪತಿರಾವ್ ಮಾರ್ಪಳ್ಳಿ, ಮೈಸೂರು – 1967

**ಸಂಧಿಗಳು:**

ಮೇಲೆ ಹೇಳಿದ ಐದು "ಅರ್ಥಪ್ರಕೃತಿ"ಗಳೂ, ಐದು ಅವಸ್ಥೆಗಳೂ ಕ್ರಮವಾಗಿ ಒಂದಕ್ಕೊಂದು ಸೇರಿದರೆ ಕಥಾವಸ್ತುವಿನಲ್ಲಿ ಮುಖ, ಪ್ರತಿಮುಖ, ಗರ್ಭ, ಅವಮರ್ಶ, ಉಪಸಂಹೃತಿ(ನಿರ್ವಹಣ) "ಸಂಧಿ"ಗಳೆಂದು ಐದು ವಿಭಾಗಗಳಾಗುತ್ತವೆ. ಎಂದರೆ,

"ಮುಖ ಸಂಧಿ" ಯೆಂಬ ಅದರ ಮೊದಲನೆಯ ಭಾಗದಲ್ಲಿ ಕಥೆ ಇನ್ನೂ ಬೀಜರೂಪವಾಗಿರುತ್ತದೆ; ನಾಯಕನು ತನ್ನ ಕಾರ್ಯವನ್ನು ಆರಂಭಿಸಿರುತ್ತಾನೆ.

"ಪ್ರತಿಮುಖ ಸಂಧಿ"ಎಂಬ ಎರಡನೆಯ ಭಾಗದಲ್ಲಿ ಕಥೆ ಇನ್ನೂ ಸ್ವಲ್ಪ ಬೆಳೆಯುತ್ತದೆ; ನಾಯಕನು ಕಾರ್ಯಸಾಧನೆಗಾಗಿ ಯತ್ನ ಮಾಡುತ್ತಾನೆ.

ಮೂರನೆಯ "ಗರ್ಭಸಂಧಿ"ಯಲ್ಲಿ ಕಾರ್ಯಫಲವು ಕೈಗೂಡುವ ಸೂಚನೆ ತೋರುತ್ತದೆ.

ನಾಲ್ಕನೆಯ "ಅವಮರ್ಶ ಸಂಧಿ"ಯಲ್ಲಿ ಕಥೆ ಗರ್ಭ ಸಂಧಿಗಿಂತ ಮುಂದುವರಿಯುತ್ತದೆ; ನಾಯಕನು ಕೋಪ, ವ್ಯಸನ, ವಿಲೋಭನಾದಿಗಳಿಂದ ಸ್ವಲ್ಪ ತಡೆದು ನಿಲ್ಲುತ್ತಾನೆ. (ಆಮೇಲೆ ಫಲಪ್ರಾಪ್ತಿ ನಿಶ್ಚಯವಾಗುತ್ತದೆ).

"ಉಪಸಂಹೃತಿ (ನಿರ್ವಹಣ) ಸಂಧಿ" ಯಲ್ಲಿ ಹಿಂದೆ ನಾನಾಮುಖವಾಗಿದ್ದ ಕಾರ್ಯವೆಲ್ಲವೂ ಏಕಮುಖವಾಗಿ ಮುಗಿಯುತ್ತದೆ; ನಾಯಕನು ಉದ್ದಿಷ್ಟ ಕಾರ್ಯಫಲವನ್ನು ಪಡೆಯುತ್ತಾನೆ.

ಲಕ್ಷಣ ಗ್ರಂಥಕಾರರು ಈ ಐದು ಸಂಧಿಗಳಿಗೂ ಒಟ್ಟು (12+13+12+13+14)=64 ಅಂಗಗಳನ್ನು ಹೇಳುತ್ತಾರೆ. ಆದರೆ ಅವೆಲ್ಲವನ್ನೂ ಉಪಯೋಗಿಸಬೇಕೆಂಬ ನಿಯಮವಿಲ್ಲ. ಅವುಗಳನ್ನು ಯಥೋಚಿತವಾಗಿ ಉಪಯೋಗಿಸಿ ರೂಪಕವನ್ನು ಕಟ್ಟಿದರೆ, ಬೇಕಾದ ಅರ್ಥವನ್ನು ಹೇಳಬಹುದು, ಬೇಡದ್ದನ್ನು ಮುಚ್ಚಬಹುದು, ವಿಸ್ತರಿಸಬೇಕಾದದ್ದನ್ನು ವಿಸ್ತರಿಸಬಹುದು. ರಸಾಭಿವ್ಯಕ್ತಿಯಿಂದ ಸಂತೋಷಗೊಳಿಸಬಹುದು, ಅಭಿನಯ ಕೌಶಲದಿಂದ ಮೆಚ್ಚಿಸಬಹುದು, ಕಥೆಯನ್ನು ದೊಡ್ಡದು ಮಾಡಬಹುದು–ಎಂದರೆ, ಒಟ್ಟಿನ ಮೇಲೆ, ಹೃದಯಂಗಮವಾಗುವಂತೆ ಕಥೆಯನ್ನು ಬೆಳಸಿ, ನಾಟಕ ಕಟ್ಟಿ, ಅಭಿನಯಿಸಿ ಸಂತೋಷಪಡಿಸಬಹುದು.

**ನಾಯಕಾದಿ ಪಾತ್ರ ವೈಶಿಷ್ಟ್ಯ:**

**ನಾಯಕ**–ನಾಯಕನು ಧೈರ್ಯ, ಶೌರ್ಯ, ಸೌಂದರ್ಯಗಳುಳ್ಳವನು: ಸಮರ್ಥ, ತ್ಯಾಗಿ, ಧಾರ್ಮಿಕ, ಪ್ರಿಯವಾದಿ, ವಿದ್ಯಾವಂತ, ಬುದ್ಧಿವಂತ, ಸದ್ವಂಶಜನಾಗಿರಬೇಕು. ಇದು ನಾಯಕನ 'ಸಾಮಾನ್ಯ' ಲಕ್ಷಣ.

ನಾಯಕರಲ್ಲಿ ಧೀರೋದಾತ್ತ, ಧೀರಲಲಿತ, ಧೀರೋದ್ಧತ, ಧೀರಶಾಂತ ಎಂದು ನಾಲ್ಕು ವಿಧ.

**ಧೀರೋದಾತ್ತ**ನಲ್ಲಿರುವ ವಿಶೇಷಗುಣಗಳು ಯಾವುವೆಂದರೆ–ಸುಖ ದುಃಖಗಳಿಂದ ಚಲಿತವಾಗದಿರುವ 'ಮಹಾಸತ್ತ್ವ', ಗಾಂಭೀರ್ಯ, ಕ್ಷಮೆ, ತನ್ನನ್ನು ತಾನು ಹೊಗಳಿಕೊಳ್ಳದಿರುವುದು, ಸ್ಥೈರ್ಯ, ವಿನಯ ತುಂಬಿದ ಆತ್ಮವಿಶ್ವಾಸ, ಕಾರ್ಯದಕ್ಷತೆ. ಉದಾಹರಣೆ–ದುಷ್ಯಂತ, ಹರಿಶ್ಚಂದ್ರ, ಶ್ರೀರಾಮ.

**ಧೀರಲಲಿತನ** ವಿಶೇಷಗುಣಗಳು–ಮೃದುಸ್ವಭಾವ, ಸಂಗೀತ ಸಾಹಿತ್ಯಗಳಲ್ಲಿ ಆಸಕ್ತನಾಗಿ, ನಿಶ್ಚಿಂತನಾಗಿ, ಮಂತ್ರಿ–ಸೇನಾಧಿಪತಿಗಳಿಗೆ ರಾಜ್ಯದ ಆಡಳಿತ ಸುವ್ಯವಸ್ಥೆ ಹಾಗೂ ರಕ್ಷಣೆಯ ಜವಾಬ್ದಾರಿಯನ್ನು ವಹಿಸಿ ಸುಖವಾಗಿ ಇದ್ದುಬಿಡುವುದು. ಉದಾಹರಣೆ–ವತ್ಸರಾಜ.

**ಧೀರೋದ್ಧತ**ನ ವಿಶೇಷ ಗುಣಗಳು–ದರ್ಪ, ಮಾತ್ಸರ್ಯಗಳು, ಮಾಯಾ, ಮೋಸಗಳು, ರೌದ್ರ, ಚಾಂಚಲ್ಯಗಳು, ಅಹಂಕಾರ, ಆತ್ಮಶ್ಲಾಘನೆ, ಅಂದರೆ ತನ್ನ ಬೆನ್ನನ್ನು ತಾನೇ ತಟ್ಟಿಕೊಳ್ಳುವವನು. ಉದಾಹರಣೆ–ದುರ್ಯೋಧನ, ರಾವಣ (ಪ್ರತಿನಾಯಕನು ಸಾಮಾನ್ಯವಾಗಿ ಧೀರೋದ್ಧತನಾಗಿರುತ್ತಾನೆ).

**ಧೀರಶಾಂತ**ನಲ್ಲಿ ವಿಶೇಷ ಗುಣಗಳಿಲ್ಲ. ನಾಯಕಸಾಮಾನ್ಯ ಲಕ್ಷಣಗಳೇ ಅವನ ಗುಣಗಳು (ಅವನು ಸಾಮಾನ್ಯವಾಗಿ ಬ್ರಾಹ್ಮಣ ಅಥವಾ ವೈಶ್ಯನಾಗಿರುತ್ತಾನೆ). ಉದಾಹರಣೆ–ಮಾಧವ, ಚಾರುದತ್ತ.

ಶೃಂಗಾರನಾಯಕರಲ್ಲಿ ದಕ್ಷಿಣ, ಧೃಷ್ಟ, ಅನುಕೂಲ, ಶಠ ಎಂದು ನಾಲ್ಕು ವಿಧ. ದಕ್ಷಿಣನೆಂದರೆ, राजानो बहुवल्लभाः ಎಂಬಂತೆ ಅನೇಕ ಹೆಂಡತಿಯರಿದ್ದು ಅವರೆಲ್ಲರಲ್ಲಿಯೂ ಒಂದೇ ರೀತಿಯಾದ ಪ್ರೇಮವನ್ನು ತೋರಿಸತಕ್ಕವನು; ಧೃಷ್ಟನೆಂದರೆ, ತನ್ನ ಪತ್ನಿಯಲ್ಲಿ ಅಪರಾಧಮಾಡಿದ, ದೋಷಗಳು ಸ್ಪಷ್ಟವಾಗಿದ್ದು, ತಾನು ಆಕ್ಷೇಪಣೆಗೆ ಗುರಿಯಾದರೂ ನಾಚಿಕೆಪಟ್ಟುಕೊಳ್ಳದವನು.

ಅನುಕೂಲನೆಂದರೆ, ಒಬ್ಬಳೇ ನಾಯಿಕೆಯಲ್ಲಿ ಅನುರಕ್ತನಾಗಿರುವನು.

ಶಠನೆಂದರೆ, ಅನೇಕ ನಾಯಿಕೆಯರಲ್ಲಿ ಹೊರಗೆ ಸಮಾನವಾದ ಅನುರಾಗವನ್ನು ತೋರಿಸುತ್ತ ಒಳಗೆ ಒಬ್ಬಳನ್ನು ಹೆಚ್ಚಾಗಿ ಪ್ರೀತಿಸುತ್ತ ಮತ್ತೊಬ್ಬಳಿಗೆ ತೊಂದರೆ ಕೊಡುವನು.

ಇವರೆಲ್ಲರಲ್ಲಿಯೂ ಉತ್ತಮ, ಮಧ್ಯಮ, ಅಧಮ ಎಂಬ ಭೇದಗಳುಂಟು (ಆದ್ದರಿಂದ ನಾಯಕರಲ್ಲಿ 48 ಭೇದಗಳು ಎಂದು ಹೇಳುತ್ತಾರೆ–[102]

**ನಾಯಿಕೆ**–ನಾಯಿಕೆಯೆಂದರೆ ನಾಟಕದ ಪ್ರಧಾನ ಸ್ತ್ರೀಪಾತ್ರ; ನಾಯಿಕೆಯರಲ್ಲಿ 'ಸ್ವೀಯಾ' (ತನ್ನವಳು), 'ಅನ್ಯಾ' (ಇತರಳು), 'ಸಾಧಾರಣಾ' (ವೇಶ್ಯೆ) ಎಂದು ಮೂರು ವಿಧ;

ಸ್ವೀಯಳಲ್ಲಿ ಯೌವ್ವನದ ಮತ್ತು ಸಂಸಾರಾನುಭವದ ಮೇಲೆ ಮುಗ್ಧ, ಮಧ್ಯಾ, ಪ್ರಗಲ್ಭಾಯೆಂದು ಮೂರು ವಿಧ [ಹೀಗೆ ಭಾಗ ವಿಭಾಗ ಮಾಡುತ್ತಾ ನಾಯಿಕೆಯರಲ್ಲಿ 384 ಭೇದವೆಂದು ಲೆಕ್ಕ ಹಾಕುತ್ತಾರೆ! ಆ ಸಂಖ್ಯಾವಿವರವನ್ನೂ ನಾಯಿಕೆಯರ ಲಕ್ಷಣ ವಿವರಣೆಯನ್ನೂ 'ಸಾಹಿತ್ಯ ದರ್ಪಣ', (III, 112) ಮುಂತಾದ ಗ್ರಂಥಗಳಲ್ಲಿ ನೋಡಬಹುದು].

ಇತರ ಪಾತ್ರಗಳು ಮುಖ್ಯವಾಗಿ ನಾಯಕನ ಅಥವಾ ನಾಯಿಕೆಯ ಸಹಾಯಕರಾಗಿರುತ್ತಾರೆ.

**ನಾಯಕನ ಸಹಾಯಕರು**– ಪೀಠಮರ್ದ (ಪ್ರಾಸಂಗಿಕ ವಸ್ತುವಿನಲ್ಲಿ ಬರುವ ಪ್ರಧಾನಪಾತ್ರ), ವಿಟ, ಚೇಟ, ವಿದೂಷಕ (<ವಿದ್ವತ್ಸಖ?), ಮಂತ್ರಿ, ಕುಬ್ಜ, ಷಂಡ, ಕಿರಾತ, ಋತ್ವಿಕ್ಕುಗಳು, ಋಷಿಗಳು, ಸ್ನೇಹಿತ, ಸಾಮಂತ, ಸೈನಿಕ–ಇತ್ಯಾದಿ.

**ನಾಯಿಕೆಯ ಸಹಾಯಕರು**–ಸಖಿ, ದಾಸಿ, ಸಾಕುತ್ತಿರುವ ಹುಡುಗಿ, ನೆರೆಯವಳು, ಸಂನ್ಯಾಸಿನಿ–ಇತ್ಯಾದಿ.

**ಚಂಪೂಶೈಲಿಯಲ್ಲಿ ನಾಟಕಗಳು:**

ಸಂಸ್ಕೃತ ನಾಟಕಗಳಲ್ಲಿ ಪದ್ಯ–ಗದ್ಯಗಳೆರಡೂ ಬರುತ್ತವೆ; ಆದರೆ ಪದ್ಯಗಳಲ್ಲಿ ಉಪಯೋಗಿಸಿಕೊಂಡಿರುವ ವೃತ್ತಗಳು ಒಟ್ಟು ಸುಮಾರು ಮುವ್ವತ್ತು ಮಾತ್ರ; ಇವುಗಳಲ್ಲಿಯೂ ಹೆಚ್ಚಾಗಿ ಬರತಕ್ಕವು– ಅನುಷ್ಟುಪ್, ವಸಂತತಿಲಕಾ, ಮಾಲಿನೀ, ಶಿಖರಣೀ, ಶಾರ್ದೂಲವಿಕ್ರೀಡಿತ, ಸ್ರಗ್ಧರಾ, ಪುಷ್ಪಿತಾಗ್ರಾ, ವಂಶಸ್ಥ, ಆರ್ಯಾ, ಪ್ರಹರ್ಷಿಣೀ–ಈ ಹತ್ತೇಳು ಪ್ರಧಾನ;

ಪೃಥ್ವೀ, ಇಂದ್ರವಜ್ರಾ, ಮಂದಾಕ್ರಾಂತಾ, ವೈತಾಳೀಯ, ದ್ರುತವಿಲಂಬಿತ, ಔಪಚ್ಛಂದಸಿಕ, ಉಪಜಾತಿ, ಶಾಲಿನೀ, ವಂಶಸ್ಥ–ಇವು ಅಷ್ಟೊಂದು ಪ್ರಯೋಗದಲ್ಲಿಲ್ಲ; ಮಂಜುಭಾಷಿಣೀ, ರಥೋದ್ಧತಾ, ದಂಡಕವೃತ್ತ, ಭುಜಂಗಪ್ರಯಾತಾ, ಸುವದನಾ, ವೈಶ್ವದೇವೀ, ವಿದ್ಯುನ್ಮಾಲಾ,

[102] ಸಾಹಿತ್ಯದರ್ಪಣ – ಅನುವಾದ: ಡಾ.ಟಿ.ಜಿ.ಸಿದ್ದಪ್ಪಾರಾಧ್ಯ – ಹೇಮಾಪ್ರಿಂಟರ್ಸ್, ಮೈಸೂರು –1967

ಅಪರವಕ್ತ್ರಕಾ, ರುಚಿರಾ, ನರ್ಕುಟಕಾ–ಇವು ಕಂಡುಬರುವುದು ಎಲ್ಲೋ ಅಲ್ಲೊಂದು ಇಲ್ಲೊಂದು ಮಾತ್ರ.

ಇವುಗಳಲ್ಲಿ ಶ್ಲೋಕಗಳ ಮೂಲಕ ಇಂದ್ರವಜ್ರಾ, ವಂಶಸ್ಥ ಮುಂತಾದ ವೃತ್ತಗಳನ್ನು ಬಳಸಿ ಕೆಲವು ಕಥೆ ಹೇಳುವುದಕ್ಕೆ ಅನುಕೂಲವಾಗಿವೆ; ಏಕೆಂದರೆ ಇವುಗಳಲ್ಲಿ ಓಟವಿದೆ, ಲಘುತ್ವವಿದೆ; ಸ್ರಗ್ಧರಾ, ಶಾರ್ದೂಲವಿಕ್ರೀಡಿತ ಮುಂತಾದವು ದೊಡ್ಡದಾಗಿ ಗುರುವಾಗಿ ಘನವಾಗಿರುವುದರಿಂದ ವರ್ಣನೆಗೆ ಅನುಕೂಲವಾಗಿವೆ; ಆರ್ಯಾ, ವಸಂತತಿಲಕಾ, ಮಾಲಿನೀ, ಪುಷ್ಪಿತಾಗ್ರಾ, ವೈತಾಳೀಯ ಮುಂತಾದವು ಹಾಡಿಗೆ ಹೊಂದುತ್ತವೆ. ಅಶ್ವಘೋಷನೇ ಈಗ ನಮಗೆ ಗೊತ್ತಾಗಿರುವ ನಾಟಕಕರ್ತಾರಲ್ಲೆಲ್ಲಾ ಪ್ರಾಚೀನ; ಆದರೆ ಅವನ ಕಾಲಕ್ಕೇ ನಾಟಕವು ಬೆಳೆದು ಪೂರ್ಣರೂಪವನ್ನು ತಾಳಿತ್ತು; ಆದ್ದರಿಂದ ಅವನ ನಾಟಕಗಳ ಕೆಲವು ತುಂಡುಗಳಲ್ಲಿ ದೊರೆಯುವ ಛಂದೋಜಾತಿಗಳಿಂದ ಸಂಸ್ಕೃತ ನಾಟಕದ ಮೂಲಸ್ವರೂಪಕ್ಕೂ, ಛಂದಸ್ಸಿಗೂ ಇದ್ದಿರಬಹುದಾದ ಸಂಬಂಧದ ವಿಚಾರವಾಗಿ ಏನನ್ನೂ ನಿರ್ಣಯಮಾಡುವ ಹಾಗಿಲ್ಲ, ಆದರೆ ನಾಟಕವು ಗಾನ ನೃತ್ಯಮಯವಾಗಿರುವುದರಿಂದಲೂ, ಗದ್ಯಕ್ಕಿಂತ ಪದ್ಯವೇ–ಓದುಪದ್ಯಕ್ಕಿಂತ ಹಾಡುಪದ್ಯವೇ–ಗಾನಕ್ಕೆ ಅನುರೂಪವಾದದ್ದರಿಂದಲೂ, ನಾಟಕವು ಮೊದಲು, ಪೂರ್ತಿಯಾಗಲ್ಲದಿದ್ದರೆ ಬಹುಮಟ್ಟಿಗಾದರೂ, ಗಾನಯೋಗ್ಯವಾದ ಛಂದಸ್ಸಿನಿಂದಲೇ ರಚಿತವಾಗಿದ್ದಿರಬೇಕು–ಎಂದು ಊಹಿಸಬಹುದು. ಮಹಾಕಾವ್ಯ ಖಂಡಕಾವ್ಯಗಳಲ್ಲಿಯೂ ವರ್ಣನಾಂಶವು ಹೆಚ್ಚಿದ ಹಾಗೆಲ್ಲಾ, ಕಥನಕ್ಕೂ ಗಾನಕ್ಕೂ ಹೊಂದುತಕ್ಕ ಲಘುವೃತ್ತಗಳ ಜೊತೆಗೆ ವರ್ಣನಕ್ಕೆ ಹೊಂದತಕ್ಕ ದೊಡ್ಡ ದೊಡ್ಡ ವೃತ್ತಗಳೂ ಸಾಮರ್ಥ್ಯ, ಚಮತ್ಕಾರ ನಿದರ್ಶಕಗಳಾದ ಅಪೂರ್ವ ವೃತ್ತಗಳೂ ಸೇರುತ್ತಾ ಬಂದಿರಬೇಕು. ಹೀಗೆ, ಭಾಸ ಶೂದ್ರಕ, ಕಾಳಿದಾಸರಲ್ಲಿ ಕಂಡುಬರುವಷ್ಟು ಅನುಷ್ಟುಪ್ (ಶ್ಲೋಕ)ಗಳೂ ಆರ್ಯೆಗಳೂ ಹರ್ಷ, ಭವಭೂತಿಗಳಲ್ಲಿ ಕಂಡುಬರುವುದಿಲ್ಲ; ಭಾಸನು ದೊಡ್ಡ ವೃತ್ತವನ್ನು ಉಪಯೋಗಿಸುವಾಗ ಕೆಲವು ವೇಳೆ ಅದನ್ನು ಒಡೆದು ತುಂಡುಮಾಡಿ ಎರಡು ಮೂರು ಪಾತ್ರಗಳಿಗೆ ಹಂಚಿ ಸಂಭಾಷಣೆ ನಡೆಯುವಂತೆ ಮಾಡುತ್ತಾನೆ. ಆದರೆ ಕಾಳಿಕಾಸನ ಕಾಲದಲ್ಲಿಯಾಗಲಿ, ಭವಭೂತಿಯ ಕಾಲದಲ್ಲಿಯಾಗಲಿ ಪದ್ಯಗಳನ್ನೆಲ್ಲಾ ಹಾಡಿ, ಕುಣಿದು, ನಾಟಕವನ್ನು ಪ್ರಯೋಗಿಸುತ್ತಿದ್ದರೇ ಅಥವಾ ಯಾವ ವೃತ್ತವನ್ನು ಹಾಡುತ್ತಿದ್ದರು, ಯಾವುದನ್ನು ಹೇಳುತ್ತಿದ್ದರು ಎಂಬುದು ಗೊತ್ತಾಗುವುದಿಲ್ಲ.

ನೃತ್ಯವು ಭಾವಮಯ; ಆದರೆ ನಾಟಕದಲ್ಲಿರುವುದು ಬರಿಯ ಭಾವವಲ್ಲ; ರಸ ಮತ್ತು ಅದಕ್ಕೆ ಆಧಾರವಾದ ಕಥೆ; ಈ ಕಥೆ ಪಾತ್ರಗಳ ಮಾತಿನಿಂದಲೇ ಬೆಳೆಯಬೇಕಾದದ್ದು; ಆದ್ದರಿಂದ

ನೃತ್ಯ ಬೇರೆಯಾಗಿ ನಾಟಕ ಹುಟ್ಟಿದಾಗಲೇ ಅದರಲ್ಲಿ ಗದ್ಯ ಸೇರಿ ಹುಟ್ಟಿರಬಹುದು; ಇಲ್ಲದಿದ್ದರೆ ಗದ್ಯವನ್ನು ಹೋಲುವ 'ಶ್ಲೋಕ' ದಂಥ ಕಥನವೃತ್ತವನ್ನು ಉಪಯೋಗಿಸಿಕೊಂಡಿರಬೇಕು. ಆದರೆ, ನಿಜಾಂಶವೇನು? ಗದ್ಯ ಮೊದಲಿನಿಂದಲೂ ಇತ್ತೇ ಅಥವಾ ಆಮೇಲೆ ಬಂತೇ? ಆಮೇಲೆ ಸೇರಿದರೆ ಯಾವಾಗ ಸೇರಿತು? ಹೇಗೆ ಬೆಳೆಯಿತು? ಮೊದಲು ಶ್ಲೋಕಾದಿಗಳ ಉಪಯೋಗವೇನಿತ್ತು? – ಎಂಬಿವೆಲ್ಲಾ, ನಾಟಕದ ಆದಿಚರಿತ್ರೆಯೇ ಅಳಿಸಿಹೋಗಿರುವುದರಿಂದ, ಗೊತ್ತಾಗುವಂತಿಲ್ಲ. ರಸಾದಿಗಳ ಔಚಿತ್ಯವನ್ನನುಸರಿಸಿ, ಅಲ್ಪಪ್ರಾಣ–ಮಹಾಪ್ರಾಣ, ಹ್ರಸ್ವ–ದೀರ್ಘ, ಮೃದು–ಕಠಿಣ, ಸಂಯುಕ್ತ ಮುಂತಾದ ವರ್ಣಗಳನ್ನು ಉಪಯೋಗಿಸುವಂತೆ, ಹಿಂದೆ ನಾನಾ ಛಂದೋಜಾತಿಗಳನ್ನೂ ಔಚಿತ್ಯವನ್ನನುಸರಿಸಿ ಉಪಯೋಗಿಸುತ್ತಿದ್ದಂತೆ ತೋರುತ್ತದೆ. ಅವುಗಳ ರಸಾನುಗುಣ್ಯವನ್ನು ಕೆಲವು ಛಂದೋ ಗ್ರಂಥಕರ್ತರು ಚರ್ಚಿಸಿ ವಿಧಿಸಿಯೂ ಇರುತ್ತಾರೆ; ಈ ಔಚಿತ್ಯವನ್ನು ಪ್ರಾಚೀನ ನಾಟಕಕರ್ತರಲ್ಲಿ ಕೆಲವೆಡೆ ಕಾಣಬಹುದು. ಆದರೆ ಬರಬರುತ್ತ ಕವಿಗಳು ಈ ವಿವೇಕಕ್ಕೆ ಅಷ್ಟು ಲಕ್ಷ್ಯ ಕೊಟ್ಟ ಹಾಗೆ ಕಾಣುವುದಿಲ್ಲ.

ನಾಟಕದ ಗದ್ಯವು ಮೊದಮೊದಲು ಸ್ವಾಭಾವಿಕವಾದ, ಸಂಭಾಷಣೆಗೆ ಉಚಿತವಾದ, ಸರಳ ಶೈಲಿಯಲ್ಲಿರುತ್ತದೆ; ಆದರೆ ಅದು ಕ್ರಮೇಣ ವರ್ಣನಾದಿಗಳಲ್ಲಿ ಬಿಗುಪೇರುತ್ತ, ಹೆಣೆದುಕೊಳ್ಳುತ್ತ, ಬಾಣನ ಕಾಲದಿಂದೀಚೆಗೆ ಚಂಪುಗಳಲ್ಲಾದಂತೆ, ಜಟಿಲವೂ ಕ್ಲಿಷ್ಟವೂ ಆಗಿಹೋಗುತ್ತದೆ.

**ಪ್ರಾಕೃತದ ವಿದ್ಯಮಾನ:**

ಸಂಸ್ಕೃತ ನಾಟಕಗಳಲ್ಲಿ ಸಂಸ್ಕೃತ ಭಾಷೆಯ ಜೊತೆಗೆ ಹಲವು ವಿಧವಾದ ಪ್ರಾಕೃತ ಭಾಷೆಗಳೂ ಬರುತ್ತವೆ; ಈ ಅಂಶವು ಸಂಸ್ಕೃತ ನಾಟಕದ ಒಂದು ವೈಲಕ್ಷಣ್ಯ; ಸಂಸ್ಕೃತಕ್ಕೂ ಪ್ರಾಕೃತಕ್ಕೂ ಇರುವ ವ್ಯತ್ಯಾಸವನ್ನು ಸ್ಥೂಲವಾಗಿ ವಿದ್ಯಾವಂತರಾದ ನಾಗರಿಕರ ಭಾಷೆಗೂ ಅವಿದ್ಯಾವಂತರಾದ ಹಳ್ಳಿಗಾಡಿನವರ ಭಾಷೆಗೂ ಇರುವ ವ್ಯತ್ಯಾಸವೆನ್ನಬಹುದು; ಈ ಭಾಷೆಗಳ ಬೆರಕೆ ನಾಟಕಕ್ಕೆ ನೈಸರ್ಗಿಕತೆಯನ್ನುತರುವ ಉದ್ದೇಶದಿಂದಲೋ, ಪಾತ್ರವಹಿಸುವ ನಟರು ಅಸಂಸ್ಕೃತರಾಗಿದ್ದು ತಮ್ಮ ವ್ಯಾವಹಾರಿಕ ಭಾಷೆಯನ್ನು ಉಪಯೋಗಿಸುತ್ತಿದ್ದದರಿಂದಲೋ, ಮೊದಲು ಬಂದದ್ದೆಂದು ತೋರುತ್ತದೆ; ಆದ್ದರಿಂದಲೇ ಉತ್ತಮ ಪಾತ್ರಗಳೂ ವಿದ್ಯಾವಂತರೂ ಸಂಸ್ಕೃತವನ್ನು ಉಪಯೋಗಿಸುತ್ತಾರೆ. ಸಾಧಾರಣ ಸ್ತ್ರೀಯರೂ ಅವಿದ್ಯಾವಂತರೂ

ನೀಚಪಾತ್ರಗಳೂ ಪ್ರಾಕೃತವನ್ನು ಉಪಯೋಗಿಸುತ್ತಾರೆ; ಆದರೆ ಇವುಗಳಿಗೆ ಪ್ರತಿಷೇಧವಿಲ್ಲದೆ ಇಲ್ಲ; ಪ್ರಾಕೃತವಾಡುವ ಸ್ತ್ರೀಯರು ಅಲ್ಲಲ್ಲೆ "ಸಂಸ್ಕೃತಮಾಶ್ರಿತ್ಯ" ಮಾತನಾಡುವುದು ಉಂಟು.

ಒಂದಾನೊಂದು ಕಾಲದಲ್ಲಿ ಪಾಠಕರೂ, ಪ್ರೇಕ್ಷಕರೂ ಸಂಸ್ಕೃತವನ್ನು ಅರ್ಥಮಾಡಿಕೊಳ್ಳುತ್ತಿದ್ದಹಾಗೆಯೇ ಪ್ರಾಕೃತಗಳನ್ನೂ ಅರ್ಥಮಾಡಿಕೊಳ್ಳುತ್ತಿದ್ದಿರಬೇಕು; ಆದರೆ ಪ್ರಾಚೀನ ನಾಟಕಗಳಲ್ಲಿಯೂ ಪ್ರಾಕೃತ ವಾಕ್ಯಗಳು ಬರುವೆಡೆಗಳಲ್ಲೆಲ್ಲಾ ಅವುಗಳ ಸಂಸ್ಕೃತ "ಛಾಯೆ" ಬರುವುದರಿಂದ ಅವುಗಳನ್ನು ಜನರು ತಾವಾಗಿಯೇ ಅರ್ಥಮಾಡಿಕೊಳ್ಳುವ ಕಾಲವು ಬಹು ಹಿಂದೆಯೇ ನಿಂತುಹೋಯಿತೆಂದು ಊಹಿಸಬಹುದು; ಹರ್ಷ, ಭವಭೂತಿ, ರಾಜಶೇಖರಾದಿಗಳೂ ಅವರ ಮುಂದಿನವರೂ ಪ್ರಾಕೃತ ನಿಯಮಗಳನ್ನನುಸರಿಸಿ ತಮ್ಮ ಸಂಸ್ಕೃತವನ್ನು ಪ್ರಾಕೃತಕ್ಕೆ ರೂಪಾಂತರ ಮಾಡಿ ಬರೆದಂತೆ ತೋರುತ್ತದೆ.

'ಭಾಷೆ'ಗಳನ್ನೂ, 'ವಿಭಾಷೆ' (ಉಪಭಾಷೆ)ಗಳನ್ನೂ ಭರತನು ಈ ಶ್ಲೋಕಗಳಲ್ಲಿ ಪರಿಗಣನೆ ಮಾಡಿದ್ದಾನೆ–

मागध्यवन्तिजा प्राच्या शूरसेन्यर्धमागधी ।
बाह्लीका दाक्षिणात्या च सप्त भाषाः प्रकीर्तिताः ॥
शबराभीर चण्डाल सचरद्रविडोढ्रजाः ।
हीना वनेचराणां च विभाषा नाटिके स्मृताः ॥[१०३]

ಮುಂದಿನ ಶ್ಲೋಕಗಳಲ್ಲಿ ಈ ಭಾಷೆಗಳನ್ನು ಯಾರು ಯಾರು ಮಾತನಾಡಬೇಕೆಂಬ ವಿಚಾರವಾಗಿ ನಿಯಮಗಳೂ, ಆಯಾ ದೇಶ ಭಾಷೆಯ ವಿಶೇಷ ವೈಲಕ್ಷಣ್ಯಗಳೂ ಹೇಳಲ್ಪಟ್ಟಿವೆ. ರಾಜರಿಗೂ, ಅಂತಃಪುರ ನಿವಾಸಿಗಳಿಗೂ, ಮಾಗಧೀ; ಚೇಟ, ರಾಜಪುತ್ರ, ಶ್ರೇಷ್ಠಿಗಳಿಗೆ ಅರ್ಧಮಾಗಧೀ; ವಿದೂಷಕಾದಿಗಳಿಗೆ ಪ್ರಾಚ್ಯಾ; ಧೂರ್ತರಿಗೆ ಆವಂತಿ; ನಾಯಿಕೆಗೂ ಅವಳ ಸಖಿಯರಿಗೂ ಶೂರಸೇನೀ; ಯೋಧ ನಾಗರಿಕಾದಿಗಳಿಗೆ ದಾಕ್ಷಿಣಾತ್ಯಾ–ಇತ್ಯಾದಿ. ಆದರೆ ಭರತನಿಗೂ ಇತರ ಲಾಕ್ಷಣಿಕರಿಗೂ ವಿಧಿ ಪ್ರಯೋಗಗಳಲ್ಲಿ ವ್ಯತ್ಯಾಸಗಳು ಕಂಡು ಬರುತ್ತವೆ; ಒಟ್ಟಿನ ಮೇಲೆ ಈ ವಿಚಾರವನ್ನು ಲೋಕದಿಂದ ನೋಡಿ ತಿಳಿದುಕೊಳ್ಳಬೇಕೆಂದು ಭರತನು ವಿಧಿಸುತ್ತಾನೆ.

**ರಂಗ:**

---

[103] ಪ್ರತಾಪರುದ್ರೀಯ – ಡಾ.ಎಚ್.ಎಸ್.ತಿಪ್ಪೇರುದ್ರಸ್ವಾಮಿ – ಡಿ.ವಿ.ಕೆ.ಮೂರ್ತಿ ಪ್ರಕಾಶನ, ಮೈಸೂರು – 2010

“ರಂಗ” ವಿಚಾರವನ್ನು (1) ನಾಟ್ಯಮಟಪ ಅಥವಾ ಪ್ರೇಕ್ಷಾಗೃಹ, (2) ಪ್ರಯೋಗ, (3) ನಟರು, (4) ಪ್ರೇಕ್ಷಕರು ಎಂದು ನಾಲ್ಕು ಭಾಗಗಳಾಗಿ ವಿಂಗಡಿಸಿಕೊಳ್ಳಬಹುದು.

**ಪ್ರೇಕ್ಷಾಗೃಹ:**

ಭರತನ ಮತದಲ್ಲಿ ನಾಟ್ಯಮಂಟಪ ಅಥವಾ ಪ್ರೇಕ್ಷಾಗೃಹವು ಜ್ಯೇಷ್ಠ, ಮಧ್ಯಮ, ಕನಿಷ್ಠ ಎಂದು ಮೂರು ವಿಧ; ಜ್ಯೇಷ್ಠದ ಉದ್ದ 108 ಹಸ್ತ (ಹಸ್ತ=24 ಅಂಗುಲ= ಒಂದು ಮೊಳ?); ಮಧ್ಯಮದ ಉದ್ದ 64 ಹಸ್ತ; ಕನಿಷ್ಠದ ಉದ್ದ 32 ಹಸ್ತ. ಇವುಗಳಲ್ಲಿ ಜ್ಯೇಷ್ಠವು ದೇವತೆಗಳಲ್ಲಿಯೂ, ಮಧ್ಯಮವು ರಾಜರಲ್ಲಿಯೂ, ಕನಿಷ್ಠವು ಜನಸಾಮಾನ್ಯರಲ್ಲಿಯೂ ಉಪಯೋಗದಲ್ಲಿರತಕ್ಕದ್ದು; ಇವು ಒಂದೊಂದೂ, ಆಕಾರದಲ್ಲಿ ವಿಕೃಷ್ಟ, ಚತುರಸ್ರ ಅಥವಾ ತ್ರ್ಯಸ್ರ (ಉದ್ದ, ಚೌಕ, ತ್ರಿಕೋಣ) ವಾಗಿರಬಹುದು. ಇವುಗಳಲ್ಲೆಲ್ಲಾ ಮಧ್ಯಮ ಗೃಹವೆ ಶ್ರೇಷ್ಠ; ಏಕೆಂದರೆ ಅದರಲ್ಲಿ ಹಾಡೂ ಮಾತೂ ಚೆನ್ನಾಗಿ ಕೇಳುವುವು; ಮುಖಾದಿ ಸೂಕ್ಷ್ಮ ಅಭಿನಯಗಳೂ ಪ್ರೇಕ್ಷಕರಿಗೆ ಸ್ಪಷ್ಟವಾಗಿ ಕಂಡುಬರುವುವು.

ಇಲ್ಲಿ ವಿಕೃಷ್ಟ ಜಾತಿಯ ಮಧ್ಯಮ ಗೃಹವನ್ನು ಉದಾಹರಣೆಗಾಗಿ ತೆಗೆದುಕೊಂಡು ನಾಟ್ಯಮಂದಿರಗಳಲ್ಲಿ ಸಾಮಾನ್ಯವಾಗಿರುವ ವಿಭಾಗಗಳನ್ನೂ ಅವುಗಳ ಪ್ರಯೋಜನಾದಿಗಳನ್ನೂ ತಿಳಿಸಬಹುದು. ಇದು 64 ಹಸ್ತ ಉದ್ದ, 32 ಹಸ್ತ ಅಗಲ ಇರುತ್ತದೆ. ಇದರಲ್ಲಿ ಹಿಂದಿನಿಂದ 16 x 32 ಹಸ್ತ, ನೇಪಥ್ಯಗೃಹ; ಅಲ್ಲಿಯೇ ನಟರು ವೇಷಭೂಷಾದಿಗಳನ್ನು ಹಾಕಿಕೊಳ್ಳುವುದು. ಅಲ್ಲಿಂದ ಮುಂದಕ್ಕೆ 16 x 32 ಹಸ್ತ, “ನಾಟ್ಯರಂಗ”; ಇದರಲ್ಲಿ 8 x 32 ಹಸ್ತಗಳ ಅಳತೆಯಲ್ಲಿ ಎರಡು ಭಾಗಗಳಿದ್ದು ಹಿಂದಿನ ಭಾಗವು ಜಗಲಿಯ ಹಾಗೆ ಸುಮಾರು ಒಂದು ಮೊಳ ಎತ್ತರವಾಗಿರುತ್ತದೆ; ಇದಕ್ಕೆ ‘ರಂಗಶೀರ್ಷ’ವೆಂದು ಹೆಸರು. ಇದರ ಅಕ್ಕಪಕ್ಕಗಳಲ್ಲಿ ನೇಪಥ್ಯದೊಳಕ್ಕೆ ಹೋಗಲು ಬಾಗಿಲುಗಳಿರುತ್ತವೆ; (ಈ ಎರಡು ಬಾಗಿಲುಗಳ ನಡುವೆ ರಂಗಶೀರ್ಷ ನೇಪಥ್ಯಗಳಿಗೆ ಮಧ್ಯೆ ‘ಜವನಿಕೆ’ ಅಥವಾ ತೆರೆ ಇರುತ್ತಿತ್ತು). ಈ ಭಾಗದ ಮುಂದೆ ಇರುವ 8 x 32 ಹಸ್ತದ ಅಳತೆಯ ಭಾಗವು “ರಂಗಪೀಠ”ವೆನ್ನಿಸಿಕೊಳ್ಳುತ್ತದೆ; ಇದರ ಎರಡು ಪಕ್ಕದಲ್ಲಿಯೂ ರಂಗಶೀರ್ಷದ ಬಾಗಿಲುಗಳಿಗೆ ಎದುರಾಗಿ 8x8 ಹಸ್ತ ಅಳತೆಯುಳ್ಳ ಒಂದೊಂದು “ಮತ್ತವಾರಣಿ” ಅಥವಾ ಮಂಟಪವಿರುತ್ತದೆ.

ಹೀಗೆ 32x32 ಹಸ್ತವಿರುವ ನಾಟ್ಯಮಂದಿರದ ಅರ್ಧಭಾಗವು ಪ್ರೇಕ್ಷಕರು ಕುಳಿತುಕೊಳ್ಳುವ, ಮಿಕ್ಕ ಅರ್ಧಭಾಗಕ್ಕಿಂತ ಎತ್ತರವಾಗಿ ಒಂದು ಗುಹೆಯ ಹಾಗೆ ಕಾಣುತ್ತಿರುತ್ತದೆ. ಇದರ ಮುಂದೆ ಹಳ್ಳದಲ್ಲಿರುವ ಪ್ರೇಕ್ಷಕ ಭಾಗವು ನಾನಾ ಜಾತಿಯ ಜನಗಳಿಗಾಗಿ ಕಂಬಗಳಿಂದ ವಿಭಾಗಿಸಲ್ಪಟ್ಟಿರುತ್ತದೆಯಲ್ಲದೆ ಅಲ್ಲಿ ಪ್ರೇಕ್ಷಕರು ಕುಳಿತುಕೊಳ್ಳಲು ಮರ, ಇಟ್ಟಿಗೆ ಮುಂತಾದವುಗಳಿಂದ ಮಾಡಿದ ಸೋಪಾನವು ಇರುತ್ತದೆ. ಒಟ್ಟಿನ ಮೇಲೆ ಮಂದಿರವು ಸುಣ್ಣ–ಬಣ್ಣಗಳಿಂದಲೂ ವಿಧವಿಧವಾದ ಚಿತ್ರಗಳಿಂದಲೂ ಸುಂದರವಾಗಿರುತ್ತದೆ; ಸಂಗೀತವು ಚೆದುರಿ ಹೋಗುವುದರಿಂದ, ಗಾಳಿ ಅತಿಯಾಗಿ ಬೀಸುವಷ್ಟು ಕಿಟಕಿಗಳಿರುವುದಿಲ್ಲ.

ಹೀಗೆ ನಾಟ್ಯಶಾಸ್ತ್ರವು ಹಲವಾರು ಅಂಶಗಳನ್ನು ಒಳಗೊಂಡಿದ್ದರೂ ಅಧ್ಯಯನಕ್ಕೆ ಅಗತ್ಯವಾದ ಮುಖ್ಯಾಂಶಗಳನ್ನು ಮಾತ್ರ ಪರಿಚಯಿಸುವ ಪ್ರಯತ್ನವನ್ನು ಮಾಡಲಾಗಿದೆ. [104]

---

[104] ನಾಟ್ಯಶಾಸ್ತ್ರ–ಆದ್ಯ ರಂಗಾಚಾರ್ಯ.ಅಕ್ಷರ ಪ್ರಕಾಶನ ಹೆಗ್ಗೋಡು 2003

# ಅಧ್ಯಾಯ–4

## ಶಿವತತ್ತ್ವರತ್ನಾಕರದಲ್ಲಿನ ನಾಟ್ಯಶಾಸ್ತ್ರೀಯ ಅಂಶಗಳು ಮತ್ತು ವಿಶ್ಲೇಷಣೆ

राजन्वती पृथ्वी ಎಂಬ ಮಹಾಕವಿ ಕಾಳಿದಾಸನ ಉಕ್ತಿಗನುಗುಣವಾಗಿ ಯೋಗ್ಯ ಹಾಗೂ ಸರ್ವ ಸಮರ್ಥರಾಜನ ಆಳ್ವಿಕೆಯಿಂದ ಮಾತ್ರ ಧರೆಗೆ 'ಪೃಥ್ವೀ'ಎಂಬ ಶ್ರೇಷ್ಠ ಪ್ರಶಂಸೆ ಲಭಿಸಿದೆ. ಯಾರು ಪ್ರಜೆಗಳನ್ನೇ ಪ್ರಾಣವನ್ನಾಗಿ, ದೇಶವನ್ನೇ ದೇಹವನ್ನಾಗಿ ಭಾವಿಸಿ ಆಡಳಿತ ನಡೆಸುವನೋ ಅವನೇ ರಾಜ. ರಘುವಂಶದ ಮಹಾರಾಜರು ಇದಕ್ಕೆ ಅನ್ವರ್ಥರಾಗಿದ್ದರು. ಅವರು ಕಾಳಿದಾಸನ ಪ್ರಶಂಸೋಕ್ತಿಗನುಗುಣವಾಗಿ

**यथाहुतं तथाग्नीनां यथा कालप्रबोधिनाम् ।**

**यथापराधदण्डाना यथा कामार्थितार्थिताम् ॥[105]**

ತ್ರಿಸಂಧ್ಯಾಕಾಲಗಳಲ್ಲೂ ತಪ್ಪದೇ ಯಜ್ಞ–ಯಾಗಾದಿಗಳನ್ನು ಆಚರಿಸುತ್ತಿದ್ದರು. ಅಪರಾಧಗಳಿಗೆ ತಕ್ಕ ಶಿಕ್ಷೆಯನ್ನು ವಿಧಿಸುತ್ತಿದ್ದರು. ಕಾಲಾನುಗುಣವಾಗಿ ಜಾಗೃತರಾಗಿದ್ದರು. ಪ್ರಜೆಗಳು ಬಯಸಿದ ಬಯಕೆಗಳನ್ನು ತಪ್ಪದೇ ನೆರವೇರಿಸುತ್ತಿದ್ದರು. ಅಷ್ಟೇ ಸಾಲದು ಎಂಬಂತೆ ಸಕಲ ಶಸ್ತ್ರ–ಶಾಸ್ತ್ರಗಳಲ್ಲಿ ಪ್ರಾವೀಣ್ಯತೆಯನ್ನು ಸಂಪಾದಿಸಿದ್ದರು. ಅನೇಕ ಮಹಾಕವಿಗಳಿಗೆ ಸಂತರಿಗೆ, ಸತ್ಪುರುಷರಿಗೆ ಆಶ್ರಯದಾತರಾಗಿದ್ದರು. ಸ್ವಯಂ ಆಗಿ ಶ್ರೇಷ್ಠ ಕೃತಿಗಳನ್ನು ರಚಿಸುತ್ತಿದ್ದರು. ಅವರ ಸತ್ಪರಂಪರೆಯಲ್ಲಿ ಅನೇಕ ರಾಜರು ಸಾಗಿ ದೇಶದ ಕೀರ್ತಿಯನ್ನು ಬಾನೆತ್ತರಕ್ಕೆ ಪಸರಿಸಿದ್ದಾರೆ. ಆ ಸಾಲಿನಲ್ಲಿ ಕೆಳದಿಯ ರಾಜಮನೆತನದವರೂ ಸಹ ವಿಶಿಷ್ಟ ಸಾಧನೆಯನ್ನು ಮಾಡಿದ್ದಾರೆ. ವಿಶ್ವ ಸಾಹಿತ್ಯ ಸಾಮ್ರಾಜ್ಯಕ್ಕೆ ಹಿರಿತನದ ಕೊಡುಗೆಯನ್ನು ನೀಡಿದ್ದಾರೆ. ಸಾಹಿತ್ಯ ಸರಸ್ವತಿಯ ಕಿರೀಟಕ್ಕೆ ಕೀರ್ತಿಯ ಗರಿಯನ್ನು ಮುಡಿಸಿದ್ದಾರೆ. ಪ್ರಾಪಂಚಿಕ ಹಾಗೂ ಪಾರಮಾರ್ಥಿಕಪರವಾದ ಸಂದೇಶಗಳನ್ನು ಬಿತ್ತರಿಸಿದ್ದಾರೆ. ಭೌತಿಕವಾದುದು ರಾಜ್ಯವಾದರೆ ಸಾಂಸ್ಕೃತಿಕಪರವಾದ ಸಾಧನೆಯೇ ಸಾಮ್ರಾಜ್ಯವೆಂಬ ತಿಳುವಳಿಕೆಯಿಂದ ಅವರು ಪ್ರಜಾಪರಿಪಾಲನೆ ಮಾಡಿದ್ದಾರೆ. ಕೇವಲ ಸಮರ್ಥವಾದ ಸೈನ್ಯ ಕಟ್ಟುವುದೇ ಅವರ ಧ್ಯೇಯವಾಗಿರಲಿಲ್ಲ. ಪರಂತು ಸಾರ್ವಕಾಲಿಕ ಜಾಗೃತಿಯನ್ನು ಮೂಡಿಸುವ ಸಾಹಿತ್ಯವನ್ನೂ ಸೃಷ್ಟಿಸಿ ಸಾಹಿತ್ಯಪ್ರಿಯರ ಜ್ಞಾನದಾಹವನ್ನು ನೀಗಿಸಿದ್ದಾರೆ. ಈ ನಿಟ್ಟಿನಲ್ಲಿ "ಕೆಳದಿ ಬಸವರಾಜರ

---

[१०५] रघुवंश – महाकवि कालिदास, मोतिलाल बनारसी दास, जैनेन्द्रप्रकाश जैन, श्रीजैनेन्द्र प्रेस नई दिल्लि १९८७

ಶಿವತತ್ತ್ವರತ್ನಾಕರ"ವೆಂಬ ಕೃತಿ ವಿಶ್ವಮಾನ್ಯ ಜ್ಞಾನದ ಆಗರವೇ ಆಗಿದೆ. **यदिहास्ति तदन्यत्र यन्नेहास्ति न कुत्रचित्**[೧೦೬] ಎಂಬ ಶ್ರೇಷ್ಠ ಹೆಗ್ಗಳಿಕೆಗೆ ಪಾತ್ರವಾಗಿದೆ.

ನಾಟ್ಯಶಾಸ್ತ್ರವು ದೃಶ್ಯಕಾವ್ಯ ಪ್ರಧಾನವಾದುದು. ಸಹೃದಯರಿಗೆ ಸರ್ವರೀತಿಯಿಂದಲೂ ಮನರಂಜನೆಗೊಳಿಸಲೆಂದೇ ರಚಿತವಾದ ಈ ಶಾಸ್ತ್ರದಲ್ಲಿ ಕಾವ್ಯದ ಸ್ವರೂಪ–ಪ್ರಯೋಜನ–ಪ್ರಯೋಗ–ಔಚಿತ್ಯ–ಉದ್ದೇಶ–ರಸೋತ್ಪತ್ತಿ–ಭಾವಪ್ರಚೋದನೆಯೇ ಮೊದಲಾದ ಸಂಗತಿಗಳು ಅನುಸ್ಯೂತವಾಗಿ ಹೆಣೆದುಕೊಂಡಿರುತ್ತವೆ. ಅಲಂಕಾರ–ಧ್ವನಿತತ್ತ್ವಗಳ ಪ್ರತಿಪಾದನೆಯ ಜೊತೆಗೆ ನಾಟ್ಯಸ್ವರೂಪ–ನೃತ್ತ–ನೃತ್ಯಗಳ ಸ್ವರೂಪ ಮತ್ತು ಭೇದ, ಅವುಗಳ ಉಪಯೋಗ ಮುಂತಾದವುಗಳ ವಿವರಣೆಗಳೂ ನಿರೂಪಿಸಲ್ಪಟ್ಟಿರುತ್ತವೆ. ಈ ಎಲ್ಲ ಸಂಗತಿಗಳೂ ಶಿವತತ್ತ್ವರತ್ನಾಕರದ ಏಳನೆಯ ಕಲ್ಲೋಲ–ಆರನೆಯ ತರಂಗದಲ್ಲಿ ನಿರೂಪಣೆಗೊಂಡಿವೆ.

ಪ್ರಕೃತ ಗ್ರಂಥಕಾರನಾದ ಬಸವಭೂಪಾಲನು ಸಮರ್ಥ ಆಡಳಿತಗಾರನೆಂದು ಜನಮನ್ನಣೆ ಪಡೆದ ಜೊತೆಯಲ್ಲಿಯೇ ಸುಜ್ಞಾನಸಂಪನ್ನನೂ, ಸಕಲಶಾಸ್ತ್ರಪರಿವೇತ್ತಾರನೂ, ಮಹಾಮೇಧಾವಿಯೂ ಆಗಿದ್ದಾನೆ. ಅವನ ಕೃತಿಯಾದ ಶಿವತತ್ತ್ವರತ್ನಾಕರವು ವಿಶ್ವಕೋಶವೆಂಬ ಹೆಗ್ಗಳಿಕೆಗೆ ಪಾತ್ರವಾಗಿರುವುದರ ಹಿನ್ನೆಲೆಯಲ್ಲಿ ಅಗ್ರಮಾನ್ಯ ವಿದ್ವಾಂಸರ ಹಾಗೂ ವಿಮರ್ಶಕರ ಪರಿಶ್ರಮ, ಅವಲೋಕನ, ತಳಸ್ಪರ್ಶಿ ಅಧ್ಯಯನದ ನೇಪಥ್ಯವಿರುವುದು ಸುಸ್ಪಷ್ಟವಾಗಿದೆ. ಆಡುಮುಟ್ಟದ ಸೊಪ್ಪಿಲ್ಲವೆಂಬಂತೆ ಗ್ರಂಥಕಾರ ಬಸವಭೂಪಾಲನು ಸಾಹಿತ್ಯಲೋಕದಲ್ಲಿ ಅವಲೋಕಿಸದ ಯಾವ ಅಂಶವೂ ಉಳಿದಿಲ್ಲ. ಪ್ರಕೃತ 'ನಾಟ್ಯಶಾಸ್ತ್ರ'ವಿಭಾಗದಲ್ಲಿ ಗ್ರಂಥಕಾರನು ತಳಸ್ಪರ್ಶಿ ಅಧ್ಯಯನ ನಡೆಸಿರುವುದು ವಿದ್ವಜ್ಜನರಿಗೆ ಸ್ಪಷ್ಟವಾಗಿ ಗೋಚರಿಸುತ್ತಿದೆ. ನಾಟ್ಯಶಾಸ್ತ್ರವೆಂಬ ಸಂಸ್ಕೃತ ಗ್ರಂಥದ ಆರಂಭದಿಂದ ಅಂತ್ಯದವರೆಗೂ ಅವಲೋಕನ ಹಾಗೂ ಅವಗಾಹನ ಮಾಡಿರುವುದಲ್ಲದೆ ಅದರ ಹಿನ್ನೆಲೆ–ಮುನ್ನೆಲೆಗಳ ಸಾಹಿತ್ಯವನ್ನೂ ಕರಗತಮಾಡಿಕೊಂಡಿರುವುದು ಪ್ರಕೃತ ಗ್ರಂಥಭಾಗದಲ್ಲಿ ನಿಚ್ಚಳವಾಗಿ ಗೋಚರಿಸುತ್ತಿದೆ. ಸಂಸ್ಕೃತ ಸಾಹಿತ್ಯದ ಅಲಂಕಾರಶಾಸ್ತ್ರಕಾರರ ಸಮಗ್ರ ಕೃತಿಗಳನ್ನೂ ಆಮೂಲಾಗ್ರವಾಗಿ ಪರಾಮರ್ಶಿಸಿ ತನ್ನ ನಿಲುವನ್ನು ಈ ಗ್ರಂಥದಲ್ಲಿ ಪ್ರತಿಪಾದಿಸಿರುವುದು ಗಮನಾರ್ಹ ಸಂಗತಿಯಾಗಿದೆ. ದಂಡಿ–ಭಾಮಹ, ವಾಮನ, ವಿಶ್ವನಾಥ, ವಿದ್ಯಾನಾಥ, ಪ್ರತಾಪರುದ್ರ, ರಾಜಶೇಖರಾದಿಗಳ ಗ್ರಂಥಗಳ

[106] ಸಂಸ್ಕೃತ ಭಾಷಾಶಾಸ್ತ್ರ ಮತ್ತು ಸಾಹಿತ್ಯ ಚರಿತ್ರೆ – ಡಾ.ಕೃಷ್ಣಮೂರ್ತಿ – ಕರ್ನಾಟಕ ಸರ್ಕಾರ ಪಠ್ಯಪುಸ್ತಕ ಇಲಾಖೆ, ಬೆಂಗಳೂರು – 1993

ಛಾಯೆ ಹಾಗೂ ವಿಮರ್ಶೆಗಳು ಈತನ ಕೃತಿಯಲ್ಲಿ ರಾರಾಜಿಸುತ್ತಿರುವುದನ್ನು ಸಹೃದಯರು ಗಮನಿಸಬಹುದಾಗಿದೆ.

ಶಾಸ್ತ್ರೀಯವಾದ ಅಲಂಕಾರಗಳು ಕಾವ್ಯದ ಶೋಭಾಕರಗಳು. **काव्यशोभाकराः धर्माः अलङ्काराः** ಎಂಬ ಶಾಸ್ತ್ರಕಾರರ ನಿಶ್ಚಿತ ಅಭಿಪ್ರಾಯದ ಸಂಗತಿಗಳಿಂದ ಪರಿತುಷ್ಟನಾದ ಸುತನು ತನ್ನ ತಂದೆಗೆ ನಾಟ್ಯಶಾಸ್ತ್ರದ ಬಗ್ಗೆ ತಿಳಿಯಲು ಬಯಸಿ ತನ್ನ ಪ್ರಾರ್ಥನೆಯನ್ನು ರಾಜನ ಮುಂದೆ ಪ್ರಸ್ತುತಪಡಿಸುವ ಪೀಠಿಕೆಯೊಂದಿಗೆ ಪ್ರಕೃತ ನಾಟ್ಯಶಾಸ್ತ್ರದ ವಿಸ್ತೃತ ಪರಿಚಯವನ್ನು ಸಾಹಿತ್ಯಾಸಕ್ತರಿಗೆ ಉಣಬಡಿಸಲಾಗಿದೆ.

**ನಾಟಕ ಮತ್ತು ನಾಟ್ಯಶಾಸ್ತ್ರದ ವಿಶ್ಲೇಷಣೆ**

ಶಿವತತ್ತ್ವರತ್ನಾಕರ ಕೃತಿಯ ಹಲವೆಡೆ ನಾಟ್ಯಶಾಸ್ತ್ರಕ್ಕೆ ಸಂಬಂಧಿಸಿದ ವಿಷಯಗಳ ವಿವರಣೆಗಳಿದ್ದರೂ ನಿರ್ದಿಷ್ಟ ಕಲ್ಲೋಲಗಳನ್ನು ಈ ಶಾಸ್ತ್ರ ವಿವರಣೆಗಾಗಿಯೇ ಮೀಸಲಿರಿಸಲಾಗಿದೆ. ಅವುಗಳನ್ನು ಕ್ರಮವಾಗಿ ಈ ಮುಂದಿನಂತೆ ವಿಶ್ಲೇಷಿಸಲಾಗಿದೆ.

ಏಳನೆಯ ಕಲ್ಲೋಲ ಆರನೆಯ ತರಂಗದಲ್ಲಿ ನಾಟ್ಯಶಾಸ್ತ್ರದ ಉಗಮದಿಂದ ವಿಸ್ತೃತವಾಗಿ ವರ್ಣಿಸಿದ್ದು, ಕವಿಯು ಭರತನ ನಾಟ್ಯಶಾಸ್ತ್ರವನ್ನು ಹೆಚ್ಚು ಆಶ್ರಯಿಸಿ ವಿಷಯಗಳನ್ನು ಕ್ರೋಢೀಕರಿಸಿರುವುದು ಕಂಡುಬರುತ್ತದೆ. ಅದನ್ನು ಗ್ರಂಥಾಧಾರದಲ್ಲಿ ಚರ್ಚಿಸಬಹುದಾಗಿದೆ.

अलङ्कारा जगदलङ्काराः स्वामिन्! प्रदर्शिताः ।
आनन्दयन्ति हृदयं ममैते हृदयङ्गमाः ॥
अधुना नाटकाख्यस्य प्रबन्धस्य सुविस्तृतम् ।
लक्षणं श्रोतुमीहा मे मानसे सम्प्रवर्तते ॥
एतन्मह्यं समाख्याहि विख्यातगुणवारिधे! ।
पुत्र ! यच्छ्रोतुमिष्टं ते वर्णयामि पुनः श्रुणु ॥ [107]

[107] ಶಿವತತ್ತ್ವರತ್ನಾಕರ – (ಸಂ) ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ್, ಸಂಪುಟ 1 ಮತ್ತು 2, – ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ – 1999.

ಸ್ವಾಮಿಯೇ ! ಅಲಂಕಾರಗಳು, ಜಗತ್ತಿನ ಅಲಂಕಾರಗಳು ನಿಮ್ಮಿಂದ ವಿವರಿಸಲ್ಪಟ್ಟವು. ಆಕರ್ಷಕವಾದ ಇವು ನನ್ನ ಹೃದಯವನ್ನು ಸಂತೋಷಗೊಳಿಸಿವೆ. ಈಗ ನಾಟಕ ಎಂಬ ಹೆಸರಿನ ಪ್ರಬಂಧದ ಬಗ್ಗೆ ವಿಸ್ತಾರವಾಗಿ ತಿಳಿಯಲು ಬಯಸುತ್ತೇನೆ. ಅದರ ಲಕ್ಷಣಗಳನ್ನು ತಿಳಿಯಲು ನನ್ನ ಮನಸ್ಸು ತುಡಿಯುತ್ತಿದೆ. ಪ್ರಖ್ಯಾತನಾದ ಗುಣವಾರಿಧಿಯೇ! ಇವೆಲ್ಲವನ್ನೂ ನನಗೆ ವಿವರಿಸಿ ಹೇಳು, ಎಂದು ಕೇಳಿದ ಮಗನಿಗೆ. ಮಗುವೆ! ನಿನಗೆ ಕೇಳಲು ಯಾವುದು ಇಷ್ಟವಾದದ್ದೋ, ಅದನ್ನು ಪುನಃ ವರ್ಣಿಸುವೆ, ಕೇಳು ಎಂದು ರಾಜನು ಹೇಳತೊಡಗುತ್ತಾನೆ.

चतुर्विधैरभिनयैः सात्त्विकांगिकपूर्वकैः ।

धीरोदात्ताद्यवस्थानुकृतिर्नाट्यं रसाश्रयम् ॥

भावाश्रयं तु नृत्तं स्यान्कर्त्रे तालालयाश्रयम् ।

मधुरोद्धतभेदेन तद्द्वयं द्विविधं पुनः ॥

लास्यताण्डवभेदेन नाटकादुपकारकम् ।

ನಾಟ್ಯವು ರಸದ ಆಶ್ರಯವನ್ನು ಹೊಂದಿದೆ. ಸಾತ್ತ್ವಿಕ, ಆಂಗಿಕ ಮುಂತಾದ ನಾಲ್ಕು ರೀತಿಯ ಅಭಿನಯ ದಿಂದ ಕೂಡಿದೆ. ಧೀರೋದಾತ್ತ ಮುಂತಾದ ನಾಲ್ಕು ರೀತಿಯ ನಾಯಕರಿಂದಲೂ ಅವರ ಅನುಕರಣೆಯಿಂದಲೂ ಕೂಡಿದೆ (ನೃತ್ತ–ನೃತ್ಯಗಳ ಸ್ವರೂಪ ಅವುಗಳ ಆಂತರಿಕ ಭೇದ). ನೃತ್ತ ವು ಭಾವದ ಆಶ್ರಯ ಹೊಂದಿದರೆ, ನೃತ್ಯ ವು ತಾಳ, ಲಯಗಳ ಆಶ್ರಯ ಹೊಂದಿದೆ. ಅವು ಮಧುರ ಮತ್ತು ಉದ್ಧತ ಎಂಬ ಎರಡು ಉಪವಿಭಾಗಗಳನ್ನು ಹೊಂದಿವೆ. ನೃತ್ತ ಮತ್ತು ನೃತ್ಯಗಳೆರಡೂ ಲಾಸ್ಯ ಮತ್ತು ತಾಂಡವ ಎಂಬ ಭೇದ ಹೊಂದಿವೆ.

1. ಮನಸ್ಸಿನ ಅಭಿಪ್ರಾಯವನ್ನು ವ್ಯಕ್ತಪಡಿಸುವ ಅಂಗಾಂಗಗಳ ಚೇಷ್ಟೆಗೂ ಅಭಿನಯ, ಬೇರೆಯವರ ಅವಸ್ಥೆಯನ್ನು ಅನುಕರಿಸುವುದಕ್ಕೂ ಅಭಿನಯ ಎಂದು ಹೆಸರು. ಈ ಅಭಿನಯವು ಆಂಗಿಕ, ವಾಚಿಕ, ಆಹಾರ್ಯ ಮತ್ತು ಸಾತ್ತ್ವಿಕ ಎಂದು ನಾಲ್ಕು ಬಗೆ (1) ಶರೀರದ ಅಂಗಾಂಗಗಳಿಂದ ಮಾಡುವ ಅನುಕರಣೆ ಆಂಗಿಕ (2) ವಾಚಿಕವೆಂದರೆ ಮಾತಿನ ಅನುಕರಣೆ (3) ವೇಷ–ಭೂಷಣಗಳಿಂದ ಅನುಕರಿಸುವ ವರ್ತನೆ ಆಹಾರ್ಯ (4) ಹಲವಾರು ರೀತಿಯ ಭಾವಗಳಿಂದ ಹೆದರಿಕೆ, ಆಶ್ಚರ್ಯ, ರೋಮಾಂಚನಗಳನ್ನು ವ್ಯಕ್ತಪಡಿಸುವ ಅನುಕರಣೆ ಸಾತ್ವಿಕಾಭಿನಯ.

2. ತಾಳ–ಲಯಗಳನ್ನು ಆಶ್ರಯಿಸಿರುವುದು ನೃತ್ತ. ಚಂಚತ್ಪುಟ ಮುಂತಾದವು ಇದರ ತಾಳಗಳು. ದ್ರುತವಿಲಂಬಿತ ಮುಂತಾದವು ಲಯಗಳು. ಅಭಿನಯವಿಲ್ಲದೇ ಕೇವಲ ತಾಳ–ಲಯಗಳನ್ನೇ ಆಧಾರವಾಗಿಟ್ಟುಕೊಂಡ ಅಂಗಚೇಷ್ಟೆಯೇ ನೃತ್ತ.
3. ನೃತ್ಯ–ನೃತ್ಯವು ಪದಾರ್ಥಗಳ ಅಭಿನಯಹೊಂದಿ, ಪರಂಪರಾಗತವಾಗಿ ಬಂದಿದೆ. ಅದಕ್ಕೆ 'ಮಾರ್ಗ' ಎಂಬ ಹೆಸರಿದೆ. ಅಭಿನಯವಿಲ್ಲದ ಜಾನಪದಕಲೆಗೂ 'ನೃತ್ಯ'ವೆಂದೂ, 'ದೇಶೀ' ಎಂದೂ ಹೆಸರುಂಟು.
4. ನೃತ್ತ–ನೃತ್ಯಗಳು ಮಧುರ ಮತ್ತು ಲಾಸ್ಯ ಎಂಬ ಉಪಭೇದಗಳನ್ನು ಹೊಂದಿವೆ. ಲಾಸ್ಯವೆಂದರೆ ಮಧುರ, ತಾಂಡವ ಎಂದರೆ ಉದ್ಧತ, ಇವು ಹತ್ತು ರೂಪಕಗಳಿಗೆ ಸಹಕಾರಿಯಾಗಿವೆ. ಕೋಮಲವಾದ ನೃತ್ತ ಮತ್ತು ನೃತ್ಯಕ್ಕೂ ಲಾಸ್ಯ, ಎಂದು ಕರೆಯುವ ವಾಡಿಕೆ ಇದೆ. ಹಾಗೆಯೇ ಉದ್ಧತವಾದ, ಪ್ರಚಂಡವಾದ ನೃತ್ತ–ನೃತ್ಯವು ಶೋಭೆಯನ್ನು ಉಂಟುಮಾಡುತ್ತದೆ.

नाटकं सप्रकरणं भाणः प्रहसनं डिमः ॥

व्यायोगः समवाकारो वीथ्यंकेहामृगा इति ।

वस्तुनेतृरसास्तेषां रूपकाणां हि भेदकाः ॥

प्रख्यातोत्पाद्यमिश्रत्व भेदाद्वस्तु त्रिधा मतम् ।

मुखं प्रतिमुखं गर्भः सावमर्शोपसंहृतिः ॥[१०८]

ನಾಟಕ,ಪ್ರಕರಣ, ಭಾಣ, ಪ್ರಹಸನ, ಡಿಮ, ವ್ಯಾಯೋಗ, ಸಮವಕಾರ, ವೀಥೀ, ಅಂಕ, ಈಹಾಮೃಗ, ಎಂದು ಅವು ಹತ್ತು ಬಗೆ. ವಸ್ತು ನೇತಾ, ರಸ ಇವುಗಳಿಂದಾಗಿ ರೂಪಕದಲ್ಲಿ ವ್ಯತ್ಯಾಸವಿದೆ. ರೂಪಕದ ಸಂವಿಧಾನ ಅಥವಾ ಇತಿವೃತ್ತ (ಮುಖ್ಯ ಕಥೆ) ಪ್ರಖ್ಯಾತ, ಉತ್ಪಾದ್ಯ ಮತ್ತು ಮಿಶ್ರ ಎಂದು ಮೂರು ವಿಧವಾಗಿರುತ್ತದೆ.

1. ರೂಪಕಪರಿಭಾಷೆಯಲ್ಲಿ ವಸ್ತುವೆಂದರೆ ಕಥಾವಿಷಯ, ರೂಪಕಸಾರಾಂಶ. ಅದು ಪ್ರಸಿದ್ಧವಾಗಿರಬೇಕು. ಕಥೆಯನ್ನು ತಿಳಿದುಕೊಳ್ಳುವುದರಲ್ಲೇ ಪ್ರೇಕ್ಷಕರು ಸಮಯ ಹಾಳುಮಾಡುವಂತೆ ಇರಬಾರದು. ಕವಿಯು ರೂಪಿಸಿದ ಘಟನಾವಳಿಗಳು, ಸನ್ನಿವೇಶ–ಸಂವಾದಗಳು, ನಾಟ್ಯಚಾತುರ್ಯ, ರಸ–ಭಾವಾದಿಗಳು ಪ್ರೇಕ್ಷಕರನ್ನು ಆಕರ್ಷಿಸುವಂತೆ

---

[108] ಶಿವತತ್ತ್ವರತ್ನಾಕರ – (ಸಂ) ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ್, ಐದು ಸಂಪುಟಗಳು, ದರೇಸಾ ಪ್ರಕಾಶನ, ಬೆಂಗಳೂರು –2013. (7–6–6,7,8)

ವಸ್ತುವನ್ನು ತೆಗೆದುಕೊಳ್ಳಬೇಕು. ಆ ವಸ್ತು ಇತಿಹಾಸದಿಂದ ಆಯ್ದಿರಬಹುದು ಅಥವಾ ಸಜ್ಜನರ ಚರಿತ್ರೆ ಅಥವಾ ನಡವಳಿಕೆಯನ್ನು ಆಶ್ರಯಿಸಿರಬಹುದು.

2. ರೂಪಕಗಳ ನಾಯಕನು ದೇವಾಂಶಸಂಭೂತನಾಗಿರಬೇಕು. ಅಥವಾ ದೇವಾಧಿದೇವತೆಗಳೂ ರೂಪಕಗಳ ನಾಯಕರಾಗಿರಬಹುದು. ಕ್ಷತ್ರಿಯನಾದರೆ ಉನ್ನತಕುಲದಲ್ಲಿ ಜನಿಸಿರಬೇಕು. ಧೀರೋದಾತ್ತ ಗುಣಗಳನ್ನು ಹೊಂದಿರಬೇಕು. ಕೆಲವು ಬಾರಿ ನಾಟಕಗಳ ನಾಯಕರು ಧೀರಲಲಿತ, ಧೀರಶಾಂತ ಸ್ವಭಾವಕ್ಕೆ ಸೇರಿದವರೂ ಆಗಿರುತ್ತಾರೆ. ಅವರ ಸ್ವಭಾವಕ್ಕೆ ಅನುಗುಣವಾಗಿ ನಾಯಕಿಯರನ್ನು ಅಳವಡಿಸಿ ಆಕರ್ಷಕವಾಗಿ ಸಂವಿಧಾನವನ್ನು ರೂಪಿಸಬೇಕು.
3. ರೂಪಕಗಳಲ್ಲಿ ಪ್ರತಿಪಾದಿಸಲ್ಪಟ್ಟಿರುವ ಕಥಾಂಶವು ಪ್ರಖ್ಯಾತ, ಉತ್ಪಾದ್ಯ ಮತ್ತು ಮಿಶ್ರವೆಂದು ಮೂರುವಿಧ. ಪುರಾಣಗಳಲ್ಲಿ ದೇವ–ದಾನವರ ಪ್ರಸಿದ್ಧ ವಿಷಯಗಳನ್ನು ಪ್ರಸ್ತುತಪಡಿಸುತ್ತಾರೆ. ಅದು ಪ್ರಖ್ಯಾತ ಕವಿಗಳು ಹಲವು ವಿಷಯಗಳನ್ನು ತಾವಾಗಿಯೇ ಊಹಿಸಿ ಗ್ರಂಥ ರಚಿಸುತ್ತಾರೆ. ಅದು ಉಪಾದ್ಯ. ಇವೆರಡೂ ಸೇರಿರುವ ಕಥಾಂಶಕ್ಕೆ ಮಿಶ್ರವೆಂದು ಹೆಸರು.

इत्येवं सन्धयः पञ्च नाटके परिकीर्तिताः ।
बीजबिन्दुपताकाख्यप्रकरीकार्यलक्षणाः ॥

ಮುಖ, ಪ್ರತಿಮುಖ, ಗರ್ಭ, ಅವಮರ್ಶ ಅಥವಾ ವಿಮರ್ಶೆ, ಉಪಸಂಹೃತಿ ಅಥವಾ ಉಪಸಂಹಾರ ಎಂಬಿವು ನಾಟಕದಲ್ಲಿ ಪ್ರಯೋಗಿಸುವ ಐದು ಸಂಧಿಗಳು, ಬೀಜ, ಬಿಂದು, ಪತಾಕಾ, ಪ್ರಕರೀ ಮತ್ತು ಕಾರ್ಯಲಕ್ಷಣಗಳು ಅರ್ಥಪ್ರಕೃತಿಗಳು.[109]

आरम्भयत्नप्राप्त्याशानियताप्तिफलागमाः ।
अर्थप्रकृतयः पञ्च पञ्चावस्थासमन्विताः ॥
यथासङ्ख्येन जायन्ते मुखाद्याः पञ्च सन्धयः ।
औत्सुक्यमात्रमारम्भः फललाभाय भूयसे ॥

[109] ಶಿವತತ್ತ್ವರತ್ನಾಕರ – ಸಂಪುಟ 2 – ಸಂ: ಎಸ್.ನಾರಾಯಣ ಶಾಸ್ತ್ರಿ ಮತ್ತು ಆರ್. ರಾಮಾಶಾಸ್ತ್ರಿ, ಪ್ರಾಚ್ಯವಿದ್ಯಾ ಸಂಶೋಧನಾ ಕೇಂದ್ರ, ಮೈಸೂರು ವಿಶ್ವವಿದ್ಯಾಲಯ, ಮೈಸೂರು –1964.

प्रयत्नस्तु तदप्राप्तौ व्यापारोऽतित्वरान्वितः ।

उपायापायशङ्काभ्यां प्राप्त्याशा कार्यसम्भवः ॥

अपायाभावतः कार्यनिश्चयो नियताप्तिका ।

समग्रफलसम्पत्तिः फलागम उदाहृतः ॥

ಆರಂಭ, ಯತ್ನ, ಪ್ರಾಪ್ತ್ಯಾಶಾ, ನಿಯತಾಪ್ತಿ, ಫಲಾಗಮ ಎಂದು ಐದು ಅವಸ್ಥೆಗಳು ಕಥಾವಸ್ತುವಿಗೆ ಸಂಬಂಧ ಪಟ್ಟಿರುತ್ತವೆ. ಈ ಅವಸ್ಥೆಗಳು ನಾಯಕನ ಮನಃಸ್ಥಿತಿಯನ್ನು ಸೂಚಿಸುತ್ತವೆ.

ಮುಖ, ಪ್ರತಿಮುಖ, ಗರ್ಭ, ಅವಮರ್ಶ, ಉಪಸಂಹೃತಿ ಎಂಬ ಐದು ಸಂಧಿಗಳನ್ನು ವಿವರಿಸಲಾಗುತ್ತದೆ.

ಅತ್ಯುತ್ತಮವಾದ ಫಲದ ಪ್ರಾಪ್ತಿಗಾಗಿ ನಾಯಕ–ನಾಯಕಿ ಮುಂತಾದವರಲ್ಲಿ ಉಂಟಾಗುವ ಉತ್ಸುಕತೆಗೆ 'ಆರಂಭ'ಎಂದು ಹೆಸರು.

ಬಯಸಿದ ಫಲವು ದೊರಕದೇ ಇದ್ದಾಗ ಅದಕ್ಕಾಗಿ ಹಲವಾರು ಉಪಾಯಗಳನ್ನು ಯೋಚಿಸಿಕೊಂಡು ಅತಿ ಶೀಘ್ರವಾಗಿ ಕೆಲಸದಲ್ಲಿ ತೊಡಗುವುದಕ್ಕೆ 'ಪ್ರಯತ್ನ' ಎಂದು ಕರೆಯುತ್ತಾರೆ.

ಈ ಉಪಾಯಗಳ ಜೊತೆ ಜೊತೆಗೆ ಅಪಾಯದ ಸಂದೇಹವು ಇದ್ದು ಫಲಪ್ರಾಪ್ತಿಯು ದೊರಕುವ ಖಚಿತತೆ ಇಲ್ಲದಿರುವುದೇ ಪ್ರಾಪ್ತ್ಯಾಶಾ.

ಎಲ್ಲ ರೀತಿಯ ಅಡ್ಡಿ ಆತಂಕಗಳು ಪರಿಹಾರವಾಗಿ ಅಪಾಯವು ಸಂಭವಿಸದೇ ಫಲಪ್ರಾಪ್ತಿಯು ಪೂರ್ಣವಾಗಿ ದೊರೆತರೆ ಆಗ ಅದು ನಿಯತಾಪ್ತಿ.

ಸಮಗ್ರವಾಗಿ ಫಲವು ದೊರಕುವುದಕ್ಕೆ ಫಲಾಗಮ ಎಂದು ಹೆಸರು.

स्तोकोद्दिष्टः कार्यहेतुर्बीजं विस्तार्यनेकधा ।

अवान्तरार्थविच्छेदे बिन्दुरच्छेदकारणम् ॥

प्रतिपाद्यकथाङ्गं स्यात्पाका व्यापिनी कथा ।

अव्यापिनी प्रकरिकाकार्यं निर्वाहकृत्फले ॥

मुखं बीजसमुत्पत्तिर्नानार्थरससंश्रयः ।

अङ्गानि द्वादशैतस्य बीजारम्भसमन्वयात् ॥

उपक्षेपः परिकरः परिन्यासो विलोभनम् ।
युक्तिः प्राप्तिः समाधानं निधानं परिभावनम् ॥
उद्भेदभेदकरणान्यन्वर्थानि यथाक्रमम् ।
बीजन्यास उपक्षेपस्तद्बाहुल्यं परिक्रिया ॥ [११०]

ರೂಪಕಗಳ ಪ್ರಾರಂಭದಲ್ಲಿ ಅತ್ಯಂತ ಅಲ್ಪವಾಗಿದ್ದು ನಂತರ ಬಹಳ ವಿಸ್ತಾರವಾಗಿ ಪ್ರಕಟವಾಗುವ ಕಾರ್ಯದ ಮೂಲಕಾರಣವೇ ಬೀಜ[1].

ಈಗಾಗಲೇ ಪ್ರಸ್ತಾಪಿಸಲ್ಪಟ್ಟಿರುವ ಕಥಾಸಂವಿಧಾನವು ಇನ್ನೊಂದು ವಿಷಯದಿಂದ ಬದಲಾಗದೇ ನಿರಂತರವಾಗಿ ಮುಂದುವರಿಯುವಂತೆ ಮಾಡುವ ನಾಟಕ ಪ್ರಕ್ರಿಯೆಗೆ 'ಬಿಂದು' ಎಂದು ಹೆಸರು.

ಪ್ರಧಾನಕಥಾ ಸಂವಿಧಾನಪ್ರಯೋಜನಕ್ಕೋಸ್ಕರ ಇದ್ದು ಯಾವುದು ಪ್ರಸಂಗದ ಪ್ರಭಾವದಿಂದಾಗಿ ತನ್ನ ಇಷ್ಟಾರ್ಥವನ್ನು ಪಡೆದರೆ ಅದಕ್ಕೆ ಪ್ರಾಸಂಗಿಕ ಇತಿವೃತ್ತ ಎಂದು ಕರೆಯುತ್ತಾರೆ.

ಇದರಲ್ಲಿ ಪತಾಕಾ ಮತ್ತು ಪ್ರಕರೀ ಎಂದು ಎರಡು ವಿಭಾಗಗಳಿದ್ದು ಪ್ರಧಾನ ಪ್ರಸಂಗದೊಡನೆ ಹೊಂದಿಕೊಳ್ಳುತ್ತವೆ. ಒಂದು ಕಡೆಯಲ್ಲಿ ಮಾತ್ರ ಬರುವ ಕಥಾಂಶವು ಪ್ರಕರೀ.

ನಾಟಕ ಬೀಜ ಮತ್ತು ಆರಂಭ ಎಂಬ ಎರಡು ಅವಸ್ಥೆಗಳ ಸಮನ್ವಯದಿಂದ ಹನ್ನೆರಡು ಅಂಗಗಳು ಮುಖಸಂಧಿಯಲ್ಲಿ ಹಾಸು ಹೊಕ್ಕಾಗಿರುತ್ತವೆ. ಉಪಕ್ಷೇಪ, ಪರಿಕರ, ಪರಿನ್ಯಾಸ, ವಿಲೋಭನೆ, ಯುಕ್ತಿ, ಪ್ರಾಪ್ತಿ, ಸಮಾಧಾನ, ವಿಧಾನ, ಪರಿಭಾವನ, ಉದ್ಭೇದ, ಭೇದ, ಕರಣ ಮುಂತಾದವು ತಮ್ಮ ಹೆಸರಿನಿಂದಲೇ ಪ್ರಸಿದ್ಧವಾದವು.

1. ಬೀಜ– ನಾಟಕದ ಪ್ರಾರಂಭದಲ್ಲಿ ಚಿಕ್ಕದಾಗಿದ್ದು ನಂತರ ಬಹುವಿಧವಾಗಿ ವಿಸ್ತಾರ ಹೊಂದುವುದೇ ಬೀಜ.

तन्निष्पत्तिः परिन्यासो गुणाख्यानं विलोभनम् ।
सम्प्रधारणमर्थानां युक्तिः प्राप्तिः सुखागमः ॥[१११]

---

[110] ಶಿವತತ್ತ್ವರತ್ನಾಕರ – ಸಂಪುಟ 1 – ಸಂ: ಎಸ್.ನಾರಾಯಣ ಶಾಸ್ತ್ರಿ ಮತ್ತು ಆರ್. ರಾಮಾಶಾಸ್ತ್ರಿ, ಪ್ರಾಚ್ಯವಿದ್ಯಾ ಸಂಶೋಧನಾ ಕೇಂದ್ರ, ಮೈಸೂರು ವಿಶ್ವವಿದ್ಯಾಲಯ, ಮೈಸೂರು –1964.

बीजागमः समाधानं विधानं सुखदुःखकृत् ।

परिभावोऽद्भुतावेशः उद्भेदो गूढभेदनम् ॥

करणं प्रकृतारम्भो भेदः प्रोत्साहनं भवेत् ।

अङ्गानि द्वादशैतस्य मुखसन्ध्युदितानि हि ॥

ಬೀಜವು ಸಮರ್ಪಕವಾಗಿ ಮೂಡಿಬಂದರೆ ಅದು 'ಸಮಾಧಾನ'ವಾಗುತ್ತದೆ. ಅಂತೆಯೇ ಸುಖ ದುಃಖಗಳನ್ನು ಉಂಟುಮಾಡುವುದೇ ವಿಧಾನ. ಆವೇಶದ ಸನ್ನಿವೇಶವೇ ಪರಿಭಾವ. ಪ್ರೇಮರಹಸ್ಯವನ್ನು ಒಡೆಯುವಿಕೆಯೇ ಉದ್ಭೇದ. ಪ್ರಸಕ್ತ ವಿಷಯವನ್ನು ಪ್ರಾರಂಭಿಸುವುದೇ ಕರಣ. ಕೆಲಸಕ್ಕೆ ನೀಡುವ ಪ್ರೋತ್ಸಾಹವೇ ಭೇದ. ಈ ಹನ್ನೆರಡು ಅಂಗಗಳು ಮುಖಸಂಧಿಯ ಪ್ರಭೇದಗಳು ಅಥವಾ ಅಂಗಗಳು.

लक्षालक्षस्य बीजस्य वृत्तिः प्रतिमुखं मतम् ।

विलासः परिसर्पश्च विधूतं शमनर्मणी ॥

सर्म द्युतिः प्रगमनं विरोधः पर्युपासनम् ।

वज्रं पुष्पमुपन्यासो वर्णसंहार इत्यपि ॥

रत्यर्थेहा विलासः स्याद्दृष्टनष्टानुसर्पणम् ।

परिसर्पो विधूतं स्यादरतिस्तच्छमः शमः ॥

परिहासवचो नर्म, धृतिस्तज्जा द्युतिर्मता ।

यथोत्तरा वाक्यप्रगमो हित\ोधो निरोधनम् ॥

प्रसादस्समुपन्यासो वज्रं निष्ठुरभाषणम् ।

पुष्टं वाक्यविशेषः स्यादनुरागप्रकाशकम् ॥

चातुर्वर्ण्योपगमनं वर्णसंहार इष्यते ।

एवं त्रयोदशाङ्गानि सन्धेः प्रतिमुखस्य हि ॥

ಪ್ರತಿಮುಖ ಸಂಧಿಯಲ್ಲಿ ಬೀಜವು ಹಲವು ಬಾರಿ ಪ್ರಕಟವಾಗಿ, ಮತ್ತೆ ಕೆಲವು ಬಾರಿ ಪ್ರಕಟವಾಗದೇ ಇರುತ್ತದೆ. ವಿಲಾಸ, ಪರಿಸರ್ಪ, ವಿಧೂತ, ಶಮ, ನರ್ಮ, ನರ್ಮದ್ಯುತಿ,

---

[111] ಶಿವತತ್ತ್ವರತ್ನಾಕರ – ಸಂಪುಟ 2 – ಸಂ: ಎಸ್.ನಾರಾಯಣ ಶಾಸ್ತ್ರಿ ಮತ್ತು ಆರ್. ರಾಮಾಶಾಸ್ತ್ರಿ, ಪ್ರಾಚ್ಯವಿದ್ಯಾ ಸಂಶೋಧನಾ ಕೇಂದ್ರ, ಮೈಸೂರು ವಿಶ್ವವಿದ್ಯಾಲಯ, ಮೈಸೂರು –1964.

ಪ್ರಗಮನ, ನಿರೋಧ, ಪರ್ಯುಪಾಸನ, ವಜ್ರ, ಪುಷ್ಪ, ಉಪನ್ಯಾಸ, ವರ್ಣಸಂಹಾರ ಎಂದು ಪ್ರತಿಮುಖ ಸಂಧಿಯ ಅಂಗಗಳು ಹದಿಮೂರು ವಿಧ.

ಸಂಭೋಗಸುಖದ ಬಯಕೆಯು 'ವಿಲಾಸ'.

ಒಮ್ಮೆ ನೋಡಿ ಅದು ಸಿಗದೇ ಇದ್ದಾಗ ಅದನ್ನು ಹುಡುಕುವ ಕೆಲಸಕ್ಕೆ ಪರಿಸರ್ಪ ಎಂದು ಹೆಸರು. ನಿರಾಶೆ, ದುಃಖ ಭಯಗಳಿಂದ ಒದಗುವ ಸ್ಥಿತಿಗೆ ವಿಧೂತವೆಂದು ಹೆಸರು. ಆ ವಿಧೂತದ ಪರಿಹಾರವೇ 'ಶಮ' ಎಂದು ಆಲಂಕಾರಿಕರ ಅಭಿಪ್ರಾಯ. ಹಾಸ್ಯಪೂರ್ಣವಾದ ಮಾತುಗಳೇ ನರ್ಮ. ನರ್ಮಯುಕ್ತವಾದ ಮಾತುಗಳಿಂದ ಉಂಟಾದ ಧೈರ್ಯವೇ ನರ್ಮಧ್ಯುತಿ. ಪಾತ್ರಧಾರಿಗಳ ಪರಸ್ಪರ ಪೋಷಕ ನುಡಿಗಳಿಗೆ ಪ್ರಗಮ ಅಥವಾ ಪ್ರಗಮನ ಎಂದು ಹೆಸರು. ನಾವು ನಿರೀಕ್ಷಿಸಿರುವ ಹಿತಕ್ಕೆ ಧಕ್ಕೆಯಾಗುವುದು ನಿರೋಧನ. ವಚನವು ಉಪಾಯದಿಂದ ಕೂಡಿದ್ದರೆ, ಅದು'ಉಪನ್ಯಾಸ' ಎಂಬ ಸಂಧ್ಯಂಗವಾಗುತ್ತದೆ. ಒಬ್ಬರ ಎದುರಿಗೆ ಇನ್ನೊಬ್ಬರು ಆಡುವ ಕಠೋರಮಾತಿಗೆ 'ವಜ್ರ' ಎಂದು ಹೆಸರು. ಪುಷ್ಪವೆಂದರೆ ವಿಶೇಷವಾದ ವಾಕ್ಯ. ಅದರಿಂದ ಅನುರಾಗವು ಪ್ರಕಟವಾಗಬೇಕು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ನಾಲ್ಕು ವರ್ಣಗಳ ಜನರು ಒಂದೆಡೆ ಕಲಿತು ಸೇರುವುದಕ್ಕೆ ವರ್ಣಸಂಹಾರ (ಸಂಚಾರ) ಎಂದು ವಿವರಣೆ. ಹೀಗೆ ಪ್ರತಿಮುಖ ಸಂಧಿಯ ಅಂಗಗಳು ಹದಿಮೂರು.

गर्भस्तु दृष्टनष्टस्य बीजस्यान्वेषणं मुहुः ।
अस्याप्यत्याशापताकानुगुण्येनाङ्गोपकल्पनम् ॥
अभूताहरणं मार्गो रूपोदाहरणे क्रमः ।
सङ्ग्रहश्चानुमानं च तोटकाधिबले तथा ॥
उद्वेगसम्भ्रमाक्षेपा द्वादशाङ्गान्यनुक्रमात् ।
अभूताहरणं छद्म मार्गस्तत्त्वार्थदर्शनम् ॥

ಗರ್ಭಸಂಧಿಯಲ್ಲಿ ಅಭೂತಾಹರಣ, ಮಾರ್ಗ, ರೂಪ, ಉದಾಹರಣಂ, ಕ್ರಮ, ಸಂಗ್ರಹ, ಅನುಮಾನ, ತೋಟಕ, ಅಧಿಬಲ, ಉದ್ವೇಗ, ಆಕ್ಷೇಪ, ಸಂಭ್ರಮ ಎಂದು ಹನ್ನೆರಡು ಬಗೆಗಳಿವೆ. ಅಭೂತಾಹರಣವೆಂದರೆ ಕಪಟ ಪ್ರದರ್ಶನ. ಮಾರ್ಗವೆಂದರೆ ಸತ್ಯಸಂಗತಿಯ ಪ್ರತಿಪಾದನೆ.

रूपं वितर्कवद्वाक्यं सोत्कर्षं स्यादुदाहृतिः ।
क्रमः सञ्चिन्त्यमानाप्तिः भावज्ञानमथापरे ॥

सङ्ग्रहः सामदानोक्तिरनुमानमथोहनम् ।
आभिसन्धिस्त्वधिकबलं संरब्धं तोटकं वचः ॥
उद्वेगोऽरिक्तता भीतिः शङ्कात्रासौ च सम्भ्रमः ।
गर्भनीजसमुत्क्षेपादाक्षेपः परिकीर्तितः ॥
गर्भाख्यसन्धेरङ्गानि द्वादशैतानि चक्षते ।[112]

ತರ್ಕದಿಂದ ಕೂಡಿದ ವಾಕ್ಯವನ್ನು ಪ್ರಯೋಗಿಸಿದಾಗ ವಿತರ್ಕ ಎಂಬ ಅಂಗವಾಗುತ್ತದೆ. ಅತಿಶಯದ ಮಾತುಗಳೇ ಉತ್ಕರ್ಷಎನಿಸುತ್ತದೆ. ಬಹಳವಾಗಿ ಯೋಚಿಸಿ ಒಂದು ವಿಷಯ ಅಥವಾ ಅರ್ಥವು ಒದಗಿದರೆ ಅದೇ ಕ್ರಮವೆನಿಸುತ್ತದೆ. ಬೇರೊಬ್ಬರ ಮನಸ್ಸಿನಲ್ಲಿರುವ ಅಭಿಪ್ರಾಯವನ್ನು ಅರಿತುಕೊಳ್ಳುವುದೂ ಕ್ರಮ. ನಾಯಕ, ನಾಯಕಿ ಮುಂತಾದವರಿಗೆ ಸಾಮ, ದಾನ ಮುಂತಾದ ಚತುರೋಪಾಯಮಯವಾದ ಮಾತುಗಳಿಂದ ಸಂತೋಷಗೊಳಿಸಿ, ಅನುಕೂಲಕರವಾಗಿ ನಡೆದುಕೊಳ್ಳುವುದು ಸಂಗ್ರಹವೆನಿಸುತ್ತದೆ. ಒಂದು ಚಿಹ್ನೆಯ ಆಧಾರದಿಂದ ಮತ್ತೊಂದು ವಿಷಯವನ್ನು ಊಹಿಸುವುದು ಅನುಮಾನ. ಬಹಳ ಚತುರತೆಯಿಂದ ಮಾಡುವ ವಂಚನೆಗೆ ಅಧಿಬಲವೆಂದು ಹೆಸರು. ರೋಷ ಅಥವಾ ಮಹಾಕ್ಷೋಭೆಯಿಂದ ಕೂಡಿದ ಸಂವಾದವೇ ತೋಟಕ ಶತ್ರುಗಳಿಂದ ಉಂಟಾಗುವ ಹೆದರಿಕೆಯೇ ಉದ್ವೇಗ. ಸಂಶಯ, ಭಯಗಳು ಉಂಟಾದರೆ ಅದೇ ಸಂಭ್ರಮ. ಹೀಗೆ ಗರ್ಭಸಂಧಿಯ ಬೀಜವು ವಿಶೇಷವಾಗಿ ವ್ಯಕ್ತವಾದರೆ ಆಕ್ಷೇಪ.

ಈ ಮೇಲ್ಕಂಡ ಹನ್ನೆರಡೂ ಪ್ರಾಪ್ತ್ಯಾಶೆಯಲ್ಲಿ ಸಮರ್ಪಕವಾಗಿ ಯೋಜಿಸಬೇಕು.

1. ಕಾಳಿದಾಸನ ಅಭಿಜ್ಞಾನ ಶಾಕುಂತಲದ ನಾಲ್ಕನೇ ಅಂಕದಲ್ಲಿ ಶಕುಂತಲೆ ಕಣ್ವರನ್ನು ಕುರಿತು ನಿಮ್ಮ ಅಗಲಿಕೆಯನ್ನು ಹೊಂದಲು ಸಾಧ್ಯವಿಲ್ಲ ಎಂದಾಗ ಕಣ್ವರು ಅರಮನೆಯ ಕಾರ್ಯ, ಮಗನ ಆರೈಕೆ ಮುಂತಾದ್ದರಿಂದ ನಿನ್ನ ದುಗುಡ ಮರೆಯಾಗುತ್ತದೆ 'ಎಂದು' ಸಮಾಧಾನ ಮಾಡುವುದೇ ಸಂಗ್ರಹ. ಅದೇ ಅಂಕದ ಮಧ್ಯದಲ್ಲಿ ಆಶ್ರಮದ ವನರಾಜಿ ಶಕುಂತಲೆಯ ಪ್ರಯಾಣಕ್ಕೆ ಅನುಮತಿ ನೀಡಿದವು ಎಂದು ಕೋಗಿಲೆಯ ಧ್ವನಿಯನ್ನು ಊಹಿಸಿ ಹೇಳುವುದೇ ಅನುಮಾನ. ಉಂಗುರದ ಪ್ರಸ್ತಾಪ ಬಂದಾಗ, ಶಕುಂತಲೆಯು ಹೆದರಿ ನಡುಗಿದಾಗ ಗೆಳತಿಯರು ಸಾಂತ್ವನದ ವಚನಗಳನ್ನು ನುಡಿಯುವುದೇ

---

[112] ಶಿವತತ್ತ್ವರತ್ನಾಕರ – ಸಂಪುಟ 2 – ಸಂ: ಎಸ್.ನಾರಾಯಣ ಶಾಸ್ತ್ರಿ ಮತ್ತು ಆರ್. ರಾಮಾಶಾಸ್ತ್ರಿ, ಪ್ರಾಚ್ಯವಿದ್ಯಾ ಸಂಶೋಧನಾ ಕೇಂದ್ರ, ಮೈಸೂರು ವಿಶ್ವವಿದ್ಯಾಲಯ, ಮೈಸೂರು –1964. 7–6–33

'ಅಧಿಬಲ'. ಐದನೇ ಅಂಕದಲ್ಲಿ ದುಷ್ಯಂತನು ಶಾಪಪ್ರಭಾವದಿಂದ ಶಕುಂತಲೆಯನ್ನು ತಿರಸ್ಕರಿಸಿದಾಗ ಶಾರ್ಙ್ಗರವನು ರೋಷಯುಕ್ತ ಮಾತುಗಳನ್ನು ಆಡುವುದೇ ತೋಟಕ.

गर्भसन्धौ प्रसिद्धस्य बीजस्यार्थावमर्शनम् ॥
हेतुना येन केनापि विमर्शः सन्धिरिष्यते ।
नियताप्तिप्रकर्युक्तेरङ्गान्यस्य त्रयोदश ॥[११३]
तत्रापवादः सम्फेटो विद्रवद्रवशक्तयः ।
द्युतिः प्रसङ्गश्चलनं व्यवसायो विरोधनम् ॥
प्ररोचना विचलनमादानं च त्रयोदश ।
दोषप्रख्यापवादः स्यात् सम्फेटो रोषभाषणम् ॥[११४]

ಗರ್ಭಸಂಧಿಯ ಮುಖ್ಯ ಉದ್ದೇಶ ಅಥವಾ ಬೀಜಾರ್ಥದ ಪುನಃ ಪರಿಶೀಲನೆಯೇ ವಿಮರ್ಶಾ ಸಂಧಿಯಾಗುತ್ತದೆ. ಯಾವುದಾದರೂ ಕಾರಣದಿಂದ ಫಲಪ್ರಾಪ್ತಿಯ ವಿಷಯವಾಗಿ ಪ್ರಕರೀ ಮತ್ತು ನಿಯತಾಪ್ತಿಗಳಿಗೆ ಅನುಗುಣವಾದ ಅಂಗವಿನ್ಯಾಸವೇ ವಿಮರ್ಶಾಸಂಧಿ. ಅದು ಹನ್ನೆರಡು ಅಂಗಗಳನ್ನು ಒಳಗೊಂಡಿದೆ. ಈ ಅಂಗಗಳಲ್ಲಿ ಅಪವಾದ, ಸಂಫೇಟ. ವಿದ್ರವ, ದ್ರವಶಕ್ತಿ, ದ್ಯುತಿ, ಪ್ರಸಂಗ, ವ್ಯವಸಾಯ, ವಿರೋಧನ, ಪ್ರರೋಚನಾ, ವಿಚಲನ, ಆದಾನ ಎಂಬ ಉಪವಿಭಾಗಗಳಿವೆ.

विद्रवो वधबन्धादिः द्रवो गुरुतिरस्कृतिः ।
विरोधशमनं शक्तिः तर्जनोद्वेजिने द्युतिः ॥
गुरुकीर्तिः प्रसङ्गः स्याच्चलनं चावमाननम् ।
व्यवसायः स्वशक्तयुक्तिः संरब्धोक्ति विरोधनम् ॥
सिद्धामन्त्रणतो भाविदर्शिका स्यात्प्ररोचना ।
गुणोक्तिः स्याद्विचलनमादानं कार्यसङ्ग्रहः ॥

---

[113] ಅದೇ

[114] ಶಿವತತ್ತ್ವರತ್ನಾಕರ – ಸಂಪುಟ 2 – ಸಂ: ಎಸ್.ನಾರಾಯಣ ಶಾಸ್ತ್ರಿ ಮತ್ತು ಆರ್. ರಾಮಾಶಾಸ್ತ್ರಿ, ಪ್ರಾಚ್ಯವಿದ್ಯಾ ಸಂಶೋಧನಾ ಕೇಂದ್ರ, ಮೈಸೂರು ವಿಶ್ವವಿದ್ಯಾಲಯ, ಮೈಸೂರು –1964.

अवमर्शाख्यसन्धौ स्यादङ्गान्येवं त्रयोदश ।

बीजवन्तो मुखाद्यर्था विप्रकीर्णा यथायथम् ॥

ಬೇರೊಬ್ಬರ ದೋಷವನ್ನು ಎತ್ತಿ ಹೇಳುವುದು ಅಪವಾದ. ರೋಷಪೂರಿತವಾಗಿ ಆಡಿದ ಮಾತು ಸಂಫೇಟ. ಹತ್ಯೆ, ಬಂಧನ ಮುಂತಾದವು ವಿದ್ರವ. ಗುರು ಹಿರಿಯರನ್ನು ತಿರಸ್ಕರಿಸುವುದು ದ್ರವ. ವಿರೋಧವನ್ನು ಶಮನಗೊಳಿಸುವುದೇ ಶಕ್ತಿ. ಬೆದರಿಕೆ ಅಥವಾ ಉದ್ವೇಗವನ್ನು ಉಂಟುಮಾಡುವುದು ದ್ಯುತಿ. ಗುರು ಹಿರಿಯರನ್ನು ಅಥವಾ ಉನ್ನತ ವಸ್ತು, ವಿಷಯಗಳನ್ನು ಪ್ರಶಂಸಿಸುವುದೇ ಪ್ರಸಂಗ. ಬೇರೆಯವರನ್ನು ಉದ್ದೇಶಪೂರ್ವಕವಾಗಿ ಅವಮಾನಗೊಳಿಸುವುದು ಛಲನ.

ತನ್ನ ಶಕ್ತಿಯ ಬಗ್ಗೆ ಅತಿಶಯವಾಗಿ ಹೇಳಿಕೊಳ್ಳುವುದು ವ್ಯವಸಾಯ. ಅಂತೆಯೇ ಸ್ವಸಾಮರ್ಥ್ಯದ ವಿವರಣೆಯೇ ವಿರೋಧನ. ಯಾರಾದರೂ ಸಿದ್ಧರು ಅಥವಾ ಸಂತರು ಭವಿಷ್ಯದಲ್ಲಿ ನಿಶ್ಚಯವಾಗಿ ನಡೆಯುವ ಘಟನಾವಳಿಗಳನ್ನು ಪೂರ್ವಭಾವಿಯಾಗಿ ಪ್ರಸ್ತಾಪಿಸಿದರೆ ಅದು ಪ್ರರೋಚನಾ. ಆತ್ಮಪ್ರಶಂಸೆ ವಿಚಲನೆಯಾದರೆ, ರೂಪಕದ ವಿವಿಧ ಫಲಗಳನ್ನು ಕ್ರೋಢೀಕರಿಸುವುದೇ ಆದಾನ. ಹೀಗೆ ಅವಮರ್ಶ ಅಥವಾ ವಿಮರ್ಶಸಂಧಿಯ ಒಟ್ಟು ಅಂಗಗಳು.

एकार्थ्यमुपनीयन्ते यत्र निर्वहणं हि तत् ।

फलाप्तिकार्यानुगुण्यादङ्गान्यस्य चतुर्दश ॥

सन्धिर्विरोधो ग्रथनं निर्णयः परिभाषणम् ।

प्रसादानन्दसमयाः कृतिर्भाषोपगूहने ॥

पूर्वभावोपसंहारौ प्रसक्तिश्च चतुर्दश ।

ಮೂವತ್ತೆರಡು ಬೀಜವನ್ನು ಒಳಗೊಂಡು, ಉಚಿತವಾಗಿ ವ್ಯಾಪಿಸಿ ನಾಲ್ಕು ಸಂಧಿಗಳ ಎಲ್ಲ ಅಂಗಗಳೂ ಕೊನೆಯದಾಗಿ ಕಾರ್ಯಪ್ರಾಪ್ತಿಯ ಕಡೆ ಹೆಜ್ಜೆ ಹಾಕುವುದೇ ನಿರ್ವಹಣಸಂಧಿಯ ಲಕ್ಷಣ. ಇದರಲ್ಲಿ ಹದಿನಾಲ್ಕು ಅಂಗಗಳಿವೆ.

ಸಂಧಿ, ವಿಬೋಧ, ಗ್ರಥನ, ನಿರ್ಣಯ, ಪರಿಭಾಷಣ, ಪ್ರಸಾದ. ಆನಂದ, ಸಮಯ, ಕೃತಿ, ಭಾಷಾ, ಉಪಗೂಹನಾ, ಪೂರ್ವಭಾವ, ಉಪಸಂಹಾರ ಮತ್ತು ಪ್ರಶಸ್ತಿ ಇವೇ ಆ ಹದಿನಾಲ್ಕು ಅಂಗಗಳು.

सन्धिर्बीजोपगमनं विरोधः कार्यमार्गणम् ॥

ग्रथनं तदुपक्षेपोऽनुभूताख्या तु निर्णयः ।

परिभाषा मिथो जल्पः प्रसादः पर्युपासनम् ॥

आनन्दो वाञ्छितावाप्तिः समयो दुःखनिर्गमः ।

कृतिर्लब्धार्थगमनं मानाद्याप्तिस्तु भाषणम् ॥

कार्यदृष्ट्यद्भुतप्राप्ती पूर्वभावोपगूहने ।

फलाप्तिरूपसंहारः प्रशस्तिः शुभशंसनम् ॥

एवं चतुर्दशाङ्गानि भवेयुरुपसंहृतेः ।

ಮುಖ್ಯೋದ್ದೇಶ ಅಥವಾ ಬೀಜವು ಸಮೀಪಕ್ಕೆ ಬರುವುದೇ ಸಂಧಿ. ರೂಪಕಕಥಾಂಶದ ಮುಖ್ಯ ಫಲದ ಹುಡುಕಾಟವೇ ವಿಬೋಧ. ಕಾರ್ಯಕ್ಕೆ ಅನುಕೂಲಕಾರಿಯಾಗಿ ಎಳೆಗಳನ್ನು ಜೋಡಿಸುವುದು ಗ್ರಥನ. ಒಂದು ಪ್ರಸಂಗವನ್ನು ಅನುಭವಿಸಿ ನಂತರ ವ್ಯಕ್ತಪಡಿಸುವುದೇ ನಿರ್ಣಯ. ಪರಸ್ಪರ ಕುಶಲಸಂಭಾಷಣೆಯಲ್ಲಿ ತೊಡಗುವುದು ಪರಿಭಾಷೆ. ಪ್ರಸನ್ನಚಿತ್ತರಾಗಿ ಭಕ್ತಿ–ಪ್ರೀತಿಗಳಿಂದ ಮಾಡುವ ಸೇವೆಯೇ ಪ್ರಸಾದ. ಬಯಸಿದ್ದನ್ನು ಹೊಂದುವುದು ಆನಂದ. ದುಃಖನಾಶವೇ ಸಮಯ. ಫಲವನ್ನು ಹೊಂದಿದ ಮೇಲೆ ಉಂಟಾದ ಧನ್ಯತೆ, ಆತ್ಮತೃಪ್ತಿಯೇ ಕೃತಿ. ಮಾನ, ಸತ್ಕಾರ ಮುಂತಾದ್ದನ್ನು ಪಡೆಯುವುದು ಭಾಷಣ. ಇಷ್ಟಕಾರ್ಯದ ದರ್ಶನ ಮತ್ತು ಆಕಸ್ಮಿಕವಾಗಿ ಅದ್ಭುತ ಪ್ರಸಂಗ ಎದುರಾಗುವುದೇ ಪೂರ್ವಭಾವ ಮತ್ತು ಉಪಗೂಹನ. ಫಲಪ್ರಾಪ್ತಿಯೇ ಉಪಸಂಹಾರ ಶುಭವನ್ನು ಆಶಿಸುವುದೇ ಪ್ರಶಸ್ತಿ.

उक्ताङ्गानां चतुषष्ठिः षोडा चैषां प्रयोजनम् ॥

ईष्टस्यार्थस्य रचना गोप्यगुप्तिः प्रकाशनम् ।

ಹೀಗೆ ಹದಿನಾಲ್ಕು ಅಂಶಗಳು ಅಥವಾ ಅಂಗಗಳು ನಿರ್ವಹಣ ಸಂಧಿಯಲ್ಲಿ ಹಾಸುಹೊಕ್ಕಾಗಿವೆ. ಎಲ್ಲಾ ಐದು ಸಂಧಿಗಳನ್ನು ಸೇರಿಸಿ ಅರುವತ್ತನಾಲ್ಕು ಅಂಗಗಳ ವಿವರಣೆ

ಆಯಿತು. ಈ ಅರುವತ್ತನಾಲ್ಕು ಸಂಧ್ಯಂಗಗಳಲ್ಲಿ ಒಟ್ಟು ಆರು ಪ್ರಯೋಜನಗಳಿವೆ. ಅವುಯಾವುವೆಂದರೆ–

1) ಉದ್ದಿಷ್ಟ ವಿಷಯವನ್ನು ಸಮರ್ಪಕ ರೀತಿಯಲ್ಲಿ ವಿಸ್ತರಿಸಿ ಪ್ರತಿಪಾದಿಸುವುದು.
2) ರಹಸ್ಯವಿಷಯವನ್ನು ರಹಸ್ಯವಾಗಿಯೇ ಇರಿಸುವುದು.
3) ಪ್ರಕಟಪಡಿಸಬೇಕಾದ ವಿಷಯಗಳ ಪ್ರಕಟನೆ.
4) ಅಭಿನಯಿಸಲ್ಪಡಬೇಕಾದ ವಸ್ತುವಿನಲ್ಲಿ ಅನುರಾಗವೃದ್ಧಿ.
5) ವಸ್ತುವಿನಲ್ಲಿ ಚಮತ್ಕಾರ ಉಂಟುಮಾಡುವುದು.
6)ಕಥಾವಸ್ತುವಿನ ವಿಸ್ತಾರದ ಬೆಳವಣಿಗೆ.

रागः प्रयोगस्याश्चर्यं वृत्तान्तस्य च विस्तरः ॥

द्वेधा विभागः कर्तव्यः सर्वस्यापीह वस्तुनः ।

सूच्यमेव भवेत्किञ्चिद्दृश्यंश्रव्यं तथापरम् ॥

दृश्यं तु मधुरोदात्तरसभावनिरन्तरम् ।

अर्थोपक्षेपकैः सूच्यं पञ्चभिः प्रतिपादयेत् ॥

विष्कम्भचूलिकाङ्कस्य प्रवेशाङ्कावतारणैः ।

ಈ ಎಲ್ಲಾ ವಸ್ತುಗಳನ್ನು ಸಾಧಾರಣವಾಗಿ ಎರಡು ವಿಭಾಗಗಳನ್ನಾಗಿ ಮಾಡಬಹುದು. ಕಥಾಂಶದ ಕೆಲವು ಭಾಗ ಕೇವಲ ರಂಗದ ಮರೆಯಲ್ಲಿ ಸೂಚಿಸಲ್ಪಡುತ್ತದೆ. ಅಂದರೆ ರಂಗಸ್ಥಳದ ಮೇಲೆ ಅದರ ಪ್ರದರ್ಶನವಿಲ್ಲ. ಉಳಿದ ಭಾಗವನ್ನು ರಂಗಭೂಮಿಯ ಮೇಲೆ ಪ್ರದರ್ಶಿಸಲಾಗುತ್ತದೆ. ಆ ವಿಷಯವನ್ನು ನಾವು ಕೇಳುತ್ತೇವೆ ಹಾಗೂ ನೋಡುತ್ತೇವೆ.

ರೂಪಕವು ಮಧುರವಾದ ರಸದಿಂದ ಕೂಡಿರಬೇಕು. ಉದಾತ್ತಭಾವಗಳಿಂದ ಆವೃತ್ತವಾದ ವಸ್ತುವಿರಬೇಕು. ರಸಪುಷ್ಟಿಯು ನಿರಂತರವಾಗಿರಬೇಕು. ಸೂಚನೆಯನ್ನು ಉಳ್ಳದ್ದೇ ಸೂಚ್ಯ. ನಾಟಕದ ಸಂವಿಧಾನದ ಮಧ್ಯದಲ್ಲಿ ಬರುವ ಆಂತರಿಕ/ ಅಥವಾ ಮಧ್ಯಂತರ ದೃಶ್ಯಗಳಿಗೆ ಅರ್ಥೋಪಕ್ಷೇಪಕಗಳೆಂದು ಹೆಸರು. ಅವೇ ವಿಷ್ಕಂಭ, ಚೂಲಿಕಾ, ಅಂಕಾಸ್ಯಾ ಅಂಕಾವತಾರ ಮತ್ತು ಪ್ರವೇಶಕ.

वृत्तवर्तिष्यमाणानां कथांशानां प्रदर्शकः ॥

संक्षेपार्थस्तु विष्कम्भो मध्य पात्र प्रयोजितः ।

स द्विधा कोविदैः प्रोक्तः शुद्धमिश्रविभेदतः ॥

संस्कृतप्रायिकः शुद्धो भाषामिश्रश्च मिश्रकः ।

ರೂಪಕದಲ್ಲಿ ಅಲ್ಲಿಯವರೆಗೆ ನಡೆದ ಮತ್ತು ಭವಿಷ್ಯದಲ್ಲಿ ನಡೆಯಲಿರುವ ಕಥೆಯ ಅಂಶಗಳನ್ನು ಸಂಕ್ಷಿಪ್ತವಾಗಿ ತಿಳಿಸುವ ಭಾಗಕ್ಕೆ ವಿಷ್ಕಂಭಕ ಮತ್ತು ಮಿಶ್ರವಿಷ್ಕಂಭಕ ಎಂದು ಕರೆಯುತ್ತಾರೆ.

1. ನಾಟಕದ ಎರಡು ಅಂಕಗಳ ಮಧ್ಯಂತರ ದೃಶ್ಯವೇ ವಿಷ್ಕಂಭಕ. ನಾಟಕದ ಕಥಾಭಾಗವು ಬಹಳ ವಿಸ್ತಾರವಾಗಿದ್ದು ಹಲವು ವರ್ಷಗಳ ಕಾಲಾವಧಿಯನ್ನು ಹೊಂದಿರುವ ಕಾರಣ, ಆ ಸಮಸ್ತ ಘಟನೆಗಳನ್ನೂ ರಂಗಭೂಮಿಯ ಮೇಲೆ ಪ್ರದರ್ಶಿಸಲು ಆಗುವುದಿಲ್ಲ. ಅದು ಅನಗತ್ಯವೂ ಸಹ, ಆದರೆ ಕಥಾ ನೈರಂತರ್ಯಕ್ಕೆ ಕೆಲವು ಕೊಂಡಿಗಳು ಬೇಕಾಗುತ್ತವೆ. ಅಂತಹ ತಾಂತ್ರಿಕ ದೃಶ್ಯಗಳಲ್ಲಿ ವಿಷ್ಕಂಭಕವೂ ಒಂದು. ಈ ವಿಷ್ಕಂಭಕದಲ್ಲಿ ಹಿಂದಿನ ಅಂಕಗಳಲ್ಲಿ ಆಗಿರುವ ಘಟನೆ, ವರ್ತಮಾನ ಘಟನೆಯ ಬಗ್ಗೆ ಪ್ರಸ್ತಾಪ, ಭವಿಷ್ಯ ಘಟನೆಗಳ ಬಗ್ಗೆ ಸೂಚನೆ ಮುಂತಾದವು ಇರುತ್ತವೆ. ಮಧ್ಯಮ ವರ್ಗದ ಪಾತ್ರಗಳು ಇದರಲ್ಲಿ ಭಾಗವಹಿಸುತ್ತವೆ. ಉದಾಹರಣೆಗೆ ಶಾಕುಂತಲದ ಮೂರನೆಯ ಅಂಕದ ವಿಷ್ಕಂಭಕ, ಪ್ರತಿಮಾನಾಟಕದ ಎರಡನೆಯ ಅಂಕ ಮುಂತಾದವು. ಒಂದಕ್ಕಿಂತ ಹೆಚ್ಚು ಮಧ್ಯಪಾತ್ರಗಳಿದ್ದರೆ ಒಂದು ಪಾತ್ರ ಸಂಸ್ಕೃತದಲ್ಲೂ ಇನ್ನೊಂದು ಪ್ರಾಕೃತದಲ್ಲೂ ಮಾತನಾಡಿದರೆ ಅದು ಮಿಶ್ರವಿಷ್ಕಂಭಕ. ಎರಡೂ ಪಾತ್ರಗಳೂ ಸಂಸ್ಕೃತದಲ್ಲಿಯೇ ಸಂಭಾಷಣೆ ನಡೆಸಿದರೆ ಅದು ಶುದ್ಧ ವಿಷ್ಕಂಭಕವೆನಿಸುತ್ತದೆ.

अन्तर्यवनिकासंस्थैश्चूलिकार्थस्य सूचना ॥

अङ्कान्त पात्ररङ्कास्यमुत्तराङ्कार्थसूचनम् ।

तद्वदेवानुदात्तोकत्या नीच पात्र प्रयोजितः ॥

प्रवेशोऽङ्कद्वयस्यान्तः शेषार्थस्योपसूचकः ।[115]

ಯಾವುದಾದರೂ ಅಂಕದ ಕೊನೆಯ ಪಾತ್ರವು ಅಥವಾ ಪಾತ್ರಗಳು ಮುಂದಿನ ಅಂಕದಲ್ಲಿ ನಡೆಯುವ ವಿಷಯವನ್ನು ಪ್ರಸ್ತಾಪಿಸುವುದೇ ಅಂಕಾಸ್ಯ. ಹಿಂದಿನ ಮತ್ತು ಮುಂದಿನ ಕಥೆಯ

---

[115] ಶಿವತತ್ತ್ವರತ್ನಾಕರ – (ಸಂ) ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ್, ಐದು ಸಂಪುಟಗಳು, ದರೇಸಾ ಪ್ರಕಾಶನ, ಬೆಂಗಳೂರು –2013.

ಅಂಶಗಳನ್ನು ನೀಚ ಪಾತ್ರಗಳ ಮೂಲಕ ಪ್ರಸ್ತಾಪಿಸಿದರೆ ಅದೇ ಪ್ರವೇಶಕವಾಗುತ್ತದೆ. ಪ್ರವೇಶಕವು ಮೊದಲನೆಯ ಅಂಕದಲ್ಲಿ ಇರಕೂಡದು. ಎರಡು ಅಂಕಗಳ ಮಧ್ಯೆ ಬರುತ್ತದೆ.

1. ಉದಾಹರಣೆಗೆ ಶಾಕುಂತಲದ ಮೂರನೇ ಅಂಕದ ಕೊನೆಯಲ್ಲಿ ಬರುವ ಪ್ರಸಂಗವುಭವಿಷ್ಯದಲ್ಲಿ ಶಕುಂತಲೆಗೆ ಒದಗುವ ವಿಪತ್ತನ್ನು ಸೂಚಿಸುತ್ತದೆ.
2. ಪ್ರವೇಶಕದಲ್ಲೂ ಮುಂದಿನ ಅಂಕಗಳಲ್ಲಿ ನಡೆಯುವ ಘಟನೆಗಳನ್ನು ಸೂಚಿಸುತ್ತಾರೆ. ಪ್ರವೇಶಕದಲ್ಲಿ ಕೇವಲ ನೀಚಪಾತ್ರಗಳು ಮಾತ್ರ ಭಾಗವಹಿಸುತ್ತವೆ. ಅವು ಸಾಧಾರಣವಾಗಿ ಪ್ರಾಕೃತಭಾಷೆಯಲ್ಲಿ ಮಾತನಾಡುತ್ತವೆ. ಉದಾಹರಣೆಗೆ ಅಭಿಜ್ಞಾನ ಶಾಕುಂತಲ ನಾಟಕದ ಆರನೆಯ ಅಂಕದ ಪ್ರವೇಶಕ; ಬೆಸ್ತನ ಪ್ರಸಂಗವನ್ನು ಗಮನಿಸಬಹುದು.

अङ्कावतारस्त्वङ्कान्ते यतोऽङ्कस्य विभागतः ॥
एभिः सूच्यं सूचयित्वा दृश्यमङ्कैः प्रदर्शयेत् ।
नात्यधर्ममवेक्ष्यैतत्पुनर्वस्तु त्रिधेष्यते ॥
सर्वेषां नियतश्राव्यं श्राव्यमश्राव्यमेव च ।
सर्वश्राव्यं प्रकाशं स्यादश्राव्यं स्वगतं मतम् ॥
द्विधाऽन्यन्नात्यधर्माख्यं जनान्तमपवारितम् ।
त्रिपताका करेणान्यानपवार्यान्तरा कथाम् ॥

ಯಾವುದಾದರೂ ಅಂಕದ ಕೊನೆಯಲ್ಲಿ ಮತ್ತೊಂದು ಅಂಕವು ಹಾಸುಹೊಕ್ಕಾಗಿ ಬರುವುದಕ್ಕೆ **'ಅಂಕಾವತಾರ'** ಎಂದು ಹೆಸರು. ಹೀಗೆ ಸೂಚ್ಯವಿಷಯಗಳಿಂದ, ಐದು ಬಗೆಯ ಅರ್ಥೋಪಕ್ಷೇಪಕಗಳಲ್ಲಿ ಇದನ್ನು ಪ್ರದರ್ಶಿಸಬೇಕು. ನಾಟ್ಯಧರ್ಮಕ್ಕೆ ಸರಿಹೊಂದುವಂತೆ ವಸ್ತುವನ್ನು ಮತ್ತೆ ಮೂರು ವಿಧವಾಗಿ ವಿಂಗಡಿಸಲಾಗಿದೆ. ಎಲ್ಲರಿಗೂ (1) ನಿಶ್ಚಯವಾಗಿ ಕೇಳಲು ಅರ್ಹವಾಗಿರುವುದು (2) ಕೆಲವರಿಗೆ ಮಾತ್ರ ಕೇಳಲು ಅರ್ಹವಾಗಿರುವುದು, ಮತ್ತು (3) ಯಾರಿಗೂ ಕೇಳಿಸದೇ ಇರುವುದು ಎಂದು ಮೂರುವಿಭಾಗ. ಅದೇ ಸರ್ವಶ್ರಾವ್ಯ, ನಿಯತ ಶ್ರಾವ್ಯ ಮತ್ತು ಅಶ್ರಾವ್ಯವೆಂದು ಕರೆಯಲಾಗಿದೆ. ನಾಟ್ಯಧರ್ಮದಲ್ಲಿ ನಿಯತಶ್ರಾವ್ಯ ಅಥವಾ ಎಲ್ಲರಿಗೂ ಕೇಳಲು ಅರ್ಹವಾಗಿರುವುದು ಎಂಬ ವಿಭಾಗದಲ್ಲಿ **'ಜನಾಂತಿಕ'** ಮತ್ತು **'ಅಪವಾರಿತ'** ಎಂಬ ಎರಡು ವಿಭಾಗಗಳಿವೆ. ತನಗೆ ಬೇಕಾಗಿರುವವರ ಹತ್ತಿರ ಮುಖವನ್ನು ತಿರುಗಿಸಿ ಅನ್ಯರನ್ನು

ಗಮನಿಸದೇ ಮಾತನಾಡುವುದು **ಜನಾಂತಿಕ**. ಉಂಗುರದ ಬೆರಳನ್ನು ಮಡಿಸಿ, ಹಸ್ತ ಪ್ರದರ್ಶನದೊಂದಿಗೆ ಇತರರಿಗೆ ಕೇಳದಂತೆ ಭಾಷಿಸುವುದು **ಜನಾಂತಿಕ–**

1. ಇದಕ್ಕೆ ಉತ್ತಮ ಉದಾಹರಣೆ ಕಾಳಿದಾಸನ ಮಾಲವಿಕಾಗ್ನಿಮಿತ್ರ ನಾಟಕದ ಮೊದಲನೆಯ ಅಂಕದ ಕೊನೆಯ ಭಾಗ. ಅದರಲ್ಲಿ ಮೃದಂಗಧ್ವನಿ ಕೇಳಿಸಿದಾಗ ರಾಜ ಅಗ್ನಿಮಿತ್ರ ಮತ್ತು ವಿದೂಷಕ ಗೌತಮ, ಮಾಲವಿಕೆಯ ನೃತ್ಯ ನೋಡಲು ಸಂಗೀತಶಾಲೆಗೆ ಹೊರಡುತ್ತಾರೆ. ಆ ಅಂಕ ಮುಗಿದರೂ, ಮೊದಲನೆಯ ಅಂಕದ ಪಾತ್ರಧಾರಿಗಳೊಂದಿಗೆ ಎರಡನೆಯ ಅಂಕದ ಪ್ರಾರಂಭವಾಗುತ್ತದೆ.

रहस्यं कथ्यतेऽन्यस्य परावृत्यापवारितम् ॥

किं ब्रवीष्येवमित्यादि विना पात्रं ब्रवीति यत् ।

श्रुत्वेवानुक्तमप्येकं तु स्यादाकाशभाषितम् ॥

प्रत्यक्षनेतृचरितो बिन्दुर्व्यक्तिपुरस्कृतः ।

अङ्को नानाप्रकारार्थ संविधानरसाश्रयः ॥

ಮತ್ತೊಬ್ಬರ ಕಡೆ ಮುಖತಿರುಗಿಸಿ ರಹಸ್ಯವಾಗಿ ಮಾತನಾಡುವುದು ಅಪವಾರಿತ. ರಂಗದ ಮೇಲೆ ಯಾರೊಬ್ಬರೂ ಇಲ್ಲದಿದ್ದರೂ, ಇದ್ದಾರೆ ಎಂದು ಭಾವಿಸಿ, ಅವರಿಗೆ ಪ್ರಶ್ನಿಸಿ, ಉತ್ತರ ಪಡೆಯುವುದು, ಆ ಪಾತ್ರವು ಉತ್ತರಿಸದಿದ್ದರೂ, ಉತ್ತರವನ್ನು ಪಡೆದಂತೆ ನಟಿಸುವುದೇ **'ಆಕಾಶಭಾಷಿತ'**. ಅಂಕವು ನಾಯಕನ ಚರಿತ್ರೆಯನ್ನು ಒಳಗೊಂಡಿರುತ್ತದೆ. ನಾಟಕದ ಬಿಂದುವು ಅಂಕದ ಆಶ್ರಯದಲ್ಲಿರಬೇಕು. ಅನೇಕ ರೀತಿಯ ಪ್ರಯೋಜನಗಳು, ಕಥಾಂಶ ಮತ್ತು ಹಲವು ರೀತಿಯ ರಸಗಳಿಗೆ ಪೋಷಕವೂ, ಆಶ್ರಯದಾಯಕವೂ ಆಗಿರಬೇಕು.

सूत्रधारो नटीं ब्रूते मारिषं वा विदूषकम् ।

स्वकार्यप्रस्तुताक्षेपि चित्रोक्त्या यत्तदामुखम् ॥

प्रस्तावना वा तत्र स्यात्कथोद्धातः प्रवर्तकः ।

प्रयोगातिशयश्चेति त्रीण्यङ्गान्यामुखस्य तु ॥

ಸೂತ್ರಧಾರನು ನಟೀ, ಮಾರಿಷ ಅಥವಾ ವಿದೂಷಕರೊಂದಿಗೆ ಸಂವಾದ ಮಾಡುತ್ತಾ, ಚಾತುರ್ಯದಿಂದ ನಾಟಕದ ಪರಿಚಯವನ್ನು ಮಾಡಿಕೊಡುತ್ತಾನೆ. ತನ್ನ ಕಾರ್ಯವನ್ನೂ ಪ್ರಸ್ತಾಪಿಸುತ್ತಾನೆ. ಇದಕ್ಕೆ ಪ್ರಸ್ತಾವನಾ ಅಥವಾ **'ಆಮುಖಮ್'** ಎಂದು ಹೆಸರು· ಆಮುಖದಲ್ಲಿ ಕಥೋದ್ಧಾತ, ಪ್ರವರ್ತಕ ಮತ್ತು ಪ್ರಯೋಗಾತಿಶಯ ಎಂಬ ಮೂರು ಅಂಗಗಳಿವೆ.

**ಸೂತ್ರಧಾರ:**

ನಾಟಕದ ಕಥಾಂಶದ ಮುಖ್ಯ ಸೂತ್ರಗಳನ್ನು ಕೈಯಲ್ಲಿ ಹಿಡಿದು, ರಂಗಭೂಮಿಗೆ ಮೊದಲು ಬಂದು, ಅದನ್ನು ಯಾರು ಪರಿಚಯಿಸುತ್ತಾನೋ ಅವನೇ **'ಸೂತ್ರಧಾರ'**. ಸೂತ್ರಧಾರನು ನಾಲ್ಕು ರೀತಿಯ ವಾದ್ಯಗಳನ್ನು ನುಡಿಸುವುದರಲ್ಲಿ ನಿಪುಣ, ಅನೇಕ ರೀತಿಯ ಅಲಂಕಾರಗಳನ್ನು ಮಾಡಿಕೊಳ್ಳಬಲ್ಲ, ವಿಧವಿಧವಾದ ಮಾತುಗಳನ್ನು ಆಡುವುದರಲ್ಲಿ ಚತುರ. ಅವನು ನೀತಿಶಾಸ್ತ್ರವಿಶಾರದ, ವೇಷ–ಉಪಚಾರ ಪರಿಣಿತ, ನಾಗರಿಕರನ್ನು ರಂಜಿಸುವುದರಲ್ಲಿ ಚತುರ. ಅವನು ಅನೇಕ ರೀತಿಯ ಗತಿ–ನಡಿಗೆಗಳನ್ನು ರೂಢಿಗೊಳಿಸಿದವನು, ರಸ–ಭಾವಗಳನ್ನು ಅರಿತವನು. ನಾಟ್ಯ ಪ್ರಯೋಗದಲ್ಲಿ ನಿಪುಣ, ಲಲಿತ ಕಲೆಗಳಲ್ಲಿ ನಿಪುಣ, ಛಂದಸ್ಸಿನ ಶಾಸ್ತ್ರ–ಪ್ರಯೋಗಗಳಲ್ಲಿ ಪರಿಣತ, ಸರ್ವಶಾಸ್ತ್ರಪಾರಂಗತ. ಅವನು ವಿಭಿನ್ನಗೀತೆಗಳಿಗೆ ಅನುಸಾರವಾಗಿ ಸ್ವರ–ಲಯ–ತಾಳ ಜ್ಞಾನ ಹೊಂದಿದವನು, ಜಾಗರೂಕತೆಯಿಂದ ನಾಟ್ಯ ಪ್ರಯೋಗಗಳನ್ನು ಜಾರಿಗೊಳಿಸುವವನು, ನಟರಿಗೆ ಮಾರ್ಗದರ್ಶಕ, ಹೀಗೆ ಹಲವಾರು ಗುಣಗಳಿಂದ ಪರಿಪೂರ್ಣನಾದವನೇ ಸೂತ್ರಧಾರ.

**ನಾಟ್ಯ ಕಲೆ ಮತ್ತು ಸಾಂಗವಿಧಗಳು :–**

ನಾಟ್ಯಶಾಸ್ತ್ರದ ಮೂರ್ಧನ್ಯ ಭರತಮುನಿ. ಈ ಗ್ರಂಥವು ಕ್ರಿ. ಶ. ಒಂದು ಅಥವಾ ಎರಡನೆಯ ಶತಮಾನದಲ್ಲಿ ರಚಿತವಾಗಿರಬಹುದೆಂದು ಅಂದಾಜಿಸಲಾಗಿದೆ. ಸುಮಾರು ಆರುಸಾವಿರ ಶ್ಲೋಕಗಳಿಂದ ಆವೃತವಾಗಿದ್ದು, ಅಧ್ಯಾಯಗಳ ಸಂಖ್ಯೆ ಮೂವತ್ತಾರೆಂದೂ, ಮತ್ತೆ ಕೆಲವರು ಮೂವತ್ತೇಳೆಂದು ತಿಳಿಸಿರುತ್ತಾರೆ. ನಾಟ್ಯಶಾಸ್ತ್ರವು ನಾಟ್ಯಕಲೆಯ ಸರ್ವಾಂಗಗಳನ್ನು ಸಾದ್ಯಂತವಾಗಿ ಲಕ್ಷಿಸುವ ಬೃಹತ್ ಲಕ್ಷಣಗ್ರಂಥವಾಗಿ ಹೊರಹೊಮ್ಮಿದೆ. ನಾಟ್ಯಕಲೆಯ ಉಗಮದ ಬಗೆಗೆ ಪ್ರಸ್ತಾಪಿಸುವುದಾದರೆ ಋಗ್ವೇದದ ಸಂವಾದ ಸೂಕ್ತ(ಹನ್ನೆರೆಡು)ಗಳೇ ಆದಿಮ ಕಿರಣಗಳೆಂದು ಹಲವರ ಮತ.

ನಾಟ್ಯಕಲೆಯ ಉತ್ಪತ್ತಿಯ ಬಗೆಗೆ ಧಾರ್ಮಿಕಾಭಿಪ್ರಾಯಗಳೂ ಸಾಕಷ್ಟಿವೆ. ದೇವತೆಗಳು ಮಾನವರ ಅಭಿಲಾಷೆಗಳನ್ನು ಪೂರೈಸುವವರೆಂದು ತಿಳಿಯಲಾಗಿದೆ. ಭರತನ ನಾಟ್ಯಶಾಸ್ತ್ರದ ಪ್ರಥಮ ಅಧ್ಯಾಯದಲ್ಲಿ ಉಕ್ತವಾಗಿರುವಂತೆ ವೇದವು ಜ್ಞಾನಾರ್ಜನೆಯ ದೃಷ್ಟಿಯಿಂದ ಸರ್ವೋತ್ಕೃಷ್ಟವಾಗಿರುವುದಾದರೂ ಇದರಲ್ಲಿ ಅಡಕವಾಗಿರುವ ಗಹನವಾದ ವಿಚಾರಗಳು ಅತ್ಯಂತ ಗಂಭೀರ ಹಾಗೂ ಅಮೂರ್ತಸ್ವರೂಪದ್ದಾಗಿದ್ದುದರಿಂದ ಸಾಮಾನ್ಯರು ಅಭ್ಯಸಿಸಲು ಅಸಾಧ್ಯ. ಇಂದ್ರಾದಿಗಳು ಬ್ರಹ್ಮನಲ್ಲಿ ಮಾಡಿಕೊಂಡ ಅರಿಕೆಯ ಪರಿಣಾಮವಾಗಿ ಬ್ರಹ್ಮನು ಜ್ಞಾನಧಾರೆಯು ರಂಜನೀಯವಾಗಿ

ನಿರೂಪಿಸಲ್ಪಡುವಂತಹ ವಿದ್ಯೆಯಾದ ನಾಟ್ಯವೇ ದೇಶೀನೃತ್ಯವೆನಿಸುವುದು. ಕೈಶಿಕೀ, ಸಾತ್ವತೀ, ಆರಭಟೀ ಮತ್ತು ಭಾರತೀ ಎನ್ನುವ ನಾಲ್ಕು ನಾಟ್ಯವೃತ್ತಿಗಳನ್ನು ನೀಡಿದನು.[116] ವಿಶ್ವಕರ್ಮನಿಂದ ರಂಗಮಂದಿರವು ನಿರ್ಮಿಸಲ್ಪಟ್ಟಿತು. ಅನಂತರ ಬ್ರಹ್ಮನು ಭರತನಿಗೆ ಈ ಕಲೆಯನ್ನು ಉಪದೇಶಿಸಿದನೆನ್ನಲಾಗಿದೆ. ಭವಸಂಸಾರ ಸಾಗರದ ಕ್ಲೇಶಾದಿಗಳಿಂದ ಜರ್ಝರಿತರಾದ ಮಾನವಕುಲಕ್ಕೆ ಸಮಾಧಾನದ ಕೊಡುಗೆಯಾಗಿ ಪರಿಣಮಿಸಿದೆನ್ನಲಾಗಿದೆ.

ಕಾಲಾನಂತರ ನಾಟ್ಯಶಾಲೆಗಳು ಶ್ರೀಮಂತರ ಮತ್ತು ರಾಜರ ಆಶ್ರಯಗಳಲ್ಲಿ ಬೆಳೆದುಬಂದು, ರಾಜಸಭೆಗಳಲ್ಲಿ ಪ್ರೋತ್ಸಾಹಿಸಲ್ಪಟ್ಟವು. ಕ್ರಮೇಣ ನಾಟ್ಯಶಾಲೆಗಳ ಅವಶ್ಯಕತೆ ಕಂಡು ಬಂದು ನಾಟ್ಯವು ಇನ್ನಷ್ಟು ವ್ಯಾಪ್ತಿಯನ್ನು ಪಡೆದು ಸಾರ್ವಜನಿಕ ಮನ್ನಣೆಗಳಿಸುವಲ್ಲಿ ಯಶಸ್ವಿಯಾಯಿತು. ಮುಂದೆ ರಂಗಮಂದಿರಗಳಲ್ಲಿ ಪ್ರದರ್ಶನಗೊಂಡವು. ರಂಗಮಂದಿರದ ಕಲ್ಪನೆಗಿವು ಪೂರಕಾಂಶಗಳಾಗಿವೆ.

ರಂಗಮಂದಿರ(ಒಳಾಂಗಣ ವಿನ್ಯಾಸ)– ಬಸವರಾಜನು ರಂಗಮಂದಿರದ ಒಳಾಂಗಣದ ವಿನ್ಯಾಸವನ್ನು ವಿಶೇಷವಾಗಿರುವಂತೆ ರೂಪಿಸಲ್ಪಡಬೇಕೆಂದು ಅಭಿಪ್ರಾಯಪಟ್ಟಿದ್ದಾನೆ. ರಂಗಮಂದಿರವು ಒಳಾಂಗಣ ಶೃಂಗಾರದಿಂದ ಮುದವನ್ನು ಕೊಡುವಂತಿರಬೇಕು. ರಂಗಮಂದಿರದ ಕೆಲಭಾಗಗಳು ಪೂರ್ಣ ಬೆಳಕಿನಿಂದಲೂ ಇನ್ನು ಕೆಲವೆಡೆ ಕತ್ತಲಿರುವಂತೆ ವ್ಯವಸ್ಥೆಗೊಳಿಸಬೇಕು. ಸ್ತಂಭಗಳಿಂದಲೂ, ಗೋಡೆಗಳಿಂದಲೂ ಮತ್ತು ವಿವಿಧ ಚಿತ್ತಾರಗಳಿಂದಲೂ ಭವ್ಯತೆಯನ್ನುಂಟುಮಾಡುವಂತಿರಬೇಕು. ವಜ್ರಲೇಪವು ಈ ಕಾರ್ಯಗಳಿಗೆ ಸಹಕಾರಿ. ಸಸ್ಯಜನ್ಯ, ಪ್ರಾಣಿ ಜನ್ಯಗಳಿಂದ ಮತ್ತು ಇತರೆ ವಸ್ತುಗಳಿಂದ ತಯಾರಿಸಿದ 'ವಜ್ರಲೇಪ'ಕ್ಕೆ ಬೇಕಾದ ಬಣ್ಣಗಳನ್ನು ಮಿಶ್ರಮಾಡಿ ಲೇಪಿಸಬಹುದಾಗಿರುತ್ತದೆ.

ಸಾಮಾನ್ಯವಾಗಿ ವಜ್ರಲೇಪವನ್ನು ತಯಾರಿಸುವ ಕ್ರಮವೆಂದರೆ, ಎಮ್ಮೆಯ ಹೊಸ ಚರ್ಮವನ್ನು ನೀರಿನಲ್ಲಿ ಕುದಿಸಿದಾಗ ದೊರಕುವ ಬೆಣ್ಣೆಯಂತಹ ಜಿಗುಟಾದ ಪದಾರ್ಥ. ಇದನ್ನು ಸರಳುಗಳಿಗೆ ಬಳಿದು ಬಿಸಿಲಿನಲ್ಲಿ ಗಟ್ಟಿಯಾಗುವ ತನಕ ಒಣಗಿಸಿದಾಗ ವಜ್ರಲೇಪ ತಯಾರಾಗುತ್ತದೆ. ಮತ್ತೆ ಮಣ್ಣಿನ ಪಾತ್ರೆಯಲ್ಲಿ ಮಣ್ಣಿನೊಂದಿಗೆ ನೀರಿನಲ್ಲಿ ಕುದಿಸಿದರೆ ಗೋಡೆ ಮತ್ತು ಸ್ತಂಭಗಳಿಗೆ ಮೆರಗುಗೊಳಿಸುವಂತಹ ಲೇಪವು ಸಿದ್ಧವಾಗುತ್ತದೆ. ಇದನ್ನು ಗೋಡೆಗಳಿಗೆ ಬಳಿಯುವುದರಿಂದ ಗೋಡೆಯು ನವಿರಾಗುತ್ತದೆ. ಶಂಖ, ಅಮೃತಶಿಲೆಯಂತಹ ಕಲ್ಲುಗಳ ಪುಡಿಯನ್ನು ಮಿಶ್ರಿಸಿ ತಯಾರಿಸಿದ ಲೇಪವನ್ನು ಬಳಿದರೆ ಗೋಡೆಯು ಗಾಜಿನ ಮೆರುಗನ್ನು ಪಡೆಯುತ್ತದೆ.

---

[116] ನಾಟ್ಯಶಾಸ್ತ್ರ–ಭರತಮುನಿ ಕನ್ನಡ ಅನುವಾದ ಆದ್ಯ ರಂಗಾಚಾರ್ಯ 2003

ಕುಂಚಗಳು – ವಿವಿಧ ಅಳತೆಯ ಬಣ್ಣವನ್ನು ಲೇಪಿಸಲು ಕುಂಚಗಳು ಅವಶ್ಯಕ, ಹಾಗಾಗಿ ಇವುಗಳನ್ನು ಕ್ರಮವರಿತು ಸಿದ್ಧಪಡಿಸಿಕೊಳ್ಳುವುದು ಉಚಿತವಾಗಿರುತ್ತದೆ. ಜೇನುಮೇಣ ಮತ್ತು ತವರವನ್ನು ಸಂಸ್ಕರಿಸಿ ತಯಾರಿಸಿದ ಚಿತ್ತಾರ ಸಾಮಗ್ರಿಯನ್ನು 'ವರ್ತಿಕಾ' ಎನ್ನಲಾಗುತ್ತದೆ. ಕರುವಿನ ಕಿವಿಕೂದಲಿನಿಂದ ತಯರಿಸಲಾದ ಕುಂಚವು ಸೂಕ್ಷ್ಮವಾಗಿದ್ದು 'ಲೇಖನಿ'ಯೆನಿಸಲ್ಪಡುತ್ತದೆ. ಕುಂಚವನ್ನು ಅಡ್ಡವಾಗಿಟ್ಟುಕೊಂಡು ಎಳೆದರೆ ಸ್ಥೂಲಾಕಾರವನ್ನು ಮೂಡಿಸಬಹುದು. ಕುಂಚದ ಅಗ್ರಭಾಗದಿಂದ ಪಕ್ಕಕ್ಕೆ ಹೊರಳಿಸಿ ಎಳೆದರೆ ಮಧ್ಯಮ ಗಾತ್ರದ ರೇಖೆಗಳನ್ನು ಮೂಡಿಸಬಹುದು. ಕರ್ಣಗಳಿಂದ ಎಳೆದರೆ ಸೂಕ್ಷ್ಮ ರೇಖೆಗಳನ್ನು ಮೂಡಿಸಬಹುದು. ಚಿತ್ರರಚನೆಯ ಕ್ರಮಗಳನ್ನು ನುರಿತವರಿಂದ ಕಲಿಯಬೇಕು.

ಬಣ್ಣ ತಯಾರಿಕೆ– ಚಿತ್ರ ರಚನೆಗೆ ಅವಶ್ಯವಿರುವ ವಿವಿಧ ಬಣ್ಣಗಳ ತಯಾರಿಕೆಯನ್ನು ಮಾಡಿಕೊಳ್ಳುವುದು ಉಚಿತ. ಶಂಖಚೂರ್ಣದಿಂದ ಶ್ವೇತವರ್ಣವನ್ನೂ, ಶಂಖಚೂರ್ಣದೊಡನೆ ಕೆಂಪುಸೀಸದ ಪುಡಿಯನ್ನು ಮಿಶ್ರಿಸಿದರೆ ಕೆಂಪುಬಣ್ಣವನ್ನೂ, (ನಸುಗೆಂಪು ಬಣ್ಣವನ್ನು ಪಡೆಯಲು ಅರಗಿನೊಡನೆ ಕೆಂಪುಸುಣ್ಣಕಲ್ಲನ್ನು ಮಿಶ್ರಿಸಲಾಗುವುದು) ಅರದಾಳದಿಂದ ಹಳದಿಬಣ್ಣವನ್ನೂ, ಕಾಡಿಗೆಯಿಂದ ಕಪ್ಪುಬಣ್ಣವನ್ನೂ ತಯಾರಿಸಿಕೊಳ್ಳಬಹುದು. ಈ ನಾಲ್ಕು ಬಣ್ಣಗಳನ್ನು 'ಶುದ್ಧವರ್ಣ'ಗಳೆಂದು ಕರೆಯುತ್ತಾರೆ. ಶುದ್ಧವರ್ಣಗಳ ಅಂತರ್ ಮಿಶ್ರಣದಿಂದ ಹಲವಾರು ಬಣ್ಣಗಳನ್ನು ತಯಾರಿಸಬಹುದಾಗಿರುತ್ತದೆ.

ಬೃಹದಾಕಾರದ ಮಾನವಾಕೃತಿಗಳ ಚಿತ್ರಗಳನ್ನು ನಿರ್ಮಿಸಿದರೆ ರಂಗಮಂದಿರವನ್ನು ಸೊಬಗಿನಿಂದ ಕಂಗೊಳಿಸಬಹುದು. ಇದನ್ನೇ ಇಂದಿನ ಸಿನಿಮಾ ಮಂದಿರಗಳಲ್ಲಿ ಪೋಸ್ಟರ್/ಕಟೌಟ್ ಎನ್ನಲಾಗುತ್ತದೆ. ಇಂತಹ ಚಿತ್ರ ರಚನೆಗೆ ಸೂಕ್ತ ತರಬೇತಿ ಮತ್ತು ಕೌಶಲ್ಯ ಅಗತ್ಯ. ಮಾನವಾಕೃತಿಯ ಅಂಗಾಂಗಗಳು ಪ್ರಮಾಣಬದ್ಧವಾಗಿರುವಂತೆ ಸೂಕ್ತ ಮಾಪಕಗಳ ಜ್ಞಾನ ಅವಶ್ಯ. ಚಿತ್ರ ಇಲ್ಲವೆ ಪ್ರತಿಮೆಗಳನ್ನು ರಚಿಸಲು ಸೂಕ್ಷ್ಮ ರೇಖೆಗಳನ್ನು ಕಾಣದಂತೆ ಆದಿಯಲ್ಲಿ ರಚಿಸಲಾಗುತ್ತದೆ. ಶಿರೋಭಾಗದಿಂದ ಆರಂಭಿಸಿ ಭ್ರೂಮಧ್ಯೆ, ನಾಸಿಕಾಗ್ರ, ಗಲ್ಲ, ಹೃದಯ, ನಾಭಿಪ್ರದೇಶವನ್ನು ಮತ್ತು ಚರಣದ ಮಧ್ಯದವರೆಗೆ ಹಾದು ಹೋಗುವ ರೇಖೆಯನ್ನು 'ಬ್ರಹ್ಮಸೂತ್ರ'ವೆನ್ನಲಾಗುತ್ತದೆ. ತಲೆಯ ಎರಡು ಪಾರ್ಶ್ವಗಳಿಂದ ಅಂದರೆ ಬ್ರಹ್ಮಸೂತ್ರದ ಇಕ್ಕೆಡೆಗಳಲ್ಲಿ ಗೊತ್ತಾದ ಅಳತೆಯಲ್ಲಿ ಕಿವಿ, ಗಲ್ಲ, ನಡುಭಾಗವನ್ನು ಹಾದು ಪಾದದ ಪಾರ್ಶ್ವಗಳಲ್ಲಿ

ಎಳೆಯಲಾಗುವ ರೇಖೆಯು 'ಪಕ್ಷಸೂತ್ರ'ವೆನಿಸುತ್ತದೆ ಈ ಬ್ರಹ್ಮ ಸೂತ್ರ ಮತ್ತು ಪಕ್ಷಸೂತ್ರಗಳೆ ಚಿತ್ರ ರಚನೆಗೆ ಆಧಾರ.[117]

ಪ್ರಾಚೀನರಿಗೆ ಈ ಶಾಸ್ತ್ರದಲ್ಲಿ ನೈಪುಣ್ಯತೆಯು ಸಾಧಿತವಾಗಿತ್ತು ಎಂಬುದಕ್ಕೆ ಆಗಿನ ಕಾಲದಲ್ಲಿ ಅನುಸರಿಸುತ್ತಿದ್ದ ಮಾಪಕೋಪಕರಣಗಳೇ ಸಾಕ್ಷಿ. ಪ್ರತಿಮೆಗಳನ್ನು ನಿರ್ಮಿಸಲು ಅಪಾದಮಸ್ತಕ ಅಂಗಾಂಗಗಳ ಕುರಿತು ಇಲ್ಲಿ ಮಾಹಿತಿ ಇದೆ. ಚಿತ್ರ ಮತ್ತು ಪ್ರತಿಮೆಗಳ ನಿರ್ಮಾಣದಲ್ಲಿ ಭಾವಾಭಿವ್ಯಕ್ತಿ ಅವಶ್ಯ. ಈ ಪ್ರಮಾಣಗಳು ಸ್ತ್ರೀ–ಪುರುಷ ವಿಗ್ರಹಗಳಿಗೆ ಅಂಗಾಂಗಗಳ ಪ್ರಮಾಣಗಳು ಭಿನ್ನವಾಗಿವೆ.

**ನಾಟ್ಯಶಾಸ್ತ್ರದ ಔಚಿತ್ಯ–**

ಕಾಳಿದಾಸನು ತನ್ನ ಮಾಲವಿಕಾಗ್ನಿಮಿತ್ರಮ್ ನಾಟಕದ ನಾಲ್ಕನೆಯ ಶ್ಲೋಕದಲ್ಲಿ 'ನಾಟ್ಯಂ ಭಿನ್ನರುಚೈರ್ಜನಸ್ಯ ಬಹುಧಾಪ್ಯೇಕಂ ಸಮಾರಾಧನಮ್' ವಿಭಿನ್ನಮನಸ್ತರದ ಜನಸಮುದಾಯಕ್ಕೆ ಹಲವಾರು ಕಲೆ ಮತ್ತು ಭಾವಾದಿಗಳ ಸಂಗಮದಿಂದ ಕೂಡಿದ ವಿಶಿಷ್ಟ ಕಲಾಮಾಧ್ಯಮವಾದ ಈ ನಾಟ್ಯಕಲೆಯು ಒಂದಿಲ್ಲೊಂದು ರೀತಿಯಲ್ಲಿ ಮನರಂಜನೆಯನ್ನು ನೀಡದಿರದೆಂದಿದ್ದಾನೆ. ಅಲ್ಲಿಗೆ ನಾಟ್ಯ ಕಲೆಯ ವ್ಯಾಪ್ತಿಯನ್ನು ತಿಳಿಯಬಹುದಾಗಿದೆ.

ಪ್ರಸ್ತುತ ನಾಟ್ಯದ ಔಚಿತ್ಯವನ್ನು ತಿಳಿಸುತ್ತಾ ಬಸವಭೂಪನು ಕೂಡ ನಾಟ್ಯವು ಮಾನವ ಸಂಕುಲದ ಎಲ್ಲಾ ವರ್ಗದವರಿಗೂ ಒಂದಿಲ್ಲೊಂದು ರೂಪದಲ್ಲಿ ಉಪಯೋಗಕಾರಿಯಾಗಿರುವುದೆಂದು ಲಕ್ಷಿಸಿದ್ದಾನೆ. ನೃತ್ಯ ಪ್ರಯೋಗವು ರಂಜನಾತ್ಮಕವಾಗಿರುವುದರಿಂದ ಈ ಕಲೆಯನ್ನು ರಾಜರುಗಳು ಪ್ರೋತ್ಸಾಹಿಸುತ್ತಿದ್ದರು. ಇಷ್ಟಲ್ಲದೆ ಇಲ್ಲಿ ಚರ್ಚಿತವಾದ ವಿಚಾರಗಳೆಂದರೆ, ನಾಟ್ಯಶಾಸ್ತ್ರದ ಮೂಲ, ವಿವಿಧ ಪ್ರಕಾರಗಳು, ನಾಟ್ಯಶಾಸ್ತ್ರ ಬೆಳೆದು ಬಂದ ದಾರಿ ಮತ್ತು ನಾಟ್ಯಶಾಸ್ತ್ರಕ್ಕಿರುವ ಪೌರಾಣಿಕ ಮತ್ತು ಐತಿಹಾಸಿಕ ಹಿನ್ನೆಲೆಗಳನ್ನು ತಿಳಿಸಲಾಗಿದೆ. ನೃತ್ಯದ ಮಾರ್ಗಾದಿ ವಿವಿಧ ಪ್ರಕಾರಗಳನ್ನು ಚರ್ಚಿಸಲಾಗಿದೆ. ನರ್ತಕರ ಲಕ್ಷಣ ಮತ್ತು ಕುಶಲತೆಗಳನ್ನು ತಿಳಿಸಿ, ನರ್ತನಕ್ಕೆ ಸತತಾಭ್ಯಾಸ ಅವಶ್ಯವಾಗಿ ನಿರ್ವಹಿಸಬೇಕಾಗಿರುವುದನ್ನು ತಿಳಿಸಲಾಗಿದೆ. ಇದು ಅರವತ್ತನಾಲ್ಕು ಕಲೆಗಳಲ್ಲೊಂದೆಂದು ಪರಿಗಣಿತವಾಗಿದೆ. ನರ್ತಕರ ವಯೋಮಾನಗಳಿಗನುಸಾರವಾಗಿ ಉತ್ತಮ, ಮಧ್ಯಮ, ಅಧಮರೆಂದು ವಿಭಾಗಿಸಲಾಗಿದೆ. ನರ್ತಕರು

---

117 ಶಿವತತ್ತ್ವರತ್ನಾಕರ – ಸಂಪುಟ 1 – ಸಂ: ಎಸ್.ನಾರಾಯಣ ಶಾಸ್ತ್ರಿ ಮತ್ತು ಆರ್. ರಾಮಾಶಾಸ್ತ್ರಿ, ಪ್ರಾಚ್ಯವಿದ್ಯಾ ಸಂಶೋಧನಾ ಕೇಂದ್ರ, ಮೈಸೂರು ವಿಶ್ವವಿದ್ಯಾಲಯ, ಮೈಸೂರು –1964. (6.2.65,66)

ಶರೀರ ಸೌಷ್ಠವವನ್ನು ಕಾಪಾಡಿಕೊಳ್ಳಬೇಕಾದುದು ಅನಿವಾರ್ಯ. ನೃತ್ಯಕಲೆಯು ವೈವಿಧ್ಯಮಯವಾದ ಪದ್ಧತಿ ಮತ್ತು ಶಿಕ್ಷಣದಿಂದ ಕೂಡಿದೆ.

**ನಾಟ್ಯಾಭಿನಯ** : ನಾಟ್ಯವೆಂದರೆ ಚಲನಶೀಲವಾದ ಒಂದು ಪ್ರಕ್ರಿಯೆ. ಪ್ರೇಕ್ಷಾಂಗಣದಲ್ಲಿರುವ ಸಾಮಾಜಿಕ(ಪ್ರೇಕ್ಷಕವರ್ಗ)ರಿಗೆ ನರ್ತಕರು ಶಾಸ್ತ್ರೀಯವಾಗಿ ತಾವು ಪ್ರಧಾನ ಮಾಡಲಿರುವ ಭಾವಗಳನ್ನು ಸಂವಹಿಸುವ ವಿಶಿಷ್ಟ ಕಲೆಯೇ ನಾಟ್ಯವೆನ್ನಲಾಗುತ್ತದೆ. ವಿವಿಧ ಮುಖಮುದ್ರೆ ಹಾಗೂ ಕರನ್ಯಾಸಗಳ ಮೂಲಕ ಭಾವಾಭಿನಯವು ಪ್ರವಹಿಸಲ್ಪಡುತ್ತದೆ. ಅಂತೆಯೇ ನಾಟ್ಯಪ್ರಯೋಗಕ್ಕೆ ಷಡಂಗಗಳೆನ್ನಲಾಗುವ ಶಿರಸ್ಸು, ಎದೆ, ಕೈಗಳು, ಪಾರ್ಶ್ವ, ಸೊಂಟ ಮತ್ತು ಕಾಲುಗಳು; ಉಪಾಂಗಗಳೆನ್ನಲಾಗುವ ಹುಬ್ಬುಗಳು, ಕಣ್ಣುಗಳು, ಮೂಗು, ಕಪೋಲ, ಕೆಳತುಟಿ ಮತ್ತು ಗಲ್ಲ; ಪ್ರತ್ಯಂಗಗಳೆನ್ನಲಾಗುವ ಕುತ್ತಿಗೆ, ಬಾಹು, ಬೆನ್ನು, ಹೊಟ್ಟೆ, ತೊಡೆಗಳು ಮತ್ತು ಮೊಣಕಾಲುಗಳ ದ್ವಾರಾ ಭಾವಗಳು ವ್ಯಂಜಿಸಲ್ಪಡುತ್ತವೆ. ಇವುಗಳ ಯೋಗ್ಯ ಬಳಕೆಗಾಗಿ ಶಿಕ್ಷಾ ಮತ್ತು ಪದ್ಧತಿ(methodology)ಗಳಿವೆ. ವಾಸ್ತವಿಕ ನೆಲೆಗಟ್ಟಿನಲ್ಲಿ ಸಾಮಾಜಿಕರು ಸಂವಹಿಸುವ ಕ್ರಿಯೆಗೂ ರಂಗಾಭಿನಯದಲ್ಲಿ ನಟರು ತೊಡಗಿಸಿಕೊಳ್ಳುವ ಕ್ರಿಯೆಗೂ ವ್ಯತ್ಯಾಸವಿರುತ್ತದೆ. ಇದನ್ನೇ 'ನಾಟ್ಯಧರ್ಮ'ವೆಂದಿರುವುದು. ರಂಗದಲ್ಲಿ ನಟರು ನಾಟ್ಯಧರ್ಮವನ್ನು ಅನುಸರಿಸ ಬೇಕಾಗುತ್ತದೆ. ಉದಾಹರಣೆಗಾಗಿ ಹೇಳುವುದಾದರೆ ರಂಗದಲ್ಲಿ ನಾಲ್ವರು ವಿಭಿನ್ನ ಪಾತ್ರಧಾರಿಗಳಿದ್ದರೆ ಪಾತ್ರಗಳಿಬ್ಬರು ತಾವಾಡುವ ಸಂಭಾಷಣೆಯು ತಮಗೆ ಮಾತ್ರ ಕೇಳುವಂತೆಯೂ ಇತರ ಪಾತ್ರಗಳಿಗೆ ಕೇಳದಂತಾಗಬೇಕಾದರೆ ತಮ್ಮ ಒಂದು ಕೈಯ್ಯನ್ನು ಬಾಯಿಗೆ ಅಡ್ಡವಾಗಿಟ್ಟು ಇನ್ನೊಬ್ಬರ ಕಿವಿಯ ಬಳಿ ಸಾರಿ (ಪ್ರೇಕ್ಷಕರಿಗೆ ಮುಟ್ಟಿಸಲು ಅನುಕೂಲವಾಗುವಂತೆ) ಗಟ್ಟಿಯಾಗಿಯೇ ಸಂಭಾಷಿಸುವುದಾಗಿರುತ್ತದೆ.

ನಾಟ್ಯದಲ್ಲಿ ನಟನು ಸೂಕ್ತ ಭಾವನೆಗಳನ್ನು ಸಮರ್ಪಕವಾಗಿ ಅಭಿನಯಿಸಲು ಷಡಂಗೋಪಾಂಗಪ್ರತ್ಯಂಗಗಳ ನಿರ್ವಹಣಾಕ್ರಮವು ಶಿವತತ್ತ್ವರತ್ನಾಕರದ ಆರನೆಯ ಕಲ್ಲೋಲದ ನಾಲ್ಕನೆಯ ತರಂಗದಲ್ಲಿ ದಾಖಲಾಗಿದೆ. ಶರೀರಕ್ಕೆ ಶಿರಸ್ಸು ಪ್ರಧಾನವಾದುದು. ಹಾಗಾಗಿ ಶಿರಸ್ಸಿನ ಧುತಾದಿ ಹದಿಮೂರು ಗತಿಗಳಿಂದ ಭಾವಗಳನ್ನು ವ್ಯಕ್ತಪಡಿಸಬಹುದಾಗಿರುತ್ತದೆ. ಕುತ್ತಿಗೆಯನ್ನು ಬೇರೆ ಬೇರೆ ಭಾಗಗಳಲ್ಲಿ ಸಾಮಾನ್ಯ, ಮಂದ ಹಾಗೂ ಕ್ಷಿಪ್ರಗತಿಗಳಲ್ಲಿ ತಿರುಗಿಸುವುದು, ನಡುಗಿಸುವುದು ಮುಂತಾದವುಗಳ ಮೂಲಕ ವಿವಿಧ ಭಾವಗಳನ್ನು ವ್ಯಕ್ತಪಡಿಸಬಹುದಾಗಿದೆ.

ನಾಟ್ಯಾಭಿನಯಕ್ಕೆ ಪೂರಕವಾಗುವ ದೃಷ್ಟಿಬೇಧಗಳು– ನಾಟ್ಯಾಭಿನಯದಲ್ಲಿ ಕುತ್ತಿಗೆಯನ್ನು ವಿವಿಧ

ಭಂಗಿಗಳಲ್ಲಿ ಅಭಿವ್ಯಕ್ತಿಗೊಳಿಸುವುದರಿಂದ ಬೇರೆ ಬೇರೆ ಭಾವಗಳನ್ನು ವ್ಯಕ್ತಪಡಿಸುವಂತೆ ವಿವಿಧ ದೃಷ್ಟಿಬೇಧಗಳು ಭಾವನೆಗಳನ್ನು ವ್ಯಕ್ತಪಡಿಸಲು ಪೂರಕವಾಗಿರುತ್ತವೆ. ನಾಟ್ಯಾಭಿನಯಕ್ಕೆ ಪೂರಕವಾಗುವ ಪ್ರಧಾನವಾದ ದೃಷ್ಟಿಬೇಧಗಳೆಂದರೆ– 1.ಸ್ಥಾಯೀಭಾವಕ್ಕೆ ಸಂಬಂಧಿತ ದೃಷ್ಟಿಬೇಧಗಳು, 2.ವ್ಯಭಿಚಾರಿಭಾವ ಸಂಬಂಧಿತ ದೃಷ್ಟಿಬೇಧಗಳು 3.ರಸಭಾವದೃಷ್ಟಿಗಳೆಂದು ಮೂರು ರೀತಿಗಳಲ್ಲಿ ವಿಭಕ್ತವಾಗಿದ್ದು ಆವಾಂತರ ಬೇಧಗಳಿಂದ ಅಸಂಖ್ಯಾತವಾಗಿರುತ್ತವೆ. ಪ್ರಸ್ತುತ ನಾಟ್ಯಕಲೆಯ ಸ್ಥೂಲ ಪರಿಚಯವನಷ್ಟೆ ಮಾಡುವ ದೃಷ್ಟಿಯಿಂದ ಇವುಗಳ ಇಣುಕು ನೋಟವನಷ್ಟೆ ಸಾದರಪಡಿಸಲಾಗುವುದು.

ಸ್ಥಾಯೀಭಾವದೃಷ್ಟಿ ಬೇಧಗಳು– ಸ್ನಿಗ್ಧಾ, ಹೃಷ್ಟಾ, ದೀನಾ, ಕೃದ್ಧಾ, ದೃಷ್ಟಾ, ಭಯಾನ್ವಿತಾ, ಜುಗುಪ್ಸಿತಾ ಮತ್ತು ವಿಸ್ಮಿತವೆಂಬ ಸ್ಥಾಯಿಭಾವ ಸಂಬಂಧಿತ ದೃಷ್ಟಿಭೇದಗಳು ಎಂಟು. ಸ್ನಿಗ್ಧಾ – ರತಿಭಾವ ಜನ್ಯಕಗಳೆನಿಸುವವು ಸಹರ್ಷಾದಿ ಐದು ವಿಧಗಳಲ್ಲಿ ವ್ಯಕ್ತವಾಗುತ್ತವೆ.[118] ಹೃಷ್ಟಾ– ಇವು ಹಾಸ್ಯ ರಸದದೃಷ್ಟಿಗಳೆನಿಸಿ ಚಂಚಲಾದಿ ಐದು ರೀತಿಗಳಲ್ಲಿವೆ. ದೀನ –ಇವು ಶೋಕಭಾವಕ್ಕೆ ಪ್ರೇರಕಗಳಾಗಿದ್ದು ವಿಸ್ರಸ್ತಾದಿ ನಾಲ್ಕು ವಿಧಗಳಲ್ಲಿ ಅನಾವರಣಗೊಳ್ಳುತ್ತವೆ.[119] ಕ್ರುದ್ಧಾಎಂದರೆ ಕೋಪೋದ್ರಿಕ್ತತೆಯನ್ನು ವ್ಯಂಜಿಸಲು ಸ್ಥಿರೋದ್ಧರಪುಟಾ ಮುಂತಾದ ಆರು ವಿಧಗಳಿವೆ[120] ಧೃಷ್ಟಾ– ಉತ್ಸಾಹಭಾವವು ಕನೀನಿಕೆಯ ಸ್ಥಿರನೋಟಾದಿಗಳಿಂದ ಚತುರ್ವಿಧಗಳಿಂದ ವ್ಯಂಜಿಸಲ್ಪಡುತ್ತವೆ. ಭಯಾನ್ವಿತ–ಭೀತಿಯನ್ನು ಸ್ಥಿರಾದಿ ನಾಲ್ಕು ಭೇದಗಳಿಂದ ಅಭಿವ್ಯಕ್ತಿಸಲ್ಪಡುತ್ತದೆ ಜುಗುಪ್ಸಿತಾ – ಅಸಹ್ಯತೆಯನ್ನು ಉದ್ವೇಗಪೂರ್ವಕವಾಗಿ ತ್ರಿವಿಧಗಳಲ್ಲಿ ವ್ಯಕ್ತಪಡಿಸಬಹುದಾಗಿದೆ ವಿಸ್ಮಿತಾ– ತಿರುಗುವ ಕನೀನಿಕೆ ಮುಂತಾದ ಮೂರು ರೀತಿಗಳಲ್ಲಿ ವಿಸ್ಮಯವನ್ನು ಅಬಿವ್ಯಕ್ತಿಸಬಹುದಾಗಿದೆ. ಇಷ್ಟಲ್ಲದೆ ಪ್ರತಿಯೊಂದು ಬೇಧಗಳೂ ಆವಾಂತರ ಬೇಧಗಳಿಂದ ಕೂಡಿವೆ.

ವ್ಯಭಿಚಾರೀಭಾವ ದೃಷ್ಟಿಭೇದಗಳು– ವ್ಯಭಿಚಾರೀಭಾವದೃಷ್ಟಿಯ ಇಪ್ಪತ್ತು ಬೇಧಗಳು ಪ್ರತ್ಯೇಕ ಲಕ್ಷಣಗಳಿಂದ ಲಕ್ಷಿಸಲ್ಪಟ್ಟಿವೆ. ಇವುಗಳು ಕಣ್ಣುಗುಡ್ಡೆ, ಕನೀನಿಕೆ, ರೆಪ್ಪೆ, ರೆಪ್ಪೆಗೂದಲು ಮತ್ತು ನೋಟವನ್ನು ಅರಳಿಸಿಯೋ, ಓರೆಯಾಗಿರುವಂತೆಯೋ, ಬಿರಿದಂತೆಯೋ ಇಲ್ಲವೆ ಮುಚ್ಚಿದಂತೆಯೋ ಮಾಡಿ ತೋರಬಹುದಾದ ದೃಷ್ಟಿವಿಶೇಷಗಳಿಂದ ಇಪ್ಪತ್ತು ವಿಧಗಳಿಂದ ಕೂಡಿದವುಗಳಾಗಿರುತ್ತವೆ.

**ಶೂನ್ಯ**–ನಿರ್ನಿಮೇಷವಾಗಿ ದೃಷ್ಟಿಸಿದರೂ ಎದುರಿನ ಪದಾರ್ಥದ ಬಗೆಗೆ ಸ್ಪಷ್ಟತೆಯಿರುವುದಿಲ್ಲ. **ಮಲಿನ** – ಮುಚ್ಚಲ್ಪಟ್ಟ ಕಡೆಗಣ್ಣಿನಂತಿದ್ದರೂ ಕನೀನಿಕೆ (ಕಪ್ಪುಗುಡ್ಡೆ)ಯು ಮಾತ್ರ ತೋರುತ್ತಿದ್ದು ಸ್ವಲ್ಪ ಮಟ್ಟಿಗೆ

---

[118] ಶಿವತತ್ತ್ವರತ್ನಾಕರ – ಸಂಪುಟ 1 – ಸಂ: ಎಸ್.ನಾರಾಯಣ ಶಾಸ್ತ್ರಿ ಮತ್ತು ಆರ್. ರಾಮಾಶಾಸ್ತ್ರಿ, ಪ್ರಾಚ್ಯವಿದ್ಯಾ ಸಂಶೋಧನಾ ಕೇಂದ್ರ, ಮೈಸೂರು ವಿಶ್ವವಿದ್ಯಾಲಯ, ಮೈಸೂರು –1964. (ಶಿ.ರ.6.4.17).

[119] ಅದೇ (ಶಿ.ರ.6.4.19).

[120] ಅದೇ (ಶಿ.ರ.6.4.21).

ರೆಪ್ಪೆಗೂದಲುಗಳು ಎದ್ದು ನಿಂತಂತೆ  ಭಾಸವಾಗುವುದು. ಶ್ರಾಂತ– ನೋಟವು ಓರೆಯಾಗಿದ್ದು, ತಾರಕೆ (ಕಣ್ಣಿನ ಬಿಳಿಭಾಗ)ಯು ನಲುಗುವಂತಿದ್ದು, ರೆಪ್ಪೆಗಳು ಬಾಡಿದಂತಿರುವುದು. ಲಜ್ಜಿತಾ – ಬಾಗಿದ ರೆಪ್ಪೆಗಳಿಂದ ಕೂಡಿ ನಾಚಿಕೆಯಿಂದ ಮುದುಡಿದ ಕಣ್ಣಗುಡ್ಡೆಗಳಾಗಿರುವುವು . ಶಂಕಿತಾ – ಚಂಚಲಯುಕ್ತವಾಗಿ ಆಚೀಚೆ ದೃಷ್ಟಿ ಹರಿಸುವಿಕೆ, ಮುಕುಲಾ– ರೆಪ್ಪೆಗಳೆರೆಡೂ ಸಂಪೂರ್ಣವಾಗಿ ತೆರೆದಿದ್ದರೂ ಕಣ್ಣುಗಳು ಸಂಕೋಚದಿಂದ ಅರೆಬಿರಿದಿರುವ ಸ್ಥಿತಿ. ಜಿಹ್ಮ – ಇಳಿಬಿಟ್ಟ ರೆಪ್ಪೆಗಳಿಂದ ಔದಾಸೀನ್ಯ (ಕಪಟ) ದೃಷ್ಟಿ. ಲಲಿತಾ – ವಿಸ್ಮಯದಿಂದ ಇಚ್ಛಾ ಪ್ರಕಟ ಮಾಡಬಹುದಾದ ಮಧುರ ನೋಟ. ವಿತರ್ಕಿತಾ – ವಿಕಸಿತ ಕಣ್ಣುಗುಡ್ಡೆಗಳಿಂದ ಗಮನವನ್ನು ಅಧೋಮುಖಗೊಳಿಸುವುದು. ವಿಭ್ರಾಂತಾ – ಕಣ್ಣ ಪಾಪೆಗಳಲ್ಲಿ ಚಂಚಲತ್ವವು ಮೂಡಿ ಭ್ರಾಂತಿಯನ್ನು ತೋರುವುದು. ಅರ್ಧಮುಕುಲ – ಕನೀನಿಕೆಗಳು ಮುಚ್ಚಿದಂತೆಯೂ, ರೆಪ್ಪೆಗಳನ್ನು ಓರೆಯಾಗಿಸಿ ಅರೆಬಿರಿದ ರೆಪ್ಪೆಯಿಂದ ದೃಷ್ಟಿಸುವುದು. ತ್ರಸ್ತಾ– ಕಣ್ಣುಗುಡ್ಡೆಗಳು ಚಂಚಲತ್ವದಿಂದ ಕೂಡಿ ತೆರೆಗಣ್ಣಿನಲ್ಲಿದ್ದರೂ, ಬಳಲಿಕೆಯು ಮೂಡಿ ಗಾಬರಿಯಿಂದ ಪರ್ಯವಸನವಾಗುವ ದೃಷ್ಟಿ. ವಿಕಾಸ– ಮುಚ್ಚದ ರೆಪ್ಪೆಗಳಿಂದ ಚಂಚಲ ಪಾಪೆಗಳಿಂದ ಕಣ್ಣರಳಿಸಿ ನೋಡುವುದು. ಕೇಕರಾ– ರೆಪ್ಪೆಯು ಓರೆಯಾಗಿ ಅರೆ ಮುಚ್ಚಿದ ಕಣ್ಣಗುಡ್ಡೆಯಿಂದ ತೀವ್ರ ನೋಟವನ್ನು ಪ್ರದರ್ಶಿಸುವುದು. ವಿಪ್ಲುತ – ಅದುರುವ ರೆಪ್ಪೆಗಳಿಂದ ಅರಳಿದ ಕನೀನಿಕೆಯ ದೃಷ್ಟಿಯಾಗಿರುತ್ತದೆ. ಮದಿರಾ– ಕಣ್ಣಿನ ಮಧ್ಯ ಭಾಗವು ಅದುರುತ್ತಿದ್ದು, ಅರಳಿದ್ದರೂ ಒಣಗಿದ ದೃಷ್ಟಿಯಂತೆ ಮೂಡಿಸುವುದು. ಗ್ಲಾನಾ– ಬಳಲಿಕೆಯಿಂದ ಕನೀನಿಕೆಗಳು ಮುಚ್ಚಿದಂತಿದ್ದು ಸಡಿಲವಾಗಿ ಮೆಲ್ಲನೆ ಹರಿಸುವ ದೃಷ್ಟಿ. ಅಭಿತಪ್ತಾ– ವ್ಯಥೆಯ ದೆಸೆಯಿಂದ ಕನೀನಿಕೆಗಳು ಮಂದವಾಗಿ ರೆಪ್ಪೆಗಳಲ್ಲಿ ಚಂಚಲತ್ವವು ಪ್ರಕಟವಾಗುವ ನೋಟ. ಕುಂಚಿತಾ– ರೆಪ್ಪೆಗಳು ಕೊಂಚ ಮಾತ್ರ ತಿರುಗಿದ್ದು ನೋಟವು ಓರೆಯಾಗಿದ್ದು ಕನೀನಿಕೆಯನ್ನು ಸಂಕೋಚಗೊಳಿಸಿದ ದೃಷ್ಟಿ.[121]

ಶೂನ್ಯಾದಿ ಇಪ್ಪತ್ತು ವಿಧ ದೃಷ್ಟಿಗಳು ಬೇರೆ ಬೇರೆ ಭಾವಗಳನ್ನು ವ್ಯಂಜಿಸಲು ಉದ್ಧಿಷ್ಟವಾಗಿರುವ ಕ್ರಮವು ಹೀಗಿದೆ. ಶೂನ್ಯದೃಷ್ಟಿ–ಚಿಂತೆ, ಮಲಿನದೃಷ್ಟಿ–ವೈರಾಗ್ಯ, ಶ್ರಾಂತದೃಷ್ಟಿ–ಆಯಾಸ, ಸಲಜ್ಜಾದೃಷ್ಟಿ–ನಾಚಿಕೆ, ಶಂಕಿತದೃಷ್ಟಿ–ಸಂದೇಹ, ವಿಷಣ್ಣದೃಷ್ಟಿ–ದುಃಖ, ಮುಕುಲದೃಷ್ಟಿ–ಸ್ವಪ್ನ ಮತ್ತು ನಿದ್ರಾ, ಜಿಹ್ಮದೃಷ್ಟಿ–ಮತ್ಸರ, ಲಲಿತಾದೃಷ್ಟಿ–ಹರ್ಷಾ, ವಿತರ್ಕಿತದೃಷ್ಟಿ–ಊಹೆ, ಭ್ರಾಂತದೃಷ್ಟಿ–ಆವೇಶ, ಅರ್ಧಮುಕುಲದೃಷ್ಟಿ–ವಿಷಯಸುಖಾನುಭೂತಿ, ತ್ರಸ್ತದೃಷ್ಟಿ–ಭಯ, ವಿಕಾಸದೃಷ್ಟಿ–ವೀರ, ಕೇಕರದೃಷ್ಟಿದೂರಗ ಮನ, ವಿಪ್ಲುತದೃಷ್ಟಿ–

---

[121] वैर्वण्ये चातिनिर्वेदे दृष्टिः स्यान्मलिनाभिधा ।
भेदे क्रमे भवेच्छ्रान्ता त्रपायम लज्जिता मता ॥ ४५ ॥
दुःखे स्वप्ने सुषुप्तौ च मुकुला दृष्टिरिष्यते ।
अक्षिरोगेप्यसूयायं दृष्ट्रेक्षे कुञ्चिता च दृक् ॥४६॥ ಶಿವತತ್ತ್ವರತ್ನಾಕರ 6–4–47

ಉನ್ಮಾದ, ಮದಿರಾದೃಷ್ಟಿ–ಮದ ತುಂಬಿದಾಗ, ಗ್ಲಾನದೃಷ್ಟಿ–ಮೂರ್ಛೆ, ಅಭಿತಪ್ತಾದೃಷ್ಟಿ–ಅಭಿಘಾತ, ಕುಂಚಿತಾದೃಷ್ಟಿ–ಅಸೂಯೆ.

ರಸದೃಷ್ಟಿಬೇಧಗಳು– ಕಾಂತ, ಭಯಾನ್ವಿತ, ಹಾಸ್ಯ, ಕರುಣಾ, ಅದ್ಭುತ, ರೌದ್ರ, ವೀರ, ಬೀಭತ್ಸಾದಿಗಳನ್ನು ಅಷ್ಟ ರಸದೃಷ್ಟಿಗಳೆನ್ನಲಾಗಿದೆ. ಈ ಪ್ರತಿಯೊಂದು ರಸದೃಷ್ಟಿಗಳಿಗೂ ಪ್ರತ್ಯೇಕ ಲಕ್ಷಣಗಳಿಂದ ವಿಶಿಷ್ಟವಾಗಿವೆ. ಕಾಂತದೃಷ್ಟಿ– ಕಡೆಗಣ್ಣನೋಟ, ಭಯಾನಕದೃಷ್ಟಿ– ಕನೀನಿಕೆಯನ್ನು ಕ್ಷಿಪ್ರವಾಗಿ ಮೇಲ್ಮುಖವಾಗಿಸುವುದು, ಹಾಸ್ಯದೃಷ್ಟಿ– ಕನೀನಿಕೆಯನ್ನು ಓರೆಯಾಗಿಸುವುದು, ಕರುಣಾದೃಷ್ಟಿ ಎಂದರೆ ರೆಪ್ಪೆಯನ್ನು ಬಾಗಿಸುವುದು, ಅದ್ಭುತದೃಷ್ಟಿ– ಕಣ್ಣನ್ನು ಸಂಪೂರ್ಣವಾಗಿ ತೆರೆದು ನೋಡುವುದು, ರೌದ್ರದೃಷ್ಟಿ– ಹುಬ್ಬುಗಂಟಿಕ್ಕುವುದು, ವೀರದೃಷ್ಟಿ– ಒಳಗಣ್ಣನ್ನು ವಿಸ್ತರಿಸುವಿಕೆ, ಬಿಭತ್ಸದೃಷ್ಟಿ– ನೋಟವನ್ನು ಕಿರಿದುಗೊಳಿಸುವುಕೆ. ಇವು ರಸಾಶ್ರಯವಾದ ದೃಷ್ಟಿಬೇಧಗಳು.

ಅಭಿನಯಕ್ಕೆ ಪೂರಕವಾಗುವ ಅಂಗಾಂಗಗಳು– ಇಷ್ಟಲ್ಲದೆ ನೃತ್ಯ ಮತ್ತು ನಾಟ್ಯಗಳಲ್ಲಿ ಶಿರದ ಇತರ ಅಂಗಾಂಗಗಳ ಪಾತ್ರವನ್ನು ಇನ್ನಷ್ಟು ವಿಸ್ತರಿಸಿ ನೋಡಲಾಗಿದೆ. ಮುಖ್ಯವಾಗಿ ಕನೀನಿಕೆ, ಕಣ್ಣಿನಗುಡ್ಡೆ, ನಾಸಿಕ, ಗಂಡಸ್ಥಲ ಓಷ್ಠ, ಗಲ್ಲ, ಶಿರಸ್ಸು, ವಕ್ಷಸ್ಥಲ, ಜಠರ, ಪಾರ್ಶ್ವಾಭಿನಯ, ಕಟಿ, ಊರು, ಜಂಘಾ, ಪಾದ ಮತ್ತು ಹಸ್ತಾದಿ ಅಂಗಗಳನ್ನು ಲಕ್ಷಿಸಲಾಗಿದೆ.

ಕನೀನಿಕೆ– ಕನೀನಿಕೆಯ ಚಲನೆಯ ಅಭಿನಯವು ವೇಪನಾದಿ ನವವಿಧಗಳಲ್ಲಿ ಮೂಡಿಸಬಹುದಾಗಿರುತ್ತದೆ. ಕಣ್ಣಗುಡ್ಡೆಗಳನ್ನು ಸಾವಕಾಶವಾಗಿ ಚಲಿಸುವ ಕ್ರಿಯೆ ವೇಪನ, ಒಂದು ತುದಿಯಿಂದ ಇನ್ನೊಂದು ತುದಿಗೆ ಸಮಾನಾಂತರವಾಗಿ ಈಕ್ಷಿಸುವುದು ಚಲನ, ಇಳಿಬಿದ್ದಂತಿರುವ ಕಣ್ಣಪಾಪೆಯಿಂದ ನೋಡುವ ಪರಿ ಪಾತ, ಕಣ್ಣ ಪಾಪೆಯನ್ನು ಮಂಡಲಾಕಾರವಾಗಿ ತಿರುಗಿಸಿ ನೋಡುವುದು ಭ್ರಮಣ. ಕಣ್ಣುಗುಡ್ಡೆಗಳನ್ನು ಅಭ್ಯಂತರಗೊಳಿಸುವ ಕ್ರಿಯೆ ಪ್ರವೇಶನ. ಕುಡಿಗಣ್ಣ ನೋಟದಲ್ಲಿ ನಿವಾರಿಸಿ ತೆಗೆಯುವುದು ನಿವರ್ತನ. ಕಣ್ಣುಗುಡ್ಡೆಯನ್ನು ಬಿರಿದು ಕಾಣುವಂತೆ ತೋರುವುದು ನಿಷ್ಕ್ರಾಮ, ಕಣ್ಣುಗುಡ್ಡೆಗಳನ್ನು ಊರ್ಧ್ವಮುಖವಾಗಿಸುವುದು ಸಮುದ್ವೃತ್ತ. ಸ್ವಾಭಾವಿಕವಾಗಿ ಹರಿಸುವ ದೃಷ್ಟಿ ಪ್ರಾಕೃತ. ಈ ದೃಷ್ಟಿಗಳನ್ನು ರಸಗಳಲ್ಲಿ ತೋರ್ಪಡಿಸುವ ಕ್ರಮ, ನಿಷ್ಕ್ರಾಮ ಮತ್ತು ಚಲನಗಳು ಕರುಣ ಮತ್ತು ಭಯಾನಕ ರಸಗಳಲ್ಲಿಯೂ, ಪ್ರವೇಶನವು ಹಾಸ್ಯ ಮತ್ತು ಭೀಬತ್ಸ ರಸಗಳಲ್ಲಿಯೂ, ನಿಷ್ಕ್ರಾಮ – ಚಲನ – ಉದ್ವೃತ –ಭ್ರಮಣ ಪ್ರಭೇದಗಳು ರೌದ್ರ ಮತ್ತು ವೀರ ರಸಗಳಲ್ಲಿಯೂ ಪಾತವು ಕರುಣ ರಸದಲ್ಲಿಯೂ, ನಿಷ್ಕ್ರಾಮವು ಅದ್ಭುತರಸದಲ್ಲಿಯೂ ತೋರಲ್ಪಡುತ್ತವೆ.

ಹುಬ್ಬುಗಳು– ಹುಬ್ಬುಗಳನ್ನು ವಿವಿಧ ಕೋನಗಳಿಂದ ಕೊಂಕಿಸುವುದು ಮತ್ತು ಭಾಗಿಸುವುದರಿಂದ ವೈವಿಧ್ಯವಾದ ಅಭಿನಯವನ್ನು ಪ್ರಕಟಗೊಳಿಸಬಹುದು. ಭ್ರುಕುಟಿತಾದಿ ಏಳು ವಿಧಗಳಲ್ಲಿ ಸ್ಪಂದಿಸಬಹುದಾಗಿರುತ್ತದೆ.[122] ಹುಬ್ಬುಗಳ ಬುಡವನ್ನು ಸ್ಪಂದಿಸುವುದು ಭ್ರುಕುಟಿ (ಕ್ರೋಧಾದಿ ಪ್ರಸಂಗಗಳಲ್ಲಿ). ಹುಬ್ಬುಗಳನ್ನು ಮೃದುವಾಗಿ ಭಾಗಿಸುವುದು ಕುಂಚಿತ(ಮೂರ್ಛೆ, ವಿಲಾಸಾದಿಗಳಲ್ಲಿ). ವೈಯ್ಯಾರದಿಂದ ಮೇಲಕ್ಕೆ ಹಾರಿಸಿದರೆ ರೇಚಿತ (ನೆಪದಿಂದ ಅಧೋಮುಖಿ ಮಾಡುವಾಗ). ಕೆಳಕ್ಕೆ ಭಾಗಿಸಿದರೆ ಪಾತನ(ಮತ್ಸರ, ಜಿಗುಪ್ಸೆಗಳಲ್ಲಿ ಅಭಿನಯಿಸಲ್ಪಡುತ್ತದೆ). ಹುಬ್ಬುಗಳನ್ನು ಮೇಲೆತ್ತಿ ನೋಡುವುದು ಉತ್ಕ್ಷೇಪ(ರೋಷ, ಆಶ್ಚರ್ಯ, ಹರ್ಷಗಳಲ್ಲಿ ಬಳಸಲಾಗುತ್ತದೆ). ಸ್ವಾಭಾವಿಕ ವರ್ತನವನ್ನು ಸಹಜವೆಂತಲೂ, ಸ್ವಲ್ಪವೇ ಅರಳಿ ಮೃದು ಧೀರ್ಘಗೊಳಿಸಿದರೆ (ಶೃಂಗಾರದಲ್ಲಿ ಭ್ರೂಭಂಗಿಯ ವಿನಿಯೋಗವಿರುತ್ತದೆ) ಚತುರವೆನ್ನಲಾಗುತ್ತದೆ.

ನಾಸಿಕ– ನಾಸಿಕದ ಸಂಕುಚಿತ, ವಿಕಸನ, ಸ್ಥಿರ ಮತ್ತು ಚಂಚಲತೆಗಳಿಂದಲೂ ಮತ್ತು ಶ್ವಾಸೋಚ್ಛ್ವಾಸಗಳ ದ್ವಾರಾ ಹದವರಿತ ಏರಿಳಿತಗಳಿಂದಲೂ ವಿವಿಧ ಭಾವಗಳು ಅಭಿವ್ಯಕ್ತಗೊಳಿಸಲ್ಪಡುತ್ತವೆ. ಕೆಲವೊಂದು ರಸಗಳಲ್ಲಿ ನಾಸಿಕಾಭಿನಯವು ಪ್ರಕಟಿಸಲ್ಪಡುತ್ತವೆ. ಉಳಿದ ರಸಗಳಲ್ಲಿ ನಾಸಿಕವು ಸ್ವಾಭಾವಿಕ ಸ್ಥಿತಿಯಲ್ಲಿರುತ್ತದೆ. ಸ್ವಾಭಾವಿಕೀ ಮುಂತಾದ ಆರು ವಿಧಗಳಲ್ಲಿ ನಾಸಿಕಾಭಿನಯವಿದೆ. ಮೂಗಿನ ಹೊಳ್ಳೆಗಳನ್ನು ಸಮಸ್ಥಿತಿಯಲ್ಲಿರಿಸುವುದೇ ಸ್ವಾಭಾವಿಕೀ, ಎರಡೂ ಹೊಳ್ಳೆಗಳನ್ನು ಬಗ್ಗಿಸಿ ಒಂದಕ್ಕೊಂದು ಜೋಡಿಸಿದಂತೆ ಇರಿಸುವುದೇ ನತಾ, ಹೊಳ್ಳೆಗಳು ಸ್ಥಿರತೆಯಿಂದ ಕಂಡರೂ ಮಂದಗಾಳಿ(ಉತ್ಸುಕತೆ ಮತ್ತು ವೈರಾಗ್ಯ)ಯಿಂದ ಏರಿಳಿತವನ್ನುಂಟುಮಾಡುವುದೇ ಶೋಚ್ಛ್ವಾಸಾ(ವೇದನೆಗಳಲ್ಲಿ). ಹೊಳ್ಳೆಗಳು ಸಂಕೋಚಗೊಂಡರೆ ನಿಕೂಣಿತ(ಅಸೂಯೆ ಮತ್ತು ಹಾಸ್ಯದಲ್ಲಿ), ಹೊಳ್ಳೆಗಳು ಅರಳಿಕೊಂಡಂತಿದ್ದರೆ ವಿಕೃಷ್ಟಾ(ಪೀಡೆ ಮತ್ತು ಆಶ್ವಾಸನೆಗಳಲ್ಲಿ).

ಗಂಡಸ್ಥಲ – ಹಣೆ, ಕೆನ್ನೆ ಮತ್ತು ಕಿವಿಗಳ ನಡುವಿನ ಪ್ರದೇಶವನ್ನು ಗಂಡಸ್ಥಲವೆನ್ನಲಾಗುತ್ತದೆ. ಗಂಡಸ್ಥಲವು ಕಂಪಿತಾದಿ ಆರು ಕ್ರಮಗಳಿಂದ ಅಭಿನಯಿಸಲ್ಪಡುತ್ತದೆ. ಕಪೋಲವನ್ನು ಅದಿರಿಸುವುದರಿಂದ ಕಂಪಿತಾಭಿನಯವನ್ನು ಮಾಡಬಹುದಾಗಿದ್ದು(ದಃಖಹರ್ಷಗಳಲ್ಲಿ), ಅದರಂತೆ ಸಂಕುಚಿಸುವುದರ ಮೂಲಕ ಕುಂಚಿತವೂ (ವ್ಯಾಧಿ ರೋಮಾಂಚನಕ್ಕಾಗಿ ನಿರ್ವಹಿಸುವುದಾಗಿರುತ್ತದೆ), ಕೆಳಕ್ಕೆ ಬಾಗಿಸುವುದರಿಂದ ಕ್ಷಾಮವೂ (ದಃಖಾಭಿನಯದಲ್ಲಿ ಪ್ರಯೋಗಿಸಲ್ಪಡುತ್ತದೆ), ಕಪೋಲವನ್ನು ಅರಳಿಸುವುದರಿಂದ ಫುಲ್ಲವೂ

---

[122] ಶಿವತತ್ತ್ವರತ್ನಾಕರ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಕನ್ನಡ ವಿಶ್ವವಿದ್ಯಾಲಯ, ಹಂಪಿ1999

(ಸಂತಸವನ್ನು ಸೂಸಲು), ಕಪೋಲವನ್ನು ಉನ್ನತವಾಗಿರಿಸುವುದರಿಂದ ಪೂರ್ಣವೂ(ಉತ್ಸಾಹ ಗರ್ವಾದಿಗಳಲ್ಲಿ) ಮತ್ತು ಸ್ವಾಭಾವಿಕ ಸ್ಥಿತಿಯನ್ನು ಸಮವೆಂದೂ (ಇನ್ನುಳಿದ ಭಾವಗಳಲ್ಲಿ)ಕರೆಯಲಾಗುತ್ತದೆ. ಓಷ್ಠ– ಅಭಿನಯದಲ್ಲಿ ಓಷ್ಠ (ತುಟಿ)ದ ಬಳಕೆಯು ವಿವರ್ತಿತಾದಿ ಆರು ಕ್ರಮಗಳಿಂದ ವಿನಿಯೋಗಿಸಲ್ಪಡುತ್ತವೆ. ಆವರಣದಲ್ಲಿ ಪ್ರತಿಯೊಂದು ವಿಧದ ಅಭಿನಯಕ್ಕೆ ಪೂರಕವಾದ ರಸಭಾವವನ್ನು ಸೂಚಿಸಲಾಗಿದೆ ತುಟಿಯನ್ನು ಕೆಳಕ್ಕೆ ತಿರುಗಿಸುವುದಕ್ಕೆ ವಿವರ್ತಿತವು ಉದ್ಧಿಷ್ಟವಾಗಿರುತ್ತದೆ(ತಿರಸ್ಕಾರ ಹಾಸ್ಯಾದಿಗಳಲ್ಲಿ ಬಳಸಲು). ಮುಂದಿನವುಗಳೆಂದರೆ ತುಟಿಯನ್ನು ಹೊರಕ್ಕೆ ಚಾಚುವುದಕ್ಕೆ ವಿಸರ್ಗ, ಅದುರಿಸುವುದಕ್ಕೆ ಕಂಪನ (ಭಯ, ಸಿಟ್ಟು ವೇದನೆಗಳಲ್ಲಿ), ಒಳಗೆಳೆದುಕೊಳ್ಳುವುದಕ್ಕೆ ವಿನಿಗೂಹ (ಆಯಾಸ ವಿಲಾಸಗಳಲ್ಲಿ), ಹಲ್ಲುಗಳಿಂದ ತುಟಿಯನ್ನು ಕಚ್ಚುವುದಕ್ಕೆ ಸಂದಷ್ಟವೂ (ಆವೇಶ ಸಿಟ್ಟು), ತುಟಿಗಳೆರೆಡನ್ನೂ ಒತ್ತಾಗಿ ಸೇರಿಸುವುದಕ್ಕೆ ಸಮುದ್ಗ (ಶೃಂಗಾರಾಭಿನಯಕ್ಕಾಗಿ)ವೆಂಬ ವಿಧಗಳಲ್ಲಿ ಓಷ್ಠಾಭಿನಯವನ್ನು ಪ್ರದರ್ಶಿಸಬಹುದಾಗಿರುತ್ತದೆ.

ಗಲ್ಲ – ಗಲ್ಲದ ಅಭಿನಯವು ಖಂಡನಾದಿ ಏಳು ಕ್ರಮಗಳಲ್ಲಿ ಗುರುತಿಸಲಾಗಿದೆ. ಇವುಗಳು ಹಲ್ಲು, ನಾಲಿಗೆ, ತುಟಿಗಳ ವ್ಯಾಪಾರದಿಂದ ನಿರ್ವಹಿಸಲ್ಪಡುವುದರಿಂದ ಚುಬಕಕ್ರಿಯೆಗಳೆಂದು ತಜ್ಞರ ಮತ. ಕೋಪ ಪ್ರಕಟನೆಗಾಗಿ ಖಂಡನ, ಭಯ – ವ್ಯಾಧಿ – ಮುಪ್ಪು – ಚಳಿ ಮುಂತಾದ ಭಾವ ಪ್ರಕಟನೆಗೆ ಕುಟ್ಟನ(ಹಲ್ಲು ಕಡಿಯುವುದು); ಅಂಗಸಾಧನೆ–ರೋದನ – ಭಯಗಳಲ್ಲಿ ಛಿನ್ನವೂ; ನೆಕ್ಕುವ ಕ್ರಿಯೆಗಾಗಿ ಲೇಹನವೂ; ಆಕಳಿಕೆ ಮಾಡುವುದಕ್ಕಾಗಿ ಛುರಿತವೂ; ಇತರೆ ಸಾಮಾನ್ಯ ವ್ಯಾಪಾರಗಳಲ್ಲಿ ಸಮವನ್ನು ಪ್ರದರ್ಶಿಸಲಾಗುವುದು.

ಶಿರಸ್ಸು – ಶಿರಸ್ಸಿಗೆ ಸಂಬಂಧಿಸಿದ ಅಭಿನಯಗಳಲ್ಲಿ ಮುಖದ ಅಭಿನಯವು ಕೊನೆಯದಾಗಿರುತ್ತದೆ. ಶ್ಯಾಮಾದಿ ನಾಲ್ಕು ಪ್ರಕಾರಗಳಲ್ಲಿ ಗುರುತಿಸಲ್ಪಟ್ಟಿವೆ. ಬೀಭತ್ಸ ಮತ್ತು ಭಯಾನಕ ರಸಾಭಿನಯದಲ್ಲಿ ಶ್ಯಾಮವೂ, ವೀರರಸದಲ್ಲಿ ಮುಖವು ಕೆಂಪೇರಿದಂತೆ ಮಾಡಲಾಗುತ್ತದೆ. ಅದ್ಭುತದಲ್ಲಿ ಪ್ರಸನ್ನಭಾವವು ವ್ಯಂಜಿತವಾಗಿ ಉಳಿದ ಭಾವ ಪ್ರಕಟನೆಗಳಲ್ಲಿ ಸ್ವಾಭಾವಿಕವಾಗಿರುತ್ತದೆ. ಇನ್ನು ಇನ್ನಿತರ ಅಂಗಾಂಗಗಳಿಂದ ಅಭಿನಯಿಸಬಹುದಾದವುಗಳೆಂದರೆ– ವಕ್ಷಸ್ಥಲ, ಜಠರ, ಭುಜ ಸೊಂಟ, ಕಟಿ ಮತ್ತು ಜಂಘಾ ಮುಂತಾದ ಅಂಗಗಳನ್ನು ಯಥೋಚಿತ ಕ್ರಮಗಳ ಮೂಲಕ ನಾಟ್ಯ ಪ್ರದರ್ಶನಕ್ಕೆ ವಿನಿಯೋಗಿಸಬಹುದಾಗಿದೆ.

ವಕ್ಷಸ್ಥಲ – ವಕ್ಷಸ್ಥಲದ ಚಲನೆಯು ಐದು ವಿಧಗಳಲ್ಲಿವೆ. 1.ಸಮ– ಸ್ವಾಭಾವಿಕವಾದ ಸೊಬಗಿನಿಂದ ಕೂಡಿರುವುವಂತೆ ಸಮಸ್ಥಿತಿಯನ್ನು ತೋರಿಸುವಾಗ ಇದರ ಉಪಯೋಗವಿರುತ್ತದೆ. 2.ಉದ್ವಾಹಿತ–

ಎದೆಯನ್ನು ಉಬ್ಬಿಸಿ ಮುಖವನ್ನು ಮೇಲೆತ್ತಿದ ಭಂಗಿ. ಆಕಳಿಸುವಾಗ ಮತ್ತು ಎತ್ತರದಲ್ಲಿರುವ ವಸ್ತುವನ್ನು ವೀಕ್ಷಿಸುವಾಗ ಇದರ ಪ್ರಯೋಜನವಿದೆ. 3.ನಿಭುಗ್ನ– ಬೆನ್ನನ್ನು ಎತ್ತರಿಸಿ ಸ್ವಲ್ಪ ಬಾಗಿದಂತೆ ಮಾಡಿ ಹೆಗಲುಗಳು ಅಧೋಮುಖವಾಗಿ ಅಲುಗಾಡದಂತೆ ಇರುವ ಸ್ಥಿತಿಯಾಗಿರುತ್ತದೆ. ಗರ್ವ, ವಿಸ್ಮಯ ಮುಂತಾದ ಕಡೆ ಇದರ ವಿನಿಯೋಗವಿರುತ್ತದೆ.[123] 4.ಪ್ರಕಂಪಿತ– ಎದೆಯನ್ನು ಪದೇ ಪದೇ ಮೇಲಕ್ಕೆತ್ತಿ ಆಡಿಸುವ ಕ್ರಿಯೆ. ನಗು, ಪರಿಹಾಸಾದಿಗಳನ್ನು ವ್ಯಕ್ತಪಡಿಸಲು ಪ್ರಯೋಜಕವಾಗಿದೆ. 5.ಅಭುಗ್ನ– ಪ್ರಕಂಪಿತದಂತೆ ಬೆನ್ನನ್ನು ಎತ್ತರಿಸಿ ಅವಶ್ಯವಿದ್ದಲ್ಲಿ ತಗ್ಗಿಸಿ ಹೆಗಲುಗಳನ್ನು ಸಡಿಲಗೊಳಿಸಿ ಸಂಕುಚಿತ ಮಾಡಿದ ಭಂಗಿಯಲ್ಲಿ ಅಭಿನಯಿಸಲ್ಪಡುತ್ತದೆ. ಭಯ, ವ್ಯಾಧಿ, ಸಂಭ್ರಮಾದಿ ಅಭಿನಯಗಳನ್ನು ಪ್ರಕಟಿಸವಲ್ಲಿ ಪ್ರಯೋಜನವಿರುವುದೆಂದು ಕೋವಿದರ ಅಭಿಪ್ರಾಯ.  ಜಠರ– ಜಠರದ ಸಹಾಯದಿಂದ ಮೂರು ವಿಧಗಳಲ್ಲಿ ಅಭಿನಯಿಸಬಹುದಾಗಿದೆ. 1.ಖಲ್ವ– ಹೊಟ್ಟೆಯನ್ನು ಸ್ವಲ್ಪ ಮಾತ್ರವೇ ಚಿಕ್ಕದಾಗಿಸಿಕೊಳ್ಳುವುದು. 1.ಖಲ್ವ– ಹೊಟ್ಟೆಯನ್ನು ಸ್ವಲ್ಪ ಮಾತ್ರವೇ ಚಿಕ್ಕದಾಗಿಸಿಕೊಳ್ಳುವುದು. ಹಸಿವು ವ್ಯಾಧಿಗಳನ್ನು ವ್ಯಕ್ತಪಡಿಸಲು ಪ್ರೇರಕ..  2.ಕ್ಷಾಮ– ಹೊಟ್ಟೆಯನ್ನು ಶಕ್ತಿಗುಂದಿದಂತೆ ಬೆನ್ನಿಗೆ ಹತ್ತಿದ ಸ್ಥಿತಿಯಲ್ಲಿರುವಂತೆ ಅಭಿನಯಿಸುವ ಕಲೆ. ಆಕಳಿಕೆ, ಶೋಕ ಮುಂತಾದವುಗಳಲ್ಲಿ ವಿನಿಯೋಗವಿರುತ್ತದೆ. 3.ಪೂರ್ಣ– ಹೊಟ್ಟೆ ತುಂಬಿದಂತೆ ತೋರ್ಪಡಿಸುವುದಾಗಿರುತ್ತದೆ. ಭೂರಿ ಭೋಜನವನ್ನು ಮಾಡಿರುವಂತೆ ತೋರಲು ವಿನಿಯೋಗಿಸಲ್ಪಡುತ್ತದೆ.

ಪಾರ್ಶ್ವಾಭಿನಯ– ಭುಜ, ಸೊಂಟ ಮತ್ತು ಹೆಗಲುಗಳ ವಿವಿಧ ಭಂಗಿಗಳನ್ನುಪಯೋಗಿಸಿ ಅಭಿನಯಿಸುವ ಕಲೆಯು ಪಾರ್ಶ್ವಾಭಿನಯವೆನಿಸಿ ಐದು ವಿಧಗಳಲ್ಲಿರುತ್ತದೆ. 1.ಸಮುನ್ನತ– ಭುಜ, ಸೊಂಟ, ಹೆಗಲುಗಳನ್ನು ಎತ್ತರವಾಗಿಸಿರುವಂತೆ ನಿಲ್ಲುವ ಭಂಗಿ(ಆತ್ಮವಿಶ್ವಾಸವನ್ನು ವ್ಯಕ್ತಪಡಿಸಲು). 2.ಅಪಸೃತ– ಸೊಂಟ ಮತ್ತು ಹೆಗಲುಗಳನ್ನು ಸ್ವಲ್ಪ ಮಾತ್ರವೇ ತಗ್ಗಿಸಿ ತೋರಿಸುವುದು(ಹಿಂದಿರುಗುವಿಕೆಯನ್ನು ವ್ಯಕ್ತಪಡಿಸಲು). 3.ನತ– ಸೊಂಟ ಮತ್ತು ಹೆಗಲುಗಳನ್ನು ಕೆಳಮುಖ ಮಾಡಿ ತೋರಿಸುವುದು(ಹೇಯ ಭಾವಾಭಿನಯಕ್ಕೆ). 4.ಪ್ರಸಾರಿತ– ಪಾರ್ಶ್ವಗಳನ್ನು ವಿಶಾಲವಾಗಿ ಎತ್ತರಿಸಿ ಹಿಡಿದಂತೆ ಅಭಿನಯಿಸುವುದು(ಸಂತೋ?ವನ್ನು ವ್ಯಕ್ತಪಡಿಸುವಾಗ). 5.ವಿವರ್ತಿತ– ಪಾರ್ಶ್ವವನ್ನು ಪೃಷ್ಠದತ್ತ ತಿರುಗಿದಂತೆ ತೋರುವುದು(ತಿರುಗುವುದನ್ನು ಸೂಚಿಸಲು).

---

[123] ಶಿವತತ್ತ್ವರತ್ನಾಕರ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಕನ್ನಡ ವಿಶ್ವವಿದ್ಯಾಲಯ, ಹಂಪಿ1999

ಕಟಿ– ಕಟಿ ಪ್ರದೇಶವೂ ಕೂಡ ನಾಟ್ಯಾಭಿನಯದಲ್ಲಿ ಐದು ವಿಧಗಳಿಂದ ಉಪಯೋಗಕಾರಿಯಾಗಿದೆ. 1.ವಿವೃತಾ– ಸಂಮುಖವಾಗಿರುವಾಗ ಹಿಂದಿರುಗಿ ನೋಡುವಂತೆ ಮಾಡುವುದಾಗಿರುತ್ತದೆ. ಹಿಂದಿರುಗುವ ಭಂಗಿಯನ್ನು ಪ್ರಕಟಿಸಲು ಸಹಕಾರಿ. 2.ರೇಚಿತಾ– ಸೊಂಟವನ್ನು ಸ್ವಸ್ಥಾನದಲ್ಲಿರಿಸಿ ಬುಗುರಿಯಂತೆ ತಿರುಗಿಸುವುದಾಗಿರುತ್ತದೆ. ಸುತ್ತಲೂ ಕ್ಷಿಪ್ರವಾಗಿ ತಿರುಗುವಂತೆ ತೋರಿಸಲು ಉಪಯೋಗವಾಗುತ್ತದೆ. 3.ಛಿನ್ನಾ– ಸೊಂಟವನ್ನು ಅಡ್ಡವಾಗಿರುವಂತೆ ತಿರುಗಿಸುವುದಾಗಿರುತ್ತದೆ. ಅಂಗಸಾಧನೆಯನ್ನು ಮಾಡುವಂತೆ ತೋರಿಸಲು. 4.ಕಂಪಿತಾ– ಸೊಂಟವನ್ನು ಅಡ್ಡಡ್ಡವಾಗಿ ಶೀಘ್ರವಾಗಿ ತಿರುಗಿಸುವುದು. ಗಮನಾದಿಗಳನ್ನು ಪ್ರಕಟಿಸಲು ಉದ್ಯುಕ್ತವಾಗಿರುತ್ತದೆ. 5.ಉದ್ವಾಹಿತಾ– ಪಾರ್ಶ್ವ ಮತ್ತು ನಿತಂಬಗಳು ಉಬ್ಬುವಂತೆ ಮಾಡಿ ಕಟಿಯನ್ನು ಅಲುಗಾಡಿಸಿ ತೋರುವುದು. ದೇಹವು ಸ್ಥೌಲ್ಯದಿಂದ ಕೂಡಿರುವುದನ್ನು ಮತ್ತು ವೈಯ್ಯಾರದಿಂದ ಬೀಗುವ ಸಮಯಗಳಲ್ಲಿ ಪ್ರಕಟಿಸಬಹುದಾಗಿರುತ್ತದೆ.

ಊರು– ವಲಿತಾದಿ ಪಂಚ ಪ್ರಭೇದಗಳು ಊರುಭಾಗದ ಪ್ರದರ್ಶನಕ್ಕೆ ಮೀಸಲಾಗಿದೆ. 1.ತೊಡೆಯನ್ನು ಅಡ್ಡವಾಗಿ ತಿರುಗಿಸುವ ಕ್ರಿಯೆಗೆ ವಲಿತವೂ, 2.ಉನ್ನಯನ ಕ್ರಿಯೆಗಳಿಂದ ತೊಡೆಯನ್ನು ನಡುಗಿಸುವುದಕ್ಕೆ ಕಂಪಿತವೂ, 3.ತೊಡೆಗಳ ನಿಷ್ಕ್ರಿಯಾವಸ್ಥೆ ಅಂದರೆ ಮರಗಟ್ಟಿದಂತೆ ತೋರಲು ಸ್ತಂಭಿತವೂ, 4.ಅಂಗಸಾಧನೆ ಮತ್ತು ತಾಂಡವಾದಿ ನೃತ್ಯಾಭ್ಯಾಸಗಳಲ್ಲಿ ಉದ್ವರ್ತಿತವೂ ಹಾಗೂ 5.ಭ್ರಾಂತಿ ಮತ್ತು ಸಂಭ್ರಮಾದಿಗಳಲ್ಲಿ ನಿವರ್ತಿತವೂ ಪ್ರದರ್ಶಿಸಲ್ಪಡುತ್ತವೆ.

ಜಂಘಾ– ಜಂಘಾಭಿನಯವು ಮೊಣಕಾಲಿನ ಸಹಾಯದಿಂದ ಪಂಚ ವಿನ್ಯಾಸಗಳಿಂದ ಪ್ರದರ್ಶಿಸಲ್ಪಡುತ್ತದೆ. 1. ಮೊಣಕಾಲನ್ನು ಮೇಲಕ್ಕೆತ್ತಿ ಹಿಡಿದು ತೋರಿಸುವ ಭಂಗಿ ಉದ್ವಾಹಿತ. ಇದರಿಂದ ನಡಿಗೆಯು ಚುರುಕಾಗಿರುವಂತೆ ವ್ಯಕ್ತಪಡಿಸಬಹುದಾಗಿರುತ್ತದೆ; 2.ಮೊಣಕಾಲುಗಳನ್ನು ಸಂಕೋಚಗೊಳಿಸುವ ಭಂಗಿ ನತಾಯೆನಿಸುವುದು; ನಿಲ್ಲುವ, ಕೂರುವ, ಕ್ರಿಯೆಗಳಲ್ಲಿ ಉಪಕಾರಿ. 3.ಮೊಣಕಾಲಿನ ಆಧಾರದಿಂದ ನಡೆಯುವ ಕ್ರಿಯೆ ಕ್ಷಿಪ್ತಾ. ವ್ಯಾಯಾಮವನ್ನು ತೋರುವಾಗ ಬಳಸಲಾಗುತ್ತದೆ; 4.ಮೊಣಕಾಲುಗಳು ಹಿಂದಕ್ಕೆ ಸರಿಸುವ ಭಂಗಿ ಪರಿವೃತ್ತಾ. ತಾಂಡವ ನೃತ್ಯಾದಿಗಳಲ್ಲಿ ಉಪಯೋಗವಿದೆ; 5.ಬಲಗಾಲು ಎಡಗಡೆಗೂ ಮತ್ತು ಎಡಗಾಲು ಬಲಗಡೆಗೂ ಬರುವಂತೆ ನಡೆಯುವ ಕ್ರಮಕ್ಕೆ ಆವರ್ತಿತಾ ಎಂದು ಕರೆಯುತ್ತಾರೆ. ವಿದೂಷಕನ ನಡಿಗೆಗೆ ಸಹಕಾರಿ. (ಟಿಪ್ಪಣಿ: ಇಂದಿನ ದಿನಗಳ ಮಹಿಳೆಯರ ಸೌಂದರ್ಯ ಸ್ಪರ್ಧೆಗಳಲ್ಲಿ ಕ್ಯಾಟ್‌ವಾಕ್ ನಡಿಗೆಯೆಂದು ಪ್ರಸಿದ್ಧಿಯಾಗಿರುವುದನ್ನು ಗಮನಿಸಬಹುದಾಗಿದೆ.)

ಪಾದ – ಅಂಚಿತಾದಿ ಆರು ಬಗೆಗಳಿಂದ ಪಾದವಿನ್ಯಾಸಗಳನ್ನು ಮೂಡಿಸಿ ಸಾಧಿಸಬಹುದಾಗಿದೆ. 1. ಹಿಂಗಾಲನ್ನು ಊರಿ ಕ್ರಮೇಣ ಹೆಜ್ಜೆಗಳು ಮೇಲೆದ್ದು ತೋರುವಂತಿದ್ದರೆ ಅಂಚಿತವೆನ್ನಲಾಗುತ್ತದೆ. ಕಾಲಿನಿಂದ ನೆಲವನ್ನು ಬಡಿಯುವ ಸಂಜ್ಞೆಯನ್ನು ವ್ಯಕ್ತಪಡಿಸಲು ಪ್ರಯೋಜಕವೆನಿಸಿದೆ; 2. ಪಾದದ ಹೆಜ್ಜೆ ಮತ್ತು ಮಧ್ಯ ಭಾಗವು ಸಂಕುಚಿಸಲ್ಪಟ್ಟು ಹಿಮ್ಮಡಿಯು ಮೇಲೆತ್ತಿದಂತಿದ್ದರೆ ಕುಂಚಿತ. ಉದಾರವಾಗಿ ನಿಸ್ಸಂಕೋಚವಾದ ನಡಿಗೆಯನ್ನು ತೋರಲು ಉದ್ದಿಷ್ಟವಾಗಿದೆ; 3. ಒಂದು ಕಾಲು ಸ್ವಾಭಾವಿಕ ಸ್ಥಿತಿಯಲ್ಲಿದ್ದು ಇನ್ನೊಂದು ಕಾಲಿನ ಹಿಮ್ಮಡಿಯು ಮೇಲೆತ್ತಿ ಅಂಗುಷ್ಟವು ಮಾತ್ರ ನೆಲಕ್ಕೆ ತಾಗಿದಂತಿದ್ದರೆ ಸೂಚೀ ಸಂಜ್ಞೆಯಾಗುತ್ತದೆ. ಈ ಭಂಗಿಯು ಕಾಲಿಗೆ ಗೆಜ್ಜೆಗಳನ್ನು ತೊಡಿಸುವಾಗ ಅನುಕೂಲ; 4. ಹಿಮ್ಮಡಿಯು ಮೇಲಕ್ಕೆದ್ದ ಸ್ಥಿತಿಯಲ್ಲಿರುವಂತೆ ಮಾಡಿ ಅಂಗುಷ್ಟವನ್ನು ನಿಡಿದಾಗಿರಿಸಿ ಉಳಿದ ಬೆರಳುಗಳನ್ನು ಬಾಗಿಸಿ ತೋರ್ಪಡಿಸಿದ ಭಂಗಿ ಅಗ್ರತಲಸಂಚರವೆನಿಸುತ್ತದೆ. ಮುಂದಕ್ಕೆ ಸಾಗುವುದನ್ನು ಪ್ರಕಟಿಸಲು ಅನುಕೂಲ; 5. ಕಾಲಿನಬೆರಳುಗಳೆಲ್ಲವೂ ನೆಲಕ್ಕೆ ಒತ್ತಲ್ಪಟ್ಟು ಹಿಮ್ಮಡಿಯನ್ನು ಇನ್ನೇನು ಎತ್ತುವ ಸ್ಥಿತಿಯಲ್ಲಿರುವ ಅವಸ್ಥೆ ಉದ್ಘಟ್ಟಿತ ಚರಣವೆನಿಸುತ್ತದೆ. ಹೊರಡುವ ಭಂಗಿಯನ್ನು ತೋರಲು ವಿನಿಯೋಗಿಸಲಾಗುತ್ತದೆ; 6. ಪಾದಗಳನ್ನು ಸ್ವಾಭಾವಿಕ ಸ್ಥಿತಿಯಲ್ಲಿರಿಸುವ ಸ್ಥಿತಿ ಸಮವೆನ್ನಲಾಗುತ್ತದೆ. ಈ ಭಂಗಿಯು ಸಹಜವಾದ ಸ್ಥಿತಿಯನ್ನು ಸೂಚಿಸುವ ನಿಲುವಾಗಿರುತ್ತದೆ.

ಹಸ್ತಾಭಿನಯ– ಹಸ್ತಾಭಿನಯವನ್ನು ಪ್ರಧಾನವಾಗಿ ಮೂರು ಪ್ರಕಾರಗಳ ಅಭಿನಯದಲ್ಲಿ ತೊಡಗಿಸಿಕೊಳ್ಳಬಹುದಾಗಿರುತ್ತದೆ. ಕರವನ್ನು ಕವುಚಿ, ಅಂಗಾತ ಹಾಗೂ ಪಾರ್ಶ್ವಮುಖವಾಗಿ ಎಂಬಂತೆ ತ್ರಿವಿಧಗಳಲ್ಲಿ ನೃತ್ತ ಹಾಗೂ ನಾಟ್ಯಗಳಲ್ಲಿ ಪ್ರಯೋಗಿಸಲ್ಪಡುತ್ತದೆ985. ಆವೇಷ್ಟಿತಾದಿ ನಾಲ್ಕು ವಿಧದ ಹಸ್ತಕರಣಗಳು ಹೀಗಿವೆ. ಹೆಬ್ಬೆರಳೊಂದನ್ನು ಬಿಟ್ಟು ಉಳಿದ ಬೆರಳುಗಳನ್ನು ಒಳಮುಖವಾಗಿ ಮಡಿಚಿದರೆ ಆವೇಷ್ಟಿತಕರಣ, ಇವುಗಳು ಹೊರಮುಖವಾಗಿ ಚಾಚಿಕೊಂಡಿದ್ದರೆ ಉದ್ವೇಷ್ಟಿತಕರಣ, ಹಿಮ್ಮುಖವಾಗಿ ಬಾಗಿಸಿದರೆ ವ್ಯಾವರ್ತಿರಕರಣ, ಬೆರಳುಗಳೆಲ್ಲವನ್ನೂ ಕ್ರಮವಾಗಿ ಹೊರಗೆ ತಿರುಗಿಸುವುದು ಪರಿವರ್ತಿತಕರಣವೆನಿಸುವುದು.

ಇಷ್ಟಲ್ಲದೆ ಅಭಿನಯದಲ್ಲಿ ಹಸ್ತವನ್ನು ವಿವಿಧ ರೀತಿಯಲ್ಲಿ ಬಳಸುವ ಕ್ರಮಗಳಿವೆ. ಮೊದಲನೆಯದಾಗಿ ವಿಸರ್ಗ(ಹೊರಹಾಕುವುದು), ಧೂನನಂ(ಅಲುಗಾಡಿಸುವುದು), ರಕ್ಷಾ (ಅಭಯ), ಸಂಶ್ಲೇಷ (ವಶಮಾಡಿಕೊಳ್ಳುವಿಕೆ), ಮೋಕ್ಷಣ(ವಶೀಕರಿಸಿ ವಿಮೋಚನ ಮಾಡುವುದು), ವಿಕ್ಷೇಪ(ಬಿಸಾಡುವುದು). ಇನ್ನು ಮುಂದಿನವುಗಳು ಅರ್ಥಾನುಸಾರವಾಗಿಯೇ ಸಂಜ್ಞಿತವಾಗಿರುವುದರಿಂದ ವಿವರಣೆಯ ಅಗತ್ಯವಿರುವುದಿಲ್ಲ, ಆಂದೋಲನ, ನಿಗ್ರಹ, ಪರಿಗ್ರಹ, ಆಕರ್ಷಣ, ವಿಕರ್ಷಣ, ವಿಯೋಗ,

ಉತ್ಕರ್ಷಣಂ, ತಾಡನ, ಮೋಚನಭೇದ, ಭೇದನ, ಸ್ಫುಟನ, ಆಹ್ವಾನ, ತರ್ಜನ, ಇಪ್ಪತ್ತು ಹಸ್ತಕರ್ಮಗಳಿಂದ ಅಭಿನಯವನ್ನು ನಾಟ್ಯಾಂಗದಲ್ಲಿ ಪ್ರಯೋಗಿಸಬಹುದಾಗಿವೆ.
(ಟಿಪ್ಪಣಿ–'ನೃತ್ತಂ ತಾಲಲಯಾಶ್ರಯಂ' ಇದು ನೃತ್ತ ಲಕ್ಷಣ. ನೃತ್ತವೆಂದರೆ ಕೇವಲ ತಾಲಲಯಾಶ್ರಯವಾದದ್ದು, 'ಅನ್ಯದ್ಭಾವಾಶ್ರಯಂ ನೃತ್ಯಂ' ಇದು ನೃತ್ಯ ಲಕ್ಷಣ. ತಾಲಲಯದೊಂದಿಗೆ ಭಾವವೂ ಆಶ್ರಿತವಾದರೆ ನೃತ್ಯವೆನಿಸುವುದು, ಇವುಗಳೆಲ್ಲದರ ಜೊತೆಗೆ ರಸವೂ ವ್ಯಂಜಿತವಾದರೆ ನಾಟ್ಯವೆನಿಸುವುದು.) ಬಾಹುಗಳ ಸಹಾಯದಿಂದ ಊರ್ಧ್ವ, ಪ್ರಸಾರಿತ, ತಿರ್ಯಕ್, ಅಂಚಿತ, ಅಧೋಮುಖ, ಸ್ವಸ್ತಿಕ, ಮಂಡಲಗತಿ, ಅಪವಿದ್ಧ, ಪೃಷ್ಠಾನುಸಾರಿತ ಮತ್ತು ಉದ್ವೇಷ್ಟಿತ. ಕ್ರಮಗಳಿಂದ ಹತ್ತು ಪ್ರಕಾರಗಳಲ್ಲಿ ಅಭಿನಯಿಸಲ್ಪಡುತ್ತದೆ. ಇವು ವಿಶೇಷ ವಿವರಣೆಯಿಲ್ಲದೆ ಅರ್ಥೈಸಲ್ಪಡುತ್ತವೆ.

ಇಷ್ಟಲ್ಲದೆ ಹಸ್ತಾಭಿನಯವು 1.ಸಂಯುಕ್ತ, 2.ಅಸಂಯುತ 3.ಸಂಯುತವೃತ್ತಹಸ್ತಗಳೆಂಬ ವಿಧಗಳಿಂದಲೂ ಮತ್ತು ಇವುಗಳ ಆವಾಂತರ ವಿಧಗಳಿಂದಲೂ ಅನೇಕ ಪ್ರಕಾರಗಳಲ್ಲಿ ಅಭಿನಯಿಸಲು ಪರಿಪುಷ್ಟವಾಗಿದೆ.

ಸಂಯುಕ್ತ ವೃತ್ತಹಸ್ತಗಳು– ಹೀಗೆ ದೇಹದ ವಿವಿಧ ಅಂಗಗಳಲ್ಲಿ ಒಂದು ಗೊತ್ತಾದ ಅಂತರದಿಂದ ವಿವಿಧ ವಿನ್ಯಾಸಗಳನ್ನು ಹಸ್ತದ ಸಹಾಯದಿಂದ ತೋರುವ ಕ್ರಿಯೆಯಾಗಿರುತ್ತದೆ. ಎದೆಯ ಮೇಲೆ, ಎದೆಯ ಎದುರುಗಡೆ, ಭುಜದ ಬಳಿ, ಕಟಿ ಪ್ರದೇಶಗಳಲ್ಲಿ, ಕಿವಿಯ ಬಳಿ, ತಲೆಯ ಬದಿ, ಹಸ್ತವನ್ನು ವಿವಿಧವಾಗಿ ಜೋಡಿಸಿ, ಮುದ್ರೆ, ಆವರ್ತನ ಕ್ರಮಗಳಿಂದ ವೃತ್ತ ವಿನ್ಯಾಸವನ್ನು ಮಾಡಬಹುದಾಗಿದೆ. ಈ ವೃತ್ತಹಸ್ತವನ್ನು ಚತುರಶ್ರಕಾದಿ ಮೂವತ್ತು ಬಗೆಯ ಲಕ್ಷಣಗಳಿಂದ ತಿಳಿಸಲಾಗಿದೆ. 1.ಚತುರಶ್ರಕ– ಹೆಗಲಿಗೆ ಸಮಾನಾಂತರವಾಗಿ ಎದೆಯಿಂದ ಎಂಟು ಇಂಚು ದೂರದಲ್ಲಿ ಕೈಗಳೆರಡನ್ನೂ ಚಾಚಿ ಮೊಣಕೈಗಂಟನ್ನು ಮುಂಬರುವಂತೆ ಕಟಕ ಮುಖದಂತೆ ತೋರುವುದಾಗಿರುತ್ತದೆ. 2.ಉದ್ವೃತ್ತ– ಹಸ್ತಗಳೆರಡನ್ನೂ ಪರಸ್ಪರ ಎದುರುಬದುರಾಗಿ ಹಿಡಿದು ಎದೆಯ ಮೇಲೆ ಹಂಸಪಕ್ಷಿಯ ರೆಕ್ಕೆಗಳೋಪಾದಿಯಲ್ಲಿ ತೋರುವ ಭಂಗಿಯಾಗಿರುತ್ತದೆ. 3.ತಲಮುಖ– ಉದ್ವೃತ್ತದಂತೆ ಎರಡು ಹಸ್ತಗಳನ್ನು ಅಭಿಮುಖವಾಗಿ ತಿರುಗಿಸುವುದಾಗಿರುತ್ತದೆ. 4.ಸ್ವಸ್ತಿಕ– ಹಂಸಪಕ್ಷದ ಮುದ್ರೆಯನ್ನು ಮಣಿಗಂಟುಗಳ ಬಳಿ ಕತ್ತರಿ ಆಕಾರದಲ್ಲಿ ಹಿಡಿಯುವುದು. 5.ವಿಪ್ರಕೀರ್ಣಕ– ಸ್ವಸ್ತಿಕ ಭಂಗಿಯನ್ನು ಮಣಿಗಂಟಿನಿಂದ ಬೇರ್ಪಡಿಸಿ ಹಂಸಪಕ್ಷವನ್ನು ಮಾತ್ರ ತೋರುವುದಾಗಿರುತ್ತದೆ. 6.ಅರಾಲ 7.ಕಟಕಾವಕ್ತ್ರ–(ಇವೆರೆಡು ಒಂದೇ ಬಗೆಯೆನ್ನಲಾಗಿದೆ) ವಕ್ಷಸ್ಥಲದ ಮುಂದೆ ಅಡ್ಡವಾಗಿ ಕಟಕಮುಖ ಪ್ರದರ್ಶಿಸುವುದಾಗಿರುತ್ತದೆ. 8.ಆವಿದ್ಧವಕ್ತ್ರಕ– ಭುಜದ ಬಳಿ ಮುಂಗೈಗಳನ್ನು ವಕ್ರವಾಗಿ ತಲೆಕೆಳಗೆ ಮಾಡಿ ಆವರ್ತಿತವಾಗಿ ತೋರಿಸುವುದಾಗಿರುತ್ತದೆ. 9.ಸೂಚೀಮುಖ–

ಮುಂಗೈ ಬೆರಳುಗಳನ್ನು ಹಾವಿನ ಹೆಡೆಯಂತೆ ತೋರುವುದಾಗಿರುತ್ತದೆ. 10.ರೇಚಿತ (11.ಅರ್ಧರೇಚಿತ 12.ಉತ್ತಾನವಂಚಿತಗಳು ರೇಚಿತದಲ್ಲಿಯೇ ಅಂತರ್ಗತವಾಗಿವೆ.)– ಪಾರ್ಶ್ವಗಳಲ್ಲಿ ಹಂಸಪಕ್ಷದಂತೆ ಕೈಗಳನ್ನು ತಿರುಗಿಸಿ ಪ್ರದರ್ಶಿಸುವುದಾಗಿರುತ್ತದೆ. 13.ಪಲ್ಲವ– ಬಲ ಹಸ್ತವು ರೇಚಿತ ಮುದ್ರೆಯಿಂದಲೂ, ವಾಮ ಹಸ್ತವು ಚತುರಸ್ರ ಮುದ್ರೆಯಿಂದಲೂ ತೋರಿಸಲ್ಪಡುತ್ತದೆ. 14.ನಿತಂಬಕ– ಅಂಗೈಯ ಬೆರಳುಗಳನ್ನು ಜೋಡಿಸಿ ಅನಾಮಿಕ ಬೆರಳನ್ನು ಲಂಬವಾಗಿ ಇರಿಸಿ ಕಟಿಯ ಪಾರ್ಶ್ವದಲ್ಲಿ ತೋರುವುದಾಗಿರುತ್ತದೆ. 15.ಕೇಶಬಂಧಲತಾ– ನಿಂತಂಬ ಮುದ್ರೆಯನ್ನೇ ಎರಡು ಪಾರ್ಶ್ವಗಳಲ್ಲಿ ಜಡೆ ಹೆಣೆಯುವ ರೀತಿಯಲ್ಲಿ ಪ್ರದರ್ಶಿಸಲ್ಪಡುತ್ತದೆ. 16.ಕರಿಹಸ್ತ– ಅಂಗೈ ಬೆರಳುಗಳನ್ನು ಒಂದಕ್ಕೊಂದು ತಾಗುವಂತಿದ್ದು ಅನಾಮಿಕವು ಲಂಬದಲ್ಲಿದ್ದು ಕಿವಿಯ ಬಳಿ ತೂಗುವಂತೆ ತೋರುವುದಾಗಿರುತ್ತದೆ. 17.ಪಕ್ಷವಂಚಿತ– ಕರಿಹಸ್ತವನ್ನು ಸೊಂಟ ಮತ್ತು ತಲೆಯ ಬದಿಗೆ ತಾಗುವಂತೆ ಹಿಡಿದು ತೋರಿಸುವುದು. 18.ಪಕ್ಷ ಪ್ರದ್ಯೋತಕ– ಕರಿಹಸ್ತವನ್ನು ವಿಮುಖವಾಗಿ ಹಿಡಿದು ತೋರಿಸುವುದು. 19.ತಾರ್ಕ್ಷ್ಯಪಕ್ಷ– ಮುಂಗೈಯನ್ನು ಭಾಗಿಸಿ ಅಧೋಮುಖವಾಗಿಸಿ ನಿತಂಬದ ಮೇಲೆ ತೋರುವುದಾಗಿರುತ್ತದೆ. 20.ದಂಡಪಕ್ಷ– ಹಂಸ ಮತ್ತು ಪಕ್ಷಮುದ್ರೆಯನ್ನು ವಿಸ್ತರಿಸಿ ಭುಜದ ಉದ್ದಗಲಕ್ಕೂ ಪ್ರಸಾರಮಾಡುವುದಾಗಿರುತ್ತದೆ. 21.ಊರ್ಧ್ವಮಂಡಲಿ– ಅರಾಲ ಹಸ್ತಗಳನ್ನು ಮೇಲ್ಮುಖವಾಗಿ ಆಡಿಸುವುದಾಗಿರುತ್ತದೆ. 22.ಪಾರ್ಶ್ವಮಂಡಲಿ– ಊರ್ಧ್ವಮಂಡಲಿಯನ್ನು ಎರಡೂ ಬದಿಗಳಲ್ಲಿ ವಿಸ್ತರಿಸಲ್ಪಡುತ್ತದೆ. 23.ಉರೋಮಂಡಲಿ– ಒಂದು ಹಸ್ತವನ್ನು ಮೇಲುಮೇಲಕ್ಕೆ ಸುತ್ತಿದಂತೆಯೂ ಇನ್ನೊಂದು ಹಸ್ತದಿಂದ ಬಿಚ್ಚುವಂತೆಯೂ ಮಾಡುವುದಾಗಿರುತ್ತದೆ. 24.ಉರಃಪಾರ್ಶ್ವರ್ಧ ಮಂಡಲ– ಅಲಪಲ್ಲವ ಮತ್ತು ಅರಾಲ ಹಸ್ತಗಳನ್ನು ಎದೆಯ ಎರಡೂ ಬದಿಗಳಲ್ಲಿ ಉರೋಮಂಡಲಿಯಂತೆ ತಿರುಗಿಸುವುದಾಗಿರುತ್ತದೆ. 25.ಮುಷ್ಟಿಕಸ್ವಸ್ತಿಕ– ಹಸ್ತಗಳು ಸ್ವಸ್ತಿಕಾಕಾರವಾಗಿ ಗಂಟಿನ ಬಳಿ ಕಟಿಕಾ ಮುಖದಂತೆ ಹಿಡಿಯುವುದು. 26.ನಲಿನೀಪದ್ಮಕೋಶ– ಹಸ್ತಗಳನ್ನು ತಿರುಗಿಸುತ್ತಾ ಮೊಣಕಾಲಿನ ಬಳಿ ಪದ್ಮಕೋಶಾಕಾರವನ್ನು ಹಿಡಿಯುವಂತೆ ವರ್ತಿಸುವುದು. 27.ಲಲಿತ– ಪಲ್ಲವ ಮುದ್ರೆಯನ್ನು ಶಿರಸ್ಸಿನ ಬಳಿ ತೋರುವುದು. 28.ವಲಿತ– ಮುಷ್ಟಿಕ ಸ್ವಸ್ತಿಕ ಹಸ್ತಗಳನ್ನು ತಲೆಯ ಸಮೀಪ ತಿರುಗಿಸುವುದು. 29.ಅಲಪದ್ಮ– ಹಸ್ತಗಳನ್ನು ಊರ್ಧ್ವಮುಖವಾಗಿ ಪ್ರಸರಿಸುವುದು. 30. ಉಲ್ಬಣ – ಕೈಯ ತುದಿಗಳನ್ನು ಮೇಲಕ್ಕೆತ್ತಿತೋರುವಂತೆ ಮಾಡುವ ಕ್ರಿಯೆಯಾಗಿರುತ್ತದೆ.

ಅಸಂಯುತ ವೃತ್ತಹಸ್ತಗಳು – ಹಸ್ತದ ಕೆಲವು ಅಥವಾ ಎಲ್ಲ ಬೆರಳುಗಳು ಒತ್ತಾಗಿಲ್ಲದ ಮುದ್ರಾಚಿಹ್ನೆಯಾಗಿರುತ್ತದೆ. ಈ ವೃತ್ತಹಸ್ತಗಳನ್ನು ಇಪ್ಪತ್ತನಾಲ್ಕು ವಿಧಗಳಲ್ಲಿ ವಿಭಕ್ತವಾಗಿವೆ. 1.ಪತಾಕ– ಅಂಗುಷ್ಠವನ್ನು ತೋರುಬೆರಳಿನ ಬುಡದಲ್ಲಿರಿಸಿ ಉಳಿದ ಬೆರಳುಗಳನ್ನು ಒಟ್ಟಾಗಿರುವಂತೆ ಚಾಚಿ ಶಿ.ರ. 6.5.0.ಮ47–82. ತೋರಿಸುವುದು. ಇದು ಆಜ್ಞೆ, ತಡೆ ಮುಂತಾದ ಸಂದರ್ಭಗಳಲ್ಲಿ

ವಿನಿಯೋಗಿಸಲ್ಪಡುತ್ತದೆ.[124] 2.ತ್ರಿಪತಾಕ–ಪತಾಕಮುದ್ರೆಯನ್ನೇ ಎತ್ತಿ ಹಿಡಿದು ಅನಾಮಿಕ ಬೆರಳನ್ನು ಅದಕ್ಕೆ ಲಂಬವಾಗಿರಿಸುವುದಾಗಿರುತ್ತದೆ. ಸಂಸ್ಪರ್ಶ, ತಿಲಕ ಹಚ್ಚುವುದು ಮುಂತಾದ ಕಡೆ ಬಳಸಬಹುದಾಗಿರುತ್ತದೆ. 3.ಕರ್ತರೀಮುಖತ್ರಿಪತಾಕಾಕಾರದಲ್ಲಿರುವಂತೆ ತೋರುಬೆರಳು ಮತ್ತು ಮಧ್ಯದ ಬೆರಳುಗಳ ಮಧ್ಯೆ ಅಂತರವೇರ್ಪಡಿಸಿದಾಗ ಕತ್ತರಿಯಂತೆ ತೋರುವ ವಿನ್ಯಾಸವಾಗಿರುತ್ತದೆ. ಮಾರ್ಗದರ್ಶನ, ಕೇಶವಿನ್ಯಾಸ ಮುಂತಾದವುಗಳಲ್ಲಿ ಪ್ರಯೋಜನವಿದೆ. 4.ಅರ್ಧಚಂದ್ರ– ಅಂಗುಷ್ಠವನ್ನು ಲಂಬವಾಗಿರಿಸಿ ಉಳಿದ ಬೆರಳುಗಳನ್ನು ಜೋಡಿಸಿ ಬಿಲ್ಲಿನಂತೆ ಭಾಗಿಸಲ್ಪಡುವ ವಿನ್ಯಾಸ. ಚಂದ್ರರೇಖೆಯನ್ನು ವೀಕ್ಷಿಸುವಾಗ ಮತ್ತು ವ್ಯಕ್ತಿಯನ್ನು ಹೊರನೂಕುವಂತೆ ಮಾಡುವಾಗ ಪ್ರದರ್ಶಿಸಲ್ಪಡುತ್ತದೆ. 5.ಅರಾಲ– ಪತಾಕಹಸ್ತದಲ್ಲಿ ತೋರುಬೆರಳಿನ ವಕ್ರಭಂಗಿಯಾಗಿರಿಸುವುದಾಗಿರುತ್ತದೆ. ಶೌರ್ಯ, ಗಾಂಭೀರ್ಯಾದಿಗಳಲ್ಲಿ ಪ್ರಯೋಗವಿದೆ. 6.ಶುಕತುಂಡ–ಅರಾಲಹಸ್ತದಲ್ಲಿ ಅನಾಮಿಕ ಬೆರಳೂ ವಕ್ರವಾಗಿದ್ದರೆ ಈ ಮುದ್ರೆಯು ತೋರಿಬರುತ್ತದೆ. ನಿರ್ಧಿಷ್ಟವಾದ ವಸ್ತುವನ್ನು ತೋರುವುದು, ಸತ್ಯ ಮುಂತಾದ ಕಡೆ ಇದನ್ನು ಪ್ರಯೋಗಿಸಲಾಗುತ್ತದೆ. 7.ಮುಷ್ಟಿಕ– ಬೆರಳುಗಳನ್ನೆಲ್ಲಾ ಭಾಗಿಸಿ ಹಸ್ತಗತಮಾಡಿ ಅಂಗುಷ್ಟದಿಂದ ಒತ್ತಿಹಿಡಿಯುವುದಾಗಿರುತ್ತದೆ. ಖಡ್ಗಾದಿಗಳನ್ನು ಹಿಡಿಯುವುದು, ಗುದ್ದುವುದು ಮುಂತಾದ ಕ್ರಿಯೆಗಳಲ್ಲಿ ಉಪಯೋಗಿಸಲಾಗುತ್ತದೆ. 8.ಶಿಖರ– ಮುಷ್ಠಿಕ ಮುದ್ರೆಯನ್ನು ಹೊಂದಿ ಅಂಗುಷ್ಠವನ್ನು ಸ್ವಲ್ಪ ಮಾತ್ರವೇ ಸಡಿಲಿಸಿ ಹಿಡಿಯುವುದಾಗಿರುತ್ತದೆ. ಆಯುಧಗಳನ್ನು ಬಿಡುವುದು, ಹಗ್ಗ, ದರ್ಭೆ ಮುಂತಾದವುಗಳನ್ನು ಹಿಡಿಯುವುದು, ಬಣ್ಣ ಹಚ್ಚುವ ಕ್ರಿಯೆಗಳಲ್ಲಿ ವಿನಿಯೋಗವಿದೆ. 9.ಕಪಿತ್ಥ– ಬೆರಳುಗಳು ಹಸ್ತದೆಡೆಗೆ ಬಾಗಿದ್ದು ಅಂಗುಷ್ಠವನ್ನು ಮೇಲಿಂದ ಆವರಿಸುವ ರೀತಿಯಲ್ಲಿರುತ್ತದೆ. ಖಡ್ಗಾದಿ ಆಯುಧಗಳನ್ನು ಹಿಡಿಯುವಲ್ಲಿ ಉಪಯೋಗವಿದೆ. 10.ಕಟಿಕಾಮುಖಕ ಪಿತ್ಥಹಸ್ತದಂತೆಯೇ ಕಿರಿಬೆರಳು ಮತ್ತು ಅನಾಮಿಕ ಬೆರಳುಗಳು ಸ್ವಲ್ಪವೇ ಬಾಗಿದಂತೆ ಕಾಣಿಸುವುದು. ಕನ್ನಡಿ, ಛತ್ರಿ ಮುಂತಾದವುಗಳನ್ನು ಹಿಡಿಯುವುದರಲ್ಲಿ ವಿನಿಯೋಗವಿದೆ. 11.ಸೂಚ್ಯಾಸ್ಯ–ಕಟಿಕಾಮುಖದಂತೆ ಹಸ್ತದಲ್ಲಿ ತೋರುಬೆರಳನ್ನು ಬಿಡಿಸಿ ಸೂಜಿಯಂತೆ ತೋರುವ ಕ್ರಮವಾಗಿರುತ್ತದೆ. ವಿದ್ಯುತ್ ಮತ್ತು ದೀಪ ಮುಂತಾದವುಗಳನ್ನು ವೀಕ್ಷಿಸುವ ಪರಿಯಾಗಿರುತ್ತದೆ. 12.ಪದ್ಮಕೋಶ ಬೆರಳುಗಳನ್ನು ತುದಿಯಲ್ಲಿ ಬಾಗಿಸಿ ಬಟ್ಟಲಿನಂತೆ ತೋರುವುದು. ಪುಷ್ಪವನ್ನು ತೋರುವಂತೆ ಸಂಜ್ಞಿಸಲ್ಪಡುತ್ತದೆ. 13.ಸರ್ಪಶೀರ್ಷ– ಹಸ್ತದೊಂದಿಗೆ ಬೆರಳುಗಳನ್ನು ಬಾಗಿಸಿ ಹಿಡಿದಾಗ. ಹಾವಿನಹೆಡೆಯಂತೆ ತೋರುವುದಾಗಿರುತ್ತದೆ. 14.ಮೃಗಶೀರ್ಷ – ಒತ್ತಾಗಿ ಬಾಗಿ ಹಿಡಿದ ಬೆರಳುಗಳಿಂದ ಅಂಗುಷ್ಠ ಮತ್ತು ಕನಿಷ್ಠ ಬೆರಳುಗಳನ್ನು ಬೇರ್ಪಡಿಸಿ ಪ್ರದರ್ಶಿಸುವುದಾಗಿರುತ್ತದೆ. ದಾಳ ಉರುಳಿಸುವುದು, ಕಣ್ಣೀರುವರೆಸುವ ಮುಂತಾದ ಕ್ರಿಯೆಗಳಿಗೆ ಉದ್ಧಿಷ್ಟವಾಗಿರುತ್ತದೆ. 15.ಲಾಂಗೂಲ– ಹಸ್ತವನ್ನು ಮೇಲ್ಮುಖವಾಗಿರುವಂತೆ ಮಾಡಿ ಮೊದಲ ಮೂರುಬೆರಳುಗಳು ತ್ರೇತಾಗ್ನಿಗಳಂತೆ ಸೇರಿ ಅನಾಮಿಕವು

---

[124] पताक: प्रथमो हस्तस्त्रिपताकस्तत: परम् (शि.र. ६–५–४७)

ಬಾಗಿ ಕಿರುಬೆರಳು ಎತ್ತಿ ತೋರುವುದರಿಂದ ಸಿದ್ಧಿಸಲಾಗುತ್ತದೆ. ಮಣಿ ಮತ್ತು ಅಡಿಕೆ ಮುಂತಾದವುಗಳನ್ನು ತೋರಲು ಉಪಯೋಗವಿದೆ. 16.ಅಲಪದ್ಮ– ಕರತಲದಲ್ಲಿ ಬೆರಳುಗಳನ್ನು ವಿರಳವಾಗಿಸಿದ ಅಭಿನಯವಾಗಿರುತ್ತದೆ. ನಿಷೇಧ ವಾಕ್ಯದ ಆರಂಭಗಳಲ್ಲಿ ಇದರ ಉಪಯೋಗ. 17.ಚತುರ– ಕಿರುಬೆರಳು ಮತ್ತು ಅಂಗುಷ್ಠವನ್ನು ಹಿಡಿಯುವಂತಿದ್ದು ಉಳಿದ ಬೆರಳುಗಳು ಹೊರಮುಖವಾಗಿರಿಸಿದರೆ ತೋರುವ ವಿನ್ಯಾಸವಾಗಿರುತ್ತದೆ. ವಿನಯ, ನಿಯಮ ಮುಂತಾದಕಡೆ ಇದರ ಉಪಯೋಗವಿದೆ. 18.ಭ್ರಮರತೋರು ಬೆರಳನ್ನು ಉರುಟಾಗಿಸಿ ಅಂಗುಷ್ಠ ಮತ್ತು ಮಧ್ಯಬೆರಳನ್ನು ಸಂಯೋಜಿಸಿ ಉಳಿದೆರಡು ಬೆರಳುಗಳನ್ನು ಬಿಡಿಯಾಗಿ ಎತ್ತಿ ತೋರಿಸುವಂತಿರುವುದು. ಭ್ರಮರ, ಆಭರಣ ಮುಂತಾದವುಗಳ ತೋರುವಿಕೆಯಲ್ಲಿ ವಿನಿಯೋಗವಿದೆ. 19.ಹಂಸಾಸ್ಯ– ಅಂಗುಷ್ಠ ತೋರುಬೆರಳು ಮತ್ತು ಮಧ್ಯದ ಬೆರಳುಗಳನ್ನು ಸೇರಿಸಿ ಚೂಪಾಗಿರಿಸಿ ಉಳಿದೆರಡು ಬೆರಳುಗಳನ್ನು ಬಿಡಿಯಾಗಿ ಮೇಲೆತ್ತಿದಂತಿರಬೇಕು. ಮೃದುತ್ವ ಮತ್ತು ಪಕ್ಷಿ ಮುಂತಾದವುಗಳ ತೋರುವಿಕೆಗೆ ಸಹಕಾರಿ. 20.ಹಂಸಪಕ್ಷ– ಕಿರುಬೆರಳು ಮೇಲೆತ್ತಿದಂತಿದ್ದು ಅಂಗುಷ್ಠವು ಬಾಗಿದಂತೆ ಮಾಡಿ ಉಳಿದ ಬೆರಳುಗಳನ್ನು ಒಂದಕ್ಕೊಂದು ತಾಗಿದಂತೆ ಚಾಚಿಕೊಂಡಿದ್ದರೆ ಹಂಸಪಕ್ಷವೆನಿಸುತ್ತದೆ. ಆಚಮನ, ಸ್ವೀಕಾರ, ತೀರ್ಥಪ್ರಾಶನಗಳಲ್ಲಿ ವಿನಿಯೋಗವಿದೆ. 21.ಸಂದಂಶ– ಅಂಗುಷ್ಠ ತೋರುಬೆರಳುಗಳನ್ನು ಒತ್ತಾಗಿರಿಸಿ ಉಳಿದ ಬೆರಳುಗಳು ಬಿಡಿಯಾಗಿ ಮೇಲ್ಮುಖವಾಗಿರಿಸಿ ತೋರುವ ಕ್ರಮವಾಗಿರುತ್ತದೆ. ಆಯ್ಕೆಮಾಡುವುದು, ಹೂ ಬಿಡಿಸುವುದು ಮುಂತಾದ ಕ್ರಿಯೆಗಳಲ್ಲಿ ಸಹಕಾರಿ. 22.ಮುಕುಲ– ಒಂದಕ್ಕೊಂದು ಬೆಸೆದ ಬೆರಳುಗಳೊಂದಿಗೆ ಅಂಗುಷ್ಟವನ್ನು ಸ್ವಲ್ಪ ಮಾತ್ರವೇ ಅಂತರದಲ್ಲಿರಿಸಿ ತೋರಿದರೆ ಮುಕುಲ ಹಸ್ತಾಭಿನಯವೆನಿಸುತ್ತದೆ. ಊಟ, ದೇವಪೂಜೆ ಮುಂತಾದ ಅಭಿನಯದಲ್ಲಿ ಇದರ ಉಪಯೋಗವಿದೆ. 23.ಊರ್ಣನಾಭಿ– ಬೆರಳುಗಳೆಲ್ಲವೂ  ಬಿಡಿಬಿಡಿಯಾಗಿ ಬಾಗಿದಂತೆ ತೋರ್ಪಡಿಸುವುದಾಗಿರುತ್ತದೆ. ತುರಿಕೆ ಮುಂತಾದ ಕ್ರಿಯೆಗಳಲ್ಲಿ ವಿನಿಯೋಗಿಸಲ್ಪಡುತ್ತದೆ. 24.ತಾಮ್ರಚೂಡ– ಅಂಗುಷ್ಠ ಮತ್ತು ಮಧ್ಯಬೆರಳನ್ನು ಸಂಧಿಸುವಂತೆ ಮಾಡಿ ತೋರುಬೆರಳನ್ನು ಬಾಗಿಸಿ ಉಳಿದೆರಡು ಬೆರಳನ್ನು ಹಸ್ತಕ್ಕೆ ತಾಗುವಂತೆ ಹಿಡಿಯುವ ಕ್ರಮವಾಗಿರುತ್ತದೆ. ತಾಳಹಾಕುವಾಗ, ಆಕಳಿಸುವಾಗ ಈ ಕ್ರಿಯೆಯ ಉಪಯೋಗವಿದೆ.

ಸಂಯುತ ನೃತ್ತಹಸ್ತಗಳು– ಹಸ್ತದ ಬೆರಳುಗಳನ್ನು ಒತ್ತಾಗಿರಿಸಿಕೊಂಡು ಮಾಡುವ ಮುದ್ರಾಚಿಹ್ನೆಗಳಾಗಿರುತ್ತವೆ. ಅಂಜಲಿ ಮುಂತಾದವು ನೃತ್ತದ ಸಂಯುತ ಹಸ್ತಗಳು. ಇವುಗಳ ಹೆಸರೇ ಹೇಳುವಂತೆ ಇವುಗಳು ಅರ್ಥವತ್ತಾಗಿ ಹದಿಮೂರು ರೀತಿಯಲ್ಲಿವೆ. 1.ಅಂಜಲಿ– ಅಸಂಯುತ ಹಸ್ತವಾದ ಪತಾಕಾ ಹಸ್ತದಂತೆ ಎರಡೂಕೈಯನ್ನು ಜೋಡಿಸಿ ಹಿಡಿಯುವುದರಿಂದ ಸಿದ್ಧಿಸಲ್ಪಡುತ್ತದೆ. ದೇವತೆ, ಗುರು, ಬ್ರಾಹ್ಮಣರನ್ನು ವಂದಿಸುವಾಗ ತೋರುವ ಮುದ್ರೆ. 2.ಕಪೋತ–ಎರಡೂ ಕೈಗಳನ್ನು ಸಂಶ್ಲಿಷ್ಟವಾಗಿರಿಸಿ

ಉಬ್ಬಿದಂತೆ ಮಾಡಿದಾಗ ಕಾಣುವ ಮುದ್ರೆ. ನಮಸ್ಕಾರಾದಿಗಳಲ್ಲಿ ವಿನಿಯೋಗವಿರುತ್ತದೆ. 3.ಕರ್ಕಟ– ಹೆಬ್ಬೆರಳುಗಳೆರಡನ್ನು ಸಮಾನಾಂತರವಾಗಿರಿಸಿಕೊಂಡು ಒಂದು ಕೈಯ ಉಳಿದ ಬೆರಳುಗಳನ್ನು ಮತ್ತೊಂದರಲ್ಲಿ ಹಸ್ತಗತ ಮಾಡಿ ಬೆರೆತಾಗ ಈ ಮುದ್ರೆ ಸಿದ್ಧವಾಗುತ್ತದೆ. ಶಂಖಧ್ವನಿ ಮುಂತಾದವುಗಳಲ್ಲಿ ಪ್ರಯೋಜನವಿದೆ. 4.ಸ್ವಸ್ತಿಕ– ಕೈಗಳೆರಡರಲ್ಲಿಯೂ ಅರಾಲಮುದ್ರೆಯನ್ನಾಗಿಸಿ ಅಂಗಾತನೆ ಒಂದಕ್ಕೊಂದು ಅಭಿಮುಖವಾಗಿರುವಂತೆ ಮಣಿಗಂಟಿನಿಂದ ದರ್ಶಿಸಲ್ಪಡುತ್ತದೆ. ಸಮುದ್ರಾದಿಗಳನ್ನು ತೋರಿಸುವಲ್ಲಿ ಪ್ರಯೋಜನವಿದೆ. 5.ಕಟಕಾವರ್ಧಮಾನಕ– ಎರಡೂ ಕೈಗಳನ್ನು ಅನ್ಯೋನ್ಯವಾಗಿ ಎದುರುಬದುರಾಗಿರಿಸುವುದಾಗಿರುತ್ತದೆ. ನಮಸ್ಕಾರ ಮುಂತಾದ ಕಡೆ ಇದರ ವಿನಿಯೋಗವಿದೆ. 6.ಉತ್ಸಂಗ– ಕಪೋತ ಮುದ್ರೆಯ ಒಂದೊಂದು ಕೈಗಳನ್ನು ಬೇರೆ ಬೇರೆ ಭುಜಗಳ ಮೇಲೆ ಬರುವಂತೆ ತೋರಿಸುವುದು. ಆಲಿಂಗನ, ನಡುಕ ಮುಂತಾದವುಗಳಲ್ಲಿ ಉಪಯೋಗವಿದೆ. 7.ನಿಷಧ– ಮುಕುಲ ಮುದ್ರೆಯನ್ನು ಕಪಿತ್ಥ ಮುದ್ರೆಯು ಆವರಿಸಿದರೆ ಕಂಡುಬರುವ ಸಂಯುತ ಹಸ್ತಮುದ್ರೆಯಾಗಿರುತ್ತದೆ. 8.ಆಂದೋಲ– ಇಳಿಬಿಟ್ಟ ಹೆಗಲುಗಳಲ್ಲಿ ಹಸ್ತವು ಪತಾಕ ಮುದ್ರೆಯಿಂದ ಆಡಿಸಿದರೆ ಕಾಣುವ ನೋಟ ಆಂದೋಲವಾಗಿರುತ್ತದೆ. ಸಂಭ್ರಮ, ವಿಷಾದದ ಕಡೆ ಇದರ ಉಪಯೋಗವಿದೆ. 9.ಪುಷ್ಪಪುಟ(ಪುಷ್ಪಪಟ)–ಹಸ್ತಗಳನ್ನು ಸರ್ಪಶಿರದಂತಾಗಿಸಿ ಒಂದರಪಕ್ಕದಲ್ಲಿ ಒಂದನ್ನು ತಾಗಿಸಿ ಮೇಲ್ಮುಖವಾಗಿರುವಂತೆ ತೋರುವುದಾಗಿರುತ್ತದೆ. ನೀರುತರುವಂತೆ ಮತ್ತು ಅರ್ಘ್ಯ ಬಿಡುವಂತೆ ಇದರ ವಿನಿಯೋಗವಿದೆ. 10.ಮಕರ– ಅಂಗುಷ್ಠವನ್ನು ನೀಳವಾಗಿಸಿ ಉಳಿದ ಬೆರಳುಗಳನ್ನು ಬಾಗಿಸಿ ಒಂದರಪಕ್ಕ ಒಂದು ಕೈಯನ್ನು ತಾಗಿಸಿದಾಗ ಮೊಸಳೆಯಾಕಾರವನ್ನು ಪಡೆಯುತ್ತದೆ. ಇದು ಶಾರ್ದೂಲ, ಸಿಂಹ ಮುಂತಾದವುಗಳನ್ನು ಸೂಚಿಸಲು ಪ್ರಯೋಜನವಿದೆ. 11.ಗಜದಂತ– ಕೈಗಳನ್ನು ಒಂದಕ್ಕೊಂದು ಅಭಿಮುಖವಾಗಿ ಹಿಡಿದು ಹಸ್ತವನ್ನು ನೇರವಾಗಿಸಿ ಬೆರಳುಗಳನ್ನು ಬಾಗಿಸಿದಾಗ ಸೊಂಡಿಲಾಕಾರವನ್ನು ಪಡೆಯಲು ಸಮರ್ಥವಾಗುತ್ತದೆ. ಪರ್ವತಗಳ ಭೇದನ ಮತ್ತು ಕಂಬಗಳನ್ನು ಹಿಡಿಯಲು ಇದರ ಪ್ರಯೋಜನವಿದೆ. 12. ವರ್ಧಮಾನ– ಹಂಸಪಕ್ಷದ ಮುದ್ರೆಯನ್ನು ಹೊಂದಿ ಕರಗಳನ್ನು ವಿರುದ್ಧ ದಿಕ್ಕಿನಲ್ಲಿ ಹಿಡಿದರೆ ವರ್ಧಮಾನಕರವೆನಿಸುತ್ತದೆ. ಬಾಗಿಲನ್ನು ತೆರೆಯುವ ಸಂದರ್ಭಗಳಲ್ಲಿ ಪ್ರಯೋಜನವಿದೆ. 13.ಅವಹಿತ್ಥ– ಶುಕತುಂಡ ಮುದ್ರೆಗಳನ್ನು ಕೈಗಳೆರಡನ್ನೂ ಎದೆಯ ಮೇಲೆ ಹಿಡಿದುಕೊಂಡು ಅಧೋಮುಖವಾಗಿ ಬಾಗಿಸಿದಾಗ ಈ ಮುದ್ರೆ ಕಂಡುಬರುತ್ತದೆ. ದೌರ್ಬಲ್ಯ, ದೇಹದ ಕೃಶತೆ ಮುಂತಾದ ಸಂದರ್ಭಗಳಲ್ಲಿ ಇದರ ವಿನಿಯೋಗವಿದೆ. ಮೇಲೆ ತಿಳಿಸಿದ ಅರವತ್ತನಾಲ್ಕು ಹಸ್ತಮುದ್ರೆಗಳ ಲಕ್ಷಣಗಳನ್ನು ಕ್ರಮವಾಗಿ ಅರಿತು ನರ್ತಕನು ನಾಟ್ಯಾದಿಗಲ್ಲಿ ಅಭಿನಯಿಸಬಹುದಾಗಿದೆ.

ಸ್ಥಾನಕ– ಏತನ್ಮದ್ಯೆ ನಾಟ್ಯ ಮತ್ತು ನೃತ್ಯಗಳಲ್ಲಿ ಪ್ರಯೋಗಿಸುವಂತೆ ಮೂವತ್ತು ಸ್ಥಾನಕಗಳನ್ನು ಮೂರು ಗುಂಪುಗಳನ್ನಾಗಿಸಿ ಗೊತ್ತು ಮಾಡಲಾಗಿದೆ. ಮೊದಲ ಗುಂಪಿನಲ್ಲಿ ಮೂರು ಸ್ಥಾನಕಗಳಿದ್ದು ಇವು ವಿಶೇಷವಾಗಿ ಸ್ತ್ರೀಯರಿಗಾಗಿ ಹೇಳಲ್ಪಟ್ಟವುಗಳು 1.ಆಯತ 2.ಅಶ್ವಕ್ರಾಂತ 3.ಅವಹಿತ್ಥ; ಎರಡನೆಯ ಗುಂಪು– 4.ವೈಷ್ಣವ 5.ಸಮಪಾದ 6.ವೈಶಾಖ 7.ಮಂಡಲ 8.ಆಲೀಢ 9.ಪ್ರತ್ಯಾಲೀಢ; ಮೂರನೆಯ ಗುಂಪು– 10.ಸಂಹತ 11.ಸಮಪಾದ 12.ಸ್ವಸ್ತಿಕ 13 ವರ್ಧಮಾನಕ 14.ನಂದ್ಯಾವರ್ತ 15.ಚತುರಸ್ರ 16. ಪಾರ್ಷ್ಣಿವಿದ್ಧಕ 17.ಪಾರ್ಷ್ಣಿಪಾರ್ಶ್ವಕ 18.ಏಕಪಾರ್ಶ್ವಕ 19.ಏಕಜಾನುಕ 20.ಪರಾವೃತ್ತ 21.ಪೃಷ್ಠೋತ್ತಾನ ತಲ 22.ಏಕಪಾದ 23.ಬ್ರಾಹ್ಮ– 24.ವೈಷ್ಣವ 25.ಶೈವ. 26.ಗಾರುಡ 27.ವೃಷಭಾಸನ 28.ಸಮಸೂಚಿ 29.ವಿಷಮಸೂಚಿ 30.ಚಂಡಸೂಚಿಕ. ಮೊದಲನೆಯ ಗುಂಪು 1.ಆಯತಸ್ಥಾನಕ– ಬಲಗಾಲನ್ನು ಸಮಸ್ಥಿತಿಯಲ್ಲಿಟ್ಟುಕೊಂಡು ಎಡಗಾಲನ್ನು ತ್ರಿಕೋನಾಕಾರವಾಗಿ ಮೂಡುವಂತೆ ಮಾಡಿ ಎರಡು ಕಾಲಿನ ನಡುವೆ ಒಂದು ತಾಲ(ಸುಮಾರು ಎರಡು ಇಂಚು)ದಷ್ಟು ಅಂತರದಲ್ಲಿ ನಿಲ್ಲಬೇಕು. ಎದೆಯನ್ನು ಉಬ್ಬಿಸಿ, ಸೊಂಟವನ್ನು ಸಮೋನ್ನತಸ್ಥಿತಿಯಲ್ಲಿರುವಂತೆ ನೋಡಿಕೊಂಡು ಮುಖದಲ್ಲಿ ಪ್ರಸನ್ನತೆಯನ್ನಿಸಿರಿಸಿಕೊಳ್ಳಬೇಕಾಗಿರುತ್ತದೆ. ರಂಗಸ್ಥಳದಲ್ಲಿ ಪುಷ್ಪಾಂಜಲಿ ಅರ್ಪಿಸುವ ಭಂಗಿಯೆನಿಸಿದೆ. 2.ಅಶ್ವಕ್ರಾಂತಸ್ಥಾನಕ– ಒಂದು ಪಾದವು ಸಮಸ್ಥಿತಿಯಲ್ಲಿಯೂ ಮತ್ತೊಂದು ಕಾಲಿನ ಬೆರಳುಗಳನ್ನು ಒತ್ತಾಗಿಸಿಕೊಂಡು ತುದಿ ಬೆರಳಿನಲ್ಲಿ ನಿಂತ ಭಂಗಿಯಾಗಿದ್ದು ವಿಲಾಸಾದಿಗಳಲ್ಲಿ ಇದರ ವಿನಿಯೋಗವಿದೆ. 3.ಅವಹಿತ್ಥಸ್ಥಾನಕ– ಅಶ್ವಕ್ರಾಂತವು ವಿಪರೀತ ಶ್ರಮದಲ್ಲಿ ವಿನ್ಯಾಸಗೊಂಡರೆ ಅವಹಿತ್ಥಸ್ಥಾನಕವೆನಿಸುವುದು. ಲೀಲಾವಿಸ್ಮಯಾದಿಗಳಲ್ಲಿ ಇದರ ವಿನಿಯೋಗ. ಎರಡನೆಯ ಗುಂಪು

4.ವೈಷ್ಣವ– ಎರಡೂ ಕಾಲುಗಳ ಅಂತರ ಸುಮಾರು ಎರಡು ತಾಲ(ಐದು ಇಂಚು)ಗಳಷ್ಟು ಪ್ರಮಾಣವಿರುವಂತೆ ಮೊಣಕಾಲನ್ನು ಸ್ವಲ್ಪ ಬಾಗಿಸಿ ಅಂಗುಷ್ಠವು ಸುಸ್ಥಿಯಲ್ಲಿರುವಂತಹ ನಿಲುವಾಗಿರುತ್ತದೆ. 5.ಸಮಪಾದ– ಪಾದಗಳು ಸಮಸ್ಥಿತಿಯಲ್ಲಿರಬೇಕಾದುದು ಅವಶ್ಯಕ. 6.ವೈಶಾಖ– ಎರಡು ತೊಡೆಗಳ ನಡುವೆ ಮೂರುವರೆ ತಾಲಪ್ರಮಾಣದಷ್ಟು ಅಂತರವಿದ್ದು ವಕ್ಷಃಸ್ಥಲದ ಸಮೀಪ ಕಾಲುಗಳ ಮಂಡಿಯು ಬರುವಂತಿದ್ದು ಮಂಡಿಯಿಂದ ಪಾದದವರೆಗೆ ಮೊಣಕಾಲನ್ನು ಓರೆಯಾಗಿರಿಸಿ ಪಾದಗಳನ್ನು ಸಮಸ್ಥತಿಯಲ್ಲಿರಿಸುವ ಭಂಗಿಯಾಗಿರುತ್ತದೆ (ಕುಕ್ಕುರು ಕಾಲಿನಲ್ಲಿ ಕುಳಿತು ಏಳುವಂತಹ ಸ್ಥಿತಿ). ಕುದುರೆ ಸವಾರಿ ಮುಂತಾದವುಗಳ ಕಡೆ ಇವುಗಳ ವಿನಿಯೋಗವಿದೆ. 7.ಮಂಡಲ– ಸೊಂಟ ಮೊಣಕಾಲುಗಳು ಸಮಾನವಾಗಿದ್ದು ಎರಡೂ ಕಾಲುಗಳು ತ್ರಿಕೋನಾಕಾರವಾಗಿರುವಂತೆ ಪಾದಗಳು ಸಮಸ್ಥಿತಿಯಲ್ಲಿರುವ ಭಂಗಿ. ಆನೆ ಸವಾರಿ ಮಾಡುವಾಗ ಇದರ ವಿನಿಯೋಗವಿರುತ್ತದೆ. 8.ಆಲೀಢ– ಎಡಗಾಲು ತ್ರಿಕೋನಾಕಾರವಾಗಿದ್ದು ಬಲಗಾಲ ನೀಡಿದಂತೆಯೂ ಇವೆರಡರ ಪಾದಗಳ ಅಂತರ ಹಿಂದುಮುಂದಾಗಿ

ಐದು ತಾಳಗಳಿಷ್ಟಿದ್ದರೆ ಆಲೀಢ ಸ್ಥಾನಕವೆನಿಸುತ್ತದೆ. ವೀರ, ರೌದ್ರ ರಸದಲ್ಲಿ ಇದರ ಬಳಕೆಯಿದೆ. 9.ಪ್ರತ್ಯಾಲೀಢ– ಆಲೀಢ ಸ್ಥಾನಕದ ವಿಪರೀತ(ತಿರುಗುಮುರುಗಾದ) ಸ್ಥಿತಿಯಾಗಿರುತ್ತದೆ.[125] ವೀರ, ರೌದ್ರ ರಸದಲ್ಲಿ ಇದರ ಬಳಕೆಯಿದೆ.

**ಮೂರನೆಯ ಗುಂಪು–**

ಇಷ್ಟಲ್ಲದೆ ಸೊಂಟ, ತೊಡೆ ಮತ್ತು ಜಂಘಗಳನ್ನು ಉಪಯೋಗಿಸಿ ಇಪ್ಪತ್ತೊಂದು ಬಗೆಯ ಸ್ಥಾನಕಗಳನ್ನು ಗಮನಿಸುವುದರ ಮೂಲಕ ನಾಟ್ಯವು ಮತ್ತಷ್ಟು ವ್ಯಾಪ್ತಿಯನ್ನು ಹೊಂದಿರುವುದನ್ನು ಅರಿಯಬಹುದಾಗಿದೆ. ಅವುಗಳೆಂದರೆ, 10.ಸಂಹತ– ಎರಡೂ ಕಾಲಿನ ಪಾದದ ಗಂಟುಗಳು ಮತ್ತು ಅಂಗುಷ್ಠಗಳು ಒಂದಕ್ಕೊಂದು ತಾಗಿದಂತೆ ನಿಂತ ಸ್ಥಿತಿಯು ಸ್ವಾಭಾವಿಕ ನಿಲುವಿನಂತೆ ತೋರುವುದಾಗಿರುತ್ತದೆ. 11.ಸಮಪಾದ– ಪಾದಗಳೆರಡನ್ನೂ ಸಮವಾಗಿರಿಸಿ ಹನ್ನೆರಡು ಇಂಚು ಅಂತರದಲ್ಲಿ ನಿಂತ ಸ್ಥಿತಿಯಾಗಿರುತ್ತದೆ. 12.ಸ್ವಸ್ತಿಕ– ಕಾಲುಗಳು ಒಂದರಮೇಲೊಂದು ಹಾದುಹೋಗಿರುವಂತೆ ಮಾಡಿ ಅಂದುಗೆಗಳು ತಾಗುವಂತೆಯೂ ಎರಡೂ ಕಾಲುಗಳ ಕಿರುಬೆರಳುಗಳು ಒಂದಕ್ಕೊಂದು ತಾಗುವಂತಿರುವ ಭಂಗಿ(ಕೃಷ್ಣನ ನಿಲುವು). 13.ವರ್ಧಮಾನಕ– ಪಾದಗಳೆರಡನ್ನೂ ಅಡ್ಡವಾಗಿರಿಸಿ ಹಿಮ್ಮಡವು ಮಾತ್ರ ತಾಗುವಂತಿರುವ ಭಂಗಿಯಾಗಿರುತ್ತದೆ. 14.ನಂದ್ಯಾವರ್ತ–ವರ್ಧಮಾನ ಸ್ಥಾನಕದ ಭಂಗಿಯಂತೆಯೇ ಇದ್ದು ಕಾಲುಗಳು ಪರಸ್ಪರ ಆರು ಅಂಗುಲದಷ್ಟು ಅಂತರದಲ್ಲಿರುವುದಾಗಿರುತ್ತದೆ. 15.ಚತುರಸ್ರ– ನಂದ್ಯಾವರ್ತ ಸ್ಥಾನಕದಂತೆಯೇ ಇದ್ದು ಪಾದಗಳ ಅಂತರವನ್ನು ವಿತಸ್ತಿ(ಹದಿನೆಂಟುಅಂಗುಲ) ಪ್ರಮಾಣದಲ್ಲಿರಿಸುವುದಾಗಿರುತ್ತದೆ. 16.ಪಾರ್ಷ್ಣಿವಿದ್ಧಕ– ಒಂದು ಕಾಲಿನ ಹಿಮ್ಮಡಿಗೆ ಇನ್ನೊಂದು ಕಾಲಿನ ಅಂಗುಷ್ಠವನ್ನು ತಾಗಿಸಿ ನಿಂತಭಂಗಿಯಾಗಿರುತ್ತದೆ. 17.ಪಾರ್ಷ್ಣಿಪಾರ್ಶ್ವಕ– ಹಿಮ್ಮಡವು ಒಳಮುಖವಾಗಿರುವಂತಹ ನಿಲುವಾಗಿರುತ್ತದೆ. 18.ಏಕಪಾರ್ಶ್ವಕ–ಒಂದು ಪಾದವು ಸಮಸ್ಥಿತಿಯಲ್ಲಿಯೂ ಮತ್ತೊಂದು ಪಾದವನ್ನು ಅಡ್ಡವಾಗಿರಿಸಿಕೊಂಡು ತೋರಲಾಗುತ್ತದೆ. 19.ಏಕಜಾನುಕ– ಒಂದು ಪಾದವು ಸಮಭಂಗಿಯಲ್ಲಿಯೂ ಮತ್ತೊಂದು ಪಾದದ ಹಿಮ್ಮಡಿ ಮತ್ತು ಮೊಣಕಾಲು ಬಗ್ಗಿದಂತೆಯೂ ಇದ್ದು ಪಾದದಿಂದ ಪಾದಕ್ಕೆ ನಾಲ್ಕು ಅಂಗುಲ ಅಂತರವಿರುತ್ತದೆ. 20.ಪರಾವೃತ್ತ– ಹಿಮ್ಮಡಿ ಮತ್ತು ಅಂಗುಷ್ಟಗಳು ಸಮಸ್ಥಿತಿಯಲ್ಲಿದ್ದು ಆ ಹಿಮ್ಮಡಿಗೆ ಮತ್ತೊಂದು ಪಾದದ ಕಿರಿಬೆರಳು ತಾಕುವಂತಿದ್ದರೆ ಪರಾವೃತ್ತ, 21.ಪೃಷ್ಠೋತ್ತಾನತಲ– ಮುಂದಿನ ಕಾಲ್ಬೆರಳಿನ ಪೃಷ್ಟ ಭಾಗಕ್ಕೆ ಹಿಂದಿನ ಕಾಲು ತಾಗುವಂತಿದ್ದು ಮುಂದೆ ಸಮಸ್ಥಿತಿ ಇರುವ ಭಂಗಿಯು ಪೃಷ್ಠೋತ್ತಾನತಲವೆನಿಸುತ್ತದೆ.

---

[125] विपरीतपदन्यासं प्रत्यालीढ मितीरितम् । शि. र. (६–६ ५९)

22.ಏಕಪಾದ– ಒಂದು ಕಾಲು ಸಮಸ್ಥಿತಿಯಲಿದ್ದು ಅದರ ಮೇಲೆ ಮತ್ತೊಂದು ಕಾಲನ್ನು ಹಾಕಿರುವ ಭಂಗಿ(ಕಾಲಿನ ಮೇಲೆ ಕಾಲು ಹಾಕಿ ಕುಳಿತುಕೊಂಡಂತೆ)ಏಕಪಾದ ಸ್ಥಾನಕವೆನಿಸುತ್ತದೆ. 23.ಬ್ರಾಹ್ಮ– ಒಂದು ಪಾದವು ಸಮಸ್ಥಿತಿಯಲ್ಲಿಯೂ ಮತ್ತೊಂದು ಕಾಲು ಬಾಗಿದಂತಿದ್ದು ಮೊಣಗಂಟಿನ ಎತ್ತರದಲ್ಲಿರಿಸಿವುದಾಗಿರುತ್ತದೆ. 24.ವೈಷ್ಣವ– ಒಂದು ಪಾದವು ಸಮವಾಗಿದ್ದು ಮತ್ತೊಂದು ಅಡ್ಡವಾಗಿಯೋ ಇಲ್ಲವೆ ಉದ್ದವಾಗಿಯೋ ಚಾಚಿಕೊಂಡಿರುವ ಭಂಗಿಯಾಗಿರುತ್ತದೆ. 25.ಶೈವ–ಎಡಗಾಲು ಸಮಸ್ಥಿತಿಯಲ್ಲಿಯೂ ಮತ್ತೊಂದು ಕಾಲನ್ನು ಮೊಣಗಂಟಿಗೆ ಸಮಾನವಾಗಿ (ಯಾವುದೇ ಆಧಾರವಿಲ್ಲದೆ)ಎತ್ತರಿಸಿಟ್ಟಿರುವುದಾಗಿರುತ್ತದೆ. 26.ಗಾರುಡ– ಒಂದು ಕಾಲಿನ ಹೆಜ್ಜೆಯನ್ನು ಸ್ವಲ್ಪ ಬಾಗಿಸಿ ಮೊತ್ತೊಂದು ಕಾಲಿನ ಮೊಣಗಂಟಿನ ಮೇಲೆ ಒತ್ತಿ ಇರುವಂತೆ (ಒಂದೇ ಕಾಲಿನ ಮೇಲೆ ನಿಂತಿರುವ ಭಂಗಿಯಾಗಿರುತ್ತದೆ). 27.ವೃಷಭಾಸನ– ಎರಡೂ ಕಾಲುಗಳ ಮೊಣಗಂಟನ್ನು ನೆಲದ ಮೇಲೆ ಬರುವಂತೆಯೂ ಮೊಣಕಾಲು ಮತ್ತು ಪಾದಗಳು ಹಿಂದೆ ಬರುವಂತೆ ಮಾಡಿ ಮುಖವನ್ನು ಒಂದು ಪಾರ್ಶ್ವಕ್ಕೆ ತಿರುಗಿಸಿದ ಭಂಗಿಯಾಗಿರುತ್ತದೆ(ಮಕ್ಕಳು ಅಂಬೆಗಾಲಿಡುವ ಭಂಗಿ). 28.ಸಮಸೂಚಿ– ಹೆಗಲು ಮತ್ತು ಹಿಮ್ಮಡಿಗಳನ್ನು ನೆಲಕ್ಕೆ ತಾಕುವಂತಿರುವ ಭಂಗಿಯಾಗಿರುತ್ತದೆ. 29.ವಿಷಮಸೂಚಿ– ವೃಷಭಾಸನದಂತೆಯೇ ಇದ್ದು ಕಾಲುಗಳನ್ನು ಚಾಚಿ ಮೊಣಕಾಲುಗಳ ಮುಂಭಾಗಗಳನ್ನು ನೆಲಕ್ಕೆ ತಾಗುವಂತೆ ತೋರುವುದಾಗಿರುತ್ತದೆ. 30.ಚಂಡಸೂಚಿಕ– ಒಂದು ಕಾಲನ್ನು ಅಡ್ಡಲಾಗಿ ಚಾಚಿ ಮತ್ತೊಂದರ ಹಿಮ್ಮಡಿಯನ್ನು ಪೃಷ್ಟಕ್ಕೆ ತಾಕುವಂತೆ ಕಾಲನ್ನು ಮಡಿಚಿ ಕೂತಿರುವಂತಹ ಭಂಗಿಯಾಗಿರುತ್ತದೆ. ಹೀಗೆ ಈ ಗುಂಪಿನಲ್ಲಿ ಇಪ್ಪತ್ತೊಂದು ಸ್ಥಾನಕ ಭೇದಗಳಿದ್ದು, ಒಟ್ಟು ಮೂರು ಸ್ಥಾನಕಗಳಿಂದ ಮೂವತ್ತು ಸ್ಥಾನಕಗಳನ್ನು ಪರಿಣಿತರು ಗುರುತಿಸಿದ್ದಾರೆ.

ಚಾರಿ– ಸೊಂಟ, ತೊಡೆ ಮತ್ತು ಜಂಘಗಳ ಚಲನೆಯನ್ನಧಿಕರಿಸಿ ಕಾಲಿನ ಚಲನೆಯನ್ನು ಪಥಿಕರಿಸಲಾಗುತ್ತದೆಯೋ ಅದು ಚಾರಿಯೆನಿಸುತ್ತದೆ.[126] ಇದು ಭೂಮಿಜಾ ಮತ್ತು ಆಕಾಶಿನೀ ಎಂದು ಎರಡು ವಿಧಗಳಲ್ಲಿ ವಿಭಕ್ತವಾಗಿದ್ದು ಪ್ರತಿಯೊಂದು ಬೇಧಗಳೂ ಹದಿನಾರು ಆವಾಂತರ ಪ್ರಬೇಧಗಳಿಂದ ಕೂಡಿದ್ದಾಗಿವೆ.

ಭೂಮಿಜಾ– ಭೂಮಿಯ ಮೇಲೆ ನಡೆಯುವ ಗತಿ ವೈಚಿತ್ರ್ಯಗಳನ್ನು ಭೌಮಚಾರಿ ಮಂಡಲಗಳಿಂದ ತಿಳಿಯಬಹುದಾಗಿರುತ್ತದೆ. ಇವುಗಳ ಪ್ರಬೇಧಗಳೆಂದರೆ– ಸಮಪಾದ, ಅರ್ಧಗತಿ, ಸ್ಥಿತಾ, ಈಷಿತಾ, ಊರುವೃತ್ತಾ, ಡಿತ, ಬದ್ಧಾ, ಜನಿತಾ, ಉಚ್ಛಂಡಿತಾ, ಸ್ಯಂದಿತಾ, ಶಕಟಾಸ್ಯಾ, ಅಪಸ್ಯಂದಿತಾ, ಸಮಾಸಾದಿತಮತ್ತಲ್ಲೀ, ಮತ್ತಲ್ಲೀ, ಅಭ್ಯಧಿಕಾ, ಏಡಕಾಕ್ರೀಡಿತಾ.

[126] ಶಿವತತ್ತ್ವರತ್ನಾಕರ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಕನ್ನಡ ವಿಶ್ವವಿದ್ಯಾಲಯ ಹಂಪಿ 1999 (6.6.86)

ಆಕಾಶಿನೀ– ಅಂತರಿಕ್ಷದಲ್ಲಿ ನಡೆಸಬಹುದಾದ ಆಟಾಟೋಪಗಳನ್ನು ಆಕಾಶಚಾರಿ ಮಂಡಲಗಳು ಸೂಚಿಸುತ್ತವೆ. ಇವುಗಳ ಪ್ರಬೇಧಗಳೆಂದರೆ– ಅತಿಕ್ರಾಂತಾ, ಊರ್ಧ್ವಜಾನು, ಸೂಚೀ, ನೂಪುರಪಾದಿಕಾ, ವಿದ್ಯುದ್ಭ್ರಾಂತಾ, ದಂಡಾ, ಭುಜಂಗತ್ರಾಸಿತ, ಡೋಲಾಪಾದಾ, ಉದ್ಧೃತ್ತಾ, ಅಕ್ಷಿಪ್ತಾ, ಮೃಗಪ್ಲುತ, ಪಾರ್ಶ್ವಾಕ್ರಾಂತಾ, ಅಪಕ್ರಾಂತಾ, ಭ್ರಮರೀ, ಅವಿದ್ಧಾ, ಅಲಾತಾ. ಈ ಮೇಲ್ಕಂಡ ವಿವಿಧ ನಾಟ್ಯಭಂಗಿಗಳು ಸೂಕ್ತ ರಂಗಸ್ಥಳಗಳಲ್ಲಿ ಸುಸಂಸ್ಕೃತರಾದ ನರ್ತಕರಿಂದ ಸಾಮಾಜಿಕರಿಗೆ ಸಂವಹಿಸಬಹುದಾಗಿರುತ್ತದೆ.

ನಾಟ್ಯಕಲೆಯ ಸರ್ವಾಂಗಗಳನ್ನು ಸಾಧ್ಯಂತವಾಗಿ ಲಕ್ಷಿಸುವ ಬೃಹತ್ ಲಕ್ಷಣ ಗ್ರಂಥವಾಗಿ ಹೊರಹೊಮ್ಮಿದ ನಾಟ್ಯ ಶಾಸ್ತ್ರದ ಪಡಿಯಚ್ಚಿನಲ್ಲಿ ಸಂಕ್ಷಿಪ್ತವಾಗಿ ಪ್ರಸ್ತುತ ಶಿ.ರ. ಗ್ರಂಥದಲ್ಲಿ ವಿವೇಚಿಸಲಾದ ವಿಧಾನದನ್ವಯ ಅಧ್ಯಯನ ಮಾಡಲಾಗಿದೆ, ನಾಟುಕಲೆಯು ಉತ್ತಮ ಸಂವಹನಾ ಮಾಧ್ಯಮವಾಗಿರುವುದರಿಂದ ರಂಗಮಂದಿರದ ವ್ಯವಸ್ಥೆ, ನಾಟ್ಯಾಭಿನಯ, ದೃಷ್ಟಿಬೇಧದ ವಿಧಗಳು, ಅಪಾದ ಮಸ್ತಕವಾಗಿ ವಿವಿಧ ಅಂಗಾಂಗಳಿಂದ ಅಭಿನಯಿಸಲ್ಪಡಬಹುದಾದ ಸಾಧ್ಯತೆಗಳನ್ನು ಗಮನದಲ್ಲಿರಿಸಿ ಸಾಧ್ಯಂತವಾಗಿ ಲಕ್ಷಿಸಲಾಗಿದೆ. ನಾಟ್ಯಕಲೆಯು ಒಂದು ಪ್ರಯೋಗಾತ್ಮಕ ಶಾಸ್ತ್ರವಾಗಿ ಪರಿಗಣಿತವಾಗಿದೆ. ಸಂಸ್ಕೃತಿಯ ಅನಾವರಣದಾರಿಯನ್ನು ತಿಳಿಸಲಾಗಿದೆ.

**ಶೀರ್ಷಾದಿ ಕಂಠಾಂತ ಅಭಿನಯ ನಿರೂಪಣೆ :**

ಆರನೆಯ ಕಲ್ಲೋಲ ನಾಲ್ಕನೆಯ ತರಂಗದಲ್ಲಿ ಉಕ್ತವಾಗಿರುವ ಶಿರಸ್ಸಿನಿಂದ ಕಂಠಪ್ರದೇಶ ಪರ್ಯಂತ ಇರುವ ಅಭಿನಯ ಪ್ರಕಾರಗಳನ್ನು ಈ ಮುಂದಿನಂತೆ ವಿಶ್ಲೇಷಿಸಲಾಗಿದೆ.

ಶಿರಸ್ಸು, ಕಣ್ಣು ಮೊದಲಾದ ಅವಯವಗಳು ನೃತ್ತದಲ್ಲಿ ಉಪಯೋಗವಾಗುತ್ತವೆಯೆಂದು ತಿಳಿಸಿದಿರಿ. ಆದರೆ ಆಯಾ ಅಂಗಗಳು ಎಲ್ಲಿ ಹೇಗೆ ಪ್ರಯೋಗಗೊಳ್ಳುತ್ತವೆ ಎಂದು ದಯವಿಟ್ಟು ತಿಳಿಸಿರಿ. ತಂದೆಯೆ! ನನಗೆ ಈ ವಿಚಾರವಾಗಿ ಇನ್ನಷ್ಟು ತಿಳಿಯುವ ಕುತೂಹಲವಿದೆ. ಎಂದು ಮಗನಾದ ಸೋಮಶೇಖರನಾಯಕನು ಕೇಳಿದಾಗ ಬಸಪ್ಪನಾಯಕನು "ಕುಮಾರ! ನಿನಗೆ ಬೇಕಾದ ಎಲ್ಲ ವಿವರಗಳನ್ನೂ ಬಣ್ಣಿಸುತ್ತೇನೆ" ಕೇಳು ಎಂದು ಈ ಮುಂದಿನಂತೆ ಹೇಳಿದ್ದಾನೆ.[127] ನಾಟ್ಯದಲ್ಲಿ ಶಿರಸ್ಸು,

---

[127] शिरोदृष्ट्यादिकानां तु प्रोक्ता नृत्योपयोगिता । उपभोगस्तथांगस्य कथ्यतां कस्य कुत्र वा॥ ॥
स्वामिन् मह्यमिदं ब्रूहि श्रोतुं मेस्ति कुतूहलम् । कुमार श्रुणु तत्सर्वं वर्णयामि तवेप्सितम्॥
शिरोदृष्टिकरादीनां चांगानामुपयोगिताम्। यथाक्रममथात्रैव लक्षणं प्रतिपाद्यते॥

ದೃಷ್ಟಿ, ಕೈ ಮುಂತಾದ ಅಂಗಗಳ ಉಪಯೋಗವನ್ನು ಯಥಾಕ್ರಮವಾಗಿ ಲಕ್ಷಣದೊಡನೆ ವಿವರಿಸುತ್ತೇನೆ. ಎಂದು ತಂದೆ ಬಸವರಾಜನು ಹೀಗೆ ಶ್ಲೋಕದೊಂದಿಗೆ ವಿವರಿಸುತ್ತಾನೆ.

ಧುತ, ವಿಧುತ, ಅಧೂತ, ಅಂಚಿತ, ಕಂಪಿತ, ಆಕಂಪಿತ, ಪರಾವೃತ್ತ, ಅವಧೂತ, ಅಧೋಮುಖ, ನಿಕುಂಚಿತ, ಉತ್ಕ್ಷಿಪ್ತ್ಯ ಲೋಲಿತ, ಪರಿವಾಹಿತ, ಹೀಗೆ ಶಿರಸ್ಸಿನ ಚಲನೆ ಹದಿಮೂರು ವಿಧ ಎಂದು ಬಲ್ಲವರ ಮತ. ಶಿರಸ್ಸನ್ನು ಮೆಲ್ಲನೆ ಅಡ್ಡವಾಗಿ ತಿರುಗಿಸುವುದಕ್ಕೆ ಧುತ ಎಂಬ ಸಂಜ್ಞೆ, ಒಂದು ಮಾತನ್ನು ಒಪ್ಪದಿರುವಾಗ (ನಿಷೇಧ) ವಿಷಾದದಲ್ಲಿ ಬದಿಗೆ ನೋಡುವಾಗ, ಆಶ್ಚರ್ಯ ಮುಂತಾದುವುಗಳಲ್ಲಿ ಈ ಶಿರೋಭೆದದ ಪ್ರಯೋಗ, (ನಾಟ್ಯ ಮತ್ತು ನೃತ್ತಗಳಲ್ಲಿ) ಧುತ ಶಿರವನ್ನೇ ವೇಗವಾಗಿ ಅಭಿನಯಿಸಿದಾಗ ವಿಧುತವೆನಿಸುವುದು. ಭಯ, ಚಳಿ, ವಿಷಾದಗಳಲ್ಲಿ ಇದರ ವಿನಿಯೋಗ, ಶಿರಸ್ಸನ್ನು ಎತ್ತರವಾಗಿ ಅಡ್ಡವಾಗಿ ಹಿಡಿದರೆ ಆಧೂತ, ಇಕ್ಕಡೆಗಳನ್ನೂ ಎತ್ತರದಿಂದ ನೋಡುವಾಗ, ಗರ್ವ ಮುಂತಾದ ಭಾವಗಳಲ್ಲಿ ಈ ಶಿರಸ್ಸಿನ ವಿನಿಯೋಗ, ಶಿರಸ್ಸನ್ನು ಒಂದು ಬದಿಯಲ್ಲಿ ಸ್ವಲ್ಪ ಮಾತ್ರ ಬಗ್ಗಿಸುವುದೇ ಅಂಚಿತ ಎಂಬ ಶಿರೋಭೇದ. ನಾಟ್ಯದಲ್ಲಿ ವ್ಯಾಧಿ, ಮೂರ್ಛೆ, ಮದಾದಿಗಳನ್ನು ತೋರಿಸಲು ಈ ಶಿರದ ಪ್ರಯೋಗ, ತಲೆಯನ್ನು ಜೋರಾಗಿ ನಡುಗಿಸುವುದು ಸ್ವಲ್ಪ ಕತ್ತನ್ನು ಎತ್ತಿ ಕಂಪಿಸುವಂತೆ ಮಾಡುವುದು ಕಂಪಿತ, ನಾಟ್ಯದಲ್ಲಿ, ವಿಮರ್ಶ (ಸಂದೇಹ) ತಿಳಿಯಬೇಕೆಂಬ ಆಸೆ, ಪ್ರಶ್ನೆ ಮುಂತಾದುವುಗಳಲ್ಲಿ ಈ ಶಿರಸ್ಸಿನ ವಿನಿಯೋಗ ಉಂಟು, ಶಿರಸ್ಸನ್ನು ಮೆಲ್ಲಗೆ ಮೇಲಕ್ಕೂ ಕೆಳಗೂ ಆಡಿಸುವುದು ಆಕಂಪಿತ ಎಂಬ ಶಿರೋಭೇದ. ಪ್ರಶ್ನೆ, ಉಪದೇಶ, ಸೂಚನೆ ಇವೆಲ್ಲ ನಾಟ್ಯದಲ್ಲಿ ಮಾಡುವ ಉಪಯೋಗಗಳನ್ನು ಕಾಣಬಹುದು.[128]

---

[128] धुतं विधुतमाधूतमंचितं कंपितं तृथा। अकंपितं परावृत्तमवधूतमधोमुखम्॥
निकुंचितं तथात्किष्प्तं लॊलितं परिवाहितम्। इति त्रयोदशविधं शिरः प्रोक्तं मनीषिभि॥
रेचितं तद्धि शनकैस्तियर्ध्रूतं शिरः स्मृतम्। प्रतिषेधे विषादे च तथा पाश्र्वालोकने॥
विस्मयादौ प्रयोगोस्य कथितो नाव्यनृत्तयोः॥ तदेव शीघ्रचलनाद्विधुतं वर्णित शर॥
भये शीतॆ विषादादौ शिरस्तु विधुतं मतम्। उच्चैः कृतं शिर्स्तियगाधूतमभिधीयतॆ॥
पार्श्वस्थोन्नतवीक्षायां गर्वादौ नाव्यनृत्तयॊ। मनाग्विनमितं पार्श्वे कथयत्यंचितं शिर। ॥
विनियोगॊस्य नाव्ये स्याद्व्याधिमूर्छामदादिषु। कङ्पितं तु शिरः शीघ्रं महुरूर्द्ध्वं प्रकपिंतम्॥
नाव्ये वितर्कविज्ञानपृच्छादौ विनियुज्यते। शनैरूर्ध्वमधस्ताच्च कम्पादाकम्पितं शिरः ॥
पृच्छोपदेशसज्ञादावेतत् स्यान्नाव्यनृत्तयॊः। स्निग्धा हृष्टा च दीना च कृद्धा दृष्टा भयान्विता॥
जुगयप्सिता विस्मितेति दृशोष्टौ स्थायिभावजाः ।

ಇದರ ಮುಂದಿನ ಪರಾವೃತ್ತ ಮುಂತಾದ ಶಿರೋಭೇದಗಳ ಲಕ್ಷಣಗಳನ್ನು ತೋರಿಸಿಲ್ಲ. ಪರಾವೃತ್ತಃ– ಮುಖವನ್ನು ತಿರುಗಿಸಿ ನಿಲ್ಲುವುದು, ಉತ್ಕ್ಷಿಪ್ತಃ – ತಲೆಯೆತ್ತಿ ನಿಲ್ಲುವುದು. ಅದೋಗತಃ – ತಲೆಯನ್ನು ಕೆಳಗೆ ಮಾಡುವುದು, ನಮಾಸ್ಕರಿಸುವುದು, ಲಜ್ಜೆ, ದುಃಖ, ಲೋಲಿತಃ – ಕಣ್ಣುಗಳನ್ನು ಅತ್ತಿತ್ತ ಹೊರಳಿಸುವುದು ಮೂರ್ಛೆ ಅನಾರೋಗ್ಯವನ್ನು ಸೂಚಿಸುತ್ತದೆ.

ಸ್ನಿಗ್ಧ, ಹೃಷ್ಟ, ದೀನ, ಕ್ರುದ್ಧಾ, ದೃಪ್ತಾ, ಭಯಾನ್ವಿತಾ, ಜುಗುಪ್ಸಿತಾ ಎಂಬಿವು ಸ್ಥಾಯಿ ಭಾವಕ್ಕೆ ಸಂಬಂಧಿಸಿದ ದೃಷ್ಟಿ ಭೇದಗಳು. ಶೂನ್ಯ, ಮಲಿನ, ಶ್ರಾಂತ, ಸಲಜ್ಜಾ, ಶಂಕಿತ, ವಿಷಣ್ಣ, ಮುಕಲ, ಜಿಹ್ಮ, ಲಲಿತಾ, ವಿತರ್ಕಿತಾ, ಭ್ರಾಂತಾ, ಅರ್ಧಮುಕುಲ, ತ್ರಸ್ತ, ವಿಕಾಸ, ಕೇಕರ, ವಿಪ್ಲುತ, ಮದಿರಾ, ಗ್ಲಾನಿ, ಅಭಿತಪ್ತಾ, ಕುಂಚಿತಾ, ಹೀಗೆ ಇಪ್ಪತ್ತು ವ್ಯಭಿಚಾರಿಭಾವದ ದೃಷ್ಟಿಭೇದಗಳು.

कान्ता भयान्विता हास्या करुणा च तथाद्भुता ।

रौद्रा वीरा च बीभत्सा इत्यष्टौ रसदृष्टर्य ॥

ऐवमेकत्र गणिताः षट्स्त्रिंश्न्नाव्यनृत्तयोः ।[129]

ಕಾಂತ (ಶೃಂಗಾರ), ಭಯಾನ್ವಿತ (ಭಯಾನಕ ದೃಷ್ಟಿ), ಹಾಸ್ಯ (ಕುಚೇಷ್ಟೆ), ಕರುಣಾ (ಕರುಣ ರಸದ ದೃಷ್ಟಿ), ಅದ್ಭುತ(ಆಶ್ಚರ್ಯ), ರೌದ್ರ (ಕೆಂಪಾದ ಕಣ್ಣು), ವೀರ (ಬಿರುಸಾದ,ಗಂಭೀರವಾದ), ಬೀಭತ್ಸ (ಅಸಹಹಾಯಕತೆ)ಇವು ಎಂಟು ರಸದೃಷ್ಟಿಗಳು, ಇವೆಲ್ಲವನ್ನು ಗ್ರಹಿಸಿದರೆ ನಾಟ್ಯ – ನೃತ್ತದ ಭೇದಗಳಾಗುತ್ತವೆ.

सहर्षा साभिलाषा च मधुरंतर्विकासिनी ॥

स्मेरतारा भवेद्दृष्टिः स्निग्धा रत्याख्यभावजा ।

ಸಹರ್ಷ, ಸಾಭಿಲಾಷಾ, ಮಧುರಾ, ಅಂತರ್ವಿಕಾಸಿನೀ, ಸ್ಮೇರತಾರಾ, ಸ್ನಿಗ್ಧಾ ಇವು ರತಿ ಭಾವದಿಂದ ಹುಟ್ಟಿದವುಗಳು.

चञ्चला स्मेरगर्भा च मग्नतारा निमेषभाक् ॥

ईषदाकुञ्चिता दृष्टिर्हृष्टा हास्ये प्रयुज्यते ।

ಚಂಚಲ, ಸ್ಮೇರಗರ್ಭ, ಮಗ್ನತಾರಾ, ನಿಮೇಷಭಾಕ್, ಈಷದಾಕುಂಚಿತಾ, ಹೃಷ್ಟಾ! ಇವು ಹಾಸ್ಯರಸದಲ್ಲಿ ಕಂಡುಬರುವ ದೃಷ್ಟಿ ವಿಧಗಳು.

---

[129] ಶಿವತತ್ತ್ವರತ್ನಾಕರ – (ಸಂ) ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ್, ಐದು ಸಂಪುಟಗಳು, ದರೇಸಾ ಪ್ರಕಾಶನ, ಬೆಂಗಳೂರು –2013.

ವಿಸ್ರಸ್ತ, ಅರ್ಧೋರ್ತ್ತರ ಪುಟ, ಬಾಷದಪಸ್ಥಗಿತತಾರಕಾ, ಮಂದಸಂಚಾರಭಾಕ್, ದೀನಾ ಎಂಬ ಆರು ರೀತಿಯ ದೃಷ್ಟಿ ಶೋಕಭಾವ. ಅಲುಗಾಡದ ಕಣ್ಣುಗುಡ್ಡೆಯ ನೋಟ, ಕಣ್ಣುಗಳನ್ನರಳಿಸಿ ನೋಡುವುದು, ಪ್ರಸಾದ ಗುಣದ ನೋಟ, ಧೈರ್ಯ ಇವು ಉತ್ಸಾಹ ಭಾವದ ದೃಷ್ಟಿಭೇದಗಳು.

स्थिरा विकाससहिता निश्लीकृततारण ॥२१॥

दृष्टिर्निष्क्रान्तमध्येयं भये ज्नेया भयान्विता ।

ಸ್ಥಿರ, ವಿಕಸಿತ, ಅಲುಗಾಡದ ಕನೀನಿಕೆಯ ನೋಟ, ನಿಷ್ಕ್ರಾಂತಮಧ್ಯಾ ಇವು ಭಯದ ಸನ್ನಿವೇಶದಲ್ಲಿ ತೋರಿಸುವ ದೃಷ್ಟಿಗಳು ಏಕಾಗ್ರತೆಯಲ್ಲಿ ಉದ್ವೇಗ, ನಿಶ್ಚಲವಾದ ನೋಟ, ಸಂಕೋಚದಿಂದ ಕಣ್ಣುಗಳ ರೆಪ್ಪೆಯನ್ನು ಸ್ವಲ್ಪ ಮುದುಡಿಸಿ ನೋಡುವುದು ಇವು ಜುಗುಪ್ಸಾ ಭಾವದ ನೋಟಗಳು ಎನ್ನಬಹುದು. ತಿರುಗುವ ಕಣ್ಣುಗುಡ್ಡೆಯ ನೋಟ, ತೀರ ಅಲುಗಾಡದ ಸಮದೃಷ್ಟಿ, ಕಣ್ಣು ಅರಳಿಸಿ ನೋಡುವುದು, ಅರ್ಧ ಕಣ್ಣು ಮುಚ್ಚಿರುವುದು. ಇವು ವಿಸ್ಮಯ ಭಾವದಲ್ಲಿ ಉಂಟಾಗುವ ದೃಷ್ಟಿಗಳು. ಹೀಗೆ ಎಂಟು ಸ್ಥಾಯಿಭಾವಗಳಿಗೆ ಸಂಬಂಧಿಸಿದ ದೃಷ್ಟಿಭೇದಗಳೆಂದು ತಿಳಿಯಬೇಕು. ಇನ್ನು ಇಪ್ಪತ್ತು ವ್ಯಭಿಚಾರಿಭಾವಗಳ ದೃಷ್ಟಿಭೇದಗಳನ್ನು ಈಗ ನೋಡೋಣ,

ಅಲುಗಾಡದ, ತಾರ (ಕಣ್ಣುಗುಡ್ಡೆ)ವುಳ್ಳ, ಎದುರಿನ ಪದಾರ್ಥವನ್ನು ತಿಳಿಯಲು ಆಗದ, ಏಕಪ್ರಕಾರವಾಗಿ ನಿರ್ನಿಮೇಷವಾಗಿ ನೋಡುವುದು ಶೂನ್ಯದೃಷ್ಟಿ ಆಗುತ್ತದೆ. ಕಡೆ ಕಣ್ಣುಗಳು ಸ್ವಲ್ಪ ಮುಚ್ಚಿದಂತಿದ್ದು, ಕನೀನಿಕೆ ಸ್ವಲ್ಪ ಮಾತ್ರ ಕಾಣುತ್ತಿದ್ದು, ರೆಪ್ಪೆಗೂದಲು ಅಸ್ಪಷ್ಟವಾಗಿ ಎದ್ದು ನಿಲ್ಲುವಂಥ ದೃಷ್ಟಿ ಮಲಿನ. ಕಣ್ಣಿನ ರೆಪ್ಪೆಗಳೆರಡೂ ಸಮವಾಗಿ ಬಾಡಿದ ಹಾಗಿದ್ದು, ಕ್ಷಮವಾಗಿ ನಲುಗುವ ತಾರಕ, ಓರೆಯಾಗಿರುವ ನೋಟ, ಇದು ಶ್ರಾಂತ ಎಂಬ ದೃಷ್ಟಿ. ರೆಪ್ಪೆಗಳು ಸ್ವಲ್ಪಮಾತ್ರ ಬಗ್ಗಿದ್ದು, ಕನೀನಿಕೆಯಲ್ಲಿ ನಾಚಿಕೆ ತುಂಬಿ ಸ್ವಲ್ಪ ಮುದುಡಿಕೊಂಡಿರುವ ನೋಟವೇ ಲಜ್ಜಿತಾ.

चला किंचितस्थि किंचिद्रूढा चकिततारका । आयता तिर्यगुत्तुङ्गा शङ्किता दृष्टिरीरिता ॥२९॥[१३०]

ಕಣ್ಣು ಒಮ್ಮೆ ಆಚೀಚೆ ಚಲಿಸುತ್ತಲೂ, ಒಮ್ಮೆ ಸ್ಥಿರವಾಗಿಯೂ ಮತ್ತು ಏನನ್ನೋ ಬಚ್ಚಿಡುವಂತೆ, ಭೀತಿಗೊಳಗಾದ ಕನೀನಿಕೆಯಿಂದ, ನೀಳವಾಗಿ ಅಡ್ಡವಾಗಿ, ಎತ್ತರವಾಗಿ ನೋಡುವುದು ಶಂಕಿತಾದೃಷ್ಟಿ.

---

130 ಶಿವತತ್ತ್ವರತ್ನಾಕರ – (ಸಂ) ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ್, ಐದು ಸಂಪುಟಗಳು, ದರೇಸಾ ಪ್ರಕಾಶನ, ಬೆಂಗಳೂರು –2013.

ರೆಪ್ಪೆಗಳೆರಡನ್ನು ಅಗಲವಾಗಿ ತೆರೆದು, ಋಜುವೂ ಸ್ಥಿರವೂ ಆದ ಕಣ್ಣುಗುಡ್ಡೆಗಳಿಂದ ತಿರುಗಿಸಿ ತಿರುಗಿಸಿ, ಮುಚ್ಚಿ ತೆರೆದು ನೋಡುವುದು. ತೆರೆದ ಹಾಗೂ ಸಂಗತವಾದ ರೆಪ್ಪೆ – ಸುಖವಾಗಿ ಅರಳಿದ ಕನೀನಿಕೆ, ಸಂಕೋಚದಿಂದ ಕಣ್ಣು ಅರೆ ಬಿರಿದಿರುವುದು ಮುಕುಲಾ ದೃಷ್ಟಿ, ನೀಳವಾಗಿ ರೆಪ್ಪೆಗಳನ್ನು ಇಳಿಬಿಟ್ಟು ಉದಾಸೀನವಾಗಿ ಅಡ್ಡಕ್ಕೆ ತಿರುಗಿ ನೋಡುವಾಗ, ಕನೀನಿಕೆಯು ಕಂಡೂ  ಕಾಣದಂತಿರುವುದು; ಈ ತರದ ದೃಷ್ಟಿಯನ್ನು ಜಿಹ್ಮಾ ಎನ್ನಬಹುದು.

ಇಚ್ಛೆಯನ್ನು ಪ್ರಕಟಿಸುವ, ಹುಬ್ಬುಗಳ ವಿಕಾರದಿಂದ ಸ್ವಲ್ಪ ಓರೆಯಾಗಿ, ವಿಸ್ಮಯದಿಂದ ನೋಡುವ ಮಧುರವಾದ ನೋಟವನ್ನೇ ಲಲಿತಾ ಎನ್ನುತ್ತೇವೆ. ಊಹೆಯನ್ನು ಸೂಚಿಸುವಂತೆ ಕಣ್ಣುಗಳನ್ನು ತಿರುಗಿಸಿಕೊಂಡು, ಅರಳಿದ ಕಣ್ಣುಗುಡ್ಡೆಗಳಿಂದ ಕೆಳಗೆ ನೋಡುವುದನ್ನು ವಿತರ್ಕಿತ ಎನ್ನಬಹುದು. ಕಣ್ಣಿನ ಪಾಪೆಗಳು ಚಂಚಲವಾಗಿದ್ದು, ಆಕುಲ ಮತ್ತು ಭ್ರಾಂತಿಗಳಿಂದ ನೋಡುವುದನ್ನು ವಿಭ್ರಾಂತಾ ಎನ್ನುತ್ತೇವೆ. ತುಸುಮಾತ್ರ ತೆರೆದ ರೆಪ್ಪೆಯ ಅಂಚು, ತುಸು ಓರೆಯಾದ ಪಕ್ಷ್ಮಗಳು, ಸ್ವಲ್ಪ ಮುಟ್ಟಿದ ಕನೀನಿಕೆಯ ನೋಟ ಅರ್ಧಮುಕುಲ ಎನಿಸುತ್ತದೆ. ಹೆದರಿಕೆ ಅಥವಾ ಬಳಲಿಕೆಯಿಂದ ಕಣ್ಣುಗಳು ತಿರುಗಿ ಚಂಚಲವಾದ ಕನೀನಿಕೆಯು ಜಾಸ್ತಿ ಅರಳಿದ ತೆರೆಗಣ್ಣುಗಳಿಂದ ಕಾಣುವುದು ಎನಿಸಿಕೊಳ್ಳುತ್ತದೆ.

विकासितपुटद्वंद्वा निनिर्मेपा विकासिनी ।

तथा चञ्चलतारा च विकासा दृष्टिरिष्यते ॥

मनाग्वक्रपुटा योगमीलितर्धनिमेषभाक् ।

भृशं विभांततारा दृग्दूरालोकेषु केकरा ॥

स्फुरणं पुटयोर्यत्र शैथिल्यं स्तब्धता तथा ।

उद्वृत्ततारकाद्वंद्वा दृशं तां विष्णुतां विदु ॥

ರೆಪ್ಪೆಗಳನ್ನು ಅಗಲಿಸಿ, (ರೆಪ್ಪೆ) ಮುಚ್ಚದೆ, ಚಂಚಲವಾದ ಪಾಪೆಗಳಿಂದ ಕಣ್ಣನ್ನು ಅರಳಿಸಿ ನೋಡುವುದು ಯಾವುದೋ ಅದು ವಿಕಾಸ. ತುಸು ಓರೆಯಾದ ರೆಪ್ಪೆಗಳು, ಧ್ಯಾನಮಾಡುವಂತೆ ಸ್ವಲ್ಪ ಮುಚ್ಚಿದ ಹಾಗೆ ತೀರ ಗಾಬರಿಗೊಂಡ ಕಣ್ಣುಗುಡ್ಡೆಯುಳ್ಳ ತೀವ್ರವಾದ ನೋಟವೇ ಕೇಕರಾ. ರೆಪ್ಪೆಗಳ ಅದಿರುವಿಕೆ, ಶೈಥಿಲ್ಯ, ಸ್ಥಿಮಿತ ಹಾಗೂ ಅರಳಿದ ಕನೀನಿಕೆಗಳುಳ್ಳ ದೃಷ್ಟಿಯೇ ವಿಪ್ಲುತ. ಹುಬ್ಬು ಮತ್ತು ರೆಪ್ಪೆಗಳು ಬಳಲಿದಂತೆ ಕಣುತ್ತಾ ಕ್ರಮೇಣ ಕನೀನಿಕೆಗಳು ಮುಚ್ಚಿವೆಯೋ ಎಂಬಂತೆ, ಸಡಿಲವಾಗಿ ಮೆಲ್ಲನೆ ಕಾಣುವ ದೃಷ್ಟಿ ಗ್ಲಾನಾ. ವ್ಯಥೆಯಿಂದ ತುಂಬಿ, ಕಣ್ಣಿನಗುಡ್ಡೆಯು ನಿದಾನವಾಗಿ, ಚಂಚಲವಾದ ರೆಪ್ಪೆಗಳಿಂದ ತಾಪಗೊಂಡಂತೆ

ಕಾಣುವ ನೋಟವನ್ನು ಅಭಿತಪ್ತಾ. ರೆಪ್ಪೆಗಳ ತುದಿಯು ಓರೆ ನೋಟದಿಂದ ಬಳಲಿದ, ವಿಕಾರಗೊಂಡ ಕಣ್ಣಿನಗುಡ್ಡೆಯನ್ನು ಸಂಕೋಚಗೊಳಿಸಿ ನೋಡುವ ಬಳಲಿದ, ವಿಕಾರಗೊಂಡ ಕಣ್ಣಿನಗುಡ್ಡೆಯನ್ನು ಸಂಕೋಚಗೊಳಿಸಿ ನೋಡುವ ನೋಟವನ್ನು, ಕುಂಚಿತಾ ಎನ್ನುತ್ತಾರೆ. ಇವು ವ್ಯಭಿಚಾರಿಭಾವದ ದೃಷ್ಟಿಗಳು

ಚಿಂತೆಯನ್ನು ಅಭಿನಯಿಸುವಾಗ ಅಭಿತಪ್ತಾ ಅಥವಾ ಶೂನ್ಯ ದೃಷ್ಟಿಯ ವಿನಿಯೋಗ, ಮುಖವು ಬಣ್ಣಗೆಟ್ಟಾಗ ಮತ್ತು ತುಂಬ ಆರೋಗ್ಯದಲ್ಲಿ ಮಲಿನ ದೃಷ್ಟಿಯ ಪ್ರಯೋಗ, ಆಯಾಸ ಮತ್ತು ಭೇದೋಪಾಯದಲ್ಲಿ ಶ್ರಾಂತ ದೃಷ್ಟಿಯೂ ನಾಚಿಕೆಯಾದಾಗ ಲಜ್ಜಿತಾ ದೃಷ್ಟಿಯೂ ಇರುತ್ತದೆ. ವ್ಯಾಯಾಮ ಮತ್ತು ಮೂರ್ಛೆಗಳಲ್ಲಿ ಗ್ಲಾನಾದೃಷ್ಟಿಯೂ, ದುಃಖದಲ್ಲಿ ವಿಷಣ್ಣಾದೃಷ್ಟಿಯೂ, ಸಂದೇಹದಲ್ಲಿ ಶಂಕಿತಾದೃಷ್ಟಿಯೂ ವಿನಿಯೋಗವಾಗುತ್ತವೆ. ದುಃಖ, ಸ್ವಪ್ನ, ನಿದ್ರೆಗಳಲ್ಲಿ ಮುಕುಲಾದೃಷ್ಟಿ. ನೇತ್ರರೋಗ, ಅಸೂಯೆ ಮತ್ತು ನೋಡಲು ಆಗದೆ ಇರುವುದನ್ನು ಕುಂಚಿತಾ ದೃಷ್ಟಿ. ಇವುಗಳ ವಿನಿಯೋಗ, ವೈರಾಗ್ಯ, ಅಭಿಘಾತ, ತೊಂದರೆ ಇವುಗಳ ಅಭಿನಯದಲ್ಲಿ ಅಭಿತಪ್ತಾ ದೃಷ್ಟಿ. ಜಾಡ್ಯ ಮತ್ತು ಮತ್ಸರಗಳಲ್ಲಿ ಜಿಹ್ಮಾದೃಷ್ಟಿ. ಸ್ಮರಣೆ ಮತ್ತು ಊಹೆಗಳಲ್ಲಿ ವಿತರ್ಕಿತಾದೃಷ್ಟಿ. ಧೈರ್ಯ ಮತ್ತು ಹರ್ಷಗಳಲ್ಲಿ ಲಲಿತಾದೃಷ್ಟಿ. ಸ್ಪರ್ಶ, ಗಂಧ ರಸ ಮೊದಲಾದ ವಿಷಯ ಸುಖಾನುಭೂತಿಯಲ್ಲಿ ಅರ್ಧಮುಕುಲಾ ದೃಷ್ಟಿ. ಭ್ರಾಂತಿಯಲ್ಲಿ ಯುದ್ಧ ಮತ್ತು ಆವೇಶಗಳಲ್ಲಿ ವಿಭ್ರಾಂತದೃಷ್ಟಿಯೂ, ಉನ್ಮಾದ, ಚಪಲತೆ, ಮರಣದ ಪ್ರಯತ್ನ ಮುಂತಾದ ಅಭಿನಯದಲ್ಲಿ ವಿಪ್ಲುತಾ ದೃಷ್ಟಿಯೂ ಇರುವುದು. ದೂರದಿಂದ ಒಂದು ವಸ್ತುವನ್ನು ನೋಡುವಾಗ ಕೇಕರ ದೃಷ್ಟಿಯೂ ಮದತುಂಬಿದಾಗ ಮದಿರಾ ದೃಷ್ಟಿಯೂ, ಭಯವನ್ನು ತೋರುವಾಗ ತ್ರಸ್ತಾದೃಷ್ಠಿಯೂ ಇರುತ್ತದೆ. ಪ್ರಸನ್ನತೆ, ಸಂತೋಷಗಳುಂಟಾಗುವ ಕಾಮಪೂರಿತವಾದ ಕಡೆಗಣ್ಣ ನೋಟವು ಕಾಂತಾದೃಷ್ಟಿ. ಇದು ಸಂಭೋಗ ಶೃಂಗಾರದಲ್ಲಿ ಅಲುಗಾಡದ, ಮೇಲಕ್ಕೆ ಸರಸರನೆ ತಿರುಗುವ ಕಣ್ಣಿನಗಡ್ಡೆಯಿಂದ ವಿಚಿತ್ರವಾಗಿರುವ ಭಯಾನಕ ದೃಷ್ಟಿಯು ಭಯದ ಅಭಿನಯದಲ್ಲಿ ಪ್ರಯೋಗವಿದೆ.

ಕ್ರಮವಾಗಿ ಕಣ್ಣುಗಳನ್ನು ಓರೆಯಾಗಿ ತಿರುಗಿಸಿ ಕಣ್ಣಿನಗುಡ್ಡೆಯನ್ನು ತುಸುಮಾತ್ರ ತಿರುಗಿಸಿ ನೋಡುವುದು ಹಾಸ್ಯದೃಷ್ಟಿ. ಇದು ಹಾಸ್ಯದ ಅಭಿನಯದಲ್ಲಿ ವಿನಿಯೋಗ. ಮೇಲಿನ ರೆಪ್ಪೆಕೆಳಗೆ ಬಾಗಿದ್ದು, ಕಣ್ಣೀರು ತುಂಬಿ ಮೂಗಿನ ತುದಿಯನ್ನು ನೋಡುವುದು  ಹಾಸ್ಯದೃಷ್ಟಿ. ಇದರಲ್ಲಿ ದುಃಖದ ಭಾವದಿಂದ ಕಣ್ಣಿನಗುಡ್ಡೆಗಳು ಭಾರವಾಗಿ ತೋರುತ್ತದೆ. ಇದು ಕರುಣ ರಸದ ಅಭಿನಯ. ರೆಪ್ಪೆಗಳ ತುದಿಗಳನ್ನು ಸ್ವಲ್ಪ ಕಿರಿದುಗೊಳಿಸಿ, ಕಣ್ಣುಗುಡ್ಡೆ, ಸ್ಫುಟವಾಗಿ ತಿರುಗುವಂತೆ ಮಾಡಿ ನೀಳವಾಗಿ ಕಣ್ಣನ್ನು ತೆರೆದು ನೋಡುವುದು ಅದ್ಭುತ ರಸದಲ್ಲಿ. ರೂಕ್ಷವೂ ಕ್ರೂರವೂ ಸ್ವಲ್ಪ ಕೆಂಪಾಗಿ, ಕಣ್ಣುಗುಡ್ಡೆಯ ಅಚಲಿತವಾಗಿ ನೆಡುವಂತೆ ಕಾಣುವ, ಹುಬ್ಬುಗಂಟಿಕ್ಕಿದ ನೋಟವೇ ರೌದ್ರ. ಇದು ರೌದ್ರರಸದಲ್ಲಿ, ತಾರಕೆಗಳು ಒಂದೇ ಸಮನೆ

ಉರಿಯುವಂತೆ, ನಿರ್ನಿಮೇಷವಾಗಿ ಗಂಭೀರವಾಗಿ, ಒಳಗಣ್ಣನ್ನು ಅಗಲವಾಗಿ ತೆರೆದು ನೋಡುವುದೇ ವೀರದೃಷ್ಟಿ. ವೀರರಸದಲ್ಲಿ ಇದರ ಉಪಯೋಗ. ಕಡೆಗಣ್ಣುಗಳ ತುದಿ ಸ್ವಲ್ಪ ನಿಮೀಲಿತವಾಗಿ, ನೋಟವನ್ನು ಕಿರಿದುಗೊಳಿಸಿ ಅಸಹ್ಯ ಭಾವವನ್ನು ಹೊಮ್ಮಿಸುವುದು ಬೀಭತ್ಸರಸದ ದೃಷ್ಟಿ. ಇವು ಎಂಟು ರಸಾಶ್ರಯವಾದ ದೃಷ್ಟಿಭೇದಗಳು ನಾಟ್ಯದಲ್ಲಿವೆ. ಇವು ಒಟ್ಟಿಗೆ ಮುವತ್ತಾರು ದೃಷ್ಟಿಯಾದುವು. ಅವು ಎಂಟು ಅಷ್ಟದೃಷ್ಟಿ ಭೇದಗಳೆನಿಸುತ್ತವೆ. ಆಲೋಕಿತ, ಸಮ, ತ್ರ್ಯಶ್ರ, ಪ್ರಲೋಕಿತ, ವಿಲೋಕಿತ, ಉಲ್ಲೋಕಿತ, ಅನುವೃತ್ತ ಮತ್ತು ಅವಲೋಕಿಕ ಹೀಗೆ ಇವು ಎಂಟು ಭೇದಗಳು, ಇವುಗಳ ಲಕ್ಷಣವೇನೆಂದರೆ ಅಕಸ್ಮಾತ್ ತಕ್ಷಣ ಯಾವುದಾದರೊಂದು ವಸ್ತುವನ್ನು ನೋಡುವುದು ಆಲೋಕಿತ. ಕಣ್ಣಿನಗುಡ್ಡೆಗಳು ಸಮವಾಗಿದ್ದು ಸುತ್ತಲೂ ಚೆನ್ನಾಗಿ ನೋಡುವುದು ಸಮದೃಷ್ಟಿ. ರೆಪ್ಪೆಯೊಳಗೆ ಕಣ್ಣಿನಗುಡ್ಡೆಯು ಕಾಣದ ಹಾಗೆ ಸ್ವಲ್ಪ ಮರೆಯಾಗಿದ್ದು ನೋಡುವುದೇ ತ್ರ್ಯಶ್ರದೃಷ್ಟಿ. ತನ್ನ ಎರಡುಬದಿಗಳನ್ನು ನೋಡುವ ನೋಟವೇ ಪ್ರಲೋಕಿತ. ಬೆನ್ನಹಿಂದೆ. ಹಿಂದಿನ ವಸ್ತುವನ್ನು ನೋಡುವುದು ವಿಲೋಕಿತ, ಮೇಲ್ಗಡೆ ನೋಡುವುದೇ ಉಲ್ಲೋಕಿತ. ದೂರದಲ್ಲಿರುವ ವಸ್ತುವನ್ನು ಮೇಲಿಂದ ಕೆಳಗೆ ನೋಡುತ್ತಿರುವುದು ಅನುವೃತ್ತ. ಕೆಳಗಡೆ ನೋಡುವುದು ಅವಲೋಕಿತ. ಹೀಗೆ ನೃತ್ಯ ನಾಟ್ಯಗಳಲ್ಲಿ ಎಂಟು ವಿಧ ದರ್ಶನ ಭೇದಗಳಿವೆ. ವೇಪನ, ಚಲನ, ಪಾತ, ಭ್ರಮಣ, ಪ್ರವೇಶನ, ನಿವರ್ತನ, ನಿಷ್ಕ್ರಾಮ, ಸಮುದ್ವೃತ್ತ, ಪ್ರಾಕೃತ, ಇವು ಒಂಭತ್ತು ಕನೀನಿಕೆಯ ಚಲನೆಯ ಅಭಿನಯಗಳು. ಕಣ್ಣುಗುಡ್ಡೆಯನ್ನು ಮೆಲ್ಲನೆ ಚಲಿಸುವುದು ವೇಪನ. ಅಡ್ಡಕ್ಕೆ ತಿರುಗಿ ನೋಡುವುದೇ ವಲನ. ಕಣ್ಣುಪಾಪೆ ಇಳಿಬಿದ್ದಹಾಗೆ ನೋಡುವುದೇ ಪಾತ, ಕಣ್ಣುಪಾಪೆ ಒಳಗೆ ತಿರುಗುತ್ತಿದ್ದರೆ ಅಂದರೆ ಕಣ್ಣುಗುಡ್ಡೆಗಳನ್ನು ಮಂಡಲಾಕಾರವಾಗಿ ಸುತ್ತುತ್ತಾ ನೋಡುವುದೇ ಭ್ರಮಣ. ಕಣ್ಣುಗುಡ್ಡೆಗಳನ್ನು ಒಳಗೆ ಸೇರಿಸಿಕೊಳ್ಳುವುದು ಪ್ರವೇಶ. ಕಡೆಗಣ್ಣಿನಿಂದ ನಿವಾರಿಸುವಂತೆ ಕಾಣುವುದು ನಿವರ್ತನ. ಕಣ್ಣುಗುಡ್ಡೆಯು ಹೊರಗೆ ಕಾಣುವಂತೆ ಮಾಡುವುದೇ ನಿಷ್ಕ್ರಾಮ, ಕಣ್ಣುಗುಡ್ಡೆಗಳನ್ನು ಮೇಲಕ್ಕೆತ್ತಿ ನೋಡುವುದು ಸಮುದ್ವೃತ್ತ. ಸ್ವಾಭಾವಿಕವಾಗಿ ನೋಡುವ ನೋಟವೇ ಪ್ರಾಕೃತ.

निष्क्रामं चलनं चैव करुणे च भयानके ।
हास्ये रसे च बीभत्से प्रवेशनमुदाहृतम् ॥
निष्क्रामश्चलनोद्वृत्तिर्भ्रमणं रौद्रवीरयोः ।
करुणे पातनं कार्यं निष्कामश्चाद्भुते रसे ॥
तारकर्मेति कथितं रसभावसमाश्रयम् ।[१३१]

[131] ಶಿವತತ್ತ್ವರತ್ನಾಕರ – (ಸಂ) ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ್, ಸಂಪುಟ 1 ಮತ್ತು 2, – ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ – 1999.

ನಿಷ್ಕ್ರಾಮ ಮತ್ತು ಚಲನ ಇವೆರಡು ತಾರಕದ ಕರ್ಮಗಳು ಕರುಣ ಮತ್ತು ಭಯಾನಕ ರಸಗಳಲ್ಲಿ; ಪ್ರವೇಶವು ಹಾಸ್ಯ ಮತ್ತು ಬೀಭತ್ಸ ರಸಗಳಲ್ಲಿ; ನಿಷ್ಕ್ರಾಮ – ಚಲ – ಉದ್ವೃತ್ತ – ಭ್ರಮಣ ಎಂಬ ಕನೀನಿಕೆಯ ಪ್ರಭೇದಗಳಿವೆ. ರೌದ್ರ ಮತ್ತು ವೀರರಸಗಳಲ್ಲೂ ಪಾತವು ಕರುಣ ರಸದಲ್ಲಿ, ಅದ್ಭುತ ರಸದಲ್ಲಿ ನಿಷ್ಕ್ರಾಮ ತಾರಕರ್ಮವೂ ಪ್ರಯೋಗಿಸಲ್ಪಡುತ್ತವೆ. ಇವು ರಸಭಾವಗಳನ್ನು ಆಶ್ರಯಿಸಿದ ತಾರಕರ್ಮಗಳು. ವಿವರ್ತಿತ, ಉನ್ಮೇಷ, ಪಿಹಿತ, ಕುಂಚಿತ, ಸಮ, ವಿಚಾಲಿತ, ಸ್ಫುರಿತ, ನಿಮೇಷ ಮತ್ತು ಪ್ರಹೃತ ಎಂಬ ಒಂಬತ್ತು ತಾರಾಪುಟದ ಪ್ರಭೇದಗಳೆನಿಸುತ್ತ ಸ್ವಲ್ಪ ಮೇಲಕ್ಕೆತ್ತಿದ ತಾರಕೆಗಳು ವಿಚಾಲಿತ ಎರಡೂ ಕಣ್ಣು ರೆಪ್ಪೆಗಳು ಅಗಲವಾಗಿ ತೆರೆದಿರುವಿಕೆಯೇ ಉನ್ಮೇಷ. ಕಣ್ಣು ಮುಚ್ಚುವುದು ಪಿಹಿತ್ಯ ಪಾಪೆಗಳನ್ನು ಸಂಕುಚಿತಗೊಳಿಸುವುದು ಕುಂಚಿತ, ಸ್ವಾಭಾವಿಕವಾಗಿ ಕಣ್ಣುಗುಡ್ಡೆಗಳಿರುವುದು ಸಮ, ಸಂಕುಚಿತಗೊಳಿಸುವುದು ಕುಂಚಿತ, ಸಹಜವಾಗಿ ನೋಡುವುದು ಸಮ, ಓಲಿಕೊಂಡಿರುವುದು ವಿಚಾಲಿತ, ಸ್ವಲ್ಪ ಅದಿರುತ್ತಿದ್ದರೆ ಸ್ಫುರಿತ, ಕಣ್ಣುಗಳನ್ನು ತುಸು ಮುಚ್ಚುವುದು ನಿಮೇಷ. ಪೂರ್ಣವಾಗಿ ತೆರೆಯುವುದು ಪ್ರಸೃತ.[132]

ಕೋಪದಲ್ಲಿ ನಿಮೇಷೋನ್ಮೇಷದಿಂದ ಕೂಡಿದ ವಿವರ್ತಿತವೂ, ವೀರ, ವಿಸ್ಮಯ, ಸಂತೋಷದಲ್ಲಿ ಪ್ರಸೃತವೂ, ಗಂಧ ಸ್ಪರ್ಶರಸ ಮುಂತಾದ ವಿಷಯ ಸುಖಾಸ್ವಾದದ ಅಭಿನಯದಲ್ಲಿ ನಿಕುಂಚಿತ ನಿಮೇಷಗಳೂ, ಅನರ್ಥವನ್ನಭಿನಯಿಸುವಾಗ ಸ್ಫುರಿತವೂ ಶೃಂಗಾರ ರಸದಲ್ಲಿ ಸಮ ತಾರಾ ಪುಟಗಳೂ ಇರಬೇಕು. ಹೊಗೆ ಬಂದಾಗ ಉಣ್ಣ, ವಾತ, ಮೂರ್ಛೆ ಮುಂತಾದ ಕಡೆ ಪಿಹಿತವೂ ಅವಗಡ ಅಭಿಘಾತಗಳಲ್ಲಿ ವಿಚಾಲಿತ ಕನೀನಿಕೆಯೂ ಇರಬೇಕೆಂದು ಗೊತ್ತಿರುವವರ ಅಭಿಪ್ರಾಯವಿದೆ. ಇವು ತಾರಾಪುಟದಲ್ಲಿ ಪ್ರದರ್ಶಿಸಲ್ಪಡುವ ರಸಭಾವಗಳು.

भ्रुकुटिः कुञ्चितः चैव रेचितं पातनं तथा ॥
उत्क्षेपं सहजं चैव् चतुरं चेति सप्तधा ।
भ्रूमध्यमूलविक्षेपो भ्रुक्रुटिः कथिता बुधैः ॥ [१३३]

---

[132] विवर्तितं तथोन्मेषः पिहितं कुञ्चितम् समम् ॥
विचालितं च स्फुरितं निमेषः प्रसृतं तथा ।
विवर्तितं समुद्वृत्तमुन्मेषः पुटयोः पुनः ॥
विश्लेषस्तु परिज्ञेयः पिहितं स्थगितं भवेत् ।
अञ्चितं कुञ्चितं स्यात्तु समम् नैसर्गिकम् मतम् ॥
विचालितम् वाहितं स्यात् स्पंदितम् भवेत् ।
निमीलितं निमेषः स्यात् प्रसृतं च प्रसारितम् ॥

[133] ಶಿವತತ್ತ್ವರತ್ನಾಕರ – (ಸಂ) ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ್, ಐದು ಸಂಪುಟಗಳು, ದರೇಸಾ ಪ್ರಕಾಶನ, ಬೆಂಗಳೂರು –2013.

ಹುಬ್ಬಿನ ಅಭಿನಯದಲ್ಲಿ ಏಳು ವಿಧಗಳಿವೆ ಅವು ಭ್ರುಕುಟಿ, ಕುಂಚಿತ, ರೇಚಿತ, ಪಾತನ, ಉತ್ಕ್ಷೇಪ ಸಹಜ ಮತ್ತು ಚತುರ. ಹುಬ್ಬುಗಳ ಮಧ್ಯ ಮತ್ತು ಬುಡ ಇವನ್ನು ಸ್ಪಂದಿಸುವುದನ್ನು ಭ್ರುಕುಟಿ ಎನ್ನುತ್ತಾರೆ. ಒಂದು ಹುಬ್ಬನ್ನಾಗಲಿ ಎರಡೂ ಹುಬ್ಬುಗಳನ್ನಾಗಲಿ ಮೃದುವಾಗಿ ಬಗ್ಗಿಸುವುದು ಕುಂಚಿತ. ಒಂದು ಹುಬ್ಬನ್ನು ಶೃಂಗಾರದಿಂದ ಮೇಲಕ್ಕೆ ಏರಿಸುವುದು ರೇಚಿತ. ಒಂದು ಹುಬ್ಬನ್ನು ಅಥವಾ ಎರಡನ್ನೂ ಕೆಳಮುಖವಾಗಿ ಬಾಗಿಸುವುದು ಪಾತನ. ಒಂದೊಂದೇ ಹುಬ್ಬನ್ನು ಅಥವಾ ಎರಡನ್ನೂ ಮೇಲಕ್ಕೆ ಎತ್ತಿ ನೋಡುವುದು ಉತ್ಕ್ಷೇಪ.

ಸಹಜ ಎಂದರೆ ಸ್ವಾಭಾವಿಕ ಹುಬ್ಬಿನ ಅಭಿನಯ. ಒಂದು ಮೇಲೆ ಒಂದು ಕೆಳಗೆ ಮೃದು ದೀರ್ಘವಾಗಿರುವಂತೆ ಇರುವ ಹುಬ್ಬುಗಳ ಅಭಿನಯ ಚತುರವೆನಿಸುತ್ತದೆ. ಸಮಯ, ಸಂದೇಹ ಕೋಪಗಳಲ್ಲಿ ಕಂಡು ಕೇಳುವುದರಲ್ಲಿ, ವಿಲಾಸ ಭಂಗಿಯಲ್ಲಿ ಸಹಜ ಸ್ಥಿತಿಯಲ್ಲಿ ಒಂದು ಹುಬ್ಬನ್ನು ಮಾತ್ರ ಮೇಲೆ ತಿರುಗಿಸಬೇಕು. ಕೋಪ, ಆಶ್ಚರ್ಯ ಸಂತೋಷಗಳಲ್ಲಿ ಎರಡೂ ಹುಬ್ಬುಗಳ ಉತ್ಕ್ಷೇಪ, ಹಾಸ್ಯ, ಮತ್ಸರ, ಜುಗುಪ್ಸೆಗಳಲ್ಲಿ ಮತ್ತು ಮೂಸುವಾಗಿನ ಅಭಿನಯದಲ್ಲಿ ಎರಡೂ ಹುಬ್ಬುಗಳ ಪಾತನ. ಕ್ರೋಧ ಮತ್ತು ಹಲವು ವಿಧದ ಕೋಪ ಪ್ರಸಂಗಗಳಲ್ಲಿ ಹುಬ್ಬುಗಳು ಗಂಟಿಕ್ಕಿಕೊಳ್ಳತ್ತವೆ. ಸುಖ ಸ್ಪರ್ಶ, ಶೃಂಗಾರ ಮತ್ತು ವಿಲಾಸದ ಸಂದರ್ಭಗಳಲ್ಲಿ ಚತುರ ಎಂಬ ಭ್ರೂಭೇದ, ಮೂರ್ಛೆ, ವಿಲಾಸ, ಕಿಲಿಕಿಂಚಿತ ನೃತ್ಯಗಳಲ್ಲಿ ಕುಟ್ಟಮಿತ ಎಂಬ ರತಿ ಪ್ರಭೇದದಲ್ಲಿ ವಿಕುಂಚನವಿರುತ್ತದೆ. ಯಾವುದೇ ಒಂದು ನೆಪದಿಂದ ನೋಟ ಕೆಳಗಾದಾಗ ರೇಚಿತ ಎಂಬ ಭ್ರೂಭಂಗಿಯ ವಿನಿಯೋಗ ಮಾಡಲಾಗುವುದೆಂದು ತಜ್ಞರ ಅಭಿಪ್ರಾಯ, ಉದ್ಧತವಲ್ಲದ, ತೀರಸಾಮಾನ್ಯ ಭಾವಾಭಿನಯದಲ್ಲಿ ಸ್ವಾಭಾವಿಕವಾದ ಭ್ರೂಭಂಗಿ ಇರುತ್ತದೆ. ಇವು ಏಳು ಹುಬ್ಬುಗಳ ವಿಲಾಸದ ವಿನಿಯೋಗವೆಂದು ತಿಳಿಯುವುದು.

- ವಿಭ್ರಃ ಕಿಲಿಕಿಂಚಿತಂ, ಸಲ್ಲಮರ್ದೇ$\text{ऽ}$ಪಿ ಸುಖಾಧಿಕ್ಯಂರತೌ ಕುಟ್ಟಮಿತಂ ಮತಃ ಎಂಬ ಇವು ಕಿಲಿಕಿಂಚ ಮತ್ತು ಕುಟ್ಟಿಮಿತಗಳ ಲಕ್ಷಣ.

स्वाभाविकी नता मन्दास्छवासा च निकूणिता ॥

विकृष्टा चेति निर्दिष्टा नासिका षड्विध बुदै:। [134]

---

[134] ಶಿವತತ್ತ್ವರತ್ನಾಕರ – (ಸಂ) ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ್, ಐದು ಸಂಪುಟಗಳು, ದರೇಸಾ ಪ್ರಕಾಶನ, ಬೆಂಗಳೂರು –2013.

ನಾಸಿಕಾಭಿನಯವು ಆರು ವಿಧವಾಗಿವೆ. ಸ್ವಾಭಾವಿಕೀ, ನತಾ, ಮಂದಾ, ಸೋಚ್ಛ್ವಾಸಾ, ನಿಕೂಣಿತಾ ಮತ್ತು ವಿಕೃಷ್ಟಾ. ಎಂದು ನಾಟ್ಯಾಚಾರ್ಯರರು ಹೇಳುತ್ತಾರೆ. ಮೂಗಿನ ಹೊಳ್ಳೆಗಳು ಎರಡೂ ಸಮವಾಗಿರುವುದು, ಸ್ವಾಭಾವಿಕೀ, ಎರಡೂ ತುಸು ಬಗ್ಗಿ ಒಂದಕ್ಕೊಂದು ಶ್ಲಿಷ್ಟವಾಗಿದ್ದರೆ ನತಾ. ಅಲುಗಾಡದೆ ಸ್ಥಿರವಾಗಿದ್ದು, ಕಾಣುವುದು ಮಂದಾ ಗಾಳಿಯಿಂದ ಹೊಳ್ಳೆಗಳು ಏರು ತಗ್ಗಾಗುವುದು ಸೋಚ್ಛ್ವಾಸಾ, ಮೂಗಿನ ಹೊಳ್ಳೆಗಳು ಸಂಕೋಚಗೊಳ್ಳುವುದು ವಿಕೂಣಿತಾ. ಎರಡು ಹೊಳ್ಳೆಗಳು ಅರಳಿಕೊಂಡಿದ್ದರೆ ವಿಕೃಷ್ಟಾ. ಹೀಗೆ ನಾಟ್ಯಶಾಸ್ತ್ರಜ್ಞರು ಆರು ವಿಧವಾದ ನಾಸಾಭೇದವನ್ನು ಗುರುತಿಸುತ್ತಾರೆ. ಅಳುವುದು, ಮೂಕ ವೇದನೆಗಳಲ್ಲಿ, ವಿಚ್ಛೇದಗಳಲ್ಲಿ ಸೋಚ್ಛ್ವಾಸಾ ಎಂಬ ನಾಸಿಕಾಃ ಉತ್ಸುಕತೆ ಮತ್ತು ಮಾನಸಿಕ ವೈರಾಗ್ಯ ಮತ್ತು ದುಃಖ ಇವುಗಳಲ್ಲಿ ಮಂದಾಃ ತೀಕ್ಷ್ಣವಾದ ವಾಸನೆಯನ್ನು ಅಭಿನಯಿಸುವಾಗ ಕೋಪ ಆಶ್ವಾಸನೆ ಭಯ ಮತ್ತು ಪೀಡೆ ವೇದನೆಗಳ ಅಭಿನಯದಲ್ಲಿ ವಿಕೃಷ್ಟಾ. ಸುವಾಸನೆಯನ್ನು ಅನುಭವಿಸುವಾಗ, ನಿಟ್ಟುಸಿರು ಬಿಡುವಾಗ ಸೋಚ್ಛ್ವಾಸಾ ಎಂಬ ನಾಸಿಕಾ ಭೇದ, ಅಸೂಯೆ, ಜುಗುಪ್ಸೆ ಮತ್ತು ಹಾಸ್ಯಗಳಲ್ಲಿ ವಿಕೂಣಿತಾ ನಾಸಿಕಾ, ಉಳಿದ ಭಾವಾಭಿನಯದಲ್ಲಿ ನಾಸಿಕದ ಸ್ಥಿತಿ ಸಹಜವಾಗಿರುವುದು.

इति षोढा समुद्दिष्टो ग्न्ड्स्तल्लक्ष्य कथ्यते ।[135]

कम्पितः कुञ्चितः क्षामः फुल्लः पूर्णः समस्तथा ॥

ಗಂಡಸ್ಥಲದ ಅಭಿನಯದಲ್ಲಿ ಆರು ವಿಧಗಳಿವೆ. ಕಂಪಿತ, ಕುಂಚಿತ, ಕ್ಷಾಮ, ಫುಲ್ಲ, ಪೂರ್ಣ, ಸಮ. ಎಂದು ಇವುಗಳ ಲಕ್ಷಣ ಏನೆಂದರೆ – ಕಪೋಲವನ್ನು ಅದಿರಿಸುವಿಕೆ, ಕಂಪಿತ, ಸಂಕುಚಿತಗೊಳಿಸುವುದು ಕುಂಚಿತ ಕಪೋಲವನ್ನು ಕೆಳಗೆ ಬಾಗಿಸುವುದು ಕ್ಷಾಮ; ಕಪೋಲ ಅರಳಿಸುವುದು ಫುಲ್ಲ. ಕಪೋಲವು ಉನ್ನತವಾಗಿರುವುದು ಪೂರ್ಣ, ಸ್ವಾಭಾವಿಕವಾದ ಕಪೋಲದ ಸ್ಥಿತಿ, ಸಮ ಎಂಬುದಾಗಿದೆ. ಹೀಗೆ ಇವು ಆರು ಗಂಡ ಭೇದಗಳನ್ನು ಪ್ರಾಚೀನರು ಹೇಳುತ್ತಾರೆ. ದುಃಖದಲ್ಲಿ ಕ್ಷಾಮ ಎಂಬ ಕಪೋಲ ಸ್ಥಿತಿಯೂ ಸಂತೋಷದಲ್ಲಿ ಫುಲ್ಲವೂ ಉತ್ಸಾಹ ಗರ್ವಗಳಲ್ಲಿ ಪೂರ್ಣವೂ, ದುಃಖ ಹರ್ಷಗಳಲ್ಲಿ ಕಂಪಿತವೂ, ಶೀತ, ಜ್ವರ, ಭಯ, ಸ್ಪರ್ಶಾನುಭಾವ, ರೋಮಾಂಚಕ ಇವುಗಳಲ್ಲಿ ಕುಂಚಿತ ಕಪೋಲವೂ, ಉಳಿದ ಭಾವಗಳಲ್ಲಿ ಕಪೋಲಗಳು ಪ್ರಕೃತಿ ಸ್ಥಾನದಲ್ಲೂ ಇರುತ್ತವೆ. (ಅಂದರೆ ಸಮಸ್ಥಿತಿ)

विवर्तितं विसर्गश्च कम्पनं विनिगूहनम् ॥

---

[135] ಶಿವತತ್ತ್ವರತ್ನಾಕರ – (ಸಂ) ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ್, ಐದು ಸಂಪುಟಗಳು, ದರೇಸಾ ಪ್ರಕಾಶನ, ಬೆಂಗಳೂರು –2013.

सन्दष्टकसमुद्गौ च् षोढा कर्माधरायम् । [136]

ತುಟಿಯ ಅಭಿನಯಗಳು ಆರು ವಿವರ್ತಿಕ, ವಿಸರ್ಗ, ಕಂಪನ, ವಿನಿಗೂಹನ, ಸಂದಷ್ಟ, ಸಮುದ್ಗ, ತುಟಿಯನ್ನು ಕೆಳಗೆ ತಿರುಗಿಸುವುದು ವಿವರ್ತಿತ, ತುಟಿಯನ್ನು ಹೊರಗೆ ಚಾಚುವುದು ವಿಸರ್ಗ, ಅದುರಿಸುವುದು ಕಂಪನ, ಒಳಗೆಳೆದುಕೊಳ್ಳುವುದು ವಿನಿಗೂಹ, ತುಟಿಯನ್ನು ಹಲ್ಲುಗಳಿಂದ ಕಚ್ಚುವುದು ಸಂದಷ್ಟ, ಎರಡೂ ತುಟಿಗಳನ್ನು ಒತ್ತಾಗಿ ಸೇರಿಸುವುದು ಸಮುದ್ಗ. 99ಉ–101ಪೂ

अवज्ञावेदनासूयाहास्यादौ स्याद्विवर्तितम् ॥

जये रोषे भये श्रान्ते वेदनादौ च कम्पितम्।

आयासे विलासे च रञ्जनादौ च गूहनम्॥

क्रोधकर्मणि सन्दष्टं समुद्गं चुम्बनादिषु।

ತಿರಸ್ಕಾರ, ವೇದನೆ, ಮತ್ಸರ, ಹಾಸ್ಯಾದಿಗಳಲ್ಲಿ ವಿವರ್ತಿತಾಧರವೂ, ಜಯ, ಸಿಟ್ಟು, ಭಯ, ಬಳಲಿಕೆ, ವೇದನೆ ಮುಂತಾದವುಗಳಲ್ಲಿ ಕಂಪಿತಾಧರವೂ, ಆಯಾಸ, ವಿಲಾಸ, ರಂಜನೆ ಮುಂತಾದವುಗಳಲ್ಲಿ ಗೂಹನವೂ, ಸಿಟ್ಟು ಬಂದಾಗ ಸಂದಷ್ಟವೂ, ಮುದ್ದಿಸುವ, ಮುಂತಾದ ಶೃಂಗಾರ ಚೇಷ್ಟೆಗಳಲ್ಲಿ ಸಮುದ್ಗ ಎಂಬ ಆಧಾರದ ಅಭಿನಯವೂ ವಿಹಿತವಾಗಿದೆ. 102ಉ–103ಪೂ

खन्डनं कुट्टनम् छिन्नम् लेहनं धुरितं समम् ॥

दुष्टं च दन्तयोगेन चुबुकं सप्त्धा भवेत्। [137]

ಗದ್ದದ ಅಭಿನಯಗಳು ಆರು ಖಂಡನ, ಕುಟ್ಟನ, ಛಿನ್ನ, ಲೇಹನ, ಛುರಿತ, ಸಮ, ಹಲ್ಲುಗಳ ಸಂಯೋಗದಿಂದ ದಷ್ಟ. ಕೋಪದಲ್ಲಿ ಕಡಿಯುವುದು, ಹಲ್ಲುಗಳಲ್ಲಿ ಕಟಕಟ ಶಬ್ದಮಾಡುವುದು ಕುಟ್ಟಿನ, ಭಯ, ವ್ಯಾಧಿ, ಮುಪ್ಪು, ಚಳಿ ಇವುಗಳಿಂದ ಪೀಡಿತರಾದವರಲ್ಲಿ ಕುಟ್ಟಿನದ ಅಭಿನಯ, ವ್ಯಾಯಾಮ, ರೋದನ, ಶೀತ, ವ್ಯಾಧಿ, ಭಯಾದಿಗಳಲ್ಲಿ ಛಿನ್ನವೂ, ನೆಕ್ಕುವ ಅಭಿನಯದಲ್ಲಿ ಲೇಹನವೂ, ಆಕಳಿಕೆಯಲ್ಲಿ ಛುರಿತವೂ ಇತರ ಸಹಜವಾದ ಭಾವ ಅಭಿನಯದಲ್ಲಿ ಸಮವೂ, ಕೋಪ ಬಂದಾಗ ಸಂಕಷ್ಟವೂ ಇರುತ್ತದೆ. ಹೀಗೆ ನಾಲಿಗೆ ತುಟಿ, ಹಲ್ಲುಗಳ ವಿನಿಯೋಗಗಳು.

---

[136] ಶಿವತತ್ತ್ವರತ್ನಾಕರ – (ಸಂ) ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ್, ಐದು ಸಂಪುಟಗಳು, ದರೇಸಾ ಪ್ರಕಾಶನ, ಬೆಂಗಳೂರು –2013.

[137] ಶಿವತತ್ತ್ವರತ್ನಾಕರ – (ಸಂ) ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ್, ಸಂಪುಟ 1 ಮತ್ತು 2, – ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ – 1999.

ನಾಲ್ಕು ವಿಧದ ಮುಖ ಭಾವಗಳು ಶ್ಯಾಮ, ರಕ್ತ, ಪ್ರಸನ್ನ ಮತ್ತು ಸ್ವಾಭಾವಿಕ. ಭೀಭತ್ಸ ಮತ್ತು ಭಯಾನಕ ರಸಗಳಲ್ಲಿ ಮುಖ ಕಪ್ಪಾಗುವುದು, ಮದ, ವೀರ, ರೌದ್ರಗಳಲ್ಲಿ ಮುಖವು ಕೆಂಪಾಗಿ ಕಾಣುತ್ತದೆ. ಅದ್ಭುತ ದರ್ಶನದಲ್ಲಿ ಮುಖಭಾವವು ಪ್ರಸನ್ನವದನವಾಗಿಯೂ ಇರುವುದು. ಉಳಿದ ಕಡೆ ಮುಖದ ಭಾವ ಸಹಜವಾಗಿರುತ್ತದೆ. ಕುತ್ತಿಗೆಯ ಅಭಿನಯವು ಶಿರಸ್ಸಿನ ಚಲನೆಯಾಗಿದೆ. ಆದ್ದರಿಂದ ಕಂಧರದ (ಕುತ್ತಿಗೆಯ) ಅಭಿನಯವನ್ನು ಪ್ರತ್ಯೇಕವಾಗಿ ಹೇಳಿಲ್ಲ. ಇಲ್ಲಿಯವರೆಗೆ ಶೀರ್ಷಾದಿ ಕಂಠಾಂತವಾದ ಅವಯಗಳ ಅಭಿನಯದ ಭೇದಗಳನ್ನು ವಿವರಿಸಿದ್ದಾರೆ.[138]

ಈ ರೀತಿಯಲ್ಲಿ ಆರನೇ ಕಲ್ಲೋಲದ ನಾಲ್ಕನೇ ತರಂಗದಲ್ಲಿ ಶಿರಸ್ಸಿನಿಂದ ಕಂಠದ ಪರ್ಯಂತ ಅಂಗಗಳ ಅಭಿನಯ ವೈವಿಧ್ಯವನ್ನು ಶಾಸ್ತ್ರೋಕ್ತವಾಗಿ ಸವಿವರವಾಗಿ ವಿವರಿಸಲಾಗಿದೆ.

**ಹಸ್ತಾಭಿನಯ ವರ್ಣನೆ:**

ಆರನೆಯ ಕಲ್ಲೋಲದ ಐದನೆಯ ತರಂಗವು ಹಸ್ತಾಭಿನಯ ವರ್ಣನೆಯನ್ನು ಒಳಗೊಂಡಿದ್ದು ಅದರಲ್ಲಿನ ವಿಷಯವಸ್ತುವನ್ನು ಈ ಕೆಳಗಿನಂತೆ ವಿಶದೀಕರಿಸಲಾಗಿದೆ.

अङ्गानां शीर्षमुख्यानां विनियोग उदीरित्अः।

इदानीं शृणु हस्तस्य विनियोगो निरूप्यते ॥[139]

ಇದರಲ್ಲಿ ಶಿರಸ್ಸಿನಾದಿಯಾಗಿ ಮೊದಲಾದ ಅಂಗಗಳನ್ನು ಅಭಿನಯದಲ್ಲಿ ಹೇಗೆ ವಿನಿಯೋಗಿಸಬಹುದು ಎಂದು ಹೇಳಿದೆ. ಈಗ ಹಸ್ತಗಳ ವಿನಿಯೋಗವನ್ನು ಕುರಿತು ವಿವರ.

ವಿಸರ್ಗ, ಧೂನನಂ, ರಕ್ಷಾ, ಸಂಶ್ಲೇಷ, ಮೋಕ್ಷಣ, ವಿಕ್ಷೇಪ, ಆಂದೋಲನ, ನಿಗ್ರಹ, ಪರಿಗ್ರಹ, ಆಕರ್ಷಣ, ವಿಕರ್ಷ, ವಿಯೋಗ, ಉತ್ಕರ್ಷಣ, ತಾಡನ, ಮೋಚನ ಭೇದ, ಛೇದನ, ಸ್ಫುಟನ, ಆಹ್ವಾನ,

---

[138] श्यामं रक्तं प्रसन्नं च तुर्तं स्वाभाविकम् मुखम् ॥
श्यामं तु जायते वक्त्रं बीभत्से च भयानके ।
मदे वीरे च रौद्रे च जायते रक्तमानम् ॥
प्रसन्नमद्भुते वक्त्रं हास्यश्रुङ्गारयोरपि ।
स्वरूपावस्थितं वक्त्रं भवेत् स्वाभाविकं पुनः ॥
कन्धरायास्त्रु कर्माणि शिरः कर्मानुगानि यत् ।
अतस्तस्या मया कर्म पृथग्नेह प्रदश्यर्ते ॥
इति शीर्षादिकण्टान्तमंगानां कर्म वर्णितम् ।

[139] ಶಿವತತ್ತ್ವರತ್ನಾಕರ – ಸಂಪುಟ 1 – ಸಂ: ಎಸ್.ನಾರಾಯಣ ಶಾಸ್ತ್ರಿ ಮತ್ತು ಆರ್. ರಾಮಾಶಾಸ್ತ್ರಿ, ಪ್ರಾಚ್ಯವಿದ್ಯಾ ಸಂಶೋಧನಾ ಕೇಂದ್ರ, ಮೈಸೂರು ವಿಶ್ವವಿದ್ಯಾಲಯ, ಮೈಸೂರು –1964.(6–5–1)

ತರ್ಜನ ಎಂದು ಇಪ್ಪತ್ತು ವಿಧದ ಹಸ್ತಕರ್ಮಗಳಿವೆ, ಇವುಗಳ ಹೆಸರಿನಂತೆಯೇ ಅಂದರೆ ಅರ್ಥಾನುಸಾರಿಯಾಗಿಯೇ ಸಂಜ್ಞೆಗಳಿರುವುದರಿಂದ ಪ್ರತ್ಯೇಕ ಲಕ್ಷಣಗಳನ್ನು ಹೇಳಬೇಕಾಗಿಲ್ಲ, ಅಂದರೆ ವಿಸರ್ಗ ಬಿಡುವುದು, ಧೂನನ–ಅಲುಗಾಡಿಸುವುದು. ರಕ್ಷಾ – ಅಭಯ, ಸಂಶ್ಲೇಷ, ಹಿಡಿಯುವುದು, ಮೋಕ್ಷಣ ಹಿಡಿದುದನ್ನು ಬಿಡುವುದು. ವಿಕ್ಷೇಪ – ಬಿಸಾಡುವುದು ಇತ್ಯಾದಿ.

ಕೈಗಳನ್ನು ಕಿವುಚಿ ಹಿಡಿಯುವುದು, ಅಂಗಾತ್ತನೆ ಹಿಡಿಯುವುದು ಮತ್ತು ಪಾರ್ಶ್ವಮುಖವಾಗಿ ತೋರಿಸುವುದು ಎಂದು ಮೂರು ವಿಧವಾಗಿ ಕೈಗಳ ಅಭಿನಯ ನಾಟ್ಯ ಮತ್ತು ನೃತ್ತಗಳಲ್ಲಿವೆ. ಕರಗಳ ಲಕ್ಷಣಗಳಲ್ಲಿ ನಾಲ್ಕು ವಿಧಗಳಿವೆ. ಆವೇಷ್ಟಿತ, ಉದ್ವೇಷ್ಟಿತ ವ್ಯಾವರ್ತಿತ ಮತ್ತು ಪರಿವರ್ತಿತ. ತೋರು ಬೆರಳು ಮುಂತಾದ ನಾಲ್ಕು ಬೆರಳುಗಳೂ ಒಳಮುಖವಾಗಿ ಮಡಚಿಕೊಂಡಿರುವುದು ಆವೇಷ್ಟಿತ. ತೋರು ಬೆರಳು ಮುಂತಾದವು ಹೊರಮುಖವಾಗಿ ಚಾಚಿಕೊಂಡಿರುವುದು, ಹಿಮ್ಮುಖವಾಗಿ ಬೆರಳು ನಿಂತುಕೊಂಡಿರುವುದು ವ್ಯಾವರ್ತಿತ. ಕಿರುಬೆರಳು ಮೊದಲಾದುವು ಕ್ರಮವಾಗಿ ಹೊರಗೆ ತಿರುಗಿಸುವುದು ಪರಿವರ್ತಿತ. ಬಾಹುಗಳನ್ನಾಶ್ರಯಿಸಿದ ಅಭಿನಯಗಳು ಹತ್ತು, ಊರ್ಧ್ವ, ಪ್ರಸಾರಿತ, ತಿರ್ಯಕ್, ಅಂಚಿತ, ಅಧೋಮುಖ, ಸ್ವಸ್ತಿಕ, ಮಂಡಲಗತಿ, ಅಪವಿದ್ಧ, ಪೃಷ್ಠಾನುಸಾರಿತ ಮತ್ತು ಉದ್ವೇಷ್ಟಿತ.

चतुरश्रौकरौ पूर्वमुद्वृताख्यौ ततः परम् ।
ततस्तलमुखौ ज्ञेयौ स्वस्तिकौ विप्रकीर्णकौ ॥
अरालकटकावक्त्रौ ततश्टाविद्धव्क्त्रौ ।
सूच्यास्यौ रेचितास्यौ च भवेतामर्धरेचितौ ॥
उत्तानवञ्चितौ चान्यौ पल्लवौ च नितम्बकौ ।
केशब्न्धौ लताख्यौ च करिहस्तावतः परम् ॥
पक्षवञ्चितनामानौ पक्षप्रोध्यतकौ ततः ।
ताक्षर्यपक्षौ करौ स्यातां दंडपक्षौ प्रकीर्तित् ॥
ऊर्ध्वमण्डलिनौ हस्तौ पार्श्वमण्डलिनावपि ।
उरॊमण्डलिनावन्या वुरः पार्श्वार्धम्ण्डलौ ॥
मुष्टिकस्वस्तिकौ हस्तौ न्लिनीपद्मकोशौ ।

ललितौ बलितौ ख्यातावलपद्मौ तथोल्बणौ ॥

नृत्तहस्ता इमे प्रोक्ताः संयुक्ता नृत्यवेदिभिः। [140]

ಮೂವತ್ತು ನೃತ್ತದ ಸಂಯುಕ್ತ ಹಸ್ತಗಳು ಇಂತಿವೆ, ಚತುರಶ್ರಕರ, ಉದ್ವೃತ್ತ (ಎಂಬುದೊಂದು) ತಲಮುಖ, ಸ್ವಸ್ತಿಕ, ವಿಪ್ರಕೀರ್ಣಕ, ಅರಾಲ – ಕಟಕಾವಸ್ತ್ರ, ಅವಿದ್ಧವಕ್ತ್ರಕ, ಸೂಚೀಮುಖ, ರೇಚಿತ (ಅರ್ಧರೇಚಿತ) (ಉತ್ತಾನವಂಚಿತ) ಪಲ್ಲವ, ನಿತಂಬಕ, ಕೇಶಬಂಧ ಲತಾ, ಕರಿಹಸ್ತ, ಪಕ್ಷವಂಚಿತ. ಪಕ್ಷ ಪ್ರದ್ಯೋತಕ, ತಾರ್ಕ್ಷ್ಯಪಕ್ಷ, ದಂಡಪಕ್ಷ ಊರ್ಧ್ವಮಂಡಲಿ, ಪಾರ್ಶ್ವಮಂಡಲಿ, ಉರೋಮಂಡಲಿ, ಉರಃಪಾರ್ಶ್ವರ್ಧ ಮಂಡಲ, ಮುಷ್ಟಿಕ ಸ್ವಸ್ತಿಕ, ನಲಿನೀಪದ್ಮಕೋಶ, ಲಲಿತ, ವಲಿತ, ಅಲಪದ್ಮ, ಉಲ್ಬಣ. ಇವುಗಳಲ್ಲಿ ಅರ್ಧರೇಚಿತ ಮತ್ತು ಉತ್ತಾನವಂಚಿತ ಹಸ್ತಗಳ ಲಕ್ಷಣಗಳು ಇಲ್ಲಿ ಲುಪ್ತವಾಗಿವೆ. ಒಟ್ಟಿಗೆ ನೃತ್ತಹಸ್ತಗಳಾಗಿರುತ್ತವೆ. ಭರತ ನಾಟ್ಯಶಾಸ್ತ್ರದಲ್ಲೂ ಈ ಮೂವತ್ತು ನೃತ್ತಹಸ್ತಗಳ ಉಲ್ಲೇಖವಿದೆ. ಅರ್ಧರೇಚಿತ ಮತ್ತು ಉತ್ತಾನವಂಚಿತಗಳ ಹಸ್ತಲಕ್ಷಣಗಳು ಸಂಗೀತ ರತ್ನಾಕರದಲ್ಲಿ ಉಕ್ತವಾಗಿವೆ. ಅವು ಭರತನ ನಾಟ್ಯಶಾಸ್ತ್ರದಲ್ಲೂ ಇವೆ.

ಎದೆಯ ಮೇಲೆ ಪರಸ್ಪರ ಎಂಟು ಅಂಗುಲ ದೂರವಿರುವಂತೆ ಹೆಗಲಿನ ಹತ್ತಿರ ಎರಡು ಕೈಗಳನ್ನು ಚಾಚಿ (ಕೂರ್ಪರ ತೋರುವ ಹಾಗೆ) ಇಡುವುದು, ಕಟಕಾ ಮುಖದಂತೆ ಇಡುವುದು ಚತುರ. ಬೀಸಣಿಗೆಯ ಹಾಗೆ ಹಂಸಪಕ್ಷಗಳ ಹಾಗೆ ಎದೆಯ ಮೇಲೆ ಪರಸ್ಪರ ಎದುರು ಬದುರಾಗಿ ಹಸ್ತಗಳನ್ನು ಹಿಡಿಯುವುದು ಉದ್ವೃತ್ತ. ಎರಡೂ ಹಸ್ತಗಳು ಹಂಸದ ರೆಕ್ಕೆಗಳಂತೆ ಅನ್ಯೋನ್ಯ ಅಭಿಮುಖವಾಗಿರುವುದು ಮಣಿಕಟ್ಟುಗಳ ಹತ್ತಿರ ಹಂಸಪಕ್ಷದ ಮುದ್ರೆಗಳನ್ನು ಸ್ವಸ್ತಿಕಾಕಾರದಲ್ಲಿ ಹಿಡಿದರೆ ಅದೇ ಸ್ವಸ್ತಿಕ. ಎದೆಯ ಮೇಲೆ ಸ್ವಸ್ತಿಕಾಕಾರವಾಗಿ ಹಿಡಿದ ಹಸ್ತಗಳನ್ನು ಮಣಿಗಂಟಿನಿಂದ ಬೇರ್ಪಡಿಸಿ ಹಂಸಪಕ್ಷದ ಮುದ್ರೆ ಮಾತ್ರ ತೋರಿಸಿದರೆ ವಿಪ್ರಕೀರ್ಣ. ಎದೆಯ ಮುಂದೆ ಅಡ್ಡವಾಗಿ ಹಿಡಿದ ಕಟಕಮುಖ, ಇದು ಸಮ್ಮುಖವಾಗಿರಬಹುದು, ಸ್ವಲ್ಪ ಮೇಲ್ಮುಖವಾಗಿದ್ದು ಎದುರು ಬದುರಾಗಿಯೂ ಇರಬಹುದು. ಇದು ಸವ್ಯಾಪಸವ್ಯವಾಗಿದ್ದರೆ ಅರಾಲ ಕಟಕಾಮುಖ.

[140] ಶಿವತತ್ತ್ವರತ್ನಾಕರ – ಸಂಪುಟ 1 – ಸಂ: ಎಸ್.ನಾರಾಯಣ ಶಾಸ್ತ್ರಿ ಮತ್ತು ಆರ್. ರಾಮಾಶಾಸ್ತ್ರಿ, ಪ್ರಾಚ್ಯವಿದ್ಯಾ ಸಂಶೋಧನಾ ಕೇಂದ್ರ, ಮೈಸೂರು ವಿಶ್ವವಿದ್ಯಾಲಯ, ಮೈಸೂರು –1964. (6–5–19)

ಭುಜದ ಬಳಿ ಮುಂಗೈಗಳನ್ನು ವಕ್ರವಾಗಿ ತಲೆಕೆಳಗಾಗಿ ಆವರ್ತಿತವಾಗಿ ಹಿಡಿದರೆ ಅವಿದ್ಧವಕ್ತ್ರಕ ಎಂಬ ಹಸ್ತ. ಮುಂಗೈಯ ಬೆರಳುಗಳನ್ನು ಮಡಚಿ ಹಾವಿನ ಹೆಡೆ ಬಿಡಿಸಿದಂತೆ ಹಿಡಿದು ಮಧ್ಯದ ಬೆರಳು ಮತ್ತು ಅಂಗುಷ್ಠದ ಬೆರಳು ಇವನ್ನು ಬಾಗಿಸಿ ಅಡ್ಡವಾಗಿ ಹಿಡಿಯುವುದು ಸೂಚೀವಸ್ತ್ರ. ಪಾರ್ಶ್ವಗಳಲ್ಲಿ ಹಂಸಪಕ್ಷದಂತೆ ಮಾತ್ರ ಕೈಗಳನ್ನು ತಿರುಗಿಸಿದರೆ ರೇಚಿತ ಎಂಬ ಹಸ್ತ ಎಂಬುದು ನಾಟ್ಯ ವಿಷಾರದರ ಮತ.

**ಅರ್ಧರೇಚಿತ ಹಾಗೂ ಉತ್ತಾನ ವಂಚಿತ  ಹಸ್ತ ಲಕ್ಷಣ :**

ಭರತನ ನಾಟ್ಯಶಾಸ್ತ್ರದಲ್ಲಿ ಮತ್ತು ಶಾರ್ಙ್ಗದೇವನ ಸಂಗೀತ ರತ್ನಾಕರದಲ್ಲಿ ಹೇಳಿದ. ಅರ್ಧರೇಚಿತ. ಉತ್ತಾನ ವಂಚಿತ ಇವೆರಡರ ಲಕ್ಷಣಗಳ ನಾಟ್ಯಶಾಸ್ತ್ರದ ಶ್ಲೋಕಗಳು ಹೀಗಿವೆ:

चतुरस्रो भवेद्वाम सव्यहस्तश्चरेचित:।

विज्ञेयौ वेत्त तत्वज्ञैरर्धरेचित संज्ञकौ ॥

अञ्चिका कूर्परांसौ तु त्रिपताकाकृतौ ककौ।

किञ्चित्तीर्यग्गतावेतौ स्मृतावुत्तान वञ्चितौ ॥

रेचितो दक्षिणो हस्तचतुरश्रं ततः परम् ॥

हस्ताभिनयतत्त्वज्ञैः कथितौ पल्लवौ करौ ।

स्कन्धादूर्ध्वं विनिष्क्रान्तौ त्रिपताकौ क्रौ यदा ॥

नितम्बाविति विख्यातौ नित्म्बे कृतिरेचितौ ।

पार्श्वतः कॆशबन्धाच्च नितम्बा भहुशो यदा॥

तदा हस्त विशेषज्ञैः केशबन्धाविति स्कृतौ ।

त्रिपताकौ यदा हस्तौ पार्श्वदेशप्रसारितौ ॥

भयो भयोपि तत्रैव रेचितौ तौ लताभिदौ ।[141]

[141] ಶಿವತತ್ತ್ವರತ್ನಾಕರ – ಸಂಪುಟ 1 – ಸಂ: ಎಸ್.ನಾರಾಯಣ ಶಾಸ್ತ್ರಿ ಮತ್ತು ಆರ್. ರಾಮಾಶಾಸ್ತ್ರಿ, ಪ್ರಾಚ್ಯವಿದ್ಯಾ ಸಂಶೋಧನಾ ಕೇಂದ್ರ, ಮೈಸೂರು ವಿಶ್ವವಿದ್ಯಾಲಯ, ಮೈಸೂರು –1964. (6–5–33)

ಬಲಹಸ್ತವು ರೇಚಿತ ಮುದ್ರೆಯಿಂದಲೂ ಮತ್ತೊಂದು ಚತುರಸದಲ್ಲೂ ಇದ್ದರೆ ಪಲ್ಲವ ಎಂಬ ಸಂಜ್ಞೆ, ತ್ರಿಪತಾಕಾ ಹಸ್ತ (ಅಂಗೈಯ ಬೆರಳುಗಳನ್ನು ಒಂದಕ್ಕೊಂದು ತಾಗದಂತೆ ಬಿಡಿಸಿ ಹಿಡಿದು ಅನಾಮಿಕಾ ಬೆರಳನ್ನು ಮಾತ್ರ 90° ಯಲ್ಲಿ ಬಾಗಿಸುವ ಮುದ್ರೆ) ಹೆಗಲಿನ ಮೇಲೆ ಹಿಡಿದು ಅದನ್ನು ಕಟಿಯ ಪಶ್ಚಾದ್ಭಾಗದಲ್ಲಿ ಎರಡೂ ಕೈಗಳನ್ನೂ ಹಿಡಿದರೆ ನಿತಂಬ ಎಂಬ ಹಸ್ತವೆನಿಸುವುದು. ನಿತಂಬ ಮುದ್ರೆಯನ್ನೆ ಎಡ – ಬಲ ಬದಿಯಲ್ಲಿ ಕೂದಲನ್ನು ಕಟ್ಟುವ ಭಂಗಿಯಲ್ಲಿ ಹಿಡಿದರೆ ಕೇಶಹಸ್ತ, ತ್ರಿಪತಾಕಾಕರಗಳನ್ನು ಪಾರ್ಶ್ವಗಳಲ್ಲಿ ಬಿಡಿಸಿ ಪುನಃ ಪುನಃ ತಿರುಗಿಸುವುದು ರೇಚಿತ, ಅದೇ ಲತಾ ಎಂಬ ಹಸ್ತವಿಶೇಷವೆನಿಸುವುದು.

ತ್ರಿಪತಾಕ ಕರಗಳು ಕಿವಿಯಬಳಿ ಎರಡೂ ಕಡೆಗಳಲ್ಲಿ ತೂಗುವಂತೆ ಹಿಡಿದರೆ ಕರಹಸ್ತ ಎಂಬ ಮುದ್ರೆಯೆನಿಸುತ್ತದೆ. ತ್ರಿಪತಾಕ ಕರಗಳು ಸೊಂಟ ಮತ್ತು ತಲೆಯ ಬದಿಗೆ ತಾಗುವಂತೆ ಹಿಡಿದರೆ ಪಕ್ಷವಂಚಿತ ಎಂಬ ಮುದ್ರೆ ಮೇಲೆ ಹೇಳಿದ ಹಸ್ತ ಅಭಿನಯವನ್ನೇ ವಿಮುಖವಾಗಿ ಹಿಡಿದರೆ ಪಕ್ಷ ಪ್ರದ್ಯೋತಕ ಎಂಬ ಹಸ್ತವಾಗುತ್ತದೆ. ತ್ರಿಪ್ರತಾಕ ಕರಗಳನ್ನು ಅಥವಾ ಪತಾಕ ಕರಗಳನ್ನು, ಮುಂಗೈಬಾಗುವ ಹಾಗೆ ಕೆಳಮುಖವಾಗಿ ನಿತಂಬದ ಮೇಲೆ ಹಿಡಿದರೆ ತಾರ್ಕ್ಷ್ಯಪಕ್ಷ ಪತಾಕ ಎಂಬ ಹಸ್ತ. ಹಂಸ ಮತ್ತು ಪಕ್ಷ ಎಂಬ ಹಸ್ತಗಳನ್ನು ಅಗಲವಾಗಿ ಭುಜದ ಉದ್ದಕ್ಕೂ ಅಡ್ಡಕ್ಕೆ ಪ್ರಸಾರಣ ಮಾಡಿದರೆ ಅದನ್ನು ದಂಡಪಕ್ಷ ಎಂಬ ಹಸ್ತಭೇದ ಎನ್ನುತ್ತಾರೆ. ಅರಾಲ ಹಸ್ತಗಳನ್ನು ಮೇಲ್ಮುಖವಾಗಿ ಆವರ್ತಿಸುತ್ತಿದ್ದರೆ ಅದನ್ನು ಊರ್ಧ್ವಮಂಡಲಿ ಎಂದು ಕರೆಯುತ್ತಾರೆ. ಊರ್ಧ್ವಮಂಡಲಿಯನ್ನೆ ಎಡ–ಬಲ ಬದಿಗಳಲ್ಲಿ ಹಿಡಿದು ತಿರುಗಿಸಿದರೆ ಅದು ಪಾರ್ಶ್ವಮಂಡಲಿ ಎನಿಸುತ್ತದೆ. ಒಂದು ಹಸ್ತವನ್ನು ಮೇಲೆತ್ತಿ ಸುತ್ತಿ ಮತ್ತೊಂದು ಹಸ್ತವನ್ನು ಬಿಚ್ಚುವ ಹಾಗೆ ಎದೆಯ ಎದುರಿನಲ್ಲಿ ಹಿಡಿದರೆ ಅದು ಉರೋಮಂಡಲಿಯಾಗುತ್ತದೆ. ಅಲಪಲ್ಲವ ಮತ್ತು ಅರಾಲ ಹಸ್ತಗಳನ್ನು ಎದೆಯ ಎರಡುಬದಿಗಳಲ್ಲಿ ಹಿಂದಿನ ಹಾಗೆ ತಿರುಗಿಸಿದರೆ ಆ ಹಸ್ತವು ಉರಃ ಪಾರ್ಶ್ವಾರ್ಧಮಂಡಲವೆನಿಸುವುದು. ಗಂಟಿನ ಬಳಿ ಕಟಕಾಮುಖ ಹಸ್ತಗಳನ್ನು ಸ್ವಸ್ತಿಕದಲ್ಲಿ ಹಿಡಿದರೆ ಮುಷ್ಟಿಕ ಸ್ವಸ್ತಿಕ ಎಂಬ ಹಸ್ತವೆನಿಸುತ್ತದೆ. ಮೊಣಕಾಲಿನ ಬಳಿ ಪದ್ಮಕೋಶಾಕಾರವಾಗಿ ಹಸ್ತಗಳನ್ನು ತಿರುಗಿಸುತ್ತಾ ಹಿಡಿಯುವುದನ್ನು ನಲಿನೀ ಪದ್ಮಕೋಶ ಎನ್ನಲಾಗುತ್ತದೆ.

ಶಿರಸ್ಸಿನಲ್ಲಿ ಪಲ್ಲವ ಮುದ್ರೆಯ ಕರಗಳನ್ನು ತೋರಿಸುವುದು ಲಲಿತ ಹಸ್ತ. ತಲೆಯ ಬಳಿ ಮುಷ್ಟಿಕ ಸ್ವಸ್ತಿಕ ಹಸ್ತಗಳನ್ನು ತಿರುಗಿಸುತ್ತಿದ್ದರೆ ವಲಿತ ಹಸ್ತ. ಊರ್ಧ್ವ ಪ್ರಸಾರಿತ ಹಸ್ತಗಳಿಗೆ ಅಲಪದ್ಮ ಎಂಬ ಸಂಜ್ಞೆ ಇದೆ. ಕರಗಳ ತುದಿಗಳನ್ನು ಮೇಲೆತ್ತಿ ಉದ್ವೇಷ್ಟನ ಮಾಡುವುದು ಉಲ್ಬಣ ಹಸ್ತ.

**ಅಸಂಯುತ ಹಸ್ತಮುದ್ರೆಗಳು :**

ಇಪ್ಪತ್ತನಾಲ್ಕು ಅಸಂಯುತ ಹಸ್ತಗಳ ಮುದ್ರೆಗಳಿವೆ ಅವುಗಳು ಪತಾಕ, ತ್ರಿಪತಾಕ, ಕರ್ತರೀಮುಖ, ಅರ್ಧಚಂದ್ರ, ಅರಾಲ, ಶುಕತುಂಡ, ಮುಷ್ಟಿಕ, ಶಿಖರ, ಕಪಿತ, ಕಟಕಾಮುಖ, ಸೂಚಿ, ಪದ್ಮಕೋಶ, ಸರ್ಪಶೀರ್ಷ, ಕಾಂಗೂಲ ಅಲಪದ್ಮ, ಚತುರ, ಭ್ರಮರ, ಹಂಸಾಸ್ಯ, ಹಂಸಪಕ್ಷ, ಸಂದಂಶ, ಮುಕುಲ, ಊರ್ಣನಾಭಿ, ತಾಮ್ರಚೂಡ. ಇವುಗಳ ಲಕ್ಷಣಗಳು ಕೆಳಿನಂತಿವೆ. ಅಂಗುಷ್ಠವನ್ನು ತೋರು ಬೆರಳಿನ ಬುಡದಲ್ಲಿ ಒತ್ತಾಗಿ ಸೇರಿಸಿ ಹಿಡಿದು, ಎಲ್ಲಾ ಬೆರಳುಗಳನ್ನೂ ತೆರೆದು ಒಂದಕ್ಕೊಂದು ತಾಗುವಂತೆ ಹಿಡಿಯುವ ಮುದ್ರೆ, ಅಂಗೈಯ ಬೆರಳುಗಳನ್ನು ಸೇರಿಸಿ ಚಾಚುವುದು ಪತಾಕ. ಇದು ಪ್ರತಾಪ, ಹೊಡೆಯುವುದು, ನಿಲ್ಲಿಸುವುದು, ಸ್ವಾಗತ, ಆಜ್ಞೆ, ಆರ್ಶಿವಾದ ಹೀಗೆ ಬಹುವಿಧವಾದ ವಿನಿಯೋಗಗಳಿವೆ.

ಎತ್ತಿಹಿಡಿದ ಪತಾಕಾಮುದ್ರೆಯಲ್ಲಿ ಅನಾಮಿಕ ಬೆರಳನ್ನು 90° ಯಲ್ಲಿ ಬಗ್ಗಿಸಿದರೆ ತ್ರಿಪತಾಕ. ಹಣೆಗೆ ತಿಲಕಇಡುವುದು, ಕಣ್ಣೀರು ಒರೆಸುವುದು, ಕಾಡಿಗೆ ಹಚ್ಚುವುದು ಮುಂತಾದ ಹಲವು ಅಭಿನಯಗಳಲ್ಲಿ ಇದರ ವಿನಿಯೋಗಳಿವೆ. ತ್ರಿಪತಾಕದಲ್ಲಿ ಮಧ್ಯದ ಬೆರಳಿನಿಂದ ಸ್ವಲ್ಪ ಹಿಂದಕ್ಕೆ ತೋರುಬೆರಳನ್ನು ಕತ್ತಿರಿಯ ಅಲಗುಗಳ ಹಾಗೆ ಬಾಗಿಸಿ ಹಿಡಿದರೆ ಕರ್ತರೀ ಮುಖವೆನಿಸುವುದು. ವಿದ್ಯಾದಿ ರಂಜಿನ, ಮಾರ್ಗದರ್ಶನ, ಕೇಶವಿನ್ಯಾಸ ಮುಂತಾದವುಗಳಲ್ಲಿ ಇದರ ಉಪಯೋಗ. ಅಂಗುಷ್ಠವನ್ನು ನೆಟ್ಟಗೆ ಕೂಡಿ ಎಲ್ಲಾ ಬೆರಳುಗಳನ್ನು ಬಿಲ್ಲಿನಂತೆ ಬಾಗಿಸಿದರೆ ಅರ್ಧಚಂದ್ರ ಮುದ್ರೆ, ಇದು ಚಂದ್ರರೇಖೆಯನ್ನು ನೋಡುವಾಗ ಕುತ್ತಿಗೆಗೆ ಕೈಹಾಕಿ ತಳ್ಳುವ, ಅಭಿನಯ. ಪತಾಕ ಹಸ್ತದಲ್ಲಿ ತೋರು ಬೆರಳನ್ನು ವಕ್ರವಾಗಿ ಹಿಡಿದರೆ ಅರಾಲ, ಶೌರ್ಯ, ಗಾಂಭೀರ್ಯ, ಧೈರ್ಯ ಮುಂತಾದ ಕಡೆ ಇದರ ಪ್ರಯೋಗವಿದೆ. ಅರಾಲಕ ಹಸ್ತದಲ್ಲಿ ಅನಾಮಿಕ ಬೆರಳೂ ವಕ್ರವಾಗಿದ್ದರೆ ಶುಕತುಂಡ. ಅದು, ನಾನಲ್ಲ, ಸತ್ಯ ಮುಂತಾದ ಕಡೆ ಇದರ ವಿನಿಯೋಗವಿದೆ. ಆವಾಹನ, ವಿಸರ್ಗ, ಧಿಕ್ಕಾರ, ತಿರಸ್ಕಾರ ಮುಂತಾದ ಅಭಿನಯದಲ್ಲೂ ಶುಕತುಂಡ ಮುದ್ರೆಯ ವಿನಿಯೋಗವಿದೆ ಎಂದು ಭರತನು ನಾಟ್ಯಶಾಸ್ತ್ರದಲ್ಲಿ ಹೆಳಿದ್ದಾರೆ.

अङ्गुष्ठेनातिपीड्यन्ते यदाङ्गुल्यस्तलस्थिता:।

तदा स्यान्मुष्टिक: खड्गग्रहणादौ नियुज्यते। [142]

ಬೆರಳುಗಳೆಲ್ಲಾ ಅಂಗೈಯೊಳಗೆ ಬಾಗಿದ್ದು ಅವುಗಳ ಮೇಲೆ ಅಂಗುಷ್ಠ ಬಿಗಿಯಾಗಿ ಹಿಡಿದುಕೊಂಡಿದ್ದರೆ ಮುಷ್ಟಿಕೆ ಮುದ್ರೆ. ಖಡ್ಗವನ್ನು ಹಿಡಿಯುವುದು, ಗುದ್ದುವುದು, ವ್ಯಾಯಾಮ,

---

[142] ಶಿವತತ್ತ್ವರತ್ನಾಕರ – ಸಂಪುಟ 1 – ಸಂ: ಎಸ್.ನಾರಾಯಣ ಶಾಸ್ತ್ರಿ ಮತ್ತು ಆರ್. ರಾಮಾಶಾಸ್ತ್ರಿ, ಪ್ರಾಚ್ಯವಿದ್ಯಾ ಸಂಶೋಧನಾ ಕೇಂದ್ರ, ಮೈಸೂರು ವಿಶ್ವವಿದ್ಯಾಲಯ, ಮೈಸೂರು –1964. (6–5–58)

ಮುಂತಾದವುಗಳಲ್ಲಿ ಈ ಹಸ್ತದ ವಿನಿಯೋಗವಿದೆ. ಮುಷ್ಟಿಕದ ಮುದ್ರೆಯಲ್ಲಿ ಹೆಬ್ಬೆರಳು ಮಾತ್ರ ಬಿಡಿಸಿದ್ದರೆ ಶಿಖರ. ಹಗ್ಗ, ದರ್ಭೆ, ಅಂಕುಶ, ಬಿಲ್ಲು, ತೋಮರ ಶಕ್ತಿ ಆಯುಧಗಳನ್ನು ಬಿಡುವುದು. ತುಟಿಗೆ ಬಣ್ಣ ಹಚ್ಚುವುದು, ಮುಂತಾದವುಗಳಲ್ಲಿ ಇದರ ವಿನಿಯೋಗ ಮಾಡುವುದು. ಶಿಖರದಲ್ಲಿ ತೋರು ಬೆರಳು ಬಾಗಿದ್ದರೆ ಅದನ್ನು ಅಂಗುಷ್ಠವು ತಳಗಿನಿಂದ ಒತ್ತಿಹಿಡಿದರೆ ಕಪಿತ್ಥಮುದ್ರೆ ಖಡ್ಗಾದಿ ಆಯುಧಗಳನ್ನು ಹಿಡಿಯುವಾಗ ಇದರ ವಿನಿಯೋಗ. ಕಪಿತ್ಥ ಹಸ್ತದಲ್ಲಿ ಕಿರಿಬೆರಳು ಮತ್ತು ಅನಾಮಿಕಾ ಬೆರಳು ಮೇಲಕ್ಕೆತ್ತಿ ಸ್ವಲ್ಪ ಬಾಗಿದರೆ ಕಟಕಾಮುಖ, ಕನ್ನಡಿ, ಬೀಸಣಿಗೆ, ಛತ್ರ, ಮುಂತಾದುವನ್ನು ಪ್ರದರ್ಶಿಸುವಾಗ ಇದರ ವಿನಿಯೋಗ.

ಕಟಕಾಮುಖ ಹಸ್ತದಲ್ಲಿ ತೋರು ಬೆರಳು ಮಾತ್ರ ಬಿಡಿಸಿ ಸೂಚಿಯಂತೆ ತೋರಿಸಿದರೆ ಸೂಚೀಮುಖ ವಿದ್ಯುತ್‌ದೀಪ ಮುಂತಾದವುವನ್ನು ನೋಡುವಾಗ ಇದರ ವಿನಿಯೋಗ. ಎಲ್ಲಾ ಬೆರಳುಗಳೂ ಅಂಗುಷ್ಠದೊಡನೆ ಸಂಹತವಾಗಿದ್ದು ಒತ್ತಾಗಿ ಸೇರಿ, ಅಂಗೈ ತಲವು ಸ್ವಲ್ಪ ಬಾಗಿ ಬೊಗಸೆಯಾಗಿ ಹಾವಿನ ಹೆಡೆಯಂತೆ ಕಾಣಿಸುವುದು ಸರ್ಪದತಲೆ. ಆನೆಯ ಕುಂಭ ಸ್ಥಳದಲ್ಲಿ ತಟ್ಟುವುದು, ಹಾವಿನನಡೆ, ಬೊಗಸೆಯಿಂದ ನೀರು ಕುಡಿಯುವುದು ಮುಂತಾದವುಗಳಲ್ಲಿ ಇದರ ವಿನಿಯೋಗವಿದೆ.

ಕಿರುಬೆರಳು ಮತ್ತು ಹೆಬ್ಬೆರಳು ಇವೆರಡು ಬಿಚ್ಚಿದ್ದು ಉಳಿದ ಬೆರಳುಗಳು ಒತ್ತಾಗಿ ಸೇರಿ ಕೆಳಮುಖವಾಗಿ ಬಾಗಿದ್ದರೆ ಮೃಗಶೀರ್ಷ ಎಂಬ ಹಸ್ತ. ದಾಳ ಉರುಳಿಸು, ಕಣ್ಣೀರು ಬಿಡು, ಬೆವರು ಒರೆಸು ಮುಂತಾದ ಕಡೆ ಇದರ ವಿನಿಯೋಗ. ಮಧ್ಯದ ಬೆರಳು, ಹೆಬ್ಬೆರಳು ಮತ್ತು ತೋರುಬೆರಳು ಇವು ಮೂರು ತ್ರೇತಾಗ್ನಿಗಳಂತೆ ಸೇರಿ, ಅನಾಮಿಕಾ ಸ್ವಲ್ಪ ಬಾಗಿ, ಕಿರುಬೆರಳು ಎತ್ತಿ ಇದ್ದರೆ ಕಾಂಗೂಲಹಸ್ತ. ಮಣಿ, ಅಡಕೆ, ನಿಂಬೆಹಣ್ಣು, ಮೋದಕ ಮುಂತಾದವುಗಳನ್ನು ಅಭಿನಯಿಸುವಾಗ ಇದರ ವಿನಿಯೋಗ. ಕರತಲದಲ್ಲಿ ಬೆರಳುಗಳೆಲ್ಲಾ ಸುತ್ತಲೂ ಪಾರ್ಶ್ವಗಳಲ್ಲಿ ವಿಶಾಲವಾಗಿ ಸುತ್ತಿದ ಅಭಿನಯವೇ ಅಲಪದ್ಮ, ನಿಷೇಧ, ಶೂನ್ಯ, ವಾಕ್ಯಾರಂಭಮುಂತಾದವುಗಳಲ್ಲಿ ಇದರ ವಿನಿಯೋಗ, ಕಿರುಬೆರಳು ಪ್ರತ್ಯೇಕವಾಗಿ ಎತ್ತಿದಂತೆ ಇರಬೇಕು. ಮಧ್ಯದ ಮೂರು ಬೆರಳುಗಳನ್ನು ಚಾಚಿ ಮಧ್ಯೆ ಬೆರಳಿನ ಮಧ್ಯಪರ್ವದಲ್ಲಿ ಹೆಬ್ಬೆಟ್ಟು ತಾಗುವಂತೆ ಹಿಡಿಯುವುದು ಚತುರ ಹಸ್ತ, ವಿನಯ, ನಿಯಮ ಮುಂತಾದಕಡೆ ಇವುಗಳ ಉಪಯೋಗ. ತೋರು ಬೆರಳನ್ನು ಮಡಚಿ ಅದರ ಮೇಲಿಂದ ಹೆಬ್ಬೆರಳು ಮತ್ತು ಮಧ್ಯದ ಬೆರಳುಗಳು ಇಕ್ಕಳಿನ ಹಾಗೆ ಒಂದನ್ನೊಂದು ಸಂಧಿಸುವಂತೆ ಹಿಡಿದು, ಕಿರಿಬೆರಳು ಮತ್ತು ಅನಾಮಿಕಾ ಬಿಡಿಯಾಗಿ ಎತ್ತಿದಂತೆ ಇರುವುದು ಭ್ರಮರ. ಕಿವಿಯ ಹೂವು, ಆಭರಣ, ದುಂಬಿ ಮುಂತಾದವುಗಳ ಅಭಿನಯದಲ್ಲಿ ಇದರ ವಿನಿಯೋಗ. ಮಧ್ಯದ ಬೆರಳು ಹರಬ್ಬೆರಳು ಮತ್ತು ತೋರುಬೆರಳು ಮೂರನ್ನೂ ಸೇರಿಸಿ ಚೂಪಾಗಿ

ಹಂಸದ ಕೊಕ್ಕಿನ ಹಾಗೆ ಹಿಡಿದು ಉಳಿದೆರಡು ಬೆರಳುಗಳು ಬಿಡಿಯಾಗಿ ಎತ್ತಿಕೊಂಡಿದ್ದರೆ ಹಂಸವಕ್ತ್ರ. ಮೃದುತ್ವ, ಪಕ್ಷಿ ಮುಂತಾದವು ಇದರ ವಿನಿಯೋಗ.

ಕಿರುಬೆರಳು ಎತ್ತಿಹಿಡಿದು ಹೆಬ್ಬೆರಳು ಸ್ವಲ್ಪಮಾತ್ರ ಬಗ್ಗಿದ್ದು ಉಳಿದ ಬೆರಳುಗಳು ಒಂದಕ್ಕೊಂದು ಸೇರಿದಂತೆ ಪ್ರಸಾರಿತವಾಗಿದ್ದರೆ ಹಂಸಪಕ್ಷ. ಇದು ಸ್ವೀಕರ, ಆಚಮನ, ತೀರ್ಥ ಸ್ವೀಕಾರ ಮುಂತಾದ ಕಡೆ ಇದರ ವಿನಿಯೋಗ. ಹೆಬ್ಬೆರಳು ಮತ್ತು ತೋರುಬೆರಳು ಇಕ್ಕಳಿನ ಹಾಗೆ ಒಂದರ ಮೇಲೆ ಒಂದೊಕ್ಕೊಂದು ತಾಗಿರುವುದೇ ಸಂದಂಶ. ಉಳಿದ ಬೆರಳುಗಳು ಬಿಡಿಯಾಗಿ ಎತ್ತಿ ಇರುತ್ತದೆ. ಹೂ ಕೊಯ್ಯುವುದು, ಆಯ್ಕೆ ಮುಂತಾದವು ಇದರ ವಿನಿಯೋಗ. ಐದು ಬೆರಳುಗಳ ತುದಿಗಳೂ ಒಂದಕ್ಕೊಂದು ಸೇರಿಕೊಂಡು ಕಮಲದ ಮೊಗ್ಗಿನಂತೆ ಕಾಣುವುದೇ ಮುಕುಲ ಹಸ್ತಾ. ಊಟ, ದೇವಪೂಜೆ ಮುಂತಾದ ಅಭಿನಯದಲ್ಲಿ ಇದು ಬೇಕಾಗುತ್ತದೆ. ಎಲ್ಲಾ ಬೆರಳುಗಳು ಸುತ್ತಲೂ ಬಾಗಿದ್ದು ಜೇಡರ ಹುಳದಂತೆ ಕಾಣುವುದೇ ಊರ್ಣನಾಭಿ. ಇದು ತಲೆತುರಿಕೆ ಮುಂತಾದುವುಗಳಲ್ಲಿ ಪ್ರಯುಕ್ತವಾಗುತ್ತದೆ. ತೋರು ಬೆರಳನ್ನು ಬಾಗಿಸಿ, ಹೆಬ್ಬೆರಳು, ಮಧ್ಯ ಬೆರಳುಗಳು ಇಕ್ಕಳಿನ ಬಾಯಿಯ ಹಾಗೆ ಒಂದರ ಮೇಲೆ ಒಂದು ಬಾಗಿಸಿ ಹಿಡಿದಾಗ ಉಳಿದ ಬೆರಳುಗಳು ಅಂಗೈಗೆತಾಗಿದ್ದರೆ ತಾಮ್ರಚೂಡ ಎಂಬ ಹಸ್ತ. ಮಕ್ಕಳನ್ನು ಸಂತಯಿಸುವಾಗ, ಶೀಘ್ರತೆಯನ್ನು ಸೂಚಿಸುವಾಗ, ತಾಳ ಹಾಕುವಾಗ ಶ್ರೀಮಂತರು ಆಕಳಿಸುವಾಗ ಮುಂತಾದ ಕಡೆ ಇದರ ವಿನಿಯೋಗ ಇದೆ. ಹೀಗೆ ಇಪ್ಪತ್ತನಾಲ್ಕು ಅಸಂಯುತ ಹಸ್ತ ಭೇದಗಳ ಲಕ್ಷಣಗಳು.

**ಸಂಯುತ ಹಸ್ತಗಳು :**

अञ्जलिः प्रथमः प्रोक्तः कपोतः कर्कटस्तथा ।

स्वस्तिकाख्यः स विज्ञेयः कटकावर्धमानकः ॥

उत्सङ्गो विषधान्दोलौ ततः पुष्पपुटः करः ।

मकरो गजदन्तश्च वर्धमानोवहित्थकः ॥

ऐते तु संयुता हस्तास्त्रयोदश निरूपिताः ॥[143]

ಹದಿಮೂರು ವಿಧವಾದ ಸಂಯುತ ಹಸ್ತಗಳು ಅಂಜಲಿ, ಕಪೋತ, ಕರ್ಕಟ, ಸ್ವಸ್ತಿಕ, ಕಟಕಾ, ವರ್ಧಮಾನಕ, ಉತ್ಸಂಗ, ನಿಷಧ, ಆಂದೋಲ, ಪುಷ್ಪಪುಟ, ಮಕರ, ಗಜದಂತ, ವರ್ಧಮಾನ, ಅವಹಿತ್ಥ.

[143] ಶಿವತತ್ತ್ವರತ್ನಾಕರ – (ಸಂ) ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ್, ಐದು ಸಂಪುಟಗಳು, ದರೇಸಾ ಪ್ರಕಾಶನ, ಬೆಂಗಳೂರು –2013. (6–5–84)

ಎರಡೂ ಕೈಯಲ್ಲಿ ಪತಾಕ ಹಸ್ತಗಳನ್ನು ಜೋಡಿಸಿ ಹಿಡಿಯುವುದರಿಂದ ಅಂಜಲಿ ಹಸ್ತವು ಸಂಯುತ ಹಸ್ತವಾಗುತ್ತದೆ. ದೇವತೆಗಳು, ಗುರುಗಳು, ಬ್ರಾಹ್ಮಣರು ಇವರನ್ನು ವಂದಿಸುವಾಗಿನ ಮುದ್ರೆ ಇದನ್ನು ಅಂಜಲೀ ಹಸ್ತ ಎನ್ನುತ್ತಾರೆ. ಎರಡು ಕೈಗಳು ಒಂದಕ್ಕೊಂದು ಸೇರಿದ್ದು ಮಧ್ಯ ಸ್ವಲ್ಪ ಹೊಂಡ ಆಗುವಂತೆ ಬೊಗಸೆ ಮಾಡಿ ಹಿಡಿದರೆ ಕಪೋತ. ನಮಸ್ಕಾರ, ವಿನಯ ಮುಂತಾದ ಕಡೆ ಇದರ ವಿನಿಯೋಗ ಮಾಡಲಾಗುತ್ತದೆ. ಒಂದು ಕೈಯ ಐದು ಬೆರಳುಗಳು ಮತ್ತೊಂದು ಕೈಯ ಬೆರಳುಗಳ ಮಧ್ಯದಲ್ಲಿ ಸೇರಿ ಒಂದರೊಡನೊಂದು ಸಂಶ್ಲೇಷಗೊಂಡಿರುವುದು ಕರ್ಕಟ. ಬೆರಳುಗಳು ಅಂಗೈಯ ಒಳಗಿನಿಂದಲಾಗಲಿ, ಹೊರಗಿನಿಂದಾಗಲಿ ಹೀಗೆ ಬೆರೆತಾಗ ಕರ್ಕಟ ಮುದ್ರೆ ಶಂಖಧ್ವನಿ, ಹೊಟ್ಟೆ, ಅವಯಗಳನ್ನು ಸಡಿಲಿಸಿ ಇಳಿಸುವುದೇ ಮುಂತಾದ ಕಡೆ ಇದರ ವಿನಿಯೋಗವುಂಟು. ಎರಡು ಕೈಗಳಲ್ಲಿ ಅರಾಳ ಮುದ್ರೆ ಇದ್ದು ಮೇಲ್ಮುಖವಾಗಿ ಹಿಡಿದು, ಒಂದರ ಕೆಳಗೆ ಮತ್ತೊಂದು ಕೈಯನ್ನು ಮಣಿಕಟ್ಟಿನ ಮೇಲಿಟ್ಟರೆ ಸ್ವಸ್ತಿಕ ಮುದ್ರೆ. ಇದನ್ನು ಎರಡು ಪತಾಕ ಮುದ್ರೆಗಳನ್ನು ಒಂದನ್ನೊಂದು ಕತ್ತರಿಯಾಕಾರದಲ್ಲಿ ಹಿಡಿಯುವುದು. ಮೇಘ, ಸಮುದ್ರ, ವನ ಮುಂತಾದವುಗಳ ಹಾಗೂ ವಿನಿಯೋಗದ ಅಭಿನಯದಲ್ಲೂ ಇದರ ವಿನಿಯೋಗವಿದೆ.

ಕಟಕ ಮುದ್ರೆಯನ್ನು ಎರಡೂ ಕೈಗಳಲ್ಲಿ ಅನ್ಯೋನ್ಯವಾಗಿ ಎದುರು ಬದುರಾಗಿರುವಂತೆ ಹಿಡಿಯುವುದು ಕಟಕಾವರ್ಧಮಾನ. ನಮಸ್ಕಾರ ಮುಂತಾದ ಕಡೆ ಇದರ ವಿನಿಯೋಗವಿದೆ. ಕಪೋತ ಶೀರ್ಷದ ಹಸ್ತಗಳನ್ನೆ ಸ್ವಸ್ತಿಕಾಕೃತಿಯಲ್ಲಿ ಎಡಭುಜದ ಮೇಲೆ ಬಲಗೈಯೂ ಬಲಭುಜದ ಮೇಲೆ ಎಡಗೈಯೂ ಬರುವಂತೆ ಹಿಡಿದರೆ ಉತ್ಸಂಗ. ಆಲಿಂಗನ, ನಡುಕ ಮುಂತಾದ ಕಡೆ ಇದರ ಉಪಯೋಗವಿದೆ. ಮುಕುಲ ಹಸ್ತವನ್ನು ಕಪಿತ್ಥ ಹಸ್ತವು ಸುತ್ತುವರಿದಂತೆ ಕಾಣುವುದೇ ನಿಷಧ. ಸಮಯ ಮೊದಲಾದವುಗಳಲ್ಲಿ ಇದರ ವಿನಿಯೋಗವಿದೆ.

ಹೆಗಲುಗಳನ್ನು ಇಳಿಬಿಟ್ಟು, ಪತ್ರಕಾರಗಳನ್ನು ಸೊಂಟದ ಕೆಳಗಿನವರೆಗೂ ಲಂಬಿಸಿ ಜೋತಾಡಿಸಿದರೆ ಆಂದೋಲ, ದೋಲಾ ಎಂಬ ಸಂಜ್ಞೆಯೂ ಇದೆ. ಸಂಭ್ರಮ, ವಿಷಾಧ, ಮೂರ್ಛೆ, ಮದ, ಅಭಿಘಾತ ಮುಂತಾದ ಕಡೆ ಇದರ ವಿನಿಯೋಗ ಮಾಡಬಹುದು.

ಸರ್ಪಶಿರ ಮುದ್ರೆಯ ಎರಡು ಹಸ್ತಗಳು ಒಂದಕ್ಕೊಂದು ಪಾರ್ಶ್ವದಲ್ಲಿ ಮಾತ್ರ ಸೇರಿದರೆ (ಇದು ಕಪೋತಕ್ಕಿಂತ ತುಸು ಅಗಲವಾಗಿರುತ್ತದೆ) ಪುಷ್ಪಪುಟ. ದೇವತಾ ತರ್ಪಣ ದಿನಗಳಲ್ಲಿ ಇದರ ವಿನಿಯೋಗ. ಅಲ್ಲದೆ, ನೀರು ತರುವುದು, ಸಂಜೆಯ ಬಲಿಯನ್ನು ದೇವರಿಗೆ ಅರ್ಪಿಸುವುದು. ದೀಪ ಹಚ್ಚುವುದೇ ಮುಂತಾದ ಸಂದರ್ಭದಲ್ಲಿ ಇದರ ವಿನಿಯೋಗ.

ಪತಾಕಾಕರಗಳಲ್ಲಿ ಅಂಗುಷ್ಠವನ್ನು ಮೇಲೆ ಮಾಡಿ ಉಳಿದ ಬೆರಳುಗಳು ಕೆಳಮುಖವಾಗಿದ್ದು ಒಂದರ ಮೇಲೆ ಮತ್ತೊಂದು ಕೈ ಇದ್ದರೆ ಮಕರ, ಶಾರ್ದೂಲ, ಸಿಂಹ, ಆನೆಗಳು ಮುಂತಾದವುಗಳನ್ನು ಸೂಚಿಸುವಾಗ ಇದರ ವಿನಿಯೋಗವಿದೆ. ಮುಂಗೈಗಳನ್ನು ತುಸು ಬಗ್ಗಿಸಿ ಎರಡೂ ಕೈಗಳು ಅನ್ಯೋನ್ಯವಾಗಿ ಎದುರು ಬದುರಾಗುವಂತೆ ಸರ್ಪಶೀರ್ಷ ಮುದ್ರೆಯಿಂದ ಹಿಡಿದರೆ ಗಜದಂತ ಎಂಬ ಸಂಜ್ಞೆ, ಪಾಷಾಣ, ಪರ್ವತಗಳ ಭೇದನದಲ್ಲಿ ಕಂಬ ಮುಂತಾದುದನ್ನು ಹಿಡಿಯುವಾಗ ಇದರ ಉಪಯೋಗವಿದೆ. ಹಂಸಪಕ್ಷದ ಮುದ್ರೆಯಿಂದ ಎರಡೂ ಕರಗಳನ್ನು ಪರಾಙ್ಮುಖವಾಗಿ ಹಿಡಿದರೆ ವರ್ಧಮಾನಕರ. ಬಾಗಿಲು ತೆಗೆಯುವುದೇ ಮುಂತಾದ ಕಡೆಗಳಲ್ಲಿ ಇದರ ವಿನಿಯೋಗ.

दौर्बल्यौत्सुक्यनिःश्वासगात्रकार्श्येष्टसौ भवेत् ॥

ऐते तु संयुता हस्तास्त्रयोदश निरूपिताः।

ऐवं कराश्चतुषष्टिर्नाट्यनृत्तोपयोगिनः ॥

दर्शिताः संग्रहेणैव विनियोगपुरस्सरम् ।

ಶುಕತುಂಡ ಮುದ್ರೆಗಳನ್ನು ಎರಡೂ ಕೈಗಳಲ್ಲಿ ಎದೆಯ ಮೇಲೆ ಹಿಡಿದುಕೊಂಡು ಮೆಲ್ಲಗೆ ಕೆಳಮುಖವಾಗಿ ಬಾಗಿಸಿದರೆ ಅವಹಿತ್ಥ, ದೌರ್ಬಲ್ಯ, ಔತ್ಸುಕ್ಯ, ನಿಶ್ವಾಸ, ದೇಹದ ಕೃಶತೆ ಮುಂತಾದ ಸಂದರ್ಭದಲ್ಲಿ ಇದರ ವಿನಿಯೋಗವಿರುವುದು. ಹೀಗೆ ಹದಿಮೂರು ವಿಧವಾಗಿ ಸಂಯುತ ಹಸ್ತಗಳಿವೆ. ಹೀಗಾಗಿ ಒಟ್ಟಿಗೆ ಮುವತ್ತನಾಲ್ಕು ವಿಧದ ನಾಟ್ಯನೃತ್ತಗಳಲ್ಲಿ ಉಪಯೋಗಿಸುವ ಮುದ್ರೆಗಳಿವೆ. ಇವುಗಳ ಲಕ್ಷಣವನ್ನು ಈವರೆಗೆ ಅವುಗಳ ವಿನಿಯೋಗದೊಡನೆ ವಿವರಿಸಲಾಗಿದೆ. ಇದರ ನಾಟ್ಯಶಾಸ್ತ್ರಗಳಲ್ಲಿ ಖಟ್ವಾ, ಭೇರುಂಡ, ನಾಗಬಂಧ, ಗರುಡ, ಕೂರ್ಮ, ಕೀಲಕ, ಮತ್ಸ್ಯ ಮುಂತಾಗಿ ವಿವಿಧ ಹಸ್ತಗಳ ಉಲ್ಲೇಖವೂ ದೊರೆಯುತ್ತವೆ. ಆಸಕ್ತರು ಸಿಂಹಭೂಪಾಲನ 'ಲಾಸ್ಯರಂಜನಂ' ಗ್ರಂಥವನ್ನು ನೋಡಬಹುದು.

ಹೀಗೆ ಶಿವತತ್ತ್ವರತ್ನಾಕರ ಕೃತಿಯಲ್ಲಿನ ಆರನೆಯ ಕಲ್ಲೋಲದಲ್ಲಿನ ಐದನೆಯ ತರಂಗಾಂತರ್ಗತವಾದ ಹಸ್ತಾಭಿನಯ ವರ್ಣನೆ ಎಂಬ ವಿಷಯದ ಕುರಿತು ವಿಮರ್ಶಿಸಿ, ಆರನೆಯ ತರಂಗದ ವಿಷಯವಸ್ತುವನ್ನು ಅವಲೋಕಿಸಲಾಗುವುದು.

**ಆರನೆಯ ಕಲ್ಲೋಲದ ಆರನೆಯ ತರಂಗ :**

**ಎದೆಯಿಂದ ಪಾದದವರೆಗಿನ ಅಭಿನಯ ಸ್ಥಾನಕಗಳ ವಿವರಣೆ:**

ಈ ತರಂಗದಲ್ಲಿ ನಂತರದ ಅಂದರೆ ಎದೆಯಿಂದ ಪಾದದವರೆಗಿನ ಅಭಿನಯ ಸ್ಥಾನಕಗಳ ಅಭಿನಯಗಳನ್ನು ವರ್ಣಿಸಿ ವಿಶದೀಕರಿಸಲಾಗಿದೆ. ಅವುಗಳನ್ನು ಈ ಮುಂದಿನಂತೆ ವಿಶದೀಕರಿಸಲಾಗಿದೆ.

**ವಕ್ಷಸ್ಥಲ ಅಭಿನಯ :**

अथ वक्षः प्रभृत्यङ्गभेदानां लक्षणानि तु ।

निगद्यन्ते क्रमेणैव विनियोगपुरःसरम् ॥[144]

ವಕ್ಷಃ ಸ್ಥಲವೇ ಮುಂತಾದ ಅಂಗಗಳ ಚಲನಗಳು ನಾಟ್ಯದಲ್ಲಿ ಯಾವ ವಿಧವಾಗಿವೆ. ಅವುಗಳ ಲಕ್ಷಣ, ವಿನಿಯೋಗ ಮುಂತಾದವು ಈ ತರಂಗದಲ್ಲಿ ಕ್ರಮವಾಗಿ ವಿವರಿಸಲಾಗುತ್ತದೆ. ಸಮ, ಉದ್ವಾಹಿತ, ನಿಭೂಗ್ನ, ಪ್ರಕಂಪಿತ, ಅಭೂಗ್ನ ಎಂಬುದಾಗಿ ವಕ್ಷಃಸ್ಥಲದ ಚಲನೆಯು ಐದು ವಿಧವಾಗಿವೆ. ಎಲ್ಲಾ ಅಂಗಗಳ ವಿನ್ಯಾಸಗಳೂ ಸಮವಾಗಿದ್ದು, ಸ್ವಾಭಾವಿಕವಾದ ಸೌಷ್ಠವದಿಂದ ಕೂಡಿದ್ದರೆ ಸಮವಕ್ಷ. ಸಮಸ್ಥಿತಿಯಲ್ಲಿ ಇದರ ವಿನಿಯೋಗ.

ಮುಖವನ್ನು ಮೇಲೆತ್ತಿ ಎದೆಯನ್ನು ಉಬ್ಬಿಸಿದರೆ ಉದ್ವಾಹಿತ, ಎತ್ತರದಲ್ಲಿರುವುದನ್ನು ನೋಡುವಾಗ, ಆಕಳಿಕೆ ಬಂದಾಗ, ಮುಂತಾದ ಸಂದರ್ಭದಲ್ಲಿ ಈ ವಕ್ಷೋಭೇದವನ್ನು ಬಳಕೆ ಮಾಡುತ್ತಾರೆ. ಉನ್ನತವೂ ಬೆನ್ನು ತುಸು ಬಾಗಿಯೂ ಹೆಗಲುಗಳು (ಸ್ಕಂದ)ಇಳಿಮುಖವಾಗಿಯೂ ನಿಶ್ಚಲವಾಗಿಯೂ ಇರುವ ಸ್ಥಿತಿಯೇ ನಿಭುಗ್ನ ಅಥವಾ ನಿರ್ಭುಗ್ನ. ಗರ್ವಾದಿಗಳಲ್ಲಿ, ವಿಸ್ಮಯದರ್ಶನ, ಮರಗಟ್ಟಿದಾಗ, ಸತ್ಯವಚನದಲ್ಲಿ ಇದರ ವಿನಿಯೋಗ ಇದೆ.

ಎದೆಯನ್ನು ಎಡೆಬಿಡದೆ ಮೇಲಕ್ಕೆ ಎತ್ತುವುದು ಪ್ರಕಂಪಿತ. ನಗು, ಪರಿಹಾರ ಮುಂತಾದೆಡೆಗಳಲ್ಲಿ ಇದರ ವಿನಿಯೋಗವಿದೆ. ಬೆನ್ನನ್ನು ಎತ್ತರವಾಗಿ ಮಾಡಿ, ಕೆಲವೊಮ್ಮೆ ತಗ್ಗಿಸಿ, ಹೆಗಲುಗಳನ್ನು ಸಂಕುಚಿತಗೊಳಿಸಿ ಸಡಿಲವಾಗಿದ್ದರೆ ಆಭುಗ್ಯ. ಮೂರ್ಛೆ, ಶೋಕ, ಭಯ, ಸಂಭ್ರಮ, ವಿಷಾದ,

---

[144] ಶಿವತತ್ತ್ವರತ್ನಾಕರ – (ಸಂ) ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ್, ಐದು ಸಂಪುಟಗಳು, ದರೇಸಾ ಪ್ರಕಾಶನ, ಬೆಂಗಳೂರು –2013. (6–6–1)

ವ್ಯಾಧಿಹೃದಯ ಶಲ್ಯಾದಿಗಳ ಅಭಿನಯದಲ್ಲಿ ಇದರ ವಿನಿಯೋಗ. ಹೀಗೆ ಐದು ವಿಧದ ವಕ್ಷಃಸ್ಥಲವನ್ನು ಹೇಳಲಾಯಿತು.

**ಜಠರ ಸ್ಥಾನ ಅಭಿನಯ:**

खल्वं क्षामं तथा पूर्णं जठरं कथितं त्रिधा ॥
निम्नं खल्वं नतं क्षाममाधात्मातं पूर्णमुच्यते ।
क्षन्धिते व्याधिते शान्ते जठरं खल्वमिष्यते ॥
जृभारोदनहास्यादौ जठरं क्षाममिष्यते ।
व्याधावत्याशनादौ च पूर्णं जठर मुच्यते ॥

ಖಲ್ವ, ಕ್ಷಾಮ ಮತ್ತು ಪೂರ್ಣ ಎಂದು ಜಠರವು ಮೂರು ವಿಧವಾಗಿದೆ. ಹೊಟ್ಟೆ ಅಕ್ಕಳಿಸಿಕೊಂಡಿರುವುದು ಖಲ್ವ, ತಗ್ಗಿ ಬೆನ್ನಿಗೆ ಸರಿಯಾಗಿರುವುದು ಕ್ಷಾಮ, ಉಬ್ಬಿದ ಹೊಟ್ಟೆ, ಪೂರ್ಣ ಹಸಿವು, ವ್ಯಾಧಿ ಮತ್ತು ಶಾಂತಸ್ಥಿತಿಯಲ್ಲಿ ಖಲ್ವ ಎಂಬ ಜಠರವೂ ಆಕಳಿಕೆ, ಅಳು, ನಗು ಮುಂತಾದವುಗಳಲ್ಲಿ ಕ್ಷಾಮ ಎಂಬ ಜಠರವೂ ವ್ಯಾಧಿ, ಅತಿ ಅಶನಾದಿಗಳಲ್ಲಿ ಪೂರ್ಣ ಜಠರವೂ ಇರುತ್ತದೆ.

**ಪಾರ್ಶ್ವ ಸ್ಥಾನ ಅಭಿನಯ :**

समुन्नतं नतं चैव प्रसारितमतः परम् ।
विवर्तितं चापसृतं पार्श्वं पञ्चविधं भवेत् ॥

ಸಮುನ್ನತ, ನತ, ಪ್ರಸಾರಿತ, ವಿವರ್ತಿತ ಮತ್ತು ಅಪಸೃತ ಎಂದು ಐದು ವಿಧದ ಪಾರ್ಶ್ವಗಳ ಅಭಿನಯಗಳಿವೆ. ಭೂಜ, ಸೊಂಟ, ಹೆಗಲು ಇವನ್ನು ಎತ್ತರವಾಗಿಸಿ ನಿಲ್ಲುವುದು ಉನ್ನತ (ಸಮುನ್ನತ). ಸೊಂಟ ಮತ್ತು ಹೆಗಲು ತುಸು ತಗ್ಗಿಸಿದರೆ ಅಪಸೃತ. ಕೆಳಗೆ ಮಾಡಿದರೆ ನತ (ಅಂದರೆ ಪಾರ್ಶ್ವಗಳನ್ನು ಬಗ್ಗಿಸಿದರೆ ನತ.) ಪಾರ್ಶ್ವಗಳನ್ನು ನೀಡಿದಾಗಿ ಎತ್ತರಿಸಿ ಹಿಡಿದರೆ ಪ್ರಸಾರಿತ. ಬೆನ್ನಿನ ಕೆಳಭಾಗ – ಬೆನ್ನು ಹುರಿಯ ಕೆಳಭಾಗಕ್ಕೆ ತ್ರಿಕ ಎಂಬ ಹೆಸರು. ತ್ರಿಕದ ಕಡೆಯಲ್ಲಿ ಪಾರ್ಶ್ವವನ್ನು ತಿರುಗಿಸುವುದೇ ವಿವರ್ತಿತ. ಪಾರ್ಶ್ವಭಾಗವನ್ನು ತುಸು ಸರಿಸಿದರೆ ಅಪಸೃತ, ಸಮುನ್ನತ, ಅಪಸೃತ ಮತ್ತು ನತ ಇವು ಸಮೀಪ ಬರುವಾಗ ತೋರುವ (ಅಭಿನಯ)ಪಾರ್ಶ್ವಾಭಿನಯ. ಸಂತೋಷಾದಿಗಳಲ್ಲಿ ಪ್ರಸಾರಿತವೂ, ಪರಿವರ್ತನ (ಅಂದರೆ ತಿರುಗುವಿಕೆ)ದಲ್ಲಿ ವಿವರ್ತಿತವೂ, ಹಿಂದಿರುವಾಗ ಅಪಸೃತವೂ ಆದ ಪಾರ್ಶ್ವಭೇದವನ್ನು

ನಾಟ್ಯಕೋವಿದರು ಅಭಿನಯಿಸುವರು. ಹೀಗೆ ಪಾರ್ಶ್ವಭೇದಗಳು ಮತ್ತು ಅವುಗಳ ವಿನಿಯೋಗವನ್ನು ವಿವರಿಸಲಾಗಿದೆ.

**ಕಟಿವಿನ್ಯಾಸ ಲಕ್ಷಣ :**

ಮುಂದಿನ ಭಾಗದಲ್ಲಿ ಕಟಿಸ್ಥಾನಕ ಅಭಿನಯ ಪ್ರಕಾರಗಳನ್ನು ವರ್ಣಿಸಲಾಗಿದೆ. ಅಮರಕೋಶದಲ್ಲಿ "ಪೃಷ್ಠ ವಂಶಾಧರೇ ತ್ರಿಕಲಂ" ಎಂಬುದಾಗಿ ಇದನ್ನು ಉಲ್ಲೇಖಿಸಲಾಗಿದೆ.

विवृत्ता रेचिता च्छिन्ना कम्पितोद्वाहिता तथा ।
इति पञ्चविधा प्रोक्ता कटिर्नाट्यविशारदैः ॥[145]

ವಿವೃತ್ತಾ, ರೇಚಿತಾ, ಛಿನ್ನಾ, ಕಂಪಿತಾ, ಉದ್ವಾಹಿತಾ ಎಂದು (ಐದು) ವಿಧವಾದ ಕಟಿಗಳ ವಿನ್ಯಾಸವನ್ನು ನಾಟ್ಯವಿಶಾರದರು ಒಪ್ಪುತ್ತಾರೆ. ಸಂಮುಖವಾಗಿರುವಾಗ ಹಿಂದಿರುಗಿ ನೋಡುವ ಭಂಗಿ ವಿವೃತ್ತಾಕಟಿ. ಸೊಂಟವನ್ನು ಮಾತ್ರ ಇದ್ದಲ್ಲಿಂದಲೇ ಬುಗುರಿಯಂತೆ ತಿರುಗಿಸುವುದು ರೇಚಿತಾ, ಸೊಂಟವನ್ನು ಅಡ್ಡವಾಗಿ ತಿರುಗಿಸುವುದು ಛಿನ್ನಾ, ಹಾಗೆ ಸೊಂಟವನ್ನು ಅಡ್ಡಕ್ಕೆ ಆಚೀಚೆಗೆ (ಗತಾಗತವಾಗಿ) ಬೇಗ ಬೇಗ ತಿರುಗಿಸುವುದು ಪ್ರಕಂಪಿತಾ, ಪಾರ್ಶ್ವ ಮತ್ತು ನಿತಂಬಗಳು ಉಬ್ಬುವಂತೆ ಕಟಿಯನ್ನು ಅಲುಗಿಸುವುದು ಉದ್ವಾಹಿತ. ಹಿಂದಿರುಗುವಾಗ ವಿವೃತ್ತಾಕಟಿ, ಗರಗರನೆ ತಿರುಗುವಾಗ ರೇಚಿತ, ವ್ಯಾಯಾಮದಲ್ಲಿ ಛಿನ್ನಾ, ಗಮನಾದಿಗಳಲ್ಲಿ ಪ್ರಕಂಪಿತಾ, ಸ್ಥಲಭಾವ ಮತ್ತು ವೈಯಾರದ ನಡೆಯಲ್ಲಿ ಉದ್ವಾಹಿತಾಕಟಿ. ಇವು ವಿನಿಯೋಗಗಳು.

**ಊರು ಸ್ಥಾನಕ ಅಭಿನಯಗಳು :**

वलितः कम्पितश्चैव स्तभितोद्वर्तितावपि ।
निर्वर्तिताह्वयश्चेति भवेदूरुस्तु पञ्चधा ॥[146]

ವಲಿತ, ಕಂಪಿತ, ಸ್ತಂಭಿತ, ಉದ್ವರ್ತಿತ ಮತ್ತು ನಿರ್ವರ್ತಿತ ಎಂಬ ಐದು ಪ್ರಭೃದಗಳು ತೊಡೆಯ ಚಲನೆಗೆ ಸಂಬಮಧಿಸಿವೆ. ತೊಡೆಗಳನ್ನು ಅಡ್ಡಕ್ಕೆ ತಿರುಗಿಸುವುದು ಚಲನಕ್ರಿಯೆ, ಇದು ವಲಿತ. ಹಿಮ್ಮಡದ ನಮನ ಮತ್ತು ಉನ್ನಮನ ಕ್ರಿಯೆಗಳಿಂದ ತೊಡೆಯು ಕಂಪಿಸುವುದೇ ಕಂಪಿತ. ತೊಡೆಗಳು ನಿಷ್ಕ್ರೀಯವಾಗಿ

[145] ಶಿವತತ್ತ್ವರತ್ನಾಕರ – (ಸಂ) ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ್, ಐದು ಸಂಪುಟಗಳು, ದರೇಸಾ ಪ್ರಕಾಶನ, ಬೆಂಗಳೂರು –2013.(6–6–17)

[146] ಶಿವತತ್ತ್ವರತ್ನಾಕರ – (ಸಂ) ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ್, ಐದು ಸಂಪುಟಗಳು, ದರೇಸಾ ಪ್ರಕಾಶನ, ಬೆಂಗಳೂರು –2013. (6–6–22)

ಮರಗಟ್ಟುವುದೇ ಸ್ತಂಭಿತ, ವ್ಯಾಯ್ಯಾಮ ಮತ್ತು ತಾಮಡವ ನೃತ್ಯಗಳಲ್ಲಿ ಉದ್ವರ್ತಿತ. ಸಂಭ್ರಮಾದಿಗಳಲ್ಲಿ ಭ್ರಾಂತಿ ಮುಂತಾದವುಗಳಲ್ಲಿ ನಿರ್ವರ್ತಿತ ಎಂಬ ಊರು. ಇವು ಊರಿವಿನ ಭೇದಗಳು.

**ಜಂಘಾ ಸ್ಥಾನಕ ಅಭಿನಯ:**

ಗಚ್ಛೇದಭ್ಯಂತರಾಜ್ಞಾನುಯತ್ರ ತದ್ವಲನಂಸ್ಕೃತಂ ಎಂದು ಭರತನು ತನ್ನ ನಾಟ್ಯಶಾಸ್ತ್ರದಲ್ಲಿ ಹೇಳಿದ್ದಾನೆ.

उद्वाहिता नता क्षिप्ता परिवृत्ता ततः परम् ॥

आवर्तितेति विज्ञेया जङ्घा पञ्चविधा बुधैः ।

ಉದ್ವಾಹಿತ, ನತಾ, ಕ್ಷಿಪ್ತಾ, ಪರಿವೃತ್ತಾ ಮತ್ತು ಆವರ್ತಿತಾ ಎಂದು ಐದು ವಿಧವಾಗಿ ಜಂಘಾ ಅಭಿನಯವಿದೆ. ಮೊಣಕಾಲನ್ನು ಮೇಲಕ್ಕೆ ಎತ್ತಿ ಹಿಡಿಯುವುದು ಉದ್ವಾಹಿತ. ಮೊಣಕಾಲುಗಳನ್ನು ಸಂಕೋಚಗೊಳಿಸಿದರೆ ನತಾ ಎಂಬ ಜಂಘಾಭೇದ. ಮೊಣಕಾಲುಗಳನ್ನು ಹಿಡಿಯುವುದರಿಂದ ಕ್ಷಿಪ್ತಾ ಎಂಬ ಪ್ರಭೇದ. ಮೊಣಕಾಲುಗಳು ಹಿಂದಕ್ಕೆ ಇಡುವುದಾದರೆ ಪರಿವೃತ್ತಾ ಜಂಘಾ, ಬಲಗಾಲು ಎಡಗಡೆಗೂ ಎಡಗಾಲು ಬಲಗಡೆಗೂ ಬರುವಂತೆ ಮಾಡಿಕೊಂಡು ನಡೆಯುವುದು ಆವರ್ತಿತಾ. ಚುರುಕಾದ ನಡೆಯಲ್ಲಿ ಉದ್ವಾಹಿತವೂ, ನಿಲ್ಲುವಿಕೆ, ಕುಳಿತುಕೊಳ್ಳುವಿಕೆ ಮುಂತಾದ ಕ್ರಿಯೆಗಳಲ್ಲಿ ನತಾ ಜಂಘ. ವ್ಯಾಯಾಮ ಮತ್ತು ತಾಂಡವ ನೃತ್ಯಗಳಲ್ಲಿ ಕ್ಷಿಪ್ತಾ ಎಂಬ ಜಂಘಾಭೇದ. ತಾಂಡವಾದಿಗಳಲ್ಲಿ ಪರಿವೃತ್ತವೂ ವಿದೂಷಕನ ನಡೆಯಲ್ಲಿ ಆವರ್ತಿತಾ ಎಂಬ ಜಂಘಾಭೇದವೂ ಇರುತ್ತದೆ.

**ಪಾದ ವಿನ್ಯಾಸ ಲಕ್ಷಣ:**

अञ्चितः कुञ्चितः सूची तथाग्रतलसञ्चरः ।

उद्घटितः समश्चेति चरणः षड्विधः स्मृतः ॥ [147]

ಅಂಜಿತ, ಕುಂಚಿತ, ಸೂಚೀ, ಅಗ್ರತಲಸಂಚರ, ಉದ್ಘಟ್ಟಿತ ಮತ್ತು ಸಮ ಎಂದು ಆರು ವಿಧವಾದ ಪಾದ ವಿನ್ಯಾಸಗಳಿವೆ. ಹಿಂಗಾಲು ನೆಲಕ್ಕೆ ತಾಗುವಂತಿದ್ದು ಮುಂದಿನ ಬೆರಳುಗಳು ಸ್ವಲ್ಪ ನೀಳವಾಗಿ ಎತ್ತರವಾಗಿ ಇದ್ದರೆ, ಕಾಲಿನ ಮುಂಭಾಗವು ಮೇಲೆ ಎದ್ದುಕಂಡರೆ ಅಂಚಿ. ಪಾದ ಹಿಂಗಾಲು ಎತ್ತಿದ ಹಾಗಿದ್ದು ಬೆರಳುಗಳು ಸಂಕೋಚಗೊಂಡು, ಮಧ್ಯಭಾಗವೂ ತುಸು ಒಳಮುಖವಾಗಿದ್ದರೆ ಕುಂಚಿತ. ಹಿಮ್ಮಡಿಗಳು ಮೇಲೆ ಎತ್ತಿಕೊಂಡಿದ್ದು ಹೆಬ್ಬರಳಿನ ಮೇಲೆ ಎಡಗಾಲು ಸಹಜವಾಗಿ ನೆಟ್ಟುಕೊಂಡು,

---

[147] ಶಿವತತ್ತ್ವರತ್ನಾಕರ – (ಸಂ) ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ್, ಐದು ಸಂಪುಟಗಳು, ದರೇಸಾ ಪ್ರಕಾಶನ, ಬೆಂಗಳೂರು –2013. (6–6–34)

ಸ್ವಾಭಾವಿಕವಾಗಿ ಇದ್ದರೆ ಸೂಚೀಪಾದ ಎಂಬ ಸಂಜ್ಞೆ. ಅಂಗುಷ್ಠಗಳು ನಿಡಿದಾಗಿದ್ದು ಹಿಮ್ಮಡವು ಮೇಲಕ್ಕೆ ಎತ್ತಿದಂತಿದ್ದು ಉಳಿದ ಬೆರಳುಗಳು ತುಸು ಬಗ್ಗಿಕೊಂಡಿದ್ದರೆ ಅದು ಅಗ್ರತಲ ಸಂಚರ ಎಂಬ ಪಾದ. ತುದಿ ಬೆರಳುಗಳಲ್ಲಿ ನಿಂತುಕೊಂಡು, ಹಿಮ್ಮಡವು ನೆಲಕ್ಕೆ ಘಟ್ಟಿಸುವಂತಿರಲು ಉದ್ಘಟ್ಟಿತ ಎಂಬ ಪಾದ ಭೇದವಾಗುತ್ತದೆ. ಪಾದಗಳ ತಲುಗಳು ಸ್ವಾಭಾವಿಕವಾಗಿ ನೆಲದ ಮೇಲಿದ್ದರೆ ಸಮ ಎಂಬ ಪಾದ, ಕಾಲಿನಿಂದ ನೆಲವನ್ನು ಬಡಿಯುವಾಗ ಮುಂತಾದಡೆಗಳಲ್ಲಿ ಅಂಚಿತವೂ ಉದಾರವಾಗಿ ನಡೆಯುವಾಗ ಕುಂಚಿತವೂ, ನೂಪುರಗಳನ್ನಿಡುವಾಗ ಸೂಚೀ ಎಂಬ ಚರಣವೂ, ಉದ್ವಾಹಿತ ಎಂಬ ಕರಣದಲ್ಲಿ ಉದ್ಘಟಿತವೂ ಸಹಜವಾದ ಅಭಿನಯದಲ್ಲಿ ಸಮವಾದವೂ ಇರಬೇಕು.

ಸ್ತ್ರೀಯರಿಗೆ ಮೂರು ಪಾದಾಭಿನಯದ ಸ್ಥಾನಕಗಳಿವೆ. ಇವು ಕ್ರಮವಾಗಿ ಆಯತ, ಅಶ್ವಕ್ರಾಂತ ಮತ್ತು ಅವಹಿತ್ಥ. ಬಲಗಾಲು ಸಮಸ್ಥಿತಿಯಲ್ಲೂ ಎಡಗಾಲು ತ್ರಿಭಂಗಿಯಲ್ಲೂ (ತ್ರಿಭಂಗಿ ಮಧುರಾಕೃತಿ) ತಲೆ ತುಸು ಓರೆಯಾಗಿ ಮೈ ನೇರವಾಗಿ ಮೊಣ ಗಂಟಿನ ಕೆಳಗೆ ಮಧ್ಯೆ ಒಂದು ತಾಲ ಪ್ರಮಾಣದಷ್ಟು (ಹೆಬ್ಬೆಟ್ಟಿನಿಂದ ಮಧ್ಯ ಬೆರಳಿನವರೆಗಿನಷ್ಟು ದೂರ) ಮಾತ್ರ ಅಂತರವಿರಬೇಕು. ಎದೆಯು ಎತ್ತರಿಸಿರಬೇಕು. ಪ್ರಸನ್ನವಾದ ಮುಖಮಂಡಲ, ಸೊಂಟವೂ ಸಮವೂ ಉನ್ನತವೂ ಆಗಿರಬೇಕು. ಈ ಸ್ಥಿತಿಗೆ ಆಯತ ಸ್ಥಾನಕ ಎಂದು ಹೆಸರು. ಇದನ್ನು ರಂಗದಲ್ಲಿ ಪುಷ್ಪಾಂಜಲಿ ಮುಂತಾದುವನ್ನು ಅರ್ಪಿಸುವಾಗ ವಿನಿಯೋಗಿಸುತ್ತಾರೆ. ಒಂದು ಪಾದ ಸಮಸ್ಥಿತಿಯಲ್ಲೂ ಮತ್ತೊಂದು ಪಾದ ತುದಿ ಕಾಲಿನಲ್ಲೂ ವಿದ್ಧವಾಗಿ ಸೂಚೀ ಅಥವಾ ಅವಿದ್ಧ ಸ್ಥಿತಿಯಲ್ಲಿದ್ದರೆ ಅಶ್ವಕ್ರಾಂತ ಸ್ಥಾನಕವೆನಿಸುವುದು. ಸಾಹಿತ್ಯ – ವಿಲಾಸಾದಿಗಳಲ್ಲಿ ಇದರ ವಿನಿಯೋಗವಿರುತ್ತದೆ.

अधुनोदितहस्ताङ्घ्रिविन्यासस्य विपर्ययात्।
अवहित्थाभिधं सद्भिः स्थानकं परिकीर्तितम्॥
लीलायं च वितर्के च विस्मयादौ च तद्भवेत्।
प्रथमं वैष्णवं ज्ञेयं समपादमतः परम् ॥
वैशाखं मन्डलं च स्यादालीढं तदनन्तरम् ।
प्रत्यालीढमिति ज्ञेयान्युक्तानि स्थानकानि षट् ॥[148]

[148] ಶಿವತತ್ತ್ವರತ್ನಾಕರ – (ಸಂ) ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ್, ಐದು ಸಂಪುಟಗಳು, ದರೇಸಾ ಪ್ರಕಾಶನ, ಬೆಂಗಳೂರು –2013. (6–6–51)

ಈ ಮೇಲೆ ಹೇಳಿದ ಹಸ್ತ ಪಾದಗಳು ವಿಪರೀತ ಶ್ರಮದಲ್ಲಿ ವಿನ್ಯಾಸಗೊಂಡರೆ ಅವಹಿತ್ಥಾ ಎಂಬ ಸ್ಥಾನಕ. ಲೀಲಾ, ವಿತರ್ಕ, ವಿಸ್ಮಯಾದಿಗಳಲ್ಲಿ ಇದರ ವಿನಿಯೋಗವಿದೆ. ವೈಷ್ಣವ, ಸಮಪಾದ, ವೈಶಾಖ, ಮಂಡಲ, ಆಲೀಢ ಮತ್ತು ಪ್ರತ್ಯಾಲೀಢ ಎಂಬುದಾಗಿ ಆರು ವಿಧದ ಸ್ಥಾನಕಗಳಿವೆ. ಎರಡು ಕಾಲುಗಳು ಎರಡೂವರೆ ತಾಲ ಪ್ರಮಾಣದಷ್ಟು ಅಂತರದಲ್ಲಿರಬೇಕು. ಮೊಣಕಾಲು ತುಸು ಬಗ್ಗಿರಬೇಕು. ಶೇಷ ಅಂಗಗಳು ಅಂಗುಷ್ಠ ಸುಸ್ಥಿತಿಯಲ್ಲಿರಬೇಕು. ಇದು ವೈಷ್ಣವ ಸ್ಥಾನಕ. ಇದರ ಅಧಿದೇವತೆ ವಿಷ್ಣುವಾಗಿರುತ್ತಾರೆ. ಬಿಡಿಸಿದ ಹೆಬ್ಬರಳಿನಿಂದ ಮಧ್ಯ ಬೆರಳಿನ ತುದಿಯ ವರೆಗಿನ ದೂರವನ್ನು ತಾಲ ಸಂಜ್ಞೆಯೆಂದು ವಿದ್ವಾಂಸರು ಕರೆಯುತ್ತಾರೆ. ಹೀಗೆಂದು ಸಂಗೀತ ರತ್ನಾಕರವು ಹೇಳುತ್ತದೆ. ಒಂದು ತಾಲ ಪ್ರಮಾಣಾಂತರದಲ್ಲಿ ಸಮಸ್ಥಿತಿಯಲ್ಲಿ ಎರಡು ಪಾದಗಳಿದ್ದರೆ ಸಮಪಾದ, ಇದರ ಅಧಿ ದೇವತೆ ಬ್ರಹ್ಮ.

ಮೂರುವರೆ ತಾಲ ಪ್ರಮಾಣದಷ್ಟು ಅಂತರದಲ್ಲಿ ತೊಡೆಗಳಿದ್ದು ವಕ್ಷಸ್ಥಲದಲ್ಲಿ ತ್ರ್ಯಶ್ರ್ಯವಾಗಿ ಪಾದಗಳನ್ನು ಕಲ್ಪಿಸಬೇಕು ಇದು ವೈಶಾಕಸ್ಥಾನ. ಇದಕ್ಕೆ ವಿಶಾಖ (ಅಂದರೆ ಷಣ್ಮುಖ) ನೇ ದೇವತೆ ಎಂದು ಭರತಾದಿಗಳ ಮತವುಂಟು. ಕುದುರೆ ಸವಾರಿ, ವ್ಯಾಯಾಮ, ನಿರ್ಗಮ ಮುಂತಾದ ಕಡೆ ಇದರ ವಿನಿಯೋಗ.

ಎರಡು ಪಾದಗಳೂ ಸಮಸ್ಥಿತಿಯಲ್ಲಿ ತ್ರ್ಯಸ್ರವಾಗಿ ಒಂದು ತಾಲ ಪ್ರಮಾಣದಷ್ಟು ಅಂತರದಲ್ಲಿದ್ದು ಸೊಂಟ, ಮೊಣಕಾಲು ಸಮಾನವಾಗಿರುವುದೇ ಮಂಡಲ ಸ್ಥಾನಕ. ಇದು ಚತುರಸ್ರ. ಇದಕ್ಕೆ ಇಂದ್ರ ದೇವತೆ. ಆನೆಯನ್ನು ಸವಾರಿ ಮಾಡುವಾಗ ಮುಂತಾದವುಗಳಲ್ಲಿ ಇದರ ವಿನಿಯೋಗ. ಹೀಗೆ ನಾಟ್ಯ – ನೃತ್ತಗಳಲ್ಲಿರುವ ನಾಲ್ಕು ಸ್ಥಾನಕಗಳನ್ನು ಹೇಳಲಾಗಿದೆ. ಭರತನು ಇದಕ್ಕೆ ನಾಲ್ಕು ಪ್ರಮಾಣದ ಅಂತರ ಎನ್ನುತ್ತಾನೆ. ಎಡಗಾಲು ತ್ರ್ಯಸ್ರವಾಗಿದ್ದು ಬಲಗಾಲು ನೀಡಿರಬೇಕು, ಇವೆರಡು ಪಾದಗಳ ಅಂತರ ಐದು ತಾಲಗಳಷ್ಟು, ಇದು ಆಲೀಢ ಎಂಬ ಸ್ಥಾನಕ ಎಂಬ ಹೆಸರು. ರುದ್ರ ಇದರ ಅಧಿದೇವತೆ, ವೀರರೌದ್ರ ರಸಗಳಲ್ಲಿ ಇದರ ಬಳಕೆ ಇದೆ.

ಆಲೀಢದಲ್ಲಿ ಹೇಳಿದ ಪಾದ ವಿನ್ಯಾಸವನ್ನು ವಿಪರೀತ (ತಿರುಗಾ ಮುರುಗಾ) ವಾಗಿ ಮಾಡಿದರೆ ಪ್ರತ್ಯಾಲೀಢ ಸ್ಥಾನಕವೆನಿಸುತ್ತದೆ. ದೇವತೆ ಮತ್ತು ವಿನಿಯೋಗ ಎರಡೂ ಆಲೀಢಕ್ಕಿರುವಂತೆಯೇ, ಇವೆರಡರ ವಿನಿಯೋಗವೂ ನಾಟ್ಯಗಳಲ್ಲಿ ಬರುತ್ತದೆ. ಇಲ್ಲಿ ಭರತ ಹೇಳಿದ ಸ್ಥಾನಕಗಳನ್ನು ಹೇಳಲಾಯಿತು. ಇನ್ನೂ

ಹಲವಾರು ಮನೋಜ್ಞವಾದ, ಸ್ಥಾನಕ ಭೇದಗಳಿವೆ. ಅವನ್ನು ಉದಾಹರಣೆಯಾಗಿ ಈ ಕೆಳಗಿನಂತೆ ವಿವರಿಸಲಾಗಿದೆ.

ಸಂಹತ, ಸಮಪಾದ, ಸ್ವಸ್ತಿಕ, ವರ್ಧಮಾನಕ, ನಂದ್ಯಾವರ್ತ, ಚತುರಸ್ರ, ಪಾರ್ಷ್ಣವಿದ್ಧ, ಪಾರ್ಷ್ಣಿಪಾರ್ಶ್ವತ, ಏಕಪಾರ್ಶ್ವತ, ಪಾರ್ಷ್ಣ, ಏಕಜಾನುಕ, ಪರಾವೃತ್ತ ಪೃಷ್ಠೋತ್ಥಾನ ತಲ, ಏಕಪಾದ, ಬ್ರಾಹ್ಮ, ವೈಷ್ಣವ, ಶಯವ, ಗಾರುಡ, ವೃಷಭಾಸನ, ಸಮಸೂಚಿ, ವಿಷಮ ಸೂಚಿಕ, ಚಂಡಸೂಚಿಕ ಹೀಗೆ ಇಪ್ಪತ್ತೊಂದು ಸ್ಥಾನಕ ಭೇದಗಳಿವೆ. ಪಾದದ ಹೊರಗಿನ ಗಂಟು (ಗುಲ್ಫ)ಗಳು ಸಮವಾಗಿ ಅಂಗುಷ್ಠಗಳೆರಡೂ ಒಂದಕ್ಕೊಂದು ತಾಗಿರಲು, ಸ್ವಾಭಾವಿಕವಾದ ದೇಹದ ನಿಲುವೇ ಸಂಹತಸ್ಥಾನಕ. ಎರಡು ಪಾದಗಳೂ ಸಮವಾಗಿ ನೇರವಾಗಿ ಒಂದರಿಂದ ಒಂದು ಮಿತಸ್ತಿಪ್ರಮಾಣದಷ್ಟು ಮಾತ್ರ ಅಂತರವಿದ್ದರೆ ಸಮವಾದ ಸ್ಥಾನಕ ಎನಿಸಿಕೊಳ್ಳುತ್ತದೆ. ಅಂಗೈ ಚಾಚಿದಾಗ ಹೆಬ್ಬೆರಳಿನಿಂದ ಕಿರುಬೆರಳಿನ ತುದಿಯ ವರೆಗಿನ ದೂರ ಅಂದರೆ ಹನ್ನೆರಡು ಅಂಗುಲ ಪ್ರಮಾಣ.[149]

ಕಾಲಂದಿಗೆ ಇರುವ ಜಾಗದಲ್ಲಿ ಎರಡು ಪಾದಗಳ ಕಿರಿಬೆರಳುಗಳು ಸೇರುವಂತೆ ಗುಣಾಕಾರದ ಗುರುತಿನಂತೆ ಇದ್ದು ಪಾದದ ಅಡಿಭಾಗವು ತುಸು ನೆಗ್ಗಿ ಇದ್ದರೆ ಸ್ವಸ್ತಿಕ ಎಂಬ ಸಂಜ್ಞೆ ಒಂದರ ಹಿಮ್ಮಡವು ಮತ್ತೊಂದನ್ನು ತಾಗುವಂತೆ ಪಾದಗಳೆರಡು ಅಡ್ಡಮುಖವಾಗಿ ಸೇರಿಕೊಂಡಿದ್ದರೆ ವರ್ಧಮಾನಕವೆಂದು ನೃತ್ಯಕೋವಿದರು ಹೇಳುತ್ತಾರೆ. ವರ್ಧಮಾನ ಸ್ಥಾನಕವು ಆರು ಅಂಗುಲದಷ್ಟು ಅಂತರದಲ್ಲಿ ಪಾದಗಳಿದ್ದರೆ ನಂದ್ಯಾವರ್ತವೆಂದು ಅರಿಯುವುದು. ಎರಡು ಪಾದಗಳ ಅಂತರವು ಒಂದುವರೆ ವಿತಸ್ತಿಪ್ರಮಣ ಮಿತವಾಗಿದ್ದು (18 ಅಂಗುಲಗಳು) ನಂದ್ಯಾವರ್ತ ಸ್ಥಾನಕವೇ ಚತುರಸ್ರವೆನಿಸುತ್ತದೆ. ಹಿಮ್ಮಡವು ಅಂಗುಷ್ಠವನ್ನು ತಾಗಿಸಿ ನಿಲ್ಲುವ ಭಂಗಿಯೇ ಪಾರ್ಷ್ಣಿವಿದ್ಧಕ. ಹಿಮ್ಮಡವು ಒಳಮುಖವಾಗಿರುವಂತೆ ನಿಂತರೆ ಪಾರ್ಷ್ಣಿಪಾರ್ಶ್ವಕ ಸ್ಥಾನಕ. ಒಂದು ಪಾದ ಸಮ ಭಂಗಿಯಲ್ಲೂ ಮತ್ತೊಂದು ಪಾದ ಅಡ್ಡವಾಗಿಯೂ ಇದ್ದ ನಿಲುವು ಏಕಪಾರ್ಶ್ವವೆಂದು ತಿಳಿದವರು ಹೇಳುತ್ತಾರೆ.

ಒಂದು ಪಾದ ಸಮಭಂಗಿಯಲ್ಲೂ ಮತ್ತೊಂದು ಪಾದದ ಮೊಣಕಾಲು ಬಗ್ಗಿಯೂ ಎರಡು ಪಾದಗಳಿವೆ. ನಾಲ್ಕು ಅಂಗುಲದಷ್ಟು ದೂರವಿದ್ದರೆ ಏಕಜಾಜು, ಹಿಮ್ಮಡ ಅಂಗುಷ್ಠಗಳು ಸಮಸ್ಥಿತಿಯಲ್ಲಿದ್ದು ಮತ್ತೆ ಹಿಮ್ಮಡವು ಕಿರಿ ಬೆರಳಿಗೆ ತಾಗಿದರೆ ಪರಾವೃತ್ತ ಎಂಬ ಸ್ಥಾನಕವಾಗಿದೆ.

---

[149] ಅಂಗುಷ್ಠೇ ಸಕನಿಷ್ಠೇಸ್ಯಾದ್ವಿತಸ್ತಿರ್ದ್ವಾದಶಾಂಗುಲಃ – ಅಮರಕೋಶ

ಹಿಂದಿನ ಕಾಲು ಮುಂದಿನ ಕಾಲುಗಳ ಬೆರಳುಗಳ ಪೃಷ್ಠಭಾಗಕ್ಕೆ ತಾಗುವ ಹಾಗೆ ಇದ್ದು, ಮುಂದೆ ಸಮವಾದ ಸ್ಥಿತಿ ಇರುವುದೇ ಪೃಷ್ಠೋತ್ತಾನತಲ. ಒಂದು ಕಾಲು ಸಮಸ್ಥಾನದಲ್ಲೂ ಮತ್ತೊಂದು ಮೊಣಕಾಲಿನ ಮೇಲೂ ಹೊರಗಿನ ಬದಿಯಿಂದ ಸಂಲಗ್ನವಾಗಿದ್ದರೆ (ಕಾಲ ಮೇಲೆ ಕಾಲು ಹಾಕಿದ ಭಂಗಿ) ಏಕಪಾದ ಎಂಬ ಸ್ಥಾನಕ.

ಒಂದು ಪಾದವು ಸಮಸ್ಥಿತಿಯಲ್ಲೂ ಮತ್ತೊಂದು ತುಸು ಬಾಗಿಯೂ ಇದ್ದು ಮೊಣಗಂಟು ಸಮಾನ ಎತ್ತರದಲ್ಲಿದ್ದರೆ ಬ್ರಾಹ್ಮ ಏಕಪದ ಸ್ಥಾನಕವು ಭೂಮಿಯಲ್ಲಿ ಸಮವಾಗಿದ್ದು ಮತ್ತೊಂದು ಕಾಲು ಸ್ವಲ್ಪ ಬಗ್ಗಿಸಿ ಮುಂದೆ ಚಾಚಿಕೊಂಡಿದ್ದರೆ, ಅಡ್ಡಕ್ಕೆ ಅಥವಾ ಉದ್ದಕ್ಕೆ ವೈಷ್ಣವ ಎಂಬ ಸ್ಥಾನಕ.

ಎಡಗಾಲು ಸಮವಾಗಿ ಮತ್ತೊಂದು ಕಾಲು ಮೊಣಗಂಟಿಗೆ ಸರಿಯಾಗಿ ಬಣ್ಣ – ಯಾವ ಆಧಾರವೂ ಇಲ್ಲದ ಸ್ಥಿತಿ – ಶೈವ ಎಂಬ ಸ್ಥಾನಕ. ಎಡಗಾಲಿನ ಹೆಜ್ಜೆಯನ್ನು (ಪಾದತಲವನ್ನು) ಆಕುಂಚನಮಾಡಿ ಮತ್ತೊಂದು ಕಾಲು ಮೊಣಗಂಟಿನ ಮೇಲೆ ನೆಲದಲ್ಲಿ ನಿಂತರೆ ಗಾರುಡ ಸ್ಥಾನಕ. ಎರಡು ಮೊಣಕಾಲುಗಳು ನೆಲದಲ್ಲಿ ಸರಿಯಾಗಿ ಊರಿಕೊಂಡಿದ್ದು, ಅಡ್ಡವಾಗಿ ನೋಡುತ್ತಿದ್ದರೆ ವೃಷಭಾಸನ ಎಂಬ ಸ್ಥಾನಕ. ಕಾಲುಗಳನ್ನು ಅಡ್ಡವಾಗಿ ಸರಿಸಿಕೊಂಡು ತೊಡೆ, ಮೊಣಕಾಲು(ಗಂಟು) ಹೆಗಲು ಮತ್ತು ಹಿಮ್ಮಡಗಳು ನೆಲಕ್ಕೆ ತಾಗುವಂತೆ ಇರುವ ಭಂಗಿ ಸಮಸೂಚಿ. ಒಂದು ಕಾಲನ್ನು ಮುಂದೆ ಚಾಚಿ, ಮತ್ತೊಂದನ್ನು ಹಿಂದಕ್ಕೆ ಚಾಚಿ, ಮೊಣಕಾಲು, ಮತ್ತು ಪಾದದ ಮಣಿಗಂಟು (ಶುಲ್ಭ) ನೆಲಕ್ಕೆ ತಾಗುವಂತಿದ್ದರೆ ಈ ಭಂಗಿಯನ್ನು ವಿಷಮಸೂಚಿ ಎನ್ನುವರು. ಒಂದು ಕಾಲನ್ನು ಬಗ್ಗಿಸಿ (ಸಂಕೋಚಗೊಳಿಸಿ) ಮತ್ತೊಂದು ಕಾಲನ್ನು ಅಡ್ಡಕ್ಕೆ ನೀಡಿ ತೊಡೆಗಳು ಹಿಮ್ಮಡಕ್ಕೆ ಸಮಾನಾಂತರವಾಗಿ ನೆಲಕ್ಕೆ ತಾಗಿಸಿಕೊಂಡ ಭಂಗಿಯೇ ಚಂಡಸೂಚಕ. ಹೀಗೆ ಈ ಮೂವತ್ತು ಸ್ಥಾನಕಗಳನ್ನು ಚೆನ್ನಾಗಿ ಅರಿತುಕೊಂಡು ನಾಟ್ಯ – ನೃತ್ಯಗಳಲ್ಲಿ ಪ್ರಯೋಗಿಸಬೇಕು.

**ಚಾರಿ ಲಕ್ಷಣ :**

न चारीरहितं नाट्यं नृत्यं वा दृश्यते क्वचित् ।

तस्मात्तल्लक्षणं वक्ष्ये यदुक्तं भरतादिभि ॥ [150]

---

[150] ಶಿವತತ್ತ್ವರತ್ನಾಕರ – (ಸಂ) ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ್, ಐದು ಸಂಪುಟಗಳು, ದರೇಸಾ ಪ್ರಕಾಶನ, ಬೆಂಗಳೂರು –2013. (6–6–86)

ನೃತ್ಯ – ನಾಟ್ಯಗಳಲ್ಲಿ ಚಾರಿಯು ಬಹಳ ಪ್ರಮುಖವಾದುದು. ಚಾರಿಯು ಇಲ್ಲದ ನಾಟ್ಯವಾಗಲಿ ನೃತ್ತವಾಗಲಿ ಎಲ್ಲೂ ಇರಲಿಕ್ಕಿಲ್ಲ, ಆದುದರಿಂದ ಭರತನೇ ಮುಂತಾದವರು ಹೇಳಿದ ಚಾರಿ ಲಕ್ಷಣವನ್ನು ಈ ಕೃತಿಯಲ್ಲಿ ವಿವರಿಸಲಾಗಿದೆ. ಸೊಂಟ, ತೊಡೆ, ಜಂಘೆ ಇವುಗಳ ಚಲನೆಯೊಡನೆ ಸಮಾನಾಂತರವಾಗಿ ಎಲ್ಲಿ ಕಾಲುಗಳ ಚಲನೆಯಿರುವುದೋ ಅದಕ್ಕೆ ಚಾರಿ ಎಂಬ ಹೆಸರು.

ಭೂಮಿಜಾ ಮತ್ತು ಆಕಾಶಿನೀ ಎಂದು ಚಾರಿ ಎರಡು ವಿಧವಾಗಿದೆ. ಇವೆರಡು ವಿಧದ ಚಾರಿಗಳಲ್ಲೂ ಪ್ರತ್ಯೇಕವಾಗಿ 16–16 ಪ್ರಭೇದಗಳಿವೆ. ಸಮಪಾದ, ಅರ್ಧಗತಿ, ಸ್ಥಿತಿ(ಸ್ಥಿತಾವರ್ತಾ), ಈಷಿತಾ (ವಿಚ್ಯವಾ), ಊರುವೃತ್ತಾ, ಡಿತಾ, ಬದ್ಧಾ, ಜನಿತಾ, ಉಚ್ಚಂಡಿತಾ, ಸ್ಯಂದಿತಾ, ಶಕಟಾಸ್ಯಾ, ಅಪಸ್ಯಂದಿತಾ, ಸಮಾಸಾದಿತಮತ್ತಲ್ಲೀ, ಮತ್ತಲ್ಲೀ, ಅಭ್ಯಧಿಕಾ, ಏಡಕಾಕ್ರೀಡಿತಾ ಎಂದು ಇದನ್ನು ಹದಿನಾರು ವಿಧದ ಭೂಮಿ ಚಾರಿಗಳು ಎನ್ನುತ್ತಾರೆ.

ಅತಿಕ್ರಾಂತಾ, ಊರ್ಧ್ವಜಾನು, ಸೂಚೀ, ನೂಪುರಪಾದಿಕಾ, ವಿದ್ಯುಧ್ಭ್ರಾಂತಾ, ದಂಡಾ, ಭುಜಂಗತ್ರಾಸಿತಾ, ಡೋಲಾಪಾದಾ, ಉದ್ವೃತ್ತಾ, ಆಕ್ಷಿಪ್ತಾ, ಮೃಗಪ್ಲುತಾ, ಪಾರ್ಶ್ವಾಕ್ರಾಂತಾ, ಅಪಕ್ರಾಂತಾ, ಭ್ರಮರೀ, ಆವಿದ್ಧಾ, ಅಲಾತಾ ಎಂಬಿವು ಹದಿನಾರು ಆಕಾಶಚಾರಿಗಳು. ಈ ಹಲವು ವಿಧದ ಚಾರಿಗಳಿಂದ ಒಂದೊಂದು ಮಂಡಲದ ನೃತ್ಯಗತಿಯಲ್ಲೂ ಭೇದಗಳುಂಟಾಗುತ್ತವೆ, ಮಂಡಲಗಳನ್ನು ಅವುಗಳ ಹೆಸರುಗಳನ್ನು ತಿಳಿಯೋಣ. ಈ ಮಂಡಲಗಳೂ ಭೌಮ ಮತ್ತು ಆಕಾಶ ಎಂದು ಎರಡು ವಿಧವಾಗಿವೆ. ನೆಲದ ಮೇಲಿನ ವಿವಿಧ ಗತಿ ವೈಚಿತ್ರ್ಯವನ್ನು ಭೌಮ ಚಾರಿ ಮಂಡಲಗಳೂ ಅಂತರಿಕ್ಷದಲ್ಲಿಯ ಬಗೆಬಗೆಯ ನಡೆದಾಟ, ಹಾರಾಟಗಳ ಭಂಗಿಯನ್ನು ಆಕಾಶಚಾರಿ ಮಂಡಲಗಳೂ ಸೂಚಿಸುತ್ತವೆ.

ಭ್ರಮರ, ಶಕಟ್ಯಾಸ್ಯ, ಸಮ (ಸಮವಾದ), ಸ್ಫುರಿತ ಮಂಡಲ, ಅಧ್ಯರ್ಧ, ಪೃಷ್ಠಕುಟ್ಟ, ಏಡಕಕ್ರೀಡಿತ, ಆಸ್ಕಂದಿತ, ವಾರ್ತಾ ಮತ್ತು ಅಧೋಗತ ಎಂದು ಹತ್ತು ವಿಧ ಭೌಮಚಾರಿಗಳ. ಭರತನ ನಾಟ್ಯಶಾಸ್ತ್ರದಲ್ಲಿ ಈ ಮಂಡಲಗಳ ಹೆಸರು ತುಸು ಭಿನ್ನವಾಗಿವೆ, ಭ್ರಮರ, ಆಸ್ಕಂದಿತ, ಆವರ್ತ, ಸಮಾನೋತ್ಸಾರಿತ, ಏಡಕಾಕ್ರೀಕ್ರೀಡಿತ, ಶಕಟಾಸ್ಯ, ಆಧ್ಯರ್ಧ, ಪಿಷ್ಟಕುಟ್ಟ, ಚಾಷಗತ, ಸಮ ಎಂದು ಹತ್ತು ಭೇದಗಳೆಂದು ಭರತನು ಹೇಳುತ್ತಾನೆ.

ಅತಿಕ್ರಾಂತ, ದಂಡಪಾದ, ಸೂಚೀವಿದ್ಧ, ಅಲಾತಕ, ವಿಚಿತ್ರ, ವಿಹಿತ, ಕ್ರಾಂತ, ವಲಿತಸಂಚರ, ವಾಮಾವಿದ್ಧ, ವಲಿತ ಇವು ಹತ್ತು ಆಕಶಚಾರಿ ಮಂಡಲಗಳು. ಹೀಗೆ ಒಟ್ಟಿನಲ್ಲಿ 108 ಕರಣಗಳು.

ಭರತನ ನಾಟ್ಯ ಶಾಸ್ತ್ರದಲ್ಲಿ – ಅತಿಕ್ರಾಂತ, ವಿಚಿತ್ರ, ಲಲಿತಸಂಚರ, ಸೂಚೀವಿದ್ಧ, ದಂಡಪದ, ವಿಹೃತ, ಆಲಾತ, ವಾಮಬಂಧ ಲಲಿತ, ಕಾಂತ ಎಂದು ಹತ್ತು ವಿಧದ ಆಕಾಶಚಾರಿ ಮಂಡಲಗಳ ಹೆಸರನ್ನು ಹೇಳಲಾಗಿದೆ.

**ಪಾತಗಳು :**

उक्तन्याकाशजान्येवं मन्डलानि पुनद्र्श ।

ऐवमष्टोत्तरशतं करणान्यपराणि च॥

पाताः षोडश सम्प्रोक्ता नृत्यतत्वविशारदै ॥

विस्तरः क्रियतेस्थाभिर्नैव सङ्ग्रहकाक्षिभिः ॥

ವೃತ್ತತತ್ವ ವಿಶಾರದರು ಇನ್ನೂ ಹದಿನಾರು ವಿಧದ ಪಾತಗಳನ್ನು ಹೇಳುತ್ತಾರೆ. ನೃತ್ತಶಾಸ್ತ್ರವನ್ನು ಸಂಗ್ರಹವಾಗಿ ನಾನು ಕ್ರೋಡೀಕರಿಸಲು ಉದ್ದೇಶಿಸಿರುವುದರಿಂದ ಅವುಗಳ ವಿವರವನ್ನಿಲ್ಲಿ ಕೊಡಬಯಸುವುದಿಲ್ಲ. ವಿಶೇಷ ವಿಚಾರವನ್ನು ಭರತನ ನಾಟ್ಯಶಾಸ್ತ್ರದಿಂದ ಅರಿತುಕೊಳ್ಳಬಹುದು. ಈ ಅಧ್ಯಾಯದಲ್ಲಿ ವಕ್ಷಸ್ಥಲ ಮತ್ತು ಜಠರದ ವಿನ್ಯಾಸಗಳನ್ನು ಹೊರತು ಪಡಿಸಿದರೆ, 5 ಪಾರ್ಶ್ವ 5 ಕಟಿ, 5 ಊರು, 5 ಜಂಘಾ 6 ಚರಣ 3 ಸ್ಥಾನಕ 21 ಸ್ಥಾನಕ 16 ಭೌಮಚಾರಿ 16 ಆಕಾಶಚಾರಿ 10 ಭೌಮಚಾರಿ ಮಂಡಲ 10 ಆಕಾಶ ಚಾರಿಮಂಡಲ ಒಟ್ಟಿಗೆ 108 ಕರಣಗಳು ಆಗುತ್ತವೆ.

ಈ ರೀತಿ ಪ್ರಸ್ತುತ ಕೃತಿಯ ಎಲ್ಲಾ ಅಂಶಗಳನ್ನು ಸಮಗ್ರವಾಗಿ ಪರಿಶೀಲಿಸಿ ಇದರಲ್ಲಿರುವ ನಾಟ್ಯಾಂಶಗಳ ಪ್ರತಿಯೊಂದು ವಿಷಯವನ್ನು ಕೂಲಂಕಷವಾಗಿ ಅವಲೋಕಿಸಿ ಚರ್ಚಿಸಲಾಗಿದ್ದು, ಇದು ಇತರೆ ಶಾಸ್ತ್ರಗ್ರಂಥಗಳಲ್ಲಿ ಉಪಲಬ್ಧವಿದ್ದರೂ ಈ ಕೃತಿಯಲ್ಲಿ ಇವುಗಳನ್ನು ವ್ಯವಸ್ಥಿತವಾಗಿ ಜೋಡಿಸಿರುವುದು ಕವಿಯ ವಿದ್ವತ್ತನ್ನು ತೋರಿಸುತ್ತದೆ.

# ಅಧ್ಯಾಯ–5

## ನಾಟ್ಯಶಾಸ್ತ್ರದ ಇತರ ಕೃತಿಗಳು ಹಾಗೂ ಅವುಗಳ ಮಹತ್ವ

ನಾಟಕದ ವಿಚಾರವು ಬಹಳ ವ್ಯಾಪಕವಾದದ್ದರಿಂದಲೇ ಅದರ ಒಂದೊಂದು ಭಾಗದ ಪ್ರತಿಪಾದನೆ ಒಂದೊಂದು ಶಾಸ್ತ್ರದಲ್ಲಿ ವಿಸ್ತಾರವಾಗಿ ಕಂಡುಬರುತ್ತದೆ; ಸಾಹಿತ್ಯಶಾಸ್ತ್ರದಲ್ಲಿ ಕಾವ್ಯಾಂಶ; ನಾಟ್ಯಶಾಸ್ತ್ರದಲ್ಲಿ ಅಭಿನಯಾಂಶ; ಸಂಗೀತಶಾಸ್ತ್ರದಲ್ಲಿ ಸಂಗೀತಾಂಶ; ವಾಸ್ತುಶಾಸ್ತ್ರದಲ್ಲಿ ನಾಟ್ಯ ಮಂದಿರದ ನಿರ್ಮಾಣ–ಇತ್ಯಾದಿ. ಈ ಅಂಶಗಳೆಲ್ಲವನ್ನೂ ಭರತನ ನಾಟ್ಯಶಾಸ್ತ್ರವು ವಿವರಿಸುತ್ತದೆ. ಅದಕ್ಕೆ ಸಂಗ್ರಹವಾಗಿ “ಭರತಶಾಸ್ತ್ರ”ವೆಂದೂ ಹೆಸರು.[151]

ಭರತನ ‘ನಾಟ್ಯಶಾಸ್ತ್ರ’ವೇ ಈಗ ನಮಗೆ ದೊರೆತಿರುವ ಲಕ್ಷಣಗ್ರಂಥಗಳಲ್ಲೆಲ್ಲಾ ಅತಿಪ್ರಾಚೀನವಾದದ್ದು; ಇದಕ್ಕೂ ಹಿಂದೆ ‘ಶಿಲಾಲಿ’ ಮತ್ತು ‘ಕೃಶಾಶ್ವ’ ಎಂಬವರು ‘ನಟಸೂತ್ರ’ ಗಳನ್ನು ಬರೆದಿದ್ದಂತೆ ಪಾಣಿನಿಯ ವ್ಯಾಕರಣಶಾಸ್ತ್ರದಲ್ಲಿ ನಿರ್ದೇಶವಿದೆ; ಆ ನಟಸೂತ್ರಗಳು ಸಿಕ್ಕಿಲ್ಲವಾಗಿ ಅವುಗಳ ಸ್ವರೂಪವೇನೆಂದು ತಿಳಿಯುವಂತಿಲ್ಲ. ಭರತನ ನಾಟ್ಯಶಾಸ್ತ್ರವು ಸುಮಾರು ಕ್ರಿ.ಪೂ. ಎರಡು ಅಥವಾ ಒಂದನೆಯ ಶತಮಾನದ್ದೆಂದು ಹೇಳಬಹುದು; ಅದರಲ್ಲಿ ಈಗ ಕಂಡುಬರತಕ್ಕ ಅಂಶಗಳೆಲ್ಲಾ ಒಂದೇ ಕಾಲದವಲ್ಲ; ಆದ್ದರಿಂದ ಅದರ ಕೆಲವು ಭಾಗಗಳು ಈ ಕಾಲಕ್ಕಿಂತ ಹಿಂದಕ್ಕೂ ಮತ್ತೆ ಕೆಲವು ಭಾಗಗಳು ಮುಂದಕ್ಕೂ ಹೋಗಬಹುದು.

ಇದರ ಬಹುಭಾಗವು ಅನುಷ್ಟುಪ್ ಶ್ಲೋಕಗಳಲ್ಲಿವೆ; ಅಲ್ಲಲ್ಲೇ ಬೇರೆ ಬೇರೆ ವೃತ್ತಗಳೂ ಮಹಾಭಾಷ್ಯ ಶೈಲಿಯಲ್ಲಿ ಬರೆದ ಗದ್ಯವೂ ಇವೆ. ಆದರೂ ಒಟ್ಟಿನ ಮೇಲೆ ಇದಕ್ಕೆ “ನಾಟ್ಯಸೂತ್ರ” ವೆಂಬ ವ್ಯವಹಾರವೂ ಇದೆ; ಹಿಂದೆ ಇದ್ದ ಸೂತ್ರರೂಪವಾದ ಗ್ರಂಥವೇ ಈಗ ಅದರ ವಿವರಣರೂಪವಾದ ಶ್ಲೋಕಗಳಾಗಿವೆ ಎಂದು ಕೆಲವರೂ, ಈಗಿನ ಗ್ರಂಥವು ಹಿಂದೆ ಇದ್ದ ಇನ್ನೂ ವಿಸ್ತಾರವಾದ ಗ್ರಂಥದ ಸಂಗ್ರಹವೆಂದೂ ಇನ್ನೂ ಕೆಲವರೂ ಅಭಿಪ್ರಾಯಪಡುತ್ತಾರೆ. ಇದರಲ್ಲಿ ಅಲ್ಲಲ್ಲಿ ಅನುವಾದ ಮಾಡಿರುವ ಶ್ಲೋಕಗಳನ್ನು ನೋಡಿದರೆ ಇದಕ್ಕೂ ಹಿಂದೆ ಈ ವಿಷಯದ ಮೇಲೆ ಪ್ರಮಾಣಗ್ರಂಥಗಳು ಇದ್ದಂತೆ ಊಹಿಸಬೇಕಾಗುತ್ತದೆ. ಆದರೆ ಅವುಗಳ ಹೆಸರಾಗಲಿ ಕರ್ತೃವಾಗಲಿ ಈ ಗ್ರಂಥದಲ್ಲಿ ಎಲ್ಲಿಯೂ ಉಕ್ತವಾಗಿಲ್ಲ.

---

[151] ನಾಟ್ಯಶಾಸ್ತ್ರ – ಆದ್ಯರಂಗಾಚಾರ್ಯ – ಅಕ್ಷರ ಪ್ರಕಾಶನ, ಹೆಗ್ಗೋಡು – 2003.

ಈಗಿರುವ ನಾಟ್ಯಶಾಸ್ತ್ರ ಗ್ರಂಥದಲ್ಲಿ ಮುವ್ವತ್ತೇಳು ಅಧ್ಯಾಯಗಳಿವೆ. ಇವುಗಳಲ್ಲಿ ಮೊದಲನೆಯ ಐದು ಅಧ್ಯಾಯಗಳು ಪೀಠಿಕಾರೂಪವಾಗಿಯೂ, ಕೊನೆಯ ಎರಡು ಅಧ್ಯಾಯಗಳು ಉಪಸಂಹಾರರೂಪವಾಗಿಯೂ ಇವೆ. ಮಧ್ಯೆ ಇರುವ ಮಿಕ್ಕ ಮುವ್ವತ್ತು ಅಧ್ಯಾಯಗಳು ರಂಗವಿಚಾರವನ್ನು ನಿರೂಪಿಸುತ್ತವೆ. ಪೀಠಿಕಾಭಾಗದಲ್ಲಿ ನಾಟ್ಯದ ಉತ್ಪತ್ತಿ, ಉದ್ದೇಶ, ಮಂಟಪವಿಧಾನ, ಪೂರ್ವರಂಗವಿಧಾನ ಎಂಬ ಮುಖ್ಯವಾದ ಮೂರು ಅಂಶಗಳಿವೆ; ಅಲ್ಲಿಂದ ಮುಂದಿನ ಅಧ್ಯಾಯಗಳಲ್ಲಿ ರಸ ಮತ್ತು ಭಾವಗಳು (ಅಧ್ಯಾಯ 6–7), ಅಭಿನಯ (ಆಂಗಿಕ 8–12, ವಾಚಿಕ 14–19, ಆಹಾರ್ಯಾದಿ 21–26), ಧರ್ಮಿ (13), ವೃತ್ತಿ (20), ಪ್ರವೃತ್ತಿ (13), ಸಿದ್ಧಿ (27), ಸ್ವರ ಆತೋದ್ಯ ಗಾನ (28–34), ರಂಗಕ್ಕೆ ಸಂಬಂಧಪಟ್ಟ ಇತರ ವಿಚಾರ (35), ಭರತಶಾಸ್ತ್ರ ಭೂಲೋಕಕ್ಕೆ ಬಂದದ್ದು (36–37) ಈ ವಿಚಾರಗಳು ಉಕ್ತವಾಗಿವೆ. ನಾಟ್ಯಲಕ್ಷಣವನ್ನು ವಿವರಿಸುವ ಮಿಕ್ಕ ಗ್ರಂಥಗಳೆಲ್ಲವೂ ಪ್ರಾಯಿಕವಾಗಿ ಇದನ್ನೇ ಅವಲಂಬಿಸಿಕೊಂಡು ಹುಟ್ಟಿವೆ. ಈ ವಿಚಾರದ ಮೇಲೆ ಇಷ್ಟು ವಿಸ್ತಾರವೂ ವ್ಯಾಪಕವೂ ಆದ ಮತ್ತಾವ ಸಂಸ್ಕೃತಗ್ರಂಥವೂ ಇಲ್ಲ.

**ನಾಟ್ಯಶಾಸ್ತ್ರದ ಇತರ ಲಕ್ಷಣಗ್ರಂಥಗಳು :**

ನಾಟ್ಯಶಾಸ್ತ್ರದ ಮೇಲೆ ಅಭಿನವಗುಪ್ತರು (ಕ್ರಿ. ಶ. 1000)ಬರೆದಿರುವ 'ಅಭಿನವ ಭಾರತೀ' ಎಂಬ ವ್ಯಾಖ್ಯಾನವು ಮೂಲದಷ್ಟೇ ಬೆಲೆಯುಳ್ಳದ್ದಾಗಿದೆ; ಅನೇಕ ಕಡೆ ಅದಕ್ಕೆ ಪೂರಕವಾಗಿದೆ. ಮುಂದೆ ಬಂದ ಸಾಹಿತ್ಯಶಾಸ್ತ್ರ, ಶಿಲ್ಪಶಾಸ್ತ್ರ, ಸಂಗೀತಶಾಸ್ತ್ರ, ಅಭಿನಯಶಾಸ್ತ್ರ ಮುಂತಾದ ಶಾಸ್ತ್ರಗಳ ಮೇಲಣ ಗ್ರಂಥಗಳು ಮುಖ್ಯವಾಗಿ ತಮ್ಮ ತಮ್ಮ ಶಾಸ್ತ್ರಕ್ಕೆ ಸಂಬಂಧಪಡುವ ಅಂಶಗಳನ್ನೂ ಅವುಗಳಿಗೆ ಸಂಬಂಧಪಟ್ಟ ಹಾಗೆ ಇತರ ವಿಚಾರಗಳನ್ನೂ ಪ್ರಸ್ತಾಪಿಸುತ್ತವೆ. ಹೀಗೆ ಧನಂಜಯನ 'ದಶರೂಪಕ'ವು (10 ನೆಯ ಶತಮಾನ) ಹತ್ತು ವಿಧವಾದ ರೂಪಕಗಳನ್ನೂ, ಅವುಗಳ ವಸ್ತು– ಪಾತ್ರ– ರಸಗಳನ್ನೂ ನಾಲ್ಕು ಅಧ್ಯಾಯಗಳಲ್ಲಿ ವಿವರಿಸುತ್ತದೆ. ಶಾರದಾತನಯನ 'ಭಾವಪ್ರಕಾಶನ' ವು (ಸು.ಕ್ರಿ.ಶ. 1200) ಹತ್ತು 'ಅಧಿಕಾರ' ಗಳಲ್ಲಿ ಭಾವ, ರಸ, ನಾಯಕ, ನಾಯಿಕಾಭೇದ, ಶಬ್ದಾರ್ಥ ಸಂಬಂಧ, ರೂಪಕದ ಮತ್ತು ಉಪರೂಪಕದ ಭೇದಗಳು ಇವುಗಳನ್ನು ಇತರರ ಅಭಿಪ್ರಾಯಗಳೊಡನೆ ವಿಮರ್ಶಿಸುತ್ತದೆ. ವಿದ್ಯಾನಾಥನ 'ಪ್ರತಾಪರುದ್ರೀಯ' ವು (ಸು.ಕ್ರಿ.ಶ. 1300) ಸಾಹಿತ್ಯಸ್ವರೂಪವನ್ನು ಸಮಗ್ರವಾಗಿ ತಿಳಿಸಲು ಸಂಕಲ್ಪಿಸಿ ದೃಶ್ಯಕಾವ್ಯ ಲಕ್ಷಣಗಳನ್ನು ಹೇಳಿರುವುದಲ್ಲದೆ, ಲಕ್ಷ್ಯವಾಗಿ ಒಂದು ನಾಟಕವನ್ನೇ ಗರ್ಭೀಕರಿಸಿದೆ.[152] ವಿದ್ಯಾಧರನ 'ಏಕಾವಳಿ'

---

[152] ಸಾಹಿತ್ಯದರ್ಪಣ – ಅನುವಾದ: ಡಾ.ಟಿ.ಜಿ.ಸಿದ್ದಪ್ಪಾರಾಧ್ಯ – ಹೇಮಾಪ್ರಿಂಟರ್ಸ್, ಮೈಸೂರು –1967

ಯೂ (ಸು.ಕ್ರಿ.ಶ. 1300) ಬಹುಮಟ್ಟಿಗೆ ಪ್ರತಾಪರುದ್ರೀಯದಂತೆಯೇ ಇದೆ. ವಿಶ್ವನಾಥನ 'ಸಾಹಿತ್ಯದರ್ಪಣ' ವು (ಸು.ಕ್ರಿ.ಶ. 1350) ಅದರ ದೃಶ್ಯಕಾವ್ಯ ನಿರೂಪಣ ರೂಪವಾದ ನಾಲ್ಕು ಅಧ್ಯಾಯಗಳಲ್ಲಿ (3–6) ರೂಪಕ, ಉಪರೂಪಕ, ವಸ್ತು, ಪಾತ್ರ, ರಸ ಇವುಗಳ ವಿಚಾರವನ್ನು ವಿಸ್ತಾರವಾಗಿ ವಿವರಿಸಿದೆ.

ನವೀನಾಲಂಕಾರಿಕರು ರಸಕ್ಕೆ ಪ್ರಾಧಾನ್ಯ ಕೊಡುತ್ತಾರೆ; ಆದ್ದರಿಂದ ಕೇವಲ ಶ್ರವ್ಯಕಾವ್ಯ ವಿಚಾರವೊಂದನ್ನೇ ಹೇಳಹೊರಡುವ ಈಚಿನ ಕೆಲವು ಅಲಂಕಾರ ಗ್ರಂಥಗಳೂ ಆನುಷಂಗಿಕವಾಗಿ ರಸ, ಅದಕ್ಕೆ ಸಂಬಂಧಪಟ್ಟಂತೆ ಭಾವ, ನಾಯಕ, ನಾಯಿಕೆ ಇವುಗಳನ್ನು ಪ್ರಸ್ತಾಪಿಸುತ್ತವೆ. ಕೆಲವು ಇವುಗಳಲ್ಲಿ ಒಂದೊಂದನ್ನೇ ತೆಗೆದುಕೊಂಡು ವಿವರಿಸಿರುವುದೂ ಉಂಟು; ಭೋಜನ (ಕ್ರಿ.ಶ. 11ನೆಯ ಶತಮಾನ) 'ಸರಸ್ವತೀ ಕಂಠಾಭರಣ', 'ಶೃಂಗಾರಪ್ರಕಾಶ', ಶಿಂಗಭೂಪಾಲನ (ಕ್ರಿ.ಶ.14 ನೆಯ ಶತಮಾನ) 'ರಸಾರ್ಣವ ಸುಧಾಕರ' ಮುಂತಾದುವು ಇಂಥ ಗ್ರಂಥಗಳು.

ಶಾರ್ಙ್ಗದೇವನ (ಕ್ರಿ.ಶ. 13ನೆಯ ಶತಮಾನ) 'ಸಂಗೀತ ರತ್ನಾಕರ' ವು ಸಂಗೀತಶಾಸ್ತ್ರಕ್ಕೇ ಇರುವುದಾದರೂ ಅದರಲ್ಲಿ ರಸ–ಭಾವ–ಅಭಿನಯಾದಿಗಳ ವಿಚಾರವೂ ಅಡಗಿದೆ. 'ಸಂಗೀತ ಚೂಡಾಮಣಿ' 'ಸಂಗೀತ ಮಕರಂದ' ಮುಂತಾದ ಸಂಗೀತ ಗ್ರಂಥಗಳಲ್ಲಿ ನಾಟ್ಯಶಾಲೆಯ ವಿಚಾರವೂ ವಿವರಿಸಲ್ಪಟ್ಟಿವೆ.[153]

'ವಿಷ್ಣುಧರ್ಮೋತ್ತರ', 'ಮಾನಸೋಲ್ಲಾಸ', ಭೋಜನ 'ಸಮರಾಂಗಣ ಸೂತ್ರಧಾರ', ಶ್ರೀಕುಮಾರನ 'ಶಿಲ್ಪರತ್ನ', ವಾಸುದೇವ ಸೂರಿಯ 'ಪ್ರಾಸಾದ ಲಕ್ಷಣ' ಮುಂತಾದ ಶಿಲ್ಪಶಾಸ್ತ್ರ ಗ್ರಂಥಗಳು ನಾಟ್ಯ ಮಂದಿರಗಳ ಸ್ವರೂಪ, ಅವುಗಳನ್ನು ಕಟ್ಟುವ ರೀತಿ ಮುಂತಾದುವುಗಳನ್ನು ವಿವರಿಸುತ್ತವೆ.

ನಾಟ್ಯವನ್ನೂ, ಅಭಿನಯವನ್ನೂ ತಿಳಿಸುವುದಕ್ಕಾಗಿಯೇ ಅನೇಕ ಗ್ರಂಥಗಳು ಹುಟ್ಟಿವೆ. 'ಅಭಿನಯ ದರ್ಪಣ', 'ನಾಟ್ಯ ದರ್ಪಣ', 'ನಾಟ್ಯ ಪ್ರದೀಪ', 'ನಾಟ್ಯ ಚೂಡಾಮಣಿ' ಇವು ಇಂಥ ಗ್ರಂಥಗಳು. ಇವಲ್ಲದೆ ಮೇಲೆ ಕಂಡ ವಿಷಯಗಳನ್ನು ತಿಳಿಸುವ ಇನ್ನೂ ಅನೇಕ

---

[153] Samgeetaratnakara of sarangadeva,translatedby Dr.k kunjunni Raja & adhaBurnier,Adyar library & Research Centre,1976.

ಗ್ರಂಥಗಳು ಹಸ್ತಪ್ರತಿಯ ರೂಪದಲ್ಲಿದ್ದು ಪ್ರಕಾಶಕ್ಕೆ ಬಾರದೆ ಇವೆಯೆಂದು ಗೊತ್ತಾಗುತ್ತದೆ; ಆದರೆ ಅವು ಅಷ್ಟು ಪ್ರಧಾನವೂ ಪ್ರಮಾಣವೂ, ಪ್ರಸಿದ್ಧವೂ ಆಗಿ ಕಾಣುವುದಿಲ್ಲ.

ಭಾರತೀಯ ಸಂಗೀತವು ಕರ್ನಾಟಕ ಸಂಗೀತ ಮತ್ತು ಹಿಂದೂಸ್ತಾನಿ ಸಂಗೀತವೆಂದು ಎರಡುಶಾಖೆಗಳಾದುದು ಪ್ರಾಯಶಃ ಮಧ್ಯ ಯುಗದಲ್ಲಿ. ಕರ್ನಾಟಕ ಸಂಗೀತಕ್ಕಂತೂ ಪುರಂದರದಾಸರೇ ಪಿತಾಮಹರೆಂದು ಖ್ಯಾತರಾಗಿದ್ದಾರೆ. ಹಿಂದೂಸ್ತಾನಿ ಸಂಗೀತಕ್ಕೂ ಕರ್ನಾಟಕದ ಕೊಡುಗೆ ಸಾಮಾನ್ಯವಾದುದೇನಲ್ಲ. ಪ್ರಚಲಿತ ಸಂಗೀತಕ್ಕೆ ಹೊಸ ಸ್ವರೂಪ ಕೊಟ್ಟಿರುವುದಲ್ಲದೆ ಹೊಸ ಮಾರ್ಗದತ್ತ ಅದನ್ನು ಕೊಂಡೊಯ್ಯುವಲ್ಲಿ ಕರ್ನಾಟಕವು ವಹಿಸಿದ ಪಾತ್ರ ಪ್ರಶಂಸನೀಯ. ಇನ್ನೊಂದು ಹೆಮ್ಮೆಯ ಸಂಗತಿಯೆಂದರೆ ಸಂಗೀತವನ್ನು ಕುರಿತ ಪ್ರಮುಖ ಆಧಾರ ಗ್ರಂಥಗಳು ಕರ್ನಾಟಕದಲ್ಲಿಯೇ ರಚಿತವಾಗಿವೆ.[154] ಇಲ್ಲವೆ ಕರ್ನಾಟಕದ ಹೊರಗೆ ಕರ್ನಾಟಕದವರಿಂದಲೇ ರಚಿತವಾಗಿವೆ. ಚಾಳುಕ್ಯಚಕ್ರೇಶ್ವರ ಮುಮ್ಮಡಿ ಭೂಲೋಕಮಲ್ಲ ಸೋಮೇಶ್ವರನ "ರಾಜಮಾನಸೋಲ್ಲಾಸಾ," ಜಗದೇಕಮಲ್ಲನ "ಸಂಗೀತ ಚೂಡಾಮಣಿ", ಸಾರಂಗದೇವನ "ಸಂಗೀತ ರತ್ನಾಕರ" ಇದಕ್ಕೆ ಕಲ್ಲಿನಾಥನಿಂದ ರಚಿತವಾದ "ಕಳಾನಿಧಿ"ಯೆಂಬ ಪ್ರಗಲ್ಭ ಭಾಷ್ಯ, ಬಂಡಾರು ಲಕ್ಷ್ಮೀನಾರಾಯಣ ವಿರಚಿತ "ಸಂಗೀತ ಸೂರ್ಯೋದಯ", ರಾಮಾದಿತ್ಯನ "ಸ್ವರಮೇಳ ಕಳಾನಿಧಿ", ಇಮ್ಮಡಿ ಬಸಪ್ಪನಾಯಕನ "ಶಿವತತ್ತ್ವ ರತ್ನಾಕರ", ನಿಜಗುಣ ಶಿವಯೋಗಿಗಳ "ವಿವೇಕ ಚಿಂತಾಮಣಿ", ಸುಲ್ತಾನ ಇಮ್ಮಡಿ ಇಬ್ರಾಹಿಮ್ ಆವಿಲ್‌ಖಾನನ "ಕಿತಾಬ–ಎ–ನವರಸ್", ಬಿಜ್ಜವರದ ಮುಮ್ಮಡಿ ಚಿಕ್ಕಭೂಪಾಲನ "ಅಭಿನವಭರತಸಾರಸಂಗ್ರಹ", ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ "ಶ್ರೀ ತತ್ತ್ವನಿಧಿ" ಇವೆಲ್ಲ ಕರ್ನಾಟಕದಲ್ಲಿಯೇ ರಚಿತವಾದ ಸಂಗೀತ ಮತ್ತು ನಾಟ್ಯಶಾಸ್ತ್ರದ ಪ್ರಮಾಣ ಗ್ರಂಥಗಳು.

ಕರ್ನಾಟಕದ ಹೊರಗೆ ಕರ್ನಾಟಕದವರಿಂದ ರಚಿತವಾದ ಆಧಾರ ಗ್ರಂಥಗಳಲ್ಲಿ, ಆಕರ ಗ್ರಂಥಗಳಲ್ಲಿ ಮಿಥಿಲೆಯ ರಾಷ್ಟ್ರಕೂಟವಂಶಸ್ಥ ಪ್ರಭು ಮಾತೃದೇವನ "ಸರಸ್ವತೀ ಹೃದಯಾಲಂಕಾರ", ಸಾತನೂರಿನ ಪುಂಡರೀಕ ವಿಠಲನ "ಸದ್ರಾಗಚಂದ್ರೋದಯ", "ರಾಗಮಂಜರಿ", "ರಾಗಮೇಳ", "ನರ್ತನ ನಿರ್ಣಯ"ಗಳು, ತಂಜಾವೂರಿನ ದೊರೆ ರಘುನಾಥ ನಾಯಕನ ಮುಖ್ಯಮಂತ್ರಿಯಾಗಿದ್ದ ಗೋವಿಂದ ದೀಕ್ಷಿತ ವಿರಚಿತ "ಸಂಗೀತ ಸುಧಾ", ಅವನ ಮಗ ವೆಂಕಟಮುಖಿಯ "ಚತುರ್ದಂಡಿ ಪ್ರಕಾಶಿಕಾ" ಇತ್ಯಾದಿಗಳು ವಿಖ್ಯಾತವಾಗಿವೆ.

[154] Manasollasa king Someshwara, G.K Shrigondekar ,published Oriental Institute,Baroda 1939

ಕರ್ನಾಟಕದಲ್ಲಿ ನಾಟ್ಯಕಲೆ ಗತವೈಭವದ ಗುರುತಾಗಿ ಮಾತ್ರ ಉಳಿದಿಲ್ಲ. ಈ ಶತಮಾನದಲ್ಲಿಯೂ ವೀಣೆ ಶೇಷಣ್ಣನವರು, ಮೈಸೂರು ಸದಾಶಿವರಾಯರು, ಬಿಡಾರದ ಕೃಷ್ಣಪ್ಪನವರು, ವಾಸುದೇವಾಚಾರ್ಯರು, ಟಿ.ಚೌಡಯ್ಯನವರು, ದೊರೆಸ್ವಾಮಿ ಅಯ್ಯಂಗಾರ್, ಸವಾಯಿಗಂಧರ್ವ, ಕುಮಾರಗಂಧರ್ವ, ಮಲ್ಲಿಕಾರ್ಜುನ ಮನ್ಸೂರ, ಗಂಗೂಬಾಯಿ ಹಾನಗಲ್, ಭೀಮಸೇನಜೋಷಿ, ಬಸವರಾಜ ರಾಜಗುರು ಮೊದಲಾದ ವಿಖ್ಯಾತ ಸಂಗೀತಕಲಾಪ್ರಪೂರ್ಣರನ್ನು ಕೊಟ್ಟ ಕೀರ್ತಿ ಕರ್ನಾಟಕದ್ದು. ಇವರ ಪಾವನ ಪರಂಪರೆಯನ್ನು ಮುಂದುವರಿಸುವುದು ಈಗ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳ ಕರ್ತವ್ಯವಾಗಿದೆ.

ಈ ಶಾಸ್ತ್ರದಲ್ಲಿ ನಾಟ್ಯದ ವಿವಿಧ ಸ್ವರೂಪಗಳು ನಾಟ್ಯದಿಂದಾಗ ಬಹುದಾದ ಉಪಯೋಗಗಳು ಇತ್ಯಾದಿಗಳನ್ನು ತಿಳಿದು ಅವುಗಳಿಂದ ನಮಗೆ ಉತ್ತಮ ಫಲದೊರೆಯಬೇಕಾದರೆ ಅದಕ್ಕೊಂದು ನಿಯಮದ ಅವಶ್ಯಕತೆ ಇದೆ ಎಂದು ಭಾವಿಸಿ ನಾಟ್ಯಶಾಸ್ತ್ರ ಗ್ರಂಥಗಳನ್ನು ರಚಿಸಿದ್ದಾರೆ, ಅವುಗಳಲ್ಲಿ

1) ಭರತ ಮುನಿಯ ಪುತ್ರನಾದ ಕೊಡಲನು ಬರೆದ ಸಂಗೀತ ಹಾಗೂ ನಾಟ್ಯಶಾಸ್ತ್ರ ಗ್ರಂಥಗಳು.
2) ಆಚಾರ್ಯ ಅಭಿನವ ಗುಪ್ತರು ಬರೆದ ಗ್ರಂಥಗಳು ಬಹುಮುಖ್ಯವೆಂದು ವರ್ಣಿತವಾಗಿವೆ.
3) ಶ್ರೀ ನಾರದ ಸಂಪಾದಿತವಾದ "ಪಂಚಭರತಮ್" ಎಂಬ ಗ್ರಂಥ, ಈ ಗ್ರಂಥದ ವಿಚಾರ ಐದನೇ ಶತಮಾನದ "ಶಿಲಪ್ಪಾದಿಕಾರಂ" ಎಂಬ ತಮಿಳು ಗ್ರಂಥದಲ್ಲಿ ಇದರ ಉಲ್ಲೇಖವಿದೆ, ಅಲ್ಲದೆ ನಾಟ್ಯಶಾಸ್ತ್ರದ ಬಗ್ಗೆ ಹಿಂದೆ ಇದ್ದ ಅನೇಕ ಕೃತಿಗಳನ್ನು ಕ್ರೋಢೀಕರಿಸಿ "ಪಂಚಭರತ" ಎಂಬ ಕೃತಿಯನ್ನು ರಚಿಸಲಾಯಿತು ಎನ್ನಲಾಗಿದೆ.
4) ಪ್ರಾಚೀನ ಕಾಲದಲ್ಲಿದ್ದ ನಾಟ್ಯಶಾಸ್ತ್ರ ಗ್ರಂಥಗಳನ್ನು ಸಂಗ್ರಹಿಸಿ ಮತ್ತು ಬೇರೆ ಬೇರೆ ಗ್ರಂಥಗಳಲ್ಲಿ ನರ್ತನ (ನಾಟ್ಯ) ಶಾಸ್ತ್ರಕ್ಕೆ ಸಂಬಂಧಿಸಿದ ವಿಷಯಗಳನ್ನು ಸಂಗ್ರಹಿಸಿ ಬರೆಯಲ್ಪಟ್ಟ ಗ್ರಂಥವೇ "ಆದಿ ಭರತಮ್" ಎಂಬ ಗ್ರಂಥವಾಗಿದೆ.
5) "ನಂದಿಭರತಮ್" ಈ ಗ್ರಂಥದಲ್ಲಿನ ವಿಚಾರವೇ ನಂದಿಕೇಶ್ವರ ವಿರಚಿತವಾದ ಭರತಾರ್ಣವವೆಂಬ ಗ್ರಂಥವಾಗಿದೆ.
6) "ಅರ್ಜುನ ಭರತಮ್" ಇದೂ ಕೂಡ ಪುರಾತನ ಗ್ರಮಥಗಳಲ್ಲಿನ ವಿಷಯವನ್ನೇ ಆಧರಿಸಿದೆ. ಇದರಲ್ಲಿ ತಾಳ ಮತ್ತು ಹಸ್ತಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಹೇಳಲಾಗಿದೆ.
7) "ಹನುಮದ್‌ಭರತಮ್" ಇದು ಸಂಗೀತ ನೃತ್ಯಾಧಿಗಳ ಬಗ್ಗೆ ಬರೆದ ತಾಳೆಗಿರಿ ಗ್ರಂಥ

8) **"ಮಾತುಗ ಭರತಮ್"** ಇದೂ ಕೂಡ ನರ್ತನ ಶಾಸ್ತ್ರ ಗ್ರಂಥವಾಗಿದ್ದು ಇದನ್ನು **"ಶ್ರೀ ಲಕ್ಷ್ಮಣಾರ್ಯ"** ಎಂಬುವರು ಸಂಗ್ರಹಿಸಿದ್ದಾರೆ ಎನ್ನಲಾಗಿದೆ. ಮುಖ್ಯವಾಗಿ **"ನಂದಿಕೇಶ್ವರ ಸಂಹಿತಾ"** ಭರತಾರ್ಣವ ಇದು 4000 ಶ್ಲೋಕ ಉಳ್ಳದ್ದು ಭರತಾರ್ಣವ ಸಂಗ್ರಹ ಗುಹೇಷ ಭರತತಾರ್ಣವ ಪಂಚಭರತಮ್ ಇವುಗಳು ಮುಖ್ಯವಾಗಿವೆ.

ನಾಟಕದ ವಿಚಾರವು ಇಷ್ಟು ದೊಡ್ಡದಾದ್ದರಿಂದಲೇ, ಸಾಧಾರಣವಾಗಿ ಅದರ ಒಂದೊಂದು ಭಾಗದ ಪ್ರತಿಪಾದನೆ ಒಂದೊಂದು ಶಾಸ್ತ್ರದಲ್ಲಿ ವಿಸ್ತಾರವಾಗಿ ಕಂಡುಬರುತ್ತದೆ; ಸಾಹಿತ್ಯಶಾಸ್ತ್ರದಲ್ಲಿ ಕಾವ್ಯಾಂಶ; ನಾಟ್ಯಶಾಸ್ತ್ರದಲ್ಲಿ ಅಭಿನಯಾಂಶ; ಸಂಗೀತಶಾಸ್ತ್ರದಲ್ಲಿ ಸಂಗೀತಾಂಶ; ವಾಸ್ತುಶಾಸ್ತ್ರದಲ್ಲಿ ನಾಟ್ಯ ಮಂದಿರದ ನಿರ್ಮಾಣ–ಇತ್ಯಾದಿ. ಈ ಅಂಶಗಳೆಲ್ಲವನ್ನೂ ಭರತನ ನಾಟ್ಯಶಾಸ್ತ್ರವು ವಿವರಿಸುತ್ತದೆ. ಅದಕ್ಕೆ ಸಂಗ್ರಹವಾಗಿ **"ಭರತಶಾಸ್ತ್ರ"**[155] ವೆಂದೂ ಹೆಸರು.

**ನಾಟ್ಯಶಾಸ್ತ್ರಕ್ಕೆ ಸಂಬಂಧಪಟ್ಟ ಪ್ರಮುಖ ಲಕ್ಷಣ ಗ್ರಂಥಗಳು ಹಾಗೂ ಗ್ರಂಥಕಾರರು:**

ಸಂಸ್ಕೃತದಲ್ಲಿ ನಾಟಕಲಕ್ಷಣಕ್ಕೆ ಸಂಬಂಧಪಟ್ಟ ಉಪಲಬ್ಧಗ್ರಂಥಗಳು ವಿರಳ. ಅವುಗಳಲ್ಲಿ ಮುಖ್ಯವಾದುವು ಭರತನ 'ನಾಟ್ಯಶಾಸ್ತ್ರ', ಧನಂಜಯನ 'ದಶರೂಪಕ', ಶಾರದಾತನಯನ 'ಭಾವಪ್ರಕಾಶನ', ವಿದ್ಯಾನಾಥನ 'ಪ್ರತಾಪರುದ್ರೀಯ', ವಿಶ್ವನಾಥನ 'ಸಾಹಿತ್ಯದರ್ಪಣ'. ಈ ಗ್ರಂಥಗಳಲ್ಲಿ ಪ್ರತಿಪಾದಿತವಾದ ನಾಟಕಲಕ್ಷಣದ ಕೆಲವಂಶಗಳನ್ನು ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ. ಬಹುತೇಕ ವಿಶ್ವನಾಥನ ಸಾಹಿತ್ಯದರ್ಪಣದಲ್ಲಿ ಉಕ್ತವಾಗಿರುವ ರೂಪಕ ಹಾಗೂ ನಾಟ್ಯಲಕ್ಷಣಗಳನ್ನು ಶಿವತತ್ತ್ವರತ್ನಾಕರದಲ್ಲಿ ಬಸಪ್ಪನಾಯಕನು ಉದ್ಧರಿಸಿರುವುದು ಅವನಲ್ಲಿದ್ದ ಶಾಸ್ತ್ರ ವಿವೇಕದ ಸೂಚನೆಯಾಗಿದೆ.

'ನಾಟ್ಯಶಾಸ್ತ್ರ'ವು ನಾಟಕ, ಸಂಗೀತ ಮುಂತಾದ ಅನೇಕ ಕಲೆಗಳ ವಿಚಾರವನ್ನೊಳಗೊಂಡ ಒಂದು ಬೃಹದ್ಗ್ರಂಥ; ನಾಟ್ಯಮಂಟಪ, ಪ್ರೇಕ್ಷಾಗೃಹಗಳ ರಚನೆ, ಪೂರ್ವರಂಗ, ರಸಭಾವಾದಿಗಳು, ನೃತ್ಯದಲ್ಲಿನ ಮುದ್ರೆಗಳು, ನಾಟ್ಯಮಂಟಪದಲ್ಲಿ ವಾದ್ಯ ಮುಂತಾದವುಗಳಿಗೆ ಸ್ಥಳವಿಭಜನೆ, ನಾಟಕದ ಭಾಷೆ ವಿಭಾಷೆಗಳು, ವೃತ್ತಗಳು, ರೂಪಕದ ವಿಧಗಳು, ಅವುಗಳ ರಚನೆಗೆ ಸಂಬಂಧಪಟ್ಟ ವಿಷಯಗಳು ವಾದ್ಯಗಳು, ತಾಳ–ಲಯಗಳು, ಜಾತಿ–ಸ್ವರಗಳು, ನಾಯಕ–ನಾಯಿಕಾ, ಇವರ ಗುಣಶೀಲಗಳು, ನಟರ ಲಕ್ಷಣಗಳು–ಇವೇ ಮೊದಲಾದವನ್ನೊಳಗೊಂಡು

---

[155] ಸಂಸ್ಕೃತ ಭಾಷಾಶಾಸ್ತ್ರ ಮತ್ತು ಸಾಹಿತ್ಯ ಚರಿತ್ರೆ – ಡಾ.ಕೃಷ್ಣಮೂರ್ತಿ – ಕರ್ನಾಟಕ ಸರ್ಕಾರ ಪಠ್ಯಪುಸ್ತಕ ಇಲಾಖೆ, ಬೆಂಗಳೂರು – 1993.

ಅದು ಲಲಿತಕಲೆಯ ಒಂದು ವಿಶ್ವಕೋಶದಂತಿದೆ. ಈ ತತ್ತ್ವವನ್ನು ಶಿವತತ್ತ್ವರತ್ನಾಕರವು ಒಳಗೊಂಡು ಇದೂ ಒಂದು ವಿಶ್ವಕೋಶವೇ ಆಗಿದೆ.

**ಧನಂಜಯನ ದಶರೂಪಕ:**

'ದಶರೂಪ'ವು 'ನಾಟ್ಯಶಾಸ್ತ್ರ'ದ ಮಾದರಿಯಲ್ಲಿ ರಚಿತವಾಗಿ ನಾಟಕಲಕ್ಷಣಕ್ಕೆ ಮೀಸಲಾದ ಗ್ರಂಥ; ಅದರ ನಾಲ್ಕು ಪ್ರಕಾಶಗಳಲ್ಲಿ ವಸ್ತು, ನಾಯಕ ಇತ್ಯಾದಿ, ನಾಟಕದ ಭಾಷೆ, ಪ್ರಸ್ತಾವನೆ, ನಾಟಕದ ವಿಧಗಳು, ರಸ–ಭಾವ ಮುಂತಾದವುಗಳ ವಿವರಣೆಗಳೂ ಇವೆ. ಭಾವ, ರಸ, ನಾಯಕ, ನಾಯಿಕಾಭೇದ ಮುಂತಾದವುಗಳ ಪ್ರತಿಪಾದನೆ ವಿಮರ್ಶೆಗಳು 'ಭಾವ ಪ್ರಕಾಶನ'ದ ವಿಷಯ. 'ಪ್ರತಾಪರುದ್ರ ಯಶೋಭೂಷಣ' 'ಸಾಹಿತ್ಯದರ್ಪಣ'ಗಳು ಕಾವ್ಯ–ನಾಟಕ ಇವೆರಡರ ಲಕ್ಷಣಗಳನ್ನು ನಿರೂಪಿಸುವ ಗ್ರಂಥಗಳು. ಇವುಗಳಲ್ಲಿ ಮೊದಲನೆಯ ಗ್ರಂಥ ನಾಟಕದ ವಿಚಾರದಲ್ಲಿ 'ದಶರೂಪ'ವನ್ನೂ, ಕಾವ್ಯದ ವಿಚಾರದಲ್ಲಿ 'ಕಾವ್ಯಪ್ರಕಾಶ'ವನ್ನೂ ಅನುಸರಿಸುತ್ತದೆ. ವಿಶ್ವನಾಥನ 'ಸಾಹಿತ್ಯದರ್ಪಣ'ವು ಹೆಚ್ಚು ಬಳಕೆಯಲ್ಲಿರುವ ಅಲಂಕಾರ ಗ್ರಂಥ; ಇದರಲ್ಲಿ 'ದಶರೂಪ' ಮತ್ತು 'ನಾಟ್ಯಶಾಸ್ತ್ರ' ಇವೆರಡರ ಪ್ರಭಾವವೂ ಇದೆ; ಪ್ರಾಯಶಃ ಅಲಂಕಾರಶಾಸ್ತ್ರಕ್ಕೆ ಸಂಬಂಧಪಟ್ಟ ಎಲ್ಲ ವಿಷಯಗಳೂ ಇಲ್ಲಿ ಪರಿಶೀಲಿಸಲ್ಪಟ್ಟಿವೆ' ಸುಲಭಶೈಲಿ, ಪ್ರತಿಪಾದನೆಯಲ್ಲಿ ವೈಶದ್ಯ ಮುಂತಾದ ಕಾರಣಗಳಿಂದ 'ಸಾಹಿತ್ಯದರ್ಪಣ' ಸಂಸ್ಕೃತಸಾಹಿತ್ಯದ ಪರಿಚಯ ಪ್ರವೇಶಗಳಿಗೆ ಉಪಯುಕ್ತವೂ ಸುಗಮವೂ ಆದ ಗ್ರಂಥವೆನಿಸಿಕೊಂಡಿದೆ. ಒಟ್ಟಿನಲ್ಲಿ ನಾಟಕಕ್ಕೆ ಸಂಬಂಧಪಟ್ಟ ರಸ, ವಸ್ತು, ಪಾತ್ರ ಮೊದಲಾದ ಹಲವಾರು ವಿಷಯಗಳನ್ನು ನಿರೂಪಿಸುವ ಈ ಕೆಲವು ಗ್ರಂಥಗಳು ಪ್ರಸಿದ್ಧಿಗೆ ಬಂದಿವೆ. ಈ ಗ್ರಂಥಗಳ ಅವಲೋಕನ, ಪರಾಮರ್ಶನ ಕೃತಿಯಲ್ಲಿ ನಾಟ್ಯಶಾಸ್ತ್ರಾದಿಗಳ ಬಗ್ಗೆ ವಿಪುಲವಾಗಿ ಚರ್ಚಿಸಿದ್ದಾನೆ.

**ಶಾರ್ಙ್ಗದೇವನ ಸಂಗೀತ ರತ್ನಾಕರ :**

**"गीतं वाद्यञ्च नृत्यञ्च त्रयं सङ्गीतमुच्यते"** [156] 'ಸಂಗೀತರತ್ನಾಕರ'ವು ನಿಃಶಂಕಹೃದಯವಾಗಿಯೂ ಸರಸ್ವತಿಯ ಮೇರು ಸದೃಶವಾದ, ರವಿಕೋಟಿ ತೇಜಸ್ಸಿನ ತೇರಿಗೆ ಸಣ್ಣ ಸೊಡರಿನ ಆರತಿಯಂತಿದೆ. ಸಂಗೀತ ರತ್ನಾಕರವನ್ನು ದೇವಗಿರಿಯ ಯಾದವಸಿಂಘಣದೇವನ ಕಂದಾಯದ ಮಂತ್ರಿಯಾಗಿದ್ದ ನಿಃಶಂಕಶಾರ್ಙ್ಗದೇವನು ಕ್ರಿ.ಶ.

---

[156] Samgeetaratnakara of sarangadeva,translated Dr.k kunjunni Raja & R adhaBurnier,Adyarlibrary & Research Centre,1976.

ಹದಿಮೂರನೆಯ ಶತಮಾನದ ಮೊದಲಲ್ಲಿ ಸಂಸ್ಕೃತದಲ್ಲಿ ರಚಿಸಿದನು. ಅವನು ಸೋಢಲದೇವನ ಪುತ್ರ, ಭಾಸ್ಕರದೇವನ ಪೌತ್ರ. ಗೀತವಾದನ, ನರ್ತನಗಳೆಲ್ಲವನ್ನೂ ಸಂಗೀತವೆಂಬ ಒಂದೇ ಶಬ್ದದ ಅರ್ಥದ ಪರಿಮಿತಿಯಲ್ಲಿ ವ್ಯವಸ್ಥಿತವೂ ವೈಜ್ಞಾನಿಕವೂ ಆದ ರೂಪದಲ್ಲಿ ಸಂಗೀತರತ್ನಾಕರವು ಮೊಟ್ಟಮೊದಲನೆಯ ಬಾರಿಗೆ ತಂದು ಅವುಗಳಿಗೂ ಅವುಗಳಲ್ಲಿ ಅಡಗಿದ ಮೌಲ್ಯಗಳಿಗೂ ವೇದೋಪವಸತಿಯನ್ನು ಪ್ರಪ್ರಥಮವಾಗಿ ನಿರ್ಮಿಸುತ್ತದೆ. ಭಾರತೀಯ ಸಂಸ್ಕೃತಿಯನ್ನು ಸಂಗೀತಶಾಸ್ತ್ರದ ಮೂಲಕ ಅಭ್ಯಾಸ ಮಾಡಲು ಇದೇ ಅತ್ಯಂತ ಸರಿಯಾದ ಗ್ರಂಥ. ಏಕೆಂದರೆ ಋಷಿದೃಷ್ಟಿಯನ್ನೂ, ಕವಿಹೃದಯವನ್ನೂ, ಶಾಸ್ತ್ರವೈದಗ್ಧ್ಯದ ಗರಿಷ್ಠಮಿತಿಯನ್ನೂ ಏಕಕಾಲದಲ್ಲಿ ಅತ್ಯುನ್ನತ ಮಟ್ಟದಲ್ಲಿ ಒಳಗೊಂಡ ಸಂಗೀತಶಾಸ್ತ್ರ ಗ್ರಂಥ ಇದೊಂದೇ ಆಗಿದೆ.

ಬೃಹತ್ತು–ಮಹತ್ತುಗಳಲ್ಲಿಯೂ ಸಂಗೀತರತ್ನಾಕರವು ಸಾಟಿಯಿಲ್ಲದುದು. ಭಗವಾನ್ ಭರತಮುನಿಯು ನಾಟ್ಯಸರ್ವಸ್ವವನ್ನು ಆರುಸಾವಿರ ಶ್ಲೋಕಗಳಲ್ಲಿಯೂ, ಗೀತವಾದಿತ್ರ ನರ್ತನಗಳನ್ನು ನಾಟ್ಯೋಪಕಾರಕಗಳೆಂದು ಮಾತ್ರ ಬಗೆದು ಸುಮಾರು ಒಂದು ಸಾವಿರ ಶ್ಲೋಕಗಳಲ್ಲಿ ವರ್ಣಿಸಿದ್ದರೆ ಭಗವಾನ್ ಶ್ರೀ ಶಾರ್ಙ್ಗದೇವನು ವಾದಿತ್ರನರ್ತನಗಳನ್ನೇ ಸುಮಾರು ಐದುಸಾವಿರ ಶ್ಲೋಕಗಳಲ್ಲಿ ವರ್ಣಿಸಿದ್ದಾನೆ. ಇವುಗಳಲ್ಲಿಯಾದರೂ ಪ್ರತಿಯೊಂದು ಮಾತೂ, ನಿಪಾತವೂ, ವಾಕ್ಯರಚನಾಕ್ರಮವೂ ಸಹ,–ಸೂತ್ರರೂಪದ್ದೇ ಆಗಿದೆ. **यदिहास्ति तदन्यत्र यन्नेहास्ति न कुत्रचित्** [೧೫೭] ಎಂಬ ಮಹಾಭಾರತದಂತೆಯೇ ಸಂಗೀತರತ್ನಾಕರದಲ್ಲಿ ಹೇಳದಿದ್ದುದು ಬೇರೆಡೆ ಇಲ್ಲ, ಬೇರೆಡೆ ಇರುವುದೆಲ್ಲ ಇಲ್ಲಿದೆ. ನಮ್ಮ ಸಂಗೀತಕ್ಕೆ ಇದು ವೇದಸದೃಶವಾದುದು. ಅದಕ್ಕೆ ಅದನ್ನು ಪಂಚಮವೇದವೆಂದು ಕರೆಯಲಾಗಿದೆ. ಅದನ್ನು ವಿಪುಲವಾಗಿ ಅಕ್ಷರಶಃ ಉದ್ಧರಿಸಿಕೊಳ್ಳದ ಅಥವಾ ಇತರ ರೀತಿಯಲ್ಲಿ ಸ್ಫೂರ್ತಿ, ಪೂರ್ತಿಗಳನ್ನು ಪಡೆಯದ ಸಂಗೀತರತ್ನಾಕರವನ್ನು ಸಂಪೂರ್ಣವಾಗಿ ಸ್ವಕಪೋಲಕಲ್ಪಿತವಾಗಿ ಬರೆಯಲಿಲ್ಲ. ಸಂಗೀತವೆಂಬ ರತ್ನಾಕರ (ಸಾಗರ)ವನ್ನು–ಪೂರ್ವಾಚಾರ್ಯರ ಮತಪಯೋನಿಧಿಯನ್ನು–ಕಡೆದು ಸಾರರೂಪವಾದ, ಅಮೃತಮಯವಾದ ಸಂಗೀತರತ್ನಾಕರವನ್ನು ರಚಿಸಿದ್ದೇನೆ ಎನ್ನುವ ಅವನ ಮಾತು ಅಕ್ಷರಶಃ ಸತ್ಯವಾದುದು. ಆದುದರಿಂದ ಹಿಂದು ಮುಂದಿನದರ ಹಿನ್ನೆಲೆಯಲ್ಲಿ, ಯಾಥಾತಥ್ಯದ ದೃಷ್ಟಿಕೋನದಲ್ಲಿ ಅಭ್ಯಾಸ ಮಾಡಿದಾಗ ಅವನ ಗ್ರಂಥವು ಇಡೀ ಭಾರತೀಯ

[157] Samgeetaratnakara of sarangadeva,translated Dr.k kunjunni Raja & R adhaBurnier,Adyarlibrary & Research Centre,1976.

ಸಂಗೀತದ ಸಮಗ್ರ ಇತಿಹಾಸವನ್ನು ಚಿತ್ರಿಸುತ್ತದೆ; ಈ ಮತವೈವಿಧ್ಯವನ್ನು ಒಂದಾಗಿ ಕಟ್ಟಿ ವ್ಯಾಪಕವೂ, ಏಕಕಾಂಡವೂ, ಸಂಪೂರ್ಣವೂ ಆದ ಜ್ಞಾನವನ್ನಾಗಿ ಪರಿವರ್ತಿಸಲು ಅಗತ್ಯವಾದ ಸೂತ್ರವನ್ನು ಕಲ್ಪಿಸಿಕೊಡುತ್ತದೆ.

ಯಾವುದೇ ಶಾಸ್ತ್ರದ ಅಭ್ಯಾಸವು ಅದರಲ್ಲಿ ಮಾತ್ರ ಮುಗಿಯುವುದಿಲ್ಲ. ಅದಕ್ಕೆ ಸಂಬಂಧಿಸಿದ ಇತರ ಶಾಸ್ತ್ರಗಳ ದೃಷ್ಟಿಕೋನದಿಂದ ಅಳೆದು, ವಿಮರ್ಶಿಸಿ, ಸಂಬಂಧಿಸಿ, ಬೆಲೆ ಕಟ್ಟಿದಾಗಲೇ ಅದರ ಅಭ್ಯಾಸವು ಸಾರ್ಥಕವಾಗಿ ಪ್ರಯೋಜನ ಸಮೃದ್ಧಿಯನ್ನು ಪಡೆಯುತ್ತದೆ. ಶ್ರೀ ಶಾರ್ಙ್ಗದೇವಸೂರಿಯು ಆತ್ಮವಿದ್ಯೆ, ಶರೀರವಿದ್ಯೆ, ಮನೋವಿಜ್ಞಾನ, ತತ್ತ್ವಜ್ಞಾನ, ನಾದವಿಜ್ಞಾನ, ಸೌಂದರ್ಯಮೀಮಾಂಸಾ ಶಾಸ್ತ್ರಜ್ಞಾನ ಮುಂತಾದವುಗಳಲ್ಲಿ ತಲಸ್ಪರ್ಶಿಯಾದ ಪರಿಣತಿಯನ್ನು ಪಡೆದವನು. ಸಂಗೀತರತ್ನಾಕರವು ಇದನ್ನು ನಿಸ್ಸಂದಿಗ್ಧವಾಗಿ ಪುನಃ ಪುನಃ ಪ್ರಮಾಣಿಸುತ್ತದೆ. ಈ ಎಲ್ಲ ಶಾಸ್ತ್ರಗಳ ಪರಿಭಾಷೆ, ತಂತ್ರ, ವಿಧಾನಗಳನ್ನೂ ಜ್ಞಾನವನ್ನೂ ಅನ್ವಯಿಸಿ ಸಂಗೀತಶಾಸ್ತ್ರವನ್ನು ವ್ಯಾಪಕವಾಗಿ ಅಭ್ಯಾಸ ಮಾಡಲು ಸಾಧಕವಾಗಿರುವುದು ಸಂಗೀತರತ್ನಾಕರವೊಂದೇ. ಇದಕ್ಕಿಂತ ಮ್ಯುಖ್ಯವಾದುದೆಂದರೆ ಈ ಶಾಸ್ತ್ರಗಳಲ್ಲಿ ಅತ್ಯಾಧುನಿಕವಾಗಿ ಸಂಶೊಧಿತವಾಗಿ ಸಿದ್ಧವಾಗಿರುವ ಜ್ಞಾನದ ಪರೀಕ್ಷೆಗೆ ಒಳಪಟ್ಟು ಯಶಸ್ವಿಯಾಗಿರುವ ಅರ್ಥಪೂರ್ಣವಾಗಿರುವ, ಸಂಗೀತಶಾಸ್ತ್ರ ಗ್ರಂಥಗಳಲ್ಲಿ ಮುಖ್ಯವಾದುದು ಇದೇ. ಆಧುನಿಕ ಸಂಶೊಧನೆಗಳ ಸಾರವನ್ನು ಸಾವಿರಾರು ವರ್ಷಗಳ ಹಿಂದೆ ನಮ್ಮ ಸಂಗೀತಶಾಸ್ತ್ರಕಾರರು ಮನಗಂಡು ಅಸಂದಿಗ್ಧವಾದ ಮಾತುಗಳಲ್ಲಿ ಹೇಳಿದ್ದಾರೆ. ಶಾಸ್ತ್ರೀಯವಾಗಿ ಅಭ್ಯಾಸಮಾಡಲು ಈ ಗ್ರಂಥವು ಏಕೈಕ ಸಾಧನವಾಗಿದೆ. ಅಷ್ಟೇ ಅಲ್ಲದೆ ಜಗತ್ತಿನ ಎಲ್ಲ ಸಂಗೀತಪದ್ಧತಿಗಳಿಗೂ ಮೂಲಭೂತವಾಗಿರುವ ಪ್ರಮೇಯಗಳ ವೈಜ್ಞಾನಿಕವಾದ ಜಿಜ್ಞಾಸೆಯನ್ನು ಬೀಜರೂಪದಲ್ಲಿ ಸಂಗೀತರತ್ನಾಕರವು ಶ್ರುತಪಡಿಸಿದೆ.

ಇಂತಹ ಶಾಸ್ತ್ರಗ್ರಂಥದ ಅಭ್ಯಾಸವು ವೈಜ್ಞಾನಿಕವಾಗಿಯೂ ವ್ಯಾಪಕವಾಗಿಯೂ ನಡೆಯದಿರುವುದು ಕಹಿಯಾದ ಆದರೆ ಸತ್ಯವಾದ ಸಂಗತಿ. ರಾಷ್ಟ್ರಿಯ ಮಟ್ಟದ ಸಂಗೀತಶಾಸ್ತ್ರದ ವಿಚಾರಗೋಷ್ಠಿಗಳಲ್ಲಿ ಸಹ ಈ ಗ್ರಂಥದ ಬಗ್ಗೆ ಅರೆಬೆಂದ ಕಲ್ಪನೆಗಳೂ, ಅದರ ಸತ್ಯಗಳೂ, ಮಿಥ್ಯಾರೋಪಗಳೂ ವ್ಯಕ್ತವಾಗಿವೆ. ಕನ್ನಡನಾಡಿನಲ್ಲಂತೂ ಈ ಗ್ರಂಥದ ಹೆಸರನ್ನು ಕೇಳಿರುವವರೇ ಅಪರೂಪ. ಇದೆಲ್ಲವನ್ನೂ ಮೀರಿ ಇನ್ನೂ ಒಂದು ಮುಖ್ಯ ಕಾರಣವಿದೆ: ಅದ್ಭುತವಾದ ಈ ಸಂಗೀತರತ್ನಾಕರವನ್ನು ರಚಿಸಿದ ಭಗವಾನ್ ಶ್ರೀ ಶಾರ್ಙ್ಗದೇವನು ಕನ್ನಡಿಗನಾಗಿದ್ದವನು.

**ಸಂಗೀತ–ನಾಟ್ಯಶಾಸ್ತ್ರಗಳ ಅನನ್ಯತೆ :**

ಸಂಸ್ಕೃತ ಸಾಹಿತ್ಯದಲ್ಲಿ ಸಂಗೀತಶಾಸ್ತ್ರ ಮತ್ತು ನಾಟ್ಯಶಾಸ್ತ್ರಗಳು ಅನಿರ್ವಚನೀಯವೂ, ಅನಿತರ ಸಾಧಾರಣವೂ, ಮಹನೀಯವೂ ಆದ ಸ್ಥಾನಗಳನ್ನು ಪಡೆದು ವಿರಾಜಮಾನವಾಗಿವೆ. ಜೊತೆಗೆ ಜಗತ್ತಿನ ಭಾಷೆಗಳ–ಸಂಸ್ಕೃತಿಗಳ ಜೀವಾಳವಾಗಿ ವಿಜೃಂಭಿಸಿವೆ. ಲೋಕಮನರಂಜನೆಗೆ ವಿಶಿಷ್ಟ ಮೆರುಗನ್ನು ನೀಡಿವೆ. ರಸಿಕರ ಕಣ್ಮನ ತಣಿಸುವ ತಾಣಗಳಾಗಿವೆ. ಸಂಗೀತವನ್ನೇ ಅತಿಯಾಗಿ ಅನುಸಂಧಾನ ಮಾಡಿದ ಪ್ರಾಚೀನಶಾಸ್ತ್ರಜ್ಞರು ತಮ್ಮ ಅಪಾರ ಅನುಭವದ ಆಧಾರದ ಮೇರೆಗೆ ಹೀಗೆ ವಿಶ್ಲೇಷಿಸಿದ್ದಾರೆ–

ಗೀತ–ವಾದ್ಯ–ನಾಟ್ಯವೆಂಬ ಮೂರು ಸಂಗತಿಗಳು ಒಟ್ಟುಗೂಡಿ 'ಸಂಗೀತ'ವೆಂಬ ಪದದಿಂದ ಸಮೃದ್ಧವಾಗಿವೆ. ಈ ಸಂಗಮದಲ್ಲಿ ನರ್ತನವು(ನಾಟ್ಯವು) ವಾದ್ಯಾನುಗಾಮಿಯಾಗಿದೆ. ವಾದ್ಯವು ಮತ್ತೆ ಗೀತಾನುಗಾಮಿಯಾಗಿದೆ. ಆದರೆ ಅವುಗಳಲ್ಲಿ ಕೇವಲ ಗೀತಭಾಗಕ್ಕೆ ಮಾತ್ರವೇ ಪ್ರಾಧಾನ್ಯತೆಯನ್ನು ಸಂಗೀತಶಾಸ್ತ್ರಜ್ಞರು ನೀಡಿದ್ದಾರೆ–

**नृत्यं वाद्यानुगं प्रवोक्तं वाद्यं गीतानुवृत्ति च ।**

**अतो गीतं प्रधानत्वादादावुपवर्ण्य ते ॥** [158]

**ಎಂದು** ಸಂಗೀತರತ್ನಾಕರದಲ್ಲಿ ಉಕ್ತವಾಗಿದೆ.

ಈ ಸಂಗೀತಶಾಸ್ತ್ರವು ಸ್ವರಮೂಲವಾಗಿದೆ. ಸ್ವರಗಳು ಷಡ್ಜವೇ ಮೊದಲಾಗಿ ಏಳು ವಿಧಗಳಾಗಿವೆ ಎಂದು ಪಾಣಿನೀಯ ಶಿಕ್ಷಾ ಗ್ರಂಥದಲ್ಲಿ ಹೀಗೆ ವಿಶ್ಲೇಷಿಸಲಾಗಿದೆ–

**उदात्तो निषादगान्धारावनुदात्तो ऋषभधैवतौ ।**

**स्वरितप्रभवा ह्येते षड्ज–मध्यम–पञ्चमाः ॥**[159] **ಎಂದು**

ಈ ಏಳು ಸ್ವರಗಳೇ ಸಂಗೀತ ತಂತ್ರದಲ್ಲಿ ಷಡ್ಜ–ಋಷಭ–ಗಾಂಧಾರ–ಮಧ್ಯಮ–ಪಂಚಮ–ಧೈವತ–ನಿಷಾದವೆಂಬ ಸಂಜ್ಞೆಯಿಂದ ಸಂಗೀಯನಗಳಾಗಿವೆ. ಈ ಸ್ವರಗಳಾದರೋ ಕೇವಲ ಧ್ವನ್ಯಾತ್ಮಕಗಳೆಂದು ಹೇಳಲಾಗಿಲ್ಲ. ಪ್ರಧಾನವಾಗಿ ಧ್ವನಿ–ನಿನಾದ–ನಿನದ–ಧ್ವಾನ–ರವ ಹೀಗೆ ಈ ಸ್ವರಗಳಿಗೆ ನಾನಾರ್ಥಗಳಿವೆ. ಇವೇ ಸ್ವರಗಳು ಮತ್ತೆ ಮಂದ್ರ–ಮಧ್ಯಮ–ತಾರವೆಂಬ

---

[158] Samgeetaratnakara of sarangadeva,translated - Dr.k kunjunni Raja & R adhaBurnier,Adyarlibrary & Research Centre,1976.

[159] Siksha: Panini, Manomohanghosh ,published by University of Calcutta 1938

ಭೇದಗಳಿಂದ ಆರೋಹಣ–ಅವರೋಹಣಾತ್ಮಕ ಉಚ್ಚಾರಣೆಗಳಿಂದ ಆಯಾಯ ಸ್ಥಾನಭೇದಗಳನ್ನು ಪಡೆದಿವೆ. ಮಂದ್ರಗತಿಗಳು ಎದೆಭಾಗದಲ್ಲಿ ಜನಿಸುತ್ತವೆ. ಮಧ್ಯಮಗತಿಗಳು ಕಂಠದಲ್ಲಿ ಆವಿರ್ಭವಿಸುತ್ತವೆ. ತಾರಸ್ವರಗತಿಗಳು ಶಿರಸ್ಸಿನಿಂದ ಉದ್ಭವಿಸುತ್ತವೆ. ಈ ಎಲ್ಲಾ ಸ್ವರಗಳ ಧ್ವನಿಸಾಜಾತ್ಯವು ಪಶು–ಪಕ್ಷಿಗಳಿಂದಲೇ ಗೋಚರವಾಗಿವೆ ಎಂದು ವಿದ್ವಾಂಸರು ಹೀಗೆ ಅಭಿಪ್ರಾಯವನ್ನು ಪ್ರಕಟಿಸಿದ್ದಾರೆ–

षड्जं मयूरो वदति गावो रम्भन्ति चर्षभम् ।
अजाविकेषु गान्धारं क्रौञ्चो वदति मध्यमम् ॥ ಎಂದು

ಇದೇ ಅಂಶಗಳನ್ನು ಅಮರಸಿಂಹನು ತನ್ನ ನಾಮಲಿಂಗಾನುಶಾಸನರೂಪವಾದ ಅಮರಕೋಶದಲ್ಲಿ ಹೀಗೆ ಉಲ್ಲೇಖಿಸಿದ್ದಾನೆ–

निषादर्षभगान्धार षड्जमध्यमधैवताः ।
पञ्चमश्चेत्यमी सप्त तन्त्रीकण्ठोत्थिताः स्वराः ॥
षड्जं मयूरो वदति गावस्तु ऋषभभाषिणः ।
अजाविकन्तु गान्धारं क्रौञ्चः क्वणति मध्यमम् ॥
पुष्पसाधारणे काले पिकः कूजति पञ्चमम् ।
धैवतं ह्येषते वाजी निषादं बृंहते गजः ॥
मयूरादय एते हि मत्तागायन्ति पञ्चमम् । [೧೬೦]ಎಂದು

ಇದನ್ನೇ ಗಾಂಧರ್ವವಿದ್ಯೆಯೆಂದು ಕರೆಯುತ್ತಾರೆ. सद्यःफलति गान्धर्वम् ಎಂಬಂತೆ ಈ ಸಂಗೀತವಿದ್ಯೆಯ ಅನುಷ್ಠಾನದಿಂದ ತಕ್ಷಣ ಫಲವನ್ನು ಪಡೆಯಬಹುದಾಗಿದೆ. ಹಾಡನ್ನು ಹಾಡಿ ಮಳೆಯನ್ನು ಕರೆದ ಮಹಾಪುರುಷರು ಈ ನಾಡಿನವರು. ದೀಪಕರಾಗದಿಂದ ಜ್ಯೋತಿಯನ್ನು ಹತ್ತಿಸಿದ ಸಾಧಕರೂ ನಮ್ಮವರೇ.

**ನಾಟ್ಯಶಾಸ್ತ್ರದ ಇತರ ಪ್ರವರ್ತಕರು :**

ನಾಟ್ಯಶಾಸ್ತ್ರದ ಪೂರ್ವಪ್ರವರ್ತಕರಲ್ಲಿ ಕೋಹಲನ ಹೆಸರನ್ನು ವ್ಯಾಖ್ಯಾತರು ಅತ್ಯಂತ ಗೌರವಪುರಸ್ಸರವಾಗಿ ಸ್ಮರಿಸಿದ್ದಾರೆ. ಭರತನ ತರುವಾಯ ನಾಟ್ಯಶಾಸ್ತ್ರ ಪರಂಪರೆಯಲ್ಲಿ ಅತ್ಯಂತ ವಿಶ್ವಾಸಾರ್ಹ, ಪ್ರಮಾಣಭೂತ

[160] Aamarakosha shri Amarasinha shri mannalal 'Abhimanyu' published by master khelarilal & sons 1937

ಶಾಸ್ತ್ರಕಾರನೆಂದು ಕೋಹಲನಿಗೆ ಪ್ರಥೆಯುಂಟು. ಕೋಹಲನು ಭರತನ ಮಗನೆಂದೂ ಶಿಷ್ಯಪ್ರಮುಖನೆಂದೂ ನಾಟ್ಯಶಾಸ್ತ್ರದ ಮೊದಲ ಅಧ್ಯಾಯದಲ್ಲಿಯೇ ಹೇಳಿಕೆಯಿದೆ. ಆದರೆ ಕೋಹಲನದೆಂದು ಹೇಳಬಹುದಾದ ಪ್ರತ್ಯೇಕ ಶಾಸ್ತ್ರಗ್ರಂಥವಳಾವುದೂ ಉಪಲಬ್ಧವಿಲ್ಲ. ಕೋಹಲನ ಸಿದ್ಧಾಂಗಳೆಂದು ಅನ್ಯ ವ್ಯಾಖ್ಯಾತರು ಅಲ್ಲಲ್ಲಿ ಉದಾಹರಿಸಿರುವ ವಾಕ್ಯಗಳಿಂದಷ್ಟೇ ಕೋಹಲನ ಉನ್ನತಿಯನ್ನು ಅನುಮಾನಿಸಬೇಕಾಗಿದೆ. ಉಪರೂಪಕಗಳ ಬೆಳವಣಿಗೆಗೆ ಬಹುಮಟ್ಟಿಗೆ ಕೋಹಲನೇ ಕಾರಣನೆಂದು ಅಭಿನವಗುಪ್ತನು ಹೇಳಿದ್ದಾನೆ.

ಕೋಹಲನು ಭರತಶಾಸ್ತ್ರ ಸಂಪ್ರದಾಯವನ್ನು ಮುಂದುವರಿಸಿದನೆಂದೂ ಭರತನು ನಾಟ್ಯಶಾಸ್ತ್ರದಲ್ಲಿ ವಿಸ್ತರಿಸಲಾಗದ ಹಲವಾರು ಅಂಶಗಳನ್ನು ಕೋಹಲನು ಪರಿಷ್ಕಾರದಿಂದ ಪೂರ್ಣ ಮಾಡಿದನೆಂದೂ ನಾಟ್ಯಶಾಸ್ತ್ರದ शेषमुत्तरतन्त्रेण कोहल:कथयिष्यति ॥

ಎಂಬ ಹೇಳಿಕೆಯಿಂದ ಊಹಿಸಬಹುದು. ನೃತ್ಯದ ಬೆಳವಣಿಗೆಯಲ್ಲಿ ಮಾತ್ರವಲ್ಲದೆ ಸಂಗೀತಶಾಸ್ತ್ರದ ಬೆಳವಣಿಗೆಯಲ್ಲೂ ಕೋಹಲನ ಪಾತ್ರವು ಮಹತ್ತ್ವದ್ದಾಗಿತ್ತೆಂದು ಅನ್ಯಾನ್ಯ ಪ್ರಮಾಣಗಳಿಂದ ಊಹಿಸಬಹುದಾಗಿದೆ.

ಅನ್ಯವ್ಯಾಖ್ಯಾತರು : ಅಭಿನವಗುಪ್ತನಿಗೆ ಹಿಂದೆಯೂ ನಾಟ್ಯಶಾಸ್ತ್ರವನ್ನು ಕುರಿತು ಹಲವು ವ್ಯಾಖ್ಯಾನಗಳಿದ್ದಿರಬೇಕು. ನಾಲ್ಕಾರು ಪ್ರಸಂಗಗಳಲ್ಲಿ "टीकारस्त्वाह .; "टीकाकारास्तावद् व्याकुर्वन्ति. . . ;" "अत्र टीकाकारेण अक्षिप्तवज्रं शीर्षकङ्चेति यो विनियोग: प्रागुक्त:. . .":– ಹೀಗೆ ಪೂರ್ವ ಟೀಕಾಕಾರರನ್ನು ಅಭಿನವಗುಪ್ತನು ಸ್ಮರಿಸಿದ್ದಾನೆ. ಆ ಟೀಕಾಕರನು, ಅಥವಾ ಟೀಕಕಾರರು ಯಾರೆಂಬುದು ತಿಳಿಯದು. ಆದರೆ ಭರತನಿಂದ ಅಭಿನವಗುಪ್ರನವರೆಗೆ ನಾಟ್ಯಶಾಸ್ತ್ರ ಸಂಪ್ರದಾಯವು ವಿಚ್ಛಿತ್ತಿಯಿಲ್ಲದೆ ನಡೆದು ಬಂದಿತ್ತೆಂಬ ಸಂಗತಿ ಈ ಉದ್ಧೃತಗಳಿಂದ ಊಹ್ಯವಾಗುತ್ತದೆ. ಮೇಲೆ ಹೇಳಿದ ಟೀಕಾಕಾರರಲ್ಲದೆ ಇತರ ಪೂರ್ವಸೂರಿಗಳನ್ನೂ ಅಭಿನವಗುಪ್ತನು ಸ್ಮರಿಸಿದ್ದಾನೆ. ಲೋಲ್ಲಟ, ಉದ್ಭಟ, ಶಂಕುಕ, ಭಟ್ಟನಾಯಕ, ಭಟ್ಟತೋತ ಇತ್ಯಾದಿ.

व्याख्यातारो भारतीये लोल्लटोद्भटसंकुका: ।

भट्टाभिनवगुप्तश्च श्रीमत्कीर्तिधर: पर:॥[161]

[161] Samgeetaratnakara of sarangadeva,translated Dr.k kunjunni Raja & R adhaBurnier,Adyarlibrary & Research Centre,1976.

ಲೋಲ್ಲಟ: ಇವರಲ್ಲಿ ಲೋಲ್ಲಟನೇ ಪ್ರಾಯಶ: ಅತ್ಯಂತ ಪ್ರಾಚೀನನೆಂದು ತೋರುತ್ತದೆ. ಶಂಕುಕಾದಿಗಳು ಲೋಲ್ಲಟ–ಉದ್ಭಟರಿಗಿಂತ ಈಚಿನವರು. ಲೋಲ್ಲಟ–ಉದ್ಭಟರು ನಾಟ್ಯಶಾಸ್ತ್ರದ ಪ್ರಾಚೀನ ಪಾಠವನ್ನೂ ಉಳಿದವರು ನವ್ಯಪಾಠವನ್ನೂ ಆಶ್ರಯಿಸಿದವರೆಂದು ಅವರ ಹೆಸರಿನಲ್ಲಿ ಅಭಿನವಗುಪ್ತನು ಅನುವಾದಿಸುವ ಉದ್ಧೃತಗಳಿಂದ ಗೊತ್ತಾಗುತ್ತದೆ.

ಲೋಲ್ಲಟನು ಉದ್ದಾಮ ಮೀಮಾಂಸಾಶಾಸ್ತ್ರವೇತ್ತನಾಗಿರಬೇಕು. ಅವನು ರಸಪ್ರತೀತಿಗೂ ಮೀಮಾಂಸಕರ ವಿಭಾವಾದಿಗಳು ಸ್ಥಾಯಿಭಾವದೊಡನೆ ಸಂಯೋಗವಾಗುವುದರಿಂದ ರಸವು ಉತ್ಪಾದಿತವಾದದ್ದೆಂಬ, ಅಥವಾ ಸ್ಥಾಯಿಭಾವ ಸಂಚಾರಿಭಾವಗಳೇ ಪ್ರತ್ಯೇಕ ರಸಗಳಾಗಿ ಪರಿಣಮಿಸುವುದೆಂಬ– ಅವನ ಉತ್ಪತ್ತಿವಾದವನ್ನು ಶಂಕುಕಾದಿ ಒಬ್ಬಿಬ್ಬರು ನಿರಾಕರಿಸಿದರೂ ದಂಡಿ, ರುದ್ರಟ, ಭೋಜ, ಅಭಿನವಗುಪ್ತ, ಇವರೆಲ್ಲ ಆ ವಾದವನ್ನು ಒಪ್ಪಿ ಗೌರವಿಸಿದ್ದಾರೆ. ರಸವು ವಿಭಾವಾದಿಗಳಿಂದ ಅಭಿವ್ಯಕ್ತವಾಗಿ ವ್ಯಭಿಚಾರಿಭಾವಗಳಿಂದ ಪರಿಪುಷ್ಟವಾಗುತ್ತದೆಂಬುವುದು ಲೋಲ್ಲಟನ ವಾದದ ಸಾರಭಾಗ.

ಆನಂದವರ್ಧನಾದಿಗಳು ವಿಪುಲವಾಗಿ ವಿಸ್ತರಿಸಿದ ಔಚಿತ್ಯವಾದದ ಮೂಲವನ್ನೂ ಲೋಲ್ಲಟನಲ್ಲಿಯೇ ಕಾಣಬಹುದು. ಲೋಲ್ಲಟನದೆಂದು ರಾಜಶೇಖರನು ಉದಾಹರಿಸಿರುವ ಈ ಎರಡು ಶ್ಲೋಕಗಳು **ಗಮನಾರ್ಹ:**

मज्जनपुष्पापचयन सन्ध्याचन्द्रोदयादिवाक्यमिह ।

सरसमपि नातिबहुलम् प्रकृतरसानन्वितं रचयेत् ॥

यस्तु सरिदद्रिसागर् पुरतुरगरथादिवर्णने यत्नः ।

कविशक्तिख्यातिफलम् विततधियां नो मतस्स इह ॥

ಉದ್ಭಟ: ಇವನು ಕಾಶ್ಮೀರದೇಶದ ಆಲಂಕಾರಿಕ. ಕೋಹಲ ಮತಪ್ರವರ್ತಕರ ಪರಂಪರೆಯಲ್ಲಿ ಬಂದವನು. ಈತನ ಕಾಲಕ್ರಿ.ಸ್ತ.ಶಕ ಎಂಟನೆಯ ಶತಾಬ್ದದ ಉತ್ತರಾರ್ಧವೆಂದು ಊಹಿಸಲಾಗಿದೆ. ನಾಟ್ಯಾಂಗಗಳು, ಹಸ್ತಪ್ರಚಾರ ಮುಂತಾದ ವಿಷಯಗಳ ಬಗೆಗೆ ಬಹುಜನಸಮ್ಮತವಲ್ಲದ ಕೆಲವು ವಾದಗಳನ್ನು ಉದ್ಭಟನು ಪ್ರತಿಪಾದಿಸಿದಂತೆ ಕಾಣುತ್ತದೆ. ಅಲಂಕಾರ ಸಾರಸಂಗ್ರಹ,ಭಾಮಹವಿವರಣ, ನಾಟ್ಯಶಾಸ್ತ್ರವ್ಯಾಖ್ಯಾನ–

ಮೊದಲಾದವು ಉದ್ಭಟನ ಕೃತಿಗಳಲ್ಲಿ ಪ್ರಸಿದ್ಧಗಳು. ಅಭಿನವಗುಪ್ತನೂ ಇತರ ಅಲಂಕಾರಿಕರೂ ಉದ್ಭಟನಸಿದ್ಧಾಂತಗಳನ್ನು ಗೌರವದಿಂದ ಸ್ಮರಿಸಿದ್ದಾರೆ.

ಶಂಕುಕ: ಇವನು ನ್ಯಾಯಶಾಸ್ತ್ರದಲ್ಲಿ ಪರಿಣತಿ ಪಡೆದವನು. ಲೋಲ್ಲಟನು ಮೀಮಾಂಸಾಶಾಸ್ತ್ರದ ಪ್ರಮಾಣನಿರ್ಣಯವನ್ನು ರಸನಿಷ್ಪತ್ತಿವಾದಕ್ಕೆ ಬಳಸಿಕೊಂಡ ಹಾಗೆ, ಶಂಕುಕನು ನೈಯಾಯಿಕ ವಾದರೀತಿಯಲ್ಲಿ ರಸಪ್ರತೀತಿಯ ಸಿದ್ಧಾಂತ ಮಾಡಿದ್ದಾನೆ. ವಿಭಾವಾದಿ ಪ್ರತಿಪಾದನ ಕೌಶಲದ ಕಾರಣದಿಂದ ಸಾಮಾಜಿಕನು ರಸವನ್ನು ಅನುಮಿತಿಯ ಮೂಲಕ ಅನುಭವಿಸುತ್ತಾನೆಂಬ ಶಂಕುಕನ ವಾದವನ್ನು ಅನುಮಿತಿವಾದವೆಂದು ಕರೆಯಬಹುದು. ರಂಗಪೂಜಾದಿ ಪ್ರಸಂಗಗಳಲ್ಲಿ ಶಂಕುಕನ ಅರ್ಥಕಲ್ಪನೆಯನ್ನು ಅಭಿನವಗುಪ್ತನು ಖಂಡನೆಮಾಡಿದ್ದಾನೆ. [162]

ಭಟ್ಟನಾಯಕ: ಅಭಿನವಗುಪ್ತನಿಗೆ ಹಿಂದಿನ ವ್ಯಾಖ್ಯಾತರಲ್ಲಿ ಅತ್ಯಂತ ಮೇಧಾವಿಯೆಂದದೂ ಬಹುಶಾಸ್ತ್ರಸಂಪನ್ನನ್ನೆಂದೂ ಪ್ರಖ್ಯಾತಿ ಪಡೆದವನು ಭಟ್ಟನಾಯಕ. ಈತನು ಅದ್ವೈತ ವೇದಾಂತಿ; ಸಾಹಿತ್ಯ, ಅಲಂಕಾರ, ಸಾಂಖ್ಯಶಾಸ್ತ್ರ , ಯೋಗದರ್ಶನ, ನಾಟ್ಯಶಾಸ್ತ್ರ ಸಂಪ್ರದಾಯ– ಈ ನಾಲ್ಕಾರು ಕ್ಷೇತ್ರಗಳಲ್ಲಿ ಪ್ರಭುತ್ವ ಸಂಪಾದಿಸಿದ್ದವನು. ಭಟ್ಟನಾಯಕನ ಸಿದ್ಧಾಂವು ರಸಾಸ್ವಾದವಾದ, ರಸಭೋಗವಾದ, ಭುಕ್ತಿವಾದ ಮೊದಲಾದ ಹೆಸರುಗಳಿಂದ ಪ್ರಸಿದ್ಧಿ ಪಡೆದು ಅಭಿನವಗುಪ್ತ ಜಗನ್ನಾಥಾದಿ ಅಲಂಕಾರಿಕರಿಗೆಲ್ಲ ಮಾರ್ಗದರ್ಶಕವಾಯಿತು. ಶಬ್ದವೈಶಿಷ್ಟ್ಯ, ರಸಧ್ವನಿ, ಶಬ್ದಾರ್ಥಸಂಬಂಧ ಮೊದಲಾದ ಹಲವಾರು ವಾದಪರಿಷ್ಕಾರಗಳಿಗೆ ಭಟ್ಟನಾಯಕನೇ ಮೂಲಪುರುಷನೆಂದು ಹೇಳಬಹುದು. ಎಲ್ಲ ಅಲಂಕಾರಿಕರೂ ಲಾಕ್ಷಣಿಕರೂ ಭಟ್ಟನಾಯಕನನ್ನು ಅತ್ಯಂತ ಗೌರವಭಾವದಿಂದ ಸ್ಮರಿಸುತ್ತಾರೆ. ನಾಮರೂಪಾದಿ ಪರಿಜ್ಞಾನವು ಶಬ್ದದ ಅಭಿಧಾವ್ಯಾಪಾರದಿಂದುಂಟಾಗುತ್ತದೆಂದೂ, ಶಬ್ದದ ಭೋಜಕತ್ವ ವ್ಯಾಪಾರದಿಂದ ಸತ್ತ್ವೋದ್ರೇಕವುಂಟಾಗುತ್ತದೆಂದೂ ಅದು ಬ್ರಹ್ಮಾನಂದಸದೃಶವಾದ ರಸಾನುಭೂತಿಯೆಂದೂ ಭಟ್ಟನಾಯಕನು ವಾದಿಸಿದ. ನಾಟ್ಯಶಾಸ್ತ್ರವು ಕೇವಲ ಮನರಂಜನೆಯಲ್ಲಿ ಪರ್ಯವಸಾನವಾಗದೆ ಶಾಂತಿಪ್ರದವೆಂದೂ ಹಾಗೂ ಪರಂಪರಯಾ ಮೋಕ್ಷ ಪ್ರಾಪ್ಕವೆಂದೂ ಭಟ್ಟನಾಯಕನ ಮತ. ಅಭಿನವಗುಪ್ತನು ಉದಾಹರಿಸಿರುವ ಈ ವಾಕ್ಯಗಳಲ್ಲಿ ಭಟ್ಟನಾಯಕನ ಅದ್ವೈತ ಧೋರಣೆ ಸ್ಫುಟವಾಗಿ ಎದ್ದುಕಾಣುತ್ತದೆ.

---

[162] Natyasatra with the commentary Abhinavabharati by bhinavaguptacharya by Dr.k Krishnamurthy,published byDr.Ramakrishma T.vyas oriental institute ,Maharaja sayajirao university of Baroda,LVadodara 1992

भट्टनायकस्तु– "ब्रह्मणा परमात्मना यदुदाहृतं अविद्याविरचुतं नस्सारभेदग्रहेयदुदाहरणीकृतं त्नाव्यं, तद् वक्ष्यामि. यथा हि कल्पनामात्रपारं तत ऐव अनवस्थितैकरूपं क्षणेन कल्प्नाशतसहस्रसहस्वप्नादि विल क्षणमपि सुष्टुतरां हृदयग्रहनिदानं अत्यक्त स्वालम्बन ब्रह्मकल्पनटोपरिचितं रामरावणादि चेष्टितं कुतोप्यभूताद्भुताद्भुत वृत्याभाति, तथा तादृगेद विश्वमिदं असत्य नामरूपप्रपञ्चात्मकम् । अथ च श्रवण मननादिवशेन परमपुरुषार्थ सूच्नेन् शान्त रसोपक्षेपोयं भविष्यति ।'स्वंस्वं निमित्त मादाय शान्तादुत्पद्यते रसः' इति । तदनेन पारमार्थिकं प्रयोजनमुक्तम्"–इति व्याख्यानं सहृदयर्पणे पर्यग्रहीत्, यदाह–

"नमस्तरैलोक्य निर्माण कवये शम्भवे यतः ।

प्रतिक्षणं जगन्नाव्य प्रयोगरसिको जनः"[163] – इति

ಅಭಿನವಗುಪ್ತ: ಭಟ್ಟನಾಯಕನ ಸಿದ್ಧಾಂತಗಳನ್ನೆಲ್ಲ ಅಭಿನವಗುಪ್ತನು ಬಹುಮಟ್ಟಿಗೆ ಅಂಗೀಕರಿಸಿ ಸ್ವಾಂತರ್ಗತ ಮಡಿಕೊಂಡಿದ್ದಾನೆನ್ನಗಹುದು. ರಸದ ಅಭಿವ್ಯಕ್ತಿಗೆ ಜಗದ್ವ್ಯಾಪಾರಪರಿಜ್ಞಾನವೂ ಅದರಲ್ಲಿ ಅಂತರ್ಗತವಾಗಿರುವ ವಿಭಾವಾದಿಭಾವಗಳ ಸಾಧಾರಣೀಕರಣವೂ ಹೇತುವೆಂದೂ, ಈ ಸಾಧಾರಣ್ಯದಿಂದ ತಾತ್ಕಾಲಿಕ ಸನ್ನಿವೇಶಗಳೂ ಸ್ಥಾಯಿಭಾವಗಳೂ ರಸಾಭಿವ್ಯಂಜಕಗಳಾಗಿ ಬ್ರಹ್ಮಾಗಣದ ಸದೃಶವಾದ ಆನಂದವನ್ನು ದೊರಕಿಸಿಕೊಡುವುವಾಗುತ್ತವೆಂದೂ ಪ್ರತ್ಯಭಿಜ್ಞಾದರ್ಶನಕಾರ ಅಭಿನವಗುಪ್ತನು ವಾದಿಸಿದ. ಸಂಗ್ರಹವಾಗಿ ಇದನ್ನು 'ಅಭಿವ್ಯಕ್ತಿವಾದ' ಎಂದು ಕರೆಯಬಹುದು.

ಆನಂದವರ್ಧನ: ಶಬ್ದಕ್ಕೆ ಪ್ರಾಚೀನರು ಅಭಿಧಾ ತಾತ್ಪರ್ಯ, ಲಕ್ಷಣಾ ಎಂಬ ಮೂರು ವ್ಯಾಪಾರಗಳುಂಟೆಂದು ಹೇಳಿದ್ದರಷ್ಟೆ. ಧ್ವನಿಲಪ್ರಸ್ಥಾನಪ್ರವರ್ತಕ ಆನಂದವರ್ಧನನು ಈ ಮೂರರ ಜೊತೆಗೆ 'ಧ್ವನಿ' ಎಂಬ ಚತುರ್ಥ ವ್ಯಾಪಾರವೋದುಂಟೆಂಬ ಸಿದ್ಧಾಂತವನ್ನು ಪ್ರತಿಪಾದಿಸಿ, ಈ 'ಧ್ವನಿ' ಯಳೇ ರಸಕ್ಕೆ ಆಧಾರವೆಂದಿದ್ದಾನೆ. ಭರತನಾಟ್ಯಾಭ್ಯಾಸಿಗಳಿಗೂ ನೃತ್ಯಕಲಾರಸಿಕರಿಗೂ ಉಪಯುಕ್ತವಾದ ಇನ್ನು ಕೆಲವು ಶಾಸ್ತ್ರವಿವರಗಳನ್ನೂ ಪಾರಿಭಾಷಿಕ ಪ್ರಯೋಗಗಳನ್ನೂ ಮುಂದಿನ ಅಧ್ಯಾಯಗಳಲ್ಲಿ ಪ್ರಸ್ತಾಪದುವುದಾಗುತ್ತದೆ.

---

[163] Natyasatra with the commentary Abhinavabharati by bhinavaguptacharya by Dr.k Krishnamurthy,published byDr.Ramakrishma T.vyas oriental institute ,Maharaja sayajirao university of Baroda,LVadodara 1992

ಹೀಗೆ ಭರತನ ನಾಟ್ಯಶಾಸ್ತ್ರದಷ್ಟೇ ಪ್ರಮುಖವಾದ ಇತರೆ ಹಲವಾರು ನಾಟ್ಯಶಾಸ್ತ್ರೀಯ ಗ್ರಂಥಗಳು ಸಂಸ್ಕೃತ ಸಾಹಿತ್ಯದಲ್ಲಿ ಹೇರಳವಾಗಿವೆ. ನಾಟ್ಯಶಾಸ್ತ್ರಕ್ಕೆ ಸಂಬಂಧಿಸಿದಂತೆ ಹಲವಾರು ಕವಿಗಳು ಲಕ್ಷಣಗ್ರಂಥಗಳನ್ನು ರಚಿಸಿದ್ದಾರೆ. ಅವುಗಳ ಸಾಲಿಗೆ ಪ್ರಸ್ತುತ ಅಧ್ಯಯನದ ಆಕರವಾದ ಶಿವತತ್ತ್ವರತ್ನಾಕರವೂ ಕೂಡ ಸೇರುತ್ತದೆ. ಈ ರೀತಿ ಇವರೆಲ್ಲರ ಕೊಡುಗೆಯಿಂದ ಭಾರತೀಯ ನಾಟ್ಯಶಾಸ್ತ್ರ ಪರಂಪರೆಯು ಅತ್ಯಂತ ಶ್ರೀಮಂತವಾಗಿದೆ ಎಂದರೆ ಅತಿಶಯೋಕ್ತಿಯಾಗಲಾರದು.

## ಉಪಸಂಹಾರ

'ನಾಟ್ಯ'ವೆನ್ನುವುದು ಕೇವಲ ಶಾಸ್ತ್ರವಾಗಿರದೆ ಜನಸಾಮಾನ್ಯರಿಗೆ ಮನೋರಂಜನೆ ನೀಡುವ ಮೂಲಕ ಮನಃಪರಿವರ್ತನೆ ಮಾಡುವ ಮಾಧ್ಯಮವೂ ಆಗಿದೆ. ಮನುಷ್ಯನಲ್ಲಿರುವ ದುರ್ಗುಣಗಳನ್ನು ವೇದಾದಿಗಳಲ್ಲಿ ಹೇಳಿರುವ ಸದ್ವಿಚಾರಗಳ ಮೂಲಕ ಪರಿಶುದ್ಧಗೊಳಿಸಿ, ಸಮಾಜದಲ್ಲಿ ಆತನಿಗೆ ಸೂಕ್ತಸ್ಥಾನ ಸಿಗುವಂತೆ ಮಾಡುವಲ್ಲಿ ಇದು ಪರಿಣಾಮಕಾರಿಯಾಗಿ ವರ್ತಿಸುತ್ತದೆ. ಈ ಕಾರಣದಿಂದಾಗಿ ಇದನ್ನು ಕಲೆಯನ್ನಾಗಿಯೂ ಅಧ್ಯಯನ ಮಾಡಬಹುದು ಹಾಗೂ ವಿಜ್ಞಾನವನ್ನಾಗಿಯೂ ಅಧ್ಯಯನ ಮಾಡಬಹುದು.

ದೃಶ್ಯಮಾಧ್ಯಮವು ಅತ್ಯಂತ ಪ್ರಭಾವೀ ಮಾಧ್ಯಮವೆಂಬುದು ತಿಳಿದಿರುವ ವಿಚಾರವೇ ಆಗಿರುವಂತಹದ್ದು. ಪಾಮರರಿಂದ ಹಿಡಿದು ಪಂಡಿತರವರೆಗೂ ಸರ್ವರಿಗೂ ಸುಲಭಗ್ರಾಹ್ಯವಾದ ಕಾರಣದಿಂದಲೇ ಭಾರತೀಯರು ಬಹು ಹಿಂದಿನಿಂದಲೂ ಇದರ ಕುರಿತಾದ ನಿರಂತರ ಪ್ರಯೋಗಗಳನ್ನು ಕಾಲದಿಂದ ಕಾಲಕ್ಕೆ ನಡೆಸುತ್ತಲೇ ಬಂದಿದ್ದಾರೆ. "ನಾಟ್ಯಂಭಿನ್ನರುಚೇರ್ಜನಸ್ಯ ಬಹುಧಾಪ್ಯೇಕಂ ಸಮಾರಾಧನಂ" ಎಂಬ ಕಾಳೀದಾಸೋಕ್ತಿ ಇದಕ್ಕೆ ಪೂರಕವಾಗಿದೆ.

ಜಗತ್ತಿನ ಇತರೆ ದೇಶಗಳಲ್ಲಿ ದೃಶ್ಯಕಲೆಗಳು ಆರಂಭವಾಗುವ ಮೊದಲೇ ಭಾರತದಲ್ಲಿ ನಾಟ್ಯಕಲೆಯ ಪ್ರಯೋಗಗಳು ನಡೆಯುತ್ತಿದ್ದವು. ಕ್ರಿಸ್ತಪೂರ್ವಕ್ಕೂ ಮೊದಲೇ ಕಲೆಯಾದ ನಾಟ್ಯವು, ಶಾಸ್ತ್ರವಾಗಿ ಬೆಳೆಯುವಷ್ಟರಮಟ್ಟಿಗೆ ಪ್ರಯೋಗಾತ್ಮಕವಾಗಿ ಪರಿಪೂರ್ಣತೆಯನ್ನು ಪಡೆದುಕೊಂಡಿರುವುದು ಭಾರತೀಯರಾದ ನಮಗೆಲ್ಲಾ ಹೆಮ್ಮೆಯ ಸಂಗತಿ.

ನಾಟ್ಯಶಾಸ್ತ್ರದ ಕುರಿತಾಗಿ ಹಲವಾರು ಅಧ್ಯಯನಗಳು ಹಿಂದಿನಿಂದಲೂ ನಡೆದಿದ್ದು, ನಾಟ್ಯಶಾಸ್ತ್ರ ಸಂಬದ್ಧವಾದ ಹಲವಾರು ಲಕ್ಷಣಗ್ರಂಥಗಳು ವಿದ್ವಾಂಸರಿಂದರಚಿಸಲ್ಪಟ್ಟಿವೆ. ಪ್ರತಿಯೊಂದು ಲಕ್ಷಣಗ್ರಂಥಗಳೂ ತನ್ನದೇ ಆದ ಮಹತ್ವವನ್ನು ಹಾಗೂ ವಿಶೇಷತೆಯನ್ನು ಪಡೆದಿವೆ. ಇವಷ್ಟೇ ಅಲ್ಲದೇ ಈ ಶಾಸ್ತ್ರದ ಕುರಿತಾಗಿ ಹಲವು ಕವಿಗಳು, ನಿಘಂಟುಕಾರರು ತಮ್ಮದೇ ಆದ ರೀತಿಯಲ್ಲಿ ಅವುಗಳನ್ನು ವ್ಯಾಖ್ಯಾನಿಸಿದ್ದಾರೆ. ಅವುಗಳಲ್ಲಿ ವಿಶ್ವಕೋಶವೆಂದು ಮಾನ್ಯತೆ ಪಡೆದಿರುವ ಕೆಳದಿ ಬಸವಭೂಪಾಲ ವಿರಚಿತ ಶಿವತತ್ತ್ವರತ್ನಾಕರವೂ ಒಂದಾಗಿರುವುದನ್ನು ಪ್ರಸ್ತುತ ಅಧ್ಯಯನದಲ್ಲಿ ವಿಶ್ಲೇಷಿಸಲಾಗಿದೆ. ಈ ಕೃತಿಯಲ್ಲಿ ಹಲವಾರು ಶಾಸ್ತ್ರಜ್ಞರ ಅಭಿಮತವನ್ನು ಕ್ರೋಢೀಕರಿಸಲಾಗಿದೆ. ಇವುಗಳನ್ನು ಆಧಾರವಾಗಿಟ್ಟುಕೊಂಡು ಪ್ರಸ್ತುತ ಅಧ್ಯಯನವು ನಡೆದಿದ್ದು, ಇದು ಹಲವಾರು ನಾಟ್ಯಕಲಾಸಕ್ತರಿಗೆ, ಭಾರತೀಯ

ರಂಗಕಲಾಭ್ಯಾಸಿಗಳಿಗೆ, ನಾಟ್ಯಶಾಸ್ತ್ರದ ಕುರಿತಾಗಿ ಅಧ್ಯಯನ ಮಾಡುವವರಿಗೆ ಸಹಕಾರಿಯಾಗುವುದೆಂಬ ಆಶಯವನ್ನು ವ್ಯಕ್ತಪಡಿಸಬಹುದಾಗಿದೆ.

**ಅಧ್ಯಯನದ ಸಾರಾಂಶ :**

ನಾಟ್ಯಶಾಸ್ತ್ರವು ಬಹುವಿಸ್ತಾರವಾದ ಜ್ಞಾನಭಂಡಾರ. ಇದನ್ನು ಒಂದೆರಡು ಅಧ್ಯಯನಗಳಿಂದ ತಿಳಿಯಲು ಅಸಾಧ್ಯ. ಆದರೂ ನನ್ನ ಸೀಮಿತಿ ವ್ಯಾಪ್ತಿಯಲ್ಲಿ ಯಥಾಶಕ್ತಿ ಈ ಕಾರ್ಯವನ್ನು ಮಾಡುವ ಪ್ರಯತ್ನವನ್ನು ಮಾಡಲಾಗಿದೆ. ಸಂಸ್ಕೃತ ಸಾಹಿತ್ಯಸಾಗರದಲ್ಲಿ 'ಶಿವತತ್ತ್ವರತ್ನಾಕರ'ಕ್ಕೆ ತನ್ನದೇ ಆದ ಮೌಲ್ಯವಿದೆ. ಇದು ಸಕಲ ಶಾಸ್ತ್ರಗಳ ಆಗರ. ಕವಿಯು ಹಲವು ಶಾಸ್ತ್ರಗಳ ಜ್ಞಾನವನ್ನು ಒಂದೇ ಕೃತಿಯಲ್ಲಿ ಹಿಡಿದಿಡುವ ಪ್ರಯತ್ನವನ್ನು ಮಾಡಿದ್ದಾನೆ. ಇದರಲ್ಲಿ ನಾಟ್ಯಶಾಸ್ತ್ರಕ್ಕೆ ಸಂಬಂಧಿಸಿದ ಅಂಶಗಳನ್ನು ಕುರಿತು ಪ್ರಸ್ತುತ ಸಂಶೋಧನ ಕಾರ್ಯದಲ್ಲಿ ಅಧ್ಯಯನ ಮಾಡಲಾಗಿದೆ. ಅದರ ಸಾರವನ್ನು ಅಧ್ಯಾಯಗಳಲ್ಲಿ ಕ್ರಮವಾಗಿ ಈ ಕೆಳಗಿನಂತೆ ಸಂಕ್ಷಿಪ್ತವಾಗಿ ವಿಶದೀಕರಿಸಲಾಗಿದೆ.

**ಅಧ್ಯಾಯ 1 – ಪೀಠಿಕೆ :**

ಕರ್ನಾಟಕದಲ್ಲಿ ಸಂಸ್ಕೃತಕ್ಕೆ ಸಂಬಂಧಿಸಿದಂತೆ ವಿಶೇಷವಾದ ಎರಡು ವಿಶ್ವಕೋಶಗಳ ರಚನೆಯಾಗಿದೆ. ಅವುಗಳಲ್ಲಿ ಶಿವತತ್ತ್ವರತ್ನಾಕರ ಹಾಗೂ ಚಾಲುಕ್ಯಸೋಮೇಶ್ವರ ವಿರಚಿತ ಮಾನಸೋಲ್ಲಾಸ. ಇವುಗಳಲ್ಲಿನ ವಿಷಯ ವೈವಿಧ್ಯತೆಯಿಂದ ಎಲ್ಲಾ ಪ್ರಕಾರದ ಜ್ಞಾನಾಕಾಂಕ್ಷಿಗಳಿಗೂ ಸಹಕಾರಿಯಾದುದು. ಇವುಗಳಲ್ಲಿ ಶಿವತತ್ತ್ವರತ್ನಾಕರವು ಮಾನಸೋಲ್ಲಾಸದ ನಂತರದ ಕೃತಿಯಾದರೂ ಕೂಡ ವಿಷಯವ್ಯಾಪ್ತಿಯಲ್ಲಿ ಮಾನಸೋಲ್ಲಾಸವನ್ನು ಮೀರಿಸಿದೆ ಎಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ.[164] ಆ ಕಾರಣದಿಂದಾಗಿ ಇದೇ ಕೃತಿಯಲ್ಲಿನ ನಾಟ್ಯಶಾಸ್ತ್ರೀಯ ಅಂಶಗಳನ್ನು ಮಾತ್ರ ಕೇಂದ್ರೀಕರಿಸಿ ಪ್ರಸ್ತುತ ವಿಶ್ಲೇಷಣಾತ್ಮಕ ಅಧ್ಯಯನವನ್ನು ಮಾಡಲಾಗಿದೆ. ಮೊದಲನೆಯ ಅಧ್ಯಾಯದಲ್ಲಿ ಪೀಠಿಕಾಭಾಗದಲ್ಲಿ ಸಂಶೋಧನೆಯ ಪರಿಚಯವನ್ನು ಮಾಡಿಕೊಡಲಾಗಿದೆ. ಆನಂತರ ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪವನ್ನು ಕುರಿತು ವಿಶದೀಕರಿಸಲಾಗಿದೆ.

[164] ಶಿವತತ್ತ್ವರತ್ನಾಕರ – ಸಂ: ಜಯದೇವಪ್ಪ ಜೈನಕೇರಿ, ಡಾ. ಜಗದೀಶ – ಮರುಳಸಿದ್ಧೇಶ್ವರ ವೀರಶೈವ ಅಧ್ಯಯನ ಕೇಂದ್ರ, ಕವಲೆದುರ್ಗ, ಶಿವಮೊಗ್ಗ.

**ಅಧ್ಯಾಯ–2 ಶಿವತತ್ತ್ವರತ್ನಾಕರ ಹಾಗೂ ಬಸವಭೂಪಾಲ**

ಪ್ರಸ್ತುತಾಧ್ಯಾಯದಲ್ಲಿ ಶಿವತತ್ತ್ವರತ್ನಾಕರ ಕೃತಿಯ ಕರ್ತೃವಾದ ಕೆಳದಿಯ ಅರಸ ಬಸಪ್ಪನಾಯಕನ ಹಾಗೂ ಪ್ರಸ್ತುತ ಕೃತಿಯ ಜೊತೆಗೆ ಇತರೆ ಕೃತಿಗಳ ವಿಷಯವಾಗಿ ಪರಿಚಯಾತ್ಮಕವಾಗಿ ಅಧ್ಯಯನ ಮಾಡಲಾಗಿದೆ. ಶಿವತತ್ತ್ವರತ್ನಾಕರವು ಸಾಮಾನ್ಯವಾಗಿ ಹಲವಾರು ವಿಷಯಗಳ ಆಧಾರದಲ್ಲಿ ಸಂಶೋಧನೆಗೆ ಒಳಪಟ್ಟಿರುವುದರಿಂದ ಈ ಕೃತಿಯ ಪರಿಚಯವನ್ನು ಹಲವಾರು ಅಧ್ಯಯನಗಳಲ್ಲಿ ಮಾಡಲಾಗಿದೆ. ಆದರೂ ಇದರ ಕೆಲವು ವಿಶೇಷಾಂಶಗಳನ್ನು ಮಾತ್ರ ಇಲ್ಲಿ ಪ್ರಸ್ತುತಪಡಿಸಲಾಗಿದೆ.

ಸ್ವತಃ ವಿದ್ವಾಂಸನಾದ ಬಸವಭೂಪಲನು 'ಸೂರಿನಿಕರಕಲ್ಪದ್ರುಮ' ಎಂದೇ ಖ್ಯಾತನಾಗಿದ್ದಾನೆ.[165] ಸಂಸ್ಕೃತ ಹಾಗೂ ಕನ್ನಡ ಭಾಷಾ ಕವಿಯೂ ಆಗಿರುವ ಬಸಪ್ಪನಾಯಕನು 'ಸುಭಾಷಿತರಸದ್ರುಮ ಎಂಬ ನೀತಿಗ್ರಂಥವನ್ನು ಹಾಗೂ ಶಿವತತ್ತ್ವರತ್ನಾಕರ ಎಂಬ ವಿಶ್ವಕೋಶವನ್ನು ಸಂಸ್ಕೃತದಲ್ಲಿ ರಚಿಸಿದ್ದಾನೆ. 'ಸೂಕ್ತಿಸುಧಾಕರ' ಎಂಬ ಕನ್ನಡ ಮತ್ತು ಸಂಸ್ಕೃತ ಭಾಷೆಯ ಗ್ರಂಥವನ್ನು ರಚಿಸಿ ಖ್ಯಾತನಾಗಿದ್ದಾನೆ.

ಆಡಳಿತಾತ್ಮಕವಾಗಿಯೂ ಹಲವಾರು ಅಭಿವೃದ್ಧಿಗಳು ಈತನಿಂದ ನೆಡೆದಿರುವುದನ್ನು ಐತಿಹಾಸಿಕ ಕೃತಿಗಳು ಉಲ್ಲೇಖಿಸಿವೆ. ಇವನ ಅಭಿವೃದ್ಧಿ ಹಾಗೂ ಆಡಳಿತಾತ್ಮಕ ಕಾರ್ಯಗಳಿಂದ ಕೋಟೆಕೋಲಾಹಲ, ರಾಜಾಧಿರಾಜ ಎಂಬ ಬಿರುದುಗಳು ಕೂಡ ಇವನಿಗಿರುವುದನ್ನು ಕೆಳದಿ ನೃಪವಿಜಯ ಮತ್ತು ಶಿವತತ್ತ್ವರತ್ನಾಕರ ವಿಶ್ವಕೋಶದಿಂದ ತಿಳಿಯಬಹುದಾಗಿದೆ.

ಬಸವಭೂಪಾಲನು ಈ ವಂಶದ ಹದಿನಾಲ್ಕನೆಯ ಅರಸ, ಇಪ್ಪತ್ತೈದು ವರ್ಷಗಳ ಕಾಲ ರಾಜ್ಯಭಾರ ಮಾಡಿ ಕ್ರಿ.ಶ.1697ರಲ್ಲಿ ಚೆನ್ನಮ್ಮಾಜಿ ಮರಣ ಹೊಂದಿದ ತರುವಾಯ ಕ್ರಿ.ಶ.1697ರಲ್ಲಿ ಬಸವಪ್ಪನಾಯಕನು ಪಟ್ಟಕ್ಕೆ ಬಂದನು. ಅಧಿಕಾರಕ್ಕೆ ಬಂದ ತರುವಾಯ ಮರಾಠರು, ಮೈಸೂರಿನ ಅರಸರು, ಪೋರ್ಚುಗೀಸರು, ಮಲೆಯಾಳದರು ಮೊದಲಾದವರಲ್ಲಿ ಯುದ್ಧಮಾಡಿ ಅನೇಕರ ಜೊತೆ ಯುದ್ಧಮಾಡಿ ಮೊಘಲರು ಆಕ್ರಮಿಸಿಕೊಂಡಿದ್ದ ಆನವಟ್ಟಿ, ಮಹದೇವಪುರ, ಹೊನ್ನಾಳಿ ಮತ್ತು ಮಿಡಚೆ ಕೋಟೆಗಳನ್ನು ವಶಪಡಿಸಿಕೊಂಡನು. ಹೀಗೆ ರಾಜಕೀಯ ಆಡಳಿತ ನಡೆಸಿ ಕ್ರಿ.ಶ.1715ರಲ್ಲಿ ಶಿವೈಕ್ಯನಾಗುತ್ತಾನೆ. ಈತನ ಸಮಾಧಿಯು ಬಿದನೂರಿನ ಕೊಪ್ಪಲು ಮಠದಲ್ಲಿದೆ.

---

[165] ಶಿವತತ್ತ್ವರತ್ನಾಕರ (ಸಂಪುಟ 1) – ಸಂ: ಎಸ್.ನಾರಾಯಣ ಶಾಸ್ತ್ರಿ ಮತ್ತು ಆರ್. ರಾಮಾಶಾಸ್ತ್ರಿ, ಪ್ರಾಚ್ಯವಿದ್ಯಾ ಸಂಶೋಧನಾ ಕೇಂದ್ರ, ಮೈಸೂರು ವಿಶ್ವವಿದ್ಯಾಲಯ, ಮೈಸೂರು –1964.

ಈತನು ಸಾಹಿತ್ಯಪ್ರೇಮಿಯಾಗಿದ್ದು, ಹಲವಾರು ಕವಿಗಳನ್ನು ಪೋಷಿಸಿದ್ದನು. ಭಟ್ಟೋಜಿ ದೀಕ್ಷಿತ, ರಂಗನಾಥ ದೀಕ್ಷಿತ, ರಂಗೋಜಿ ಭಟ್ಟ, ಅಶ್ವಪಂಡಿತ, ಕೊಂಡಭಟ್ಟ, ಮಾನಪ್ಪ ಪಂಡಿತ, ನಿರ್ಮಾಣ ಮಂತ್ರಿ, ಮರಿತೋಂಟದಾರ್ಯ, ಸಂಗಮೇಶ್ವರ ಚೊಕ್ಕನಾಥ ಮುಂತಾದ ಮಹಾಮಹಾ ಕವಿಗಳು ಈತನ ಆಶ್ರಯವನ್ನು ಪಡೆದಿದ್ದರು.

**ಅಧ್ಯಾಯ–3 ನಾಟ್ಯಶಾಸ್ತ್ರದ ಗರಿಮೆ, ಉಗಮ, ಪರಿಚಯ, ಬೆಳವಣಿಗೆ**

ಪ್ರಸ್ತುತ ಅಧ್ಯಾಯದಲ್ಲಿ ನಾಟ್ಯಶಾಸ್ತ್ರದ ಉಗಮದ ಕುರಿತು ಇರುವ ಹಲವು ಮತಗಳನ್ನು ಕ್ರೋಢೀಕರಿಸಿ ವಿವರಿಸಲಾಗಿದೆ. ನಾಟ್ಯದ ಉಗಮಕ್ಕೆ ಹಲವಾರು ಅಭಿಪ್ರಾಯ ಭೇದಗಳಿವೆ ಕೆಲವರ ಪ್ರಕಾರ ಇದು ವೇದಕಾಲದಲ್ಲಿಯೇ ಉಗಮವಾಯಿತೆಂದು ಅಭಿಪ್ರಾಯ ಪಟ್ಟರೆ, ಕೆಲವರು ಪೌರಾಣಿಕ ಕಾಲದಲ್ಲಿ ಇದರ ಉಲ್ಲೇಖಗಳಿವೆ ಎಂಬುದನ್ನು ಪ್ರತಿಪಾದಿಸಿದ್ದಾರೆ ಕೆಲವರು ವಿದೇಶೀಮೂಲವಾದವನ್ನು ಉಲ್ಲೇಖಿಸಿದ್ದಾರೆ ಇವುಗಳನ್ನು ಪ್ರಸ್ತುತಾಧ್ಯಾಯದಲ್ಲಿ ಚರ್ಚಿಸಲಾಗಿದೆ. ಹಾಗೂ ಈ ಶಾಸ್ತ್ರಾಂತರ್ಗತವಾದ ವಿಚಾರಗಳನ್ನು ಸ್ಥೂಲವಾಗಿ ವಿವೇಚಿಸಲಾಗಿದೆ. ಇವುಗಳ ಜೊತೆಗೆ ಕೆಲವು ಕಾಲಘಟ್ಟದಲ್ಲಿ ಈ ಶಾಸ್ತ್ರದ ವಿಕಾಸವು ಆದ ವಿವರವನ್ನು ದಾಖಲಿಸಲಾಗಿದೆ.

**ಅಧ್ಯಾಯ–4 ಶಿವತತ್ತ್ವರತ್ನಾಕರದಲ್ಲಿನ ನಾಟ್ಯಶಾಸ್ತ್ರೀಯ ಅಂಶಗಳು ಮತ್ತು ವಿಶ್ಲೇಷಣೆ**

ಇದು ಪ್ರಸ್ತುತ ಅಧ್ಯಯನದ ಪ್ರಮುಖ ಅಧ್ಯಾಯವಾಗಿದ್ದು, ಅಧ್ಯಯನದ ವಿಷಯವನ್ನು ಈ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ.

ಪ್ರಸ್ತುತ ಕೃತಿಯ 'ನಾಟ್ಯಶಾಸ್ತ್ರ'ವಿಭಾಗದಲ್ಲಿ ಗ್ರಂಥಕಾರನು ತಳಸ್ಪರ್ಶಿ ಅಧ್ಯಯನ ನಡೆಸಿರುವುದು ವಿದ್ವಜ್ಜನರಿಗೆ ಸ್ಪಷ್ಟವಾಗಿ ಗೋಚರಿಸುತ್ತಿದೆ. ನಾಟ್ಯಶಾಸ್ತ್ರವೆಂಬ ಸಂಸ್ಕೃತ ಗ್ರಂಥದ ಆರಂಭದಿಂದ ಅಂತ್ಯದವರೆಗೂ ಅವಲೋಕನ ಹಾಗೂ ಅವಗಾಹನ ಮಾಡಿರುವುದಲ್ಲದೆ ಅದರ ಹಿನ್ನೆಲೆ–ಮುನ್ನೆಲೆಗಳ ಸಾಹಿತ್ಯವನ್ನೂ ಕರಗತಮಾಡಿಕೊಂಡಿರುವುದು ಪ್ರಕೃತ ಗ್ರಂಥಭಾಗದಲ್ಲಿ ನಿಚ್ಚಳವಾಗಿ ಗೋಚರಿಸುತ್ತಿದೆ. ಸಂಸ್ಕೃತ ಸಾಹಿತ್ಯದ ಅಲಂಕಾರಶಾಸ್ತ್ರಕಾರರ ಸಮಗ್ರ ಕೃತಿಗಳನ್ನೂ ಆಮೂಲಾಗ್ರವಾಗಿ ಪರಾಮರ್ಶಿಸಿ ತನ್ನ ನಿಲುವನ್ನು ಈ ಗ್ರಂಥದಲ್ಲಿ ಪ್ರತಿಪಾದಿಸಿರುವುದು ಗಮನಾರ್ಹ ಸಂಗತಿಯಾಗಿದೆ. ದಂಡಿ–ಭಾಮಹ, ವಾಮನ, ವಿಶ್ವನಾಥ, ವಿದ್ಯಾನಾಥ, ಪ್ರತಾಪರುದ್ರ, ರಾಜಶೇಖರಾದಿಗಳ ಗ್ರಂಥಗಳ ಛಾಯೆ ಹಾಗೂ ವಿಮರ್ಶೆಗಳು ಈತನ ಕೃತಿಯಲ್ಲಿ ರಾರಾಜಿಸುತ್ತಿರುವುದನ್ನು ಪ್ರಸ್ತುತಾಧ್ಯಾಯದಲ್ಲಿ ಸಂಕ್ಷಿಪ್ತವಾಗಿ ವಿವೇಚಿಸಲಾಗಿದೆ.

ಸಹೃದಯರಿಗೆ ಸರ್ವರೀತಿಯಿಂದಲೂ ಮನರಂಜನೆಗೊಳಿಸಲೆಂದೇ ರಚಿತವಾದ ಈ ಶಾಸ್ತ್ರದಲ್ಲಿ ಕಾವ್ಯದ ಸ್ವರೂಪ–ಪ್ರಯೋಜನ–ಪ್ರಯೋಗ–ಔಚಿತ್ಯ–ಉದ್ದೇಶ–ರಸೋತ್ಪತ್ತಿ–ಭಾವಪ್ರಚೋದನೆಯೇ ಮೊದಲಾದ ಸಂಗತಿಗಳು ಅನುಸ್ಯೂತವಾಗಿ ಎಣೆದುಕೊಂಡಿರುತ್ತವೆ. ಅಲಂಕಾರ–ಧ್ವನಿತತ್ತ್ವಗಳ ಪ್ರತಿಪಾದನೆಯ ಜೊತೆಗೆ ನಾಟ್ಯಸ್ವರೂಪ–ನೃತ್ತ–ನೃತ್ಯಗಳ ಸ್ವರೂಪ ಮತ್ತು ಭೇದ, ಅವುಗಳ ಉಪಯೋಗ ಮುಂತಾದವುಗಳ ವಿವರಣೆಗಳೂ ನಿರೂಪಿಸಲ್ಪಟ್ಟಿರುತ್ತವೆ. ಈ ಎಲ್ಲ ಸಂಗತಿಗಳೂ ಶಿವತತ್ತ್ವರತ್ನಾಕರದ ಏಳನೆಯ ಕಲ್ಲೋಲ–ಆರನೆಯ ತರಂಗದಲ್ಲಿ ನಿರೂಪಣೆಗೊಂಡಿವೆ. ಇದರ ಜೊತೆಗೆ ಬೇರೆ ಕಲ್ಲೋಲಗಳಲ್ಲಿರುವ ನಾಟ್ಯಶಾಸ್ತ್ರೀಯ ಅಂಶಗಳನ್ನು ಪ್ರಸ್ತುತ ಅಧ್ಯಾಯದಲ್ಲಿ ಅಧ್ಯಯನ ಮಾಡಲಾಗಿದೆ.

**ಅಧ್ಯಾಯ–5 ನಾಟ್ಯಶಾಸ್ತ್ರದ ಇತರ ಕೃತಿಗಳು ಹಾಗೂ ಅವುಗಳ ಮಹತ್ವ :**

ನಾಟ್ಯಶಾಸ್ತ್ರದ ವ್ಯಾಪ್ತಿ ವಿಶಾಲವಾದುದರಿಂದ ಅದರ ಒಂದೊಂದು ಭಾಗದ ಪ್ರತಿಪಾದನೆ ಒಂದೊಂದು ಶಾಸ್ತ್ರದಲ್ಲಿ ವಿಸ್ತಾರವಾಗಿ ಕಂಡುಬರುತ್ತದೆ. ಸಾಹಿತ್ಯಶಾಸ್ತ್ರದಲ್ಲಿ ಕಾವ್ಯಾಂಶ; ನಾಟ್ಯಶಾಸ್ತ್ರದಲ್ಲಿ ಅಭಿನಯಾಂಶ; ಸಂಗೀತಶಾಸ್ತ್ರದಲ್ಲಿ ಸಂಗೀತಾಂಶ; ವಾಸ್ತುಶಾಸ್ತ್ರದಲ್ಲಿ ನಾಟ್ಯ ಮಂದಿರದ ನಿರ್ಮಾಣ–ಇತ್ಯಾದಿ. ಈ ಅಂಶಗಳೆಲ್ಲವನ್ನೂ ಭರತನ ನಾಟ್ಯಶಾಸ್ತ್ರವು ವಿವರಿಸುತ್ತದೆ.

ಪ್ರಸ್ತುತ ಅಧ್ಯಾಯದಲ್ಲಿ ಭರತಪೂರ್ವ ನಾಟ್ಯಾಚಾರ್ಯರು ಹಾಗೂ ಕೃತಿಗಳು ಮತ್ತು ಭರತೋತ್ತರ ನಾಟ್ಯಲಕ್ಷಣಗ್ರಂಥಗಳ ಮಾಹಿತಿಯನ್ನು ನೀಡಲಾಗಿದೆ. ಇವೆಲ್ಲವೂ ಪ್ರಸ್ತುತ ಅಧ್ಯಯನಕ್ಕೆ ಪೂರಕವಾಗಿದ್ದು, ಉಳಿದ ನಾಟ್ಯಾಭ್ಯಾಸಿಗಳಿಗೆ ಉಪಯುಕ್ತವೂ ಆಗಿರುವಂತಹದ್ದು.

ಅಧ್ಯಯನದ ಅಂತಿಮಭಾಗವಾದ ಈ ವಿಷಯದಲ್ಲಿ ಇಡೀ ಅಧ್ಯಯನದ ಸಾರ, ಪ್ರಸ್ತುತ ಅಧ್ಯಯನದ ಫಲಿತಾಂಶ, ಮುಂದಿನ ಅಧ್ಯಯನಕ್ಕಿರುವ ಅವಕಾಶಗಳು, ಮುಂತಾದವುಗಳನ್ನು ಚರ್ಚಿಸಲಾಗಿದೆ. ಇದರಲ್ಲಿ ಫಲಿತಾಂಶ ಹಾಗೂ ಅವಕಾಶಗಳನ್ನು ಮುಂದಿನಂತೆ ವಿವೇಚಿಸಲಾಗಿದೆ.

**ಅಧ್ಯಯನದ ಫಲಿತಾಂಶ :**

ಶಿವತತ್ತ್ವರತ್ನಾಕರವು ವಿಶ್ವಕೋಶವೆಂದು ಪರಿಗಣಿಸಲ್ಪಟ್ಟಿದ್ದು, ಇದರಲ್ಲಿ ಬಹುವಿಧ ಶಾಸ್ತ್ರಗಳು ಸಮ್ಮಿಳಿತಗೊಂಡಿವೆ. ಅದರಲ್ಲಿ ನಾಟ್ಯಶಾಸ್ತ್ರವೂ ಒಂದು. ಭರತನ ನಾಟ್ಯಶಾಸ್ತ್ರದ ಅಂಶಗಳನ್ನೇ ಇಲ್ಲಿ ಬಹುಪಾಲು ಹೇಳಲಾಗಿದೆ. ಜೊತೆಗೆ ವಿಶ್ವನಾಥ, ಮಮ್ಮಟಾದಿ ಕಾವ್ಯಶಾಸ್ತ್ರಜ್ಞರ ಕೃತಿಗಳಲ್ಲಿನ ನಾಟ್ಯಾಂಶಗಳನ್ನೂ ಈ ಶಾಸ್ತ್ರಕ್ಕೆ ಬಳಸಿಕೊಳ್ಳಲಾಗಿದೆ. ಇಲ್ಲಿ ವಿವರಿಸಿರುವ ನಾಟ್ಯಾಂಶಗಳೆಲ್ಲಾ ಹೆಚ್ಚು

ಪ್ರಯೋಗಶೀಲವಾಗಿದ್ದು, ನಾಟ್ಯಾಭ್ಯಾಸಿಗಳಿಗೆ ಹೆಚ್ಚು ಉಪಯೋಗಕಾರಿಯಾಗಿದೆ. ಪ್ರಸ್ತುತ ಕರ್ನಾಟಕ ಸರ್ಕಾರವು ನಡೆಸುತ್ತಿರುವ ನಾಟ್ಯಶಾಸ್ತ್ರ ಪರೀಕ್ಷೆಗಳನ್ನು ಎದುರಿಸುವ, ಭರತನಾಟ್ಯ ತರಗತಿಗಳಲ್ಲಿ ಅಭ್ಯಾಸಮಾಡುವ ವಿದ್ಯಾರ್ಥಿಗಳು ಅಧ್ಯಯನಮಾಡುವ ಪಠ್ಯಕ್ರಮಕ್ಕೆ ಪೂರಕವಾದ ಹಾಗೂಜ್ಞಾನ ವಿಸ್ತಾರಕ್ಕೆ ಅನುಕೂಲಕರವಾದ ಮಾಹಿತಿಯನ್ನು ಇಲ್ಲಿ ಚರ್ಚಿಸಲಾಗಿದೆ.

ಇಂದಿನ ಲಲಿತಕಲೆಗೆ ಸಂಬಂಧಿಸಿದ ಮಹಾವಿದ್ಯಾಲಯಗಳು, ವಿಶ್ವವಿದ್ಯಾಲಯಗಳ ನಾಟ್ಯ, ಸಂಗೀತ ಇತ್ಯಾದಿ ಶಾಸ್ತ್ರೀಯ ಕಲೆಗಳ ವಿದ್ಯಾರ್ಥಿಗಳಿಗೆ, ಸಂಶೋಧಕರಿಗೆ ಈ ಅಧ್ಯಯನದಲ್ಲಿ ಚರ್ಚಿತವಾದ ಅಂಶಗಳು ಹೆಚ್ಚು ಉಪಯುಕ್ತವಾಗಿವೆ. ಪ್ರಸ್ತುತ ಅಧ್ಯಯನದಲ್ಲಿ ನಾಟ್ಯಾಂಶಗಳನ್ನು ಅವುಗಳ ಸಾರವನ್ನು ಸರಳವಾದ ಶೈಲಿಯಲ್ಲಿ ವಿಶ್ಲೇಷಿಸಿರುವುದರಿಂದ ನಾಟ್ಯಾಸಕ್ತರಿಗೆ ಹೆಚ್ಚು ಸಹಕಾರಿಯಾಗವುದು.

**ಅಧ್ಯನಕ್ಕಿರುವ ಅವಕಾಶಗಳು :**

ನಾಟ್ಯಶಾಸ್ತ್ರವೆನ್ನುವುದು ಅಗಾಧವಾದ ಜ್ಞಾನರಾಶಿ. ಕೇವಲ ಅಭಿನಯಗಳನ್ನಷ್ಟೇ ನಾಟ್ಯವೆಂದು ಕರೆಯಲಾಗದು. ಇದು ಹಲವಾರು ವಿದ್ಯೆಗಳ ಸಂಗಮ. ಸಂಗೀತ ಶಾಸ್ತ್ರ, ಕಾವ್ಯಶಾಸ್ತ್ರ, ಸಾಹಿತ್ಯಶಾಸ್ತ್ರ ಮುಂತಾದ ಶಾಸ್ತ್ರಗಳು ಇದಕ್ಕೆ ಪೂರಕವಾಗಿವೆ. ಇವುಗಳನ್ನು ಪ್ರತ್ಯೇಕವಾಗಿ ಹಾಗೂ ವಿಸ್ತೃತವಾಗಿ ಅಧ್ಯಯನಮಾಡುವಂತಹ ಹಲವಾರು ಅವಕಾಶಗಳು ಇನ್ನೂ ಇವೆ. ಈ ಶಾಸ್ತ್ರಗಳಲ್ಲಿ ನಡೆದಿರುವ ಅಧ್ಯಯನಗಳು ಅಥವಾ ಸಂಶೋಧನೆಗಳು ವಿರಳವೆಂದೇ ಹೇಳಬಹುದು. ಆ ಕಾರಣದಿಂದ ಹಲವು ಅಧ್ಯಯನಕ್ಕೆ ಪ್ರಸ್ತುತ ಶಾಸ್ತ್ರವೂ ಹಾಗೂ ಶಿವತತ್ತ್ವರತ್ನಾಕರ ಕೃತಿಯೂ ಕೂಡ ಮುಕ್ತವಾಗಿದೆ.

ಪ್ರಸ್ತುತ ಜಗತ್ತನ್ನು ಆಳುತ್ತಿರುವ ದೃಶ್ಯಮಾಧ್ಯಮಗಳಿಂದ ಸಮಾಜದ ಮೇಲಾಗುತ್ತಿರುವ ಪರಿಣಾಮಗಳು ಒಳ್ಳೆಯದಕ್ಕಿಂತ ಕೆಡುಕೇ ಹೆಚ್ಚು. ಇಂದು ತಂತ್ರಜ್ಞಾನಗಳು ಎಷ್ಟೇ ಮುಂದುವರೆದಿದ್ದರೂ ಕೂಡ ಅವೆಲ್ಲವೂ ದೃಶ್ಯಮಾಧ್ಯಮದ ಅಂಗಗಳೇ ಆಗಿವೆ. ಹಿಂದೆ ನಾಟ್ಯಕಲೆಯಿಂದ ನಾಟಕಗಳು ಉಗಮವಾಯಿತು. ವೈದಿಕ ಅಥವಾ ಪೌರಣಿಕ ವಿಷಯವಸ್ತುಗಳಿಂದ ಸಾಮಾಜಿಕ ವಿಷಯಗಳಿಗೆ ಅದರ ಕಥಾವಸ್ತುಗಳು ಬದಲಾಯಿತು. ಏನೇ ಆದರೂ ಒಂದು ಕಾಲಘಟ್ಟದವರೆಗೆ ಅವುಗಳ ಉದ್ದೇಶ ಒಂದೇ ಅದು ಮನೋರಂಜನೆಯ ಮೂಲಕ ಸಮಾಜವನ್ನು ಸತ್ಪಥದೆಡೆಗೆ ಕರೆದೊಯ್ಯುವುದು. ಕಾಲಕಳೆದಂತೆ ಬಯಲಾಟ, ಯಕ್ಷಗಾನ, ಬೀದಿನಾಟಕಗಳು ಇತ್ಯಾದಿ ರೂಪದಿಂದ ಚಲನಚಿತ್ರಗಳು ಚಿತ್ರಮಂದಿರದಲ್ಲಿ ಪ್ರದರ್ಶನಕ್ಕೊಳಗಾಗುವಂತಾಯಿತು. ಆನಂತರ ದೂರದರ್ಶನ, ಮೊಬೈಲ್‌ಇತ್ಯಾದಿ ಪ್ರಕಾರಗಳಲ್ಲಿ ಅವುಗಳು ಬೆಳೆಯುತ್ತಾ ಬಂದಿದೆ. ಆದರೆ ಇವುಗಳೆಲ್ಲಾ ದೃಶ್ಯಮಾಧ್ಯಮಗಳೇ ಆಗಿವೆ. ಇವುಗಳಿಂದ ಇಂದು ಸಮಾಜಕ್ಕೆ

ಉಪಯೋಗಕ್ಕಿಂತ ಹಾನಿಯೇ ಹೆಚ್ಚಾಗುತ್ತಿದೆ. ಇಂದಿನ ಜನತೆ ವಿಶೇಷವಾಗಿ ಯುವಜನತೆಯ ಮನಸ್ಸಿನಲ್ಲಿ ದುಷ್ಟಭಾವನೆಗಳು ನೆಲೆಯೂರುತ್ತಿದ್ದು, ಸಮಾಜಕ್ಕೆ ಮಾರಕವಾಗಿ ಪರಿಣಮಿಸುತ್ತಿವೆ. ಆ ಕಾರಣದಿಂದಾಗಿ ಇಂದಿನ ಸಮಾಜವನ್ನು ಸರಿದಾರಿಯತ್ತ ಕೊಂಡೊಯ್ಯಲು ಹಿಂದಿನ ನಾಟ್ಯಶಾಸ್ತ್ರೋಕ್ತ ಅಂಶಗಳು ಸಹಕಾರಿಯಾಗಿವೆ. ಇವುಗಳನ್ನು ಇಂದಿನ ಮಾಧ್ಯಮಗಳು ಅನುಸರಿಸಲಿ ಎಂಬ ಆಶಯವನ್ನಿಟ್ಟುಕೊಂಡು ಈ ಅಧ್ಯಯನವನ್ನುಮಾಡಲಾಗಿದೆ.

☆☆☆☆☆

# ಅನುಬಂಧ

## ಶಿವತತ್ತ್ವರತ್ನಾಕರೋಕ್ತ ನಾಟ್ಯಶಾಸ್ತ್ರ ಸಂಬಂಧಿ ಭಾವಚಿತ್ರಗಳು

# ಅಸಂಯುತಹಸ್ತ



# ಸಂಯುತಹಸ್ತ


Anjali
Kapotha
Karkata
Swastika
Dola
Pushpaputa
Utsanga
Shivalinga
Katakaavardhana
Kartariswastika
Shakata
Shanka
Chakra
Samputa
Paasa
Keelaka
Matsya
Koorma
Varaaha
Garuda
Naagabandha
Khatvaa
Bherunda

**ರಸಭೇದಗಳು**


ಶೃಂಗಾರ
ಹಾಸ್ಯ
ಕರುಣ
ರೌದ್ರ
ವೀರ
ಭಯಾನಕ
ಬೀಭತ್ಸ
ಅದ್ಭುತ
ಶೃಂಗಾರಹಾಸ್ಯಕರುಣರೌದ್ರವೀರಭಯಾನಕಾಃ।
ಬೀಭತ್ಸಾದ್ಭುತಸಂಜ್ಞೌ ಚೇತ್ಯಷ್ಟೌ ನಾಟ್ಯೇ ರಸಾಃ ಸ್ಮೃತಾಃ॥
-ನಾಟ್ಯಶಾಸ್ತ್ರ

# ಪರಾಮರ್ಶನ ಗ್ರಂಥಗಳು

**ಕನ್ನಡ ಗ್ರಂಥಗಳು:**


1. ಅಭಿಜ್ಞಾನಶಾಕುಂತಲಮ್– ಸಂ: ಪಾಂಡುರಂಗಿ, ಪ್ರಕಾಶಕರು–ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ– 1978
2. ಅಭಿನಯ ದರ್ಪಣ: ನಂದಿಕೇಶ್ವರ –ಎಂ. ಎ ಹೆಗಡೆ, ಅಕ್ಷರ ಪ್ರಕಾಶನ 2014.
3. ಅಮರಕೋಶ–ವಿಜಿ.ವಿಷ್ಣುಮೂರ್ತಿ ಭಟ್ಟ, ಮಂಗ್ಳೂರ್ ಪ್ರಿಂಟರ್ಸ್ ,ಮೈಸೂರು,1974
4. ಕನ್ನಡ ಸಾಹಿತ್ಯ ಪರಂಪರೆ ಮತ್ತು ಆಧುನಿಕತೆ (ಸಂಶೋಧನಾ ಲೇಖನಗಳು) – ಡಾ.ಡಿ.ಸಿ.ಚಿತ್ರಲಿಂಗಯ್ಯ – ಗುಪ್ತ ಆಫ್‌ಸೆಟ್ ಪ್ರಿಂಟರ್ಸ್, ಮೈಸೂರು – 2019
5. ಧನಂಜಯನ ದಶರೂಪಕ (ಕನ್ನಡ ಅನುವಾದ) – ಕೆ.ವಿ.ಸುಬ್ಬಣ್ಣ – ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ
6. ನಾಟ್ಯಶಾಸ್ತ್ರ– ಭರತಮುನಿ, ಅನುವಾದಕ– ಮನಮೋಹನ ಘೋಶ್ ಏಷಿಯಾಟಿಕ್ ಸೊಸೈಟಿ ಆಫ್ ಬೆಂಗಾಲ್, ಕಲ್ಕತ್ತ 1951
7. ನಾಟ್ಯಶಾಸ್ತ್ರ – ಆದ್ಯ ರಂಗಾಚಾರ್ಯ – ನೀನಾಸಮ್ ರಂಗಶಿಕ್ಷಣಕೇಂದ್ರ, ಹೆಗ್ಗೋಡು,– 2003
8. ನೃತ್ಯ ಲಕ್ಷಣಂ–ಲೇಖಕರು ಹಾಗೂ ಪ್ರಕಾಶಕರು ಗುರುನಾಟ್ಯವಿದುಷಿ, ಪ್ರೊ. ಜಯಾ 2009
9. ಪ್ರತಾಪರುದ್ರೀಯ – ಡಾ.ಎಚ್.ಎಸ್.ತಿಪ್ಪೇರುದ್ರಸ್ವಾಮಿ – ಡಿ.ವಿ.ಕೆ.ಮೂರ್ತಿ ಪ್ರಕಾಶನ, ಮೈಸೂರು – 2010
10. ಪ್ರತಾಪರುದ್ರೀಯನಾಟಕಲಕ್ಷಣಮ್ – ಜಿ.ವಿಷ್ಣುಮೂರ್ತಿ ಭಟ್ಟ – ಶ್ರೀಪತಿರಾವ್ ಮಾರ್ಪಳ್ಳಿ, ಮೈಸೂರು – 1967
11. ಭರತನಾಟ್ಯ ದಿಗ್ದರ್ಶನ–ವಿ. ಎಸ್. ಕೌಶಿಕ್. ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು 2015
12. ಭಾರತೀಯ ಕಾವ್ಯ ಮೀಮಾಂಸೆ – ಪ್ರೊ.ತೀ.ನಂ.ಶ್ರೀಕಂಠಯ್ಯ – ಮೈಸೂರು ವಿಶ್ವವಿದ್ಯಾಲಯ, ಮೈಸೂರು – 2016.

**13.** ಭಾಸನ ಐದು ನಾಟಕಗಳು – ಮಹಾಬಲ ಸೀತಾಳ ಭಾವಿ – ಅಂಕಿತ ಪುಸ್ತಕ ಪ್ರಕಾಶನ, ಬಸವನಗುಡಿ, ಬೆಂಗಳೂರು – 2014

**14.** ರಾಮಾಯಣ, ಮಹಾಭಾರತ ಮತ್ತು ಧರ್ಮ – ಇರಾವತಿ ಕರ್ವೆ – ನವಕರ್ನಾಟಕ ಪ್ರಕಾಶನ, ಬೆಂಗಳೂರು – 2016.

**15.** ಸಾಹಿತ್ಯದರ್ಪಣ – ಅನುವಾದ: ಡಾ.ಟಿ.ಜಿ.ಸಿದ್ದಪ್ಪಾರಾಧ್ಯ – ಹೇಮಾಪ್ರಿಂಟರ್ಸ್, ಮೈಸೂರು – 1967

**16.** ಸಾಹಿತ್ಯ ದರ್ಪಣ ವಿಶ್ವನಾಥ ಕವಿರಾಜ್, ಪಾಂಡುರಂಗ್ ವಾಮನ ಕಾನೆ,ಆಂಗ್ರೇ ವಾಡೆ ಬಾಂಬೆ 4, 1956.

**17.** ಸಂಸ್ಕೃತ ಶಾಸ್ತ್ರ ಮಂಜೂಷ — ಡಾ.ಉದಯಶಂಕರ ಝಾ – ಚೌಖಾಂಬ ಸುರಭಾರತೀ ಪ್ರಕಾಶನ, ವಾರಾಣಸೀ– 2014.

**18.** ಸಂಸ್ಕೃತ ಭಾಷಾಶಾಸ್ತ್ರ ಮತ್ತು ಸಾಹಿತ್ಯಚರಿತ್ರೆ –ಕರ್ನಾಟಕ ಸರ್ಕಾರ, ಪಠ್ಯಪುಸ್ತಕಗಳ ಮುದ್ರಣಾಲಯ. ಬೆಂಗಳೂರು

**19.** ಸಂಸ್ಕೃತ ನಾಟಕ – ಎ.ಆರ್.ಕೃಷ್ಣಶಾಸ್ತ್ರಿ – ಹೇಮಂತ ಸಾಹಿತ್ಯ, ಬೆಂಗಳೂರು – 2012.

**20.** ಸಂಪೂರ್ಣ ಮಹಾಭಾರತ – ಕೃ ನಾರಾಯಣರಾವ್ – ಮೆ॥ಟಿ.ನಾರಾಯಣ ಅಯ್ಯಂಗಾರ್, ಬೆಂಗಳೂರು.

**21.** ಸಂಪೂರ್ಣ ಮಹಾಭಾರತ–ಕೆ.ಅನಂತರಾಮ ರಾವ್ ವಿದ್ಯಾ ಪಬ್ಲಿಷಿಂಗ್ ಹೌಸ್–2015

**22.** ಸಂಸ್ಕೃತ ಕಾವ್ಯಗಳಲ್ಲಿ ನಾಟಕೀಯತೆ – ಡಾ.ಬಿ.ಎಸ್.ಮಹದೇವಯ್ಯ – ಪ್ರಸಾರಾಂಗ, ಕುವೆಂಪು ವಿಶ್ವವಿದ್ಯಾಲಯ

**23.** ಸಂಸ್ಕೃತ ನಾಟಕಗಳ ತಂತ್ರ ಮತ್ತು ಪ್ರಯೋಗ – ಎಂ.ರಾಜಗೋಪಾಲಾಚಾರ್ಯ – ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ –1998

**24.** ಸಂಸ್ಕೃತ ನಾಟಕ ನೋಟಗಳು – ಡಾ.ಸಿ.ಪಿ.ಕೃಷ್ಣಕುಮಾರ್ –ಡಾ.ಕೆ.ಕೃಷ್ಣಮೂರ್ತಿ ಸಂಶೋಧನ ಪ್ರತಿಷ್ಠಾನ (ರಿ), ಮೈಸೂರು. – 2013

**25.** ಸ್ವಪ್ನವಾಸವದತ್ತಮ್ – ಅಭಿನವಗುಪ್ತಾಚಾರ್ಯಃ – ಡಿ.ವಿ.ಕೆ.ಮೂರ್ತಿ ಪ್ರಕಾಶನ, ಮೈಸೂರು –1967.

**26.** ಶಿವತತ್ತ್ವರತ್ನಾಕರ – ಸಂ: ಜಯದೇವಪ್ಪ ಜೈನಕೇರಿ, ಡಾ. ಜಗದೀಶ – ಮರುಳಸಿದ್ಧೇಶ್ವರ ವೀರಶೈವ ಅಧ್ಯಯನ ಕೇಂದ್ರ, ಕವಲೆದುರ್ಗ, ಶಿವಮೊಗ್ಗ.

**27.** ಶಿವತತ್ತ್ವರತ್ನಾಕರ – ಸಂಪುಟ 1 – ಸಂ: ಎಸ್.ನಾರಾಯಣ ಶಾಸ್ತ್ರಿ ಮತ್ತು ಆರ್. ರಾಮಾಶಾಸ್ತ್ರಿ, ಪ್ರಾಚ್ಯವಿದ್ಯಾ ಸಂಶೋಧನಾ ಕೇಂದ್ರ, ಮೈಸೂರು ವಿಶ್ವವಿದ್ಯಾಲಯ, ಮೈಸೂರು –1964.

**28.** ಶಿವತತ್ತ್ವರತ್ನಾಕರ – ಸಂಪುಟ 2 – ಸಂ: ಎಸ್.ನಾರಾಯಣ ಶಾಸ್ತ್ರಿ ಮತ್ತು ಆರ್. ರಾಮಾಶಾಸ್ತ್ರಿ, ಪ್ರಾಚ್ಯವಿದ್ಯಾ ಸಂಶೋಧನಾ ಕೇಂದ್ರ, ಮೈಸೂರು ವಿಶ್ವವಿದ್ಯಾಲಯ, ಮೈಸೂರು –1964.

**29.** ಶಿವತತ್ತ್ವರತ್ನಾಕರ – (ಸಂ) ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ್, ಐದು ಸಂಪುಟಗಳು, ದರೇಸಾ ಪ್ರಕಾಶನ, ಬೆಂಗಳೂರು –2013.

**30.** ಶಿವತತ್ತ್ವರತ್ನಾಕರ – (ಸಂ) ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ್, ಸಂಪುಟ 1 ಮತ್ತು 2, – ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ – 1999.

**संस्कृत ग्रन्थानि :**

**३१.** किरातार्जुनीयम्, महाकवि भारवि विरचितम् व्याख्याकार डा.वीरेन्द्रकुमार वर्मा, प्रकाशक :जमुना पाठक वाराणासी १९७८

**32.** गङ्गालहरि जगन्नाथ ,संपादक ल.गो.विंझे, प्रकाशन बलवन्त पुस्तक भाण्डार् मुम्बई,१८७८.

33.. तर्क–संग्रहदीपिका ,आचार्यआनंद .झा,प्रकाशक,ब्रह्मानन्द् दीक्षित,उ.हिं,ग्रं,अ,लखनऊ १९७६

**३४.** हितोपदेशः नारायणपण्डितः,अनुवादक पण्डित् रामेश्वर, भट्ट प्रकाशक,चौकम्ब संस्कृत प्रतिष्ठान दिल्लि– २०१७

**३५.** रघुवंश – महाकवि कालिदास, मोतिलाल बनारसी दास, जैनेन्द्रप्रकाश जैन, श्रीजैनेन्द्र प्रेस नई दिल्लि १९८७

36. **संस्कृतसाहित्येतिहासः** – आचार्य रामचन्द्र मिश्र – चौखम्बा विद्याभवन, वाराणसी –2013

37. **संस्कृत शास्त्र मञ्जूषा** –डा.उदयशंकर झा – चौखम्बा सुरभारती प्रकाशन, वाराणसी –2014

## English Books:

**38.** Abhinaya darpamam Nandikeshwara, Ghosh,Manomohan, Firma K.L.Mukhopadhyay 1957.

**39.** Aamarakosha shri Amarasinha shri mannalal 'Abhimanyu' published by master khelarilal & sons 1937.

**40.** Bhasa and the authorship of the thirteen Trivandrum plays - Hiranandh Shastri – Memors of the Archeological survey of India - 1998

**41.** Dasakumaracharita Dandi viracharita,Kasinath pandurang parab, published by nirnaya-sagara press 1889

**42.** Kalidasa Shakuntala translated by Arthur W.Ryder publications Sanskrit series Cambridge,Ontario 1999

**43.** Kathasaristagara of Somadevabhatta edited by pandit.Durgaprasad &Asinath pamdurang parab, published byPandurang jawagji 'nirnaya-sagar 'press Bombay-1930

**44.** Kavyalankara sutra vritti, Acharya Vamana, published by Shri Vani Vilas press Srirangam,1909

**45.** The meghaduta of kalidasa ,lateMr.M.R.kale, published by D.V.& B.D mulgaokarproprietors Gopal narayan & co.book-sellers Bomay.-1934

**46.** Natyasatra with the commentary Abhinavabharati by bhinavaguptacharya by Dr.k Krishnamurthy,published byDr.Ramakrishma T.vyas oriental institute ,Maharaja sayajirao university of Baroda,LVadodara 1992

**47.** Natyashastra by bharathamuni,Mahamahopadhyaya pamdit durgaprasad published by satyabhamani pandurang 'Nirnaya-sagar' press Bombay 1943.

**48.** The sushruta samhita edited by kaviraj kunja lal bhishagratna,published by s.l.Bhaduri B.L Calcutta 1916

**49.**Ratnavali,Harshavardhana, srisachandra chakravarti, publisher Hari ramadhar -1902

**50.** Samgeetaratnakara of sarangadeva,translated Dr.k kunjunni Raja & R adhaBurnier,Adyarlibrary & Research Centre,1976.

**51.** Siksha: Panini, Manomohanghosh ,published by University of Calcutta 1938

**52.**Shishupalavadha ,Maghabatta, commentary vallabhadeva, published by Maharaja shri harisinghji bahadur G C S J GCI E CVO.Jammu&Kashmir 1935

**53.** Venisamhara ntaka of shri BhattaNarayana,pt.Ramadevajha & pt.Aditya Narayana pandeya, published by chaukhamba Amara Bharati prakashan Varanasi,1902

----------------000------------------